ಅಕ್ಕಮಹಾದೇವಿಯ ವಚನಗಳ ಮೀಮಾಂಸೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಯಮನವ್ವ ಕೆ. ಕೊಣ್ಣೂರ

ಮಾರ್ಗದರ್ಶಕರು

ಡಾ. ಎಸ್. ಎಸ್. ಅಂಗಡಿ

ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ

ಕೂಡಲಸಂಗಮ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

ಭಾಷಾನಿಕಾಯ

ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ

ಕೂಡಲಸಂಗಮ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ–೫೮೩೨೭೬

೨೦೧೪

ಶಂ.ಬಂ.ರ. ಅಣಿಪ

ಅಕ್ಕಮಹಾದೇವಿಯ ವಚನಗಳ ಮೀಮಾಂಸೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಯಮನವ್ವ ಕೆ. ಕೊಣ್ಣೂರ

ಮಾರ್ಗದರ್ಶಕರು

ಡಾ. ಎಸ್.ಎಸ್.ಅಂಗಡಿ

ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ

ಕೂಡಲಸಂಗಮ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

ಭಾಷಾನಿಕಾಯ

ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ,

ಕೂಡಲಸಂಗಮ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩೨೭೬

೨೦೧೪

ದೃಢೀಕರಣ ಪತ್ರ

ಯಮನವ್ವ ಕೆ.ಕೊಣ್ಣೂರ ಇವರು "ಅಕ್ಕಮಹಾದೇವಿಯ ವಚನಗಳ ಮೀಮಾಂಸೆ" ಎಂಬ ಶೀರ್ಷಿಕೆಯ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಶಾಖೆ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ, ಕೂಡಲಸಂಗಮ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ: 28-4-2014

ಡಾ. ಎಸ್.ಎಸ್.ಅಂಗಡಿ

ಮಾರ್ಗದರ್ಶಕರು

ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ,

ಕೂಡಲಸಂಗಮ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬.

ಪ್ರಮಾಣ ಪತ್ರ

"ಅಕ್ಕಮಹಾದೇವಿಯ ವಚನಗಳ ಮೀಮಾಂಸೆ" ಎಂಬ ಶೀರ್ಷಿಕೆಯ ಈ ಪ್ರಬಂಧವನ್ನು ಡಾ. ಎಸ್.ಎಸ್.ಅಂಗಡಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಶಾಖೆ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ, ಕೂಡಲಸಂಗಮ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 28-3-2014

ಯಮನವ್ವ ಕೆ. ಕೊಣ್ಣೂರ

ಸಂಶೋಧಕರು

ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ,

ಕೂಡಲಸಂಗಮ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಹನ್ನೆರಡನೆ ಶತಮಾನದ ವಚನ ಚಳುವಳಿ ಸಾಹಿತ್ಯೇತಿಹಾಸದಲ್ಲಿಯೇ ಅಪರೂಪವಾದ ಅನನ್ಯವಾದ ಅಭಿವ್ಯಕ್ತಿಯ ಕಾಲಘಟ್ಟವಾಗಿದೆ. ಶ್ರೀಸಾಮಾನ್ಯನೂ, ಸ್ತ್ರೀಯರೂ ಅಭಿವ್ಯಕ್ತಿಯ ಮುಕ್ತ ಅವಕಾಶ ಪಡೆದು ಸಾಹಿತ್ಯ ಪ್ರಕಾರಗಳಲ್ಲಿಯೇ ವಿಶಿಷ್ಟವಾದ ವಚನ ಸಾಹಿತ್ಯ ರಚಿಸಿದ ಸಮಾಜೋಭಾಷಿಕ ಹಿನ್ನೆಲೆಯ ಸಮುದಾಯದ ಸಾಮೂಹಿಕ ಅಭಿವ್ಯಕ್ತಿಯ ಆಂದೋಲನವಾಗಿದೆ. ಈ ರೀತಿಯ ಅಭಿವ್ಯಕ್ತಿಯಲ್ಲಿ ಸಾಮೂಹಿಕವಾಗಿ ಏಕಕಾಲದಲ್ಲಿ ಜನಸಾಮಾನ್ಯರೂ ಪಾಲ್ಗೊಂಡು ಪ್ರಗತಿಪರವಾದ ಚಿಂತನೆಗಳನ್ನು ಪ್ರತಿನಿಧಿಸಿರುವುದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಷ್ಟೇ ಅಲ್ಲದೆ ಜಾಗತಿಕ ಇತಿಹಾಸದಲ್ಲಿಯೇ ಒಂದು ಅಪೂರ್ವವಾದ ಸಂದರ್ಭವೆನಿಸಿದೆ.

ಬಸವಾದಿ ಶಿವಶರಣರ ಸಮಕಾಲೀನಳಾಗಿ ಸ್ಥಾಪಿತ ಸಮಾಜ ವ್ಯವಸ್ಥೆಯು ಸ್ತ್ರೀಯರಿಗೆ ವಿಧಿಸಿದ್ದ ಸಿದ್ಧ ಮೌಲ್ಯಗಳನ್ನು, ಪುರುಷಕೇಂದ್ರಿತ ಚಿಂತನೆಗಳನ್ನು ತಿರಸ್ಕರಿಸಿ, ಪೂರ್ವದ ಬಟ್ಟೆಯನ್ನು ತ್ಯಜಿಸಿ, ಪ್ರತಿಗಾಮಿ, ಪುರೋಗಾಮಿ ಶಕ್ತಿಗಳಿಗೆ ತೀವ್ರ ಪ್ರತಿರೋಧವನ್ನೊಡ್ಡಿ, ಪ್ರಗತಿಪರ ಧೋರಣೆಗಳನ್ನು ಅನುಸರಿಸಿ, ಸಮಾಜದ ಹಲವು ಸಂಘರ್ಷಗಳ ಮಧ್ಯೆಯೇ ಸಾಧನೆಯ ಶಿಖರವನ್ನೇರಿದವಳು ಅಕ್ಕಮಹಾದೇವಿ. ಆಧ್ಯಾತ್ಮಿಕ ಸಾಧನೆಯಿಂದ ಅಸಾಧಾರಣ ಅನುಭಾವಿಕ ವ್ಯಕ್ತಿತ್ವವನ್ನು ರೂಪಿಸಿಕೊಂಡವಳು.

ಅವಳ ಬದುಕಿನ ಪ್ರಗತಿಪರ ದೃಷ್ಟಿಯಂತೆ ಬರಹದಲ್ಲಿಯೂ ಸೃಜನಶೀಲತೆಯನ್ನು ಸೃಷ್ಟಿಸಿ ಅಭಿವ್ಯಕ್ತಿಯಲ್ಲಿ ಆಗಾಧತೆಯನ್ನು, ಅನನ್ಯತೆಯನ್ನು ಸಾಧಿಸಿದವಳು. ಸೃಜನಶೀಲ ಸಾಹಿತಿ ವಚನಗಾರ್ತಿ ಅಕ್ಕಮಹಾದೇವಿ ಕನ್ನಡದ ಮೊದಲ ಅನುಭಾವಿ, ಕವಿಯಿತ್ರಿ. ಅಕ್ಕಮಹಾದೇವಿಯನ್ನು ವಚನಗಾರ್ತಿಯಾಗಿ ಗ್ರಹಿಸುವುದರ ಜೊತೆಗೆ ಅವಳೊಬ್ಬ ಕವಯಿತ್ರಿಯಾಗಿ ಗ್ರಹಿಸಲ್ಪಡುತ್ತಾಳೆ.

ಅವಳ ವಚನಗಳಲ್ಲಿರುವ ಕಾವ್ಯಾಂಶಗಳು ಭಾವಗೀತಾತ್ಮಕಗುಣ, ಪ್ರಾಸ, ಅಲಂಕಾರ, ನಾದಲಯ, ರಸಧ್ವನಿ, ಪ್ರತಿಮೆ ಛಂದೋಬಂಧಗಳಿಂದ ಸಹಜ ಸೌಂದರ್ಯವನ್ನೊಳಗೊಂಡಿವೆ. ವಚನಗಳಲ್ಲಿರುವ ನಾದಮಾಧುರ್ಯ, ಭಾವನಿರ್ಭರತೆ, ಉಪಮೆ, ರೂಪಕ, ದೃಷ್ಟಾಂತಗಳು, ದೇಶೀ ಸಂಸ್ಕೃತಿಯ ನೆಲೆಗಳಾದ ಗಾದೆ, ನುಡಿಗಟ್ಟುಗಳು ಲೋಕನಿದರ್ಶನಗಳು ಮೇಳೈಸಿ ಮಧುರಭಕ್ತಿಯ ಕಾವ್ಯವಾಗಿಯೇ ಅಕ್ಕನ ವಚನಗಳು ಕನ್ನಡ ಸಾಹಿತ್ಯದಲ್ಲಿ ಅಗ್ರಸ್ಥಾನವನ್ನು ಪಡೆದಿವೆ. ಮಹಾದೇವಿಯಕ್ಕನ ವಚನಗಳು ಮಧುರಪ್ರೇಮ, ವಿರಹ ಮಿಲನಗಳು ಮೇಳವಿಸಿದ ಶೃಂಗಾರ ಪ್ರಣೀತ ಭಕ್ತಿ ಕಾವ್ಯವಾಗಿದೆ.

ಅಕ್ಕಮಹಾದೇವಿಯ ಅಭಿವ್ಯಕ್ತಿ ಸ್ವರೂಪವೂ ವಿಶಿಷ್ಟವಾದುದು. ವಿವಿಧ ಶೈಲಿಗಳಲ್ಲಿ ನಿರೂಪಿತವಾದ ವಚನಗಳ ಭಾಷೆಯ ಒಳರೂಪಿಕೆಗಳು, ಲೋಕಾನುಭವದಿಂದ ಲೋಕೋತ್ತರವಾದ ಅನುಭಾವವನ್ನು ಭಾವಗಮ್ಯಗೊಳಿಸುತ್ತವೆ. ಅಕ್ಕಮಹಾದೇವಿಯ ಜೀವನಾನುಭವಗಳು, ಸಾಧನೆಯ ಹಾದಿಯಲ್ಲಿ ಎದುರಾದ ಸಂಘರ್ಷದ ನೆಲೆಗಳು, ತೀವ್ರವಾದ ಸಂವೇದನೆಗಳೆಲ್ಲ ಮೂರ್ತರೂಪತಾಳಿವೆ. ಅವಳ ವಚನಗಳ ಭಾಷೆ, ಶೈಲಿ, ಛಂದಸ್ಸು, ಭಾವೋತ್ಕರ್ಷ, ಸ್ತ್ರೀ ಸಂವೇದನೆಗಳು ಅಪೂರ್ವವಾದ ಅನುಭಾವಿಕ ಭಾವಾಭಿವ್ಯಕ್ತಿಗಳಿಂದ ಉಳಿದೆಲ್ಲ ವಚನಕಾರರಿಗಿಂತ ಅಕ್ಕಮಹಾದೇವಿ ವಿಭಿನ್ನವಾಗಿಯೇ ಗುರುತಿಸಲ್ಪಡುತ್ತಾಳೆ.

ಹೆಣ್ಣು, ಹೆಣ್ತನವನ್ನು ಹೊರೆಯೆಂದು ಭಾವಿಸದೆ ಅಕ್ಕಮಹಾದೇವಿ ಸ್ತ್ರೀತನದ ಪರಿಧಿಯೊಳಗಿದ್ದು ಅದನ್ನು ಮೀರುವ ಆ ಮೂಲಕ ಪರಮಾರ್ಥ ಸಾಧನೆಯ ಮಾರ್ಗದಲ್ಲಿ ಮಹಿಳೆ ಮಹೋನ್ನತಿಯನ್ನು ಸಾಧಿಸಬಲ್ಲಳೆಂಬುದನ್ನು ಆಗುಮಾಡಿಕೊಂಡವಳು. ಪರಂಪರಾಗತ ಪುರುಷ ನೆಲೆಗಳನ್ನು ಛಿದ್ರಗೊಳಿಸಿ ಪ್ರಗತಿಪರವಾದ ಪುನರ್‌ಸೃಷ್ಟಿಯನ್ನು ಸಾಧ್ಯ ಮಾಡಿಕೊಂಡವಳು. ತನ್ನ ಧ್ಯೇಯ ದೃಷ್ಟಿಗಳನ್ನು ವಚನಾಭಿವ್ಯಕ್ತಿಯಲ್ಲಿ ಮೂರ್ತಗೊಳಿಸಿರುವಳು.

ಅಕ್ಕಮಹಾದೇವಿಯ ಬಗೆಗಿನ ವಿಸ್ಮಯಗಳಿಗೆ ಬೆರಗಾದ ಸಮಕಾಲೀನ ಶರಣರು ತದನಂತರದ ಹರಿಹರಾದಿ ಕವಿ ಚರಿತ್ರೆಕಾರರು, ಸಮಕಾಲೀನ ಆಧುನಿಕ ಕಾಲಘಟ್ಟದ ಸಾಹಿತಿಗಳು ಅವಳ ಬದುಕು, ಬರಹಗಳನ್ನು ವೈವಿಧ್ಯಮಯ ಸಾಹಿತ್ಯ ಪ್ರಕಾರಗಳಲ್ಲಿ ಅಭಿವ್ಯಕ್ತಗೊಳಿಸಿರುವರು. ಅಕ್ಕನ ಬದುಕು ಬರಹವನ್ನು ಆ ಎಲ್ಲ ಅಧ್ಯಯನಗಳಲ್ಲಿ ಅಭಿನ್ನವಾಗಿಯೇ ಗುರುತಿಸುವ ನೆಲೆಗಳಿವೆ. ಬದುಕು ಬರಹಗಳನ್ನು ಅಭಿನ್ನವಾಗಿ ನೋಡುವ ಪ್ರಧಾನಧಾರೆಯ ಸಾಹಿತ್ಯ ಮಾರ್ಗಕ್ಕಿಂತ ಪೂರ್ಣವಾಗಿ ಅಲ್ಲದಿದ್ದರೂ ಅಂಶಿಕವಾಗಿಯಾದರೂ ಅವಳ ಅಭಿವ್ಯಕ್ತಿಯ ಹಿನ್ನೆಲೆಯನ್ನು ಕುರಿತು ಗ್ರಹಿಸಿ, ಗುರುತಿಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಅಕ್ಕಮಹಾದೇವಿಯ ಜೀವನ ಸಾಧನೆ ಹಾಗೂ ಅವಳ ಸಮಕಾಲೀನ ವಚನಕಾರ್ತಿಯರ ಆಶಯಗಳನ್ನು ಪ್ರಸ್ತಾಪಿಸಲಾಗಿದೆ. ವಚನ ಆಂದೋಲನದಲ್ಲಿ ವಚನಕಾರ್ತಿಯರು ಪಾರಂಪರಿಕ

ಸಿದ್ಧಸಮಾಜದ ಸ್ಥಾಪಿತ ಮೌಲ್ಯಗಳಿಗೆ ಅಭಿವ್ಯಕ್ತಿ ರೂಪದಲ್ಲಿ ತೀವ್ರ ಪ್ರತಿರೋಧವನ್ನೊಡ್ಡಿ, ವ್ಯಕ್ತಿಸ್ವಾತಂತ್ರ್ಯ ವೃತ್ತಿ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರತಿಪಾದಿಸಿ, ಸಾಮಾಜಿಕ ಅಸಮಾನ ನೆಲೆಗಳನ್ನು ವಿರೋಧಿಸಿದ, ನವಸಮಾಜದ ನಿರ್ಮಾಣಕ್ಕಾಗಿ ಶ್ರಮಿಸಿದ ಸಮಾಜ ಸುಧಾರಕರಾಗಿಯೇ ಗ್ರಹಿತರಾಗುತ್ತಾರೆ. ಅಕ್ಕಮಹಾದೇವಿ ಮತ್ತು ಸಮಕಾಲೀನ ಶಿವಶರಣೆಯರ ಜೀವನ ಅಭಿವ್ಯಕ್ತಿಗಳ ಕುರಿತು ಚರ್ಚಿಸಲಾಗಿದ್ದರೂ ಸಹ ಪ್ರಸ್ತುತ ಅಧ್ಯಯನದಲ್ಲಿ ಪ್ರಧಾನವಾಗಿ ಅಕ್ಕಮಹಾದೇವಿಯ ವಚನಗಳ ಮೀಮಾಂಸೆಗೆ ಒತ್ತು ನೀಡಲಾಗಿದೆ.

ಅಕ್ಕಮಹಾದೇವಿಯ ಬದುಕು ಬರಹವನ್ನು ಆಧ್ಯಾತ್ಮಿಕ, ಅನುಭಾವಿಕ ಹಿನ್ನೆಲೆಯಲ್ಲಿಯೇ ಗ್ರಹಿಸಿ, ಧಾಮಿಕ ಪ್ರಭಾವಲಯದಲ್ಲಿರಿಸಿ ನೋಡಿದ ಪ್ರಾಚೀನ ಪುರಾಣ, ಕಾವ್ಯ, ಚರಿತ್ರೆಗಳು ಹಾಗೂ ಆಧುನಿಕ ವಿಮರ್ಶೆಯ ನೆಲೆಯಲ್ಲಿ ಗ್ರಹಿಸಿದ ಚಿಂತನೆಗಳು ಏಕಮುಖಿಯಾಗಿಯೇ ವ್ಯಾಖ್ಯಾನಗೊಂಡಿರುವ ಹಿನ್ನೆಲೆಯಲ್ಲಿ ಅವಳ ಅಭಿವ್ಯಕ್ತಿಲ್ಲಡಗಿದ ಅಂತರಂಗಿಕ ಕಾವ್ಯಾತ್ಮಕ, ಭಾಷಿಕ ಸ್ವರೂಪವನ್ನು ಅಭ್ಯಸಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಅಕ್ಕಮಹಾದೇವಿಯ ಬಗೆಗಿನ ಇದುವರೆಗಿನ ಚರ್ಚೆಗಳು, ವಿಮರ್ಶೆಗಳು, ಸಂಕಲನ, ಸಂಶೋಧನೆಗಳ ಹಿನ್ನೆಲೆಯಲ್ಲಿ ಅವಳ ವಚನಗಳಲ್ಲಿರುವ ಒಳನೇಯ್ಗೆಯ ವಿಷಯಗಳನ್ನು ಅರಸುವ, ಅರುಹುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ. ಸಮಕಾಲೀನ ಸಂದರ್ಭದಲ್ಲಿ ಮಹಿಳಾ ಅಧ್ಯಯನವು ಇತರ ಅಧ್ಯಯನ ಶಿಸ್ತುಗಳಂತೆಯೇ ಬಹುಶಿಸ್ತಿಯ ಅಧ್ಯಯನವಾಗಿರುವ ಹಿನ್ನೆಲೆಯಲ್ಲಿ ಅಕ್ಕಮಹಾದೇವಿಯ ಅಭಿವ್ಯಕ್ತಿಯ ಬಹುಮುಖಿ ಸಂವೇದನೆಗಳ ನೆಲೆಗಳನ್ನು ಅಧ್ಯಯನ ಕೈಕೊಳ್ಳುವುದು ಪ್ರಸ್ತುತವೆನಿಸಿದೆ. ಅಕ್ಕಮಹಾದೇವಿಯ ವಚನಗಳಲ್ಲಿರುವ ಸೂಕ್ಷ್ಮಸಂವೇದನೆಗಳು, ಸ್ತ್ರೀವಾದಿ ಚಿಂತನೆಗಳನ್ನು ವಿಶ್ಲೇಷಿಸುವುದು ಬದಲಾದ ಕಾಲಮಾನದ ಸಂದರ್ಭದಲ್ಲಿ ಅವುಗಳ ಪ್ರಸ್ತುತತೆಯನ್ನು ಕಂಡುಕೊಳ್ಳುವುದು 'ಅಕ್ಕಮಹಾದೇವಿಯ ವಚನಗಳ ಮೀಮಾಂಸೆ'ಯ ಸಂಶೋಧನಾತ್ಮಕ ನಿಬಂಧದ ಪ್ರಮುಖ ಉದ್ದೇಶಗಳಲ್ಲೊಂದಾಗಿದೆ.

ಒಟ್ಟಿನಲ್ಲಿ ಅಕ್ಕಮಹಾದೇವಿಯ ಅಭಿವ್ಯಕ್ತಿಯ ಅಂತರಂಗದ ಒಳಧ್ವನಿಗಳು, ಕಾವ್ಯಾತ್ಮಕ, ಭಾವಗೀತಾತ್ಮಕ, ತಾತ್ವಿಕ ಹೀಗೆ ವಿವಿಧ ಆಯಾಮಗಳನ್ನು ಸಮಗ್ರವಾಗಿ ಕಟ್ಟಿಕೊಡುವುದು ಈ ಸಂಶೋಧನಾ ಅಧ್ಯಯನದ ಉದ್ಧೇಶವಾಗಿದೆ. ಅಕ್ಕಮಹಾದೇವಿಯ ಕುರಿತಾದ ಇದುವರೆಗಿನ ಅಧ್ಯಯನಗಳಲ್ಲಿ ಧಾರ್ಮಿಕ, ಸಾಹಿತ್ಯಿಕ ಚೌಕಟ್ಟಿನೊಳಗೆ ಇರಿಸಿ ನೋಡುವ ಪ್ರಯತ್ನಗಳು ಜರುಗಿವೆ. ಅವೆಲ್ಲ ಅಧ್ಯಯನಗಳ ಹೊರತಾಗಿಯೂ ಅಕ್ಕನ ಅಭಿವ್ಯಕ್ತಿ ಸ್ವರೂಪದ ಕುರಿತು ಸಮಗ್ರ ಅಧ್ಯಯನಗಳು ನಡೆದಿರುವುದಿಲ್ಲ. ಆದ್ದರಿಂದ ಈ ಅಧ್ಯಯನದಲ್ಲಿ ಅಕ್ಕಮಹಾದೇವಿಯ ವಚನಗಳ ಮೀಮಾಂಸೆ,

ಪ್ರಧಾನ ಆಯ್ಕೆ ಮತ್ತು ವಿಶ್ಲೇಷಣೆಯಾಗಿದೆ. ಅಕ್ಕಮಹಾದೇವಿಯ ವಚನಗಳ ಬಹುಮುಖಿ ಆಯಾಮಗಳನ್ನು ಅರಿಯುವ ಪ್ರಯತ್ನವನ್ನು ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ

"ಅಕ್ಕಮಹಾದೇವಿಯ ವಚನಗಳ ಮೀಮಾಂಸೆ" ಸಂಶೋಧನಾ ಪ್ರಬಂಧವು ೬ ಅಧ್ಯಾಯಗಳನ್ನೊಂಡಿದೆ. ಮೊದಲನೆ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಒಳಗೊಂಡಿದೆ.

ಅಧ್ಯಾಯ ಎರಡರಲ್ಲಿ "ಅಕ್ಕಮಹಾದೇವಿ ಮತ್ತು ಇತರ ಶಿವಶರಣೆಯರು" ಕುರಿತು ಸಾಮ್ಯತೆ, ಭಿನ್ನತೆಗಳು, ವಚನಕಾರ್ತಿಯರ ಆಶಯಗಳನ್ನು ಅವರ ವಚನಗಳಾಧಾರಿತವಾಗಿಯೇ ವಿಶ್ಲೇಷಿಸಲಾಗಿದೆ. ಅಕ್ಕಮಹಾದೇವಿ ಮತ್ತು ಅವಳ ಸಮಕಾಲೀನ ವಚನಕಾರ್ತಿಯರನ್ನು ಕುರಿತು ಮಾತ್ರ ವಿಷಯವ್ಯಾಪ್ತಿಯಲ್ಲಿ ಚರ್ಚಿಸಲಾಗಿದೆ.. ಅಕ್ಕಮಹಾದೇವಿಯ ಬದುಕು ಬರಹಗಳು ಅವಳ ಸಮಕಾಲೀನ ಶರಣೆಯರಿಗಿಂತ ಭಿನ್ನವಾದವುಗಳು ಎಂಬ ದೃಷ್ಟಿಕೋನ ಇಲ್ಲಿಯ ವಸ್ತುವಿಷಯವಾಗಿದೆ.

ಅಧ್ಯಾಯ ಮೂರರಲ್ಲಿ ಅಕ್ಕಮಹಾದೇವಿಯ ವಚನಗಳ ಮೀಮಾಂಸೆಯ ರೂಪ ಸ್ವರೂಪವನ್ನು ಗುರುತಿಸಲಾಗಿದೆ. ಅಕ್ಕಮಹಾದೇವಿಯ ವಚನಗಳ ಮೀಮಾಂಸೆಯ ಸ್ವರೂಪ ವಿಭಿನ್ನವೂ, ವಿಶಿಷ್ಟವುಳ್ಳದ್ದಾಗಿದೆ. ಅದು ಹುಡುಕುವಿಕೆ, ಹೋರಾಟ, ಹುಟ್ಟುಗೆಡುವಿಕೆ ಅಂಶಗಳನ್ನು ಆಧರಿಸಿರುವ ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಅಕ್ಕಮಹಾದೇವಿಯ ಅಭಿವ್ಯಕ್ತಿ ವಿಧಾನ, ಮೀಮಾಂಸೆಯ ಪರಿಕಲ್ಪನೆಗಳು, ಕುರಿತು ವಿಸ್ತೃತವಾಗಿ ಚರ್ಚಿಸಲಾಗಿದೆ. ವಚನಗಳಲ್ಲಿ ಪ್ರತಿಮೆಗಳು ವಿಷಯವಸ್ತುವನ್ನು ಕುರಿತು ಶೋಧಿಸಲಾಗಿದೆ. ಅಕ್ಕಮಹಾದೇವಿಯ ವಚನಗಳು ಪ್ರತಿಮಾನಿಷ್ಠ ಆಕೃತಿಗಳಾಗಿರುವುದರಿಂದ ಅವುಗಳ ವೈವಿಧ್ಯತೆಯನ್ನು ವಿಶ್ಲೇಷಿಸಲಾಗಿದೆ. ಪ್ರತಿಮೆಗಳ ಅರ್ಥ ಸ್ವರೂಪ ಲಕ್ಷಣಗಳ ಸಂಕ್ಷಿಪ್ತ ಚರ್ಚೆ, ಆ ಹಿನ್ನೆಲೆಯಲ್ಲಿ ಅಕ್ಕಮಹಾದೇವಿಯ ವಚನಗಳಲ್ಲಿರುವ ಕೀಟ, ಪ್ರಾಣಿ, ಪಕ್ಷಿ, ಸಸ್ಯ ಪ್ರತಿಮೆಗಳು, ಸಾಮಾಜಿಕ ಪ್ರತಿಮೆಗಳು ಮತ್ತು ಅನುಭಾವಿಕ, ಆಧ್ಯಾತ್ಮಿಕ ಪ್ರತಿಮೆಗಳಾಗಿ ವಿಂಗಡಿಸಿ ವಿವರಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ಅಕ್ಕಮಹಾದೇವಿಯ ವಚನಗಳ ಭಾಷೆಯ ರಚನೆ, ಅದರ ಸ್ವರೂಪ, ಭಾಷೆಯ ಒಳರೂಪಿಕೆಗಳನ್ನು ವಿವರಿಸಲಾಗಿದೆ. ಭಾಷೆ, ಅದರ ಸಾಮಾಜಿಕ ಆಯಾಮಗಳು, ಆ ಹಿನ್ನೆಲೆಯಲ್ಲಿ ಅಕ್ಕಮಹಾದೇವಿಯ ಭಾಷೆಯು ಒಳಗೊಂಡಿರುವ ಸ್ತ್ರೀಸಂವೇದನೆಗಳು, ಭಾವೋತ್ಕರ್ಷತೆ, ಗಾದೆಗಳು ವಚನ

ನುಡಿಗಟ್ಟುಗಳನ್ನು ಸಂಬೋಧನೆಗಳು, ಬೈಗುಳಗಳನ್ನು ಸಂಗ್ರಹಿಸಲಾಗಿದೆ. ವಿವಿಧ ಭಾಷಿಕ ಆಯಾಮಗಳನ್ನು ಸಂಶೋಧಿಸುವ ಪ್ರಯತ್ನ ಮಾಡಲಾಗಿದೆ.

ಅಕ್ಕಮಹಾದೇವಿಯ ವಚನಗಳ ಶೈಲಿಯ ನಿರ್ವಚನವನ್ನು ಪ್ರಸ್ತಾಪಿಸಲಾಗಿದೆ. ಶೈಲಿ, ಅರ್ಥ, ವ್ಯಾಖ್ಯೆ, ಅಕ್ಕನ ವಚನಗಳಲ್ಲಿ ಬಳಕೆಯಾಗಿರುವ ಶೈಲಿಗಳು, ಪ್ರಾಸ, ಅಲಂಕಾರಗಳು, ದ್ವಿರುಕ್ತಿಗಳು, ಪುನರಾವೃತ್ತಿ ಅಂಶಗಳನ್ನು ವಚನಗಳ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ.

ಅಕ್ಕಮಹಾದೇವಿಯ ವಚನಗಳಲ್ಲಿ ಬಳಕೆಗೊಂಡಿರುವ ಛಂದಸ್ಸನ್ನು ಕುರಿತು ವಿವೇಚಿಸಲಾಗಿದೆ. ಸಾಹಿತ್ಯ ರಚನೆ ವಚನಕಾರರ ಉದ್ದೇಶವಲ್ಲದಿದ್ದರೂ ಸಹಜವಾಗಿಯೇ ಅಭಿವ್ಯಕ್ತಿಯಲ್ಲಿ ಛಂದೋಬಂಧಗಳು, ಲಯಾತ್ಮಕ ನಡಿಗೆ ಅನುರಣಗೊಂಡಿರುವುದನ್ನು ಕಂಡುಕೊಳ್ಳಲಾಗಿದೆ. ಅಕ್ಕಮಹಾದೇವಿಯ ವಚನಗಳಲ್ಲಿರುವ ಛಂದಸ್ಸಿನ ವಿನ್ಯಾಸದ ಆಯಾಮಗಳನ್ನು ಗ್ರಹಿಸಿ ವಿವೇಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಸ್ತ್ರೀವಾದಿ ನೆಲೆಯಲ್ಲಿ ಅಕ್ಕಮಹಾದೇವಿಯ ವಚನಗಳು ವಿಷಯದ ಕುರಿತು ಶೋಧಿಸಲಾಗಿದೆ. ಆಧುನಿಕ ಸ್ತ್ರೀವಾದದ ಚಿಂತನೆಯ ಹಿನ್ನೆಲೆಯಲ್ಲಿ ಅಕ್ಕಮಹಾದೇವಿಯ ವಚನಗಳಲ್ಲಿ ಸ್ತ್ರೀವಾದದ ದೃಷ್ಟಿಯನ್ನು ಕಂಡುಕೊಳ್ಳುವ ಪ್ರಯತ್ನವಾಗಿದೆ. ಅವಳ ಅಭಿವ್ಯಕ್ತಿಯಲ್ಲಿ ಆಧುನಿಕ ಮತ್ತು ಆಧುನಿಕೋತ್ತರ ಮಹಿಳಾ ಸಂದರ್ಭವನ್ನು ಪ್ರತಿನಿಧಿಸುವ ಮುನ್ನಡೆಸುವ ಮುನ್ಸೂಚನೆಗಳಿರುವ ನೆಲೆಗಳನ್ನು ಶೋಧಿಸುತ್ತ ಆಧುನಿಕ ಮಹಿಳಾ ಸಂದರ್ಭದ ಕಾವ್ಯದ ಮೇಲೆ ಅಕ್ಕಮಹಾದೇವಿಯ ಜೀವನ ಮತ್ತು ಅಭಿವ್ಯಕ್ತಿಯ ಪ್ರಭಾವವನ್ನು ಹೋಲಿಸಿ ವಿಶ್ಲೇಷಿಸಿ ವಿವೇಚಿಸುವ ಬಹುಮುಖ್ಯ ಚರ್ಚೆಯ ವಿಷಯವಸ್ತುಗಳಿಲ್ಲಿವೆ.

ಅಧ್ಯಾಯ ಆರರಲ್ಲಿ ಅವಲೋಕನದೊಂದಿಗೆ ಸಂಶೋಧನೆಯ ಫಲಿತಗಳನ್ನು ದಾಖಲಿಸಲಾಗಿದೆ. ಅಕ್ಕಮಹಾದೇವಿಯ ವಚನಗಳ ಮೀಮಾಂಸೆಯ ಪರಿಕಲ್ಪನೆಗಳು ಮತ್ತು ಅಭಿವ್ಯಕ್ತಿಯಲ್ಲಿ ನಿರೂಪಿತವಾದ ಒಳನೋಟಗಳನ್ನು, ಆಶಯಗಳನ್ನು ಗ್ರಹಿಸಲಾಗಿದೆ.

ಅಕ್ಕಮಹಾದೇವಿಯ ಅಭಿವ್ಯಕ್ತಿಯ ಅನನ್ಯತೆಯನ್ನು ಕಂಡುಕೊಳ್ಳುವ, ಇತರ ವಚನಕಾರ್ತಿಯರೊಂದಿಗೆ ಮುಖಾಮುಖಿಗೊಳಿಸುವ ಆ ಮೂಲಕ ಅವಳ ರಚನಾತ್ಮಕ ಅಭಿವ್ಯಕ್ತಿಯ ಅಪೂರ್ವ ನೆಲೆಗಳನ್ನು ಅರಿತುಕೊಳ್ಳುವ ಅದನ್ನು ಭಾಷಿಕ ಮಿತಿಯೊಳಗೂ ದಾಖಲಿಸುವ ಸಂಶೋಧನೆಯನ್ನು ಕೈಗೊಂಡಿದ್ದೇನೆ. ಅಕ್ಕಮಹಾದೇವಿಯ ಬದುಕು ಬರಹಗಳು ಎಂಟು ಶತಮಾನಗಳಿಂದಲೂ ಸಾಹಿತ್ಯಿಕ ಸಾಂಸ್ಕೃತಿಕ ನೆಲೆಗಳಿಗೆ ಮುಖಾಮುಖಿಯಾಗುತ್ತಲಿದ್ದರೂ ಅವಳ ವ್ಯಕ್ತಿತ್ವ, ಅಭಿವ್ಯಕ್ತಿಗಳು ಭಾಷಿಕ ರಚನೆಗೆ ಪೂರ್ಣಪ್ರಮಾಣದಲ್ಲಿ ದಕ್ಕದೇ ಹೋಗಿರುವುದು ವಾಸ್ತವ ಸತ್ಯಸಂಗತಿಯಾಗಿದೆ.

ಆದ್ದರಿಂದ ಅಕ್ಕಮಹಾದೇವಿ ಮತ್ತೆ ಮತ್ತೆ ಪ್ರಸ್ತುತವಾಗುತ್ತಲಿರುವಳು. ಅವಳ ಬರಹಗಳ ಕುರಿತು ಇನ್ನೂ ಹಲವಾರು ಸಂಶೋಧನೆಗಳು ಬೇರೆ ಆಯಾಮಗಳಲ್ಲಿ ನಡೆಸುವಷ್ಟು ವಿಫುಲ ಸಾಹಿತ್ಯ ಸತ್ವವನ್ನೊಳಗೊಂಡಿದೆ. ಆದ್ದರಿಂದ ಸಂಶೋಧನೆಯಲ್ಲಿ ಅವಳ ಅಭಿವ್ಯಕ್ತಿಯ ಮೀಮಾಂಸೆಯನ್ನು ನನ್ನ ಗ್ರಹಿಕೆಯ ಮಿತಿಯೊಳಗೆ ದಾಖಲಿಸುವ ಪ್ರಯತ್ನವನ್ನು ಮಾಡಿದ್ದೇನೆ.

ಅಧ್ಯಾಯ ಎರಡು

ಅಕ್ಕಮಹಾದೇವಿ ಮತ್ತು ಇತರ ಶರಣೆಯರು

ಅಧ್ಯಾಯ ಎರಡು

ಅಕ್ಕಮಹಾದೇವಿ ಮತ್ತು ಇತರ ಶರಣೆಯರು

ಕರ್ನಾಟಕದ ಚರಿತ್ರೆಯಲ್ಲಿ ಹನ್ನೆರಡನೆ ಶತಮಾನವು ಮಹತ್ವದ ಕಾಲಘಟ್ಟವೆನಿಸಿದೆ. ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಚಿಂತನೆಗಳ ಪುನರುಜ್ಜೀವನದ ಚಳುವಳಿಯದು. ಸಮಾಜೋ ಭಾಷಿಕ ನೆಲೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡ ಸಮಾಜೋಧಾರ್ಮಿಕ ಹಿನ್ನೆಲೆಯ ಸಾಹಿತ್ಯಿಕ ಉನ್ನತಿಯ ಹಂತವದು. ವಿಶ್ವಸಾಹಿತ್ಯದಲ್ಲಿಯೇ ವಿಶಿಷ್ಟವೆಂದು ಗುರುತಿಸಲಾಗಿರುವ ವಚನಸಾಹಿತ್ಯ ಅಂದಿನ ಸಮಾಜದ ಎಲ್ಲ ಸ್ತರದ ಜನಸಮುದಾಯದ ಪ್ರಾತಿನಿಧಿಕ ಸ್ವರೂಪವನ್ನು ಹೊಂದಿದೆ. ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದ ಬಸವಾದಿ ಶರಣರ ಚಳುವಳಿಯಲ್ಲಿ ಸ್ತ್ರೀಯರೂ ವ್ಯಷ್ಟಿ ಸಮಷ್ಟಿಗಳ ಅಭಿವೃದ್ಧಿಯಲ್ಲಿ ಶ್ರಮಿಸಿದರು. ಅಲ್ಲದೆ ವೈವಿಧ್ಯಮಯ ಚಿಂತನೆಗಳ ಸಾಹಿತ್ಯ ಸೃಷ್ಟಿಗೈದರು. ವಚನಕಾರ್ತಿಯರು ನವಸಮಾಜದ ನಿರ್ಮಾಣದಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಆ ಎಲ್ಲ ವ್ಯಕ್ತಿಗತ ಹಾಗೂ ಸಾಮುದಾಯಿಕ ಬೆಳವಣಿಗೆಗಳನ್ನು ಭಾಷೆಯಲ್ಲಿ ಜೀವಂತಗೊಳಿಸಿದ ಹೆಗ್ಗಳಿಕೆ ಅವರದು.

ಸನಾತನ ಕಾಲದಿಂದಲೂ ಶೋಷಣೆಗೊಳಪಟ್ಟ ಮಹಿಳಾ ಶಕ್ತಿ ಪ್ರಕಾಶನಗೊಂಡು, ಸ್ತ್ರೀಕುಲದ ಸ್ಥಾಪಿತ ಮೌಲ್ಯಗಳಿಗೆ ಎದುರಾಗಿ ತಮಗೆ ದೊರೆತ ಅವಕಾಶವನ್ನು ಸದುಪಯೋಗ ಮಾಡಿಕೊಂಡು, ಸದಾಚಾರದಿಂದ ಕೂಡಿದ ಜೀವನ ಮೌಲ್ಯಗಳನ್ನು ಎತ್ತಿ ಹಿಡಿದರು. ಏಕಕಾಲಕ್ಕೆ ಮೂವತ್ತಕ್ಕೂ ಹೆಚ್ಚು ಮಹಿಳೆಯರು ಸಾಹಿತ್ಯಿಕವಾಗಿ ಗುರುತಿಸಿಕೊಂಡುದು ಇಂದಿಗೂ ಬೆರಗನ್ನು ಹುಟ್ಟಿಸುತ್ತದೆ. ಸಮಾಜದ ವಿವಿಧ ಜನಸಮುದಾಯವನ್ನು ಪ್ರಾತಿನಿಧಿಕವಾಗಿ ಸಮೀಕರಿಸಲ್ಪಟ್ಟ ಸಾಹಿತ್ಯ ವಚನಕಾರ್ತಿಯರದು.

ಹನ್ನೆರಡನೇ ಶತಮಾನದ ವಚನಕಾರ್ತಿಯರು ಲಿಂಗಾಯತ ಧರ್ಮದ ಧ್ಯೇಯ ಧೋರಣೆಗಳ ಅನುಸರಣೆಗೈದು, ಆ ತತ್ವದ ದೃಷ್ಟಿಗೆ ಧ್ವನಿಯಾದವರು. ಶಿವಶರಣೆಯರಲ್ಲಿ ಸಂಸಾರಿಗಳು,

ವಿರಾಗಿಣಿಯರು, ಸಮಾನನೆಲೆಯಲ್ಲಿ ಗುರುತಿಸಿಕೊಂಡರೂ, ಶಿವಶರಣೆಯರ ಜೀವನ ವಿಧಾನ, ಸಾಧನೆ, ಸಾಹಿತ್ಯ ರಚನೆಯಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಉಳಿಸಿಕೊಂಡರು. ವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಬದುಕಿನಲ್ಲಿ ಎದುರಾದ ಎಲ್ಲ ಒಳಹೊರಗಿನ ಸಂಘರ್ಷ, ಸವಾಲುಗಳನ್ನು ಹಿಮ್ಮೆಟ್ಟಿ ಹಿರಿಮೆ ಸಾಧಿಸಿದ ಅಕ್ಕಮಹಾದೇವಿ ಜೀವನ ಮತ್ತು ಸಾಹಿತ್ಯ ಎರಡರಲ್ಲಿಯೂ ವಿಭಿನ್ನವಾಗಿ ಗುರುತಿಸಿಕೊಂಡವಳು. "ಅಕ್ಕನಿಗೂ ಉಳಿದವರಿಗೂ ಮುಖ್ಯ ವ್ಯತ್ಯಾಸವೆಂದರೆ ಅಕ್ಕ ಇಡೀ ವ್ಯವಸ್ಥೆಯನ್ನೇ ಧಿಕ್ಕರಿಸಿದವಳು. ಉಳಿದವರು ವ್ಯವಸ್ಥೆಯಲ್ಲಿ ಬದಲಾವಣೆ ಬಯಸಿದವರು. ಅದಕ್ಕಾಗಿ ಶ್ರಮಿಸಿದವರು. ಅಕ್ಕ ಸಾಂಸ್ಥಿಕವಾದ ಎಲ್ಲವನ್ನೂ ವಿವಾಹ, ಕುಟುಂಬ, ಗಂಡ, ಮನೆಗಳನ್ನು ಧಿಕ್ಕರಿಸಿದವಳು. ಹಾಗೆಯೇ ದೇಹ, ಕಾಮಗಳ ಬಗೆಗಿನ ಸಾಂಪ್ರದಾಯಿಕ ನಿಲುವುಗಳನ್ನು ಧಿಕ್ಕರಿಸಿದವಳು. ಆದರೆ ಉಳಿದವರು ಆ ವ್ಯವಸ್ಥೆಗಳಲ್ಲಿನ ದೋಷಗಳನ್ನು ನಿವಾರಿಸಿ ಹೊಸತನವನ್ನು ತುಂಬಲು ಪ್ರಯತ್ನ ಮಾಡುವವರು. ಅಕ್ಕ ಮುರಿಯುತ್ತಾ ಹೋದವಳು. ಉಳಿದವರು ಮುರಿದು ಕಟ್ಟಲು ಪ್ರಯತ್ನಿಸಿದವರು."[೧]

ಅಕ್ಕಮಹಾದೇವಿ ಮತ್ತು ಸಮಕಾಲೀನ ಶಿವಶರಣೆಯರ ಮುಖಾಮುಖಿ ಆದ ಬಗೆಗಿನ ವಿಚಾರಗಳನ್ನು ಅವಲೋಕಿಸಿದಾಗ ಹಲವು ಸಾಧ್ಯತೆಗಳು ಹುಟ್ಟಿಕೊಳ್ಳುವುದುಂಟು. ಅನುಭವ ಮಂಟಪದಲ್ಲಿ ಪ್ರಭುದೇವರು ಮತ್ತು ಅಕ್ಕಮಹಾದೇವಿ, ಬಸವಣ್ಣ, ಚೆನ್ನಬಸವಣ್ಣ, ಮಡಿವಾಳ ಮಾಚಿದೇವ, ಸಿದ್ಧರಾಮ ಮೊದಲಾದವರೊಂದಿಗೆ ಅಕ್ಕನ ಮುಖಾಮುಖಿ ಸಾಹಿತ್ಯಿಕ ಸಂವಾದ ಚರ್ಚೆ, ಪ್ರಶಂಶೆ, ಆದರ ಅಭಿಮಾನಗಳು ಸಹಜವಾಗಿ ಕಾಣುತ್ತವೆ. ಆದರೆ ಅನುಭವಮಂಟಪ, ಅದರಾಚೆಗೂ, ಅಕ್ಕನೊಂದಿಗಿನ ಇತರ ವಚನಕಾರ್ತಿಯರ ಸಾಂಗತ್ಯ, ಸಂವಾದಗಳು ಕಂಡುಬರುವುದಿಲ್ಲ. ಅವರು ಪರಸ್ಪರ ಎದುರಾದರೂ ಗಾಢವಾದ ಮೌನ ಅವರೆಲ್ಲರ ನಡುವೆ ಆವರಿಸಿರುವುದು ನಿಜವಾದರೂ ಸೋಜಿಗ. ಅಂಥಹ ಮುಖಾಮುಖಿ ಆಗುವ ಸಂದರ್ಭಗಳು ಸೃಷ್ಟಿಯಾಗಲಿಲ್ಲವೆ? ಅಥವಾ ವಚನಕಾರ್ತಿಯರ ಜೊತೆಗಿನ ಸಾಂಗತ್ಯಗಳು ದಾಖಲಾಗದೇ ಹೋದವೆ? ಎಂಬ ಸಂದೇಹವೊಂದು ಕಾಡುತ್ತದೆ. ಅಕ್ಕಮಹಾದೇವಿಯಂತೆಯೇ, ಧೂಪದ ಗೊಗ್ಗವ್ವೆ, ಬೊಂತಾದೇವಿ ವಿರಾಗಿಣಿಯರಿಗೂ ಅಕ್ಕನ ಆಂತರ್ಯ ತೆರೆದುಕೊಳ್ಳಲಿಲ್ಲವೇಕೆ? ಸಮಕಾಲೀನ ಶಿವಶರಣೆಯರು ಪುರುಷ ವಚನಕಾರರನ್ನು ಅನುಸರಿಸಿದಂತೆ ಅಕ್ಕನ ಆದರ್ಶವನ್ನು ಅನುಸರಿಸಲು ಪ್ರಯತ್ನಿಸಲಿಲ್ಲವೇ? ಅಥವಾ, ಅದು ಅಸಾಧ್ಯವೆಂಬ ಮನೋಭಾವವೋ? ಅಂತೂ ಅಕ್ಕನೊಡನೆ ಇತರ ವಚನಕಾರ್ತಿಯರ ಒಡನಾಟ ಸಾಧ್ಯವಾಗದೇ ಇರುವುದಕ್ಕೆ ಹಲವು ಕಾರಣಗಳೂ ಗೋಚರಿಸುತ್ತವೆ.

ಅಕ್ಕಮಹಾದೇವಿ ಮೂಲತಃ ಕುಟುಂಬ, ವಿವಾಹದಂತಹ ವ್ಯವಸ್ಥೆಯನ್ನು ಧಿಕ್ಕರಿಸಿ ಹೊರನಡೆದವಳು. ಕೌಟುಂಬಿಕ ಬದುಕಿನಾಚೆಗಿನ ಸವಾಲಿನ ಒಂಟಿ ಹೋರಾಟದ ಬದುಕು ಅಕ್ಕನದು. ಸುಲಿಪಲ್ಲ ಗೊರವನಿಗೆ ಸಲೆಮಾರು ಹೋದ ಅಕ್ಕ ಅವನನ್ನು ಕೂಡುವ ಭರದಲ್ಲಿ ಬಂಧುತ್ವವನ್ನು ಮೀರಿನಿಂತು 'ನಿನ್ನ ತಾಯಿತನವನೊಲ್ಲೆ' ಎಂಬ ನಿಷ್ಠುರ ನಿರ್ಧಾರ ಮಾಡಿ ಹೊರನಡೆದವಳು. ತಾನರಸಿ ಹೊರಟ ಲಿಂಗಪತಿಯ ಸೆಳೆತ ಅಕ್ಕನು ತನ್ನೆಲ್ಲ ಬಂಧುತ್ವವನ್ನು ಮೀರುವಂತೆ ಮಾಡಿದೆ.

"ಎಲೆ ತಾಯಿ ನೀನಂತಿರು,
ಎಲೆ ತಂದೆ ನೀನಂತಿರು,
ಎಲೆ ಕುಲವೆ ನೀನಂತಿರು,
ಎಲೆ ಬಲವೆ ನೀನಂತಿರು,
ಚೆನ್ನಮಲ್ಲಿಕಾರ್ಜುನನ ಕೂಡುವ ಭರದಿಂದ
ಹೋಗುತ್ತಿದ್ದೇನೆ.
ನಿಮಗೆ ಶರಣಾರ್ಥಿ ಶರಣಾರ್ಥಿ"[೨]

ಅಕ್ಕಮಹಾದೇವಿ ಅಂತರಂಗ ಬಹಿರಂಗಗಳ ಮೋಹವನ್ನು, ಮಮತೆಯನ್ನು ಮೀರಿ ಮಲ್ಲಿಕಾರ್ಜುನನ ಮಡದಿಯಾಗಲು ಬಯಸಿದವಳು. ಮನೆಯನ್ನು, ಅದರೊಂದಿಗಿನ ತನ್ನೆಲ್ಲ ಸಂಬಂಧಗಳನ್ನು ಮೀರಲು ಕಾರಣವಾದ ವಿವಾಹ, ಗಂಡನನ್ನು ಧಿಕ್ಕರಿಸಿದವಳು. ಸಾವ ಕೆಡುವ ಗಂಡನ ಬಗೆಗಿನ ಅವಳ ಆಕ್ರೋಶ, ಭವಭಯವಿಲ್ಲದ ಭವಹರನ ಮೋಹ ಮಹಾದೇವಿಯಲ್ಲಿ ಅಗಾಧವಾಗಿದೆ. 'ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು' ಧೋರಣೆ ಮಹಾದೇವಿಯಕ್ಕನದಾದರೆ, ಸಾವಕೆಡುವ ಗಂಡನಿಗೆ ಹೆಂಡತಿಯಾಗಿ ಬದುಕಿದ ಬಹುಸಂಖ್ಯಾತ ವಚನಕಾರ್ತಿಯರಿಗೆ ಗಂಡ, ಮನೆಯ ಪೋಷಣೆ, ರಕ್ಷಣೆ ಸಹಜವಾಗಿ ದೊರಕಿರುವುದರಿಂದ ಸಮಾಜದ ಏಕಾಂಗಿತನದ ಸವಾಲುಗಳು, ಸಂಘರ್ಷಗಳು ಎದುರಾಗದೆ ಸಮಾಧಾನದಲ್ಲಿ ಬದುಕಿದವರು. ಕೌಟುಂಬಿಕ ಬದುಕಿನ ಆವರಣದಲ್ಲಿದ್ದುಕೊಂಡು ರಕ್ಷಣಾತ್ಮಕ ವಲಯದಲ್ಲಿ ಸವಾಲಿನ ಸಂಘರ್ಷದ ಸಂದರ್ಭಗಳು ಬಹಳಷ್ಟು ವಚನಕಾರ್ತಿಯರಿಗೆ ಎದುರಾಗದಿರುವುದು.

"ಪತಿಯಾಜ್ಞೆಯಲಿ ಚರಿಪ ಸತಿಗ್ಯಾಕೆ ಪ್ರತಿಜ್ಞೆಯು?
ಪ್ರತಿಜ್ಞೆಯ ಪತಿಕರದಲ್ಲಿ ಪೋಪದಿರೆ ಯಾತನೆಯಲ್ಲವೆ?
ಇವಳ ಲಿಂಗನಿಷ್ಠೆ ಇವಳಿಗೆ,

ನಮ್ಮ ನಿಷ್ಠೆ ಪತಿಯಾಜ್ಞೆಯಲಿ ಕಾಣಾ
ಗಂಗಾಪ್ರಿಯ ಕೂಡಲಸಂಗಮದೇವಾ."[೩]

'ಸತಿಗೆ ಪತಿಯಾಜ್ಞೆ ಅಂತಿಮ' ಈ ಮನೋಭಾವ ಬಸವಣ್ಣನವರ ಪತ್ನಿ ಗಂಗಾಂಬಿಕೆಯ ವಿಚಾರ ಮಾತ್ರವಲ್ಲ. ಅಂದಿನ ಸಾಮಾಜಿಕ ಸನ್ನಿವೇಶದಲ್ಲಿ ಬಾಳಿದ, ಭಾರತೀಯ ಸನಾತನ ಕಾಲದಿಂದಲೂ ಪತಿಯ ನೆರಳಲ್ಲೇ ಬದುಕಿದ ಮಹಿಳೆಯರ ಸ್ಥಿತಿಗತಿಯ ಚಿತ್ರಣವಿದು. ಗಂಡನಿಲ್ಲದ ಸ್ತ್ರೀಗೆ ಇದ್ದ ಸ್ಥಾನಮಾನ ಅಷ್ಟಕ್ಕಷ್ಟೆ! ಗಂಡನ ಆಜ್ಞೆ ಮೀರಿದ ಸತಿಯರಿಗೆ ಯಾತನೆ ತಪ್ಪಿದ್ದಲ್ಲ. ಪತಿಯನ್ನು ಹಿಂಬಾಲಿಸುವ ಸತಿಗೆ ಮಾತ್ರ ಸುರಕ್ಷೆ! ಪತಿಯಾಜ್ಞೆಯಲಿ ನಡೆದರೆ ಮಾತ್ರ ಅವಳು ಪತಿವೃತೆ, ಎದುರಾಡುವವರಿಗೆ ಸಂಕಷ್ಟಗಳ ಸರಮಾಲೆ. ಸ್ತ್ರೀಯರ ಸ್ಥಿತಿಗತಿ ಅಂದಿನಿಂದ ಇಂದಿನವರೆಗೂ ಇದೇ ಚೌಕಟ್ಟಿನಲ್ಲಿ ಬಂಧಿಸಲ್ಪಟ್ಟಿರುವುದಂತೂ ಸತ್ಯ. ಈ ಚೌಕಟ್ಟನ್ನು ಮುರಿಯಲೆತ್ನಿಸಿದವರಿಗೆ, ಮುರಿದು ಬಂದವರಿಗೆ ಬವಣೆಗಳ ಛಾಟಿಯೇಟು ಸಮಾಜದಿಂದ ದೊರಕಿರುವುದು ದುರದೃಷ್ಟಕರ. ಬವಣೆಗಳ ಭಯವೇ ಬಹಳಷ್ಟು ಸ್ತ್ರೀಯರನ್ನು ಹಿಂಸೆಯನ್ನು, ಯಾತನೆಯನ್ನು ಕುಟುಂಬಗಳೊಳಗೆ ನಡೆಯುವ ಶೋಷಣೆ, ದೌರ್ಜನ್ಯವನ್ನು ಸಹಿಸುವಂತೆಯೂ ಅಸಹನೀಯ ಬದುಕನ್ನು ಸಹ್ಯವಾಗಿಯೂ ಸ್ವೀಕರಿಸುವಂತೆ ಮಾಡುತ್ತಲೇ ಇದೆ. ಮಹಾದೇವಿಯಕ್ಕ ಮುರಿದು ಹೊರಬರುವ ಛಾತಿ ತೋರಿದವಳಾದ ಕಾರಣ ಸಂಪ್ರದಾಯ, ಸಮಾಜದ ಸಂಘರ್ಷಗಳನ್ನು ಸ್ವೀಕರಿಸಲೇಬೇಕಾಯಿತು. ಲೌಕಿಕ ಪತಿಯನ್ನು ವಿರೋಧಿಸಲು ಅಕ್ಕಮಹಾದೇವಿ ಅಲೌಕಿಕ ಪತಿಯನ್ನಾಶ್ರಯಿಸಿ ಪ್ರತಿರೋಧವನ್ನು ಒಡ್ಡಿದವಳು.

"ಇಹಕ್ಕೊಬ್ಬ ಗಂಡನೇ? ಪರಕೊಬ್ಬ ಗಂಡನೆ?
ಲೌಕಿಕ್ಕೊಬ್ಬ ಗಂಡನೆ? ಪಾರಮಾರ್ಥಕ್ಕೊಬ್ಬ ಗಂಡನೆ?
ಎನ್ನ ಗಂಡ ಚೆನ್ನಮಲ್ಲಿಕಾರ್ಜುನದೇವರಲ್ಲದೆ
ಮಿಕ್ಕಿನ ಗಂಡರೆಲ್ಲ ಮುಗಿಲಮರೆಯ ಬೊಂಬೆಗಳಂತೆ."[೪]

ಮರ್ತ್ಯದ ಗಂಡನ ಅಸ್ತಿತ್ವವನ್ನೇ ಪಲ್ಲಟಗೊಳಿಸಿದ ಪ್ರತಿತಂತ್ರ ಅಕ್ಕನದು. ಮಾನವರ ಹಂಗನ್ನು ಹರಿದ ಮಹಾದೇವಿಯದು ಮಲ್ಲಿಕಾರ್ಜುನನನೆಂಬ ಅಲೌಕಿಕ, ಅವಾಸ್ತವಿಕ, ಅನುಭಾವಿಕ ಸ್ಥರದ ನಿರಾಕಾರ ಚೆಲುವನ್ನು ಆಲಂಗಿಸಿದ ಪರಿ ಲೌಕಿಕರ ವರ್ತನೆಗೆ, ವಿಚಾರಗಳಿಗೆ ತೀರ ವಿರೋಧವಾದುದು. 'ಮದುವೆ' ಎಂಬುದೇ ಮಾಯೆ ಎಂದು ಜರಿದ ಅಕ್ಕಮಹಾದೇವಿಯ ವಿಚಾರ, ಸಂಪ್ರದಾಯಕ್ಕೆ ತೋರಿದ ವೈರುಧ್ಯವೇ.

"ಸತಿ ಎಂಬುದು ಮಾಟ, ಪತಿಯೆಂಬುದು ಮಾಟ,
ತನುವೆಂಬುದು ಮಾಯೆ, ಮನವೆಂಬುದು ಮಾಯೆ,

ಸುಖವೆಂಬುದು ಮಾಯೆ,
ಚೆನ್ನಮಲ್ಲಿಕಾರ್ಜುನನೆನಗೆ ಕೈಹಿಡಿದ ಗಂಡನಲ್ಲದೆ
ಮಿಕ್ಕಿನವರೆಲ್ಲರೂ ಮೂಗಿಲ್ಲದ ಬಣ್ಣದ ಬೊಂಬೆಗಳು ಕಾಣಯ್ಯಾ."[೨೫]

ಲೌಕಿಕ ವಿವಾಹ, ಅದರ ಪರಿಕಲ್ಪನೆ, ಗಂಡ, ಅವನ ಬಗೆಗಿನ ಮಹಾದೇವಿಯಕ್ಕನ ದೃಷ್ಟಿಕೊನ ಇತರ ವಚನಕಾರ್ತಿಯರಿಗಿಂತ ತೀರ ವಿಭಿನ್ನವಾದದ್ದು. ಬೊಂತಾದೇವಿ, ಗೊಗ್ಗವೆಯಂತಹ ವಿರಾಗಿಣಿಯರು, ಸೂಳೆಸಂಕವ್ವೆಯನ್ನು ಹೊರತುಪಡಿಸಿದರೆ ಬಹಳಷ್ಟು ಶಿವಶರಣೆಯರು ಲೋಕದ ಗಂಡರಿಗೆ ಹೆಂಡರಾಗಿದ್ದುಕೊಂಡೇ ಅವರು ಅನುಸರಿಸಿದ ಆಚಾರ ವಿಚಾರಗಳನ್ನೇ ಅನುಸರಿಸಿ ಅರಿವಿನ ಮಾರ್ಗ ಹಿಡಿದು ಅದರಲ್ಲೇ ವಿಶಿಷ್ಟತೆಯನ್ನು ಕಂಡುಕೊಂಡವರು. ಅಕ್ಕನ ವೈರಾಗ್ಯ, ಅಸಾಂಪ್ರದಾಯಿಕ ಮನೋಭಾವಗಳನ್ನು ಇತರ ಶರಣೆಯರು ಅನುಸರಿಸಲು ಸಾಧ್ಯವಾಗದೇ ಹೋಗಿರುವುದು, ಅಕ್ಕಮಹಾದೇವಿ ಮತ್ತು ಉಳಿದ ಶಿವಶರಣೆಯರ ಬದುಕು ಮತ್ತು ಬರಹಗಳೆರಡರಲ್ಲಿಯೂ ಭಿನ್ನತೆಯನ್ನೇ ಸೃಷ್ಟಿಸಿದೆ. ಅಕ್ಕಮಹಾದೇವಿಯ ಗಂಡ ನಿರಾಕಾರ, ನಿರವಯ, ನಿರ್ಭಯ, ನಿಸ್ಸೀಮ ಚೆಲುವ. ಶರಣೆಯರು ತಮ್ಮ ಗಂಡನಲ್ಲೇ ಚೆಲುವನ್ನು, ಸೌಂದರ್ಯವನ್ನು ಕಂಡುಕೊಂಡವರು.ಸಂಸಾರ ಶಿವಶರಣೆಯರಿಗೆ ಸಾಧನೆಗೆ ತೊಡಕಲ್ಲ. ಸಂಸಾರವನ್ನೇ ಸಾಧನ ಮಾಡಿಕೊಂಡು ಸಾಧನೆ ಮಾಡಿದವರು. ಲೌಕಿಕ ಸಂಸಾರವನ್ನು ತಿರಸ್ಕರಿಸಿದೆ ಸಹ್ಯವಾಗಿಸಿಕೊಂಡ ಶಿವಶರಣೆಯರು ಮರ್ತ್ಯದ ಮಣಿಹವನ್ನು ಪೂರೈಸಿ ಪರಿಪೂರ್ಣತೆಯನ್ನು ಪಡೆಯಲು ಪ್ರಯತ್ನಿಸಿದರು. ಅಕ್ಕನಿಗೆ ಸಂಸಾರ ನಿಸ್ಸಾರ ಮಾಡಿಕೊಳ್ಳುವ ಬಯಕೆ. ಅಕ್ಕನ ಸಂಸಾರವೇ ಭಿನ್ನ.

"ಅತ್ತೆ ಮಾಯೆ, ಮಾವ ಸಂಸಾರಿ
ಮೂವರು ಮೈದುನರು ಹುಲಿಯಂತವದಿರು,
ನಾಲ್ವರು ನೆಗೆವೆಣ್ಣು ಕೇಳು ಕೆಳದಿ.
ಐವರು ಭಾವದಿರನೊಯ್ವ ದೈವವಿಲ್ಲ.
ಆರು ಪ್ರಜೆಯತ್ತಿಗೆಯರ ಮೀರಲಾರೆನು.
ತಾಯೆ, ಹೇಳುವಡೆ ಏಳು ಪ್ರಜೆ ತೊತ್ತಿರ ಕಾಹು.
ಕರ್ಮವೆಂಬ ಗಂಡನ ಬಾಯ ಟೊಣೆದು,
ಹಾದರವನಾಡುವೆನು ಹರನ ಕೂಡೆ.
ಮನವೆಂಬ ಸಖಿಯ ಪ್ರಸಾದದಿಂದ
ಅನುಭಾವವ ಕಲಿತೆನು ಶಿವನೊಡನೆ;
ಕರಚೆಲುವ ಶ್ರೀಶೈಲ ಚೆನ್ನಮಲ್ಲಿಕಾರ್ಜುನನೆಂಬ
ಸಜ್ಜನ ಗಂಡನ ಮಾಡಿಕೊಂಡೆ."[೨೬]

ಅಕ್ಕನ ಸಂಸಾರ ಅಲೌಕಿಕ, ಕಾಯ ಮತ್ತು ಜೀವರ ನಡುವಿನ ಸಂಬಂಧದ ಸಕೀಲಗಳನ್ನೊಳಗೊಂಡ ಅಂತರಂಗದ ಬಂಧವದು. ಅನುಭಾವದ ಅನುಭೂತಿ ಹೊಂದಲು ಆ ದಾರಿಯಲ್ಲಿ ಅಡ್ಡಿಯಾದ ತನು ಮನ ಭಾವಗಳ ತುಮುಲಗಳನ್ನು ಪರಿಹರಿಸುತ್ತ ಪರಿಶುದ್ಧಳಾಗುತ್ತ ಲಿಂಗಪತಿಯನ್ನು ಬೆರೆಯುವ ಅನ್ಯೋನ್ಯ ಬೆಸುಗೆಯ ಬಗೆಯದು.ಸಜ್ಜನ ಗಂಡನ ಮಾಡಿಕೊಳ್ಳಲು ಲೌಕಿಕ ಸಂಸಾರ, ಸಂಪ್ರದಾಯಗಳನ್ನು ಮೀರುತ್ತ, ಸಂಘರ್ಷಗಳೆನ್ನುದುರಿಸಿ ಸತಿ ಧರ್ಮವನ್ನು ಮೆರೆದವಳು ಮಹಾದೇವಿಯಕ್ಕ. ಬಹುಪಾಲು ವಚನಕಾರ್ತಿಯರು ಲೌಕಿಕ ಗಂಡನ ಏಕನಿಷ್ಠೆಯಲ್ಲಿ ಸತಿಧರ್ಮ ಪಾಲಿಸಿದ ಪತಿವ್ರತೆಯರು, ಅಕ್ಕಮಹಾದೇವಿ ಅಲೌಕಿಕ ಪತಿಯಲ್ಲಿ ಅಚಲ ನಿಷ್ಠೆಯನ್ನು ತೋರಿಸಿದವಳು.

ಶಿವನೊಲಿಸಲು ಶರೀರವೊಂದು ಸಾಧನ. ಆ ಶರೀರಕ್ಕೆ ಸದಾಚಾರವೇ ಗಂತವ್ಯ. ವ್ರತ, ಶೀಲ, ನೇಮಗಳ ಬದ್ಧತೆಯಿಂದ ಭವವನ್ನು ಗೆಲ್ಲುವ ಧ್ಯೇಯ ಹೊಂದಿದ ಶರಣರು, ದೇಹದ ಬಗೆಗಿನ ಪರಿಕಲ್ಪನೆಯನ್ನೇ ಸಮಕಾಲೀನ ಅವರ ಪತ್ನಿಯರು, ಇತರ ವಚನಕಾರ್ತಿಯರು, ವ್ರತ ಶೀಲಗಳ ಬಂಧವನ್ನು ದೇಹಕ್ಕೆ ತೊಡಿಸಿದವರು. ದೇಹ ದಂಡನೆಯಲ್ಲದ ಸಹಜ ಸದಾಚಾರಗಳಿಂದ ಸದ್ಗತಿ ಹೊಂದುವ ಅಭಿಲಾಶೆ ಅವರದು. ಅಕ್ಕಮಹಾದೇವಿ ದೇಹ, ಅದರ ಅಸ್ತಿತ್ವಗಳನ್ನು ನೋಡುವ ಪರಿಯೇ ಎಲ್ಲರಿಗಿಂತ ವಿಭಿನ್ನ, ದೇಹದ ನಿರ್ವಚನದಲ್ಲೂ ಭಿನ್ನತೆ. ದೇಹದ ನಿರಾಕರಣೆ ಅಕ್ಕಮಹಾದೇವಿಯಲ್ಲಿ ತೀವ್ರನೆಲೆಯಲ್ಲಿ ಪ್ರಕಟಗೊಂಡಿದೆ.

> "ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ,
> ಎಲುವಿನ ತಡಿಕೆ, ಕೀವಿನ ಹಡಿಕೆ,
> ಸುಡಲೀ ದೇಹವ; ಒಡಲುವಿಡಿದು ಕೆಡದಿರು,
> ಚೆನ್ನಮಲ್ಲಿಕಾರ್ಜುನನನರಿಯದ ಮರುಳೆ."[೭]

ಅಕ್ಕಮಹಾದೇವಿ ಕಾಯ, ಅದರ ನೆಲೆಯನ್ನು ವಿವರಿಸಿದ ರೀತಿ ನೇತ್ಯಾತ್ಮಕ. ಕಾಯದ ಆಕರ್ಷಣೆಗೆ ಒಳಗಾಗಿ ಕಷ್ಟ, ಹಿಂಸೆ, ಆಕ್ರಮಣಗಳು ಬಂದೆರಗುವುದನ್ನು ಸೂಕ್ಷ್ಮಸಂವೇದಿ ಅಕ್ಕ ಅರಿತುಕೊಂಡಿರುವುದರಿಂದ ಒಳಹೊರಗಿನ ಆಕ್ರಮಣಗಳನ್ನು ತಡೆಯುವ ಉದ್ದೇಶದಿಂದ ಶರೀರ ಸಂಬಂಧದ ಮೋಹವನ್ನು ಬಯಲುಗೊಳಿಸಿದ್ದಾಳೆ. ಅದರಲ್ಲೂ ಹೆಣ್ಣಿನ ದೇಹ, ಸೌಂದರ್ಯ ಕುರಿತಾದ ಸಾಂಪ್ರದಾಯಿಕ ವ್ಯಾಮೋಹವನ್ನು ಅಕ್ಕಮಹಾದೇವಿ ನಿರ್ವಾಣದ ನೆಲೆಯಲ್ಲಿ ಭಿನ್ನವಾಗಿ ಪುನರ್‌ವ್ಯಾಖ್ಯಾನಿಸುವ ಮೂಲಕ ಹೆಣ್ಣು, ಹೆಣ್ತನವನ್ನು ನೋಡುವ ದೃಷ್ಟಿಕೋನವನ್ನು ಪಲ್ಲಟಗೊಳಿಸಿದ್ದಾಳೆ. ಹೆಣ್ಣಿನ ಕಾಯದ ಬಗೆಗಿನ ಪುರುಷದೃಷ್ಟಿ, ಭೋಗಲಾಲಸೆ, ಆಕರ್ಷಣೆ, ಬಲವಂತ ಕ್ರೌರ್ಯಕ್ಕೆ ಪ್ರತಿತಂತ್ರ ರೂಪಿಸಿದ ಅಕ್ಕಮಹಾದೇವಿ, ತನ್ನ ಕಾಯದ ಬಗ್ಗೆ ತೀವ್ರ ನಿರ್ಲಿಪ್ತ ಭಾವವನ್ನೇ ವ್ಯಕ್ತಗೊಳಿಸಿರುವುದರಿಂದ ಶೀಲ ಪಾತಿವ್ರತ್ಯಗಳು ಅಕ್ಕನ ನಿಲುವಿಗೆ ಒಗ್ಗದ ವಿಚಾರಗಳು.

"ನಾಳದ ಮರೆಯ ನಾಚಿಕೆ,
ನೂಲಮರೆಯಲ್ಲಿ ಅಡಗಿತ್ತೆಂದು ಅಂಜುವರು, ಅಳುಕುವರು.
ಮನ ಮೆಚ್ಚಿದಭಿಮಾನಕ್ಕೆ ಆವುದು ಮರೆ ಹೇಳಾ?
ಕಾಯ ಮಣ್ಣೆಂದು ಕಳೆದ ಬಳಿಕ,
ದೇಹದಭಿಮಾನ ಅಲ್ಲಿಯೇ ಹೋಯಿತ್ತು.
ಪ್ರಾಣ ಬಯಲೆಂದು ಕಳೆದ ಬಳಿಕ,
ಮನದ ಲಜ್ಜೆಯಲ್ಲಿಯೆ ಹೋಯಿತ್ತು.
ಚೆನ್ನಮಲ್ಲಿಕಾರ್ಜುನನ ಕೂಡಿ ಲಜ್ಜೆಗೆಟ್ಟವಳ
ಉಡಿಗೆಯ ಸೆಳೆದುಕೊಂಡಡೆ,
ಮುಚ್ಚಿದ ಸೀರೆ ಹೋದರೆ ಅಂಜುವರೆ ಮರುಳೆ?"[೮]

ತನು ಮನ ಪ್ರಾಣಗಳ ಮಮಕಾರಗಳನ್ನು ಮೀರುವುದು ಮಹಾದೇವಿಯಕ್ಕನಂತವರಿಗೆ ಮಾತ್ರ ಸಾಧ್ಯವಾಗುವಂತಹದು. ಬಹಿರಂಗದ ಲಜ್ಜೆ, ಅಂತರಂಗದ ವ್ಯಾಮೋಹ ಬಿಸುಟಿ, ನಿರ್ವಿಕಾರ ಸ್ಥಿತಿಯನ್ನು ತಾಳುವುದು. ಭೌತಿಕ, ಭಾವನಾತ್ಮಕ ಹಂಗು ಹರಿದು ಹರನನ್ನು ಕೂಡುವುದಕ್ಕಾಗಿ ಹರಣವನ್ನು ಪಣಕ್ಕಿಡುವುದರಿಂದ ದೇಹದ ದಳ್ಳುರಿಗಳು ಅಕ್ಕನನ್ನು ಕಂಗೆಡಿಸಿದರೂ, ಧೃತಿಗೆಡದೆ ಧೃಡತೆಯಿಂದ ದಾಟುವ ಮಾರ್ಗವನ್ನು ಕಂಡುಕೊಳ್ಳುತ್ತಾಳೆ.

"ಕಾಯ ಕರ್ರನೆ ಕಂದಿದಡೇನಯ್ಯಾ?
ಕಾಯ ಮಿರ್ರನೆ ಮಿಂಚಿದಡೇನಯ್ಯಾ?
ಅಂತರಂಗ ಶುದ್ಧವಾದ ಬಳಿಕ
ಚೆನ್ನಮಲ್ಲಿಕಾರ್ಜುನಯ್ಯಾ
ನೀನೊಲಿದ ಕಾಯವು ಹೇಗಿದ್ದಡೇನಯ್ಯಾ?"[೯]

ಕಾಯದ ವಿಕಾರಗಳನ್ನು ಕಳೆದುಕೊಂಡು ವಿಕಾಸಗೊಂಡ ಅಕ್ಕನ ವ್ಯಕ್ತಿತ್ವ ಪರಿಶುದ್ಧವಾದದ್ದು. ಹೊರಗಿನ ಒಳಗಿನ ಅಪಾಯಗಳನ್ನು ಏಕಕಾಲಕ್ಕೆ ಕಳೆದುಕೊಂಡು ಕಳೆಗಟ್ಟಿದ ನಿಲುವಿಗೆ ಕಾಯ ಕಂದಿದರೂ, ಮಿಂಚಿದರೂ ವ್ಯತ್ಯಾಸವಿಲ್ಲದ ಸ್ಥಿತಪ್ರಜ್ಞ ಮನೋಭಾವನೆ ಹೊಂದಿರುವಳು. ಬದುಕಿನಲ್ಲಿ ಸ್ಥಿರತೆಯನ್ನು ತಂದುಕೊಂಡಂತಹ ಅಕ್ಕಮಹಾದೇವಿ ಕಾಯದ ಆಕ್ರಮಣಗಳನ್ನು ಅನುಭಾವಿಕ ಅರಿವಿನಿಂದಲೇ ಜಯಿಸುವ ಸಾಮರ್ಥ್ಯವನ್ನು ಪಡೆದುಕೊಂಡವಳು.

ಕಾಯದ ನಿರಾಕರಣೆಯೇ ಅಕ್ಕಮಹಾದೇವಿಯ ನಿಲುವು ನೆಲೆಗಳಾದ್ದರಿಂದ ಕಾಯ ಸಂಬಂಧಿಗಳಾದ ಶೀಲ ಪಾತಿವ್ರತ್ಯಗಳು ಸಹಜವಾಗಿಯೇ ನಿರಾಕರಿಸಲ್ಪಟ್ಟ ಸಂಗತಿಗಳು. ಅವಳ

ಸಮಕಾಲೀನ ಇತರ ವಚನಕಾರ್ತಿಯರು ಶೀಲ, ಪಾತಿವ್ರತ್ಯಗಳ ಬಗ್ಗೆ ಹೊಂದಿದ ಚಿಂತನೆಗಳು ಅಕ್ಕಮಹಾದೇವಿಯಲ್ಲಿ ಕಾಣಲಾರವು. ಶೀಲ, ಪಾತಿವೃತ್ಯ, ಪವಿತ್ರತೆಗಳ ನಿರಾಕರಣೆ ಅಕ್ಕನ ನಿಲುವು, ಅವುಗಳಿಗೆ ಪ್ರಾಧಾನ್ಯತೆ ನೀಡಿದ ಶಿವಶರಣೆಯರು ಅವುಗಳಿಗೆ ತೋರುವ ಬದ್ಧತೆ, ಶೀಲ, ಪಾವಿತ್ರ್ಯಕ್ಕೆ ನೀಡಿದ ಮನ್ನಣೆಗಳು ಸಮಾಜ ಹಿತಚಿಂತನೆಗೆ ಪೂರಕವಾದವುಗಳು. ಸಮಾಜ ಶುದ್ಧಿಗೆ ಶ್ರಮಿಸುವ ಮನೋಭಾವದ ಶರಣೆಯರಿಗೆ ಸದಾಚಾರಗಳಿಗೆ ಪ್ರಥಮ ಆದ್ಯತೆ, ವಿಭಿನ್ನ ನೆಲೆಯಲ್ಲಿ ಗುರುತಿಸಿಕೊಳ್ಳುವ ಶರಣೆಯರು ತಳೆದ ಧೋರಣೆಗಳು ಸಮಷ್ಟಿ ಸಮಗ್ರತೆಯನ್ನು ಎತ್ತಿ ಹಿಡಿಯಲು ಮಾಡಿದ ಪ್ರಯತ್ನಗಳು.

"ತನುವ್ರತ ಮನವ್ರತ ಮಹಾಜ್ಞಾನವ್ರತ
ತ್ರಿಕರಣ ಶುದ್ಧವಾಗಿಯಲ್ಲದೆ ಕ್ರೀ ಶುದ್ಧವಿಲ್ಲ.
ಕ್ರೀ ಶುದ್ಧವಾಗಿಯಲ್ಲದೆ ತನು ಶುದ್ಧವಿಲ್ಲ.
ತನು ಶುದ್ಧವಾಗಿಯಲ್ಲದೆ ಮನ ಶುದ್ಧವಿಲ್ಲ.
ಮನ ಶುದ್ಧವಾಗಿಯಲ್ಲದೆ ಜ್ಞಾನ ಶುದ್ಧವಿಲ್ಲ.
ಜ್ಞಾನ ಶುದ್ಧವಾಗಿ ನಿಂದು ಮಾಡಿಕೊಂಡ ನೇಮ ತಪ್ಪದೆ,
ಶರಣರಿಗೆ ದೂರಿಲ್ಲದೆ, ಮನಕ್ಕೆ ಮರವೆ ಇಲ್ಲದೆ,
ಮಹಾಜ್ಞಾನವೆ ವ್ರತ ನೇಮ ಲಿಂಗವಾಗಿ,
ಶ್ರುತ ದೃಷ್ಟ ಅನುಮಾನಕ್ಕೆ ಅಗೋಚರವಾಗಿ ನಿಂದ
ಶೀಲವಂತನಂಗವೆ ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದ ಅಂಗ."[೧೦]

ಶಿವಶರಣೆ ಅಕ್ಕಮ್ಮ ಶೀಲವಂತಿನಿಗಿರಬೇಕಾದ ಅರ್ಹತೆಗಳನ್ನು ಸೂತ್ರೀಕರಿಸುತ್ತ ವ್ರತ, ನೇಮಗಳ ಪರಿಪಾಲನೆಯಿಂದ ಕಾಯ, ಮನ, ಪ್ರಾಣಗಳ ಪರಿಶುದ್ಧತೆಗೆ ಆದ್ಯತೆ ನೀಡುವ ಹಿಂದಿನ ಧ್ಯೇಯ, ವ್ಯಷ್ಟಿ ಪಾವಿತ್ರ್ಯದಿಂದ ಸಮಷ್ಟಿ ಪಾವಿತ್ರ್ಯತೆ ಕಾಯ್ದುಕೊಳ್ಳುವ ಅಭೀಪ್ಸೆ. ಅಕ್ಕನಿಗೆ ವ್ಯಕ್ತಿಗತವಾದ ಅಡಚಣೆಗಳನ್ನು ಪರಿಹರಿಸಿಕೊಳ್ಳುವ ತವಕ. ಸಾಮಾನ್ಯವಾಗಿ ಶಿವಶರಣೆಯರದು ವ್ಯಕ್ತಿಗತ ನೆಲೆಯಿಂದ ಸಮುದಾಯದ ಸದಾಚಾರಕ್ಕೆ ಒತ್ತು ನೀಡುವ ಮನೋಭಾವ. ಅಕ್ಕಮಹಾದೇವಿ ತನ್ನಷ್ಟಕ್ಕೆ ತಾನು ತಲ್ಲಣಗಳನ್ನು ಮೀರುತ್ತ ನಡೆದವಳು. ವ್ರತ, ನೇಮ, ಸಮಾಜಶುದ್ಧಿಗಳ ಗೊಡವೆಗೆ ತಳುಕು ಹಾಕಿಕೊಂಡವಳಲ್ಲ.

ದೇಹದ ಬಗೆಗಿನ ವ್ಯಾಮೋಹವನ್ನು ಬದಿಗಿರಿಸಿ ನೋಡಿದ ನಿರ್ವಿಕಾರ ದೃಷ್ಟಿ ಅಕ್ಕಮಹಾದೇವಿಯದು. ಅನುಭವದ ಅನುಭೂತಿ ಪಡೆದ ಶರೀರ ರಸ ಕಳೆದ ಸಿಪ್ಪೆಯಂತೆ, ಮೇಲುತೋರಿಕೆ ಮಾತ್ರ. ಲಿಂಗದಲ್ಲಿ ಲಯವಾದ ತನ್ನ ತನು ಮನ ಪ್ರಾಣಗಳನ್ನು ಪರಮಾತ್ಮನಿಗೆ ಸಮರ್ಪಿಸಿ ಶುದ್ಧಳಾದ

ನಿರ್ಲಿಪ್ತ ಭಾವದಲ್ಲಿ ನಿಂತ ಮಹಾದೇವಿಯಕ್ಕನು ಕಾಯದ ಕಳವಳ, ಅಕ್ರಮಣಗಳಿಗೆ ಒಳದಾದವಳಲ್ಲ. ಆ ಭಾವ ಔನತ್ಯ, ಸಿದ್ಧವ್ಯಕ್ತಿತ್ವ, ನಿರ್ಭಿಡೆ ಅಭಿವ್ಯಕ್ತಿ ಇತರ ವಚನಕಾರ್ತಿಯರ ಜೀವನ ಮತ್ತು ಅಭಿವ್ಯಕ್ತಿಗಿಂತ ತೀವ್ರ ಭಿನ್ನವಾಗಿಯೇ ರೂಪಿತಗೊಂಡಿದೆ.

> "ಹಣ್ಣಮೆದ್ದ ಬಳಿಕ ಆ ಮರನನಾರು ತರಿದಡೇನು?
> ಹೆಣ್ಣ ಬಿಟ್ಟ ಬಳಿಕ ಆಕೆಯನಾರು ಕೂಡಿದಡೇನು?
> ಮಣ್ಣ ಬಿಟ್ಟ ಬಳಿಕ ಆಕೆಯನಾರು ಉತ್ತಡೇನು?
> ಚೆನ್ನಮಲ್ಲಿಕಾರ್ಜುನನ ಅರಿದ ಬಳಿಕ
> ಆ ಕಾಯವ ನಾಯಿ ತಿಂದರೇನು ನೀರು ಕುಡಿದರೇನು?"[೧೧]

ಅಕ್ಕಮಹಾದೇವಿ ತನ್ನಿಚ್ಚೆಯಂತೆ ಬದುಕುವ ಆಕಾಂಕ್ಷೆ ಹೊಂದಿದ್ದರಿಂದ ಹೊರಗಣ ಸಮಾಜದ ಪ್ರತಿರೋಧವನ್ನು ಎದುರಿಸಬೇಕಾಯಿತು. ಆತ್ಮಬಲವನ್ನು ಒಟ್ಟುಗೂಡಿಸಿ ಪ್ರತಿರೋಧಕ್ಕೆ ಆಣಿಯಾದ ಅಕ್ಕನದು ಸಂಪ್ರದಾಯ ಸಮಾಜದ ಪ್ರತಿಗಾಮಿ ಶಕ್ತಿಗಳ ವಿರುದ್ಧದ ಒಂಟಿಹೋರಾಟ. ಆ ಸಂದರ್ಭಗಳಲ್ಲೆಲ್ಲ ಚೆನ್ನಮಲ್ಲಿಕಾರ್ಜುನನ ಸಾಂಗತ್ಯವನ್ನು ಬಲವಾಗಿ ಆಶ್ರಯಿಸಿ ನಿರಂತರವಾಗಿ ಪ್ರತಿಕ್ರಿಯಿಸುತ್ತ ನಡೆದವಳು. "ಒಂದು ಜೀವ ನಿರಂತರವಾಗಿ ಹೊರಗಿನ ಒತ್ತಡ ಹಾಗೂ ಆಕ್ರಮಣಗಳಿಗೆ ಒಳಗಾಗಿ ಅನುಭವಿಸಿದ ಮಾನಸಿಕ ಆಘಾತಗಳ ದಾರುಣ ನೋವಿನ ಅರಿವಾಗುತ್ತದೆ. ಈ ಅನುಭವ ಸ್ವನಿವೇದನೆಯ ಪ್ರಮಾಣುವಿನಲ್ಲಿ ತೀವ್ರಭಾವದ ಓಘದಲ್ಲಿ ಹರಿದಿರುವುದೇ ಹೆಚ್ಚು. ಒಲ್ಲದ ಸಂಗತಿಯ ಬಗೆಗಿನ ತಿರಸ್ಕಾರ ಪ್ರತಿರೋಧ ಇಲ್ಲಿನ ಪ್ರತಿಕ್ರಿಯಾತ್ಮಕ ಸ್ವಭಾವವಾಗಿದೆ. ಇದರಾಳದಲ್ಲಿ ತನ್ನಿಚ್ಛೆಯ ಬದುಕೊಂದನ್ನು ಕುರಿತ ತೀವ್ರತರ ಹಂಬಲ ಮತ್ತು ಅದರ ಹುಡುಕಾಟ ಇವು ಇಲ್ಲಿ ವ್ಯಂಜಿತವಾಗುತ್ತಿವೆ."[೧೨]

ಸಾಮಾಜಿಕ ವ್ಯವಸ್ಥೆಗಳಾದ ಗಂಡ, ವಿವಾಹ, ಕುಟುಂಬ, ಹೊರಗಿನ ಸಂಬಂಧಗಳನ್ನು ನಿರಾಕರಣೆ ಮಾಡಿದ ಅಕ್ಕಮಹಾದೇವಿ. ವ್ಯಕ್ತಿಗತವಾದ ದೇಹ, ಮನಸ್ಸುಗಳನ್ನು ನಿರ್ವಿಕಾರ ಮಾಡಿಕೊಂಡು ಕಾಯದ ಕಳವಳ, ಮನದ ಮಾಯೆಯನ್ನು ಮೀರುತ್ತಲೇ ನಡೆದವಳು. ಕಾಯಾತ್ಮ ಸಂಬಂಧದ ನೆಲೆಗಳನ್ನು ಅರಿತ ಅಕ್ಕಮಹಾದೇವಿ ಕಾಯ, ಮನಸ್ಸುಗಳು ಉರವಣೆಗೆ ಕಾರಣವೆಂಬುದನ್ನು ಬಗೆದು ದೇಹ ಮನಸ್ಸುಗಳ ಸಂಬಂಧಿತ ಸಾಮಾಜಿಕ ಮೌಲ್ಯಗಳೆಂದು ಮನ್ನಿಸಿದ ಶೀಲ ಪಾವಿತ್ರ್ಯ, ಪಾತಿವ್ರತ್ಯಗಳ ಹಂಗಿಲ್ಲದವಳು. ಸಮಾಜದ ಸಂಪ್ರದಾಯಗಳೆಲ್ಲವನ್ನು ಮುರಿದು ಮುನ್ನಡೆದವಳು. ಸ್ಥಾಪಿತ ಸಮಾಜದ ಮೌಲ್ಯಗಳನ್ನು ಧಿಕ್ಕರಿಸಿ ದೇವನೆಡೆಗೆ ದೃಢತೆ ಯಿಂದಲೇ ಹೆಜ್ಜೆಯಿರಿಸಿದವಳು.

ಬಹುತೇಕ ವಚನಕಾರ್ತಿಯರು ಸಮಾಜ ಚಿಂತನೆಗೆ ಒತ್ತನ್ನು ನೀಡಿ ಸಮಾಜದೊಂದಿಗೆ ತಮ್ಮ ಬದುಕನ್ನು ಸಮೀಕರಿಸಿಕೊಂಡು ಸಮಾಜದ ಸ್ಥಾಪಿತ ಮೌಲ್ಯಗಳನ್ನು ಮುರಿದು ಕಟ್ಟಲು ಪ್ರಯತ್ನಿಸಿದರು. ಶಿವಶರಣೆಯರಲ್ಲಿ ಕೆಲವರನ್ನು ಹೊತರು ಪಡಿಸಿದರೆ ಉಳಿದವರು ಗಂಡ, ವಿವಾಹ, ಕುಟುಂಬಗಳಂತಹ ಸಾಮಾಜಿಕ ಸಂಬಂಧಗಳನ್ನು ಕಟ್ಟಿಕೊಂಡವರು. ಅವರದು ಅಕ್ಕನಂತೆ ನಿರಾಕರಣೆಯ ಮಾರ್ಗವಲ್ಲ. ವ್ಯಕ್ತಿಗತವಾದ, ದೇಹ ಮನಸ್ಸುಗಳನ್ನು ಶುಚಿಯಾಗಿಟ್ಟುಕೊಳ್ಳಲು ಶ್ರಮಿಸಿದವರು. ವ್ಯಷ್ಟಿ ಹಾಗೂ ಸಮಷ್ಟಿ ಪರವಾದ ಬಂಧಗಳನ್ನೆಲ್ಲ ಇಟ್ಟುಕೊಂಡು ಅವುಗಳ ಶುದ್ಧೀಕರಣಕ್ಕಾಗಿ ಚಿಂತನೆಗೈದವರು. ಸಮಾಜದ ಪದ್ಧತಿಗಳಲ್ಲಿ ಪರಿವರ್ತನೆ ತರಲು ಬಯಸಿದವರು. ಶರೀರವನ್ನು ಸಮಾಜಸೇವೆಗೆ ಸಾಧನ ಮಾರ್ಗವನ್ನಾಗಿ ಮಾಡಿಕೊಂಡ ಶಿವಶರಣೆಯರು ಶೀಲ, ಪಾವಿತ್ರ್ಯ, ಪತಿವ್ರತೆಗಳಂತಹ ವಿಷಯಗಳ ಮೌಲ್ಯಧಾರಣೆಯನ್ನು ಎತ್ತಿಹಿಡಿದರು. ಸಾಮಾಜಿಕ ಸಂಬಂಧಗಳ ನಿರಾಕರಣೆಯನ್ನು ಮಾಡದೆ ಅವುಗಳಿಗೆ ಮನ್ನಣೆ ನೀಡಿ ಮುನ್ನಡೆದವರು.

ವ್ರತ ನೇಮಗಳ ಕಟ್ಟಳೆಗಳನ್ನು ವಿಧಿಸಿಕೊಂಡು ಆ ಹಿನ್ನೆಲೆಯಲ್ಲಿಯೇ ಸಮಾಜಶುದ್ಧಿಗೆ ನೇಮ, ವ್ರತಗಳ ಚೌಕಟ್ಟನ್ನು ತೊಡಿಸಿದರು. ಶಿವಶರಣ **ಉರಿಲಿಂಗ ಪೆದ್ದಿಗಳ ಸತಿ ಕಾಳವ್ವೆ** ವ್ರತದ ಸ್ವರೂಪವನ್ನು ವಿವರಿಸಿ ವ್ರತವೇ ಜೀವನವೆಂಬ ವ್ಯಾಖ್ಯಾನ ನೀಡುತ್ತಾಳೆ. ಅವಳ ವ್ರತದ ನಿಷ್ಠೆ ಪರಿಕಲ್ಪನೆ ಸಾಮಾನ್ಯವಾಗಿ ಆ ಕಾಲದ ಎಲ್ಲ ಶಿವಶರಣೆಯರ ನಿಲುವು ಆಗಿತ್ತು.

"ವ್ರತವೆಂಬುದು ನಾಯಕರತ್ನ;
ವ್ರತವೆಂಬುದು ಸುಪ್ಪಾಣಿಯ ಮುತ್ತು;
ವ್ರತವೆಂಬುದು ಜೀವನ ಕಳೆ;
ವ್ರತವೆಂಬುದು ಸುಯಿದಾನ.
ವ್ರತ ತಪ್ಪಲು ಉರಿಲಿಂಗಪೆದ್ದಿಗಳರಸನೊಲ್ಲನವ್ವಾ."[೧೩]

ವ್ರತವಿಲ್ಲದ ಜೀವನ ಪ್ರಾಣವಿಲ್ಲದ ದೇಹದಂತೆ ವ್ಯರ್ಥವೆಂಬ ಕಾಳವ್ವೆಯ ವಿಚಾರವನ್ನೇ ಸಮಕಾಲೀನ ಶರಣೆಯರು ಹೆಚ್ಚಾಗಿ ಪ್ರತಿಧ್ವನಿಸಿದ್ದಾರೆ. ವ್ರತಕ್ಕೆ ನೀಡಿದ ಮಾನ್ಯತೆ, ವ್ಯಕ್ತಿ ಮತ್ತು ಸಮಾಜ ಪರಿವರ್ತನೆ, ಪರಿಶುದ್ಧತೆಗೆ ಪಥವೆಂಬುದನ್ನು ಗ್ರಹಿಸಲು ಸಾಧ್ಯವಿದೆ.

"ಆಯುಷ್ಯ ತೀರಲು ಮರಣ;
ವ್ರತ ತಪ್ಪಲು ಶರೀರ ಕಡೆ.
ಮೇಲುವ್ರತವೆಂಬ ತೂತರ ಮೆಚ್ಚ
ನಮ್ಮ ಅಗಜೇಶ್ವರಲಿಂಗವು."[೧೪]

ಕೊಂಡೆ ಮಂಚಣ್ಣಗಳ ಪತ್ನಿ ಲಕ್ಷ್ಮಮ್ಮ ವ್ರತದ ಪರಿಭಾಷೆಯನ್ನು ವ್ಯಕ್ತಿಗತಗೊಳಿಸುತ್ತ ವ್ರತದ ಹೆಸರಿನಲ್ಲಿ ತೋರುವ ಡಾಂಭಿಕರನ್ನು ವಿಡಂಬಿಸುವ ಧ್ವನಿಯೇ ಪ್ರಧಾನವಾಗಿ ವ್ಯಕ್ತವಾಗಿದೆ. ವ್ರತಾಚರಣೆಗೆ ಒಲಿದ, ವಾಲಿದ ವಚನಕಾರ್ತಿಯರು ವ್ರತಭ್ರಷ್ಟನನ್ನು ಖಂಡಿಸುವುದರ ಮುಖಾಂತರ ನಡೆ ನುಡಿಗಳ ಸಮನ್ವತೆಯನ್ನು ಸಾಧಿಸಲೆತ್ನಿಸಿರುವರು.

"ವ್ರತಭ್ರಷ್ಟನ, ಲಿಂಗಬಾಹ್ಯನ ಕಂಡಡೆ
ಸತ್ತ ನಾಯ ಕಾಗೆಯ ಕಂಡಂತೆ.
ಅವರೊಡನೆ ನುಡಿಯಲಾಗದು ಭೀಮೇಶ್ವರಾ."[೧೫]

ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆಯ ನಿಲುವು ನಡೆ ನುಡಿ ಒಂದಾಗದವರು ವ್ರತಭ್ರಷ್ಟರು. ತಾವು ಅನುಸರಿಸುತ್ತಿರುವ ಲಿಂಗಾಚಾರಗಳನ್ನು ಅರಿತು ಆಚರಿಸದವರೆಲ್ಲ ವ್ರತಹೀನರು. ಅಂಥವರ ಕೂಡ ನುಡಿಯುವುದು ಅಪರಾಧ ಎಂಬ ಭಾವ ಹೊಂದಿದ್ದಾಳೆ. ವ್ರತ ನವ ಸಮಾಜದ ನೆಲೆಗಟ್ಟು ಎಂದೇ ಭಾವಿಸಿದ ಶಿವಶರಣೆಯರು ಸ್ವಪರಿವರ್ತನೆಯಿಂದ ಸಮಾಜ ಪರಿವರ್ತನೆಗೆ ಮುಂದಡಿ ಇಟ್ಟವರು. ನೀತಿರಹಿತ ವ್ಯಕ್ತಿಯಿಂದ ಸಮಾಜದ ಹಿತ ಸಾಧಿಸದು. ಶರಣರು ಕಟ್ಟ ಬಯಸಿದ ಸಮಾಜಕ್ಕೆ ನೀತಿ, ವ್ರತಗಳ ಗಟ್ಟಿ ಅಡಿಪಾಯ ನಿರ್ಮಿಸಲು ಮುಂದಾದ ಶಿವಶರಣೆಯರು ಆ ನಿಟ್ಟಿನಲ್ಲಿ ತಮ್ಮ ಭಾವಗಳನ್ನು ಬಿತ್ತರಿಸಿದರು.

"ಬಂಜೆಯಾವಿಂಗೆ ಕ್ಷೀರವುಂಟೆ?
ವ್ರತಹೀನನ ಬೆರೆಯಲುಂಟೆ?
ನೀ ಬೆರೆದಡೂ ಬೆರೆ; ನಾನೊಲ್ಲೆ ನಿಜಶಾಂತೇಶ್ವರಾ."[೧೬]

ಕಾಟಕೂಟಯ್ಯಗಳ ಸತಿ ಶಿವಶರಣೆ ರೇಚವ್ವೆಯ ಮನೋಸ್ಥೈರ್ಯ ದೇವರಿಗೂ ಸವಾಲು ಹಾಕುವಂಥಹದು. ವ್ರತಹೀನ ಬರಡು ಆಕಳಿನಂತೆ ವ್ಯರ್ಥ! ಅವನನ್ನು ಬೆರೆಯಲಾಗದೆಂಬ ದೃಢನಿಶ್ಚಯ ಮಾಡಿದ ಶಿವಶರಣೆ ತನ್ನ ನಿಷ್ಠೆಯನ್ನು ಬದಲಿಸಳು. ಆ ನಿಷ್ಠೆ ತನ್ನ ದೈವ ಸಾಕ್ಷಿ, ಆ ದೈವವೇ ವ್ರತಹೀನನನ್ನು ಕೂಡಿದರೂ ಅವಳು ತನ್ನ ನಿಲುವನ್ನು ಸಡಿಲಗೊಳಿಸದೇ, ಅಚಲ ನಿರ್ಧಾರದಲ್ಲೇ ನಿಲ್ಲುವ ಅವಳ ಸ್ಥೈರ್ಯದ ಹಿಂದಿನ ಧ್ಯೇಯ ತುಂಬ ಸ್ಪಷ್ಟ! ಶರಣರ ನವ ಸಮಾಜದ ಸದಸ್ಯಳಾದವಳು ಆ ಸಮಾಜದ ತತ್ವಾಚರಣೆಗೆ ಬದ್ಧತೆಯನ್ನು ತೋರುವಳು. ಈ ನಿಷ್ಠೆ, ಬದ್ಧತೆಯ ಹಿಂದಿನ ಸಾಮಾಜಿಕ ಕಳಕಳಿಯನ್ನು ಶಿವಶರಣೆಯರು ಧ್ಯೇಯ ಮಾಡಿಕೊಂಡು ಮನಪರಿರ್ತನೆಗೆ ಸ್ವಯಂ ಕಟ್ಟಳೆಗಳನ್ನು ಹಾಕಿಕೊಂಡಾದರೂ ತತ್ವಬದ್ಧವಾದ ಸಮಾಜ ರಚನೆಗೆ ತೊಡಗಿರುವುದನ್ನು ಕಾಣುತ್ತೇವೆ.

ವ್ರತಕ್ಕೆ ನಿಷ್ಠೆಯನ್ನು ತೋರಿದ ವಚನಕಾರ್ತಿಯರು ಅದು ಬಾಹ್ಯಾಡಂಭರಗೊಳ್ಳುವುದನ್ನು ಖಂಡಿಸಿದ್ದಾರೆ. ಅಂತರಂಗ ಬಹಿರಂಗಗಳಲ್ಲಿ ಏಕರೂಪವಾಗಿರದ ಶುಷ್ಕ ಆಚರಣೆಗಳನ್ನು ವಿಡಂಬಿಸುವರಲ್ಲದೆ ಅಂಥವರನ್ನು ಕೂಡುವುದು ನರಕಕ್ಕೆ, ಸಂಕಷ್ಟಕ್ಕೆ ದಾರಿಯೆಂಬುದನ್ನು ದೃಢಪಡಿಸುತ್ತ ವ್ರತನಿಷ್ಠ ಮಾತ್ರ ನವಸಮಾಜದ ಸದಸ್ಯನೆಂಬ ನಿಲುವು ಬಲಗೊಂಡಿತ್ತು.

"ತನು ಬತ್ತಲೆಯಾದಡೇನು, ಮನ ಬತ್ತಲೆಯಾಗದನ್ನಕ್ಕ?
ವ್ರತವಿದ್ದಡೇನು, ವ್ರತಹೀನರಾದ ಬಳಿಕ?
ನೆರೆದಡೆ ನರಕವಯ್ಯಾ ನಿಂಬೇಶ್ವರಾ"೧೭

ತ್ರಿಕರಣ ಶುದ್ಧಿಯಿಲ್ಲದ ವ್ರತ, ವ್ರತಹೀನನನ್ನು ಬೆರೆತರೆ ಉಂಟಾಗುವ ಪರಿಣಾಮವನ್ನು **ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ** ಅಭಿವ್ಯಕ್ತಿಗೊಳಿಸುವುದರ ಹಿಂದಿನ ಆಶಯ ಶರಣರು ನಿರ್ಮಿಸ ಬಯಸಿದ ಸಮಾಜದ ಆಶಯವೂ ಆಗಿರುವುದೇ ಗಮನಾರ್ಹ. ಸ್ಥಾಪಿತ ಸಮಾಜದ ವಿಘಟನೆಗಳನ್ನು ಖಂಡಿಸುವ, ವಿಡಂಬಿಸುವ ಧ್ವನಿಯೊಳಗೆ ಪರಿವರ್ತನೆಯ ದೃಷ್ಟಿಯೇ ಪ್ರಾಮುಖ್ಯವಾಗಿತ್ತು.

ಅಕ್ಕಮಹಾದೇವಿ ವ್ಯಕ್ತಿಗತ ಭಾವಾಭಿವ್ಯಕ್ತಿಗೆ ಹೆಚ್ಚಾಗಿ ಒಲಿದವಳು. ಆ ಕಾಲದ ಸಮಾಜದ ಪ್ರತಿನಿಧಿಯಾಗಿ ಇತರ ಶಿವಶರಣೆಯರಂತೆ ವ್ರತಾಚರಣೆ, ಸಮಾಜ ನಿರ್ಮಾಣ ಅವಳ ಧ್ಯೇಯಗಳಲ್ಲ. ತನ್ನ ವ್ಯಕ್ತಿಗತ ಸಾಧನೆಯ ಹಾದಿಯಲ್ಲಿ ಎದುರಾದ ಸಾಮಾಜಿಕ ಸಂದರ್ಭ, ಸನ್ನಿವೇಶಗಳಿಗೆ ಪ್ರತಿಕ್ರಿಯಾತ್ಮಕವಾಗಿ ಅವಳ ವಚನಗಳಲ್ಲಿ ಅಂತಹ ಸಾಮಾಜಿಕ ಮೌಲ್ಯಗಳ ಅಭಿವ್ಯಕ್ತಿಯನ್ನು ಕಾಣುತ್ತೇವೆ. ಶೀಲ, ವಿರಕ್ತಿಯ ನೈಜತೆಯನ್ನು ಬಿಚ್ಚಿಡುವ ಅಕ್ಕಮಹಾದೇವಿ ಸ್ವತಃ ಅಂತಹವುಗಳಿಗೆ ಕಟ್ಟುಬಿದ್ದವಳಲ್ಲ. ತಾನೊಲಿದ ದೇವನಿಗಾಗಿ ಸಮರ್ಪಣೆಗೊಳಿಸಿಕೊಂಡ ಅಕ್ಕಮಹಾದೇವಿಗೆ ಸ್ಥಾಪಿತ ಮೌಲ್ಯಗಳನ್ನು ಮೀರುವುದು ತುಂಬ ಸುಲಭವಾದ ಮಾರ್ಗ. ಶರಣರ ಸಮಾಜದ ಸಮಕಾಲೀನಳಾದರೂ ಸಾಮಾಜಿಕ ಶುದ್ಧಿ ಅದಕ್ಕಾಗಿ ಕೈಕೊಳ್ಳುವ ವ್ರತ ನೇಮಗಳು, ವ್ರತದ ನಿಷ್ಠೆ, ಅವಳಲ್ಲಿ ಕಾಣುವುದಿಲ್ಲ. ಅದಕ್ಕೆ ಕಾರಣ ಸ್ಪಷ್ಟವೂ ಕೂಡ. ಶರಣಸತಿ, ಲಿಂಗಪತಿಯನ್ನು ಕೂಡುವ ವ್ಯಕ್ತಿ ವಿಶಿಷ್ಟ ಸಾಧನೆಯಲ್ಲಿ ನಿರತಳಾದ ಅಕ್ಕ ಸಮಾಜ ಸುಧಾರಣೆಯ ಕನಸು ಕಂಡವಳಲ್ಲ. ಅವಳದೇನಿದ್ದರೂ ಚೆನ್ನಮಲ್ಲಿಕಾರ್ಜುನನ್ನು ಒಲಿಸಲು, ಪರಿಭಾವಿಸಲು ಪರಿತ್ಯಕ್ತಳಾಗಿ ಪ್ರೇಮಪೂರ್ಣ ಭಾವವನ್ನು ಆಲಿಂಗಿಸಿದವಳು.

ಸಮಕಾಲೀನ ಇತರ ಶರಣೆಯರಂತೆ ನಿರ್ಭಿಡೆ ಅಭಿವ್ಯಕ್ತಿ ಅಕ್ಕನಲ್ಲಿ ಕಂಡುಬಂದರೂ ಶರಣೆಯರ ಸಮಷ್ಟಿ ನಿಷ್ಠೆಯಂತಲ್ಲ, ವ್ಯಕ್ತಿನಿಷ್ಠ ಒಲುಮೆ ನಿಷ್ಠೆಯನ್ನು ಒಳಗೊಂಡಿದ್ದು, ಆಚಾರ ವಿಚಾರಗಳ ಸಮನ್ವಯವನ್ನು ಪ್ರತಿಪಾದಿಸುವ ಅಕ್ಕಮಹಾದೇವಿ ತಾನು ಬದುಕಿದ ಸಮಾಜದ ಸಾಮಾಜಿಕ ಸನ್ನಿವೇಶಕ್ಕೆ ನೀಡಿದ ಅಭಿವ್ಯಕ್ತಿಯೆಂಬುದು ವಿಶೇಷ.

"ಅಕ್ಕಿಯಿಲ್ಲದ ತುಷಕ್ಕೆ ಅಗ್ಗವಣಿಯನೆರೆದಡೆ
ಅದೆಂದಿಗೆ ಬೆಳೆದು ಫಲವಪ್ಪುದಯ್ಯಾ?
ಅರಿವಿಲ್ಲದವರಿಗೆ ಆಚಾರವಿದ್ದಡೆ
ಅರಕೆಗೆಟ್ಟು ಸುಖವೆಂದಪ್ಪುದಯ್ಯಾ
ಹೊರೆದ ಪರಿಮಳ ಸ್ಥಿರವಾಗಬಲ್ಲುದೆ?
ಎನ್ನದೇವ ಚೆನ್ನಮಲ್ಲಿಕಾರ್ಜುನನನರಿಯದವರಿಗೆ
ಆಚಾರವಿಲ್ಲ ಕಾಣಿರಣ್ಣಾ."೧೮

ಅಕ್ಕಮಹಾದೇವಿಗೆ ಆಚಾರ ಅರಿವಿನ ಶುದ್ಧಮಾರ್ಗವೇ ಆಗಿರಬೇಕಾದದ್ದು ಅವಶ್ಯ. ಮೌಢ್ಯತೆಯಲ್ಲಿ ಮಗ್ನರಾಗಿ ಅಂಧಾನುಕರಣೆಯಲ್ಲಿ ನಡೆವ ಸಮುದಾಯವನ್ನು ಅರಿವಿನೆಡೆಗೆ ಜಾಗೃತಗೊಳಿಸುವ ಅಕ್ಕನದು ವೈಚಾರಿಕ ನಿಲುವು. ಆಚಾರವನ್ನು ಪ್ರತಿಪಾದಿಸುವ ವಚನಕಾರ್ತಿಯರ ನಿಲುವು ಅಕ್ಕಮಹಾದೇವಿಯಲ್ಲಿ ಕೇವಲ ಕೆಲ ಸಂದರ್ಭಗಳಲ್ಲಿ ನೀಡಿದ ಪ್ರತಿಕ್ರಿಯೆ ಮಾತ್ರ. ಆಚಾರಕ್ಕೊಳಪಡಿಸಿಕೊಂಡ ಶಿವಶರಣೆಯರಂತೆ ಕಟಿಬದ್ಧಳಲ್ಲ. ಅವಳದು ಸೀಮಾತೀತ ಪ್ರಪಂಚ. ಅನುಭಾವಿಕ, ಅಲೌಕಿಕ ಸತಿಯಾಗಿ ನಿಸ್ಸೀಮ ನಿಲುವಿಗೆ ಮುಖಮಾಡಿದ ಮಹಾದೇವಿಯಕ್ಕನಿಗೆ ಪ್ರಾಪಂಚಿಕ ಮೋಹ, ಅದರೊಳಗಿನ ಲೌಕಿಕ ಸಂಗತಿಗಳು ತುಂಬ ಗೌಣ.

ಅಕ್ಕಮಹಾದೇವಿಯ ಸಮಕಾಲೀನ ಶರಣೆಯರಿಗೆ ಪ್ರಾಪಂಚಿಕ ಮೋಹವಿಲ್ಲದಿದ್ದರೂ ಪ್ರಪಂಚದ ಆಗುಹೋಗುಗಳಿಗೆ ಒಳಗಾಗುತ್ತಲೇ ಅದರೊಳಗಿದ್ದುಕೊಂಡು ಅದರೊಳಗಿನವರಾಗಿ ಮೀರಲೆತ್ನಿಸುವರು. ಹನ್ನೆರಡನೆ ಶತಮಾನದ ಶಿವಶರಣೆಯರಲ್ಲಿ ಬಹುತೇಕರು ಸಂಸಾರ ಧರ್ಮವನ್ನು ಒಪ್ಪಿಕೊಂಡಿದ್ದರಿಂದ ಮರ್ತ್ಯದ ಕೃತ್ಯಗಳಿಗೆ, ಕಾಯಕ ದಾಸೋಹಗಳಿಗೆ ಪ್ರಾಧಾನ್ಯತೆಯನ್ನು ನೀಡುತ್ತ, ಸಮಷ್ಟಿ ಪ್ರಜ್ಞೆಯನ್ನು ಉಳಿಸಿಕೊಂಡವರು. ವ್ರತ ನೇಮಗಳಂತೆ, ಕಾಯಕ ದಾಸೋಹಗಳನ್ನು ಶಿವಶರಣರ ಸಮಾಜದ ಪ್ರಧಾನ ಮೌಲ್ಯಗಳೆಂದು ಸ್ವೀಕರಿಸಲ್ಪಟ್ಟವುಗಳು. ಸಮಾಜದ ಅಭಿವೃದ್ಧಿ ವ್ಯಕ್ತಿನಿಷ್ಠವಾದ ಕಾಯಕದ ಹಿನ್ನೆಲೆಯಲ್ಲಿಯೇ ಆಗತಕ್ಕುದು. ವ್ಯಕ್ತಿ ಕೈಕೊಳ್ಳುವ ಕಾಯಕ ವ್ರತಕ್ಕೂ ಮಿಗಿಲು, ಕಾಯಕ, ಆರ್ಥಿಕತೆಯ ಮೂಲ. ಆರ್ಥಿಕ ಅಭಿವೃದ್ಧಿ, ಸಮಾಜದ ಶ್ರೇಯೋಭಿವೃದ್ಧಿಗೆ ಅಡಿಪಾಯವೆಂಬ ಅಭಿಪ್ರಾಯವನ್ನು ಹೊಂದಿದ ಶಿವಶರಣರ ವಿಚಾರವನ್ನೇ ಪ್ರಧಾನವಾಗಿ ಶಿವಶರಣೆಯರು ಎತ್ತಿಹಿಡಿದಿದ್ದಾರೆ. ಕಾಯಕಕ್ಕೆ ನಾಯಕಪಟ್ಟ ಕಟ್ಟಿದ ವಚನಕಾರ್ತಿಯರು, ವ್ರತ ತಪ್ಪಿದರೂ ಕಾಯಕ ಬಿಡದ ಛಲವುಳ್ಳವರು. ಅವರ ವಿಚಾರ ಪ್ರಮುಖವಾಗಿ ಕಾಯಕ ಕೇಂದ್ರಿತವಾಗಿದೆ. ಕಾಯಕದ ಪರಿಭಾಷೆ ಸಾಮಾನ್ಯವಾಗಿ ವಚನಗಳಲ್ಲಿ ವ್ಯಕ್ತವಾಗಿದೆ.

"ಹದತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ.
ವ್ರತಹೀನನ ನೆರೆಯೆ ನರಕವಲ್ಲದೆ ಮುಕ್ತಿಯಿಲ್ಲ.
ಅರಿಯದುದು ಹೋಗಲಿ ಅರಿದು ಬೆರೆದೆನಾದಡೆ,
ಕಾದ ಕತ್ತಿಯಲ್ಲಿ ಕಿವಿಯ ಕೊಯ್ವರಯ್ಯಾ,
ಒಲ್ಲೆ ಬಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ."[೧೯]

ಕೊಟ್ಟಣದ ಸೋಮಮ್ಮ ತನ್ನ ಧಾನ್ಯ ಕುಟ್ಟುವ ವೃತ್ತಿಯನ್ನೇ ವಚನ ಪರಿಭಾಷೆಯಾಗಿ ಪರಿವರ್ತಿಸಿ ಅನುಭವವನ್ನು ನಿವೇದಿಸುವ ರೀತಿ ಅನನ್ಯವಾದದ್ದು. ವ್ರತಹೀನನ ಸಂಗದಿಂದ ಉಂಟಾಗುವ ಗಂಭೀರ ಪರಿಣಾಮವನ್ನು ತನ್ನ ಕಾಯಕದ ಪರಿಧಿಯಲ್ಲಿ ವ್ಯಕ್ತಪಡಿಸುವ ಆ ಭಾವ, ಭಾಷೆ ಹಲವು ವಚನಕಾರ್ತಿಯರಲ್ಲಿ ಸಾಮಾನ್ಯವಾಗಿ ಕಂಡುಬಂದಿದೆ.

"ಕದಿರು ಮುರಿಯೆ ಏನೂ ಇಲ್ಲ.
ವ್ರತಹೀನನ ನೆರೆಯಲಿಲ್ಲ ಗುಮ್ಮೇಶ್ವರಾ."[೨೦]

ಕದಿರ ಕಾಯಕದ ಕಾಳವ್ವೆಯೂ ಪದಗಳೆಂಬ ನೂಲನ್ನು ತೆಗೆದು ಭಾಷೆಯ ಬಟ್ಟೆಯಲ್ಲಿ ಜೋಡಿಸುವ, ಆ ಮೂಲಕ ತನ್ನ ಅನುಭವವನ್ನು ಸಮೀಕರಿಸುವಳು. ವ್ರತಹೀನರನ್ನು ಕೂಡಲಾಗದು, ಕೂಡಿದರೂ ವಿನಾಶದ ದಾರಿಯೆಂಬುದನ್ನು ಅರಿತು ಆಚರಿಸಿ ಅಭಿವ್ಯಕ್ತಗೊಳಿಸುತ್ತಾಳೆ.

"ಕೈ ತಪ್ಪಿ ಕೆತ್ತಲು ಕಾಲಿಗೆ ಮೂಲ,
ಮಾತು ತಪ್ಪಿ ನುಡಿಯಲು ಬಾಯಿಗೆ ಮೂಲ,
ವ್ರತಹೀನನ ನೆರೆಯಲು ನರಕಕ್ಕೆ ಮೂಲ,
ಕರ್ಮಹರ ಕಾಳೇಶ್ವರಾ."[೨೧]

ಬಾಚಿ ಕಾಯಕದ ಬಸವಯ್ಯಗಳ ಸತಿ ಕಾಳವ್ವೆ ಬಡಿಗತನದ ಭಾಷೆಯಲ್ಲೇ ವಚನದಲ್ಲಿ ವೃತ್ತಿ ವ್ರತಗಳ ಪರಿಪಾಲನೆಯಲ್ಲಿ ತೋರಬೇಕಾದ ಎಚ್ಚರಿಕೆಯನ್ನು ವ್ಯಕ್ತಗೊಳಿಸುತ್ತ ವೃತ್ತಿಯ ಹಿನ್ನೆಲೆಯಲ್ಲೇ ವ್ರತಾಚಾರಣೆಯ ಮಹತ್ವವನ್ನು ಬಿತ್ತರಿಸುವಳು.

"ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ;
ಗುರುಲಿಂಗಜಂಗಮದ ಕಾಲ ಕಟ್ಟುವೆ;
ವ್ರತಭ್ರಷ್ಟರ ನಿಟ್ಟೊರಸುವೆ, ಸುಟ್ಟು ತುರತುರನೆ ತೂರುವೆ,
ನಿರ್ಭೀತ ನಿಜಲಿಂಗದಲ್ಲಿ?"[೨೨]

ಕಾಲಕಣ್ಣಿಯ ಕಾಮಮ್ಮನದು ಹಗ್ಗ ಹೊಸೆಯುವ ಕಾಯಕ. ಆ ವೃತ್ತಿಯ ಪರಿಕರವನ್ನು ಬಳಸುವ ಅವಳ ಗಣಾಚಾರ ನಿಷ್ಠೆ ಭಾಷೆಯಲ್ಲಿ ಅಷ್ಟೇ ಗಡುಸಾಗಿ ವ್ಯಕ್ತವಾಗಿದೆ. ಅಂತರಂಗ ಶುದ್ಧಿಯನ್ನು ಪ್ರತಿಪಾದಿಸುವ ಕಾಮಮ್ಮನಿಗೆ ಸಾಮಾಜಿಕ ಶುದ್ಧಿಯೂ ಅಷ್ಟೇ ಅಗತ್ಯವಾಗಿ ಕಂಡಿದೆ. ಅದಕ್ಕೆ ವ್ಯತರಿಕ್ತವಾದ ನಡವಳಿಕೆಯನ್ನು ಉಗ್ರವಾಗಿ ಖಂಡಿಸುವಳು. ವ್ರತನಿಷ್ಠೆಯ ಧ್ಯೇಯದ ಹಿಂದೆ ಶರಣರ ಸಾಮಾಜಿಕ ಪರಿವರ್ತನೆಯ ಕಾಳಜಿಯೂ ಧ್ವನಿತವಾಗಿದೆ. ವ್ರತಭ್ರಷ್ಟರನ್ನು ಕಂಡರೆ ನಿರ್ಭೀತವಾಗಿಯೇ ಜರಿಯುವ ಕಾಮಮ್ಮ ಶರಣ ಸಮುದಾಯದ ತತ್ವಗಳನ್ನು ಪರಿಪಾಲಿಸಿ ಪರಿವರ್ತನೆಯ ಪ್ರತಿನಿಧಿಯೆನಿಸಿರುವಳು.

> "ಹದಮಣ್ಣಲ್ಲದೆ ಮಡಕೆಯಾಗಲಾರದು.
> ವ್ರತಹೀನನ ಬೆರೆಯಲಾಗದು.
> ಬೆರೆದಡೆ ನರಕ ತಪ್ಪದು.
> ನಾನೊಲ್ಲೆ ಬಲ್ಲೆನಾಗಿ, ಕುಂಭೇಶ್ವರಾ."[೨೩]

ಶಿವಶರಣ ಗುಂಡಯ್ಯಗಳ ಸತಿ ಕೇತಲದೇವಿ ತನ್ನ ಪತಿಯೊಡನೆ ಕೈಕೊಂಡ ಕುಂಬಾರಿಕೆ ವೃತ್ತಿಯ ಭಾಷೆಯ ಮೂಲಕವೇ ವ್ರತಹೀನನನ್ನು ಬೆರೆಯಲಾಗದೆಂಬ ತನ್ನ ಅಚಲ ನಿರ್ಧಾರವನ್ನು ಅವರನ್ನು ಕೂಡುವುದರಿಂದ ತಂದುಕೊಳ್ಳುವ ಸಂಕಷ್ಟವನ್ನು ವಿವರಿಸಿ, ದೇವರಿಗೂ ಆಹ್ವಾನ ನೀಡುವ ಅವಳ ದೃಢತೆ ವಚನದಲ್ಲಿ ಮಾರ್ಮಿಕವಾಗಿಯೇ ಪ್ರಕಟವಾಗಿದೆ.

ಅಕ್ಕಮಹಾದೇವಿಯ ಸಮಕಾಲೀನ ಶಿವಶರಣೆಯರು ತಮ್ಮ ವ್ರತಾಚಾರ ನಿಷ್ಠೆಯನ್ನು ತಮ್ಮ ವೃತ್ತಿ ಪರಿಭಾಷೆಯಲ್ಲೇ ವ್ಯಕ್ತಗೊಳಿಸಿದ್ದರಿಂದ ವೈವಿಧ್ಯಮಯ ವೃತ್ತಿ, ಭಾಷೆ, ವೃತ್ತಿ ಪರಿಕರಗಳೆಲ್ಲ ಪದಗಳಲ್ಲಿ ಅರ್ಥಪೂರ್ಣವಾಗಿ ಅಭಿವ್ಯಕ್ತಗೊಂಡು ಅಂದಿನ ಸಾಮಾಜಿಕ ಸನ್ನಿವೇಶ, ಸಾಮಾಜಿಕ ವೈರುಧ್ಯಗಳನ್ನು ಸಮರ್ಥವಾಗಿ ಸ್ಫುಟವಾಗಿ ಗ್ರಹಿಸಲು ಸಾಧ್ಯವಾಗಿದೆ. ವೇಶ್ಯಾವೃತ್ತಿಯ ಹಿನ್ನೆಲೆಯಿಂದ ಬಂದು ಶಿವಶರಣರ ಪ್ರಭಾವದಿಂದ ಪರಿವರ್ತಿತರಾದ ಶರಣೆಯರು ವಚನಕಾರ್ತಿಯರಾಗಿದ್ದಾಗಲೂ ತಮ್ಮ ಭಾವವನ್ನು ನಿಸ್ಸಂಕೋಚವಾಗಿ ಆ ವೃತ್ತಿ ಪರಿಭಾಷೆಯಲ್ಲಿ ವ್ಯಕ್ತಗೊಳಿಸಿರುವುದನ್ನು ಗಮನಿಸಿದಾಗ ಅವರ ಅಂತರಂಗ ಶುದ್ಧಿ, ಬಹಿರಂಗದ ನಡವಳಿಕೆಯಲ್ಲಿ ಸಮಾನವಾಗಿ ವ್ಯಕ್ತವಾಗಿರುವುದನ್ನು ಭಿನ್ನಭಾವವರಿಯದ ಮುಗ್ಧತೆಯೂ, ನಿರ್ಭೀತಿಯೂ ಭಾವ, ಭಾಷೆಯಲ್ಲಿನ ಸಾಮರಸ್ಯವನ್ನು ಕಂಡುಕೊಳ್ಳುತ್ತೇವೆ. **ಸೂಳೆ ಸಂಕವ್ವೆ**ಯ ವಚನ ಇಂತಹ ಅಭಿಪ್ರಾಯವನ್ನು ತುಂಬ ಸ್ಪಷ್ಟವಾಗಿ ಒಳಗೊಂಡಿದೆ.

> "ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ.
> ಹಿಡಿದಡೆ ಬತ್ತಲೆ ನಿಲಿಸಿ ಕೊಲುವರಯ್ಯಾ.

ವ್ರತಹೀನರನರಿದು ಬೆರೆದಡೆ
ಕಾದ ಕತ್ತಿಯಲ್ಲಿ ಕೈ ಕಿವಿ ಮೂಗ ಕೊಯ್ವರಯ್ಯಾ,
ಒಲ್ಲೆನೊಲ್ಲೆ ಬಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ."[೨೪]

ಸೂಳೆ ಸಂಕವ್ವೆಯ ವೃತ್ತಿ ಪರಿಭಾಷೆಯಲ್ಲಿ ಪ್ರಾಮಾಣಿಕವಾದ ನಿಸ್ಸಂಕೋಚವಾದ ಅಭಿವ್ಯಕ್ತಿಯಿದೆ, **ಕನ್ನಡಿ ಕಾಯಕದ ರೇವಮ್ಮನ** ಅನುಭವದ ನುಡಿಯು ಕಾಯಕದ ಪರಿಕರಗಳನ್ನೊಳಗೊಂಡಿದೆ.

"ಕೈಯಲ್ಲಿ ಕನ್ನಡಿಯಿರಲು ತನ್ನ ತಾ ನೋಡಬಾರದೆ?
ಲಿಂಗಜಂಗಮದ ಪ್ರಸಾದಕ್ಕೆ ತಪ್ಪಿದಲ್ಲಿ ಕೊಲ್ಲಬಾರದೆ?
ಕೊಂದಡೆ ಮುಕ್ತಿಯಿಲ್ಲವೆಂಬವರ ಬಾಯಲ್ಲಿ
ಪಡಿಹಾರನ ಪಾದರಕ್ಷೆಯನಿಕ್ಕುವೆ.
ಮುಂಡಿಗೆಯನೆತ್ತಿರೊ ಭೃಷ್ಟ ಭವಿಗಳಿರಾ!
ಎತ್ತಲಾರದಡೆ ಸತ್ತ ಕುನ್ನಿನಾಯ ಬಾಲವ
ನಾಲಗೆ ಮುರುಟಿರೋ ಸದ್ಗುರುಸಂಗನಿರಂಗಲಿಂಗದಲ್ಲಿ."[೨೫]

ಕದಿರ ಕಾಯಕದ ರೆಮ್ಮವ್ವೆಯದು ವೃತ್ತಿ ಪರಿಭಾಷೆಯಲ್ಲಿ ಪಾರಮಾರ್ಥಿಕ ಅನುಭಾವವನ್ನು ನಿರೂಪಿಸಿದ ರೀತಿಯೂ ಇನ್ನೊಂದು ಬಗೆಯ ವೈಶಿಷ್ಟ್ಯವುಳ್ಳದ್ದು.

"ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ;
ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು,
ನಿಂದ ಬೊಂಬೆ ಮಹಾರುದ್ರ;
ರುದ್ರನ ಬೆಂಬಳಿಯವೆರಡು ಸೂತ್ರಕರ್ಣ.
ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ,
ಸುತ್ತಿತ್ತು ನೂಲು ಕದಿರು ತುಂಬಿತ್ತು.
ರಾಟೆಯ ತಿರುಹಲಾರೆ ಎನ್ನ ಗಂಡ ಕುಟ್ಟಿಹ;
ಇನ್ನೇವೆ ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ?"[೨೬]

ಸಾಮಾಜಿಕ ವೈಷಮ್ಯಗಳನ್ನು ವಿಡಂಬಿಸಿ ನಿಜದರಿವಿನ ಮಾರ್ಗದರ್ಶಕರಾದ ಶರಣರ ದಾರಿಯನ್ನು ಅನುಸರಿಸಿದ ವಚನಕಾರ್ತಿಯರು ಕುಲ ಜಾತಿಗಳ ವೈರುಧ್ಯಗಳನ್ನು ವೃತ್ತಿಯ ಹಿನ್ನೆಲೆಯ ಅನುಭವದಲ್ಲಿ ನಿರೂಪಿಸಿರುವರು. **ಧೂಪದ ಗೊಗ್ಗವ್ವೆ** ವೈರಾಗ್ಯಶೀಲೆ, ವ್ಯಕ್ತಿಗತ ಸಾಧನೆಯ ಅಭಿವ್ಯಕ್ತಿಯ ಜೊತೆಗೆ ಸಾಮಾಜಿಕ ನೆಲೆಗಳ ಕುರಿತು ಚಿಂತನಗೈದಿರುವುದು ಕೂಡ ಅವಳ ಧೂಪದ ವೃತ್ತಿ ಆಧಾರಿತವಾಗಿಯೆ.

"ಭಕ್ತರು ಜಂಗಮದಲ್ಲಿ ಕಟ್ಟಿ ಹೋರಲೇಕೆ?
ಧೂಪದ ಹೊಗೆ ಎತ್ತ ಹೋದಡೂ ಸರಿ
ಇದು ಸತ್ಯವೆಂದೆ ನಾಸ್ತಿನಾಥಾ."[೨೭]

ಶರಣರು ನಿರ್ಮಿಸ ಬಯಸಿದ ನವಸಮಾಜದ ಅಡಿಪಾಯ ಕಾಯಕ, ವ್ರತ ತಪ್ಪಿದರೂ ಕಾಯಕ ತಪ್ಪದಂತೆ ಜಾಗ್ರತೆ ವಹಿಸಿದವರು. ಕಾಯಕ ಪ್ರಧಾನ ಸಮಾಜದಲ್ಲಿ ಬಸವಾದಿ ಶಿವಶರಣರು ಸಮಾಜದ ವಿವಿಧ ವೃತ್ತಿಗಳನ್ನು ಅನುಭಾವ ಮಾರ್ಗಕ್ಕೆ ತಿರುಗಿಸಿ ಆ ಮೂಲಕ ಸಮಾಜದ ಶ್ರೇಯೋಭಿವೃದ್ಧಿಗೆ ಶ್ರಮಿಸಲು ಕಂಕಣ ಬದ್ಧರಾದವರು. ಕಾಯಕದಲ್ಲಿ ಮೇಲು ಕೀಳೆಂಬುದನ್ನು ಪರಿಗಣಿಸದೇ ಕಾಯಕಕ್ಕೆ ನಾಯಕಪಟ್ಟ ಕಟ್ಟಿದವರು. ದುಡಿಮೆಯಲ್ಲಿ ದೇವರ ಇರುವನ್ನು ಅರಿತವರು. ತಮ್ಮ ನಿತ್ಯ ಬದುಕಿನ ವೃತ್ತಿಯ ಪಡಿನೆರಳಲ್ಲೆ ವಚನಾನುಭವವನ್ನು ವ್ಯಕ್ತಗೊಳಿಸಿದ್ದರಿಂದ ಶಿವಶರಣರ ಸಮಾಜದ ಪುಣ್ಯಸ್ತ್ರೀಯರು, ವಿರಾಗಿಣಿಯರು, ಅನುಭಾವಿಗಳಾದ ವಚನಕಾರ್ತಿಯರು ಅವರವರ ಕಾಯಕವನ್ನು ಅನುಸರಿಸುತ್ತ ಆ ಅನುಭವಗಳನ್ನು ವಚನಗಳಲ್ಲಿ ನಿದರ್ಶನಗಳೊಂದಿಗೆ ಅನ್ವರ್ಥಕವಾಗಿಯೇ ಉದ್ಗರಿಸಿದ್ದಾರೆ. ಆಯ್ದಕ್ಕಿ ಮಾರಯ್ಯನ ಪತ್ನಿ ಲಕ್ಕಮ್ಮ ಪತಿಯನ್ನು ಎಚ್ಚರಿಸುವಲ್ಲಿಯೂ ವೃತ್ತಿ ಪರಿಭಾಷೆಯನ್ನು ಬಳಸಿ ನಿಜದರಿವು ಮೂಡಿಸಿದ್ದಾಳೆ.

"ಸಂದಣಿಗೊಂಡು ಮನಹರುಷದಿಂದ ಬಸವಣ್ಣನ ಅಂಗಳಕ್ಕೆ ಹೋಗಿ
ತಿಪ್ಪೆಯ ತಪ್ಪಲಲ್ಲಿ ಬಿದ್ದಿದ್ದ ತಂಡುಲವ ಕಟ್ಟಿಕೊಂಡು
ಎಯಿದಾಗಿ ತರಲು ಎಯಿದಾಗಿ ಬಂದಿತ್ತಲ್ಲಾ!
ನಮಗೆ ಎಂದಿನಂದವೆ ಸಾಕು,
ಮತ್ತೆ ಕೊಂಡು ಹೋಗಿ ಅಲ್ಲಿಯೆ ಸುರಿ,
ಮಾರಯ್ಯಪ್ರಿಯ ಅಮರೇಶ್ವರಲಿಂಗ ಕೊಟ್ಟ
ಕಾಯಕವೇ ಸಾಕು ಮಾರಯ್ಯಾ."[೨೮]

ಲಕ್ಕಮ್ಮ ಕಾಯಕದಲ್ಲಿ ಸತ್ಯಶುದ್ಧತೆಗೆ ಒತ್ತು ನೀಡಿರುವಳಲ್ಲದೆ ಅಸಂಗ್ರಹಕ್ಕೂ ಬದ್ಧಳು. ಅಕ್ಕಿಯನ್ನು ಆಯ್ದು ತಂದು ದಾಸೋಹವ ಮಾಡುವ ಮಾರಯ್ಯನ ವೃತ್ತಿಯಲ್ಲಿ ಶುದ್ಧತೆ, ಬದ್ಧತೆಯನ್ನು ಬಯಸಿದವಳು ಲಕ್ಕಮ್ಮ. ಹೆಚ್ಚಿನದಕ್ಕೆ ಆಸೆ ಮಾಡದ ಆಯ್ದಕ್ಕಿ ಮಾರಯ್ಯನ ಸತಿ ಲಕ್ಕಮ್ಮ ಅವನ ವೃತ್ತಿಯ ಸಾಂದರ್ಭಿಕ ಸನ್ನಿವೇಶವನ್ನು ಮನಮುಟ್ಟುವಂತೆ ಕಟ್ಟಿಕೊಟ್ಟಿರುವ ಹಿಂದಿನ ಪ್ರೇರಣೆಯೂ ಬಸವಾದಿ ಶರಣರ ಧ್ಯೇಯವೆಂಬುದೇ ಸ್ಪಷ್ಟವಾಗಿದೆ.

ಕಾಯಕ, ವ್ರತ ನೇಮಗಳ ಹಂಗಿಲ್ಲದ ಅಕ್ಕಮಹಾದೇವಿಯಲ್ಲಿ ಆರ್ಥಿಕ ಚಿಂತನೆಗಳಾಗಲಿ, ವೃತ್ತಿ ಪರಿಭಾಷೆಯನ್ನಾಗಲಿ ಕಾಣಲು ಸಾಧ್ಯವಿಲ್ಲ. ಅಕ್ಕನದು ಸಾಧನೆಯೆಡೆಗಿನ ಪಯಣ, ಸಾಮಾಜಿಕ

ಪರಿವರ್ತನೆ, ಸಮಾಜ ಪರಿವರ್ತನೆಗೆ ತತ್ತ್ವೋಪದೇಶಗಳ ಅನಿವಾರ್ಯತೆಯನ್ನು ಅಂಟಿಸಿಕೊಂಡವಳಲ್ಲ. ಕಾರಣ ಅವಳು ಪತಿಯೊಂದಿಗೆ ಬಾಳ್ವೆ ನಡೆಸಿದ ಸಾಂಪ್ರದಾಯಿಕ ಸತಿಯಲ್ಲ, ಪತಿಯೊಡನೆ ದಾಂಪತ್ಯ, ಕಾಯಕ, ದಾಸೋಹಗಳನ್ನು ನಿರ್ವಹಿಸಿದ ಪುಣ್ಯಸ್ತ್ರೀಯೂ, ಪತಿವ್ರತೆಯೂ ಅಲ್ಲ; ಅವಳದೇನಿದ್ದರೂ ಅಲೌಕಿಕ ಪತಿಯೊಂದಿಗಿನ ಅನುಭಾವದ ನೆಲೆಯ ಬಾಳುವೆ. ಲೌಕಿಕದ ಸಂಸಾರ, ಸತಿತ್ವ, ಸಂಪ್ರದಾಯಗಳನ್ನು ಪರಿಪಾಲಿಸುವ ಪ್ರಮೇಯವೂ ಅಕ್ಕನಿಗೆ ಇರಲಿಲ್ಲ. ಅವಳು ಸ್ವತಂತ್ರ ವಿಚಾರವಾದಿ. ನಿರ್ಭೀತ ನಡೆ ನುಡಿಯಲ್ಲಿ ಸ್ವಯಂ ಪಥವನ್ನು ಶೋಧಿಸಿಕೊಂಡವಳು. ಸಾಧಿಸಿಕೊಂಡವಳು. ಸಿದ್ಧ ವ್ಯಕ್ತಿತ್ವದ ನೆಲೆಯವಳು.

ಅಕ್ಕಮಹಾದೇವಿಯ ಸಮಕಾಲೀನ ಶಿವಶರಣೆಯರು ಬಹುಪಾಲು ವೈವಿಧ್ಯಮಯವಾದ ಕಾಯಕಗಳನ್ನು ಕೈಗೊಂಡವರು. ವ್ರತ ನೇಮಗಳಿಗೆ ನೀಡಿರುವ ಮಹತ್ವ ಒಂದೆಡೆಯಾದರೆ, ಕಾಯಕ ಅದಕ್ಕಿಂತಲೂ ಮಿಗಿಲಾದುದೆಂಬ ಮನೋಭಾವವುಳ್ಳವರು. ಕಾಯಕದಲ್ಲಿ ಸಮಾನತೆ, ಸತ್ಯಶುದ್ಧತೆಗಳಿಗೆ ಪ್ರಾಧಾನ್ಯತೆ ನೀಡಿದವರು. ವ್ಯಷ್ಟಿ, ಸಮಷ್ಟಿಗಳ ಉದ್ಧಾರಕ್ಕೆ ಕಾಯಕವೇ ಮೂಲಮಂತ್ರವೆಂಬುದನ್ನು ಅರಿತು ಪರಿಪಾಲಿಸಿದವರು. ತಾವು ನಂಬಿದ ಕಾಯಕ ದಾಸೋಹಗಳ ತತ್ವಗಳ ಪರಿಕಲ್ಪನೆಯನ್ನು ಪ್ರತಿಪಾದಿಸಿದವರು.

"ಆವ ಕಾಯಕವ ಮಾಡಿದಡೂ ಒಂದೆ ಕಾಯಕವಯ್ಯಾ.
ಆವ ವ್ರತವಾದಡೂ ಒಂದೆ ವ್ರತವಯ್ಯಾ.
ಆಯ ತಪ್ಪಿದಡೆ ಸಾವಿಲ್ಲ; ವ್ರತ ತಪ್ಪಿದಡೆ ಕೂಡಲಿಲ್ಲ.
ಕಾಕಪಿಕದಂತೆ ಕೂಡಲು ನಾಯಕನರಕ
ಗಂಗೇಶ್ವರ ಲಿಂಗದಲ್ಲಿ."[೨೯]

ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ ಸತ್ಯ ಶುದ್ಧವಾದ ಕಾಯಕದಲ್ಲಿ ಸಮಾನತೆಯನ್ನು ಕಂಡವಳು. ಕಾಯಕ ಮತ್ತು ವ್ರತಗಳೆರಡನ್ನು ಶಿವಶರಣೆಯರು ಎರಡು ದೃಷ್ಟಿಗಳಂತೆಯೇ ಸಮಾನ ಭಾವದಿಂದಲೇ ಗ್ರಹಿಸಿ ಆಚರಿಸಿದ್ದಾರೆ. ಬಾಚಿ ಕಾಯಕದ ಬಸವಯ್ಯಗಳ ಸತಿ ಕಾಳವ್ವೆ ಅದನ್ನೇ ಸ್ಪಷ್ಟಪಡಿಸುತ್ತಾಳೆ.

"ಕಾಯಕ ತಪ್ಪಿದಡೆ ಸೈರಿಸಬಾರದು;
ವ್ರತ ತಪ್ಪಲೆಂತೂ ಸೈರಿಸಬಾರದು
ಕರ್ಮಹರ ಕಾಳೇಶ್ವರಾ."[೩೦]

ಶಿವಶರಣೆ ಅಕ್ಕಮ್ಮ ಕಾಯಕ ಕೈಕೊಳ್ಳುವ ಭಕ್ತನ ಮನೆಯನ್ನು ದೇವರ ವಾಸಸ್ಥಾನವೆಂದೇ ಭಾವಿಸಿದ ರೀತಿ ಅನನ್ಯವಾಗಿದೆ.

"ಅಸಿ ಮಸಿ ಕೃಷಿ ವಾಣಿಜ್ಯ ಮುಂತಾದ ಕಾಯಕವ ಮಾಡಿ,
ಭಕ್ತರ ಪಡುಗ, ಪಾದತ್ರಾಣ, ಪಹರಿ, ಬಾಗಿಲು, ಬೊಕ್ಕಸ, ಬಿಯಗ
ಮುಂತಾದ ಕಾಯಕವಂ ಮಾಡಿಕೊಂಡು
ವ್ರತಕ್ಕೆ ಊಣೆಯವಿಲ್ಲದೆ ಮಾಡುವ ಕೃತ್ಯಕ್ಕೆ ಕಡೆಯಾಗದೆ
ಈ ಭಕ್ತನ ಅಂಗಳ ಅವಿಮುಕ್ತಿ ಕ್ಷೇತ್ರ,
ಆತನ ಮನೆಯೆ ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಾಶ್ರಯ."[೩೧]

ಕಾಯಕ ವ್ರತಾಚರಣೆಗಳ ನಿಷ್ಠೆಯನ್ನು ಮೆರೆದ ಶಿವಶರಣೆಯರು ಅದಕ್ಕೆ ವ್ಯತಿರಿಕ್ತವಾದುದನ್ನು ವಿಡಂಬಿಸುವುದನ್ನು ಮರೆಯಲಾರರು. ವ್ಯವಸ್ಥೆಯ ಶುದ್ಧಿಗೆ, ವ್ಯಕ್ತಿತ್ವ ಶುದ್ಧತೆಯನ್ನು ಒಪ್ಪಿಕೊಂಡವರು. ಒಲವಿನಿಂದ ಅನುಸರಿಸಿದವರು. ತಮಗಿದ್ದ ಅವಕಾಶದಲ್ಲೇ ಅವ್ಯವಸ್ಥೆಯನ್ನು ಸರಿದೂಗಿಸಲು ಹೆಣಗಿದವರು. ಅದುವರೆಗಿನ ಸಾಮಾಜಿಕ ವ್ಯವಸ್ಥೆಗೆ ಪರ್ಯಾಯ ವ್ಯವಸ್ಥೆಯೊಂದನ್ನು ರಚಿಸಲು ಪರಿಶ್ರಮಿಸಿದ ಶಿವಶರಣರ ದಾರಿಯಲ್ಲಿಯ ತೊಡಕನ್ನು ತೆಗೆದು ಹಾಕಲು ಪ್ರಾಮಾಣಿಕವಾಗಿ ಪ್ರಯತ್ನಿಸಿದವರು. ಶರಣರ ಸಮಾಜದಲ್ಲಿ ಭಕ್ತರೆನಿಸಿಕೊಂಬವರು ಕಾಯಕ ಜೀವಿಗಳಾಗಿರಬೇಕೆಂಬ ನಿಯಮವನ್ನು ಪಾಲಿಸಿದ ಶಿವಶರಣೆಯರು ಕಾಯಕ ವ್ರತವನ್ನು ಸ್ವೀಕರಿಸಿ ತಮ್ಮ ನಡೆನುಡಿಯಲ್ಲಿ ಸಮನ್ವಯ ಸಾಧಿಸಿದವರು.

"ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ;
ಸತ್ಯಶುದ್ಧವಿಲ್ಲದುದು ಕಾಯಕವಲ್ಲ;
ಆಸೆಯೆಂಬುದು ಭವದ ಬೀಜ;
ನಿರಾಶೆಯೆಂಬುದು ನಿತ್ಯಮುಕ್ತಿ.
ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ ಕಾಣ್ಣವ್ವಾ"[೩೨]

ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆಯ ವಚನ ಶಿವಶರಣರ ನವಸಮಾಜದ ಧ್ಯೇಯ ವಾಕ್ಯದಂತಿದೆ. ನಿತ್ಯ ಕೃತ್ಯಕ್ಕೆ ಕಟ್ಟಿಬದ್ಧರಾದ ಶಿವಶರಣೆಯರು ತಮಗೆ ತಾವೇ ನೈತಿಕ ನಡುವಳಿಕೆಗಳನ್ನು, ಕಟ್ಟುಪಾಡುಗಳನ್ನು ವಿಧಿಸಿಕೊಂಡು ಜವಾಬ್ದಾರಿಗಳನ್ನು ನಿಭಾಯಿಸಿ ನೈತಿಕತೆ, ಆರ್ಥಿಕತೆ, ಸಮಾನತೆ ಸೂತ್ರದಡಿಯಲ್ಲಿ ಸ್ತ್ರೀತನವನ್ನು ಸಾಧನೆಗೆ ಶೋಧನೆಗೆ ಒಳಪಡಿಸಿದ ಶಿವಶರಣೆಯರು ಆಚಾರ ವಿಚಾರಗಳ ಪರಿಪಾಲನಾಶೀಲರು, ಹಾಗಾಗಿ ಅವರೆಲ್ಲ ಪುಣ್ಯ ಸ್ತ್ರೀಯರು, ಪತಿವ್ರತೆಶೀಲೆಯರು.

ಪತಿಯೊಂದಿಗೆ ಸತಿತನವನ್ನು ಸಮೀಕರಿಸಿಕೊಂಡ ಬಹುಪಾಲು ಶಿವಶರಣೆಯರು ಕೆಲವು ಸಂದರ್ಭಗಳಲ್ಲಿ ಪತಿಯು ದಾರಿ ತಪ್ಪಿದಾಗ ಎಚ್ಚರಿಸಿ ಮುನ್ನಡೆಸಿದ ಮಾರ್ಗದರ್ಶಿಗಳು, ಪ್ರಪಂಚ ಪಾರಮಾರ್ಥವೆರಡನೂ ಪರಿಪಾಲಿಸಿದ ಪತಿವ್ರತಾ ಶಿರೋಮಣಿಗಳು ಶಿವಶರಣೆಯರು. ಬಾಳಸಂಗಾತಿಯಾಗಿ ಭರವಸೆಯ ಬದುಕನ್ನು ಕಟ್ಟಿಕೊಳ್ಳಲು ಅಣಿಯಾದ ಅವರಲ್ಲಿ ಪತಿನಿಷ್ಠೆಯೂ, ಸಮರ್ಪಣ ಗುಣವೇ ಪ್ರಧಾನವಾಗಿರುವುದರಿಂದ ಶರಣಧರ್ಮದಲ್ಲಿ ಶಿವಶರಣೆಯರು ಆ ವಿಶಿಷ್ಟತೆಯಿಂದಲೇ ಸಾಧನೆಗೈದರು.

ಶರಣರ ಹೊಸ ಸಮಾಜ ನಿರ್ಮಾಣದ ಆದರ್ಶಗಳನ್ನು ಒಪ್ಪಿಕೊಂಡ ವಚನಕಾರ್ತಿಯರು ಸ್ಥಾಪಿತ ಸಮಾಜದಲ್ಲಿ ಬೇರೂರಿದ್ದ ಪುರೋಹಿತಶಾಯಿ, ಅದರ ಹಿಂದಿನ ಹೀನಕೃತ್ಯಗಳನ್ನು ವಿಡಂಬಿಸಿ, ಖಂಡಿಸಿದರು. ಸಮಾಜದ ಹಿತಚಿಂತನೆಗೆ ಮುಂದಾದ ಶಿವಶರಣೆಯರು ಸಮಾಜ ಹಿತರಕ್ಷಣಾ ವಿರೋಧಿ ಕೃತ್ಯಗಳನ್ನು ಪ್ರತಿಭಟಿಸಿದರಲ್ಲದೆ ಪರಿಹಾರವನ್ನು ಸೂಚಿಸಿದರು. ಪರಧನ, ಪರಸ್ತ್ರೀ ಕುರಿತಾದ ಶರಣರ ಧೋರಣೆಗಳಿಗೆ ಧ್ವನಿಯಾದವರು ಶಿವಶರಣೆಯರು. ಆ ಹಿನ್ನೆಲೆಯಲ್ಲಿ ಸತ್ಯಕ್ಕ ವ್ರತ ನೇಮಗಳ ಸ್ವರೂಪವನ್ನು ವ್ಯಾಖ್ಯಾನಿಸಿದ್ದಾಳೆ.

"ಅರ್ಚನೆ ಪೂಜನೆ ನೇಮವಲ್ಲ;
ಮಂತ್ರತಂತ್ರ ನೇಮವಲ್ಲ;
ಧೂಪ ದೀಪಾರತಿ ನೇಮವಲ್ಲ;
ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ.
ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯನೇಮ."[೩೩]

"ಲಂಚವಂಚನಕ್ಕೆ ಕೈಯಾನದ ಭಾಷೆ.
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ
ನಾನು ಕೈಮುಟ್ಟಿ ಎತ್ತಿದೆನಾದರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ.
ಅದೇನು ಕಾರಣವೆಂದರೆ, ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ.
ಇಂತಲ್ಲದೆ ನಾನು ಅಳಿಮನವ ಮಾಡಿ
ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ,
ನೀನಾಗಲೆ ಎನ್ನ ನರಕದಲ್ಲಿ ಅದ್ದಿ
ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ."[೩೪]

ಸತ್ಯಕ್ಕನ ಮನಸ್ಥಿತಿ ಆ ಕಾಲದ ಶರಣ ಸಮೂಹದವರ ಪ್ರತಿನಿಧಿತ್ವವಾಗಿಯೇ ಹೊರಹೊಮ್ಮಿದೆ. ಪರಧನ, ಪರಸತಿಯರ ಆಸೆ, ಲಂಚ, ವಂಚನೆಗಳು ಸಮುದಾಯದ ಶಾಂತಿ ಭಂಗಗೊಳ್ಳುವುದಕ್ಕೆ ಕಾರಣವಾಗುವುದರಿಂದ ಆತ್ಮಸಾಕ್ಷಿ ಪ್ರಮಾಣದಿಂದ ಪ್ರಾಮಾಣಿಕ ಬದುಕಿಗೆ ತೆರೆದುಕೊಂಡವರು. ಪರಿಶ್ರಮದ ಬದುಕನ್ನು ಆಶ್ರಯಿಸಬೇಕೆಂಬ ಕಾಳಜಿ ಅವರ ವಚನಗಳಲ್ಲಿ ಮತ್ತೆ ಮತ್ತೆ ಪ್ರತಿಧ್ವನಿತಗೊಳ್ಳುತ್ತದೆ. ಹೆಣ್ಣು, ಹೊನ್ನು, ಮಣ್ಣುಗಳು ಸನಾತನಿಗಳ ದೃಷ್ಟಿಯಲ್ಲಿ ಭೋಗದ ವಸ್ತುಗಳಾಗಿಯೇ ಪರಿಗಣಿಸಲ್ಪಟ್ಟಿದ್ದ ಧೋರಣೆಯನ್ನು ಶಿವಶರಣೆಯರು ಪಲ್ಲಟಗೊಳಿಸಿರುವರು. ಅವುಗಳನ್ನು ಮರುವ್ಯಾಖ್ಯಾನಕ್ಕೊಳಪಡಿಸಿದ ಶರಣರ ಧ್ಯೇಯ ಶಿವಶರಣೆಯರಲ್ಲಿ ಹಲವು ಬಗೆಯಲ್ಲಿ ವ್ಯಕ್ತವಾಗಿದೆ. ಪಾರಂಪರಿಕ ದೃಷ್ಟಿಕೋನವನ್ನು ಪ್ರಗತಿಪರವಾಗಿ ಪರಿವರ್ತಿಸಿದವರು ವಚನಕಾರರು.

ಸ್ಥಾಪಿತ ಸಮಾಜದ ಮೌಲ್ಯಗಳೊಳಗೆ ಮರು ಚಿಂತನೆ, ಮರುಸೃಷ್ಟಿಗೊಳಿಸಿ ಪರಿವರ್ತನೆಗೆ ಪರಿಶ್ರಮಿಸಿದವರು ಪುಣ್ಯ ಸ್ತ್ರೀಯರು. ಆದರೆ ಅಕ್ಕಮಹಾದೇವಿ ಸ್ಥಾಪಿತ ಸಮಾಜದ ಸಂಪ್ರದಾಯಯುತ ಮೌಲ್ಯಗಳನ್ನು ಸಂಪೂರ್ಣವಾಗಿ ಧಿಕ್ಕರಿಸಿದವಳು. ಸಮಾಜದ ಶೋಷಣೆಯ ದಾರಿಯಲ್ಲಿ ಸಂಘರ್ಷವನ್ನು ವ್ಯಕ್ತಿಗತ ನೆಲೆಯಲ್ಲಿ ವಿರೋಧಿಸಿದವಳು. ತೀವ್ರ ಪ್ರತಿರೋಧವನ್ನು ಒಡ್ಡಿದವಳು. ಪರಿತ್ಯಕ್ತಳಾದ ಅಕ್ಕಮಹಾದೇವಿಯದು ವ್ಯಕ್ತಿಗತವಾದ ದಾರಿಯೇ ಹೊರತು ಸಾಮಾಜಿಕ ಪರಿವರ್ತನೆಯ ಹಂಬಲವನ್ನು ಅವಳಲ್ಲಿ ಕಾಣಲಾಗುವುದಿಲ್ಲ. ಅಕ್ಕಮಹಾದೇವಿಯ ನಡೆ ನುಡಿ ಇತರ ಶರಣೆಯರಿಗಿಂತ ತುಂಬ ಭಿನ್ನ ಮತ್ತು ಸ್ವತಂತ್ರವಾದದ್ದು. ಆದ್ದರಿಂದ ಪರಧನ, ಪರಸ್ತ್ರೀ ವಿಷಯಗಳು ಅವಳ ಚಿಂತನೆಯ ಕ್ರಮದಲ್ಲಿ ವಿಷಯ ವಸ್ತುಗಳಾಗುವುದೇ ಇಲ್ಲ. ಆತ್ಮಬಲದ ನಡೆ ನುಡಿಯ ಅಕ್ಕನಿಗೆ ಅನ್ಯ ವಿಚಾರಗಳು ಗೌಣವಾಗಿಯೇ ಉಳಿದಿವೆ. ಶಿವಶರಣೆಯರ ಸಾಮಾಜಿಕ ನಿರೀಕ್ಷೆಗಳು ಬದಲಾವಣೆಯ ಬಯಕೆಗಳು ಅಕ್ಕಮಹಾದೇವಿಯನ್ನು ಪ್ರಭಾವಿಸಿಲ್ಲ. ಹಾಗೆಯೇ ತೀವ್ರ ಸ್ವಾತಂತ್ರ್ಯದ ಹಂಬಲ, ಆತ್ಮಬಲದ ಪರ್ಯಾಯ ನಡೆಯುಳ್ಳ, ಸ್ಥಾಪಿತ ಸಮಾಜದ ಪುರುಷ ಕೇಂದ್ರಿತ, ಪ್ರಭುತ್ವಕೇಂದ್ರಿತ ವ್ಯವಸ್ಥೆಯ ವಿರುದ್ಧದ ಅಕ್ಕನ ಹೋರಾಟದ ಬದುಕು ಸಮಕಾಲೀನ ಶಿವಶರಣೆಯರನ್ನು ಪ್ರಭಾವಿತಗೊಳಿಸಲಿಲ್ಲ ಅಕ್ಕನ ಆದರ್ಶ ಅವರಿಗೆ ಅನುಕರಣೀಯವೂ ಆಗಲಿಲ್ಲ. ಆದ್ದರಿಂದ ಅಕ್ಕನ ಸಮಕಾಲೀನ ಶಿವಶರಣೆಯರು ಪರಸ್ಪರ ಮುಖಾಮುಖಿಯಾಗಲಿಲ್ಲ, ಪರಸ್ಪರ ಪ್ರಭಾವಿತಗೊಳ್ಳಲಿಲ್ಲ.

ಇಹದ ಬದುಕನ್ನು ಸಹ್ಯವಾಗಿ ಮಾಡಿಕೊಂಡು ಸಹಜ ಜೀವನಕ್ಕೆ ತಮ್ಮನ್ನು ತೊಡಗಿಸಿಕೊಂಡ ಶಿವಶರಣೆಯರು ಸಾಂಪ್ರದಾಯಿಕ ವ್ಯವಸ್ಥೆಯೊಳಗಿದ್ದು ಸ್ವತಂತ್ರ ನಡೆಯನ್ನು, ಆಚಾರ ವಿಚಾರಗಳಲ್ಲಿ ಅಳವಡಿಸಿಕೊಂಡವರು. ಮರ್ತ್ಯದ ಕೃತ್ಯವನ್ನು ಪ್ರೀತಿಸುತ್ತಲೇ ಪತಿಯೊಡನಿದ್ದು ಪಾರಮಾರ್ಥ ತತ್ವವನ್ನು ಚಿಂತನೆಗೈದರು. ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನ್ನೇ ಒಂದು ಪ್ರತಿಮೆಯಾಗಿ

ಪರಿಗಣಿಸಿ ಅವನೊಂದಿಗಿನ ಅವಿನಾಭಾವ ಸಂಬಂಧವನ್ನು ಹೊಂದುತ್ತ, ತನ್ನೆಲ್ಲ ಸಂವೇದನೆಗಳನ್ನು ಆ ಪ್ರತಿಮೆಯೊಂದಿಗೆ ಹಂಚಿಕೊಂಡವಳು. ಲೋಕದ ಪತಿ, ಸಾಮಾಜಿಕ ಆಚಾರಗಳು ಅವಳಲ್ಲಿ ತೀವ್ರ ವಿರೋಧಿ ನೆಲೆಯನ್ನು ಪಡೆದುಕೊಂಡಿವೆ. ಅಕ್ಕಮಹಾದೇವಿ ಸಂಸಾರವನ್ನು ನಿರಾಕರಿಸುವುದಿಲ್ಲ. ಅಪ್ಪಿಕೊಳ್ಳುತ್ತಾಳಾದರೂ ಸಾಂಪ್ರದಾಯಿಕ ಸಂಸಾರದಂತೆ ಅಲ್ಲ. ಅವಳದು ಅಲೌಕಿಕವಾದ ವಿಭಿನ್ನವಾದ ಸಂಸಾರ. ಅಲ್ಲಿ ತನ್ನ ಪತಿ ಚೆನ್ನಮಲ್ಲಿಕಾಜುನ ಮತ್ತು ಸತಿ ಅಕ್ಕಮಹಾದೇವಿ, ಅವರೀರ್ವರ ಹೊರತಾದ ಯಾವ ಬಂಧಗಳೂ ಅಲ್ಲಿಲ್ಲ. ಆದ್ದರಿಂದ ಅಕ್ಕಮಹಾದೇವಿ ತನ್ನನ್ನು ಸ್ವವಿಮರ್ಶೆಗೆ ಒಳಪಡಿಸಿಕೊಳ್ಳುತ್ತಾಳೆ. ನೋವು ನಿವೇದಿಸಿಕೊಳ್ಳುತ್ತ ಒಲವಿನತ್ತ ಮುಖಮಾಡುವ ಮಹಾದೇವಿಯಕ್ಕ ನೋವಿನಲ್ಲಿಯೂ ಒಂದು ರೀತಿಯ ನಲಿವನ್ನು ಅನುಭವಿಸುತ್ತಾಳೆ.

"ಎನ್ನ ತುಂಬಿದ ಜವ್ವನ, ತುಳುಕುವ ಮೋಹನವ,
ನಿನಗೆ ಇಂಬು ಮಾಡಿಕೊಂಡಿರ್ದೆನಲ್ಲಾ ಎಲೆಯಯ್ಯಾ.
ಎನ್ನ ಲಂಬಿಸುವ ಲಾವಣ್ಯದ ರೂಪುರೇಖೆಗಳ
ನಿನ್ನ ಕಣ್ಣಿಂಗೆ ಕೈವಿಡಿದಂತೆ ಮಾಡಿರ್ದೆನಲ್ಲಯ್ಯ.
ನಿನ್ನ ಮುಂದಿಟ್ಟಲನ್ಯರು ಕೊಂಡೊಯಿವಾಗಲೆಂತು ಸೈರಿಸಿದೆ ಹೇಳಾ
ಚೆನ್ನಮಲ್ಲಿಕಾರ್ಜುನಾ?"[೩೫]

ಅಕ್ಕಮಹಾದೇವಿಯ ಸರ್ವ ಸಮರ್ಪಣೆ ಭಾವ, 'ಶರಣಸತಿ ಲಿಂಗಪತಿಯಲ್ಲಿ ತನ್ನನ್ನು ಒಡ್ಡಿಕೊಳ್ಳುವ, ವಿಮರ್ಶಿಸುವ, ಒಲಿಯದಿದ್ದಾಗ ಪ್ರಶ್ನಿಸುವ, ತಲ್ಲಣಿಸುವ ಭಾವಗಳು ಕರುಣೆಯ, ಆಪ್ತತೆಯ ಧ್ವನಿರಮ್ಯತೆಯನ್ನು ವ್ಯಕ್ತಗೊಳಿಸುತ್ತಾ ತಾನೊಲಿದ ದೇವನಲ್ಲಿ ಹೆಚ್ಚೆಚ್ಚು ಹತ್ತಿರವಾಗುತ್ತ ಸಾಗುತ್ತಾಳೆ.

"ಬೆರಸುವಡೆ ಬೇಗ ತೋರಾ,
ಹೊರ ಹಾಯ್ಕದಿರಯ್ಯಾ.
ನಿಮ್ಮಲ್ಲಿಗೆ ಸಲೆಸಂದ ತೊತ್ತಾನು;
ಎನ್ನ ಹೊರ ಹಾಯ್ಕದಿರಯ್ಯಾ.
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ನಂಬಿ ಬೆಂಬಳಿಬಂದೆನು,
ಇಂಬುಗೊಳ್ಳಯ್ಯಾ ಬೇಗದಲಿ."[೩೬]

ಅಕ್ಕಮಹಾದೇವಿಯ ತುಡಿತ ತನ್ನೊಲುಮೆಯ, ಅರಿವಿನ, ಚೈತನ್ಯವಾದ ಚೆನ್ನಮಲ್ಲಿಕಾರ್ಜುನನಲ್ಲಿ ಲೀನಗೊಳಿಸಿಕೊಳ್ಳುವ ಕಡೆಗೆ ಕೇಂದ್ರೀಕೃತವಾಗಿದೆ. ಅದರ ಸುತ್ತೆಲ್ಲ ಮುತ್ತಿಕೊಳ್ಳುವ ಭಾವಗಳನ್ನು

ಬಿತ್ತರಿಸುತ್ತ, ಬಂಧಗಳನ್ನು ಕಳಚಿಕೊಳ್ಳುತ್ತ ವ್ಯಕ್ತಿವಿಕಾಸದ ಪಥದಲ್ಲಿ ಮುನ್ನಡೆದಿರುವಳು. ಅವಳ ದೇಹ, ಮನಸ್ಸುಗಳಲ್ಲಿ ಮಲ್ಲಿಕಾರ್ಜುನನನ್ನೇ ಆವರಿಸಿಕೊಳ್ಳುವ ಅಕ್ಕಮಹಾದೇವಿ ತನ್ನೊಳಗಿನ ವಿಕಾಸಕ್ಕೆ ವಿರೋಧವಾದವುಗಳನ್ನು ವಿಮರ್ಶಿಸಿ ಸ್ವಯಂ ಪರಿಪೂರ್ಣತೆಯನ್ನು ಸಾಧಿಸಲು ಹವಣಿಸುತ್ತಾಳೆ.

ಅಕ್ಕಮಹಾದೇವಿಯ ಸಮಕಾಲೀನ ಶಿವಶರಣೆಯರಲ್ಲಿ ಬಹುಪಾಲು ಸ್ವವಿಮರ್ಶೆಗಿಂತ ಸಮಾಜ ವಿಮರ್ಶೆಗೆ ತೊಡಗಿದವರು. ಸಮಾಜದಲ್ಲಿ ಬೇರೂರಿದ್ದ ಭೇದಗಳನ್ನು ವಿಮರ್ಶಿಸುವ, ವಿಡಂಬಿಸುವ ಧ್ವನಿಯೇ ಪ್ರಧಾನವಾಗಿರುವ ಶಿವಶರಣೆಯರ ವಚನಗಳಲ್ಲಿ ವ್ಯಕ್ತಿವಿಕಾಸಕ್ಕಿಂತಲೂ ಸಮಾಜದ ಪ್ರಗತಿಯೇ ಪ್ರಧಾನವಾಗಿ ಗೋಚರಿಸಿದೆ. ಕೆಲವರು ಮಾತ್ರ ಸ್ವವಿಮರ್ಶೆಗೆ ತಮ್ಮನ್ನು ತೊಡಗಿಸಿಕೊಂಡರೂ ಅದು ಅಕ್ಕನಷ್ಟು ತೀವ್ರತರವಾಗಿಲ್ಲ. ಸತ್ಯಕ್ಕನು ಸ್ವಯಂಶೋಧನೆ, ಸತಿಪತಿ ಭಾವವನ್ನು ಕೆಲವು ವಚನಗಳಲ್ಲಿ ವ್ಯಕ್ತಗೊಳಿಸಿರುವಳು.

"ಇನಿಯಂಗೆ ತವಕವಿಲ್ಲ; ಎನಗೆ ಸೈರಣೆಯಿಲ್ಲ.
ಮನದಿಚ್ಛೆಯನರಿವ ಸಖಿಯರಿಲ್ಲ, ಇನ್ನೇವೆನವ್ವಾ?
ಮನುಮಥವೈರಿಯ ಅನುಭಾವದಲ್ಲಿ ಎನ್ನ ಮನ ಸಿಲುಕಿ ಬಿಡದು,
ಇನ್ನೇನ ಮಾಡುವೆನೆಲೆ ಕರುಣವಿಲ್ಲದ ತಾಯೆ?
ದಿನಾ ವೃಥಾ ಹೋಯಿತ್ತಾಗಿ ಯೌವನ ಬೀಸರವಾಗದ ಮುನ್ನ
ಪಿನಾಕಿಯ ನೆರಹವ್ವಾ ಶಂಭುಜಕ್ಕೇಶ್ವರನ!"[೩೭]

ಸತ್ಯಕ್ಕ ತನ್ನಂತರಂಗದ ಕಳವಳವನ್ನು ಕಾವ್ಯಾತ್ಮಕವಾಗಿ ವ್ಯಕ್ತಗೊಳಿಸುವ ರೀತಿ ದಿನಾ ವೃಥಾ ಹೋಯಿತ್ತೆಂಬ ಭಾವ ಶರಣಸತಿ ಲಿಂಗಪತಿಯನ್ನು ಕೂಡುವಲ್ಲಿ ಉಂಟಾದ ವಿಳಂಬ ಅದಕ್ಕೆ ವಿಷಾದಪಡುವ ಪರಿ ಮನೋಜ್ಞವಾಗಿದೆ. ಸತ್ಯಕ್ಕನ ಸ್ವವಿಮರ್ಶೆ ತನ್ನೊಲುಮೆಯ ದೇವನೊಂದಿಗೆ ನಡೆಸುವ ಸಂವಾದ, ಛಲಬಿಡದ ಶ್ರದ್ಧೆ, ಅಕ್ಕಮಹಾದೇವಿಯ ಹಂಬಲದ ಹವಣಿಕೆಯ ಭಾವವೇ ಮತ್ತೊಂದು ರೀತಿಯಲ್ಲಿ ಸತ್ಯಕ್ಕನಲ್ಲಿ ವ್ಯಕ್ತವಾಗಿದೆ.

"ಏಕೆನ್ನ ಬಾರದ ಭವಂಗಳಲ್ಲಿ ಬರಿಸಿದೆ?
ಏಕೆನ್ನ ಘೋರ ಸಂಸಾರದಲ್ಲಿರಿಸಿದೆ?
ಏಕೆನಗೆ ಕರುಣಿಸಲೊಲ್ಲದೆ ಕಾಡಿಹೆ?
ಏಕೆ ಹೇಳಾ ಎನ್ನ ಲಿಂಗವೆ? ಆನು ಮಾಡಿದ ತಪ್ಪೇನು?
ಸಾಕಲಾಗದೆಂದು ಅಕ್ಕೊತ್ತಿ ನೂಕಿದಡೆ
ಏಕೆ ನಾ ನಿಮ್ಮ ಬಿಡುವೆ ಶಂಭುಜಕ್ಕೇಶ್ವರಾ?"[೩೮]

ಸತ್ಯಕ್ಕ ಶಿವನಲ್ಲಿ ಕೂಡುವ ಹಂಬಲದಿಂದ ತಲ್ಲಣಗೊಳ್ಳುತ್ತ, ಭವಬಂಧನಗಳಿಗೆ ಕಾರಣವನ್ನು ಶೋಧಿಸುತ್ತಾಳೆ, ಪ್ರಶ್ನಿಸುತ್ತಾಳೆ. ಕರುಣಾಭಾವ ಪ್ರವಹಿಸುವಂತೆ ಮೊರೆಯಿಡುವ, ತನ್ನನ್ನು ತಾನು ವಿಮರ್ಶೆಗೆ ಒಳಪಡಿಸಿಕೊಳ್ಳುವಳು. ಸತ್ಯಕ್ಕನಂತೆ ಅಮುಗೆ ರಾಯಮ್ಮನಲ್ಲಿ ಸಮಾಜ ವಿಮರ್ಶೆ ಪ್ರಧಾನವಾಗಿದ್ದರೂ ಸ್ವವಿಮರ್ಶೆಯು ಅಲ್ಪಮಟ್ಟಿಗೆ ಅಭಿವ್ಯಕ್ತವಾಗಿದೆ.

"ಎನ್ನ ದೇಹವ ದಗ್ಧವ ಮಾಡಯ್ಯಾ.
ಎನ್ನ ಕಾಯದಲ್ಲಿಪ್ಪ ಕರ್ಮವ ತೊಡೆಯಯ್ಯಾ.
ಎನ್ನ ಭಾವದಲ್ಲಿಪ್ಪ ಭ್ರಮೆಯ ಜರಿಯಯ್ಯಾ.
ನಾ ಹಿಡಿದ ಛಲವ ಬಿಡದೆ ನಡೆಸಯ್ಯಾ ಅಮುಗೇಶ್ವರಲಿಂಗವೆ." [೩೯]

ತನ್ನ ದೈವದೆದುರು ತನು ಮನ ಭಾವಗಳ ಬಂಧನಗಳ ಜಂಜಡವನ್ನು ತೋಡಿಕೊಳ್ಳುವ ರಾಯಮ್ಮ, ತಾನು ಹಿಡಿದ ಛಲವನ್ನು ನೆರವೇರಿಸಲು ಅವ್ಯಕ್ತ ಶಕ್ತಿಗೆ ಮೊರೆಹೋಗುವ ಭಾವ ಅಕ್ಕಮಹಾದೇವಿಯ ನಿವೇದನೆ ಭಾವವನ್ನು ಹೋಲುವಂತಿದೆ. ಆಮುಗೆ ರಾಯಮ್ಮನದು ನಿವೇದನೆ ನಿಷ್ಠೆಯಲ್ಲಿ ಸಮರಸಗೊಳ್ಳುತ್ತದೆ. ಆದರೆ ಅಕ್ಕಮಹಾದೇವಿಯ ನಿವೇದನೆ ತೀರ ಸಹಜವಾಗಿ ಮಧುರವಾಗಿ ಮೂಡಿನಿಂತಿದೆ.

"ಎನ್ನ ಮಾಯದ ಮದವ ಮುರಿಯಯ್ಯಾ.
ಎನ್ನ ಕಾಯದ ಕತ್ತಲೆಯ ಕಳೆಯಯ್ಯಾ.
ಎನ್ನ ಜೀವದ ಜಂಜಡವ ಮಾಣಿಸಯ್ಯಾ.
ಎನ್ನ ದೇವ ಚೆನ್ನಮಲ್ಲಿಕಾಜುನಯ್ಯಾ,
ಎನ್ನ ಸುತ್ತಿದ ಪ್ರಪಂಚವ ಬಿಡಿಸಾ ನಿಮ್ಮ ಧರ್ಮ!" [೪೦]

ಅಕ್ಕಮಹಾದೇವಿ ತನ್ನನ್ನು ಆವರಿಸಿದ ಬಂಧನಗಳನ್ನು ಕಳಚಿಕೊಂಡು ಮುಕ್ತಳಾಗ ಬಯಸುವಳು. ಆ ಬಯಕೆಯನ್ನು ಈಡೇರಿಸಬೇಕೆಂಬ ವಿನಮ್ರಭಾವ ಅಕ್ಕನಲ್ಲಿದೆ. ಅಮುಗೆ ರಾಯಮ್ಮ ತನ್ನನ್ನು ಶುದ್ಧೀಕರಿಸಿಕೊಳ್ಳುವಲ್ಲಿ ಉಂಟಾದ ಎಡರುಗಳನ್ನು ಬಿಡಿಸಿಕೊಳ್ಳುತ್ತ, ಮತ್ತೊಂದರ ಛಲವನ್ನು ಹಿಡಿವ ಹಂಬಲ, ತುಡಿತವನ್ನು ಕಾಣುತ್ತೇವೆ. ಅಕ್ಕಮಹಾದೇವಿ ತನ್ನ ಮತ್ತು ಸುತ್ತಲಿನ ಪ್ರಪಂಚವನ್ನು ಅದರೊಂದಿಗಿನ ಸಂಬಂಧವನ್ನು ಕಳೆದುಕೊಂಡು ಮುಕ್ತಳಾಗುವ ಮನೋಭಾವವನ್ನು ಮಲ್ಲಿಕಾರ್ಜುನನಲ್ಲಿ ಪ್ರಾರ್ಥಿಸುವವಳು.

ಸನಾತನ ಕಾಲದಿಂದಲೂ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಹೆಣ್ಣನ್ನು ಮಣ್ಣು ಹೊನ್ನಿನಂತೆ ಭೋಗದ ವಸ್ತುವನ್ನಾಗಿಯೇ ಪರಿಗಣಿಸಿ ಅದೇ ರೀತಿ ನಡೆಸಿಕೊಂಡು ಬರಲಾಗಿದೆ. ಜೀವಚೈತನ್ಯವಾದ

ಹೆಣ್ಣಿನ ಅಸ್ತಿತ್ವವನ್ನು ಜಡವಸ್ತುಗಳೊಡನೆ ಸಮೀಕರಿಸಲಾಗಿದೆ. ಹೆಣ್ಣು ಪುರುಷನ, ಪ್ರಭುತ್ವದ ಅಧೀನಗಳೊಳಗೆ ತನ್ನತನವನ್ನು ಕಂಡುಕೊಳ್ಳುವುದಕ್ಕೆ ಅವಕಾಶವಿಲ್ಲದ ಸ್ಥಿತಿ ನಿರ್ಮಿಸಿ, ಸ್ತ್ರೀಯನ್ನು ಲಿಂಗೀಯ ಆಧಾರದಲ್ಲಿ ಪುರುಷನಿಗಿಂತ ಕೀಳು ಎಂಬ ದೃಷ್ಟಿಯಿಂದಲೇ ನೋಡಲಾಗಿದೆ. ಸ್ವಾರ್ಥಕೇಂದ್ರಿತ ಮನೋಭಾವಕ್ಕೆ ಸ್ತ್ರೀ ಬಲಿಯಾಗುತ್ತ ನಡೆದಿರುವಳು. ಅವಳ ಸಂವೇದನೆಗಳಿಗೆ ಬೆಲೆಯಿರದ ಸಾಂಪ್ರದಾಯಿಕ ಸಮಾಜ ವ್ಯವಸ್ಥೆಯಲ್ಲಿ ಹೆಣ್ಣಾಗಿ ಹುಟ್ಟಿರುವುದಕ್ಕೆ ನೋವನ್ನು ಅನುಭವಿಸಿ, ಸ್ತ್ರೀತನವನ್ನು ನಿರಾಕರಿಸುವ, ಪಶ್ಚಾತಾಪ ಪಡುವ ಅದೆಷ್ಟೋ ಹೆಣ್ಣು ಜೀವಗಳು ಕಣ್ಮುಂದೆ ಕಾಣುತ್ತವೆ.

ಅಕ್ಕಮಹಾದೇವಿಯು ಬದುಕಿದ್ದ ಕಾಲದಲ್ಲಿ ಸ್ತ್ರೀ ಬಗೆಗಿನ ಭಾವನೆ, ಧೋರಣೆಗಳು ಅವಳ ವಚನಗಳಲ್ಲಿ ಗಾಢವಾಗಿ ಅಭಿವ್ಯಕ್ತಗೊಂಡಿವೆ. ಅದನ್ನೆಲ್ಲ ಮೀರುವ ಪ್ರಯತ್ನ ಮಾಡಿದ್ದಕ್ಕಾಗಿ ಅಕ್ಕನಂತವರ ವ್ಯಕ್ತಿತ್ವ ಅನಂತ ಸಂಕಷ್ಟ ಸವಾಲುಗಳನ್ನು, ಶೋಷಣೆಯನ್ನು ಎದುರಿಸುವುದು ಅನಿವಾರ್ಯವಾಯಿತು. ಸಮಕಾಲೀನ ಶಿವಶರಣೆಯರು ಸೀಮಿತ ಪರಿಧಿಯೊಳಗೆ ಹೆಣ್ಣು ಹೆಣ್ತನವನ್ನು ಸಹಿಸುತ್ತಲೇ ಸಮಾಜ ಸಾಹಿತ್ಯಗಳೊಳಗೆ ಗುರುತಿಸಿಕೊಂಡರು. ಶಿವಶರಣರು ಪಾರಂಪರಿಕ ದೃಷ್ಟಿಯನ್ನು ಪರಿವರ್ತಿಸಿ ಮಹಿಳೆಗೂ ಅವಕಾಶ ಮಾಡಿಕೊಟ್ಟಿದ್ದರ ಪರಿಣಾಮವಾಗಿ ಮಹಿಳೆಯರು ಉಸಿರುಗಟ್ಟುವ ವಾತಾವರಣದಿಂದ ಹೊರಬರುವ ಪ್ರಯತ್ನ ಮಾಡಿದರೂ, ಅವರೊಳಗಿನ ಪೂರ್ಣತೆಗೆ, ಹೆಣ್ಣು, ಹೆಣ್ತನವೆಂಬುದು ತೊಡಕಾಗಿಯೂ ಕಂಡಿದೆ. ಬಸವಣ್ಣನವರ ಪತ್ನಿ ನೀಲಾಂಬಿಕೆ ಅಂತಹ ಭಾವವನ್ನು ವಾಸ್ತವಿಕ ಹಿನ್ನೆಲೆಯಲ್ಲಿಯೇ ವ್ಯಕ್ತಗೊಳಿಸಿರುವಳು.

"ಏಕೆನ್ನ ಪುಟ್ಟಿಸಿದೆಯಯ್ಯಾ ಹೆಣ್ಣು ಜನ್ಮದಲ್ಲಿ
ಪುಣ್ಯವಿಲ್ಲದ ಪಾಪಿಯ?
ನಾನು ಇಹಪರಕ್ಕೆ ದೂರಳಯ್ಯಾ.
ಎನ್ನ ನಾಮ ಹೆಣ್ಣು ನಾಮವಲ್ಲಯ್ಯಾ.
ನಾನು ಸಿರಿಯಿದ್ದ ವಸ್ತುವಿನ ವಧುವಾದ ಕಾರಣ,
ಸಂಗಯ್ಯನಲ್ಲಿ ಬಸವನ ವಧುವಾದ ಕಾರಣ
ಎನಗೆ ಹೆಣ್ಣು ನಾಮವಿಲ್ಲವಯ್ಯಾ."[೨೧]

ಸ್ತ್ರೀ ಪುರುಷರ ನಡುವಿನ ಲಿಂಗ ತಾರತಮ್ಯವನ್ನು ತೊಡೆದು ಹಾಕಿದ ಶಿವಶರಣರ ಸಮಾಜದಲ್ಲಿ ನೀಲಾಂಬಿಕೆ ಬದುಕಿದವಳು. ಆದರೂ ಅವಳಲ್ಲಿ ಸ್ತ್ರೀತ್ವ ಪಶ್ಚಾತ್ತಾಪ ಭಾವವನ್ನು ಮೂಡಿಸಿದುದನ್ನು ಗ್ರಹಿಸಬಹುದಾಗಿದೆ. ಹೆಣ್ಣು ಶರೀರ, ಜನ್ಮದ ಕಹಿ ಅನುಭವಗಳನ್ನು ತೋಡಿಕೊಳ್ಳುತ್ತ ಹೆಣ್ತನವನ್ನು ಮೀರುವ ಪ್ರಯತ್ನವನ್ನೂ ಮಾಡಿದವಳು. ತನ್ನ ಹೆಣ್ತನವನ್ನು, ಇನ್ನೊಂದರಲ್ಲಿ ಗುರುತಿಸಿಕೊಳ್ಳುವ

ಮೂಲಕವೂ ನೀಲಾಂಬಿಕೆ ಹೆಣ್ಣು ನಾಮವನ್ನು ಅಳಿಸಿಕೊಳ್ಳುವ ಅಪಾರ ಹಂಬಲ, ಹವಣಿಕೆ ಅಲ್ಲಿದೆ. ಅವಳ ಪ್ರಶ್ನೆಯೇ ಹಲವು ಸಾಧ್ಯತೆಗಳನ್ನು ಹುಟ್ಟು ಹಾಕುತ್ತದೆ. ಹೆಣ್ಣು ಅವಳಿಗಿರುವ ಪರಿಧಿ, ಪ್ರಪಂಚ ಮತ್ತು ಪಾರಮಾರ್ಥ ವಲಯಗಳಲ್ಲಿರುವ ಸ್ಥಾನಮಾನಗಳನ್ನು ಪ್ರತಿಧ್ವನಿಸುವ ನೋವಿನ ಧ್ವನಿ ಅದರಲ್ಲಿ ಅಡಕವಾಗಿರುವುದಂತೂ ಸತ್ಯ.

ಸಾಂಸಾರಿಕ ಸುರಕ್ಷತೆಯ ವಲಯದಲ್ಲಿರುವ ನೀಲಾಂಬಿಕೆಯಂತವರಿಗೆ ಹೆಣ್ತನ ಹೊರೆಯಾಗಿಯೇ ಪರಿಣಮಿಸಿದೆ. ಅದೇ ಕಾಲದಲ್ಲಿ ಕೌಟುಂಬಿಕ ಸುರಕ್ಷತೆಯ ಪರಿಧಿಯಿಂದ ಬಿಡಿಸಿಕೊಂಡು ಹೊರಬಂದ ಅಕ್ಕಮಹಾದೇವಿ ಹೆಣ್ಣು ಶರೀರ ವಿಡಿದು ಹಲವು ನೋವನ್ನು ಅನುಭವಿಸಿದವಳು. ಅವಳ ಶರೀರ ಅವಳ ಸಾಧನೆಗೆ ಸವಾಲಾಗಿ, ತೊಡಕಾಗಿಯೂ ನೋವಿಗೂ ಕಾರಣವೂ ಆಗಿರುವುದು. ಹೆಣ್ಣನ್ನು ಪೂರ್ವಾಗ್ರಹ ದೃಷ್ಟಿಯಿಂದ ನೋಡುವ ಸಮಾಜದಲ್ಲಿ ಅಕ್ಕಮಹಾದೇವಿ ಅವೆಲ್ಲವುಗಳಿಗೆ ಮುಖಾಮುಖಿಯಾಗುವುದು ಅನಿವಾರ್ಯವಾಗಿದೆ. ಅಂತಹ ಸಂದಿಗ್ಧ ಸ್ಥಿತಿಯಲ್ಲಿಯೂ ಹೆಣ್ಣು, ಹೆಣ್ತನವನ್ನು ಸಂಭ್ರಮಿಸಿದವಳು. ಸಂಭ್ರಮಿಸುತ್ತಲೇ ಸ್ಥಾಪಿತ ನೆಲೆಗಳನ್ನು ಮೀರಿದವಳು. ಹೆಣ್ಣು ರೂಪುವಿಡಿದು ಭಾವಿಸಲು ಗಂಡುರೂಪು ಪಡೆದುಕೊಂಡು ಹೆಣ್ಣನ್ನು ನೋಡುವ ಮನೋಭಾವಕ್ಕೆ ಪರ್ಯಾಯ ವ್ಯಾಖ್ಯಾನವನ್ನು ಸೃಷ್ಟಿಸಿದವಳು.

"ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ.
ಗಂಡು ಗಂಡಾದಡೆ ಹೆಣ್ಣಿನ ಸೂತಕ.
ಮನದಸೂತಕ ಹಿಂಗಿದಡೆ
ತನುವಿನ ಸೂತಕಕ್ಕೆ ತೆರಹುಂಟೆ?
ಅಯ್ಯಾ, ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ.
ಎನ್ನ ದೇವ ಚೆನ್ನಮಲ್ಲಿಕಾರ್ಜುನನೆಂಬ ಗರುವಂಗೆ
ಜಗವೆಲ್ಲ ಹೆಣ್ಣು ನೋಡಾ ಅಯ್ಯಾ."[೪೨]

ಅನಾದಿಕಾಲದಿಂದಲೂ ಸ್ತ್ರೀಯನ್ನು ಸೂತಕವೆಂದೇ ಭಾವಿಸಲಾಗಿದ್ದ ಪೂರ್ವಾಗ್ರಹ ದೃಷ್ಟಿಗೆ ಹಿಡಿದ ಮಂಕನ್ನು, ಕವಿದ ಕತ್ತಲನ್ನು, ಹೊಸ ವಿಚಾರಗಳ ಬೆಳಕಿನಲ್ಲಿ ಅಕ್ಕಮಹಾದೇವಿ ಕಳೆದಿದ್ದಾಳೆ. ಸೂತಕ, ಮಾಯೆ, ಅಸ್ಪೃಶ್ಯತನಕ್ಕೆ ಒಳಗಾಗಿ ಅಪಾರ ನೋವು, ನಿರಾಶೆಗಳಿಂದ ತನ್ನತನವನ್ನೇ ಕಳೆದುಕೊಂಡ ಸ್ತ್ರೀಕುಲಕ್ಕೆ ಅಕ್ಕ ಭರವಸೆಯ ಬೆಳಕನ್ನೇ ತೋರಿಸಿದ್ದಾಳೆ. ದೇಹವಿಡಿದ ಕಾರಣವಿಟ್ಟುಕೊಂಡು ದಂಡಿಸಿದ ವ್ಯವಸ್ಥೆಗೆ ಹೆಣ್ಣು ಶರೀರವಿಡಿದುಕೊಂಡು ಅಕ್ಕಮಹಾದೇವಿ ತೀವ್ರ ಪ್ರತಿರೋಧವನ್ನು ಒಡ್ಡಿದ್ದಾಳೆ. ಮಹಿಳೆಗೆ ಮಾಯೆಯ ಮುಸುಕಿ ಹೊದಿಸಿ ಮಂಕಾಗಿಸಿದ ಮತೀಯ ವ್ಯವಸ್ಥೆಗೂ ಮಾರುತ್ತರವಾದವಳು ಮಹಾದೇವಿಯಕ್ಕ.

"ಪುರುಷನ ಮುಂದೆ ಮಾಯೆ
ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು.
ಸ್ತ್ರೀಯ ಮುಂದೆ ಮಾಯೆ
ಪುರುಷನೆಂಬ ಅಭಿಮಾನವಾಗಿ ಕಾಡುವುದು.
ಲೋಕವೆಂಬ ಮಾಯೆಗೆ ಶರಣಚಾರಿತ್ರ್ಯ
ಮರುಳಾಗಿ ತೋರುವುದು.
ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ
ಮಾಯೆಯಿಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ"[೪೩]

ಲಿಂಗ ತಾರತಮ್ಯದ ನೆಲೆಯಲ್ಲಿ ಮಹಿಳೆಯರನ್ನು ಕಡೆಗಣಿಸಿದ್ದು ಒಂದು ತಂತ್ರವಾದರೆ, ಅವಳನ್ನು ಭೋಗದ ವಸ್ತುವೆಂದೆ ಪರಿಗಣಿಸಿ ಅನುಭವಿಸುತ್ತ ಬಂದಿರುವ ಪ್ರಭುತ್ವ, ಪುರೋಹಿತಶಾಹಿ, ಪೂರ್ವಾಗ್ರಹ ವ್ಯವಸ್ಥೆಯನ್ನು ಅಕ್ಕಮಹಾದೇವಿ ಏಕಕಾಲಕ್ಕೆ ವಿರೋಧಿಸಿರುವಳು. ಪುರುಷನ ಸಾಧನೆಗೆ ತೊಡಕಾದ ಸ್ತ್ರೀತನವನ್ನೇ ಅಕ್ಕ ಸಾಧನೆಯ ಔನತ್ಯದಲ್ಲಿ ಸಮೀಕರಿಸಿದ್ದಾಳೆ. ಮನದ ಸೂತಕವೇ ಮಾಯೆ ಹೊರತು ಮಹಿಳೆಯ ಶರೀರವಲ್ಲ. ನೋಡುವ ದೃಷ್ಟಿಯನ್ನು ಬದಲಿಸಿಕೊಳ್ಳದ ವ್ಯವಸ್ಥೆಯನ್ನು ಮರುಳು ಜಗತ್ತೆಂದು ಜರಿದಿದ್ದಾಳೆ. ಲಿಂಗವ್ಯವಸ್ಥೆಯನ್ನೇ ಪಲ್ಲಟಗೊಳಿಸಿದ ಅವಳು ದೇವ ಚೈತನ್ಯದೆದುರು ಜಗವೆಲ್ಲ ಹೆಣ್ಣು ಎಂಬ ವಿನೂತನ ಪರಿಕಲ್ಪನೆಯನ್ನು ಸಾರಿದ್ದಾಳೆ.

ಪುರುಷರೂಪಿ, ಪ್ರಭುತ್ವದ ಅಹಂನ್ನು ತೊಡೆದು ಹಾಕಿದ ಅಕ್ಕಮಹಾದೇವಿ ಲಿಂಗೀಯ ನೆಲೆಯಿಂದ ಕಂದಕ ಸೃಷ್ಟಿಸಿದ ವ್ಯವಸ್ಥೆಯೊಳಗಿದ್ದುಕೊಂಡು ಆ ವ್ಯವಸ್ಥೆಯನ್ನು ವಿಭಿನ್ನ ನೆಲೆಯಿಂದ ಮೀರಿ ನಿಲ್ಲುತ್ತಾಳೆ. ಲೋಕದ ಜನರ ವಿಚಾರವನ್ನು ಅಲ್ಲಗಳೆದು ಹೆಣ್ಣು ಗಂಡೆಂಬ ಲಿಂಗಭೇದವನ್ನು ಕಡೆಗಣಿಸಿ ನಿರ್ಲಿಂಗ, ಅನುಭಾವದ ನಿಲುವನ್ನು ಪ್ರತಿಪಾದಿಸಿದ್ದಾಳೆ. ಸ್ತ್ರೀಸಂವೇದನೆಗಳಿಂದ ಪ್ರಾರಂಭಗೊಂಡ ಅಕ್ಕನ ಅನುಭಾವ ಪುರುಷ ರೂಪ ಪಡೆದುಕೊಂಡು ಸಮಾಜದ ಸವಾಲುಗಳಿಗೆ ಎದುರಾಗುತ್ತಲೆ ಸ್ತ್ರೀ, ಪುರುಷ ವ್ಯಕ್ತಿತ್ವವನ್ನು ಕಳಚಿಕೊಂಡು ಮಾಯೆ, ಮರಹು, ಅಭಿಮಾನಗಳ ಹಂಗನ್ನು ಹರಿದು ಶುದ್ಧ ಚೈತನ್ಯರೂಪವಾಗಿ ಕಂಗೊಳಿಸಿದ ಕದಳಿ ಕರ್ಪೂರ ಅಕ್ಕಮಹಾದೇವಿ. ಲೋಕವಿಚಾರಗಳನ್ನು ಮೀರಿದ ಮಹಾದೇವಿಯಕ್ಕ ಗಟ್ಟಿ ನೆಲೆಯೊಂದರಲ್ಲಿ ನಿಂತುಕೊಂಡು ಅನುಭಾವದ ಅರಿವಿಲ್ಲದ ಮರಳು ಜಗತ್ತನ್ನು ನಿರ್ದಾಕ್ಷಿಣ್ಯವಾಗಿ ಉದಾಸೀನತೆಯಿಂದ ನಿರ್ಲಕ್ಷಿಸಿದ್ದಾಳೆ.

"ಪರರೊಡತಣ ಮಾತು ನಮಗೇತರದಯ್ಯಾ?
ಪರರೊಡತಣ ಗೊಟ್ಟಿ ನಮಗೇತಕಯ್ಯ?
ಲೋಕದ ಮಾನವರೊಡನೆ ನಮಗೇತರ ವಿಚಾರವಯ್ಯ?

ಚೆನ್ನಮಲ್ಲಿಕಾರ್ಜುನನ ಒಲವಿಲ್ಲದವರೊಡನೆ
ನಮಗೇತರ ವಿಚಾರವಯ್ಯಾ?"[೪೪]

ಪ್ರಪಂಚದ ಜನರೊಡನೆ ಪ್ರತಿಕ್ರಿಯಿಸಿ ಪ್ರತಿರೋಧಿಸಿ ತನ್ನ ಹೆಣ್ತನಕ್ಕೆ ಹೊರೆಯಾದ ಉರವಣೆಗಳನ್ನು ಸಾಧನೆಯಿಂದ ಬಿಡಿಸಿಕೊಂಡು ಪ್ರಪಂಚವನ್ನೇ ಸಿದ್ಧ ವ್ಯಕ್ತಿತ್ವದ ನೆಲೆಯಲ್ಲಿ ಪರಿಭಾವಿಸಿದ ಪರಿಯಿದು. ಅವಳ ಬದುಕು ಸಮಕಾಲೀನ ಶರಣೆಯರಿಗಿಂತ ಭಿನ್ನವಾಗಿರುವ ಹಾಗೆಯೇ ಅಕ್ಕ ಮತ್ತು ಇತರ ಶರಣೆಯರ ಅಭಿವ್ಯಕ್ತಿಯಲ್ಲಿಯ ಭಿನ್ನತೆಗಳೇ ಹೆಚ್ಚು. ಸಾಂಪ್ರದಾಯಿಕ ಮನಸ್ಥಿತಿಯ ಬಹುಪಾಲು ಶರಣೆಯರ ಅಭಿವ್ಯಕ್ತಿ ವ್ಯಕ್ತಿಗತವಾಗಿರುವದಕ್ಕಿಂತ ಹೆಚ್ಚಾಗಿ ಸಮಾಜಮುಖಿಯಾಗಿದೆ. ಕೆಲವು ಶರಣೆಯರು ತತ್ವದ ನಿರೂಪಣೆಯ ಅಭಿವ್ಯಕ್ತಿಯಲ್ಲಿ ಹೆಚ್ಚಾಗಿ ತೊಡಗಿಸಿಕೊಂಡವರು.

ಅಕ್ಕಮಹಾದೇವಿಯ ವಚನಗಳು ಇತರ ಶರಣೆಯರ ವಚನಗಳಿಗಿಂತ ಸಂಖ್ಯೆಯಲ್ಲಿಯು ಹೆಚ್ಚು, ಹಾಗೂ ಅಭಿವ್ಯಕ್ತಿಯಲ್ಲಿಯೂ ವೈವಿಧ್ಯತೆಯಿಂದ ಕೂಡಿವೆ. ಅವಳಲ್ಲಿ ವ್ಯಕ್ತಿಗತ ಸ್ತ್ರೀಸಂವೇದನೆಗಳೂ ಸತ್ವಶಾಲಿಯಾಗಿ ಸಶಕ್ತವಾಗಿ ನಿರೂಪಿತಗೊಂಡಿವೆ. ಭಾಷೆ, ಶೈಲಿ ಭಾವಗಳಲ್ಲಿ ತತ್ವ ನಿರೂಪಣೆಯಲ್ಲಿ ಇತರ ಶರಣೆಯರಿಗಿಂತ ಕಾವ್ಯಸೌಂದರ್ಯವನ್ನೊಳಗೊಂಡಿವೆ. ಅಕ್ಕಮಹಾದೇವಿಯ ಸಮಕಾಲೀನ ವಚನಕಾರ್ತಿಯರಲ್ಲಿ ಅಕ್ಕಮ್ಮ, ಅಮುಗೆರಾಯಮ್ಮ, ಲಿಂಗಮ್ಮ, ನೀಲಾಂಬಿಕೆಯರು ನೂರಕ್ಕಿಂತಲೂ ಹೆಚ್ಚು ವಚನಗಳನ್ನು ರಚಿಸಿರುವರು. ಆದರೆ ಅವರೆಲ್ಲರ ಭಾಷೆ ಭಾವನೆಗಳು, ಶೈಲಿ, ಸತ್ವಗಳಲ್ಲಿಯೂ ವಿಭಿನ್ನತೆಯಿದೆ. ಅಕ್ಕಮಹಾದೇವಿಯ ಅಭಿವ್ಯಕ್ತಿಯ ವೈಶಿಷ್ಟ್ಯವೆಂದರೆ ನಿರ್ಭಿಡೆ, ಕೆಲವು ವಚನಕಾರ್ತಿಯರಲ್ಲಿ ನಿರ್ಭೀತ ಅಭಿವ್ಯಕ್ತಿಯನ್ನು ಕಾಣುತ್ತೇವೆಯಾದರೂ ಅದು ಅಕ್ಕನ ಅಭಿವ್ಯಕ್ತಿಯಂತಲ್ಲ. ಅವರೆಲ್ಲರ ಧ್ಯೇಯ ದೃಷ್ಟಿ ಸಮಾಜವಿಮರ್ಶೆ, ಪರಿವರ್ತನೆಯೆಡೆಗೆ ಕೇಂದ್ರಿಕೃತಗೊಂಡಿರುವುದರಿಂದ ಭಾಷೆ ಮತ್ತು ಅಭಿವ್ಯಕ್ತಿಯಲ್ಲಿ ವಿಡಂಬನೆ, ಮೊನಚು, ಒರಟುತನವಿದೆ. ಕೆಲವೊಮ್ಮೆ ತೀರ ಗದ್ಯಾತ್ಮಕವಾದ ಅಭಿವ್ಯಕ್ತಿಯೂ ಸಹಜವಾಗಿ ಗೋಚರಿಸುತ್ತದೆ. ವಚನಕಾರ್ತಿಯರಲ್ಲಿ ಗದ್ಯದ ಸರಳ ನಿರೂಪಣೆಯೇ ಹೆಚ್ಚಾಗಿ ಕಂಡುಬರುತ್ತದೆ.

ಅಕ್ಕಮಹಾದೇವಿಯ ಜೀವನ ಶಾಂತ ಸರೋವರದಂತಿರದೆ ಅಲ್ಲಿ ಸಂಘರ್ಷದಿಂದ ಭಾವನಾತ್ಮಕ ಏರಿಳಿತವುಂಟಾಗಿದ್ದರಿಂದ ಅವಳ ಅಭಿವ್ಯಕ್ತಿಯಲ್ಲಿಯೂ ಅಂತಹದೇ ಸ್ವರೂಪ ಗ್ರಹಿತವಾಗುತ್ತದೆ. ಅಂತರಂಗದ ಅನುಭಾವಕ್ಕಾಗಿ ಹಂಬಲಿಸುವಾಗ ಅವಳಲ್ಲಿ ಉಂಟಾಗುವ ಸಹಜ ಸ್ತ್ರೀ ಸಂವೇದನೆಗಳು, ಸಾಮಾಜಿಕ ಪ್ರತಿರೋಧವನ್ನೊಡುವಾಗ ಉಂಟಾದ ಭಾವೋದ್ವೇಗ, ಆತ್ಮಸ್ಥೈರ್ಯ, ವಿನೀತ ಭಾವಲಹರಿಗಳು ಅವಳ ಬದುಕಿನ ಪ್ರತಿ ಹೆಜ್ಜೆಯನ್ನೇ ಪ್ರತಿಧ್ವನಿಸುತ್ತವೆ. ಆದ್ದರಿಂದ ಅಕ್ಕಮಹಾದೇವಿಯ ವಚನಗಳ ಭಾಷೆ ಮಧುರವಾಗಿ, ಭಾವಗೀತಾತ್ಮಕ, ಕಾವ್ಯಾತ್ಮಕ, ಶೈಲಿಯಲ್ಲಿಯೂ ತೀವ್ರತರವಾಗಿ ಹೃದ್ಯವೇದ್ಯವೆನಿಸುತ್ತವೆ. ಬದುಕನ್ನು ಬರಹದಲ್ಲಿ ಬಟ್ಟೆಯಿಳಿಸಿದ ಭಾಷೆಯ ಅಭಿವ್ಯಕ್ತಿ ಸಹಜ

ಸೌಂದರ್ಯದಿಂದ ಕೂಡಿದೆ. ಕರುಣರಸ ಪ್ರಧಾನವಾದ ಅಭಿವ್ಯಕ್ತಿಯ ಅಕ್ಕನ ಬಹಳಷ್ಟು ವಚನಗಳು ವ್ಯಕ್ತಿಗತ ಭಾವಗಳನ್ನು ಹೊರಹಾಕುತ್ತವೆ.

"ತಾನು ದಂಡುಮಂಡಲಕ್ಕೆ ಹೋದಹೆನೆಂದಡೆ
ನಾನು ಸುಮ್ಮನಿಹೆನಲ್ಲದೆ,
ತಾನೆನ್ನ ಕೈಯೊಳಗಿದ್ದು, ತಾನೆನ್ನ ಮನದೊಳಗಿದ್ದು
ಎನ್ನ ಕೂಡದಿದ್ದಡೆ ನಾನೆಂತು ಸೈರಿಸುವೆನವ್ವಾ?
ನೆನಹೆಂಬ ಕುಂಟಣಿ ಚೆನ್ನಮಲ್ಲಿಕಾಜುನನ
ನೆರಹದಿದ್ದಡೆ ನಾನೇವೆ ಸಖಿಯೆ?"[೪೫]

ಶರಣಸತಿ ಲಿಂಗಪತಿಯನ್ನು ಕೂಡುವಲ್ಲಿ ಅನುಭವಿಸಿದ ತಲ್ಲಣ ಅಕ್ಕನ ಅಭಿವ್ಯಕ್ತಿಯಲ್ಲಿ ಹೃದಯಸ್ಪರ್ಶಿ ಎನಿಸುತ್ತದೆ. ಆಪ್ತಸಖಿಯಲ್ಲಿ ತನ್ನ ನೋವನ್ನು ನಿವೇದಿಸಿಕೊಳ್ಳುವ ಅಕ್ಕಮಹಾದೇವಿ ತಾನು ಅನುಭವಿಸುತ್ತಿರುವ ನೋವು ಎಂಥಹ ಮೊನಚಿನದು, ಅಸಹನೀಯವಾದುದೆಂಬ ಅರಿಕೆ ಮಾಡಿಕೊಳ್ಳುವ ಪ್ರಶ್ನಿಸುವ, ಆಕ್ಷೇಪಿಸುವ ಆಪ್ತತೆಯ ಅಭಿವ್ಯಕ್ತಿ ಪ್ರೇಮಕಾವ್ಯದ ವಿರಹದ ಬೇಗೆಯಂತಲ್ಲ. ಕರುಣಾಳು ಭಕ್ತಿಯ ಬೆಳಕಾಗಬೇಕಾದ ಲಿಂಗಪತಿಗಾಗಿ ಅಲೌಕಿಕ ಆನಂದದಲ್ಲಿ ಸಮರಸಗೊಳ್ಳಲು ತೀವ್ರತರವಾಗಿ ಹಂಬಲಿಸುವ ಭಕ್ತೆಯ ಪರಾಕಾಷ್ಠೆಯ ಮನಸ್ಥಿತಿಯದು. ಅಕ್ಕಮಹಾದೇವಿ ರೂಪಿಸಿಕೊಂಡ ಪತಿ ಪ್ರತಿಮೆ ಚೆನ್ನಮಲ್ಲಿಕಾರ್ಜುನ. ಅದರೊಂದಿಗೆ ತನ್ನೆಲ್ಲ ಭಾವನೆಗಳನ್ನು ಹಂಚಿಕೊಳ್ಳುವುದರಲ್ಲಿಯೇ ತನ್ಮಯಳಾದವಳಾದ್ದರಿಂದ ಆ ನೆಲೆಯಲ್ಲೇ ಅವಳ ಅಭಿವ್ಯಕ್ತಿ ಸಾಗುತ್ತದೆ.

"ಸತ್ತಾದಡೆ ಶರೀರಂ ಪೋದಡೆ ಪೋಗಲಿ,
ಲೋಕದ ಗಂಡರನೊಲ್ಲೆ;
ಲೋಕದ ಹೆಂಡಿರು ಬೇಕಾದಡೆ ಮಾಡಿಕೊಳ್ಳೆಲೆ;
ಉರಿಯದಿರು ಉರಿಯದಿರು ಉರಿಯದಿರು.
ಚೆನ್ನಮಲ್ಲಿಕಾರ್ಜುನನಲ್ಲದೆ
ಲೋಕದ ಗಂಡರು ಎನಗೆ ನೆನೆಯಲು ಬಾರದು,
ಸೋಂಕಲಿ ಬಾರದು, ಅಲ್ಲದ ಮೋರೆ ಕಂಡಣ್ಣ."[೪೬]

ಅಕ್ಕಮಹಾದೇವಿಯ ಅಭಿವ್ಯಕ್ತಿಯೇ ಪ್ರತಿಮಾನಿಷ್ಠ. ಸಾಂಪ್ರದಾಯಿಕ ಸಂಸಾರ, ಪತಿಯನ್ನು ನಿರಾಕರಿಸುವ ಅಕ್ಕನದು ಅಸಾಂಪ್ರದಾಯಿಕ ಸಾಹಸದ ಬದುಕು. ಅಂತೆಯೇ ಅವಳ ಬರಹವೂ ಕೂಡ ಸಂಪ್ರದಾಯದ ಬಂಧಗಳನ್ನು ಮೀರಿದ ಆದರ್ಶದ ಅಲೌಕಿಕ ಅಭಿವ್ಯಕ್ತಿಯದು. ಸಂಪ್ರದಾಯ

ವ್ಯವಸ್ಥೆಯನ್ನು ಪ್ರಶ್ನಿಸುವ ಎದುರಿಸುವ ಅಕ್ಕಮಹಾದೇವಿ ಲೋಕದ ಗಂಡನ ಹೆಸರೂ ಸಹ ಅಸಹನೀಯವೆನಿಸುವಷ್ಟು ತೀವ್ರತೆಯಿಂದ ಕೂಡಿದ ಭಾವವದು.

ಅಕ್ಕಮಹಾದೇವಿಯ ವಚನಗಳಲ್ಲಿ ಸ್ತ್ರೀಸಂವೇದನೆಗಳು ಅಕ್ಕನ ವಿಶಿಷ್ಟ ಸಾಧನೆಯ ಹಿನ್ನೆಲೆಯಲ್ಲಿ ಅನಾವರಣಗೊಂಡಿವೆ. ಸತಿಪತಿ ಭಾವದ ವಚನಗಳು ದಾಂಪತ್ಯ ಪ್ರತಿಮೆಗಳಲ್ಲಿ, ಮೃದು ಮಧುರವಾದ ಯಾತನೆಯನ್ನೊಳಗೊಂಡ ಭಾವಲಹರಿಗಳು ಸ್ತ್ರೀ ಅನುಭವದ ಸಂಬಂಧಾತ್ಮಕ ನೆಲೆಯಲ್ಲಿಯೇ ವ್ಯಕ್ತವಾಗಿವೆ. ತನ್ನ ಅಲೌಕಿಕ ಅನುಭಾವಕ್ಕಾಗಿ ಅನುರಾಗ ಮಾರ್ಗದಿಂದ ಅನುಸಂಧಾನ ಮಾಡಿದ ಮಹಾದೇವಿಯಕ್ಕ ಸಂಸಾರವನ್ನು ನಿರಾಕರಿಸಿದವಳಲ್ಲ. ಸಂಸಾರದ ಬಗೆಗಿನ ಇತರರ ಅಭೀಪ್ಸೆಗಿಂತ ಅಕ್ಕನಲ್ಲಿ ಅದರ ತೀವ್ರತೆ ಹೆಚ್ಚಾಗಿಯೇ ತೋರಿದ್ದರಿಂದ ಇಹದ ಬದುಕಿನ ಅಪ್ಯಾಯಮಾನ ಮನಸ್ಸು, ಅದನ್ನು ಸಾಮಾನ್ಯರಿಗಿಂತ ಸಮಕಾಲೀನ ಶಿವಶರಣೆಯರಿಗಿಂತ ತುಸು ಭಿನ್ನವಾಗಿಯೇ ಗ್ರಹಿಸಿದ್ದಾಳೆ. ಅಂತಹ ಗ್ರಹಿತ ಅಭಿವ್ಯಕ್ತಿಗಳಲ್ಲಿ ಅಕ್ಕಮಹಾದೇವಿಯ ಅಂತರಂಗವೇ ಭಾಷೆಯಲ್ಲಿ ತುಂಬಿಕೊಂಡಿದೆ. ಶುದ್ಧ ಹೆಣ್ಣಿನ, ಹೆಣ್ತನದ ಪರಿಧಿಯಲ್ಲೇ ಲಿಂಗಪತಿಗೆ ಶರಣಸತಿಯಾಗಿ ಅವನ ಅಧೀನತ್ವವನ್ನು ಆನಂದಿಸುವ ಸಮರ್ಪಣಾಭಕ್ತಿ ಅಕ್ಕನದು. ಸಮರ್ಪಣೆ ಶುದ್ಧವಾದ ಸತ್ಯಾನ್ವೇಷಣೆಯೇ ಆಗಿದೆ ಹೊರತು ಶೋಷಣೆಯ, ದೌರ್ಬಲ್ಯದ ದಾರಿಯಲ್ಲ. ಸಾತ್ವಿಕ ಅಲೌಕಿಕ ಸಂಸಾರ ಅಕ್ಕನದು.

"ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು,
ದೇವಾಂಗವನುಟ್ಟೆನೆಲೆ ಪುರುಷ ಬಾರಾ,
ಪುರುಷ ರತ್ನವೆ ಬಾರಾ.
ನಿನ್ನ ಬರವೆನ್ನ ಅಸುವಿನ ಬರವಾದುದೀಗ,
ಬಾರಯ್ಯಾ ಚೆನ್ನಮಲ್ಲಿಕಾರ್ಜುನಯ್ಯಾ,
ನೀನು ಬಂದಹನೆಂದು ಬಟ್ಟೆಯ ನೋಡಿ ಬಾಯಾರುತಿರ್ದೆನು."[೪೭]

ಅಕ್ಕಮಹಾದೇವಿಯ ವಚನಗಳ ಪ್ರಧಾನ ಆಶಯವೂ 'ಶರಣಸತಿ ಲಿಂಗಪತಿ' ಸ್ಥಾಯಿಭಾವವೇ ಆಗಿರುವುದರಿಂದ ನಿರೀಕ್ಷೆಯಲ್ಲಿ ನೋವಿನಲ್ಲಿ, ಆತುರದಲ್ಲಿ ಆನಂದವನ್ನೇ ಪಡೆಯುತ್ತ ಪೂರ್ಣತೆಯತ್ತ ಸಾಗುವ ಅವಳ ಸಾಧನೆ ಸ್ತ್ರೀ ಸಂವೇದನೆಯಿಂದಲೇ ಪ್ರಕಟಗೊಂಡಿದೆ. ಅಕ್ಕನ ಆನಂದದ ಅನುಭೂತಿ ಹೊರಹೊಮ್ಮಿದ ವಚನಗಳ ಮೂಲ ಕೂಡ ಸತಿಪತಿ ಭಾವವೇ ಆಗಿದೆ. ಅಲ್ಲೆಲ್ಲ ತೀರ ಸಾಮಾನ್ಯ ಹೆಣ್ಣಿನ ಅನುಭವಗಳೇ ಅಕ್ಕನ ಅನುಭವಗಳಾಗಿವೆ. ದಾಂಪತ್ಯ, ಪ್ರೇಮ, ಮಿಲನ, ವಿರಹ, ಸತಿಪತಿ ಕೂಟದ ಆನಂದಾನುಭವಗಳನ್ನು ಸ್ತ್ರೀಯಾಗಿ ಸಂಕೋಚವಿಲ್ಲದೆ ನಿರ್ಭೀತಿಯಿಂದ ವ್ಯಕ್ತಗೊಳಿಸಿದ ಅಕ್ಕಮಹಾದೇವಿ ಹೆಣ್ಣು, ಹೆಣ್ತನಕ್ಕೆ ಘನತೆಯನ್ನು ತಂದುಕೊಟ್ಟಿದ್ದಾಳೆ. ಅಕ್ಕಮಹಾದೇವಿಯ ಸಮಕಾಲೀನ ಶರಣೆಯರು ಹೆಣ್ಣಿನ ಸಂವೇದನೆಗಳನ್ನಾಗಲಿ, ವೈಯಕ್ತಿಕ

ದುಃಖ ದುಮ್ಮಾನಗಳನ್ನಾಗಲಿ, ಮುಕ್ತವಾಗಿ ನಿರ್ಭಿಡೆಯಿಂದ ಹಂಚಿಕೊಂಡದ್ದು ತುಂಬ ಕಡಿಮೆಯೇ. ಆಧ್ಯಾತ್ಮಿಕ ಪಥದಲ್ಲಿ ಎದುರಾದ ಒಳಹೊರಗಿನ ತುಡಿತಗಳನ್ನು ಅಭಿವ್ಯಕ್ತಗೊಳಿಸಿದ್ದೂ ಸಹ ಕ್ವಚಿತ್ತಾಗಿ ಕೆಲವರಲ್ಲಿ ಕಂಡುಬರುತ್ತದೆ.

ಬಸವಣ್ಣನವರ ಪತ್ನಿ ಗಂಗಾಂಬಿಕೆ ತನ್ನ ತಾಯ್ತನದಲ್ಲಿ ಕಂದನನ್ನು ಕಳೆದುಕೊಂಡ ಅನುಭವವನ್ನು ತೀವ್ರ ಪ್ರಲಾಪದ ನೋವಿನ ಧ್ವನಿಯನ್ನು ಹೊರಹಾಕಿದ ರೀತಿ ಸ್ತ್ರೀಪರವಾದ ಸಂವೇದನೆಯನ್ನು ವ್ಯಕ್ತಗೊಳಿಸುತ್ತದೆ. ಆದರದು ಅಕ್ಕನ ಬದುಕಿನ ರೀತಿಯಂತಲ್ಲ. ಲೌಕಿಕ ಸತಿಯಾಗಿ ಸಾಧ್ವಿಯಾಗಿ ಬಾಳಿದ ಗಂಗಾಂಬಿಕೆ ತನ್ನ ದುಃಖವನ್ನು ಹಂಚಿಕೊಂಡಿರುವುದು ಕೂಡ ಸಾಮಾನ್ಯ ಸ್ತ್ರೀಯಂತೆಯೇ ಅವಳು ತನ್ನ ಹೆತ್ತ ಹಸುಳೆಯನ್ನು ಕಳೆದುಕೊಂಡು ಕಳವಳಿಸುವ ಅಭಿವ್ಯಕ್ತಿ ಚಂದ್ರಮತಿಯ ಸಂಕಟವನ್ನೇ ಹೋಲುತ್ತದೆ. ಕರುಣರಸವನ್ನೇ ಹರಿಸುವ ಆ ದುಃಖದ ಅಭಿವ್ಯಕ್ತಿ ವಚನಕಾರ್ತಿಯರಲ್ಲೆಲ್ಲ ಕಾಣದ ವ್ಯಕ್ತಿಗತ ಹಿನ್ನೆಲೆಯ ಸ್ತ್ರೀಪರ ಧ್ವನಿಯಾಗಿದೆ.

"ಒಂದು ಹಾಳಭೂಮಿಯ ಹುಲಿಬಂದು
ಎನ್ನ ಎಳಗರುವ ಭಕ್ಷಿಸಿತ್ತಲ್ಲಾ!
ಆ ಹುಲಿ ಹಾಳಿಗೆ ಹೋಗದು.
ಆ ಹುಲಿ ಎಳೆಗರುವ ಕಂಡು ಜನನಿಯಾಯಿತ್ತು.
ಇದನೇನೆಂಬೆ ಗಂಗಾಪ್ರಿಯ ಕೂಡಲಸಂಗಮದೇವಾ?"[೪೮]

ಪತಿಯಾಜ್ಞೆಯನ್ನೇ ಪ್ರತಿಯಾಡದೆ ಪರಿಪಾಲಿಸಿದ ಪತಿವ್ರತೆ, ಪತ್ನಿ ಗಂಗಾಂಬಿಕೆ ಸತಿ ನಿಷ್ಠೆಯಲ್ಲಿ ಪರಾಕಾಷ್ಠತೆಯನ್ನು ಪಡೆದವಳು. ಸಮರ್ಪಣೆಯ ಸೇವೆಯಲ್ಲಿ ಸಂತೋಷಿಸಿದ ಶಿವಶರಣೆ ಗಂಗಾಂಬಿಕೆಗೆ ತನ್ನ ಸ್ವಂತಿಕೆ, ಅಸ್ತಿತ್ವದ ಆಕಾಂಕ್ಷೆಗಳಿಲ್ಲ. ಆದರೆ ಅವಳ ಬದುಕಿನಲ್ಲಿ ಬಂದೆರಗಿದ ಮಗನ ಸಾವಿನ ನೋವು, ನಿರಾಶೆ, ಕಂಗೆಡಿಸಿದ್ದು, ಆ ತಲ್ಲಣ ತಣಿಸುವ ಸಾಂತ್ವನದ ಪರಿಯನ್ನು ಪತಿಯಿಂದಲೇ ಪಡೆದುಕೊಂಡರೂ ಅವಳನುಭವಿಸಿದ ಅಂತರಾಳದ ಆರ್ತತೆ ಆವರಿಸಿದ ಅಭಿವ್ಯಕ್ತಿ, ಗಂಗಾಂಬಿಕೆಯಲ್ಲಿ ಆಪ್ತತೆಯಿಂದ ಪ್ರಕಟಗೊಂಡಿದೆ.

"ಅವಳ ಕಂದ ಬಾಲಸಂಗ, ನಿನ್ನ ಕಂದ ಚೆನ್ನಲಿಂಗ
ಎಂದು ಹೇಳಿದರಮ್ಮಾ ಎನ್ನ ಒಡೆಯರು.
ಫಲವಿಲ್ಲದ ಕಂದನಿರ್ಪನವಳಿಗೆ
ಎನಗೆ ಫಲವಿಲ್ಲ, ಕಂದನಿಲ್ಲ.
ಇದೇನೋ ದುಃಖದಂದುಗ
ಗಂಗಾಪ್ರಿಯ ಕೂಡಲಸಂಗಮದೇವಾ?"[೪೯]

ಲಿಂಗಾನುಸಂಧಾನದಲ್ಲಿ ನೋವನ್ನು ಮರೆಯಬೇಕೆಂಬ ಪತಿಯ ಸಲಹೆಯನ್ನು ಸಹಜವಾದ ನಿರೂಪಣೆಯಲ್ಲಿ ಹಿಡಿದಿಟ್ಟ ಗಂಗಾಂಬಿಕೆಯ ಮಾತೃ ಹೃದಯದ ನೋವು ಆರದಿರುವ ಗತಿಯನ್ನು, ಮುಂದುಗಾಣದ ಬದುಕಿನ ನಿರಾಶೆಯ ಉಸಿರು ಅವಳ ಅಭಿವ್ಯಕ್ತಿಯಲ್ಲಿದೆ. ಶಿವಶರಣೆ ಗಂಗಾಂಬಿಕೆಯ ದುಃಖ ಸಾಮಾನ್ಯ ಮಾತೃತ್ವದ ಸ್ತ್ರೀಯ ಅಭಿವ್ಯಕ್ತಿಯೇ ಆಗಿದೆ. ಅದೇ ವ್ಯವಸ್ಥೆಯಲ್ಲಿ ಬದುಕಿನ ಎಲ್ಲ ಸುಖ ದುಃಖಗಳನ್ನು ಕಂಡ ನೀಲಾಂಬಿಕೆ ಮನೋಸ್ಥೈರ್ಯವುಳ್ಳ ಶಿವಶರಣೆ. ಬಸವಣ್ಣನವರ ವಿಚಾರ ಪತ್ನಿಯಾದ ಅವಳು ದುಃಖವನ್ನು ಕಂಡುಂಡವಳಾದರೂ ಸಂಯಮ ದಿಂದಲೇ ಮುನ್ನಡೆದು ಬದುಕಿನ ಸಂಕಷ್ಟಗಳಿಗೆ ಸೋಲದ ಮನೋಬಲವನ್ನು ಬೆಳೆಸಿಕೊಂಡವಳು. ಹೆಣ್ಣುತನವನ್ನು ಹಿರಿಮೆಗೆ ಹಾದಿ ಮಾಡಿಕೊಂಡವಳು ನಿಲಾಂಬಿಕೆ. ಸ್ತ್ರೀ ಸಹಜವಾದ ಅವಳ ಅಭಿವ್ಯಕ್ತಿಯಲ್ಲಿ ಅಪರಿಮಿತವಾದ ಆತ್ಮವಿಶ್ವಾಸವಿದೆ.

> "ಹಂದೆಯಲ್ಲ ನಾನು,
> ಹರುಷದ ಧೈರ್ಯವುಳ್ಳ ಹೆಣ್ಣು ನಾನು.
> ಕಾಮವನಳಿದವಳಾದ ಕಾರಣ
> ಬಸವನ ಹಂಗೆನಗಿಲ್ಲವಯ್ಯ.
> ಭ್ರಮೆಯಡಗಿ ಕಲೆನಷ್ಟವಾಗಿ ಮುಖವರತು
> ಮನವಿಚಾರವ ಕಂಡೆನಯ್ಯ ಸಂಗಯ್ಯ."[೫೦]

ಹೆಣ್ತನವಿಡಿದು ಹರುಷವನ್ನು ಹೊಂದಿದ ಹೆಮ್ಮೆ ನೀಲಾಂಬಿಕೆ. ತಾನು ಹೇಡಿಯಲ್ಲ ಎಂಬ ಹೇಳಿಕೆಯೇ ಅವಳು ಹೆಣ್ತನವನ್ನು ಹಿರಿಮೆಯಿಂದಲೇ ಗ್ರಹಿಸಿದವಳು ಎಂಬುದನ್ನು ಸಾಕ್ಷೀಕರಿಸಿದೆ. ಧೈರ್ಯವುಳ್ಳ ಹೆಣ್ಣು ನಾನೆಂಬ ದೃಢತೆ ನೀಲಾಂಬಿಕೆಯಲ್ಲಿ ಸ್ಥಿರಗೊಂಡು ಸ್ಥಿತಪ್ರಜ್ಞೆಯ ಭಾವ ಅಳವಟ್ಟಿದೆ. 'ಬಸವನ ಹಂಗೆನಗಿಲ್ಲ' ಮಾತಿನ ಹಿಂದಿನ ಧ್ವನಿ ತುಂಬ ಸ್ಪಷ್ಟ, ಅವಳು ಸೂಕ್ಷ್ಮತೆಯುಳ್ಳವಳು. ಸಾಧನೆಯ ಭರದಲ್ಲಿ ಸತಿಯ ಸಂವೇದನೆಗಳನ್ನು ನಿರ್ಲಕ್ಷಿಸಿದ ಬಸವಣ್ಣನವರು ಸಂಗಾತಿಯ ಸ್ತ್ರೀ ಸಹಜವಾದ ಅಭೀಪ್ಸೆ, ಆಕಾಂಕ್ಷೆಗಳನ್ನು ಅರಿಯದಿದ್ದಾಗ, ಅರಿವಿನಿಂದಲೇ ಕಾಮನ ಹಂಗನ್ನು ಹರಿದುಕೊಂಡ ಹೆಣ್ಣು ನೀಲಾಂಬಿಕೆ. ಅವಳ ಅಭಿವ್ಯಕ್ತಿಯ ಆಂತರ್ಯದಲ್ಲಿ ಹೆಣ್ಣು ಸಹಜವಾದ ಸಂವೇದನೆಗಳು ತಣಿಯದೇ ಹೋದ ಭಾವವೊಂದು ಹುದುಗಿರುವುದು ಸ್ಪಷ್ಟವಾಗುತ್ತದೆ. ಆ ಭಾವವನ್ನು ಹೇಗಾದರೂ ಮಾಡಿ ಹೋರಾಡಿ ಬದಲಿಸುವ ಪ್ರಯತ್ನವೂ ಅವಳಲ್ಲಿದೆ. ತನ್ನ ಭಾವನೆಗಳನ್ನು ಅದುಮಿಟ್ಟುಕೊಂಡು ಅಳುತ್ತ ಕೂರುವ ಸ್ತ್ರೀಯಂತಲ್ಲ ನೀಲಾಂಬಿಕೆ. ಸ್ತ್ರೀ ಸಹಜ ಸಂವೇದನೆಗಳನ್ನು ಸಾಧನೆಯಿಂದ ಮೀರುವ ಪ್ರಯತ್ನ ಮಾಡಿ ಬಸವನ ಹಂಗನ್ನು ಇಲ್ಲವಾಗಿಸಿಕೊಂಡು ಇಹದ ಬದುಕಿನಲ್ಲಿ ಪಾರಮಾರ್ಥಿಕ ಬದುಕನ್ನು ಸಾಕಾರ ಮಾಡಿಕೊಂಡು ಸಂಗಯ್ಯನ ಸಾಕ್ಷಿಯಾಗಿ ಸ್ಥೈರ್ಯವನ್ನು ತಂದುಕೊಂಡವಳು.

ಅಕ್ಕಮಹಾದೇವಿ, ನೀಲಮ್ಮ ಆತ್ಮಬಲದಲ್ಲಿ ನಿಸ್ಸೀಮರು. ಹೆಣ್ಣು ಶರೀರವಿಡಿದು ಹೆಣ್ತನ, ರೂಪು, ನಾಮಗಳನ್ನು ಮೀರಿ ಮಹೋನ್ನತ ನಿಲುವಿನಲ್ಲಿ ನಿಂತು ಅನುಭಾವದ ಸಿದ್ಧಿಯನ್ನು ಸ್ತ್ರೀಯರು ಪುರುಷರಂತೆಯೇ ಪಡೆಯಬಹುದೆಂಬುದನ್ನು ಸಾಧಿಸಿ ತೋರಿದವರು. ಅಕ್ಕಮಹಾದೇವಿ ಕೌಟುಂಬಿಕ ಸಾಮಾಜಿಕ ಬಂಧಗಳನ್ನು ಕಳಚಿಕೊಂಡು ಅನುಭಾವದ, ಆಧ್ಯಾತ್ಮದ ಅನುಸಂಧಾನಕ್ಕಾಗಿ ಹಗಲು ಇರುಳು, ಒಳಹೊರಗೂ ಹೋರಾಡಿ ಸಿದ್ಧಿತ್ವ ಪಡೆದವಳು.

ನೀಲಾಂಬಿಕೆ ಒಂದು ಕೌಟುಂಬಿಕ, ಸಾಮಾಜಿಕ ಪರಿಧಿಯೊಳಗಿದ್ದು, ಪಾರಮಾರ್ಥಿಕ ಅನುಭಾವವನ್ನು ಪಡೆಯಲು ಸಾಧ್ಯವೆಂಬುದನ್ನು ಸಾಧಿಸಿದವಳು. ಬದುಕು ಮತ್ತು ಅಭಿವ್ಯಕ್ತಿಯಲ್ಲಿ ಅಕ್ಕಮಹಾದೇವಿಗಿಂತಲೂ ಭಿನ್ನತೆಯನ್ನು ಹೊಂದಿದ್ದರೂ ನೀಲಾಂಬಿಕೆ ಅದ್ವೈತಾನಂದವನ್ನು ಪಡೆದ ಶ್ರೇಷ್ಠ ಅನುಭಾವಿ ಶರಣೆಯಾಗಿ ಗುರುತಿಸಿಕೊಂಡವಳು. ತಾನು ಸಾಧಿಸಿದ ಎತ್ತರವನ್ನು ಮಾರ್ಮಿಕವಾಗಿ ಅಭಿವ್ಯಕ್ತಗೊಳಿಸಿದ್ದಾಳೆ.

"ಹುಟ್ಟುಗೆಟ್ಟೆ ನಾನು, ತೊಟ್ಟ ಬಿಟ್ಟ ನಾನು,
ಕಟ್ಟಕ್ಕರಿನ ಸುಖವನಂಗವಿಸಿ ನಿರಂಗಿಯಾದೆ ನಾನು.
ನಿನ್ನ ಬಯಲುಹನಳಿದೆ ನಾನು;
ನನ್ನ ಕುರುಹ ಕಳೆದೆ ನಾನು.
ಎಸವ ಬಸವನ ಬೆಸುಗೆಯ ಬಿಟ್ಟೆ;
ಸಂಗಯ್ಯನಲ್ಲಿ ರೂಪವಳಿದ ಹೆಣ್ಣು ನಾನು."[೫೧]

"ಹೆಸರಿಲ್ಲದ ರೂಪಕಂಡು
ಹೆಸರಳಿದು ಹೆಣ್ಣುರೂಪ ತಾಳಿದೆ ನಾನು.
ಕುರುಹಿಲ್ಲದ ಮೂರ್ತಿಯ ಕಂಡು,
ಅದ್ವೈತಾನಂದಿಯಾದೆ ನಾನು.
ಪ್ರಣವ ಜ್ಯೋತಿಷ್ಪವರ್ಣವ ತಿಳಿದು
ಪರಂಜ್ಯೋತಿಲಿಂಗವಾದೆನಯ್ಯ ಸಂಗಯ್ಯ."[೫೨]

ಒಂದು ಸಂಕೀರ್ಣ ವ್ಯವಸ್ಥೆಯೊಳಗಿದ್ದು ಧೀರತೆಯಿಂದಲೇ ಬದುಕನ್ನು ಕಟ್ಟಿಕೊಂಡ ನೀಲಾಂಬಿಕೆ 'ಶರಣಸತಿ ಲಿಂಗಪತಿ' ಸ್ಥಾಯಿಭಾವವನ್ನು ಅಳವಡಿಸಿಕೊಂಡು ಲೌಕಿಕ ಪತಿಗೆ ಸತಿಯಾಗಿದ್ದುಕೊಂಡು ಅಲೌಕಿಕ ಲಿಂಗಪತಿಯ ಅನುಭಾವವನ್ನು ಸಾಧಿಸಿದ ಪಾರಮಾರ್ಥ ಮತ್ತು ಪ್ರಪಂಚವೆರಡನ್ನು ನಡೆಸಿದ ಸ್ಥಿತಪ್ರಜ್ಞಳು. ಆಯಾ ಹಂತದ ಭಾವಾಭಿವ್ಯಕ್ತಿ ಅವಳಲ್ಲಿ ಸಹಜ ಸೌಂದರ್ಯದಿಂದಲೇ

ಪ್ರಕಟವಾಗಿದೆ. ಇಹಪರಗಳೆರಡನು ಸಾಧಿಸಲು ಕಠಿಣವೆಂಬ ನಿಲುವು ಅಕ್ಕಮಹಾದೇವಿಯದು. ಬಿಲ್ವ ಬೆಳವಲ ಕಾಯಿಯನ್ನು ಒಂದಾಗಿ ಹಿಡಿದಂತಹ ಸಂದಿಗ್ಧ ಸ್ಥಿತಿ. ಸಂಸಾರ ಮತ್ತು ಆಧ್ಯಾತ್ಮ ಸಾಧನೆ, ಎರಡನ್ನೂ ಒಂದಾಗಿ ಸಮರಸಗೊಳಿಸಿದ ಸಾಧನೆ ನೀಲಾಂಬಿಕೆ ಮತ್ತು ಅವಳ ಸಮಕಾಲೀನ ಬಹುತೇಕ ಶರಣೆಯರದು. ಬೊಂತಾದೇವಿ, ಗೊಗ್ಗವ್ವೆ ವಿರಾಗಿಣಿಯರು ಆಧ್ಯಾತ್ಮಸಾದನೆಯಲ್ಲಿ ತಮ್ಮದೇ ಆದ ಎತ್ತರದ ನಿಲುವನ್ನು ಸಾಧಿಸಿದವರು. ಲಿಂಗಮ್ಮ, ಅಮುಗೆ ರಾಯಮ್ಮ, ಮುಕ್ತಾಯಕ್ಕ ತಾತ್ವಿಕ ಅಭಿವ್ಯಕ್ತಿಯಲ್ಲಿ ಗುರುತಿಸಿಕೊಂಡವರು. ಅಕ್ಕಮಹಾದೇವಿ ಮತ್ತು ಸಮಕಾಲೀನ ಶಿವಶರಣೆಯರಲ್ಲಿ ಪ್ರತಿಯೊಬ್ಬರೂ ವಿಶಿಷ್ಟ ವ್ಯಕ್ತಿತ್ವ ಮತ್ತು ಅಭಿವ್ಯಕ್ತಿಯನ್ನು ಸಾಧಿಸಿ ಸ್ತ್ರೀ ಪರಂಪರೆಯಲ್ಲಿ ಹಿರಿದಾದ ಸ್ಥಾನವನ್ನು ಪಡೆದುಕೊಂಡವರು.

ಕಾಳವ್ವೆಯರು, ಆಯ್ದಕ್ಕಿ ಲಕ್ಕಮ್ಮ, ಸೂಳೆಸಂಕವ್ವೆಯಂತಹ ದಲಿತ, ಹಿಂದುಳಿದ ವರ್ಗದ ವಚನಕಾರ್ತಿಯರು ಸ್ಥಾಪಿತ ಮೌಲ್ಯಗಳಿಗೆ ಎದುರಾಗಿ ಧಿಕ್ಕರಿಸುವ ಧೃಡತೆಯಿಂದ ದಿವ್ಯಾನುಭವವನ್ನು ಸಾಧಿಸುವುದು ಸಾಧ್ಯವೆಂಬ ಪ್ರಗತಿಪರ ಜೀವನಕ್ಕೆ ಸಾಕ್ಷಿಯಾಗಿ ನಿಂತವರು. ಹನ್ನೆರಡನೇ ಶತಮಾನದಲ್ಲಿ ಏಕಕಾಲದಲ್ಲಿ ೩೫ಕ್ಕಿಂತಲೂ ಹೆಚ್ಚು ವಚನಕಾರ್ತಿಯರು ಸಾಹಿತ್ಯ ಸೃಷ್ಟಿಗೈದುದು ಜಾಗತಿಕ ಇತಿಹಾಸದಲ್ಲಿಯೇ ವಿಶಿಷ್ಟತೆಯನ್ನು ಸಾಧಿಸಿದ ಅದ್ವಿತಿಯ ಕಾಲಘಟ್ಟವದು. ಅವರೆಲ್ಲರ ಬದುಕು ಮತ್ತು ಬರಹಗಳಲ್ಲಿ ಭಿನ್ನತೆಯಿದ್ದರೂ ಸಾಹಿತ್ಯ ಪ್ರಪಂಚಕ್ಕೆ ಅವರ ಕೊಡುಗೆ ಅನನ್ಯವಾಗಿದೆ. ವ್ಯಕ್ತಿಗತ ಬದುಕಿನಲ್ಲಿ ಔನತ್ಯ ಸಾಧಿಸಿದ ಶಿವಶರಣೆಯರು ವೈವಿಧ್ಯಮಯವಾದ ವಿಫುಲವಾದ ಸಾಹಿತ್ಯಕೃಷಿಗೈದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಲೋಕದ ಅನುಪಮವಾದ ಒಡತಿಯರು ವಚನಕಾರ್ತಿಯರು. "ಸಾಹಿತ್ಯಿಕವಾಗಿ ಶರಣೆಯರ ವಚನಗಳು ಶರಣರ ವಚನಗಳ ಶಿಲ್ಪ ಅಲಂಕಾರ ಭಾಷೆ, ಶೈಲಿ ತಂತ್ರಗಳ ದಟ್ಟವಾದ ಪ್ರಭಾವಲಯದಲ್ಲಿಯೇ ಮೂಡಿಬಂದಿದ್ದರೂ ಅಕ್ಕಮಹಾದೇವಿಯ ವಚನಗಳು ಹೆಚ್ಚುಮಟ್ಟಿಗೆ ಸ್ವಂತಿಕೆಯನ್ನು ತೋರುತ್ತವೆ. ಈಕೆಯ ವಚನಗಳ ಭಾವತೀವ್ರತೆ, ಭಾಷೆಯ ಪ್ರಾಸಾಧಿಕತೆ, ರಚನೆಯಲ್ಲಿ ತೋರುವ ನಯನಾಜೂಕು, ಅಭಿವ್ಯಕ್ತಿಯ ಅನನ್ಯತೆ, ಲಯಗಾರಿಕೆ, ಭಾವಗೀತಾತ್ಮಕತೆ ಬಸವಣ್ಣನವರನ್ನು ಬಿಟ್ಟರೆ ಉಳಿದ ಮತ್ತಾವ ವಚನಕಾರರಲ್ಲಿ ಇಷ್ಟು ಪರಿಣಾಮಕಾರಿಯಾಗಿ ಕಂಡುಬರುವುದಿಲ್ಲ."[೫೩]

ಅಕ್ಕಮಹಾದೇವಿಯ ಅನುಭಾವ, ಅನುಸಂಧಾನ, ಅಭಿವ್ಯಕ್ತಿಗಳು ಸಮಕಾಲೀನ ಇತರ ಶರಣೆಯರಿಗಿಂತ ಭಿನ್ನವಾಗಿಯೇ ಗ್ರಹಿತವಾಗುತ್ತವೆ. ಷಟಸ್ಥಲ ಮಾರ್ಗದಲ್ಲಿ ಮುನ್ನಡೆದ ಸ್ತ್ರೀಯೋರ್ವಳು ಸಾಧಿಸಿದ ಮೇರು ನಿಲುವು ಮಹಾದೇವಿಯಕ್ಕನದು. ಅವಳ ಬದುಕು ಮತ್ತು ಬರಹಗಳು ಹಿಡಿತಕ್ಕೆ ಸಿಗದಷ್ಟು ಅನಂತ, ಅಪರಿಮಿತ, ಹಲವು ಮಜಲುಗಳಲ್ಲಿ ಚಿತ್ರಿತಗೊಂಡ ಅಕ್ಕಮಹಾದೇವಿಯ ಜೀವನ ಮತ್ತು ಅಭಿವ್ಯಕ್ತಿ ಶೋಧಿಸಿದಷ್ಟೂ ಮತ್ತೂ ಉಳಿಯುವ ಗುಪ್ತನಿಧಿಯದು.

ಸಮಕಾಲೀನರಿಂದ ಇಂದಿನವರೆಗೂ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಅವಳು ಚಿತ್ರಿತವಾಗಿದ್ದರೂ, ಮತ್ತೆ ಮತ್ತೆ ಮರುಚಿಂತನೆಗೆ, ಚರ್ಚೆಗೆ, ಶೋಧನೆಗೆ ಒಳಗಾಗುತ್ತಲಿರುವ ಅಪೂರ್ವ ವ್ಯಕ್ತಿತ್ವದ ಅನುಭಾವಿ ಅಕ್ಕಮಹಾದೇವಿ.

ಅಕ್ಕಮಹಾದೇವಿಯ ಸಮಕಾಲೀನರಾದ ಇತರ ಶಿವಶರಣೆಯರಲ್ಲಿ ಸಮಾಜದ ವಿವಿಧ ಸ್ತರ ಜನಸಮುದಾಯವನ್ನು ಪ್ರತಿನಿಧಿಸುವರು. ಅವರು ಕೈಕೊಂಡ ಕಾಯಕ ಪರಿಭಾಷೆ ಆ ಹಿನ್ನೆಲೆಯಲ್ಲಿ ರಚನೆಗೊಂಡ ವಚನಗಳು ಆ ಕಾಲದ ಸಾಂಸ್ಕೃತಿಕ ಪರಂಪರೆಯನ್ನು ಕಟ್ಟಿಕೊಡುವಲ್ಲಿ ಸಮರ್ಥ ಆಧಾರಗಳೆನಿಸಿವೆ. ಸಮಾಜದಲ್ಲಿ ಬೇರೂರಿದ್ದ ಮೇಲುಕೀಳು, ಹೆಣ್ಣು ಗಂಡು, ಡಂಭಾಚಾರ, ಮೂಢನಂಬಿಕೆ, ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಅನಾಚಾರ, ಅಜ್ಞಾನಗಳನ್ನು ಖಂಡಿಸಿ, ವಿಡಂಬಿಸಿ, ವ್ಯಕ್ತಿಗತ ಸದಾಚಾರಕ್ಕೆ ಮಹತ್ವವನ್ನು ನೀಡಿದ ಶರಣರ ಮಾರ್ಗದಲ್ಲೇ ಮುನ್ನಡೆದ ಮಹಿಳಾ ವಚನಕಾರ್ತಿಯರು ಪುರುಷರಿಗೆ ಸರಿಸಮವಾಗಿಯೇ ತಮ್ಮನ್ನು ಗುರುತಿಸಿಕೊಂಡವರು. ಆಧ್ಯಾತ್ಮ, ವೈರಾಗ್ಯಕ್ಕೂ ಒಲಿದ ಕೆಲವು ವಚನಕಾರ್ತಿಯರು ಪುರುಷರೊಂದಿಗೆ ವಾದಿಸಿ ಬೋಧಿಸಿ ಎಚ್ಚರಿಸಿದರು. ಪತಿಯು ಮರೆತು ಅನ್ಯಚಿಂತನೆಗೆ ತೊಡಗಿದಾಗಲೂ ಜಾಗ್ರತಗೊಳಿಸಿದ ಮೋಳಿಗೆಯ ಮಹಾದೇವಿ, ಆಯ್ದಕ್ಕಿ ಲಕ್ಕಮ್ಮ ಅನನ್ಯತೆಯನ್ನು ಮೆರೆದಿದ್ದಾರೆ. "ಒಟ್ಟಾಗಿ ಹೇಳುವುದಾದರೆ ಅಕ್ಕಮಹಾದೇವಿ ಭಾವೋತ್ಕಟತೆ, ಕವಿಪ್ರತಿಭೆ, ಮುಕ್ತಾಯಕ್ಕನ ಬೌದ್ಧಿಕ ಪ್ರಖರತೆ, ಅಕ್ಕಮ್ಮ, ಅಮುಗೆರಾಯಮ್ಮ ಅವರ ಸಾತ್ವಿಕ ನಿಷ್ಠುರತೆ, ಲಿಂಗಮ್ಮ, ಮೋಳಿಗೆ ಮಹಾದೇವಿಯರ ತಾತ್ವಿಕನಿಷ್ಠೆ, ಲಕ್ಕಮ್ಮನ ಕಾಯಕಶ್ರದ್ಧೆ, ಉಳಿದವರ ವ್ರತನಿಷ್ಠೆ, ನೀಲಮ್ಮನ ಪತಿಭಕ್ತಿ, ನಾಗಮ್ಮನ ಭಾತೃಪ್ರೇಮ ಇವು ಒಬ್ಬೊಬ್ಬರ ವ್ಯಕ್ತಿತ್ವ ಮತ್ತು ವಚನಗಳ ಮುಖ್ಯಮೌಲ್ಯಗಳೆನಿಸಿವೆ."[೫೪]

ಅನಾದಿಕಾಲದಿಂದ ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಅವಗಣನೆಗೆ ಒಳಗಾದ ಸ್ತ್ರೀಯರು ಅಡಿಗೆಮನೆ, ಹೆರಿಗೆಮನೆ, ಅರಮನೆಗಳಿಗೆ ಸೀಮಿತಳಾಗಿ ಸ್ವಂತ ವ್ಯಕ್ತಿತ್ವ ವಿಚಾರ, ಅಕ್ಷರ ಅರಿವಿನಿಂದ ಬಹುದೂರ ಉಳಿದ ಮಹಿಳೆಯರು ಮನೆಗೆ ಬಂಧಿತಳಾಗಿಯೇ ಉಳಿದದ್ದು ಕಟು ಸತ್ಯ. ಹೊಸ ಮತ, ಧರ್ಮಗಳು ಉದಯವಾಗಿ ಅಲ್ಲಲ್ಲಿ ಮಹಿಳೆಯರ ಸ್ಥಿತಿಗತಿಗಳ ಸುಧಾರಣಾ ಕ್ರಮಗಳು ನಡೆದಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ಗೋಚರಿಸುವುದಿಲ್ಲ. ಸಾವಿರಾರು ವರ್ಷಗಳಿಂದ ಸನಾತನ ಸಂಪ್ರದಾಯದ ಸುಳಿಯಲ್ಲಿ ಸಿಲುಕಿದ ಸ್ತ್ರೀಕುಲ ಶೋಷಣೆ, ಅವಮಾನ, ಅವಗಣನೆಗೆ ಒಳಗಾಗುತ್ತಲೇ ಬಂದಿರುವುದರಿಂದ ಅವರ ವ್ಯಕ್ತಿತ್ವ ಬೆಳಕಿನೆಡೆಗೆ, ಬೆಳವಣಿಗೆ ಕಡೆಗೆ ಮುಖಮಾಡಿರುವುದು ತುಂಬ ಕಡಿಮೆ. ಸ್ತ್ರೀಗೆ ಪತಿಯೇ ಪರದೈವ ನೈತಿಕ, ಸಾಮಾಜಿಕ ಕಟ್ಟಳೆಗಳು ಸ್ತ್ರೀಯರಿಂದ ನೈತಿಕತೆಯನ್ನು ಪತಿ, ಪುರುಷನಿಗೆ ತೋರಬೇಕಾದ ಗೌರವವನ್ನು ಪ್ರತಿಪಾದಿಸುತ್ತಲೇ ಬಂದಿವೆ. ಆದರೆ ಅದೇ ಪುರುಷನಿಂದ ಸ್ತ್ರೀಗೆ ದೊರಕಬೇಕಾದ ಗೌರವ ಸ್ಥಾನಮಾನವನ್ನು ಗೌಣವಾಗಿರಿಸ

ಲಾಗಿದೆ. ಹೀಗಾಗಿ ಹಲವು ನೆಲೆಗಳಿಂದ ತಾರತಮ್ಯಕ್ಕೊಳಗಾದ ಮಹಿಳೆಯರು ಮುಂಚೂಣಿಯಲ್ಲಿ ಧ್ವನಿಯೆತ್ತದೇ, ಎತ್ತಿದರೂ ಅದನ್ನು ವ್ಯವಸ್ಥೆ ಒಟ್ಟಾಗಿ ಅಡಗಿಸಿದ ಸಂದರ್ಭಗಳು ಆಯಾ ಕಾಲ ಘಟ್ಟ ಮತ್ತು ಸ್ಥಳಗಳಲ್ಲಿ ಜರುಗಿವೆ. ಜರುಗುತ್ತಲಿರುವುದು ವಾಸ್ತವಿಕ ಅಂಶ. ಸ್ಥಾಪಿತ ಸಂಪ್ರದಾಯ ವ್ಯವಸ್ಥೆಯನ್ನು ಸಮರ್ಥವಾಗಿ ಎದುರಿಸಿ ನವಸಮಾಜದ ಪರಿಕಲ್ಪನೆಯನ್ನು ಹುಟ್ಟು ಹಾಕಿದ ಬಸವಾದಿ ಶರಣರು ಮಹಿಳೆಯನ್ನು ಮುಕ್ತ ಅಭಿವ್ಯಕ್ತಿಗೆ ತೆರೆದುಕೊಳುವಂತಹ ವ್ಯವಸ್ಥೆ ಅವಕಾಶ ಮಾಡಿಕೊಟ್ಟಿದ್ದರಿಂದ ಏಕಕಾಲದಲ್ಲಿ ಹಲವು ಸ್ತರದಿಂದ ಬಂದ ಮಹಿಳೆಯರು ಅಕ್ಷರ ಅರಿವು ಪಡೆದು ತಾವು ಪರಿವರ್ತಿತರಾಗಿ ಸಮಾಜ, ಆಧ್ಯಾತ್ಮ, ಧಾರ್ಮಿಕ ವಿಚಾರಗಳ ಚಿಂತನೆಗೈದರು. ಸ್ವವಿಮರ್ಶೆ ಮತ್ತು ಸಮಾಜ ವಿಮರ್ಶೆಯನ್ನು ಮಾಡಿದ ವಚನಕಾರ್ತಿಯರು ಮರ್ತ್ಯದಲ್ಲಿ ಮಹಿಳೆ ಮಹೋನ್ನತವಾದ ಗುರಿಯನ್ನು ಸಾಧಿಸಲು ಸಾಧ್ಯವೆಂಬುದನ್ನು ತೋರಿದರು.

ಪತಿಯೊಂದಿಗೆ ಸತಿ ಸಮರಸ ದಾಂಪತ್ಯದಿಂದ, ಮುಕ್ತತೆ ಹೊಂದಿದಳು. ಆದ್ದರಿಂದ ಅವರನ್ನು ಪುಣ್ಯ ಸ್ತ್ರೀಯರೆಂದು ಗೌರವಿಸಲಾಯಿತು. ಸನಾತನ ಪತಿವೃತೆಯರಂತಲ್ಲ ಇವರು. ಪರಿಮಿತ ಸ್ವಾತಂತ್ರ್ಯ ಪರಿಧಿಯೊಳಗೆ ಸಮಾನತೆಯನ್ನು ಪಡೆದುಕೊಂಡು ಆ ಪರಿಧಿಯನ್ನು ಮೀರಲೆತ್ನಿಸಿದವರು. ಅನುಭಾವ ಅಭಿವ್ಯಕ್ತಿಯಲ್ಲಿ ಪುರುಷರ ಸರಿಸಾಟಿಯಾಗಿ ನಿಂತವರು ಶರಣೆಯರು. ಮುಕ್ತಾಯಕ್ಕ, ನೀಲಾಂಬಿಕೆ, ಅಕ್ಕಮ್ಮ, ಹಡಪದ ಲಿಂಗಮ್ಮ, ಅಮುಗೆ ರಾಯಮ್ಮ ಮೊದಲಾದವರು ಬೌದ್ಧಿಕ ಪ್ರಖರತೆಯಿಂದ ಪುರುಷಶಕ್ತಿಗೂ ಸವಾಲು ಹಾಕಿ ಸಮರ್ಥತೆಯನ್ನು ಪಡೆದವರು.

ಸಮಾಜದಲ್ಲಿ ತಿರಸ್ಕಾರಕ್ಕೆ ಒಳಗಾದ ದಲಿತ ಜನಾಂಗದ ಧ್ವನಿಯಾಗಿಯೂ ತಮ್ಮನ್ನು ಗುರುತಿಸಿ ಕೊಂಡವರು ಕಾಳವ್ವೆ ಸೂಳೆಸಂಕವ್ವೆಯಂತವರು. ಶರಣ ಸಮುದಾಯದಲ್ಲಿ ಸ್ಥಾನ ಪಡೆದುಕೊಂಡು ಸಾಹಿತ್ಯರಚನೆ ಮಾಡಿರುವುದು ಗಮನಾರ್ಹವಾಗಿದೆ. ಅಕ್ಕಮಹಾದೇವಿ ಲೌಕಿಕ ಸತಿಪತಿ ದಾಂಪತ್ಯ ವ್ಯವಸ್ಥೆ ಧಿಕ್ಕರಿಸಿ ಪುರುಷಾಧಿಕಾರ ಪ್ರಭುತ್ವ ವ್ಯವಸ್ಥೆ, ಸಾಂಪ್ರದಾಯಿಕ ಸ್ಥಾಪಿತ ಮೌಲ್ಯಗಳನ್ನು ಒಟ್ಟಾಗಿ ಎದುರಿಸಿ ಭಕ್ತಿ ಮಾರ್ಗದಲ್ಲಿ ಬಂಡಾಯದ ಧ್ವನಿಯನ್ನು ಎತ್ತಿದ ದಿಟ್ಟೆ ಧೀರಶರಣೆ. ಪತಿಯೇ ಪರದೈವ ವ್ಯವಸ್ಥೆಗೆ ವ್ಯತಿರಿಕ್ತವಾಗಿ ದೇವರನ್ನು ಪತಿಯಾಗಿ ಸ್ವೀಕರಿಸಿ ಅದನ್ನೇ ಅಪ್ಪಿಕೊಂಡು ಒಪ್ಪಿಕೊಂಡು ಸಹ್ಯವಾಗಿಸಿ ಸಮಾಜದ ಪ್ರತಿರೋಧಕ್ಕೂ ಅಲೌಕಿಕ ಪತಿಯನ್ನೆ ಅಸ್ತ್ರವಾಗಿಸಿಕೊಂಡು ಅನುಭಾವದ ಗಮ್ಯ ಗುರಿಯನ್ನು ಮುಟ್ಟಿದವಳು.

ಅಕ್ಕಮಹಾದೇವಿ ತನ್ನಿಚ್ಛೆಯಂತೆಯೇ ಬದುಕನ್ನು ನಿರ್ಮಿಸಿಕೊಂಡವಳು. ಆ ಕಾರಣಕ್ಕಾಗಿಯೇ ಅವಳ ಮನಸ್ಥಿತಿಯನ್ನು ಒಪ್ಪದ ವ್ಯವಸ್ಥೆಯಲ್ಲಿ ವಿರೋಧವನ್ನು ಕಟ್ಟಿಕೊಳ್ಳಬೇಕಾಯಿತು. ತನ್ನ ವಿಚಾರಕ್ಕೆ ಕಟಬದ್ಧಳಾದ ಮಹಾದೇವಿಯಕ್ಕ ಹಲವು ಪ್ರತಿರೋಧಗಳ ನಡುವೆ ವ್ಯಕ್ತಿತ್ವಕ್ಕೆ ಹೊಳಹು ತಂದುಕೊಂಡವಳು. ಸಾಮಾನ್ಯ ಗೃಹಿಣಿ, ಸ್ತ್ರೀ ಪಾತ್ರಕ್ಕಿಂತಲೂ ಭಿನ್ನವಾದ ಅನುಭಾವಿಕ ಪಥದಲ್ಲಿ

ಸಾಗಿದ ಅಕ್ಕಮಹಾದೇವಿ ಪಾರಮಾರ್ಥಿಕ ಪತಿ ನಿಸ್ಸೀಮ ಚೆಲುವ ಚೆನ್ನಮಲ್ಲಿಕಾರ್ಜುನನ ಪ್ರತಿಮೆಯಲ್ಲಿ ತನ್ನನ್ನು ಅನಾವರಣಗೊಳಿಸಿಕೊಂಡವಳು. ಆದ್ದರಿಂದ ಅವಳ ಸಮಕಾಲೀನ ಶರಣೆಯರ ಬದುಕು, ವಿಚಾರಗಳಿಗಿಂತ ಎಲ್ಲರದಲ್ಲಿಯೂ ಇತರರಿಗಿಂತ ಭಿನ್ನವಾಗಿಯೇ ನಿಲ್ಲುತ್ತಾಳೆ.

ಅಡಿಟಿಪ್ಪಣಿ

೧. ಅಕ್ಕಮಹಾದೇವಿ ವಚನಗಳು ಸಾಂಸ್ಕೃತಿಕ ಮುಖಾಮುಖಿ, ೨೦೦೫, (ಸಂ) ಡಾ. ರಹಮತ ತರೀಕೆರೆ. ಪು. ೧೧೬.

೨. ಶಿವಶರಣೆಯರ ವಚನ ಸಂಪುಟ ೫, ೨೦೦೧. ಸಂ. ಡಾ. ವೀರಣ್ಣ. ರಾಜೂರ. ವ.ಸಂ. ೧೧೪.

೩. ಅದೇ, ವ.ಸಂ. ೭೫೮

೪. ಅದೇ, ವ.ಸಂ. ೭೭.

೫. ಅದೇ, ೩೯೨.

೬. ಅದೇ, ವ.ಸಂ. ೧೭.

೭. ಅದೇ, ವ.ಸಂ. ೨೩.

೮. ಅದೇ, ವ.ಸಂ. ೨೫೭.

೯. ಅದೇ, ವ.ಸಂ. ೧೬೨.

೧೦. ಅದೇ, ವ.ಸಂ. ೪೯೪.

೧೧. ಅಕ್ಕನ ವಚನಗಳು ೨೦೦೮ (ಸಂ) ಡಾ. ಎಲ್. ಬಸವರಾಜು, ವ.ಸಂ. ೧೧೭.

೧೨. ಅಕ್ಕಮಹಾದೇವಿ ವಚನಗಳು ಸಾಂಸ್ಕೃತಿಕ ಮುಖಾಮುಖಿ, ೨೦೦೫, (ಸಂ) ಡಾ. ರಹಮತ ತರೀಕೆರೆ, ಪು.ಸಂ. ೪೨.

೧೩. ಶಿವಶರಣೆಯರ ವಚನ ಸಂಪುಟ ೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೭೪೦.

೧೪. ಅದೇ, ವ.ಸಂ. ೭೫೧

೧೫. ಅದೇ, ವ.ಸಂ. ೧೨೩೩

೧೬. ಅದೇ, ವ.ಸಂ. ೭೪೯.

೧೭. ಅದೇ, ವ.ಸಂ. ೧೦೮೯.

೧೮. ಅದೇ, ವ.ಸಂ. ೧೪.

೧೯. ಅದೇ, ವ.ಸಂ. ೭೫೨.

೨೦. ಅದೇ, ವ.ಸಂ. ೭೪೩.

೨೧. ಅದೇ, ವ.ಸಂ. ೧೯೯೧.

೨೨. ಅದೇ, ವ.ಸಂ. ೭೫೦.

೨೩. ಅದೇ, ವ.ಸಂ. ೭೭೨.

೨೪. ಅದೇ, ವ.ಸಂ. ೧೨೩೪.

೨೫. ಅದೇ, ವ.ಸಂ. ೭೪೮.

೨೬. ಅದೇ, ವ.ಸಂ. ೭೪೭.

೨೭. ಅದೇ, ವ.ಸಂ. ೭೭೭.

೨೮. ಅದೇ, ವ.ಸಂ. ೭೨೮.

೨೯. ಅದೇ, ವ.ಸಂ. ೧೩೪೯.

೩೦. ಅದೇ, ವ.ಸಂ. ೧೦೯೦.

೩೧. ಅದೇ, ವ.ಸಂ. ೪೪೫.

೩೨. ಅದೇ, ವ.ಸಂ. ೭೩೫.

೩೩. ಅದೇ, ವ.ಸಂ. ೧೨೦೭.

೩೪. ಅದೇ, ವ.ಸಂ. ೧೨೨೯.

೩೫. ಅದೇ, ವ.ಸಂ. ೯೭.

೩೬. ಅದೇ, ವ.ಸಂ. ೩೦೮.

೩೭. ಅದೇ, ವ.ಸಂ. ೧೨೧೨.

೩೮. ಅದೇ, ವ.ಸಂ. ೧೨೧೪.

೩೯. ಅದೇ, ವ.ಸಂ. ೬೧೫.

೪೦. ಅದೇ, ವ.ಸಂ. ೧೦೬.

೪೧. ಅದೇ, ವ.ಸಂ. ೯೨೦.

೪೨. ಅದೇ, ವ.ಸಂ. ೪೨೯.

೪೩. ಅದೇ, ವ.ಸಂ. ೨೮೨.

೪೪. ಅದೇ, ವ.ಸಂ. ೨೭೮.

೪೫. ಅದೇ, ವ.ಸಂ. ೨೩೫.

೪೬. ಅದೇ, ವ.ಸಂ. ೩೯೧.

೪೭. ಅದೇ, ವ.ಸಂ. ೪೫.

೪೮. ಅದೇ, ವ.ಸಂ. ೭೫೫.

೪೯. ಅದೇ, ವ.ಸಂ. ೭೫೩.

೫೦. ಅದೇ, ವ.ಸಂ. ೧೦೮೦.

೫೧. ಅದೇ, ವ.ಸಂ. ೧೦೮೩.

೫೨. ಅದೇ, ವ.ಸಂ. ೧೦೮೫.

೫೩. ಅದೇ, ಪು. ೭೬.

೫೪. ಅದೇ, ಪು. ೭೭.

ಅಧ್ಯಾಯ ಮೂರು

ಅಕ್ಕಮಹಾದೇವಿಯ ವಚನಗಳ ಮೀಮಾಂಸೆಯ ರೂಪ ಸ್ವರೂಪ

ಅಧ್ಯಾಯ ಮೂರು

ಅಕ್ಕಮಹಾದೇವಿಯ ವಚನಗಳ ಮೀಮಾಂಸೆಯ ರೂಪ ಸ್ವರೂಪ

ವ್ಯಕ್ತಿಯ ಸೃಜನಶೀಲ ಮನಸ್ಸಿನ ಪ್ರತಿಭಾ ಮೂಸೆಯಿಂದ ನವ ಚಿಂತನೆ, ಶೋಧನೆ, ಕಲ್ಪನೆ, ಭಾವನೆ, ಅನುಭವಗಳು ಮೇಳವಿಸಿ ಉದಯಿಸಿದ ಭಾಷಿಕ ಅಭಿವ್ಯಕ್ತಿ ಸಾಹಿತ್ಯ ಕೃತಿ ಸಾರ್ವಕಾಲಿಕ ಅನ್ವಯತೆಯನ್ನು ಪಡೆದುಕೊಳ್ಳುತ್ತದೆ. ಚಿರಂತನ ಮೌಲ್ಯಗಳ ಪ್ರತಿನಿಧಿಕರಣವಾಗಿ ಹೊಸ ಅನ್ವೇಷಣೆಗೆ ತೆರೆದುಕೊಳ್ಳುತ್ತದೆ. ನಿರಂತರ ಗತಿಶೀಲತೆ ಗುಣವುಳ್ಳ ಸಾಹಿತ್ಯ ಮತ್ತು ಅದರ ತಾತ್ವಿಕತೆ ಆ ಕಾಲಕ್ಕಷ್ಟೇ ಅಲ್ಲದೆ ಆಯಾ ಕಾಲ, ಪ್ರದೇಶ ಭಾಷೆ ಸಂಸ್ಕೃತಿಗಳಾಚೆಗೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತದೆ.

ಚಲನಶೀಲ ಸಾಹಿತ್ಯದೊಳಗಣ ಮೌಲ್ಯಗಳು, ಪರಿಕಲ್ಪನೆಗಳು ಮರುಸೃಷ್ಟಿಗೆ, ವಿಮರ್ಶೆಗೆ ಕಾರಣವಾಗುವುದರಿಂದ ತಮ್ಮ ಪ್ರಸ್ತುತತೆಯನ್ನು ಉಳಿಸಿಕೊಳ್ಳುತ್ತವೆ. ಸಾಹಿತ್ಯದ ಪರಿಕಲ್ಪನೆಗಳ ವಿಮರ್ಶೆ ವಿವೇಚನೆ ಶೋಧನೆಯ ಪರಿಕ್ರಮ, ಪ್ರಕ್ರಿಯೆಯೇ ಮೀಮಾಂಸೆ. ಮೀಮಾಂಸೆಯ ಶಾಬ್ದಿಕ ಅರ್ಥ ವಿವೇಚನೆ, ವಿಚಾರ ಮಾಡು, ಕುಲಂಕುಷವಾಗಿ ಶೋಧಿಸು, ತಾರ್ಕಿಕತೆ, ಅವಲೋಕನ ವಿಭಿನ್ನ ಅರ್ಥವಲಯಗಳನ್ನು ಹೊಂದಿರುವಂತಹದು.

ಮೀಮಾಂಸೆ ಷಟ್‌ದರ್ಶನಶಾಸ್ತ್ರದ ಶೋಧನೆಯನ್ನೊಳಗೊಂಡ ಒಂದು ವಿವೇಚನಾ ಕ್ರಮ. "ಮೀಮಾಂಸೆಯು ಮೂಲತಃ ತತ್ವಶಾಸ್ತ್ರಕ್ಕೆ ಸಂಬಂಧಿಸಿದ ಪರಿಭಾಷೆ. ಯಾವುದಾದರೂ ಒಂದು ತತ್ವ ಶಾಸ್ತ್ರೀಯ ಧಾರೆಯನ್ನು ಪೂರ್ವಪಕ್ಷವಾಗಿ ಮಂಡಿಸಿ, ಅದನ್ನು ತರ್ಕಬದ್ಧವಾಗಿ ವಿಮರ್ಶಿಸಿ, ತಮ್ಮ ಪಕ್ಷವನ್ನು ಪ್ರತಿಷ್ಠಾಪನೆ ಮಾಡುವ ಕೆಲಸಕ್ಕೆ ಮೀಮಾಂಸೆ ಎನ್ನಲಾಗುತ್ತದೆ. ಸಾಹಿತ್ಯ ಚಿಂತನೆಕೂಡ ತತ್ವಶಾಸ್ತ್ರದ ಕೆಲಸವೆ ಆಗಿದೆ"[೧]

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ತನ್ನ ವಿಶಿಷ್ಟ ಚಿಂತನೆ ತಾತ್ವಿಕತೆಗಳಿಂದ ಅನನ್ಯತೆಯನ್ನು ಹೊಂದಿರುವ ವಚನಸಾಹಿತ್ಯ ತನ್ನ ಪ್ರಸ್ತುತತೆ ಮತ್ತು ಅನನ್ಯತೆಯಿಂದ ವಿಮರ್ಶೆಗೆ ಒಳಗಾಗುತ್ತ ಹೊಸ ಅಭಿವ್ಯಕ್ತಿ, ಚಿಂತನೆ, ಶೋಧನೆಗಳಿಗೆ ಹಿನ್ನೆಲೆಯನ್ನೊದಗಿಸುತ್ತ ಸಾಹಿತ್ಯದ ವೈವಿಧ್ಯಮಯ ಪ್ರಕಾರಗಳ ಸೃಷ್ಟಿಗೆ ಸ್ಫೂರ್ತಿಚೇತನವೂ ಆಗಿದೆ. ವಚನಸಾಹಿತ್ಯ ಅದರೊಳಗಿನ ಮೌಲ್ಯಗಳು, ಪರಿಕಲ್ಪನೆಗಳು ವೈವಿಧ್ಯಮಯವಾಗಿ ವಿಕಾಸಗೊಂಡು ವಿನೂತನವಾದ ಚಿಂತನಾ ಕ್ರಮವನ್ನು ಹುಟ್ಟುಹಾಕಿದೆ. ವಚನಗಳ ತಾತ್ವಿಕ ಸ್ವರೂಪ, ಸಿದ್ಧಾಂತ ದರ್ಶನಗಳ ಚರ್ಚೆ, ವಿಮರ್ಶೆ ವಚನಸಾಹಿತ್ಯ ಮೀಮಾಂಸೆ ಪರಿಭಾಷೆಗೆ ಪ್ರೇರಣೆಯಾಗಿದೆ. ಪ್ರಾಚೀನ ಕಾವ್ಯ ಮೀಮಾಂಸೆಯಂತೆಯೆ, ವಚನಗಳ ಮೀಮಾಂಸೆಯು ಪ್ರತ್ಯೇಕ ವಿಮರ್ಶೆಯ ಆಯಾಮವನ್ನು ಪಡೆದುಕೊಂಡಿದೆ. ವಚನಕಾರರು ತಮ್ಮ ವೈಯಕ್ತಿಕ ಭಾವನೆಗಳನ್ನು ವಚನಗಳಲ್ಲಿ ಅಭಿವ್ಯಕ್ತಿಗೊಳಿಸಿರುವಂತೆಯೇ ಸಮಕಾಲೀನ ಇತರರೊಂದಿಗೆ ಸಂವಾದ ಸಂವಹನ ಮಾರ್ಗವಾಗಿಯೂ ರೂಪಿತಗೊಂಡಿವೆ. ಮುಕ್ತ ಸಂವಹನದಿಂದ ತಾತ್ವಿಕ, ದಾರ್ಶನಿಕ, ಸಾಮಾಜಿಕ ಸಂಗತಿಗಳು ವಿಸ್ತೃತವಾಗಿ ಚರ್ಚೆಗೊಂಡು ಸಿದ್ಧಮೌಲ್ಯಗಳು, ಪರಿಕಲ್ಪನೆಗಳನ್ನು ವಚನಕಾರರು ಪಲ್ಲಟಗೊಳಿಸಿ ಪರ್ಯಾಯ ಮಾರ್ಗವನ್ನು ವ್ಯವಸ್ಥೆಯೊಳಗಿದ್ದು ಭಿನ್ನವಾಗಿ ಆಲೋಚಿಸಿರುವ ಹೊಸ ಪರಿಕಲ್ಪನೆಗಳನ್ನು ನಿರ್ಮಿಸಿದ್ದಾರೆ. ಅವರ ಪರ್ಯಾಯ ಮಾರ್ಗದ ಮುಖ್ಯ ಪರಿಕರವೇ ಭಾಷಿಕ ಅಭಿವ್ಯಕ್ತಿ.

ವಚನಕಾರರ ಭಾಷಿಕ ಮುಕ್ತ ಸಂವಹನದ ಅಭಿವ್ಯಕ್ತಿ, ವ್ಯಕ್ತಿಗತ ನೆಲೆಯಲ್ಲಿ ದೈವತ್ವ ಮತ್ತು ಸಮುದಾಯದ ಒಡನಾಟವನ್ನು ಒಳಗೊಂಡಿದೆ. ದೈವತ್ವದೊಂದಿಗೆ ಮುಕ್ತ ಸಂವಹನವನ್ನು ನಿರ್ಮಿಸಿಕೊಂಡವರು ಮುಖ್ಯವಾಗಿ ಮಹಾದೇವಿಯಕ್ಕ ಮತ್ತು ಬಸವಣ್ಣನವರು ಅದರಲ್ಲೂ ಅಕ್ಕಮಹಾದೇವಿ ದೇವರೊಂದಿಗೆ ಮುಕ್ತ ಒಡನಾಟವನ್ನು, ಸಂವಹನದ ಪರಿಪೂರ್ಣತೆಯನ್ನು ಸಾಧಿಸಿದವಳು. ಅವಳ ವಚನಾಭಿವ್ಯಕ್ತಿ ಹೆಚ್ಚಾಗಿ ತಾನೊಲಿದ ದೈವತ್ವವನ್ನೇ ಆವರಿಸಿರುವಂತಹದು. ಅಕ್ಕನ ವಚನಗಳ ಚರ್ಚೆಯನ್ನು ಚೆನ್ನಮಲ್ಲಿಕಾರ್ಜುನನ ಒಡನಾಟದ ಅಭಿವ್ಯಕ್ತಿಯನ್ನು ಹೊರತುಪಡಿಸಿ ಅರಿತುಕೊಳ್ಳಲು ಸಾಧ್ಯವಾಗದು.

ಅಕ್ಕಮಹಾದೇವಿಯ ವಚನಗಳ ವಿಮರ್ಶೆ ಮೀಮಾಂಸೆ ಮೂರು ಮುಖ್ಯವಾದ ಸಂಗತಿಗಳನ್ನು ಆಧರಿಸಿದೆ. ಹುಡುಕಾಟ, ಹೋರಾಟ, ಹುಟ್ಟುಗೆಡುವಿಕೆ ಇವುಗಳ ಸುತ್ತಲೂ ಅವಳ ಅಭಿವ್ಯಕ್ತಿ ಹರಡಿಕೊಂಡಿದೆ. ತನ್ನತನದಲ್ಲಿ, ಪ್ರಕೃತಿಯ ಅವಿರ್ಭಾವವಾದ ಪ್ರಕೃತಿಯಲ್ಲಿ ಹರನ ಆಸ್ತಿತ್ವದ ಹುಡುಕಾಟ ಆ ಹಾದಿಯಲ್ಲಿನ ಒಳಹೊರಗಿನ ಹೋರಾಟ ಅಂತಿಮವಾಗಿ ಹುಟ್ಟುಗೆಡುವುದು. ಪರಮಾತ್ಮನ ಶೋಧನೆ ಅದಕ್ಕಾಗಿಯೇ ವೇದನೆ ಮತ್ತು ನಿವೇದನೆಗಳೊಂದಿಗೆ ಒಳಹೊರಗಿನ ವಿಷಯಾದಿಗಳನ್ನು ನಿರ್ಮೂಲನೆಗೊಳಿಸಿಕೊಳ್ಳುತ್ತ ನಿರ್ವಲಯ ನಿಲುವನ್ನು ತಲುಪುವುದು.

ಈ ಎಲ್ಲ ಮಜಲುಗಳ ಅಭಿವ್ಯಕ್ತಿಯಲ್ಲಿ ಬೇಡವಾದುದರ ಬಗೆಗಿನ ನಿರಾಕರಣೆ, ತಾನೊಲಿದುದರ ಬಗೆಗಿನ ಸ್ವಿಕಾರ ಭಾವಗಳೇ ಪ್ರಧಾನವಾಗಿವೆ. ಅಕ್ಕನ ಭಾಷಿಕ, ಭಾವಾಭಿವ್ಯಕ್ತಿ ಬೆಳಕಿನ ಬದುಕಿಗಾಗಿ ಬಂಧಗಳನ್ನು ಬಿಡಿಸಿಕೊಳ್ಳುತ್ತ, ಸಮರಸ ಆನಂದದಲ್ಲಿ ತಾದಾತ್ಮ್ಯಗೊಳ್ಳುತ್ತದೆ. ಲೋಕೋತ್ತರ ಅನುಭಾವಕ್ಕಾಗಿ ಆಹ್ವಾನ ಮತ್ತು ವಿಸರ್ಜನೆ ಪರಸ್ಪರ ಮುಖಾಮುಖಿಯಾಗುವ ಪ್ರಕ್ರಿಯೆ ನಿರಂತರವಾಗಿ ನಡೆದಿರುವುದರಿಂದ ಬಯಲ ಆಹ್ವಾನ ಬಂಧಗಳ ವಿಸರ್ಜನೆಯ ಕುರಿತಾದ ಗಾಢ ಚಿಂತನೆಗಳಿವೆ. ಅಕ್ಕಮಹಾದೇವಿಯ ವಚನಗಳಲ್ಲಿ ಅನುಭವ, ಅನುಭೂತಿಗಳ ಸಮ್ಮಿಳನವಿದೆ. ಅಲ್ಲಲ್ಲ ರಸಾನುಭವ, ಧ್ವನಿಶಕ್ತಿಗಳು ಸಹಜವಾಗಿ ಒಡಗೂಡಿವೆ ಭಾವಗೀತಾತ್ಮಕ ಸ್ಪರ್ಶತೆಯನ್ನು ಹೊಂದಿದ ರಚನೆಗಳಾಗಿರುವದರಿಂದ ರಸಧ್ವನಿ ವಚನಕ್ಕೆ ಹಾಲು ಜೇನು ಬೆರೆತಂತೆ ಅಭಿನ್ನವಾಗಿ ಹೃದಯಂಗಮ ಹಾಡುಗಳಾಗಿ ಕಂಗೊಳಿಸಿವೆ. ತನ್ನಿಚ್ಛೆಯ ಸಾಧನೆಗೆ ಎದುರಾದವುಗಳಿಗೆಲ್ಲ ಧೀರೋಧಾತ್ತವಾಗಿಯೇ ಪ್ರತಿಕ್ರಿಯಿಸಿದ ಪ್ರತಿಕ್ಷಣದ ಭಾವಸಮುಚ್ಚಯಗಳವು. ವೇದನೆ, ನಿವೇದನೆಗಳ ನಿರೂಪಣೆ ಹೃದ್ಯವೇದ್ಯವೆನಿಸಿ ಭಾವತೀವ್ರತೆಯನ್ನುಂಟು ಮಾಡುತ್ತವೆ. "ಅಕ್ಕನದು ಮುಖ್ಯವಾಗಿ ಸರ್ವಸಮರ್ಪಣೆಯ ಭಕ್ತಿಮಾರ್ಗ. ಆದ್ದರಿಂದಲೇ ಅಕ್ಕ ಮಹಾದೇವಿಯ ವಚನಗಳಲ್ಲಿ ಕಾವ್ಯದ ಸೊಗಸು ಹೆಚ್ಚು. ಉತ್ಕಟ ದೈವೀಪ್ರೇಮ, ಭಕ್ತಿಯ ಉನ್ಮಾದ, ಭಾವ ಪರವಶತೆ ಹಾಗೂ ತೀವ್ರ ವಿರಕ್ತಿ, ಪರಮಾತ್ಮನೊಂದಿಗೆ ಲೀನವಾಗುವ ಅದ್ಯಮ ಹಂಬಲ, ಹಾರೈಕೆ, ನಿರೀಕ್ಷೆ, ಕಾತರ ಕಳವಳಗಳೆಲ್ಲ ಅಕ್ಕನ ಸಾಹಿತ್ಯದ ಪ್ರಮುಖ ಅಂಶಗಳಾಗಿವೆ. ಸಂಕ್ಷಿಪ್ತತೆ ಗೇಯತೆ ಹಾಗೂ ಸಶಕ್ತ ನಿರೂಪಣೆ ಭಾವಸಾಂದ್ರತೆಯಿಂದೊಡಗೂಡಿದ ಆಕೆಯ ವಚನಗಳು ಭಾವಗೀತದ ಮಟ್ಟಕ್ಕೆ ಏರುತ್ತವೆ. ಅವು ಶುದ್ಧ ಕಾವ್ಯದ ಕಾಂತಿಯನ್ನು ಪಡೆದಿವೆ."[೨]

ಅಕ್ಕಮಹಾದೇವಿಯ ವಚನಗಳು ಕಾವ್ಯಕಾಂತಿಯನ್ನು ಹೊಳೆಯಿಸುತ್ತವೆಯಾದರೂ ಅವು ಕಾವ್ಯಗಳಲ್ಲ. ಅವುಗಳದೇ ಆದ ವಿಶಿಷ್ಟ ರಚನೆಗಳು. ಮೀಮಾಂಸೆಯ ಪರಿಕಲ್ಪನೆಗಳೆಲ್ಲವುಗಳನ್ನು ಒಳಗೊಂಡು ಭಿನ್ನವಾಗಿಯೂ ನಿಲ್ಲಬಲ್ಲಂತಹ ಪರಿಭಾವನೆಗಳಿವೆ. ಸ್ವಚ್ಛಂದ ಬಂಧಗಳಿವೆ. ಪಾರಂಪರಿಕ ಕಾವ್ಯದ ಅಂಶಗಳಿದ್ದು ಅವುಗಳಿಂದ ಭಿನ್ನವಾದ ನಿಲುವುಗಳಿವೆ. ಆ ಕಾರಣಕ್ಕಾಗಿಯೇ ಸಿದ್ಧಮಾದರಿಯ ಕಾವ್ಯದ ಮಾನದಂಡಗಳು ಹಾಗೂ ಪಾರಂಪರಿಕ ಕಾವ್ಯ ಮೀಮಾಂಸೆಯ ಚೌಕಟ್ಟುಗಳಾಚೆ ಚಾಚಿಕೊಂಡಿರುವ ಅಕ್ಕನ ವಚನಗಳು ಸೃಜನಶೀಲ ರಚನಾತ್ಮಕ ಸ್ವರೂಪವುಳ್ಳವುಗಳು. ವ್ಯಕ್ತಿ ವಿಶಿಷ್ಟ ಮುಕ್ತ ಅಭಿವ್ಯಕ್ತಿಗಳಾದ ವಚನಗಳ ಮೀಮಾಂಸೆಯ ರೂಪ ಸ್ವರೂಪವು ವಿಭಿನ್ನವಾದ ಬಹು ಆಯಾಮಗಳನ್ನುಳ್ಳ ಲೌಕಿಕ ಅಲೌಕಿಕ ಚಿಂತನೆಗಳು, ಚರ್ಚೆ, ತಾತ್ವಿಕ ವಿಮರ್ಶೆ, ದಾರ್ಶನಿಕ ದೃಷ್ಟಿಗಳನ್ನು ಹೊಳೆಯಿಸುವ ವೈಚಾರಿಕ, ವೈಜ್ಞಾನಿಕ ರಹಸ್ಯಗಳನ್ನು ಸ್ಫೋಟಿಸುವ ವಿಶಿಷ್ಟ ರಚನೆಗಳು.

ಪಾರಂಪರಿಕ ಕಾವ್ಯಮಾರ್ಗದ ಮಾನದಂಡಗಳು ಕಾವ್ಯ ಮೀಮಾಂಸೆಯನ್ನು ಅಕ್ಕಮಹಾದೇವಿಯ ವಚನಾಭಿವ್ಯಕ್ತಿ ಸ್ವರೂಪವು ತೊರೆದು ನಿಲ್ಲುತ್ತದೆ. ತೊರೆಯಂತೆ ವಿಶಿಷ್ಟ ಗೇಯಗುಣವುಳ್ಳ ವಚನಗಳು ಸಿದ್ಧ ಕಾವ್ಯಬಂಧಗಳನ್ನು ಮೀರಿ ಮರುಸೃಷ್ಟಿಸಿದ ನಿರ್ಭರವಾದ, ಸ್ವಚ್ಛಂದವಾದ ಬಂಧಗಳು. ಕವಿ, ಕಾವ್ಯ, ಸಹೃದಯ, ಕಾವ್ಯ ಕಾರಣ, ಕಾವ್ಯ ಪ್ರಯೋಜನ ಅಷ್ಟಾದಶ ವರ್ಣನೆ, ಅತಿರಂಜಿತ ಬಣ್ಣನೆಗಳ ಪರಿಕರಗಳನ್ನೆಲ್ಲ ಮುರಿದ ಮೀರಿದ ಮಹಾದೇವಿಯಕ್ಕನದು ಮುಕ್ತ ಅಭಿವ್ಯಕ್ತಿ, ಮಲ್ಲಿಕಾರ್ಜುನನ ಒಲುಮೆಗೆ ಮೀಸಲಾದ ನುಡಿಗಣವಾಗಿರುವುದರಿಂದ ಬಂಧನಗಳನ್ನು ಕಳಚಿ ಮುಕ್ತತೆಯೆಡೆಗೆ ಮುಖಮಾಡಿದ ಅಭಿವ್ಯಕ್ತಿಯ ಮೀಮಾಂಸೆಯ ಸ್ವರೂಪವು ಮಕ್ತರೂಪದ್ದು. ಕಾವ್ಯ ಲಕ್ಷಣಗಳಿಗಿಂತ ಅನುಭಾವದ ಅಭಿವ್ಯಕ್ತಿಗೆ ಪ್ರಾಶಸ್ತ್ಯವಿದೆ. ಅಕ್ಕಮಹಾದೇವಿಯ ವಚನಗಳ ಮೀಮಾಂಸೆ ರೂಪ ಸ್ವರೂಪ ಸಮಕಾಲೀನ ವಚನಕಾರರಿಗಿಂತಲೂ ವಿಭಿನ್ನ ನಡೆಯುಳ್ಳದ್ದು. ಬಸವಣ್ಣನವರ ಅಭಿವ್ಯಕ್ತಿ ಸರಳ, ಸಹಜ, ಅಲ್ಲಮನದು ಬೆಡಗಿನ ಬೆಳಕು, ಅಕ್ಕಮಹಾದೇವಿಯ ಅಭಿವ್ಯಕ್ತಿ ಅವೆರಡರ ಸಂಗಮ. ಸಂಪೂರ್ಣ ಭಾವಗೀತಾತ್ಮಕ ಗುಣವುಳ್ಳದ್ದು. ವ್ಯಕ್ತಿಗತ ನೆಲೆಯಲ್ಲಿನ ಸಾಧನೆಯ ತುಡಿತ, ತಲ್ಲಣ, ಭಾವವೈವಿಧ್ಯಗಳು ವಚನಾಂತರಂಗವನ್ನಾವರಿಸಿವೆ. ಆದ್ಧರಿಂದಲೇ ವಚನಗಳಲ್ಲಿ ತನ್ನತನ, ತನ್ನೊಲುಮೆಯ ಶಕ್ತಿಯ ಹುಡುಕಾಟವೇ ಪ್ರಧಾನವಾಗಿದೆ. ಅವಳ ಹುಡುಕಾಟದ ಹಾದಿಯಲ್ಲಿನ ಪ್ರತಿಬಂಧಕಗಳ ಬಗೆಗೆ ಪ್ರತಿರೋಧವೂ ಇವೆ. ಪ್ರತಿಭಟನೆ, ಪ್ರತಿರೋಧದಲ್ಲಿಯೇ ಮುಳುಗದ ಮಹಾದೇವಿಯಕ್ಕನಲ್ಲಿ ಪರ್ಯಾವನ್ನು ಕಟ್ಟಿಕೊಳ್ಳಬಲ್ಲ ಎಚ್ಚರದ ಮನಸ್ಸಿದೆ, ನವ ಚಿಂತನಾಕ್ರಮವಿದೆ.

ಪ್ರತಿರೋಧ ಪರ್ಯಾಯ

ಮಹಾದೇವಿಯಕ್ಕನ ವಚನಗಳ ಮೀಮಾಂಸೆಯ ಮುಖ್ಯ ಸ್ವರೂಪವೇ ಪ್ರತಿರೋಧ ಪರ್ಯಾಯ ಇವೆರಡರ ಮುಖಾಮುಖಿಯಲ್ಲಿಯೂ ಅನನ್ಯತೆಯಿದೆ. ಮರುಸೃಷ್ಟಿಸುವ ಸಾಮರ್ಥ್ಯವಿದೆ. ಆಧ್ಯಾತ್ಮಿಕ ಹಂಬಲ ಅರಸೊತ್ತಿಗೆ, ಅದರೊಂದಿಗಿನ ಪುರುಷ ಪ್ರಾಬಲ್ಯ ಮುಖಾಮುಖಿಯಾದ ಸಂದರ್ಭದ ಪ್ರತಿರೋಧ ಅಕ್ಕನ ಅಭಿವ್ಯಕ್ತಿಯಲ್ಲಿ ದಟ್ಟವಾಗಿ ಗೋಚರಿಸುತ್ತದೆ. ಧೀರತೆ, ದಿವ್ಯಾನುಭವದಿಂದ ದಿಟ್ಟ ನಡೆಯನ್ನು ಪಡೆದುಕೊಂಡು ಅಕ್ಕ ಪರ್ಯಾಯ ಚಿಂತನೆಯನ್ನು ಹುಟ್ಟು ಹಾಕಿರುವಳು

"ಎಮ್ಮೆಗೊಂದು ಚಿಂತೆ; ಸಮಗಾರಗೊಂದು ಚಿಂತೆ.
ಧರ್ಮಿಗೊಂದು ಚಿಂತೆ; ಕರ್ಮಿಗೊಂದು ಚಿಂತೆ.
ಎನಗೆ ಎನ್ನ ಚಿಂತೆ, ತನಗೆ ತನ್ನ ಕಾಮದ ಚಿಂತೆ.
ಒಲ್ಲೆ ಹೋಗು ಸೆರಗ ಬಿಡು ಮರುಳೆ,

ಎನ್ನ ಚೆನ್ನಮಲಿಕಾರ್ಜುನದೇವರು
ಒಲಿವರೊ ಒಲಿಯರೊ ಎಂಬ ಚಿಂತೆ."[೩]

ಅಕ್ಕಮಹಾದೇವಿಯ ಸ್ವತಂತ್ರ ಮನೋಭಾವಕ್ಕೆ ತಡೆಯುಂಟಾದಾಗ ತನಗಲ್ಲದ ಸ್ಥಿತಿಯ ಪಲ್ಲಟಕ್ಕೆ ಹಂಬಲಿಸುವ ಅಭಿವ್ಯಕ್ತಿಯಿದು. ಪ್ರಕೃತಿ ವಿಕೃತಿಗಳು ಎದುರುಗೊಂಡು ಒಂದು ಇನ್ನೊಂದನ್ನು ಪ್ರಭಾವಿಸುವ ಸ್ಥಿತಿಯ ಚಿತ್ರಣ ಒಂದೆಡೆಯಾದರೆ ವ್ಯವಸ್ಥೆಯೆ ದಿಕ್ಕನ್ನು ಬದಲಿಸುವ ಚಿಂತನೆಯ ಆಶಯವು ಪ್ರಬಲವಾಗಿದೆ. ಅಲೌಕಿಕ ಅನುಭಾವಕ್ಕೆ ಹಾರೈಸುವ ಮನಸ್ಸು, ಲೌಕಿಕ ಭೋಗದಾಸೆಗೆ ಹವಣಿಸುವ ಆಸೆಗಳು ವಿಭಿನ್ನ ನೆಲೆಗಳುಳ್ಳ ಸ್ಥಿತಿಗಳು. ಭೂಮಿ ಆಕಾಶದಷ್ಟು ಅಂತರವುಳ್ಳ ಮನಸ್ಥಿತಿಗಳು ಸಂಧಿಸದ ಸಂದಿಗ್ಧ ಸ್ಥಿತಿಯದು. ತೀವ್ರ ಪ್ರತಿರೋಧದ ನಡುವೆಯೂ ಪರ್ಯಾವನ್ನು ಪ್ರಕಟಿಸಿದ ಪ್ರತಿನಿಧಿಸಿದ ಅಕ್ಕಮಹಾದೇವಿ ಮುಕ್ತತೆಗೆ ಒಲಿದವಳು. ಆ ಒಲುಮೆಯನ್ನು ಹೊಂದುವ ಚಿಂತೆಯ ಚಿಂತನೆಯನ್ನೇ ಮುಂದ್ದಿಟ್ಟುಕೊಂಡು ಹೋರಾಟಕ್ಕಿಳಿದವಳು. ಲೌಕಿಕ ಗಂಡನ ಬಗೆಗಿನ ಆಕ್ರೋಶ, ವಿರೋಧವು ಅವಳ ಪ್ರತಿಭಟನೆಯುಕ್ತ ವಚನಗಳಲ್ಲಿ ಪ್ರಧಾನ ಅಂಶವಾಗಿದೆ.

ಅಕ್ಕಮಹಾದೇವಿ ಆಧ್ಯಾತ್ಮದ ಅರಮನೆಯ ರಾಣಿಯಾಗ ಬಯಸಿದವಳು. ಅನಿವಾರ್ಯವಾಗಿ ಆಕಸ್ಮಿಕವಾಗಿ ಅಕ್ಕನಿಗೆ ಎದುರಾದ ಅಡ್ಡಿ ಅತಂಕಗಳು ಆಕ್ರೋಶಗೊಳ್ಳುವಂತೆ ಮಾಡಿವೆ. ಎರದ ಮುಳ್ಳಿನಂತೆ ಪರಗಂಡರೆಂದು ಪರಿಭಾವಿಸಿದ ಅಕ್ಕ ಲೌಕಿಕ ಪುರುಷನಿಗೆ ಒಲಿಯಳು. ಲೌಕಿಕ ಗಂಡರನೊಯ್ದು ಒಲೆಯೊಳಗಿಕ್ಕು ಎಂಬ ಉಗ್ರಭಾವ ಅವಳದು. ಸ್ಥಾಪಿತ ಸಮಾಜದ ಸಿದ್ಧಮೌಲ್ಯಗಳಲ್ಲಿ ಪತಿಯೇ ಪರದೈವವೆಂಬ ಗ್ರಹಿಕೆಗಳನ್ನು ವ್ಯತ್ಯಸ್ತಗೊಳಿಸಿದ ಅಕ್ಕಮಹಾದೇವಿ ಅದೇ ಸಮಾಜದ ಪತಿವ್ರತೆಗೆ ಗಂಡನೊಬ್ಬ ನಿಯಮವನ್ನು ತನ್ನ ನಿಲುವನ್ನು ದೃಢೀಕರಿಸಲು ಎತ್ತಿಕೊಂಡದ್ದು ಗಮನಿಸಬೇಕಾದ ಮಹತ್ವದ ಸಂದರ್ಭ! ಪ್ರಾಪಂಚಿಕ ಪತಿಯನ್ನು ನಿರಾಕರಿಸಿದ ಅಕ್ಕ ಪಾರಮಾರ್ಥಿಕ ಪತಿಯನ್ನು ವರಿಸಿದವಳು. ತನ್ನ ಸಮರ್ಥನೆಯನ್ನು ಪ್ರಪಂಚದ ಪರಂಪರೆಯಿಂದಲೇ ಆರಿಸಿಕೊಂಡದ್ದು ಅವಳ ಜಾಣ್ಮೆಯ ನಡೆಗೆ ನಿದರ್ಶನ. ತನ್ನ ಒಳಪ್ರಜ್ಞೆಯ ನಿಲುವಿಗೆ ಹೊರ ಪ್ರಪಂಚದ ಪರಿಕರಗಳನ್ನು ಹೊಂದಿಸಿಕೊಳ್ಳುವ ಅಕ್ಕ ವೈಚಾರಿಕ ಸ್ವತಂತ್ರ ಮನೋಭಾವದ ಪ್ರತೀಕವಾಗಿದ್ದಾಳೆ.

"ಇಹಕ್ಕೊಬ್ಬ ಗಂಡನೇ? ಪರಕ್ಕೊಬ್ಬ ಗಂಡನೆ?
ಲೌಕಿಕಕೊಬ್ಬ ಗಂಡನೆ? ಪಾರಮಾರ್ಥಕ್ಕೊಬ್ಬ ಗಂಡನೆ?
ನನ್ನ ಗಂಡ ಚೆನ್ನಮಲ್ಲಿಕಾರ್ಜುನದೇವರಲ್ಲದೆ
ಮಿಕ್ಕಿದ ಗಂಡರೆಲ್ಲ ಮುಗಿಲ ಮರೆಯ ಬಣ್ಣದ ಬೊಂಬೆಯಂತೆ."[೪]

ಲೌಕಿಕ ಗಂಡನ ಬಗೆಗೆ ಆಕ್ರೋಶಗೊಂಡು ಪ್ರತಿಭಟನೆಗಿಳಿದ ಅಕ್ಕ ಅಲೌಕಿಕ ಪತಿಯನ್ನು ಆವರಿಸಿಕೊಳ್ಳುವ ಪರ್ಯಾಯ ವ್ಯವಸ್ಥೆಯನ್ನು ಮುಂದಿಡುವಳು. ಲೌಕಿಕ ಬದುಕಿಗೊಬ್ಬ ಪಾರಮಾರ್ಥಿಕ ಬಾಳುವೆಗೆ ಇನ್ನೊಬ್ಬ ಗಂಡನೇ? ಎಂಬ ತೀಕ್ಷ್ಣ ಪ್ರಶ್ನೆ ಅಕ್ಕನದು. ತಾನು ಚೆಲುವ ಚೆನ್ನಮಲ್ಲಿಕಾರ್ಜುನನಿಗೊಲಿದ ಸತಿ ಎಂಬ ದೃಢವಾದ ನಂಬಿಕೆಯೊಂದಿಗೆ ಪ್ರಾಪಂಚಿಕ ಪುರುಷರೆಲ್ಲ ಮುಗಿಲ ಮರೆಯ ಬೊಂಬೆಗಳಂತೆ ಎಂಬ ನಿರಾಕರಣೆ ಭಾವ ತಳೆಯುತ್ತಾಳೆ. ಪೋಷಣೆ ನಿರಾಕರಣೆಗಳೆರಡು ಏಕಕಾಲಕ್ಕೆ ಅವಳ ಅಭಿವ್ಯಕ್ತಿಯಲ್ಲಿ ಮೂಡಿಬಂದಿರುವದರಿಂದ ಪ್ರಾಪಂಚಿಕ ಪತಿಗೆ ಬದಲಾಗಿ ಪಾರಮಾರ್ಥಿಕ ಪತಿಯನ್ನು ಪರ್ಯಾಯವಾಗಿ ಒಲಿಸಿಕೊಂಡವಳು. ಪರಗಂಡರನ್ನು ಪರಿಹರಿಸಿಕೊಳ್ಳುವ ಮಾರ್ಗವಾಗಿ ಮಲ್ಲಿಕಾರ್ಜುನನನ್ನು ಕೂಡಿಕೊಂಡವಳು.

"ಎರದ ಮುಳ್ಳಿನಂತೆ ಪರಗಂಡರೆನಗವ್ವಾ,
ಸೋಂಕಲಮ್ಮೆ, ಸುಳಿಯಲಮ್ಮೆ!
ನಂಬಿ ನಚ್ಚಿ ಮಾತಾಡಲಮ್ಮೆನವ್ವ,
ಚೆನ್ನಮಲ್ಲಿಕಾರ್ಜುನನಲ್ಲದ ಗಂಡರಿಗೆ
ಉರದಲ್ಲಿ ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ!"[೫]

ಎರದ ಮುಳ್ಳಿನ ಉಪಮೆಯಲ್ಲಿ ಸಶಕ್ತವಾಗಿ ನಿರೂಪಣೆಗೊಂಡ ಪರಗಂಡರ ಪ್ರಲೋಭನೆಯ ಹಿಂಸೆ ಅದರ ನೋವನ್ನು ಅರಿತು ಜಾಗೃತಗೊಂಡ ಮನಸ್ಸಿನ ನಡೆ ನುಡಿಯಲ್ಲಿನ ಎಚ್ಚರದ ಪ್ರಜ್ಞೆಯನ್ನು ಅಕ್ಕ ಅರಿತು ಅದರ ನೋವಿನಿಂದ ದೂರ ಉಳಿಯುವ ಪ್ರತಿಜ್ಞೆಗೈದ ಭಾವನೆಯಿದೆ. ಅದರ ತೀವ್ರತೆಯಿದೆ. ಲೌಕಿಕ ಪತಿಯ ಪ್ರಲೋಭನೆಯಿಂದ ಸೋಂಕದ ಸುಳಿಯದ ನಂಬದ ನೆಚ್ಚದ ಮಾತನಾಡದ ಬಗೆಯಲ್ಲಿ ಅದರ ಅಪಾಯದ ಅರಿವಿದೆ. ಆ ಕಾರಣಕ್ಕಾಗಿ ಅಂತರ ಕಾಯ್ದುಕೊಳ್ಳುವ ಸೂಕ್ಷ್ಮತೆಯಿದೆ.

"ಸತ್ತಾದಡೆ ಶರೀರಂ ಪೋದಡೆ ಪೋಗಲಿ,
ಲೋಕದ ಗಂಡರನೊಲ್ಲೆ;
ಲೋಕದ ಹೆಂಡಿರು ಬೇಕಾದೊಡೆ ಮಾಡಿಕೊಳ್ಳಲೆ;
ಉರಿಯದಿರು ಉರಿಯದಿರು ಯರಿಯದಿರು.
ಚೆನ್ನಮಲ್ಲಿಕಾರ್ಜುನನಲ್ಲದೆ
ಲೋಕದ ಗಂಡರು ಎನಗೆ ನೆನೆಯಲು ಬಾರದು,
ಸೋಂಕಲಿ ಬಾರದು ಅಲ್ಲದೆ ಮೋರೆ ಕಂಡಣ್ಣ."[೬]

ಸತ್ತರೂ ಪ್ರಾಪಂಚಿಕ ಪತಿಯನ್ನು ಒಪ್ಪದಿರುವ ದೃಢತೆ, ಜಿಗುಪ್ಸೆ ತಾತ್ಸಾರ ಕ್ಷಣ ಕ್ಷಣಕ್ಕೂ ಪ್ರತಿ ಪದಗಳಲ್ಲಿ ಅನುರಣಿಸುತ್ತದೆ. ಲೌಕಿಕ ಸತಿ ಪತಿಗಳ ಅಸಹನೀಯ; ಬದುಕಿಗಿಂತ, ಸಾಯುವ ಸ್ಥಿತಿಯೇ ಲೇಸೆಂಬುದು ಅಕ್ಕನ ನಿಲುವು. ಲೋಕದ ಗಂಡನ ಬಗೆಗಿನ ವ್ಯಂಗ ತಾತ್ಸಾರದ ಧ್ವನಿಯಲ್ಲಿ ಅಸಹನೆಯಿದೆ. ಅಲೌಕಿಕ ಆನಂದಕ್ಕಾಗಿ ತುಡಿಯುವ ಮನಸ್ಸಿಗೆ ವಿರುದ್ಧವಾದ ಲೌಕಿಕ ಬಂಧನ ತೀವ್ರತರವಾದ ಪ್ರತಿಭಟನೆಯನ್ನು ಹೊರಹಾಕುವಂತೆ ಮಾಡಿದೆ. ಲೋಕದ ಗಂಡನ ಆಕ್ರೋಶ, ತಿರಸ್ಕಾರ ಅಕ್ಕನಲ್ಲಿರುವಷ್ಟು ಅದು ಬೇರಾರಲ್ಲೂ ಕಾಣಲು ಸಾಧ್ಯವಾಗದು. ಪತಿಯನ್ನು ಪರದೈವ ಸ್ಥಿತಿಯಿಂದ ಪಲ್ಲಟಗೊಳಿಸಿ ಪರಮಾತ್ಮನ ಅಸ್ತಿತ್ವವನ್ನು ಪತಿಯಾಗಿ ಸ್ವಿಕರಿಸಿದವಳು ಅಕ್ಕಮಹಾದೇವಿ. ಅದುವರೆಗಿನ ಪುರುಷ ಪ್ರಾಬಲ್ಯಕ್ಕೆ ಪ್ರತಿಯಾಗಿ 'ಪರಗಂಡರನೊಲ್ಲೆ' ಎಂದು ದೃಢವಾಗಿ ಘೋಷಿಸಿ ತನ್ನತನದ ಆಸ್ತಿತ್ವವನ್ನು ಉಳಿಸಿಕೊಳ್ಳಬಯಸಿದವಳು.

ಪ್ರಾಪಂಚಿಕ ಸುಖಭೋಗವನ್ನು ಪತಿಕೇಂದ್ರಿತವಾಗಿ ಹೆಣ್ಣು ಪಡೆಯಬೇಕೆಂಬ ಪಾರಂಪರಿಕ ಮೌಲ್ಯವನ್ನು ಅಪಮೌಲ್ಯಗೊಳಿಸಿ ಮಹಾದೇವಿಯಕ್ಕ ಸಮರಸ ಸುಖವನ್ನು ದೇವನಲ್ಲಿ ಕೇಂದ್ರೀಕರಿಸಿ ಆ ಹಂಬಲವನ್ನು ಸಾಧಿಸ ಹೊರಟವಳಾದ್ದರಿಂದ ಅದಕ್ಕೆ ಅಡ್ಡಿಯಾದ ಪತಿ, ತೀವ್ರ ಪ್ರತಿಭಟನೆಗೆ ಗುರಿಯಾಗಬೇಕಾಗುತ್ತದೆ.

"ಸತಿ ಎಂಬುದು ಮಾಟ, ಪತಿಯೆಂಬುದು ಮಾಟ,
ತನುವೆಂಬುದು ಮಾಯೆ, ಮನವೆಂಬದು ಮಾಯೆ,
ಸುಖವೆಂಬುದು ಮಾಯೆ,
ಚೆನ್ನಮಲ್ಲಿಕಾರ್ಜುನನೆನಗೆ ಕೈ ಹಿಡಿದ ಗಂಡನಲ್ಲದೆ
ಮಿಕ್ಕಿನವರೆಲ್ಲರೂ ಮೂಗಿಲ್ಲದ ಬಣ್ಣದ ಬೊಂಬೆಗಳು ಕಾಣಯ್ಯಾ."[೨]

ಲೋಕದ ಸತಿ ಪತಿತ್ವವೇ ಮಾಟ, ಅದಕ್ಕೆ ಕಾರಣವಾದ ತನು ಮನ ಅದನ್ನಾವರಿಸಿದ ಸುಖ ಮಾಯೆಯೆಂಬ ಸ್ಪಷ್ಟ ಪರಿಕಲ್ಪನೆಯಿದೆ. ಕ್ಷಣಿಕ ಸುಖಾಪೇಕ್ಷೆಗೆ ತನ್ನ ಆಧ್ಯಾತ್ಮಿಕ ನಿಲುವನ್ನು ಒಳಗಾಗಿಸದ ಹಂಬಲ ಅಕ್ಕನಲ್ಲಿ ತುಂಬಿಕೊಂಡಿದ್ದರಿಂದ ಲೋಕದ ಪತಿ, ಮೂಗಿಲ್ಲದ ಬಣ್ಣದ ಬೊಂಬೆಗಳಾಗಿ ಅಕ್ಕನಿಗೆ ಗೋಚರಿಸುತ್ತಾರೆ. ಲೌಕಿಕ ಸುಖದ ವಾಂಛೆಯಿಂದ ವಿಮುಖಳಾದ ಮಹಾದೇವಿಯಕ್ಕನಲ್ಲಿ ಅವಿರಳ ಆನಂದದ ಸ್ಥಿತಿಯ ತುಡಿತವಿದೆ. ಅದಕ್ಕೆ ವಿರುದ್ಧವಾದುದರ ಬಗೆಗೆ ಪ್ರತಿರೋಧವಿದೆ.

"ವಿಷಯದ ಸುಖ ವಿಷವೆಂದರಿಯದ ಮರುಳೆ,
ವಿಷಯಕ್ಕೆ ಅಂಗವಿಸದಿರಾ.

ವಿಷಯದಿಂದ ಕೆಡನೆ ರಾವಣನು
ವಿಷಯದಿಂದ ಕೆಡನೆ ದೇವೇಂದ್ರನು?
ವಿಷಯದಿಂದಾರು ಕೆಡರು ಮರುಳೆ?
ವಿಷಯ ನಿರ್ವಿಷಯವಾಯಿತ್ತೆನಗೆ ನಿನ್ನಲ್ಲಿ
ಚೆನ್ನಮಲ್ಲಿಕಾರ್ಜುನಂಗೆ ಒಲಿದವಳ
ನೀನಪ್ಪಿಹೆನೆಂದಡೆ ಒಣಗಿದ ಮರನಪ್ಪುವಂತೆ ಕಾಣಾ."[೮]

ವಿಷಯಸುಖ ವಿಷವಾಗುವುದನ್ನು ಅರಿತುಕೊಂಡ ಅಕ್ಕ ಅದರಿಂದ ವ್ಯತಿರಿಕ್ತವಾಗಿ ಉಳಿಯ ಬಯಸುತ್ತಾಳೆ. ವಿಷಯ ಸುಖಕ್ಕೆ ಅಂಗವಿಸಿದ ರಾವಣ, ದೇವೇಂದ್ರನ ವೇದನೆ ವಿಷಯಕ್ಕೊಳಗಾಗಿ ತಂದುಕೊಂಡ ಕೆಡುಕಿನ ಬಗ್ಗೆಯೂ ಅರಿತವಳಾದ್ದರಿಂದ ನಿರ್ವಿಷಯ ಸ್ಥಿತಿಯನ್ನು ಹೊಂದಿ, ವಿಷಯದೊಲುಮೆ ತಾನು ಮೆಚ್ಚಿದ ಮಹಾದೇವನಲ್ಲಿ ಬೆರೆತಿರುವುದರಿಂದ ಪ್ರಪಂಚದ ವಿಷಯಗಳು ತನ್ನನ್ನು ಆವರಿಸಲಾರವು ಎಂಬ ನಂಬುಗೆಯಿದೆ. 'ಒಣಗಿದ ಮರನಪ್ಪವಂತೆ' ಅಕ್ಕನನ್ನು ಆವರಿಸಿಕೊಳ್ಳುವ ವಿಷಯಗಳು ಅಲ್ಲಿ ಯಾವ ಅಪೇಕ್ಷೆಯೂ ತಣಿಯದು ಎಂಬ ನಿರ್ಲಿಪ್ತತೆ ಆವರಿಸಿದ ಮನಸ್ಥಿತಿಯದು.

ಅಕ್ಕಮಹಾದೇವಿಯ ವಚನಗಳಲ್ಲಿ ತನಗೆ ಬೇಡವಾದುದರ ಬಗ್ಗೆ ನಿರ್ದಾಕ್ಷಿಣ್ಯವಾಗಿ ಪ್ರತಿಭಟಿಸುವ ಮತ್ತು ತಾನು ಆಶಿಸುವ ಒಲುಮೆಗಾಗಿ ಪರಿಪರಿಯಾಗಿ ಪರಿತಪಿಸುವ ಸ್ಪಷ್ಟಧ್ವನಿಯಿದೆ, ಲೌಕಿಕ ಬಾಳುವೆಗೆ ಬಳಿಸಾರದ ಅಕ್ಕನಲ್ಲಿ ಅಲೌಕಿಕ ಬದುಕಿನ ತೀವ್ರ ಸ್ಪಂದನವಿದೆ.

"ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ.
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗೆ ನಾನೊಲಿದೆ ಎಲೆ ಅವ್ವಗಳಿರಾ!
ಭವವಿಲ್ಲದ ಭಯವಿಲ್ಲದ ನಿಸ್ಸೀಮಂಗೊಲಿದೆ ನಾನು.
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆ
ಮಿಗೆ ಮಿಗೆ ಒಲಿದೆ ಎಲೆ ಅವ್ವಗಳಿರಾ."[೯]

ಅಲೌಕಿಕ ಪತಿಯ ಪ್ರೇಮಭಾವ ನಿರ್ಭಯವಾಗಿ ವಚನದಲ್ಲಿ ಹರಹಿಕೊಂಡಿದೆ. ಪಾರಮಾರ್ಥಿಕ ಬದುಕಿನ ತಾತ್ವಿಕ ಆಶಯವಿಲ್ಲಿ ಪರ್ಯಾಯ ನೆಲೆ ಪಡೆದುಕೊಂಡಿದೆ. ಸಾವಿಲ್ಲದ ಸಹಜಂಗೆ, ರೂಪಿಲ್ಲದ ಚೆಲುವಂಗೆ, ಭವ ಭಯವಿಲ್ಲದ ನಿರ್ಭಯ ಚೆಲುವ ಚೆನ್ನಮಲ್ಲಿಕಾರ್ಜುನನಿಗೊಲಿದ ಅಕ್ಕನದು ಅವರ್ಣನೀಯ, ಅನುಪಮವಾದ ಬಾಳುವೆ. ಸಾಮಾನ್ಯರ ಬಾಳುವೆ, ಲೋಕದ ಪತಿಗಿಂತ

ವಿಲಕ್ಷಣವಾದ ಪರ್ಯಾಯದ ನಡೆಯನ್ನು ಅಕ್ಕ ಅಪ್ಪಿಕೊಂಡು ಒಪ್ಪಿತಗೊಳಿಸಿಕೊಂಡಿರುವಳು. ಅಪರೂಪದ ಪ್ರೇಮ ಪರಿಕಲ್ಪನೆ ಅಳವಡಿಸಿಕೊಂಡಿರುವ ಅಕ್ಕಮಹಾದೇವಿ ಆನಂದದ ತವನಿಧಿಯಲ್ಲಿ ತೃಪ್ತಿ ಹೊಂದಬಯಸಿದ್ದರಿಂದ ಸಾವಕೆಡುವ ಗಂಡರ ಬಗ್ಗೆ ತಾತ್ಸರ ಭಾವ ತಾಳಿರುವಳು.

> "ಸಾವಿಲ್ಲದ ಕೇಡಿಲ್ಲದ ಚೆಲುವಂಗಾನೊಲಿದೆನವ್ವ!
> ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
> ಚೆಲುವಂಗಾನೊಲಿದೆನವ್ವ!
> ....
> ಇದು ಕಾರಣ ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ
> ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ."[೧೦]

ಅಲೌಕಿಕ ಪತಿಯ ಆಹ್ವಾನ ಲೋಕದ ಗಂಡನ ವಿಸರ್ಜನೆ ಪ್ರಕ್ರಿಯೆಯಲ್ಲಿ ನಿರತಳಾದ ಅಕ್ಕಮಹಾದೇವಿ ಪರಶಿವನಿಗೆ ಒಲಿದ ಚಲುವೆ. ಕೆಸರಿನಲ್ಲಿದ್ದರೂ ಕಮಲ ನಿರ್ಮಲವಾಗಿರುವಂತೆ ಮಹಾದೇವಿಯಕ್ಕ ಲೌಕಿಕ ನಿರ್ಬಂಧಗಳನ್ನು ಬಿಸುಟಿದ ಧೀರತೆಯುಳ್ಳವಳು. ಆ ಧೀರತೆಯಿಂದಲೇ ಸಾವ ಕೆಡುವ ಗಂಡನ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸಿ ನಿರ್ಭಯವಾಗಿ ನಿರ್ವಯಲ ನಿಲುವಿಗೆ ನಡೆದಳು. "ಸಾವ ಕೆಡುವ ಗಂಡರು ಎಂಬಲ್ಲಿ ನಶ್ವರತೆ ಸಾವು ಮತ್ತು ಕುಟುಂಬದ ಸಂಬಂಧದ ಪ್ರತಿನಿಧಿಯಾದ ಗಂಡ ಈ ಮೂರನ್ನು ಸುಟ್ಟು ಹಾಕುವ ತೀವ್ರ ಅಸಹನೆ ತಿರಸ್ಕಾರವಿದೆ. ಈ ಲೌಕಿಕ ದೃಷ್ಟಿಯು ದೈಹಿಕ ಆಯಾಮಗಳನ್ನು ಮಾತ್ರ ಬಯಸುವಂತಹದು ಎನ್ನುವ ವಿಷಾದವು ವಚನಗಳ ಮುಖ್ಯ ಧಾಟಿಯಾಗಿದೆಯೆನ್ನಬಹುದು."[೧೧]

ಆಹ್ವಾನ ವಿಸರ್ಜನೆ

ಸ್ವಚಿಂತನೆ, ಪರತ್ವದ ಶೋಧನೆ ಅಕ್ಕಮಹಾದೇವಿಯ ವಚನಗಳಲ್ಲಿ ನಿರಂತರವಾಗಿ ಅಭಿವ್ಯಕ್ತಗೊಳ್ಳುತ್ತ ಹಲವು ಅರ್ಥಸಾಧ್ಯತೆಗಳನ್ನು ಹೊಳೆಯಿಸುತ್ತ ಮತ್ತೆ ಮತ್ತೆ ವಿಮರ್ಶೆ, ಚರ್ಚೆಗೆ ಒಳಗಾಗುತ್ತವೆ. ವ್ಯಕ್ತಿ ವಿಶಿಷ್ಟ ಅನುಭಾವಿಕ ಹುಡುಕಾಟದಲ್ಲಿ ಹೊಸ ಪಲ್ಲಟಗಳು ಸೃಷ್ಟಿಯಾಗಿವೆ. ಅಕ್ಕನಲ್ಲಿ ತಿರಸ್ಕಾರ, ಸ್ವೀಕಾರ, ಸಂಘರ್ಷ, ಪ್ರತಿಭಟನೆ ಪ್ರತಿರೋಧ, ಪರ್ಯಾಯಗಳು ಅಸ್ತಿತ್ವ ಪಡೆಯುತ್ತ ಚಲನಶೀಲತೆ ಮತ್ತು ಪರಿವರ್ತನೆಯಡೆಗೆ ಕೊಂಡೊಯುತ್ತವೆ.

ಅಕ್ಕಮಹಾದೇವಿಯ ವಚನಗಳ ಮೀಮಾಂಸೆ ಕೇವಲ ತಾತ್ವಿಕ ಚರ್ಚೆ, ಒಳನೋಟವಾಗಿರದೆ ತಾತ್ವಿಕ ನಡೆಗೆ ತಡೆಯೊಡ್ಡಿದ ಬಾಹ್ಯದ ಸಂಗತಿಗಳು ಸಹಜವಾಗಿ ಅಭಿವ್ಯಕ್ತಗೊಂಡು ವೈವಿಧ್ಯಮಯ ಭಾವಗಳ ಅನ್ವೇಷಣೆಯನ್ನು ಒಳಗೊಂಡಿದೆ. ಮೂರ್ತ ಅಮೂರ್ತ ಭಾವ ಸಮುಚ್ಛಯಗಳ

ಪರಿಕಲ್ಪನೆಗಳಲ್ಲಿ ಅವಳ ಒಟ್ಟು ಆಶಯವನ್ನು ಗ್ರಹಿಸಲು ಸಾಧ್ಯವಾಗುವುದಲ್ಲದೆ ಬರೀ ಅಲೌಕಿಕ, ತಾತ್ವಿಕ ವಿಚಾರ ಮಂಥನಗಳಿಂದ ಮೀಮಾಂಸೆಯ ಸ್ವರೂಪ ಪೂರ್ಣಗೊಳ್ಳುವುದಿಲ್ಲ.

ತಾತ್ವಿಕ ಅನುಸಂಧಾನಕ್ಕಾಗಿ ಕಾತರಿಸುವ ಅಕ್ಕಮಹಾದೇವಿ ತಡವಾದಾಗ, ಸಾಧ್ಯವಾಗದಿದ್ದಾಗ ಬಾಡುತ್ತಾಳೆ, ಬೇಡುತ್ತಾಳೆ. ಅಂತರಂಗ ಆಭೀಪ್ಸೆಯನ್ನು ಈಡೇರಿಸಲು ಆರ್ತಿಸುವಲ್ಲೆಲ್ಲ ಪ್ರಾಮಾಣಿಕವಾದ ಕರುಣರಸಪೂರಿತ ಸಂವೇದನೆಗಳು ಅಭಿವ್ಯಕ್ತಿಯಲ್ಲಿ ಮಡುಗಟ್ಟಿ ಹೃದ್ಯವೇದ್ಯವೆನಿಸುತ್ತವೆ. ಲೌಕಿಕ ಜಗತ್ತಿನ ವಿರಹ ವೇದನೆಯ ಸಮಾನ ನೆಲೆಯ ಅಭಿವ್ಯಕ್ತಿಯಲ್ಲಿ ಹಂಬಲ, ಹಾರೈಕೆಗಳು ಮೇಳವಿಸಿ ವಿರಹಿಣಿಯ ಅಗಲಿಕೆಯ ನೋವು ಕಾತರ ಕಳವಳಗಳ ರಸಧ್ವನಿ ಪ್ರಧಾನವಾಗಿ ವಿರಹ ಕಾವ್ಯದ ಆಯಾಮಗಳನ್ನು ಮೇಳವಿಸಿಕೊಂಡು ಪರಿಣಾಮ ಬೀರುವ ಅಭಿವ್ಯಕ್ತಿ ಒಂದು ಜೀವನ ಕ್ರಮವನ್ನೇ ಬಿಂಬಿಸುತ್ತದೆ.

"ಬಂದಹನೆಂದು ಬಟ್ಟೆಯ ನೋಡಿ,
ಬಾರದಿದ್ದಡೆ ಕರಗಿ ಕೊರಗಿದೆನವ್ವಾ
ತಡವಾದರೆ ಬಡವಾದೆ ತಾಯೆ,
ಚೆನ್ನಮಲ್ಲಿಕಾರ್ಜುನನ ಒಂದಿರುಳಗಲಿದಡೆ
ತಕ್ಕೆಸಡಲಿದ ಜಕ್ಕವಕ್ಕಿಯಂತಾದೆನವ್ವಾ"[೧೨]

ಲಿಂಗಪತಿಯಲ್ಲಿ ಒಲುಮೆ ಒಚ್ಚತವಾಗಿ ನಿರೀಕ್ಷೆಯ ಕಳವಳದಿಂದ ಕರಗುವ ಕೊರಗುವ, ತಡವಾದಾಗ ಬಡವಾಗುವ ಆಪ್ತತೆಯ ಸಂವೇದನೆಗಳಲ್ಲಿ ಸರಳತೆಯಿದೆ ಸಹಜತೆಯಿದೆ. ನವವಧುವಿನಂತೆ, ನಲ್ಲನ ತುಸು ಅಗಲಿಕೆಯಿಂದ ಕನಲುವ ಅಕ್ಕಮಹಾದೇವಿ ತಕ್ಕೆಸಡಲಿದ ಜಕ್ಕವ್ವಕಿಯಂತೆ ವಿಹ್ವಲಗೊಂಡ ಸ್ಥಿತಿ ವೇದನೆಯಿಂದ ಪರಿತಪಿಸುವ ಪರಿ ಅಕ್ಕನ ಅಂತರ್ಯವನ್ನು ಲೋಕಾಂತಗೊಳಿಸುತ್ತದೆ. ಪಾರಲೌಕಿಕ ಶಕ್ತಿಯ ಆಹ್ವಾನ ಅಕ್ಕನ ವಚನಗಳಲ್ಲಿ ಪ್ರಧಾನ ಗುಣವಾಗಿದೆ. ದೈವತ್ವದೊಂದಿಗಿನ ಅವಳ ಬಂಧುತ್ವ ಮಾಧುರ್ಯಭರಿತ ವಿರಹ ಕಾವ್ಯದಂತಿದೆ.

"ಕಾಮಿಸಿ ಕಲ್ಪಿಸಿ ಕಂದಿ ಕುಂದಿದೆನವ್ವಾ
ಮೋಹಿಸಿ ಮುದ್ದಿಸಿ ಮರುಳಾದೆನವ್ವಾ
ತೆರೆಯದೆ ತೊರೆಯದೆ ನಲಿದು ನಂಬಿದೆ ನಾನು.
ಎನ್ನದೇವ ಚೆನ್ನಮಲ್ಲಿಕಾರ್ಜುನನೆನ್ನನೊಲ್ಲದಡೆ
ಆನೇವೆನವ್ವಾ?"[೧೩]

ತನ್ನೊಲುಮೆ ತನಗೆ ದಕ್ಕದೇ ಹೋಗುವ ಸಂದಿಗ್ಧ ಸ್ಥಿತಿಯಲ್ಲಿನ ಅಕ್ಕನ ಅಭಿವ್ಯಕ್ತಿಯಲ್ಲಿ ಒಂದು ರೀತಿಯ ನಿರ್ಲಿಪ್ತ ಭಾವವಿದೆ. ಸರ್ವಸಮರ್ಪಣೆಯಿಂದ ಭಕ್ತ ಶರಣಾಗತಿ ಹೊಂದಿದಾಗಲೂ ದೇವನೊಲುಮೆ ಕೈಗೂಡದೆ ಹೋದಾಗ ಅಂತರಂಗ ಬಹಿರಂಗಳಲ್ಲಿ ಪ್ರೇಮಭಾವದ ವಿನಃ ಮತ್ತೊಂದನರಿಯದ ಸ್ಥಿತಿಯದು. ಪರವಸ್ತುವಿನಲ್ಲಿ ಪ್ರಾಮಾಣಿಕ ಪ್ರೇಮಭಾವವಿರಿಸಿ ಪರಿತಪಿಸುವ ಅಕ್ಕನ ಭಾವ ಕರುಣರಸವನ್ನು ಆವರಿಸಿಕೊಂಡಂತೆ ಸ್ವಗತ ಧ್ವನಿಯಾಗಿ ಹೊರಹೊಮ್ಮುತ್ತದೆ.

"ಬೆರಸುವಡೆ ಬೇಗ ತೋರಾ,
ಹೊರ ಹಾಯ್ಕದಿರಯ್ಯಾ.
ನಿಮ್ಮಲ್ಲಿಗೆ ಸಲೆ ಸಂದ ತೊತ್ತಾನು;
ಎನ್ನ ಹೊರ ಹಾಯ್ಕದಿರಯ್ಯಾ.
ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ನಂಬಿ ಬೆಂಬಳಿಬಂದೆನು
ಇಂಬುಗೊಳ್ಳಯ್ಯಾ ಬೇಗದಲಿ."[೧೪]

ಲೋಕೋತ್ತರ ಅನುಭಾವದ ಅನುಸಂಧಾನಕ್ಕಾಗಿ ಆರ್ತಿಸುವ, ಪ್ರಾರ್ಥಿಸುವ ಅವಸರದ ನಡೆ ವಿನಮ್ರತೆಯಲ್ಲಿ ತೀವ್ರತೆ ಹೊಂದುತ್ತ ನಂಬಿಕೆಯ ಸಾಕ್ಷೀಕರಣದಲ್ಲಿ ತನ್ನನ್ನು ಸಮರ್ಪಿಸಿಕೊಳ್ಳುವ ಅಭಿವ್ಯಕ್ತಿಯಲ್ಲಿ ದೈವತ್ವದ ಆಹ್ವಾನ ಎದ್ದು ತೋರುತ್ತದೆ. ತತ್ವಕ್ಕೆ ತೊತ್ತಾಗಿರುವ ತನ್ನತನವನ್ನು ದೇವನಲ್ಲಿ ಸಮೀಕರಿಸಿಕೋಳ್ಳಬೇಕೆಂಬ ಬೇಡಿಕೆಯು ಬೇಗನೆ ನೆರವೇರಲಿ ಎಂಬ ಆತುರವಿದೆ. ಅಕ್ಕಮಹಾದೇವಿ ದಿವ್ಯಾನುಭವ ಪಡೆಯಲು ಹಾತೊರೆಯುವ ಕಾತರಿಸುವಲ್ಲೆಲ್ಲ ತನು ಮನ ಪ್ರಾಣಗಳನ್ನೆಲ್ಲ ಮೀಸಲಾಗಿರಿಸುವ ಅಭಿವ್ಯಕ್ತಿಯಲ್ಲಿ ದೇವನನ್ನು ಆಹ್ವಾನಿಸುವ ಸಂವಾದ ಅಪ್ಯಾಯಮಾನವಾಗಿ ಮೂಡಿಬಂದಿವೆ.

"ಭಾವ ಬೀಸರವಾಯಿತ್ತು, ಮನ ಮೃತ್ಯುವನಪ್ಪಿತ್ತು;
ಆನೇವೆನಯ್ಯಾ?
ಆಳಿತನದ ಮನ ತಲೆಕೆಳಗಾಯಿತ್ತು;
ಆನೇವೆನಯ್ಯಾ?
ಬಿಚ್ಚಿ ಬೇರಾಗದ ಭಾವವಾಗೆ,
ಬೆರೆದೊಪಚ್ಚಿ ನಿನ್ನ ನಿತ್ಯಸುಖದೊಳಗೆಂದಿಪ್ಪೆನಯ್ಯಾ,
ಚೆನ್ನಮಲ್ಲಿಕಾರ್ಜುನಾ!"[೧೫]

ನಿತ್ಯಸುಖಕ್ಕಾಗಿ ನಡೆಸಿದ ಹೋರಾಟದಲ್ಲಿ ಭಾವ ವ್ಯರ್ಥವಾಗಿ ಮನ ಮೃತ್ಯುವನಪ್ಪಿಕೊಳ್ಳುವ ಮೂಲಕ ದೇಹ ಮನ ಭಾವಸಂಬಂಧಿ ನೆಲೆಗಳ ವಿಸರ್ಜನೆಯೂ ನೆರವೇರಿದೆ. ವಿಸರ್ಜನೆಯ ಹೊರತು ತತ್ವದ ತನ್ಮಯತೆ ಆಗದು. ಅರಿವು ನೆಲೆಗೊಳ್ಳದು. ಮಹಾದೇವಿಯಕ್ಕನ ಆಹ್ವಾನದ ನಿವೇದನೆಯಲ್ಲಿ ವಿಸರ್ಜನೆಯನ್ನು ಕುರಿತು ವಿನಂತಿಸುವ ನಮ್ರತೆಯ ನಡೆಯೂ ಮೇಳೈಸಿದೆ. ಆಳಿತನದ ಮನ ತಲೆ ಕೆಳಗಾಗುವ ಕ್ರಿಯೆಯೂ ಸಮರಸದ ಹಂಬಲದ ಭಾಗವಾಗಿಯೇ ಮುಂದುವರೆದಿದೆ. ಭಾವನೆಗಳ ಮುಕ್ತವಾದ, ಆಳವಾದ ಅಭಿವ್ಯಕ್ತಿಯಲ್ಲಿ ಸೃಜನಶೀಲ ಮನಸ್ಸೊಂದು ನಿರಂತರವಾದ ನಿತ್ಯದ ಹುಡುಕಾಟಕ್ಕಾಗಿ ಚಲನಶೀಲವಾಗಿರುವುದು. ಆ ಮೂಲಕ ಭಿನ್ನಭಾವವಳಿದು ನಿರ್ಭಾವವಾಗುವ ಹಾರೈಕೆ ಹೃದಯಾರೆ ವ್ಯಕ್ತವಾಗಿದೆ.

ಪಾರಂಪರಿಕ ಶಬ್ದಾರ್ಥ ಸಹಿತ, ರಮಣೀಯಾರ್ಥಗಳ ಕಾವ್ಯದ ಬಂಧಗಳನ್ನು ಕಳಚಿಕೊಂಡು, ಜಡತ್ವವನ್ನು ಕೊಡವಿಕೊಂಡು ಜಂಗಮತ್ವವನ್ನು ಪಡೆದುಕೊಳ್ಳುತ್ತ ಸಾಗುವ ಅಕ್ಕನ ಅಭಿವ್ಯಕ್ತಿ ಸಹಜವಾಗಿಯೇ ರಸ, ಧ್ವನಿಗಳನ್ನೊಡಗೂಡಿ ಪ್ರವಹಿಸುತ್ತದೆ. ಪ್ರಯೋಜನಕ್ಕಾಗಿಯೇ ವಚನದ ನಡೆಯಿದ್ದರೂ ಲೌಕಿಕದ ಪರಿಯಂತಲ್ಲ. ನಿರವಯಲನ್ನು ಬೆರೆಯುವ ತುಡಿತದಿಂದ ಜಗತ್ತಿನ ಜಂಜಡಗಳನ್ನು ಮೀರಿ ಮಹದಲ್ಲಿ ಮುಳುಗುವ ತನ್ಮೂಲಕ ಮೌನಗೊಳ್ಳುವ ಮಹಾಯಾನವದು.

ಅತ್ಯಂತ ಪ್ರಾಮಾಣಿಕವಾಗಿ ಪಾರಮಾರ್ಥಕ್ಕೆ ತನ್ನನ್ನು ಸಮರ್ಪಿಸಿಕೊಳ್ಳುವ ಅಕ್ಕಮಾದೇವಿಯ ಭಾವನೆಗಳಲ್ಲಿಯೂ ಆ ಶೋಧನೆಯ ಗುಣವನ್ನು ಗ್ರಹಿಸಲು ಸಾಧ್ಯವಿದೆ. ಸ್ವವಿಮರ್ಶೆ ಶೋಧನೆ ಒಳಹೊರಗನ್ನು ವ್ಯಾಪಿಸಿ ಶಬ್ದಾರ್ಥಗಳಲ್ಲಿ ಹೊಳೆಯುತ್ತದೆ. ಶೋಧನೆ ಚಿಂತನೆಯ ಮಾರ್ಗವಾಗಿ ನವ ದರ್ಶನವನ್ನು ಕಟ್ಟಿಕೊಡುವ ಶಕ್ತಿಶಾಲಿ ಸತ್ವಯುತ ಸಾಮರ್ಥ್ಯ ಅಕ್ಕನ ಅಭಿವ್ಯಕ್ತಿಯಲ್ಲಿರುವುದರಿಂದ ಚಿರಂತನ ಮೌಲ್ಯಗಳ ಹುಡುಕಾಟಕ್ಕೆ ಮತ್ತೆ ಮತ್ತೆ ತೆರೆದುಕೊಳ್ಳುತ್ತವೆ.

> "ಹಗಲು ನಾಲ್ಕು ಜಾವ ನಿಮ್ಮ ಕಳವಳದಲ್ಲಿಪ್ಪೆನು.
> ಇರುಳು ನಾಲ್ಕುಜಾವ ಲಿಂಗದ ವಿಕಳಾವಸ್ಥೆಯಲ್ಲಿಪ್ಪೆನು.
> ಹಗಲಿರುಳು ನಿಮ್ಮ ಹಂಬಲದಲ್ಲಿ ಮೈಮರೆದೊರಗಿಪ್ಪೆನು.
> ಚೆನ್ನಮಲ್ಲಿಕಾರ್ಜುನಯ್ಯಾ,
> ನಿಮ್ಮ ಒಲುಮೆ ನಟ್ಟು ಹಸಿವು ತೃಷೆ ನಿದ್ರೆಯ ತೊರೆದೆನಯ್ಯಾ."[೧೬]

ಅಕ್ಕಮಹಾದೇವಿ ತನ್ನತನದ ಅಸ್ತಿತ್ವದಲ್ಲಿ ಹರನ ಹುಡುಕಾಟಕ್ಕಾಗಿ ಹಾರೈಕೆಯ ಸಮಗ್ರತೆಯನ್ನು ವಿವಿಧ ಸ್ತರಗಳಲ್ಲಿ ನಿವೇದಿಸುವಲ್ಲಿ ಅಪಾರ ಹಂಬಲವಿದೆ. ತೀವ್ರತರವಾದ ತತ್ವದ ಅನುಸಂಧಾನದ ಆಹ್ವಾನವಿದೆ. ಶಿವನೊಲುಮೆಗೆ ಶರೀರ ಮನ ಭಾವಗಳ ಬೇಡಿಕೆಯ ಬಂಧಗಳನ್ನು ವಿಸರ್ಜಿಸಿದ

ಕುರಿತು ಅಕ್ಕ ವಿನೀತವಾಗಿ ನಿವೇದಿಸಿಕೊಳ್ಳುವಳು. ಹಗಲಿರುಳು ಹರನ ಹಂಬಲ ಹೆಚ್ಚಾಗಿ ಕತ್ತಲೆಯನ್ನು ಕಳೆದು ಬೆಳಗನ್ನು ಬರಮಾಡಿಕೊಳ್ಳುವ ತವಕ ತನ್ಮಯತೆ ಶಬ್ದಾರ್ಥಗಳಲ್ಲಿಯೂ ಪ್ರತಿಧ್ವನಿಸುತ್ತದೆ.

"ಹಗಲೆನ್ನ ಇರುಳೆನ್ನ ಉದಯವೆನ್ನ ಅಸ್ತಮಾನವೆನ್ನ;
ಹಿಂದೆನ್ನ ಮುಂದೆನ್ನ, ನೀನಲ್ಲದೆ ಪೆರತೊಂದಹುದೆನ್ನ.
ಮನ ಘನವಾದುದಿಲ್ಲವಯ್ಯಾ.
ಕತ್ತಲೆಯಲ್ಲಿ ಕನ್ನಡಿಯ ನೋಡಿ ಕಳವಳಗೊಂಡೆನಯ್ಯಾ.
ನಿಮ್ಮ ಶರಣ ಬಸವಣ್ಣನ ತೇಜದೊಳಗಲ್ಲದೆ
ಆನಿನ್ನೆಂದು ಕಾಂಬೆನು ಹೇಳಾ ಚೆನ್ನಮಲ್ಲಿಕಾರ್ಜುನಾ."[೧೭]

ಬಯಲನ್ನು ಅಪ್ಪಿಕೊಳ್ಳಲು ಭೌತಿಕ ಬಂಧಗಳನ್ನೆಲ್ಲ ಕೊಡವಿಕೊಂಡು ಮುನ್ನಡೆದರೂ ಮನ ಘನವಾಗದಿರುವ ಬಗೆಗೆ ಬೇಸರವಿದೆ. ಬೇಗನೆ ಬೆಳಗನ್ನು ಬೆರೆಯಬೇಕೆಂಬ ತನ್ನಾಶೆ ಫಲಿಸದಿರುವ ಅಕ್ಕನಿಗೆ ಎಲ್ಲಿಲ್ಲದ ನಿರಾಶೆ ಅವರಿಸಿದ ನೋವನ್ನು ಕತ್ತಲೆಯಲ್ಲಿ ಕನ್ನಡಿ ನೋಡಿದ ಪರಿಯಂತೆ ಉದ್ಗಾರ ತೀವ್ರನೆಲೆಯಲ್ಲಿ ಕರುಣರಸ ಪ್ರಧಾನವಾಗಿಯೇ ಅಭಿವ್ಯಕ್ತಗೊಂಡಿದೆ. ಅಕ್ಕಮಹಾದೇವಿಯ ಹುಡಾಕಾಟದ ಹಾದಿಯೆಲ್ಲ ಕರುಣರಸದಿಂದ ಕೂಡಿದೆ.

ಬಯಲ ಸುಖಕ್ಕಾಗಿ ಬಂಧಗಳಿಂದ ಬಯಲಾಗುವ ಅಕ್ಕಮಹಾದೇವಿ ಘನಸುಖದಲ್ಲಿ ಅನುವರಿತು ಬೆರೆಯಲು ಸದಾ ಸನ್ನದ್ದಳಾಗಿ ಅಂತರಂಗ ಬಹಿರಂಗಗಳನ್ನು ವಿಸರ್ಜಿಸಿ ದೇವನ ಮೊರೆ ಹೊಕ್ಕು ಆತನೊಂದಿಗೆ ಸಮರಸಗೊಳ್ಳುವ ಮಾರ್ಗಕ್ಕಾಗಿ ತೀವ್ರ ಶೋಧಕ್ಕಿಳಿದ ಪರಿ ಪರಿಭಾವಿಸಿದಷ್ಟು ವಿಸ್ತೃತ, ವಿನಮ್ರ.

"ತನುವನೆಲ್ಲವ ಜರಿದು ಮನವ ನಿಮ್ಮೊಳಗಿರಿಸಿ,
ಘನಸುಖದಲೋಲಾಡುವ ಪರಿಯ ತೋರಯ್ಯಾ ಎನಗೆ.
ಭಾವವಿಲ್ಲದ ಬಯಲಸುಖವು ಭಾವಿಸಿದಡೆಂತಹದು
ಬಹುಮುಖರುಗಳಿಗೆ?
ಕೇಳಯ್ಯಾ, ಶ್ರೀಶೈಲ ಚೆನ್ನಮಲ್ಲಿಕಾರ್ಜುನದೇವಾ
ನಾನಳಿದು ನೀನುಳಿದ ಪರಿಯ ತೋರಯ್ಯಾ ಪ್ರಭುವೆ."[೧೮]

ನಾನಳಿದು ನೀನುಳಿದ ಪರಿಯಲ್ಲಿ ವಿಸರ್ಜನೆಗೊಂಡು ಆಹ್ವಾನಿಸುವ ಕ್ರಿಯೆ ಪಲ್ಲಟವನ್ನುಂಟು ಮಾಡುವುದು. ಮಹಾದೇವಿಯಕ್ಕನ ಮಹಾಯಾನ ಮಹದಲ್ಲಿ ಮೌನಿಯಾಗುವುದೇ ಆತ್ಯಂತಿಕ

ಗುರಿಯುಳ್ಳದ್ದು. ಎಲ್ಲವನ್ನು ನಿರಸಗೊಳಿಸಿಕೊಂಡು ನಿರ್ವಯಲದಲ್ಲಿ ನಿಲುಗಡೆ ಹೊಂದುವ ಅದಮ್ಯ ನಡೆ ಅಕ್ಕನದು. ಅಕ್ಕನ ದಾರಿಯಲ್ಲಿ ಎದುರಾದುದನ್ನೆಲ್ಲ ದಾಟುವುದು ಮತ್ತು ದೈವತ್ವದಲ್ಲಿ ಸಾಮರಸ್ಯ ಸಾಧಿಸುವುದನ್ನು ಆಗುಮಾಡಿಕೊಳ್ಳಲು ಸರ್ವಸಮರ್ಪಣೆಯ ಬಿನ್ನಪವನ್ನು ಮುಂದಿಟ್ಟುಕೊಂಡು ಶರಣಾಗತಿ ಹೊಂದುವ ಭಾವಗಲ್ಲಿ ಆಗ್ರಹವೂ ಇದೆ. ಬದ್ಧತೆಯನ್ನು ತೋರಿಸುತ್ತ ತೊರೆಯನ್ನು ದಾಟಿಸುವ ಹೊಣೆಯನ್ನು ಹರನಿಗೆ ಹೊರಿಸುತ್ತಾಳೆ. ಆ ತೆರನ ಅಭಿವ್ಯಕ್ತಿಯಲ್ಲಿ ಹುಡುಕಾಟ ಹಠ ಹೆಚ್ಚುತ್ತ ಬದ್ಧತೆಯತ್ತ ತಿರುಗುತ್ತದೆ.

"ತನುವ ಬೇಡಿದಡೆ ತನುವಕೊಟ್ಟು ಶುದ್ಧವಪ್ಪೆ.
ಮನವ ಬೇಡಿದಡೆ ಮನವಕೊಟ್ಟು ಶುದ್ಧವಪ್ಪೆ.
ಧನದ ಬೇಡಿದಡೆ ಧನದ ಕೊಟ್ಟು ಶುದ್ಧವಪ್ಪೆ.
ನೀನಾವುದ ಬೇಡಿದಡೂ ಓಸರಿಸಿದಡೆ,
ಕೈವಾರಿಸಿದಡೆ ಹಿಡಿದು ಮೂಗ ಕೊಯಿ.
ಎನ್ನ ಕಲಿತನದ ಬಿನ್ನಪದ ಕಡೆತನಕ ನಡೆಸದಿರ್ದಡೆ
ತಲೆದಂಡ ಕಾಣಾ ಚೆನ್ನಮಲ್ಲಿಕಾರ್ಜುನಾ."[೧೯]

ಬಯಲನಪ್ಪಿಕೊಳ್ಳಲು ಬೇಡಿದ್ದೆಲ್ಲವನ್ನು ನೀಡುವ ನಿಷ್ಠೆಯಲ್ಲಿ ತಲೆದಂಡವೂ ಒಳಗೊಂಡಿದ್ದರಿಂದ ಒಲುಮೆಗೆ ಓಸರಿಸದೆ ಕೈಗೊಳ್ಳದ ಭಕ್ತಿ ದೃಢತೆಯನ್ನು ಕಲಿತನದ ಧೀರತೆಯಲ್ಲಿ ಸಮೀಕರಿಸುತ್ತದೆ. ಮಹಾದೇವಿಯಕ್ಕ ಮಾಯಾ ಪ್ರಪಂಚ, ಸಂಸಾರ, ಪತಿ, ಶರೀರ ಮನ ಧನ ಪ್ರಾಣವನ್ನು ಪಣಕ್ಕಿಟ್ಟು ಪರತತ್ವವನ್ನು ಕೂಡಲು ಹಾತೊರೆಯುವ ಪರಾಕ್ರಮಿ ತೆರನಂತೆಯೇ. ಆದರದು ಭೌತಿಕತೆ ಬಗೆಗಿನ ಬಡಿದಾಟವಲ್ಲ. ಭಾವಗಮ್ಯವಾಗಿರುವ ಬ್ರಹ್ಮವಾಗಿಪ್ಪ ಚೆನ್ನಮಲ್ಲಿಕಾರ್ಜುನನ ನಿಲುವನ್ನು ಅರಿಯಲು ಹೊರಟ ಆಧ್ಯಾತ್ಮದ ಮಹಾಯಾನ.

ಹುಡುಕಾಟ, ಹೋರಾಟ, ಹುಟ್ಟುಗೆಡುವಿಕೆ

ಅಕ್ಕನ ಹುಡುಕಾಟದ ಅಭಿವ್ಯಕ್ತಿಯಲ್ಲಿ ಕರುಣರಸವೇ ಪ್ರಧಾನವಾಗಿ ಹೃದಯಕಮಲದಲ್ಲಿ ನೆಲೆಸಿರ್ಪ ಹರನಿರುವನ್ನು ಸುತ್ತೆಲ ಹರಡಿರುವ ಪ್ರಕೃತಿಯಲ್ಲಿಯೂ ಅಕ್ಕ ಅರಸುವ ರೀತಿ ಅಪ್ಯಾಯಮಾನವಾಗಿದೆ. ಪ್ರಕೃತಿ ಕೆಲವರಿಗೆ ಕಲ್ಲು, ಮರ, ಪರ್ವತಗಳ ಜಡಸಂಚಯ. ಅಕ್ಕಮಹಾದೇವಿಯ ಭಾವ ಪ್ರಪಂಚದಲ್ಲಿ ಪ್ರಕೃತಿ ಪರತತ್ವದ ಪ್ರತಿರೂಪ. ಶಿವಮಯ, ಸೌಂದರ್ಯದೃಷ್ಟಿ ಅಕ್ಕನದು. ಜಗತ್ತು ಜಡ ಜಂಜಡವಾಗದೆ ಜಂಗಮ ಸ್ವರೂಪ ಭಾವದಿಂದ ಜೀವ ಜಡಗಳಲ್ಲಿ ಚೈತನ್ಯವನ್ನು ನೋಡುವ ಅನನ್ಯ ನೋಟ ಅವಳದು. ಪ್ರಕೃತಿಯೊಂದಿಗೆ ಸಂವಹನ ಏರ್ಪಡಿಸಿಕೊಳ್ಳುವ ಅಕ್ಕನ ಅಭಿವ್ಯಕ್ತಿಯಲ್ಲಿ ಪ್ರಕೃತಿ ಪರಮಾತ್ಮನ ಅವಿನಾಭಾವ ಸಂಬಂಧದ ನಂಬಿಕೆಯ ನೆಲೆಗಳಿವೆ.

"ಅಳಿಸಂಕುಲವೆ, ಮಾಮರವೆ, ಬೆಳುದಿಂಗಳೆ, ಕೋಗಿಲೆಯೆ
ನಿಮ್ಮನೆಲ್ಲರನೂ ಒಂದ ಬೇಡುವೆನು.
ಎನ್ನೊಡೆಯ ಚೆನ್ನಮಲ್ಲಿಕಾರ್ಜುನದೇವ ಕಂಡಡೆ
ಕರೆದು ತೋರಿರೆ."[೨೦]

ಅತ್ಯಂತ ಧ್ವನಿಪೂರ್ಣವಾದ ಅಕ್ಕಮಹಾದೇವಿಯ ಅಭಿವ್ಯಕ್ತಿಯಲ್ಲಿ ಪ್ರಕೃತಿಯನ್ನು ಪರಿಭಾವಿಸುವ, ವಿಚಾರಿಸುವ ರೀತಿ ವಿಶಿಷ್ಟವೆನಿಸಿದೆ. ಪ್ರಕೃತಿ ಪರಮಾತ್ಮನ ಇರುವಿಕೆಯನ್ನು ಅರಿತಿರುವುದೆಂಬ ನಂಬಿಕೆಯಿಂದ ಆಶಾಭಾವನೆಯಿಂದ ಆರ್ತಿಸುವಳು. ಮನುಷ್ಯ ಪ್ರಪಂಚಕ್ಕಿಂತ ಪರಿಶುದ್ಧವಾದ ಪ್ರಕೃತಿಯಲ್ಲಿ ಅಕ್ಕನಿಗೆ ಅತೀವ ಆಸಕ್ತಿ, ಆನಂದ ಆಶಾಭಾವ!

ಪ್ರಕೃತಿಯ ಪರಿಕರಗಳೆಲ್ಲದರಲ್ಲಿ ಮಹಾದೇವಿಯಕ್ಕನಿಗೆ ಅನನ್ಯ ವಿಶ್ವಾಸ, ಪ್ರೀತಿ, ಪ್ರಕೃತಿ ಪರತತ್ವದ ಪ್ರತಿಸೃಷ್ಟಿ ಆದ್ದರಿಂದ ಅಲ್ಲಿ ನಿರ್ಮಿತವಾದವುಗಳೆಲ್ಲ ಪರಬ್ರಹ್ಮನ ಸ್ವರೂಪವೇ ಅವುಗಳಿಗೆ ನಿರ್ಮಾತೃನ ಗುರುತು ಇರತಕ್ಕದೆ ಎಂಬ ಅದಮ್ಯ ಭಾವವೈಶಾಲ್ಯ ಅಕ್ಕನದು.

"ವನವೆಲ್ಲ ನೀನೆ, ವನದೊಳಗಣ ದೇವತರುವೆಲ್ಲಾ ನೀನೇ,
ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ.
ಚೆನ್ನಮಲ್ಲಿಕಾರ್ಜುನಾ,
ಸರ್ವಭರಿತನಾಗಿ ಎನಗೇಕೆ ಮುಖದೋರೆ?"[೨೧]

ಅಕ್ಕಮಹಾದೇವಿಯು ಹುಡುಕಾಟದ ಹಾದಿಯಲ್ಲಿ ಹಲವರಿಂದ ಹೀಯಾಳಿಕೆ, ಹೀನತೆಯನ್ನು ಅನುಭವಿಸಿದ್ದರಿಂದ ಪ್ರಪಂಚದ ಮನುಷ್ಯರ ಒಡನಾಟದಿಂದ ದೂರವುಳಿದು ಪ್ರಕೃತಿಯೊಂದಿಗೆ ನೇರ ಅನುಸಂಧಾನಗೈದ ಅಕ್ಕಮಹಾದೇವಿಯ ವಚನಗಳಲ್ಲಿ ಪ್ರಕೃತಿಯ ಸಹಜತೆ, ಸೌಂದರ್ಯಾತ್ಮಕತೆ, ರಮ್ಯತೆ ಮೇಳವಿಸಿವೆ. ಪ್ರಾಚೀನ ಕಾವ್ಯ ಪರಂಪರೆಯಲ್ಲಿಯೂ ಪ್ರಕೃತಿಯೊಡನೆ ನಡೆಸಿದ ಅನುಸಂಧಾನದಿಂದ ರಮಣೀಯಾರ್ಥ ಕಾವ್ಯವೆಂಬ ಭಾವ ಮೂಡಿರುವುದು ಗಮನಾರ್ಹ! ಪ್ರಕೃತಿಯ ಸೌಂದರ್ಯ, ರಮಣೀಯತೆಗೆ ಮಾರುಹೋಗದ ಕವಿ, ಕಾವ್ಯವನ್ನು ಊಹಿಸುವುದು ಅಸಾಧ್ಯ! ಅಕ್ಕಮಹಾದೇವಿಯ ಕವಿ ಹೃದಯ ಹರಹಿಕೊಂಡ ಪ್ರಾಕೃತಿಕ ಚೆಲುವನ್ನು ತನ್ನ ಹುಡುಕಾಟದ ಪಥದಲ್ಲಿ ಸಂಗಾತಿಯಾಗಿ, ಸ್ನೇಹಮಯಿಯಾಗಿ ಕಂಡುಂಡ ಅನುಭವಗಳನ್ನು ಹಾಡಿ, ಹರುಷದಿಂದ ಓಲಾಡಿದವಳು.

ಪಾರಂಪರಿಕ ಕಾವ್ಯಮಾರ್ಗದ ಅಷ್ಟಾದಶ ವರ್ಣನೆಗಳ ಜಂಜಡಕ್ಕೆ ಜೋತುಬೀಳದ ಅಕ್ಕ ಪ್ರಕೃತಿಯ ಚಲನಶೀಲತೆಯನ್ನು ಪರತತ್ವದ ಪರಿಭಾವನೆಗೆ ನಿರ್ಮಿಸಿಕೊಂಡವಳು. ನಿಸರ್ಗ

ನವನವೋನ್ಮೇಶಶಾಲಿನಿ, ನಿತ್ಯಸಂಭ್ರಮದಿಂದ ಕಂಗೊಳಿಸುತ್ತಿರುವುದರಿಂದ ಅಕ್ಕಮಹಾದೇವಿ ತನ್ನ ನೋವನ್ನು ನಲಿವಾಗಿ ನಿವೇದಿಸಿಕೊಂಡದ್ದು ಪ್ರಕೃತಿಯಲ್ಲಿಯೆ. "ವಚನಕಾರರಲ್ಲಿಯೇ ವಿರಳವೆನ್ನಬಹುದಾದ ನಿಸರ್ಗ ವರ್ಣನೆ, ಪ್ರಕೃತಿ ಪ್ರೇಮ ಅಕ್ಕನ ವಚನಗಳಲ್ಲಿ ಸಶಕ್ತವಾಗಿ ಅಭಿವ್ಯಕ್ತಗೊಂಡಿವೆ. ತನ್ನ ಭಾವನೆಗಳಿಗೆ ನಿಲುಕದ ಪ್ರಕೃತಿಯ ಪ್ರತಿವಸ್ತು ವಿಶೇಷದೊಂದಿಗೆ ಅವಿನಾಭಾವವಾಗಿ ಸ್ಪಂದಿಸುವ ರಸಪೂರ್ಣ ಭಾವುಕ ಮನಸ್ಸು ಮಹಾದೇವಿಯಕ್ಕನದು. ಆಕೆಗೆ ನಿಸರ್ಗ ಕೇವಲ ಮರ–ಗುಡ್ಡ ಬೆಟ್ಟಗಳಂತಹ ನಿರ್ಜೀವ ವಸ್ತು ಸಂಚಯವಲ್ಲ. ಪಶು ಪ್ರಾಣಿಗಳ ಮೂಕ ಸೃಷ್ಟಿಯಲ್ಲ. ನಿಸರ್ಗದ ಚೇತನಾಚೇತನ ವಸ್ತುಗಳೆಲ್ಲ ಒಂಟಿತನದ ಸಾಧಕ ಜೀವನದ ಜೀವಂತ ಒಡನಾಡಿಗಳಾಗಿವೆ."[೨೨]

ನಿಸರ್ಗದ ಪ್ರತಿಯೊಂದನ್ನು ಪ್ರೇಮಭಾವದಿಂದ ಕಾಣುವ ಅಕ್ಕಮಹಾದೇವಿ ಅದರೊಂದಿಗೆ ತನ್ಮಯಗೊಂಡು ಮನದ ದುಗುಡ, ದುಮ್ಮಾನಗಳನ್ನು ಹಂಚಿಕೊಳ್ಳುವ, ಮನವನ್ನು ಹಗುರಾಗಿಸಿಕೊಳ್ಳುವ, ಹಾಡುವ, ಹಾರೈಸುವ ವಿಭಿನ್ನ ಭಾವಲಹರಿಗಳಲ್ಲಿ ಭಾವಗೀತೆಯ ಗುಣವೈಶಿಷ್ಟ ತುಂಬಿಕೊಂಡಿದೆ. ರಸ, ಧ್ವನಿ ಉಪಮೆ, ಅಲಂಕಾರ, ಛಂದಸ್ಸು ಬಂಧಗಳ ಕಟ್ಟುನಿಟ್ಟಿನ ನಿರ್ಬಂಧಗಳನ್ನು ಅನುಸರಿಸಿ ಕಾವ್ಯ ರಚಿಸಬೇಕೆಂಬ ಸಿದ್ಧ ಕಾವ್ಯಮಾರ್ಗವನ್ನು ಅನುಸರಿಸದಿದ್ದರೂ, ಪೂರ್ಣವಾಗಿ ಅದನ್ನೂ ತಿರಸ್ಕರಿಸದ ಮಹಾದೇವಿಯಕ್ಕ ತನ್ನ ಭಾವಾಭಿವ್ಯಕ್ತಿಗೆ ಯುಕ್ತವಾದ ರಸ, ಧ್ವನಿ, ಅಲಂಕಾರ, ಪ್ರತಿಮೆಗಳನ್ನು ಬಳಸಿ ವಚನದ ಅರ್ಥಕ್ಕೆ ಹೆಚ್ಚಿನ ಹೊಳಹನ್ನು ನೀಡಿರುವಳು. ಅಕ್ಕಮಹಾದೇವಿಗೆ ಕಾವ್ಯ, ಅದರ ಪರಿಕಲ್ಪನೆಗಳ ಬಗೆಗಿನ ಜ್ಞಾನವಿರುವುದರಿಂದ ವಚನಗಳಲ್ಲಿ ಮೀಮಾಂಸೆಯ, ಕಾವ್ಯದ ಆಕರಗಳು ಸಹಜವಾಗಿ ಸಮ್ಮಿಳಿತವಾಗಿವೆ.

ಪಾರಂಪರಿಕ ಕಾವ್ಯ ಮಾರ್ಗಕ್ಕಿಂತ ಭಿನ್ನ ನೆಲೆಯಲ್ಲಿ ವಚನ ರಚನೆಯಿದ್ದರೂ ಸ್ವಚ್ಛಂದದ ಬಂಧಗಳಲ್ಲಿ ಕಾವ್ಯದ ಮಾಧುರ್ಯ ಮೇಳವಿಸಿದೆ. ಅಕ್ಕಮಹಾದೇವಿಯ ಹುಡುಕಾಟದ ವೇದನೆ, ನಿವೇದನೆ, ವಿಕಳಾವಸ್ಥೆಯ ವಚನಗಳಲ್ಲಿ ಕರುಣರಸ ಪ್ರವಹಿಸಿದರೆ, ಹರನ ಹುಡಕಾಟ ಹೋರಾಟದ ಹಾದಿಯಾದಾಗ ವೀರರಸ ವಚನಗಳಲ್ಲಿ ಧೀರತೆಯ ಧ್ವನಿಯಾಗಿ ಹೊರಹೊಮ್ಮಿದೆ. ಚಂಪೂ ಕಾವ್ಯಗಳಲ್ಲಿರುವ ಯುದ್ಧಗಳ ರಣರಂಗ, ಉತ್ಸಾಹಗಳ, ಸೈನ್ಯ ಮತ್ತಿತರ ಸಂದರ್ಭಗಳ ಲೌಕಿಕ ವರ್ಣನೆಗಳಿಲ್ಲ. ಆದರೆ ಭಕ್ತನ ಶ್ರದ್ಧೆ ಮಾಹೇಶ್ವರನ ನಿಷ್ಠೆಯಾಗಿ ಪರಿವರ್ತಿತಗೊಳ್ಳುವ ಸಂದರ್ಭದ ಅಭಿವ್ಯಕ್ತಿಗಳಲ್ಲಿ ಅಲೌಕಿಕ ಗಮ್ಯತೆಯೆಡೆಗಿನ ಭಾವಗಳಲ್ಲಿ ವೀರಯೋಧನ ಉತ್ಸಾಹ, ಛಲಗಳು ಕಾಣಿಸಿಕೊಂಡಿವೆ.

"ಕಳನೇರಿ ಇಳಿಯುವುದು ವೀರಂಗೆ ಮತವಲ್ಲ.
ಶಿವಶರಣಂಗೆ ಹಿಮ್ಮೆಟ್ಟುವುದು ಪಥವಲ್ಲ.

ಮನದೊಡೆಯ ಮನವನಿಂಬುಗೊಂಬನಯ್ಯಾ
ಏರಲಾಗದು ಶ್ರೀ ಪರ್ವತವ; ಏರಿ ಇಳಿದಡೆ ವ್ರತಕ್ಕೆ ಭಂಗ.
ಕಳನೇರಿ ಕೈದು ಮರೆದಡೆ
ಮಾರಂಕ ಚೆನ್ನಮಲ್ಲಿಕಾರ್ಜುನ ನಿಮ್ಮೈಗಾಣಲಿರಿವನು."[೨೩]

ವಚನದಲ್ಲಿ ಯುದ್ಧದ ರೂಪಕ ಯುದ್ಧದ ಸನ್ನಿವೇಶದಲ್ಲಿ ವೀರ ಯೋಧನಿಗಿರಬೇಕಾದ ಪರಾಕ್ರಮದ ಪರಾಕಾಷ್ಠತೆಯ ವಿವಿಧ ಸ್ತರಗಳನ್ನು, ವೀರಯೋಧನ ಮನಸ್ಥಿತಿಯ ಸಮಗ್ರತೆಯನ್ನು ಚಿತ್ರಿಸಲಾಗಿದೆ. ಲೌಕಿಕ ಧೀರತೆಯಂತೆ ದಾರ್ಶನಿಕ ದೃಢತೆಯೂ ನಿಷ್ಠೆಯಿಂದ ಗಟ್ಟಿಗೊಳ್ಳಲೇಬೇಕು. ಪರಾಕ್ರಮಿಯಾದವನಿಗೆ ಹೋರಾಡುವುದೇ ಧರ್ಮ ಹೊರತಾಗಿ ಹೇಡಿಯಂತೆ ಹಿಮ್ಮೆಟ್ಟುವದಲ್ಲ. ವ್ರತಕ್ಕೆ ಭಂಗ ತರದೇ ಮನನಿಷ್ಠೆಯಲ್ಲಿ ಹೋರಾಡಿದರೆ ಗೆಲುವು. ಅದಿರದ ಹಂದೆಯ ವರ್ತನೆ ಶಿಕ್ಷಾರ್ಹವೆಂಬ ಎಚ್ಚರಿಕೆ ಅಕ್ಕನ ಅಭಿವ್ಯಕ್ತಿಯಲ್ಲಿ ಧ್ವನಿಪೂರ್ಣವಾಗಿದೆ.

"ಆಳುತನದ ಮಾತನೇರಿಸಿ ನುಡಿದಡೆ
ಆಗಳೆ ಕಟ್ಟಿದೆನು ಗಂಡುಗಚ್ಚೆಯ.
ತಿಗುರನೇರಿಸಿ ತಿಲಕವನಿಟ್ಟು
ಕೈದುವ ಕೊಂಡು ಕಳನೇರಿದ ಬಳಿಕ,
ಕಟ್ಟಿದ ನಿರಿ ಸಡಿಲಿದಡೆ ಇನ್ನು ನಿಮ್ಮಾಣೆ,
ಕಾಣಾ ಚೆನ್ನಮಲ್ಲಿಕಾರ್ಜುನಾ."[೨೪]

ಅಕ್ಕಮಹಾದೇವಿ ಪುರುಷ ಯೋಧನ ವೇಷ ಧರಿಸಿ, ಯುದ್ಧದ ಆಯುಧಗಳನ್ನು ಹಿಡಿದು ರಣರಂಗದಲ್ಲಿ ಕಾದಾಡುವ ಕಲಿಯಂತೆ ತನ್ನನ್ನು ಗ್ರಹಿಸಿ ಮನದಲ್ಲಿ ಸ್ಥಾಪಿಸಿಕೊಂಡಿದ್ದಾಳೆ. ಗಂಡುಗಚ್ಚೆ ಕಟ್ಟುವುದು ಅಕ್ಕನಿಗೆ ಉತ್ಸಾಹ ಮೂಡಿಸಿದೆ. ಮಲ್ಲಿಕಾರ್ಜುನನ ಸಾಕ್ಷಿಪ್ರಜೆಯಲ್ಲಿ ತನ್ನ ವೀರತ್ವವನ್ನು ದೃಢಿಕರಿಸುತ್ತ ಪ್ರತಿಜ್ಞೆಗೈಯ್ಯುವ ಪಾರಮಾರ್ಥಿಕ ಪರಾಕ್ರಮಿಯಾಗಿ ಗೋಚರಿಸಿದ್ದಾಳೆ. ಗುರಿಯಿಂದ ಕದಲದ ಕದನದಲ್ಲಿ ತೀವ್ರ ನಿಷ್ಠೆಯ ಪ್ರಮಾಣದಲ್ಲಿ ಪರಾಕ್ರಮಿಯ ಪರಿಭಾಷೆಯ ಆವೇಶ, ಧೀರತೆಗಳೇ ತುಂಬಿವೆ. ಅಕ್ಕನ ಹೋರಾಟ ಒಳಹೊರಗನ್ನು ಒಳಗೊಂಡಿರುವಂತಹದು. ಒಳಗಿನ ಅನುಸಂಧಾನಕ್ಕಾಗಿ ಅಕ್ಕ ಮಾಡಿಕೊಂಡಿರುವ ಸಿದ್ಧತೆ ಅಪೂರ್ವವಾದುದು.

"ಅಘಟಿತ ಘಟಿತನ ಒಲವಿನ ಶಿಶು!
ಕಟ್ಟಿದೆನು ಜಗಕ್ಕೆ ಬಿರಿದನು.
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳಿಗೆ

ಇಕ್ಕಿದೆನು ಕಾಲಲಿ ತೊಡರನು.
ಗುರುಕೃಪೆಯೆಂಬ ತಿಗುರನಿಕ್ಕಿ
ಮಹಾಶರಣೆಂಬ ತಿಲಕವನಿಕ್ಕಿ
ನಿನ್ನ ಕೊಲುವೆ ಗೆಲುವೆ ಶಿವಶರಣೆಂಬ ಅಲಗಕೊಂಡು.
ಬಿಡು ಬಿಡು ಕರ್ಮವೆ, ನಿನ್ನ ಕೊಲ್ಲದೆ ಮಾಣೆನು.
ಕೆಡಹಿಸಿಕೊಳ್ಳದೆನ್ನ ನುಡಿಯ ಕೇಳಾ.
ಕೆಡದ ಶಿವಶರಣೆಂಬ ಅಲಗನೆಕೊಂಡು
ನಿನ್ನ ಕೊಲುವೆ ಗೆಲುವೆ ನಾನು.
ಬ್ರಹ್ಮಪಾಶವೆಂಬ ಕಳನನೆ ಸವರಿ,
ವಿಷ್ಣು ಮಾಯೆಯೆಂಬ ಎಡೆಗೋಲನೆ ನೂಕಿ,
ಎನ್ನೊಡೆಯ ಚೆನ್ನಮಲ್ಲಿಕಾರ್ಜುನಯ್ಯ
ತಲೆಗೂದಲಿ ಕಾದುವೆನು ನಾನು."[೨೫]

ಅಲೌಕಿಕ ಗುರಿ ಸಾಧನೆಗೆ, ಅಂತರಂಗ ಶುದ್ಧಿಗಾಗಿ ನಡೆಸಿದ ಹೋರಾಟದಲ್ಲಿ ಅಕ್ಕನ ಆತ್ಮಬಲ ಅಭಿವ್ಯಕ್ತಿಯಲ್ಲಿ ಗಟ್ಟಿಕೊಳ್ಳುತ್ತ ಸಾಗಿದೆ. ಗುರುಕೃಪೆಯ ತಿಗುರನ್ನಿಕ್ಕಿ ಸಮರ್ಪಣೆಯ ತಿಲಕವನ್ನಿಟ್ಟು ಕರ್ಮದೊಡನೆ ಕದನ ಏರ್ಪಡಿಸಿಕೊಳ್ಳುವ ಅಕ್ಕ ಗೆಲುವಿನ ಹಠವನ್ನು ಹರನ ಕೃಪೆಯಿಂದ ಸಾಧಿಸಿಕೊಳ್ಳುವೆನೆಂಬ ಅದಮ್ಯ ವಿಶ್ವಾಸವಿರಿಸಿರುವಳು. ಲೌಕಿಕದ ವೀರಯೋಧನ ಶೌರ್ಯವನ್ನೇ ಅಕ್ಕನ ಆಧ್ಯಾತ್ಮಿಕ ಆತ್ಯಂತಿಕ ನಿಲುವಿನ ಗೆಲುವಿನ ಹೋರಾಟದಲ್ಲಿ ಸಮಾನ ನೆಲೆಯಲ್ಲೆ ಗ್ರಹಿಸಲು ಸಾಧ್ಯವಿದೆ. ಅಲಗು, ಕೊಲುವೆ, ಗೆಲುವೆ ನುಡಿಗಡಣದಲ್ಲಿ ಶುದ್ಧ ಸಂಘರ್ಷದ ನೆಲೆಗಳಿವೆ.

ಕಾಮ ಕ್ರೋಧಾದಿಗಳು ಕರ್ಮಗಳ ಜೊತೆಗಿನ ಕದನದಲ್ಲಿ ಖಚಿತತೆಯಿದೆ. ಅದು ಗೆಲುವೆನೆಂಬ ಅಚಲ ವಿಶ್ವಾಸದಿಂದಲೇ ಪ್ರಾರಂಭಗೊಂಡಿರುವ ಚಿಂತನೆಯಿದೆ. ಪ್ರಪಂಚದಲ್ಲಿ ನಡೆಯುವ ಯುದ್ಧ ಸಂಘರ್ಷಗಳು ಹೊನ್ನು, ಹೆಣ್ಣು, ಮಣ್ಣು ಮೊದಲಾದ ಭೌತಿಕವಸ್ತುಗಳ ವಶವರ್ತಿಗಾಗಿ, ದ್ವೇಷ, ಅಸೂಯೆ ಹಿಂಸೆಗಳನ್ನು ಹುಟ್ಟುಹಾಕುತ್ತ ಅದೆಷ್ಟೋ ಜೀವ ಚೈತನ್ಯಗಳ ವಿನಾಶಕ್ಕಾಗಿ ಕದನಗಳು ಕಾರಣವಾಗಿವೆ. ಅಂತಹ ಭೀಭತ್ಸ ರಸವುಳ್ಳ ಯುದ್ಧದ ವಸ್ತುಕ, ವರ್ಣನೆ ಪಾರಂಪರಿಕ ಕಾವ್ಯಗಳಲ್ಲಿ ವಿಜೃಂಬಿಸಿದೆ. ವ್ಯತಿರಿಕ್ತವಾಗಿ ವಚನಗಳಲ್ಲಿ ಭೌತಿಕ ವಸ್ತುಗಳ ಹಂಬಲದಿಂದ ಹುಟ್ಟಿದ ಯುದ್ಧದ ವರ್ಣನೆಗಳಿಲ್ಲ, ವಸ್ತುವಿಷಯಗಳೆಲ್ಲ ಅಂಹಿಸಾತ್ಮಕವಾದ ತಾತ್ವಿಕ, ದಾರ್ಶನಿಕ, ಅನುಭಾವಕ್ಕಾಗಿ ಅಂತರಂಗದ ಅರಿವಿನ ಅನುಸಂಧಾನಕ್ಕಾಗಿ ನಡೆದ ಅವಿರಳ ಹೋರಾಟವದು. ವಚನಗಳ ಅಂತರಂಗದಲ್ಲಿ ವಸ್ತುಕ, ವರ್ಣಕಗಳ ಪರಿಭಾಷೆಯಿದ್ದರೂ ಭೀಭತ್ಸತೆಯಿಲ್ಲ.

ಆನಂದದ ಪ್ರಾಪ್ತಿಗಾಗಿ ಅವಿರತವಾಗಿ ನಡೆಸಿದ ಹೋರಾಟದ ಶಕ್ತಿಯನ್ನು ಹೊಂದಿರುವ ಅವಿಶ್ರಾಂತವಾದ ಪ್ರಯತ್ನವದು. ಸಂಘರ್ಷದ ಸಂರಚನೆಯ ಶಬ್ಧಗಳಿದ್ದರೂ ಅವು ಹೊರಡಿಸುವ ಧ್ವನಿ, ರಸಗಳಲ್ಲಿ ವೀರತ್ವ, ಕ್ರೌರ್ಯದ ಸಾಂಕೇತಿಕತೆ ಲಕ್ಷಾರ್ಥವನ್ನೇ ಆವರಿಸಿಕೊಂಡಿರುವುದು. ಅಕ್ಕಮಹಾದೇವಿಯ ವಚನಗಳ ಮೀಮಾಂಸೆಯ ಪರಿಕಲ್ಪನೆಗಳು ಪಾರಂಪರಿಕ ಸಾಹಿತ್ಯ ಕಾವ್ಯಬಂಧಗಳನ್ನು ಮೀರಿಯೂ ಆತ್ಯಂತಿಕ ನೆಲೆಯಲ್ಲಿಯೂ ವಿಸ್ತರಿಸಿಕೊಳ್ಳುವಂತಿವೆ. ಕಾವ್ಯತತ್ವಗಳ ಸಮ್ಮಿಳನವಿದ್ದರೂ ಸ್ವಚಂದದ ಅಭಿವ್ಯಕ್ತಿಯ ತುಡಿತವಿದೆ. ಆ ಕಾರಣಕ್ಕಾಗಿ ಹೃದಯಯಂಗಮ ಭಾವಗೀತೆಗಳಾಗಿವೆ.

ಹೋರಾಟದ ಅಭಿವ್ಯಕ್ತಿಯಲ್ಲಿ ನೇರ ನಿಷ್ಠುರತೆಯಿದೆ. ಅಚಲ ನಡೆಯಿದೆ. ಅದಕ್ಕೆ ಪೂರಕವಾದ ಪದ ಅರ್ಥ ಧ್ವನಿಗಳಿವೆ. ರಚನಾ ವಿನ್ಯಾಸ ಸೌಂದರ್ಯದ ಕಡೆಗೆ ಒಲಿಯದೆ ಸಾಮರ್ಥ್ಯ ಪ್ರತಿನಿಧಿಕರಣವಾಗಿ ಶಕ್ತಿಸಂಚಲನವನ್ನುಂಟುಮಾಡುತ್ತದೆ. ಗೆಲುವಿನ ಧೋರಣೆಗೆ ಧ್ವನಿಯಾಗುತ್ತವೆ.

> "ಗುರುವೆಂಬ ತೆತ್ತಿಗನು
> ಲಿಂಗವೆಂಬಲಗನು ಮನನಿಷ್ಠೆಯೆಂಬ ಕೈಯಲ್ಲಿಕೊಡಲು,
> ಕಾದಿದೆ ಗೆಲಿದೆ ಕಾಮನೆಂಬವನ,
> ಕ್ರೋಧಾದಿಗಳು ಕೆಟ್ಟು, ವಿಷಯಂಗಳೋಡಿದವು.
> ಅಲಗು ಎನ್ನೊಳು ನಟ್ಟು ಆನಳಿದ ಕಾರಣ
> ಚೆನ್ನಮಲ್ಲಿಕಾರ್ಜುನ ಲಿಂಗವ ಕರದಲ್ಲಿ ಹಿಡಿದೆ."[೨೬]

ಪ್ರತಿಯೊಂದು ಹೋರಾಟವು 'ಅಹಂ'ನ್ನು ಕೇಂದ್ರೀಕರಿಸಿ ನಡೆದಿರುವುದರಿಂದ ಅಸಂಖ್ಯ ನೋವು, ದುಃಖ ದುಮ್ಮಾನಗಳಿಗೆ ಕಾರಣೀಭೂತವಾಗಿ ಭೀಭತ್ಸ ದೃಶ್ಯವನ್ನು ಸಾಕ್ಷೀಕರಿಸಿವೆ. 'ಅಹಂ' ನ್ನು ತಣಿಸಲು ತನ್ನತನದ ಅಸ್ತಿತ್ವವನ್ನು ಪಣಕ್ಕಿಟ್ಟು ಹೋರಾಡಿದ ಅಸಂಖ್ಯ ಪ್ರಾಪಂಚಿಕ ಘಟನೆಗಳು ಇತಿಹಾಸದ ಪುಟ ಸೇರಿವೆ. ಹೊರಗಿನ ಹೋರಾಟ ಹವಣಿಕೆಯ ಸುತ್ತ ಹೆಣೆದಿರುವ ಕಾರಣದಿಂದ ವಿನಾಶದ ನೆಲೆಗಳಲ್ಲಿ ನಿರ್ಮಿಸಿದವುಗಳು. 'ನಾನು' 'ನನ್ನದು' ಮಮಕಾರವನ್ನೇ ಮಹಾದೇವಿಯಕ್ಕ ಅಳಿದುಕೊಳ್ಳಲು ಅವಿರತವಾಗಿ ಲಿಂಗವೆಂಬಲಗು ಹಿಡಿದು ಹೋರಾಡಿರುವುದರಿಂದ ವಿಷಯಾದಿಗಳು ಹೆದರಿ ಓಡಿಹೋದ ಪರಿಯ ಗತಿಶೀಲತೆ ಜೀವಂತಿಕೆಯನ್ನು ವ್ಯಕ್ತಗೊಳಿಸಿದ ಕ್ರಮದಲ್ಲಿ ತನ್ನನ್ನು ತಾನು ನಿರಶನಗೊಳಿಸುವ, ವಿಸರ್ಜಿಸಿಕೊಳ್ಳುವ ತೀವ್ರತೆಯಿದೆ. ಆ ಹಂಬಲದಲ್ಲಿ ನಿರವಯಲದಲ್ಲಿ ನೆಲೆನಿಂತ ನಿರಾಳತೆಯಿದೆ.

ಬಹಿರಂಗದ ವಿಷಯಾದಿಗಳ ಬಯಕೆಯಲ್ಲಿ ಬವಣೆ, ಬಡಿದಾಟಗಳು ಅಶಾಂತಿ, ಅರಾಜಕತೆ ಹಿಂಸೆ ಕ್ರೌರ್ಯವನ್ನು ಹುಟ್ಟುಹಾಕಿ ಇತರರ ಅಸ್ತಿತ್ವವನ್ನು ಅಳಿಯಲು ಆ ಉದ್ದೇಶ ಸಾಧನೆಯನ್ನು

ಈಡೇರಿಸಲು ಎಲ್ಲಿಲ್ಲದ ಪ್ರಯತ್ನಗಳು ಕಾವ್ಯ ಪ್ರೇರಿತ ವಸ್ತು ವಿಷಯಗಳಾಗಿ ಅತಿರಂಜಿತ ವರ್ಣನೆಗಳಿಂದ ಭೌತಿಕ ನೆಲೆಯಲ್ಲಿ ಕ್ರೌರ್ಯವನ್ನು ಎತ್ತಿಹಿಡಿದಿವೆ. ಅಕ್ಕಮಹಾದೇವಿ ತನ್ನತನದ ಸುತ್ತ ಆವರಿಸಿರುವ ಅಂತರಂಗಿಕ ವಿಷಯಾದಿಗಳೊಡನೆ ಸತತ ಸೆಣಸಾಡಿ ಸಂಘರ್ಷದ ನೆಲೆಯಿಂದ ಶಾಂತಿ, ಸಂತೃಪ್ತಿ, ಸುಯಿಧಾನಗಳ ನೆಲೆಯಲ್ಲಿ ವಿರಮಿಸುವುದರಿಂದ ಭಾವನಾತ್ಮಕ ಮಾಧುರ್ಯಭರಿತ ತಾತ್ವಿಕ ಚಹರೆಗಳು ಅಲ್ಲಿ ನೆಲೆ ನಿಂತಿವೆ. ತಾತ್ವಿಕ, ದಾರ್ಶನಿಕ ಚಿಂತನೆಗಳು ಸಹೃದಯರಲ್ಲಿ ಭಾವವನ್ನು ಉದ್ದೀಪನಗೊಳಿಸುತ್ತವೆ. ನಿರಾಕರಣೆಯ ನೆಲೆಗಳಿಂದ ನಿರ್ಭಾವದ ವಲಯದಲ್ಲಿ ತನ್ನತನದ ಅಸ್ತಿತ್ವವನ್ನು ಕಂಡುಕೊಳ್ಳಲು ನೆರವಾಗುತ್ತವೆ.

ಮಹಾದೇವಿಕ್ಕನ ಹೋರಾಟದಲ್ಲೂ ವಿಷಯಾದಿಗಳ ಜೊತೆಗೆ ಅನುಸಂಧಾನವಿದೆ, ಆದರೆ ನಿಗ್ರಹವಿಲ್ಲ. ನಿಗ್ರಹದಿಂದ ಒತ್ತಡ ಸೃಷ್ಟಿಯಾಗಿ ಮತ್ತೊಂದು ರೀತಿಯಲ್ಲಿ ಸಂಘರ್ಷವನ್ನು ಏರ್ಪಡಿಸುವುದರಿಂದ ನಿಗ್ರಹಕ್ಕಿಂತ ಸಹಜ ಸಾಧನೆಯಿಂದ ಉದಾತ್ತೀಕರಣಗೊಳಿಸಿಕೊಂಡ ಇತ್ಯಾತ್ಮಕ ಪ್ರೇರಣೆಯಿದೆ. ಮಹಾದೇವಿಯಕ್ಕನ ವಚನಗಳ ಮೀಮಾಂಸೆಯ ಫಲಶ್ರುತಿಯೆಂದರೆ, ಮಾತಿನಿಂದ ಮೌನದೆಡೆಗೆ ಸಾಗುವ ನಿರ್ವಚನದ ನಿಲುವದು. ನಿತ್ಯಸುಖವನಪ್ಪಿಕೊಂಡು ನಿರಾಳಗೊಳ್ಳುವ ನಿರಂತರವಾದ ಪ್ರಕ್ರಿಯೆಯದು.

"ಮೂಲಾಧಾರದ ಬೇರಮೆಟ್ಟಿ, ಭ್ರೂಮಂಡಲವನೇರಿದೆ.
ಆಚಾರದ ಬೇರ ಹಿಡಿದು ಐಕ್ಯದ ತುದಿಯನೇರಿದೆ.
ವೈರಾಗ್ಯದ ಸೋಪಾನದಿಂದ ಶ್ರೀಗಿರಿಯನೇರಿದೆ.
ಕೈವಿಡಿದು ತೆಗೆದುಕೊಳ್ಳಾ, ಚೆನ್ನಮಲ್ಲಿಕಾರ್ಜುನಾ."[೨೭]

ಲಿಂಗವೆಂಬಲಗಿನ ನಿತ್ಯದ ಅನುಸಂಧಾನದಿಂದ ಮೂಲಾಧಾರದಿಂದ ಭ್ರೂಮಂಡಲವ ನೇರುವ ಶಕ್ತಿ ಅಕ್ಕನಿಗೆ ಪ್ರಾಪ್ತವಾಗಿರುವುದರಿಂದ ಷಟಸ್ಥಲ ಮಾರ್ಗದಲ್ಲಿ ಸಾಗಿದ ಶರಣಸತಿ ಲಿಂಗಪತಿಯೊಡನೆ ಬೆರೆಯುವ ಐಕ್ಯತೆಯ ದರ್ಶನ ಸಾಧ್ಯವಾಗಿದೆ. ದ್ವಂದ್ವತೆ ನೀಗಿ ದರ್ಶನದೃಷ್ಟಿ ಸಿದ್ದಿಸಿದೆ. ಬರುವುದೆಲ್ಲವನ್ನು ಬರಮಾಡಿಕೊಳ್ಳುವ ನಿರಾಳ ನಿಲುವಿನ ಅಕ್ಕಮಹಾದೇವಿಯ ವಚನಗಳಲ್ಲಿ ಅಪಾರವಾದ ಸ್ಥೈರ್ಯದ ಭಾವವಿದೆ.

"ನಾಳೆ ಬರುವುದು ನಮಗಿಂದೆ ಬರಲಿ,
ಇಂದು ಬರುವುದು ನಮಗೀಗಲೇ ಬರಲಿ;
ಆಗೀಗ ಎನ್ನದಿರೊ, ಚೆನ್ನಮಲ್ಲಿಕಾರ್ಜುನಾ."[೨೮]

ವ್ಯಕ್ತಿಗತ ವೇದನೆಗಳನ್ನು ನಿವೇದಿಸಿಕೊಂಡು ತಳಮಳವನ್ನು ತೋಡಿಕೊಂಡು ತನ್ನತನದಲ್ಲಿ ದೇವನ ಅಸ್ತಿತ್ವವನ್ನು ಕಂಡುಕೊಳ್ಳುವ ಹಾದಿಯಲ್ಲಿನ ಹಲವು ಅಭಿವ್ಯಕ್ತಿಗಳು ಕರುಣರಸದಿಂದ

ಹೃದ್ಯವೇದ್ಯವಾದರೆ ಹೋರಾಟದ ಧೀರತೆಯ ಧ್ವನಿಯಲ್ಲಿ ವೀರರಸ ಉತ್ಸಾಹದಿಂದ ಹೊರಹೊಮ್ಮುತ್ತದೆ. ಹುಡುಕಾಟ ಹೋರಾಟವಾಗಿ ಹುಟ್ಟುಗೆಟ್ಟು ಹರನಲ್ಲಿ ಹರಹಿದ ಚೇತನದ ಭಾವಗಳು ಶಾಂತರಸವನ್ನು ಪ್ರತಿನಿಧಿಕರಣಗೊಳಿಸಿವೆ.

"ನಿತ್ಯವೆನ್ನ ಮನೆಗೆ ನಡೆದು ಬಂದಿತ್ತಿಂದು.
ಮುಕ್ತಿ ಎನ್ನ ಮನೆಗೆ ನಡೆದುಬಂದಿತ್ತಿಂದು.
ಜಯ ಜಯಾ, ಹರಹರಾ, ಶಂಕರ ಶಂಕರಾ,
ಗುರುವೆ ನಮೋ, ಪರಮ ಗುರುವೆ ನಮೋ
ಚೆನ್ನಮಲ್ಲಿಕಾರ್ಜುನನ ತೋರಿದ ಗುರುವೆ ನಮೋ ನಮೋ."[೨೯]

ಅಚಲಶ್ರದ್ಧೆಯಿಂದ ಸಿದ್ಧಿತ್ವವನ್ನು ಹೊಂದಿದ ಮಹಾದೇವಿಯಕ್ಕ ಮಹಾಬೆಳಗಿನ ಪಥವನರುಹಿದ ಅರಿವಿನ ಗುರು, ಪರಮಗುರುವಿನ ಪಾದದಲ್ಲಿ ಪ್ರಣಾಮಿಸಿ ಕೃತಜ್ಞತೆಯ ಭಾವಸ್ಫುರಣ ಸುರಿಸುವ ಸಹಜತೆ, ಜಯಘೋಷ, ಆನಂದಾತಿಶಯದಲ್ಲಿ ತನ್ಮಯಗೊಳ್ಳುವ ಭಾವ ಅಪೂರ್ವವಾಗಿ ವ್ಯಕ್ತಗೊಂಡು ಭರವಸೆಯ ಬೆಳಕಿನ ಹಾದಿಯನ್ನು ನಿರ್ಮಿಸಿದೆ.

ಅಕ್ಕಮಹಾದೇವಿಯ ಭವಹರನನ್ನು ಕೂಡಬೇಕೆಂಬ ಭಕ್ತಿಯು ಶಕ್ತಿಯಾಗಿ ಮುಕ್ತಿಯಲ್ಲಿ ಲೀನಗೊಳ್ಳುವ ಪ್ರತಿಯೊಂದು ನಡೆಯ ಅಭಿವ್ಯಕ್ತಿಗಳಲ್ಲಿ ಕಾವ್ಯಸೌಂದರ್ಯ, ಸಾಹಿತ್ಯ, ಸಾಮರ್ಥ್ಯ, ಸತ್ಯ, ಸತ್ವಗಳೆಲ್ಲ ನೆಲೆ ಪಡೆದಿವೆ. ನಿತ್ಯ ಸತ್ಯವಾದ ಪರತತ್ವ ದರ್ಶನದಲ್ಲಿ ಧ್ವನಿಯಲ್ಲಿ ನಿರಾಳತೆಯಿದೆ.

"ನಿತ್ಯವೆಂಬ ನಿಜಪದವೆನ್ನ ಹತ್ತೆಸಾರ್ದು ಕಂಡಬಳಿಕ
ಚಿತ್ತ ಕರಗಿ ಮನ ಕೊರಗಿ ಹೃದಯವರಳಿತ್ತು ನೋಡಯ್ಯಾ
ಒತ್ತಿ ಬಿಗಿದ ಸೆರೆಯೊಳಗೆ ಅತ್ತಿತ್ತಲೆಂದರಿಯದೆ
ಚೆನ್ನಮಲ್ಲಿಕಾರ್ಜುನನ ಪಾದದಲ್ಲಿ.
ಮರೆದೊರಗಿದೆ ನೋಡಯ್ಯಾ"[೩೦]

ಗುರುವಿನ ಕರುಣೆಯ ಕೃತಕತ್ಯತೆಯಿಂದ ಚಿತ್ತ ಕರಗಿ ಮನ ಕರಗಿ ಹೃದಯ ಅರಳಿದ ಅನುಭಾವದ ಅಭಿವ್ಯಕ್ತಿ ಪ್ರಾಸ ಲಯ ಶಬ್ದಶಿಲ್ಪ, ಭಾವವಿಸ್ತಾರ, ಭಾಷೆಯಲ್ಲಿನ ನಿರೂಪಣೆಯಿಂದ ಅಕ್ಕ ಸಾಧಿಸಿದ ಸಾಧನೆ ಬಿತ್ತರಗೊಂಡು ಭವಹರನ ಪಾದದಲ್ಲಿ ಮರೆದೊರಗಿದೆ. ಅನುಭಾವ ಅರಿವು ಅಕ್ಷರದಲ್ಲಿ ಅರ್ಥಪೂರ್ಣತೆಯಿಂದ ವಿಸ್ತಾರಗೊಂಡು ಅದ್ಭುತವಾದ ಭಾವ ಪ್ರತಿಪಾದನೆಯ ಸನ್ನಿವೇಶವಿದೆ. ನಿತ್ಯದ ನಿರ್ವಚನ ನಾದಲಯಗಳಿಂದ ಸಮರಸಗೊಂಡು ಸಾಮಾನ್ಯ ಸ್ತರದಿಂದ ಅಸಾಮಾನ್ಯ ಸ್ತರಕ್ಕೆ ಪರಿವರ್ತಿತಗೊಂಡ ನಿರ್ಮಿತಿಯಿದೆ.

"ಎನ್ನ ಮನ ಪ್ರಾಣ ಭಾವ ನಿಮ್ಮಲ್ಲಿ ನಿಂದ ಬಳಿಕ
ಕಾಯದ ಸುಖವ ನಾನೇನೆಂದರಿಯೆನು.
ಆರು ಸೋಂಕಿದರೆಂದರಿಯೆನು.
ಚೆನ್ನಮಲ್ಲಿಕಾರ್ಜುನನ ಮನದೊಳಗೆ ಒಚ್ಚತವಾದ ಬಳಿಕ
ಹೊರಗೇನಾಯಿತ್ತೆಂದರಿಯೆನು."[೩೧]

ಲಿಂಗದಲ್ಲಿ ಲೀಯವಾದ ಮನಸ್ಸು, ಪ್ರಾಣ, ಭಾವಗಳು ಬೆಳಗಿನೊಳಗೆ ಬೆರೆತು ಹೊರಗನೆ ಮರೆತು ಹೋದುದರಿಂದ ಹೊರಗಣ ಕಾಯ ಸಂಬಂಧಿ ಸುಖ ಗಣನೆಗೆ ಬಾರದು. ಹೊರಗಿನ ಹೊಯ್ದಾಟಗಳಲ್ಲಿ ಹಗಲಿರುಳು ಮುಳುಗಿರುವ ಸಾಮಾನ್ಯ ಪ್ರಾಪಂಚಿಕರ ಸುಖ, ಭೋಗಗಳು ಸೋಂಕಿದ ಪರಿಯನರಿಯದ ಪ್ರಪಂಚದ ಪರಿವೆಯನ್ನು ಪರಿಹರಿಸಿಕೊಂಡು ಪರತತ್ವದಲ್ಲಿ ತಲ್ಲೀನವಾದ ಆನಂದದ ಮನಸ್ಥಿತಿಯಲ್ಲಿ ಪ್ರಶಾಂತತೆ, ನಿರ್ಲಿಪ್ತತೆ ಒಡಮೂಡಿದ ಅನುಭಾವದ ಅಭಿವ್ಯಕ್ತಿಯಲ್ಲಿಯೂ ಆ ಭಾವವಿದೆ. ಲಿಂಗಾಂಗ ಸಮರಸ ಭಾವಾಭಿವ್ಯಕ್ತಿಯಲ್ಲಿ ರೂಪಕ, ಪ್ರತಿಮೆಗಳಲ್ಲಿ ಅಕ್ಕಮಹಾದೇವಿ ನಿಶಬ್ಧವನ್ನು ಶಬ್ದದೊಳಡಗಿಸಿದ ರೀತಿ ಅನನ್ಯವಾದದು, ಬ್ರಹ್ಮಾಂಡವ್ಯಾಪಿಯಾದ ಪರವಸ್ತುವೇ ಪಿಂಡಗತವಾದ ಆತ್ಮ. ಆತ್ಮ ಪರಮಾತ್ಮರ ಕೂಡುವಿಕೆಯೇ ಜೀವನ್ಮುಕ್ತ ಸ್ಥಿತಿ. ಲಿಂಗಾಂಗ ಸಾಮರಸ್ಯದ ಅನುಭಾವವನ್ನು ಮೂರ್ತರೂಪಕ್ಕಿಳಿಸಿದ ಅಕ್ಕನ ಅಭಿವ್ಯಕ್ತಿಯಲ್ಲಿ ಬಯಲು ಭಾಷೆಯಲ್ಲಿ ಜೀವಂತವಾಗಿದೆ.

"ಹಾಲು ತುಪ್ಪವ ನುಂಗಿ ಬೇರಾಗಬಲ್ಲುದೆ?
ಸೂರ್ಯಕಾಂತದ ಅಗ್ನಿಯನಾರು ಭೇದಿಸಬಲ್ಲರು?
ಅಪಾರಮಹಿಮ ಚೆನ್ನಮಲ್ಲಿಕಾರ್ಜುನಾ,
ನೀನೆನ್ನೊಳಡಗಿಪ್ಪ ಪರಿಯ
ಬೇರಿಲ್ಲದೆ ಕಂಡು ಕಣ್ದೆರೆದೆನು."[೩೨]

ಸೂಕ್ತ ದೃಷ್ಟಾಂತಗಳಿಂದ ಬಣ್ಣಿಸುವ ಅಕ್ಕ ಅರಿವಿನ ಇರುವಿಕೆಯನ್ನು ಅರಿತು ಅಭಿನ್ನವಾದ ಸ್ಥಿತಿಯನ್ನು ಆಗು ಮಾಡಿಕೊಂಡವಳು. ತನ್ನೊಳಗಿನ ಚೈತನ್ಯವನ್ನು ಕಂಡು ಕಣ್ದೆರೆಯುವ ಸನ್ನಿವೇಶದಲ್ಲಿ ಆತುರತೆ ಹಿಂಗಿ ಆನಂದದ ತನ್ಮಯತೆ ಆವರಿಸಿದ ಭಾವವಿದೆ. ಆ ಭಾವ ಅಷ್ಟೇ ಪ್ರಶಾಂತವಾದ ಪರಿಕಲ್ಪನೆಯಾಗಿ ವ್ಯಕ್ತಗೊಂಡಿದೆ. ಅರಿವಿನ ಬೆಳಕನ್ನು ಭಾಷೆಯಲ್ಲಿ ಬಿತ್ತರಿಸುವ ಅಕ್ಕನ ಪ್ರತಿಭಾಶಕ್ತಿಯಿಂದ ವಚನಗಳಲ್ಲಿ ವೈವಿಧ್ಯಮಯ ಆಯಾಮಗಳು ಪ್ರಾಪ್ತವಾಗಿವೆ. ಅರಿವಿನಿಂದ ಕುರುಹುಗಳನ್ನು ವಿಸರ್ಜಿಸಿ ನಿಸ್ಸೀಮ ನಿರ್ಭಯ ಸ್ಥಿತಿಯಲ್ಲಿ ಸಮರಸಗೊಂಡ ಅಕ್ಕನ ಅಭಿವ್ಯಕ್ತಿಯಲ್ಲಿ ಅನುಭಾವ ಅನುಭೂತಿಯಿದೆ.

"ತನು ನಿಮ್ಮ ರೂಪಾದ ಬಳಿಕ
ಆರಿಗೆ ಮಾಡುವೆ?
ಮನ ನಿಮ್ಮ ರೂಪಾದ ಬಳಿಕ
ಆರ ನೆನೆವೆ?
ಪ್ರಾಣ ನಿಮ್ಮ ರೂಪಾದ ಬಳಿಕ
ಆರನಾರಾಧಿಸುವೆ?
ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ
ಆರನರಿವೆ?
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮಿಂದ ನೀವೆಯಾದಿರಾಗಿ
ನಿಮ್ಮನೆ ಅರಿವುತ್ತಿರ್ದೆನು."[೩೩]

ಅಕ್ಕಮಹಾದೇವಿಯ ವಚನಗಳ ಮೀಮಾಂಸೆಯು ವ್ಯಕ್ತಿಗತ ನೆಲೆಯಲ್ಲಿ ತಾತ್ವಿಕ ಅನುಸಂಧಾನಕ್ಕಾಗಿ ಅವಿರತವಾಗಿ ತುಡಿತವುಳ್ಳ ಭಾವಗಳನ್ನೊಳಗೊಂಡಿದೆ. ವಚನಾಂತರಾಳದಲ್ಲಿ ದಾರ್ಶನಿಕ ನೆಲೆ ಗಂಧ ಗಾಳಿ ಬೆರೆಸಿದಂತೆ, ನದಿಯೊಳಗೆ ನದಿ ಕೂಡಿದಂತೆ. ಅಭಿನ್ನವಾಗುವುದು. ಬಯಲು ಬಯಲೊಳಗೆ ಬೆರೆಸಿ ನಾನು ನೀನು ಎಂಬ ಉಭಯ ಮೀರಿ ಮಹದಾನಂದದಲ್ಲಿ ಲೀಯಗೊಳ್ಳುವುದು. ಮಹಾದೇವಿಯಕ್ಕನಲ್ಲಿ ಆ ಎಲ್ಲ ಭಾವಾನುಭಾವಗಳು ಭಾಷೆಯಲ್ಲಿ ನಿರ್ಭಯವಾಗಿ ಚೆಲುವ ಚೆನ್ನಮಲ್ಲಿಕಾರ್ಜುನನಂತೆ ಸೌಂದರ್ಯದಿಂದ ಕಂಗೊಳಿಸಿವೆ. ಆನಂದದ ಅನುಭೂತಿ ವಚನಗಳಲ್ಲಿ ಮಾತು ಜ್ಯೋತಿರ್ಲಿಂಗವಾಗಿ ದಿವ್ಯಪ್ರಕಾಶವನ್ನು ಬೆಳಗಿಸುತ್ತಿವೆ.

ಅಕ್ಕಮಹಾದೇವಿಯಲ್ಲಿ ಸೃಜಿಸುವ ಮತ್ತು ವಿಸರ್ಜಿಸುವ ಪ್ರತಿಕ್ರಿಯಾತ್ಮಕ ಶಕ್ತಿಯಿಂದ ವೈವಿಧ್ಯತೆಯಲ್ಲಿ ಐಕ್ಯತೆ, ಏಕತೆಯಲ್ಲಿ ವಿರಮಿಸಿದ ಅನುಭಾವಗಳೆಲ್ಲ ಅಮೂರ್ತದಿಂದ ಮೂರ್ತರೂಪ ತಾಳಿ ತಾತ್ವಿಕ ಮೇರು ನಿಲುವನ್ನು ಪ್ರತಿಪಾದಿಸಿವೆ.

"ತನುಶುದ್ಧವಾಯಿತ್ತು ಶಿವಭಕ್ತರೊಕ್ಕುದ ಕೊಂಡೆನ್ನ.
ಮನಶುದ್ಧವಾಯಿತ್ತು ಅಸಂಖ್ಯಾತರ ನೆನದೆನ್ನ.
ಕಂಗಳು ಶುದ್ಧವಾಯಿತ್ತು ಸಕಲಗಣಂಗಳ ನೋಡಿ ಎನ್ನ.
ಶ್ರೋತ ಶುದ್ಧವಾಯಿತ್ತು ಅವರ ಕೀರ್ತಿಯ ಕೇಳಿ ಎನ್ನ.
ಭಾವನೆ ಎನಗಿದು ಜೀವನ ಲಿಂಗತಂದೆ.

ನೆಟ್ಟನೆ ನಿಮ್ಮ ಮನಮುಟ್ಟಿ ಪೂಜಿಸಿ
ಭವಗೆಟ್ಟೆ ನಾನು ಚೆನ್ನಮಲ್ಲಿಕಾರ್ಜುನಾ."[೩೪]

ನೆಟ್ಟನೆ ಮನಮುಟ್ಟಿ ಮಾಡಿದ ಪೂಜೆಯಿಂದ ಭವಗೆಟ್ಟವಳು ಅಕ್ಕ. ತನು ಮನ ಭಾವ ಇಂದ್ರಿಯಗಳು ವಿಷಯಾದಿಗಳನ್ನು ವಿಸರ್ಜಿಸಿ ಪ್ರಾಸಾದಿಕ ರೂಪವಾಗಿ ಪರಿವರ್ತಿತಗೊಳ್ಳುವ ಮೂಲಕ ಹುಟ್ಟುಗೆಡುವುದು ಸಾಧ್ಯವಾಗುತ್ತದೆ. ಭವಗೆಡುವುದೇ ಅಕ್ಕನ ಆತ್ಯಂತಿಕ ಧ್ಯೇಯವಾಗಿದ್ದರಿಂದ ಆ ಗಂತವ್ಯ ಪ್ರಾಪ್ತಿಯಲ್ಲಿ ಕರ್ಮೇಂದ್ರಿಯ ಜ್ಞಾನೇಂದ್ರಿಯಗಳ ಸಂಬಂಧಿಯಾದ ವಿಷಯಾದಿಗಳನ್ನು ಕಳೆದುಕೊಳ್ಳುತ್ತ ಉದಾತ್ತೀಕರಣ ಸ್ಥಿತಿಯಲ್ಲಿ ಮೂಲರೂಪವನ್ನು ಬದಲಿಸಿಕೊಂಡು ದಿವ್ಯದೃಷ್ಟಿಯಿಂದ ಗೋಚರಿಸುವವು. ಪರ್ಯಾಯ ನೆಲೆಯನ್ನು ಮೂಲದಲ್ಲಿಯೇ ಸ್ಥಾಪಿಸಿಕೊಳ್ಳುವ ಅಕ್ಕಮಹಾದೇವಿ ಇತ್ಯಾತ್ಮಕ ಧೋರಣೆಯುಳ್ಳವಳು. ಆ ಧೋರಣೆಗಳೆಲ್ಲ ವಚನಗಳಲ್ಲಿ ಇತ್ಯಾತ್ಮಕ ಸ್ವರೂಪದಲ್ಲಿಯೇ ವ್ಯಕ್ತವಾಗಿದ್ದರಿಂದ ಪಾರಂಪರಿಕ ಮಾಯಾವಾದದ ನಿರಾಕರಣೆಗಳಿಗಿಂತ ಅಕ್ಕನ ತಾತ್ವಿಕ ಸ್ವರೂಪ ಭಿನ್ನವಾದುದು.

"ಅಂಗವ ಲಿಂಗಮುಖಕ್ಕೆ ಅರ್ಪಿಸಿ
ಅಂಗ ಅನಂಗವಾಯಿತ್ತು!
ಮನವ ಅರಿವಿಂಗರ್ಪಿಸಿ ಮನ ಲಯವಾಯಿತ್ತು.
ಭಾವವ ತೃಪ್ತಿಗರ್ಪಿಸಿ ಭಾವ ಬಯಲಾಯಿತ್ತು.
ಅಂಗಮನ ಭಾವವಳಿದ ಕಾರಣ ಕಾಯ ಅಕಾಯವಾಯಿತ್ತು.
ಎನ್ನ ಕಾಯದ ಸುಖವ ಲಿಂಗ ಭೋಗಿಸುವನಾಗಿ
ಶರಣಸತಿ ಲಿಂಗಪತಿಯಾದೆನು.
ಇದು ಕಾರಣ ಚೆನ್ನಮಲ್ಲಿಕಾರ್ಜುನಯ್ಯನೆಂಬ
ಗಂಡನ ಒಳಹೊಕ್ಕು ಬೆರೆಸಿದೆನು!!"[೩೫]

ಅಂಗಮನ ಭಾವಗಳಳಿದು ತ್ರಿಕರಣ ಶುದ್ಧವಾಗಿ ಕಾಯ ಅಕಾಯವಾಗಿ ಭಾವ ನಿರ್ಭಾವವಾಗುವಲ್ಲಿ ಕುರುಹುಗಳನ್ನು ವಿಸರ್ಜಿಸುವ ಪ್ರಕ್ರಿಯೆಯಿದೆ. ಶರಣಸತಿ ಲಿಂಗಪತಿಯನ್ನು ಬೆರೆಯಲು ಕುರುಹಗಳ ವಿಸರ್ಜನೆಯ ಅನಿವಾರ್ಯತೆಯಿದ್ದುದರಿಂದ ಅಂಗ ಅನಂಗವಾಗಿ ಆನಂದದಲ್ಲಿ ವಿರಮಿಸುವ ಅನುಭೂತಿ ನೆರವೇರುತ್ತದೆ. ಅಕ್ಕನದು ಮುಖ್ಯವಾಗಿ ಲಯಯೋಗ ಆದ್ದರಿಂದ ಕುರುಹುಗಳನ್ನು ಅರಿವಿನಲ್ಲಿ ಲಯಗೊಳಿಸಿ ಬಯಲಾಗುವುದು ನಿರ್ವಯಲದಲ್ಲಿ ಬೆರೆಯುವುದು ಸುಲಭವಾಗಿದೆ.

"ಘನವ ಕಂಡೆ ಅನುವ ಕಂಡೆ.
ಆಯತ, ಸ್ವಾಯತ ಸನ್ನಿಹಿತ ಸುಖವ ಕಂಡೆ!
ಅರಿವನರಿದು ಮರಹ ಮರೆದೆ!
ಕುರುಹಿನ ಮೋಹದ ಮರವೆಯ ನೀಡಾಡಿದೆ!
ಚೆನ್ನಮಲ್ಲಿಕಾರ್ಜುನ, ನಿಮ್ಮನರಿದು ಸೀಮೆಗೆಟ್ಟೆನು."[೩೬]

ಕುರುಹಿನ ಮೋಹದ ಮರವೆಯನ್ನು ಕಳೆದುಕೊಂಡದ್ದರಿಂದ ಘನವನ್ನು ಕಾಣಲು ಅನುವನ್ನು ಅರಿಯಲು ಆಯತ, ಸ್ವಾಯತ, ಸನ್ನಿಹಿತ ಸುಖವನ್ನು ಅನುಭವಿಸಲು ಸಾಧ್ಯವಾಗಿದೆ. ಕುರುಹಿನ ವಿಸರ್ಜನೆಯಿಂದ ಘನವನ್ನು, ಅನುವನ್ನು, ಅರಿವನ್ನು ಸೃಜಿಸಲು, ಅನುವಾಗಿದೆ ಸೀಮೆಗೆಟ್ಟುದರ ಸುಖವನ್ನು ಸೃಜಿಸಿಕೊಳ್ಳಲು ಕುರುಹಿನ ಮೋಹಗಳನ್ನು ಈಡಾಡುವುದು ಅತ್ಯವಶ್ಯವೆಂಬ ಮೂಲಭೂತ ತಾತ್ವಿಕ ಮೀಮಾಂಸೆಯ ಸ್ವರೂಪವಿದಾಗಿದೆ.

ಲಿಂಗಭೋಗೋಪಭೋಗಿಯಾದ ಭಕ್ತನ ಬದುಕು ಪ್ರಾಸಾದಿಕವಾಗಿರುವುದು. ಅವನ ನಡೆ ನುಡಿ, ನೋಟ ಕೂಟಗಳೆಲ್ಲ ಲಿಂಗಸ್ವರೂಪವಾಗಿರುವುದರಿಂದ ನೋಟ ಪರುಷ, ಮಾತು ಜ್ಯೋತಿರ್ಲಿಂಗವಾಗಿ ಪರಿವರ್ತಿತವಾಗುತ್ತದೆ. ಲೌಕಿಕ ಜಗತ್ತಿನ ಮಾತಿನಿಂದ ಅತ್ತತ್ತವಾದ ಅಸ್ತಿತ್ವವುಳ್ಳ ಮಾತು ನುಡಿಸ್ವರೂಪ ಪಡೆಯುವುದರಿಂದ ಅವುಗಳಲ್ಲಿ ಪ್ರಾಸಾದಿಕತೆ, ಪ್ರಾಮಾಣಿಕತೆ, ಪ್ರಮಾಣೀಕೃತ, ಪ್ರತಿಜ್ಞಾ ಸ್ವರೂಪದಲ್ಲಿರುವುದರಿಂದ ತಾತ್ವಿಕ, ದಾರ್ಶನಿಕ ಸೂಳ್ನುಡಿಗಳೆನಿಸುವವು. ಬೆಳಕು ಭಾಷೆಯಲ್ಲಿ ಮೈದೋರುವುದು. ಅಕ್ಕಮಹಾದೇವಿಯ ನಡೆ ನುಡಿಗಳ ಸಾಮರಸ್ಯದಿಂದ ಹೊರಹೊಮ್ಮಿದ ವಚನಗಳಲ್ಲಿ ಪಾರಮಾರ್ಥಿಕ ಪಥವಿದೆ, ಪ್ರಾಸಾದಿಕತೆಯಿದೆ ಉದಾತ್ತೀಕರಣದ ಭಾವಗಳಿವೆ.

"ಉಡುವೆ ನಾನು ಲಿಂಗಕ್ಕೆಂದು,
ತೊಡುವೆ ನಾನು ಲಿಂಗಕ್ಕೆಂದು,
ಮಾಡುವೆ ನಾನು ಲಿಂಗಕ್ಕೆಂದು,
ನೋಡುವೆ ನಾನು ಲಿಂಗಕ್ಕೆಂದು,
ಎನ್ನಂತರಂಗ ಬಹಿರಂಗಗಳು ಲಿಂಗಕ್ಕಾಗಿ.
ಮಾಡಿಯೂ ಮಾಡದಂತಿಪ್ಪೆ ನೋಡಾ.
ಆನೆನ್ನ ಚೆನ್ನಮಲ್ಲಿಕಾರ್ಜುನನೊಳಗಾಗಿ
ಹತ್ತರೊಡನೆ ಹನ್ನೊಂದಾಗಿಪ್ಪದನೇನ ಹೇಳುವೆನವ್ವಾ!"[೩೭]

ವಚನದಲ್ಲಿ ಕ್ರಿಯಾಪದಗಳು ಒಂದರ ನಂತರ ಮತ್ತೊಂದು ಸುರುಳಿಯಂತೆ ಬಿಚ್ಚುತ್ತ ಹೋಗುವ ನಡೆಯಿದೆ. ಉಡುವ, ತೊಡುವ, ಮಾಡುವ, ನೋಡುವ ಕ್ರಿಯೆಗಳೆಲ್ಲ ಲಿಂಗವೊಂದನ್ನೇ

ಕೇಂದ್ರಿಕರಿಸಿಕೊಂಡಿವೆ. ಒಳ ಹೊರಗೂ ಕ್ರಿಯಾದಿಗಳು ಕೊನೆಯಲ್ಲಿ ವಿಸರ್ಜನೆಗೊಂಡು ಬಯಲ ಬೆರೆತಲ್ಲಿ ಭಾಷೆಯ ಕ್ರಿಯೆ ನಿಂತು ಹೋಗಿರುವುದನ್ನು ವ್ಯಕ್ತಗೊಳಿಸುವುದೂ ಸಹ ಭಾಷೆಯ ಮುಖೇನ! 'ಹತ್ತರೊಳಗೆ ಹನ್ನೊಂದಾಗಿಪ್ಪ' ಪರಿಯನ್ನು ಪರಿಭಾವಿಸುವ ಪರಿಕರಗಳ ಕೊರತೆಯನ್ನು ಅಕ್ಕ ವ್ಯಕ್ತಗೊಳಿಸಿರುವ ಹಿಂದೆ, ನಿರ್ಭಾವ ನಿರ್ವಯಲ ಭಾಷೆಗೆ ಮೀರಿದ ಉಪಮಿಸಬಾರದ ಘನಕ್ಕೆ ಘನವಾದುದು ಎಂಬ ಭಾವ ಹುದುಗಿದೆ.

ವಚನಗಳ ಮೀಮಾಂಸೆಯು ಉಳಿದೆಲ್ಲ ಕಾವ್ಯ, ಸಾಹಿತ್ಯ ಮೀಮಾಂಸೆಗಳಿಗಿಂತ ಭಿನ್ನವಾಗಿರುವುದು ಈ ಹಿನ್ನೆಲೆಯಲ್ಲಿಯೇ. ಲಿಂಗಾಂಗ ಸಮರಸ ಸ್ಥಿತಿಯನ್ನು, ಅದರ ಅನಂತ ಆನಂದದ ಅನುಭಾವದ ಅಮೂರ್ತತತೆಯನ್ನು ಮೌನದಿಂದ ಮಾತಿಗಿಳಿಸಿದ ಮಹಾದೇವಿಯಕ್ಕನ ಅಭಿವ್ಯಕ್ತಿಯಲ್ಲಿ ಅನುಭಾವದ ಎತ್ತರವಿದೆ. ಸಾಧನೆಯ ಸಿದ್ಧಿಯಿದೆ. ಭಕ್ತ ಐಕ್ಯಸ್ಥಿತಿಯಲ್ಲಿ ತಾನನುಭವಿಸಿದ ಅನುಪಮ ಅವಿರಳ ಸಿದ್ಧಿಯನ್ನು ಸಾಕಾರ ಶಬ್ದಗಳಲ್ಲಿ ಸಶಕ್ತವಾಗಿ ವ್ಯಕ್ತಗೊಳಿಸಿದ್ದರಿಂದ ವಚನಗಳ ಒಳಹೊರಗೆಲ್ಲ ಬೆಳಗು ಆವರಿಸಿದೆ. ಅನುಭಾವದ ಆಶಯಗಳು ಅಭಿವ್ಯಕ್ತಿ ಸ್ವರೂಪವನ್ನು ತಾತ್ವಿಕ ನೆಲೆಗೆ ಕೊಂಡೊಯ್ಯುತ್ತವೆ.

ಉಪಮಾತೀತವಾದ ಭಾವವನ್ನು ಬಣ್ಣಿಸುವ ಪ್ರತಿಭೆ ಅಕ್ಕನದು. ಅನಂತತೆಯನ್ನು ಅಕ್ಷರದಲ್ಲಿ ಹಿಡಿದಿಡುವ ಅನುಭಾವಿ ಕವಿಯತ್ರಿ ಅಕ್ಕಮಹಾದೇವಿ. ವಚನಗಳಲ್ಲಿ ನಿರ್ಭಾವವನ್ನು ಅವಿರ್ಭಾವ ಗೊಳಿಸಿರುವ ಅಭಿವ್ಯಕ್ತಿ ಶಕ್ತಿ ಹೊಂದಿರುವವಳು.

"ಲಿಂಗವೆನ್ನೆ, ಲಿಂಗೈಕ್ಯವೆನ್ನೆ!
ಸಂಗವೆನ್ನೆ, ಸಮರಸವೆನ್ನೆ!
ಆಯಿತ್ತೆನ್ನೆ ಆಗದೆನ್ನೆ!
ನೀನೆನ್ನೆ ನಾನೆನ್ನೆ!
ಚೆನ್ನಮಲ್ಲಿಕಾರ್ಜುನಯ್ಯಾ
ಲಿಂಗೈಕ್ಯವಾದ ಬಳಿಕ ಏನೂ ಎನ್ನೆ!"[೩೮]

'ಏನೂ ಎನ್ನೆ' ಎನ್ನುವುದರಲ್ಲಿ ಎಲ್ಲವನ್ನು ಅಡಗಿಸಿರುವಳು ಅಕ್ಕಮಹಾದೇವಿ. ಬೆಳಗು ಬೆಳಗನೆ ಬೆರೆಸಿದ ಭಿನ್ನ ಭಾವವಿರದ ಬಯಲ ಬಣ್ಣನೆಯಿದು. ಕುರುಹಿನ ವಿಸರ್ಜನೆಯನ್ನು ಗೈದು ಘನಲಿಂಗೈಕ್ಯವಾದ ಮಹಾಬಯಲಿನ ಮಹಾಯಾನವಿದು. ಮಲ್ಲಿಕಾರ್ಜುನನ ಅನುಸಂಧಾನದಲ್ಲಿ ಮಹಾದೇವಿಯಕ್ಕ ಮಾಡಿದ, ನೋಡಿದ, ಆಡಿದ, ಕೂಡಿದ ಹಾಡುಗಳು ವಚನಗಳು. ಆ ಭಾವಗಳು ಮೇಳವಿಸಿದ ಮಾಧುರ್ಯಭರಿತ ವಚನಗಳು ಹೃದಯಸ್ಪರ್ಶಿ, ಹಾಡುಗಳು, ಅವುಗಳಲ್ಲಿ ತವಕವಿದೆ,

ತಲ್ಲಣವಿದೆ, ತಾತ್ವಿಕತೆಯಿದೆ. ಅದಕ್ಕೂ ಮೀರಿದ ಮಹಾಮೌನವಿದೆ. ಮಾತಿನಿಂದ ಮೌನವಾಗುವ ಪ್ರಕ್ರಿಯೆಗಳೆಲ್ಲ ಮಹಾದೇವಿಯಕ್ಕನ ವಚನಗಳ ಮೀಮಾಂಸೆಯ ರೂಪ ಸ್ವರೂಪದ ಪರಿಕಲ್ಪನೆಗಳಾಗಿವೆ.

ಅಕ್ಕಮಹಾದೇವಿಯ ವಚನಗಳಲ್ಲಿ ಹುಟ್ಟುಗೆಡುವಿಕೆ, ಭವಗೆಡುವಿಕೆ. ಪ್ರಧಾನ ಆಶಯವಾಗಿರುವುದರಿಂದ ಅಂತಹ ಅಭಿವ್ಯಕ್ತಿಗಳಲ್ಲಿ ಶಾಂತರಸ ಸಮ್ಮಿಳಿತವಾಗಿದೆ. ತತ್ವದ ಮೇರು ನಿಲುವಿನಲ್ಲಿ ನಿಂತ ಮಹಾದೇವಿಯಕ್ಕನ ಅಭಿವ್ಯಕ್ತಿಯಲ್ಲಿ ಪ್ರಶಾಂತ ಗುಣವಿದೆ. ಭಾವಗಮ್ಯವಾದ ಬ್ರಹ್ಮತತ್ವವನ್ನು ಭಾಷೆಯಲ್ಲಿ ಪರಿಭಾವಿಸಿದ ಪರಿ ಅನುಪಮವಾದುದು.

ಶಬ್ಧಜ್ಞಾನ ಬಿಂಬಜ್ಞಾನ

ಮೀಮಾಂಸೆಯ ಅನ್ವಯಗಳಲ್ಲಿ ಶಬ್ಧಜಾನದ ವಿಸರ್ಜನೆ, ಬಿಂಬಜಾನದ ಆಹ್ವಾನ ಮುಖ್ಯವಾಗಿ ಪರಿಗಣಿತವಾಗುವ ಸಂಗತಿ. ಶಬ್ಧಜ್ಞಾನವನ್ನು ವಿಸರ್ಜಿಸುವಲ್ಲಿ ಬಿಂಬಜ್ಞಾನದ ಆಹ್ವಾನವೂ ಪ್ರಮುಖವಾಗುತ್ತದೆ. ವಚನಕಾರರು ಶಬ್ಧಜ್ಞಾನವನ್ನು ವಿಸರ್ಜಿಸಿ, ಬಿಂಬಜ್ಞಾನವನ್ನು ಅನ್ವಯಿಸಿಕೊಂಡಿರುವುದರಿಂದ ವ್ಯಕ್ತಿಗತ ಸಂವೇದನೆಗಳು ಸಾಹಿತ್ಯದಲ್ಲಿ ಸೃಷ್ಟಿಗೊಳ್ಳುವಂತಾಯಿತು. ಮಹಾದೇವಿಯಕ್ಕ ಶಬ್ಧಜಾನವನ್ನು ವಿಸರ್ಜಿಸಿದ್ದರಿಂದ ಅವಳ ಅಭಿವ್ಯಕ್ತಿಗೆ ಅನನ್ಯತೆ ಒದಗಿದೆ. ಕಾರಣ ಜೀವನಾನುಭವ, ಲೋಕಾನುಭವಗಳು ಅರಿವಿನ ದೃಷ್ಟಿಯಲ್ಲಿ ಪುನರ್‌ಸೃಷ್ಟಿಗೊಂಡು ಚಲನಶೀಲ, ನವ ಚಿಂತನಾಕ್ರಮ ಉದಯಿಸಿ ಅದುವರೆಗಿನ ಸಿದ್ಧಮೌಲ್ಯಗಳು, ಸಿದ್ಧಾಂತಗಳು, ತಾತ್ವಿಕ ಪರಿಕಲ್ಪನೆಗಳು. ಸಾಹಿತ್ಯ, ಸಿದ್ಧಾಂತಗಳ ಸಿದ್ಧ ಚೌಕಟ್ಟುಗಳನ್ನು ಮೀರಿ ಅದರಾಚೆಗೂ ನವ ಅನ್ವೇಷಣೆಯಿಂದ ಅನುಭಾವದ ನೆಲೆಗಳು ವಿಸ್ತರಿಸಿಕೊಂಡಿವೆ.

ಅಕ್ಕನ ಅನ್ವೇಷಣೆಯಲ್ಲಿ ಆಧ್ಯಾತ್ಮ, ತಾತ್ವಿಕ ನಿಲುವುಗಳಷ್ಟೇ ಅಲ್ಲದೆ ಸಿದ್ಧಸಾಹಿತ್ಯದ ನೆಲೆಗಳ ವಿಶ್ಲೇಷಣೆಯಿದೆ, ನಿರಾಕರಣೆಯಿದೆ. ನವ ಮೌಲ್ಯಗಳ ಸೃಷ್ಟಿಯೂ ಒಳಗೊಂಡಿದೆ. ಶಬ್ಧಜ್ಞಾನವನ್ನು ವಿಸರ್ಜಿಸಿ ಅದರ ಪರಿಧಿಯಾಚೆಗೂ ಹರಹಿಕೊಂಡಿರುವ ಪರತತ್ವದ ಪರಿಕಲ್ಪನೆಯನ್ನು ಸಮರ್ಥವಾಗಿ ಅಕ್ಕಮಹಾದೇವಿ ಗ್ರಹಿಸಿರುವಳು. ಅವಳ ಗ್ರಹಿಕೆಯ ಭಾವಗಳಲ್ಲಿ ವಿಸರ್ಜನೆ, ಆಹ್ವಾನಗಳೆರಡೂ ಒಂದನ್ನೊಂದು ಬದಿಗಿರಿಸಿ ನೋಡಿದ ನೋಟಗಳಿವೆ.

> "ಓದಿ ಓದಿ ವೇದ ವಾದಕ್ಕಿಕ್ಕಿತ್ತು.
> ಕೇಳಿ ಕೇಳಿ ಶಾಸ್ತ್ರ ಸಂದೇಹಕ್ಕಿಕ್ಕಿತ್ತು.
> ಅರಿದೆಹೆ ಅರಿದೆಹೆನೆಂದು ಆಗಮ ಅರೆಯಾಗಿ ಹೋಯಿತ್ತು.
> ಪೂರೈಸಿಹೆ ಪೂರೈಸಿಹೆನೆಂದು
> ಪುರಾಣ ಪೂರ್ವದ ಬಟ್ಟೆಗೆ ಹೋಯಿತ್ತು.

ನಾನೆತ್ತ ತಾನೆತ್ತ?

ಬೊಮ್ಮ ಬಟ್ಟಬಯಲು ಚೆನ್ನಮಲ್ಲಿಕಾರ್ಜುನ."[೩೯]

ಪೂರ್ವದ ಬಟ್ಟೆಗೆ ಬಟ್ಟಬಯಲಿನ ಅರಿವಾಗದ ಕಾರಣ ಅರೆಯಾಗಿ ಹೋದ ಪರಿಯನ್ನು ಅಕ್ಕಮಹಾದೇವಿ ವೇದಶಾಸ್ತ್ರ ಆಗಮ, ಪುರಾಣ, ತರ್ಕಗಳ ತಗರ ಹೋರಟೆಯನ್ನು ಅಲ್ಲಗಳೆದು ಭಾವದಲ್ಲಿ ಗಮ್ಯವಾಗಿರುವ ಬೊಮ್ಮನ ಅಸ್ತಿತ್ವವನ್ನು ಅರುಹುವಳು. ಶಬ್ಧಜಾನದ ಪರಿಧಿಗೆ ಪರತತ್ವ ನಿಲುಕದ ರೀತಿ, ಅವುಗಳ ನಡೆಯನ್ನು ನಿರಾಕರಿಸುವ ಅಕ್ಕನ ಸ್ವಯಂ ಅರಿವು ಬಿಂಬಜ್ಞಾನ. ಗ್ರಹಿಸಿದ ಸತ್ಯದ ಬಟ್ಟಬಯಲಿನ ಸ್ವೀಕರಣೆ, ಆಹ್ವಾನವಿದೆ. ವೇದ, ವಾದ, ಓದುಗಳೆಲ್ಲ ಸಂದೇಹಕ್ಕೆಡೆ ಮಾಡಿ ಮರವೆಯ ಮುಸುಕನ್ನು ಧರಿಸಿ ಅರಿವಿನಿಂದ ದೂರ ಸರಿದ ದಾರಿಗಳೆಂಬುದು ಅಕ್ಕಮಹಾದೇವಿ ಕಂಡುಕೊಂಡ ಸ್ವಾನುಭವ.

"ವೇದ ಶಾಸ್ತ್ರ ಆಗಮ ಪುರಾಣಗಳೆಲ್ಲವು

ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಭೋ.

ಇವ ಕುಟ್ಟಲೇಕೆ ಕುಸುಕಲೇಕೆ?

ಅತ್ತಲಿತ್ತ ಹರಿವ ಮನವ ಶಿರವನರಿದಡೆ

ಬಚ್ಚಬರಿಯ ಬಯಲು ಚೆನ್ನಮಲ್ಲಿಕಾರ್ಜುನ."[೪೦]

ವೇದ, ಶಾಸ್ತ್ರ, ಆಗಮ, ಪುರಾಣಗಳಲ್ಲಿ ವಾದ, ಪ್ರತಿವಾದದ ಪಥ್ಯಗಳೇ ಪ್ರಧಾನವಾಗಿ ಪರತತ್ವ ಪರಿಧಿಯಿಂದ ಹೊರಗುಳಿದ ಅನ್ಯದರ ಬಗೆಗಿನ ಹೋರಾಟವನ್ನು ಅಕ್ಕ ದೃಢವಾಗಿ ಖಂಡಿಸಿ, ಅವೆಲ್ಲ 'ನುಚ್ಚು' 'ತೌಡು' ಅವುಗಳನ್ನು ಕುಟ್ಟುವ, ಕುಸುಕುವ ಅಭಿವ್ಯಕ್ತಿಯಲ್ಲಿ ವ್ಯರ್ಥ ಪ್ರಯತ್ನಗಳ ವಿಡಂಬನೆಯಿದೆ. ಶಬ್ಧಜ್ಞಾನಗಳ ಸಂದೇಹ ಸಿದ್ಧಾಂತ, ಶಾಸ್ತ್ರಗಳು ಶಿವನ ಅಸ್ತಿತ್ವವನ್ನು ಅರಿಯುವಲ್ಲಿ ಸೋತ, ಸವೆದ ದಾರಿಗಳೆಂದು ಜರಿದಿರುವ ಅಕ್ಕ ಬಾಹ್ಯದ ಭಜನೆಗಿಂತ ಭಾವದಲ್ಲಿರುವ ಬಚ್ಚಬರಿಯ ಬಯಲನ್ನು ಅರಿಯುವ ಅರಿವಿನ ಪಥವನ್ನು ನಿರ್ದೇಶಿಸುವಳು. ಆ ಮೂಲಕ ಪರಂಪರೆಯ ವಿರೋಧದಲ್ಲಿ ಪರ್ಯಾಯವೊಂದನ್ನು ಕಟ್ಟಿಕೊಳ್ಳುವ ಆಶಯ ಅಕ್ಕನದು.

"ಎಲ್ಲ ಎಲ್ಲವನರಿದು ಫಲವೇನಯ್ಯಾ

ತನ್ನ ತಾನರಿಯಬೇಕಲ್ಲದೆ?"[೪೧]

"ಚಿಲಿಪಿಲಿ ಎಂದೋದುವ ಗಿಳಿಗಳಿರಾ,

ನೀವು ಕಾಣಿರೆ? ನೀವು ಕಾಣಿರೇ?"[೪೨]

ಅಭಿವ್ಯಕ್ತಿಗಳಲ್ಲಿ ಅಕ್ಕಮಹಾದೇವಿ ವೈದಿಕ ಪಾರಂಪರಿಕ ಪಠ್ಯಗಳ ಪೂರ್ವಗ್ರಹಿತ ಕಲ್ಪನೆಗಳನ್ನು ಸಿದ್ಧಾಂತಗಳನ್ನು ನಿರಾಕರಿಸುತ್ತ ಸ್ವಯಂ ಅರಿವು ಅದರ ಅಸ್ತಿತ್ವ ತನ್ನಲ್ಲಿಯೇ ಹೊರತು ಭಿನ್ನಭಾವಕ್ಕೆ ನಿಲುಕದ ಹೊಸದೃಷ್ಟಿಯನ್ನು ನಿರ್ಮಿಸುವಳು, ವೇದ, ಶಾಸ್ತ್ರ, ಆಗಮ ಪುರಾಣ ತರ್ಕ, ಸಂಸ್ಕೃತ ಭಾಷೆ, ಕಾವ್ಯಮಾರ್ಗ, ಮೀಮಾಂಸೆಗಳನ್ನು ವಿರೋಧಿಸಿದ್ದರೂ ಹಲವು ಪರಿಕಲ್ಪನೆಗಳ ಸ್ಪಷ್ಟೀಕರಣಕ್ಕೆ ಅದೇ ನೆಲೆಗಳನ್ನು ಉದ್ಗರಿಸಿರುವ ವಚನಗಳಿವೆ. ಒಟ್ಟಿನಲ್ಲಿ ಪೂರ್ವದ ಶಬ್ದಜ್ಞಾನವನ್ನು ವಿರೋಧಿಸುವ ಅಕ್ಕನಿಗೆ ಅವುಗಳ ಆಳವಾದ ಅರಿವು ಅಭ್ಯಾಸವಿತ್ತು. ಪೂರ್ವದ ಬಟ್ಟೆಗಳ ಪೂರ್ವಾಗ್ರಹ ಪೀಡಿತ ಸಿದ್ಧಮೌಲ್ಯಗಳ ಬಗೆಗೆ ವಿರೋಧವಿದೆ. ಹೊಸ ಮೌಲ್ಯಗಳ ಮರು ಸೃಷ್ಟಿಯ ಹಂಬಲವಿದೆ.

ಸಿದ್ಧಕಾವ್ಯ ಮೀಮಾಂಸೆಯನ್ನು ಅರಿತಿರುವ ಅಕ್ಕಮಹಾದೇವಿ ತನ್ನ ವಚನಗಳಲ್ಲಿ ಪಾರಂಪರಿಕ ಮಾರ್ಗಕ್ಕಿಂತ ಸ್ವಯಂ ಪ್ರತಿಭೆಯನ್ನು ಅನಾವರಣಗೊಳಿಸಿರುವುದರಿಂದ ಪದ್ಯದ ಸಂಕ್ಷಿಪ್ತತೆ, ಗೇಯತೆ, ಗದ್ಯದ ಸರಳತೆ, ಸಹಜತೆ ಮೇಳವಿಸಿ ಭಾವದೀಪ್ತಿಯನ್ನು ಹೊಳೆಯಿಸುತ್ತವೆ. ವಚನಗಳಲ್ಲಿ ಮೀಮಾಂಸೆಯ ಪರಿಕಲ್ಪನೆಗಳು ವಿಭಿನ್ನ ನೆಲೆಯಲ್ಲಿ ಪ್ರತಿನಿಧಿಕರಣಗೊಂಡಿವೆ.

ಅಕ್ಕಮಹಾದೇವಿಯ ವಚನಗಳ ಮೀಮಾಂಸೆಯು ವಚನಗಳ ಭಾಷೆಯ ರಚನೆ ಪ್ರತಿಮಾ ವಿಧಾನ, ವಂಧೋವಿನ್ಯಾಸ, ವಿವಿಧ ಶೈಲಿಗಳ ನಿರ್ವಚನ, ಮಹಿಳಾ ದೃಷ್ಟಿಕೋನ, ತಾತ್ವಿಕ ನೆಲೆ, ಅಭಿವ್ಯಕ್ತಿಯ ಹಿನ್ನಲೆ, ಅವಳ ಬದುಕು ಬರಹಗಳು ಸಾಹಿತ್ಯ ಸಮಾಜದ ಮೇಲೆ ಉಂಟುಮಾಡಿದ ಪರಿಣಾಮಗಳು ವಿಭಿನ್ನ ಚಿಂತನೆಗಳ ಸಮುಚ್ಚಯವಾಗಿದೆ.

ಅಡಿಟಿಪ್ಪಣೆಗಳು

೧. ಕನ್ನಡ ಸಾಹಿತ್ಯ ಮೀಮಾಂಸೆ: ೨೦೦೭, (ಸಂ) ಡಾ. ಸಬಿಹಾ ಭೂಮಿಗೌಡ, ಪು. ೨೨

೨. ಮಹಾದೇವಿಯಕ್ಕ ಪೀಠಿಕೆಗಳು ಲೇಖನಗಳು, ೧೯೭೧, ಡಿ.ಎಲ್.ನರಸಿಂಹಾಚಾರ ಪು. ೬೬೫

೩. ಶಿವಶರಣೆಯರ ವಚನ ಸಂಪುಟ–೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೧೦೮

೪. ಅದೇ, ವ.ಸಂ. ೭೭

೫. ಅದೇ, ವ.ಸಂ. ೧೧೯

೬. ಅದೇ, ವ.ಸಂ. ೩೯೧

೭. ಅದೇ, ವ.ಸಂ. ೩೯೨

೮. ಅದೇ, ವ.ಸಂ. ೩೭೦

೯. ಅದೆ, ವ.ಸಂ. ೩೯೮

೧೦. ಅಕ್ಕನ ವಚನಗಳು–೨೦೦೮, (ಸಂ) ಡಾ. ಎಲ್.ಬಸವರಾಜು, ವ.ಸಂ. ೨೮೩

೧೧. ವಚನಕಾರರ ಶಬ್ಧ ಮತ್ತು ಅರ್ಥಮಿಮಾಂಸೆ(ಅಪ್ರಕಟಿತ ಸಂಶೋಧನ ಪ್ರಬಂಧ), ೨೦೦೩ ಡಾ. ಕೆ.ನಾಗಭೂಷಣ, ಪು. ೧೪೭

೧೨. ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೨೯೧

೧೩. ಅದೇ, ವ.ಸಂ. ೧೬೧

೧೪. ಅದೇ, ವ.ಸಂ. ೩೦೮

೧೫. ಅದೇ, ವ.ಸಂ. ೩೧೭

೧೬. ಅದೇ, ವ.ಸಂ. ೪೦೮

೧೭. ಅದೇ, ವ.ಸಂ. ೪೦೯

೧೮. ಅದೇ, ವ.ಸಂ. ೨೨೨

೧೯. ಅದೇ, ವ.ಸಂ. ೨೨೩

೨೦. ಅದೇ, ವ.ಸಂ. ೫೨

೨೧. ಅದೇ, ವ.ಸಂ. ೩೬೫

೨೨. ಅಕ್ಕಮಹಾದೇವಿ, ೨೦೦೧, ಡಾ. ಶಾಂತಾ ಇಮ್ರಾಪೂರ, ಪು. ೨೪೩-೪೪

೨೩. ಶಿವರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೧೫೪

೨೪. ಅದೇ ವ.ಸಂ. ೭೧

೨೫. ಅದೇ ವ.ಸಂ. ೧೬

೨೬. ಅದೇ, ವ.ಸಂ. ೨೦೨

೨೭. ಅದೇ ವ.ಸಂ. ೩೪೪

೨೮. ಅದೇ ವ.ಸಂ. ೨೫೮

೨೯. ಅದೇ ವ.ಸಂ. ೨೬೧

೩೦. ಅದೇ, ವ.ಸಂ. ೨೬೦

೩೧. ಅದೇ, ವ.ಸಂ. ೧೦೪

೩೨. ಅದೇ, ವ.ಸಂ. ೪೧೮

೩೩. ಅದೇ, ವ.ಸಂ. ೨೧೯

೩೪. ಅದೇ, ವ.ಸಂ. ೨೩೦

೩೫. ಅಕ್ಕನ ವಚನಗಳು, ೨೦೦೮, (ಸಂ) ಡಾ. ಎಲ್.ಬಸವರಾಜು, ವ.ಸಂ. ೪೭

೩೬. ಶಿವಶರಣೆಯರ ವಚನ ಸಂಪುಟ-೫, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೨೦೫

೩೭. ಅದೇ, ವ.ಸಂ. ೭೯

೩೮. ಅದೇ, ವ.ಸಂ. ೩೫೬

೩೯. ಅದೇ, ವ.ಸಂ. ೧೩೪

೪೦. ಅದೇ, ವ.ಸಂ. ೩೭೨

೪೧. ಅದೇ, ವ.ಸಂ. ೧೧೬

೪೨. ಅದೇ, ವ.ಸಂ. ೨೧೧

ಅಧ್ಯಾಯ ನಾಲ್ಕು

ಅಕ್ಕಮಹಾದೇವಿಯ ಅಭಿವ್ಯಕ್ತಿ ವಿಧಾನ: ಮೀಮಾಂಸೆಯ ಪರಿಕಲ್ಪನೆಗಳು

ಅಧ್ಯಾಯ ನಾಲ್ಕು

ಅಕ್ಕಮಹಾದೇವಿಯ ಅಭಿವ್ಯಕ್ತಿ ವಿಧಾನ: ಮೀಮಾಂಸೆಯ ಪರಿಕಲ್ಪನೆಗಳು

ಅ. ಅಕ್ಕಮಹಾದೇವಿಯ ವಚನಗಳಲ್ಲಿ ಪ್ರತಿಮೆಗಳು

ಕವಿಯು ತನ್ನ ಅನುಭವಗಳನ್ನು ಭಾಷೆಯಲ್ಲಿ ನಿರೂಪಿಸುವಾಗ ಅದಕ್ಕೊಂದು ವಿಶಿಷ್ಟರೂಪವನ್ನು ನೀಡುವಲ್ಲಿ ಭಾಷೆಯ ಹಲವು ಪರಿಕರಗಳನ್ನು ಸುವ್ಯವಸ್ಥಿತವಾಗಿ ಹೆಣೆದು ಸೌಂದರ್ಯದಿಂದ ಕಂಗೊಳಿಸುವಂತೆ ಮಾಡುತ್ತಾನೆ. ಅವನ ಪ್ರತಿಭಾಶಕ್ತಿಯಿಂದ ವಿನೂತನವಾಗಿ ಮೂಡಿಬಂದ ಕೃತಿ ಕಲಾವೈಭವವನ್ನು ಪಡೆದು ಕಾಲಾಂತರದಲ್ಲಿಯೂ ತನ್ನ ಜೀವಂತಿಕೆಯನ್ನು ಗತಿಶೀಲತೆಯನ್ನುಳಿಸಿ ಕೊಳ್ಳುತ್ತ ಸಾಗುತ್ತದೆ. ಭಾಷೆಯಲ್ಲಿ ಭಾವಗಳನ್ನು ಭಟ್ಟಿಯಿಳಿಸಿ ಸಹೃದಯರಲ್ಲಿ ಭಾವ ತೀವ್ರತೆಯನ್ನು ಸ್ಪಂದನ ಶಕ್ತಿಯನ್ನು ಉದ್ದೀಪನಗೊಳಿಸಿ ತನ್ನ ಕೃತಿಯನ್ನು ಜೀವಂತವಾಗಿರಿಸಿದ ಶ್ರೇಷ್ಠ ಕಲೆ, ಕಾವ್ಯಕೃತಿಗಳು ನಿರಂತರವಾಗಿ ನಿರ್ಮಾಣಗೊಳ್ಳುತ್ತಲಿವೆ. ಪ್ರಾಚೀನ ಕಾಲದಿಂದ ಆಧುನಿಕ ಕಾಲದ ಇಂದಿನ ಜನಮಾನಸವನ್ನು ತಮ್ಮ ಮೌಲ್ಯಗಳಿಂದ ಆಕರ್ಷಿಸುತ್ತ ಬಂದಿರುವ ಶ್ರೇಷ್ಠ ಸಾಹಿತ್ಯ ತನ್ನ ಹಲವು ಸಾಧ್ಯತೆಗಳನ್ನು ಬಿಚ್ಚಿಕೊಳ್ಳುತ್ತ ಸಂಶೋಧನೆ, ವಿಮರ್ಶೆಗೆ ಒರೆಗಲ್ಲುಗಳಾಗಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಪಾಶ್ಚಾತ್ಯ, ಪೌರ್ವಾತ್ಯ ಕಾವ್ಯ ಪರಂಪರೆಯಲ್ಲಿ ತಮ್ಮ ಪ್ರತಿಭಾ ಶಕ್ತಿಯಿಂದ ನಿತ್ಯನೂತನವಾಗಿ ನಿಲ್ಲುವಂತಹ ಕಾವ್ಯಗಳು ಮುಂದಿನ ಜನಾಂಗಕ್ಕೂ ಕೈದೀವಿಗೆಗಳಾಗಿವೆ.

ಕಾವ್ಯದಲ್ಲಿ ಕವಿ ತನ್ನ ಅಂತರಂಗದಲ್ಲಿ ಉದಿಸಿದ ಭಾವಗಳನ್ನು, ವಿವಿಧ ರೀತಿಯಲ್ಲಿ ಪೋಣಿಸಿ ಸುಂದರ ಹಾರದಂತೆ ಕಂಗೊಳಿಸುವಂತೆ ಮಾಡಿ ಆ ಮೂಲಕ ತಾನು ತನ್ನ ಅಸ್ತಿತ್ವವನ್ನುಳಿಸಿ ಕೊಳ್ಳುತ್ತಾನೆ. ಕಾವ್ಯದ ಚಲನಶೀಲತೆಗೆ ತಕ್ಕುದಾದ ಪದ, ವಾಕ್ಯ, ಅಲಂಕಾರ, ಪ್ರತಿಮೆಗಳನ್ನು ಸಂದರ್ಭೋಚಿತವಾಗಿ ಬಳಕೆ ಮಾಡಿ ಕಾವ್ಯವು ಶ್ರೇಷ್ಠ ಕಲಾಕೃತಿಯಾಗಿ ಮೆರುಗುಗೊಳ್ಳುವಂತೆ ಮಾಡುವ ಕವಿ ಮತ್ತು ಅವನ ಕಾವ್ಯ ಅಸ್ತಿತ್ವವನ್ನುಳಿಸಿಕೊಳ್ಳುತ್ತವೆ. ಅಂತಹ ಕಾವ್ಯಸೌಂದರ್ಯಕ್ಕೆ

ಕಾರಣವಾದ ಪರಿಣಾಮಕಾರಿಯಾದ ಅಂಶಗಳೆಂದರೆ ಪ್ರತಿಮೆಗಳು. "ಸಾಮಾನ್ಯವಾಗಿ ಪ್ರತಿಮೆ ಎಂದರೆ, ವಿಗ್ರಹ, ಮೂರ್ತಿ, ಆಕಾರ ಹೋಲಿಕೆ ಮುಂತಾದ ಅರ್ಥಗಳಿವೆ. ಪ್ರತಿಮೆ ಕಲ್ಪನೆಯ ಕಣ್ಣು ಗ್ರಹಿಸುವಂತಹದು. ಇನ್ನೂ ಸರಳವಾಗಿ ಹೇಳುವುದಾದರೆ ಪ್ರತಿಮೆ ಎನ್ನುವುದು ಶಬ್ಧಗಳಿಂದಾದ ಕಾವ್ಯಚಿತ್ರ. ಪ್ರತಿಮೆ ಎನ್ನುವುದು ಕಾವ್ಯ ಸೌಂದರ್ಯ ಮತ್ತು ಧ್ವನಿಶಕ್ತಿ ಎರಡೂ ಇರುವ ಅಭಿವ್ಯಕ್ತಿ. ಮೊದಲು ಪ್ರತಿಮೆಗಳನ್ನು ಉಪಮೆ ರೂಪಕಗಳಂತೆ ಅಲಂಕಾರಗಳೆಂದು ಭಾವಿಸಲಾಗಿತ್ತು. ಅಲಂಕರೋತಿ ಇತಿ ಅಲಂಕಾರಃ ಎಂದು ಸಂಸ್ಕೃತದಲ್ಲಿ ಹೇಳಿದೆ. ಮನುಷ್ಯನು ಚೆನ್ನಾಗಿ ಕಾಣುವ ಉದ್ದೇಶದಿಂದ ಬಟ್ಟೆಬರೆ ವಸ್ತ್ರ ವಡವೆ ಮೊದಲಾದವುಗಳನ್ನು ಧರಿಸಿಕೊಳ್ಳುವಂತೆ, ಕವಿಯು ಕಾವ್ಯ ರಚಿಸುವಾಗ ಅರ್ಥ ಚಮತ್ಕಾರಗಳನ್ನು ಮಾಡಿದಾಗ ಕಾವ್ಯಕ್ಕೆ ಸೌಂದರ್ಯ ಬರುತ್ತದೆ."[೧]

ಕವಿಯು ಅಂತರಂಗದ ಅಮೂರ್ತ ಅನುಭವಗಳಿಗೆ ಮೂರ್ತರೂಪ ಕೊಡಲು ಚಿನ್ಹೆ, ಸಂಕೇತ ಪ್ರತೀಕ ಪ್ರತಿಮೆಗಳನ್ನು ಆಶ್ರಯಿಸಿ ಕಾವ್ಯಕ್ಕೆ ಸೌಂದರ್ಯ, ರಮ್ಯತೆ, ಧ್ವನಿಶಕ್ತಿ ಒಳಗೊಳ್ಳುವಂತೆ ಮಾಡುತ್ತಾನೆ. ಇಂದ್ರಿಯ ಗೋಚರವಾದ, ಅಲ್ಲದ, ಎಂದೋ ಕೇಳಿದ, ನೋಡಿದ ಸಂಗತಿಗಳನ್ನು ಗ್ರಹಿಸಿ ಭಾಷೆಯಲ್ಲಿ ನಿರೂಪಿಸಲು ಪ್ರತಿಮೆಗಳನ್ನು ಬಳಸುವುದುಂಟು. ಪ್ರತಿಮೆಗಳು ಭಾಷೆಯ ಪರಿಣಾಮಕಾರಿ ಪರಿಕರಗಳು. ವಸ್ತು ವಿಷಯ, ಸಂಗತಿ, ಅಮೂರ್ತ ಆಲೋಚನೆಗಳ ಅಭಿವ್ಯಕ್ತಿಗೆ ಸಹಾಯಕ. ಇಂಗ್ಲೀಷ ಭಾಷೆಯ **'IMAGE'** ಪದಕ್ಕೆ ಸಂವಾದಿಯಾಗಿ ಪೂರಕವಾಗಿ ಬಳಸುವ 'ಪ್ರತಿಮೆ' ಚಿನ್ಹೆ, ಸಂಕೇತ, ಪ್ರತೀಕ ಉಪಮೆ, ರೂಪಕಗಳನ್ನೊಳಗೊಂಡ ಇಂದ್ರಿಯಜನ್ಯ ಅನುಭವವನ್ನು ಅಭಿವ್ಯಕ್ತಗೊಳಿಸಲು ಬಳಸುವ ಪದ, ಪದಪುಂಜ, ವಾಕ್ಯ ಅಥವಾ ವಾಕ್ಯಸಮೂಹವೆನ್ನಬಹುದು.

ಪ್ರತಿಮೆಯಲ್ಲಿ ಕವಿಯ ಅಂತರಂಗದ ಅನುಭವವೇ ಒಡಗೂಡಿರುತ್ತದೆ. ಕವಿಯ ಭಾವಾಭಿವ್ಯಕ್ತಿಯ ಮಾಧ್ಯಮವೇ ಪ್ರತಿಮೆ. ಒಂದು, ಪದ, ವಾಕ್ಯ, ವಾಕ್ಯಸಮುದಾಯ ಪ್ರತಿಮೆಯಾಗಿ ಮಾರ್ಪಡಬಹುದು. ಇಡೀ ಕಾವ್ಯವೇ ಪ್ರತಿಮೆಯಾಗಬಲ್ಲುದು. "ಕವಿಯ ಅನುಭವ, ವಸ್ತು, ಕ್ರಿಯೆ, ವರ್ಣನೆ, ಆಲೋಚನೆ, ಚಿಂತನೆ, ಮಂಥನಗಳು ಭಾಷೆಯಲ್ಲಿ ಹರಳುಗೊಳ್ಳುತ್ತ ಓದುಗರ ಕಣ್ಣಿಗೆ ತಟ್ಟನೆ ಒಂದು ಚಿತ್ರ ರೂಪಿಸಿ ಅವರಿಗೆ ಅನುಭವಕ್ಕೆ ತಂದುಕೊಡುವ ವಿವರಣೆಯೇ ಪ್ರತಿಮೆ. ಓದುಗನ ಕಣ್ಣು ಒಂದೇ ಗಳಿಗೆಯಲ್ಲಿ ಕವಿಯ ಸಮಸ್ತ ಅನುಭವದ ಸಾರವನ್ನು ಪ್ರತಿಮೆಗಳ ಮೂಲಕ ಗ್ರಹಿಸಲು ಸುಲಭ ಸಾಧ್ಯವಾಗುತ್ತದೆ. ಅದರಂತೆಯೇ ಅಮೂರ್ತ ಭಾವನೆಗಳು ಮೂರ್ತರೂಪ ತಾಳುತ್ತವೆ. ಕಾವ್ಯದ ವಸ್ತುವಿನ ಜೀವಂತಿಕೆಯ ಕುರುಹುಗಳಾಗಿ ಪ್ರತಿಮೆ ಮೂಡಿ ಬರುತ್ತದೆ. ಪ್ರತಿಮೆಯ ಮೂಲಕ ಕವಿ ತನ್ನ ಆಶಯವನ್ನು ತೆರೆದಿಡುತ್ತಾನೆ."[೨]

ಭಾವಸಂವೇದನೆ ಮತ್ತು ದೃಶ್ಯ ಚಿತ್ರಣವನ್ನು ತಕ್ಷಣಕ್ಕೆ ಕಟ್ಟಿಕೊಡುವ ಪ್ರತಿಮೆಯಲ್ಲಿ ಬಳಕೆಯಾಗುವ ಪದಗಳ ಅರ್ಥವ್ಯಾಪ್ತಿ ವಿಸ್ತೃತ ಮತ್ತು ಪರಿಣಾಮಕಾರಿಯಾಗಿರುತ್ತದೆ. ಸ್ಥೂಲವಾದ ಅರ್ಥದಲ್ಲಿ

ಪ್ರತಿಮೆಯೆಂದರೆ ಶಬ್ಧಚಿತ್ರವೆಂದು ಹೇಳಬಹುದಾದರೂ ಕಾವ್ಯಸೌಂದರ್ಯ, ಧ್ವನಿಸೌಂದರ್ಯ, ಭಾವತೀವ್ರತೆ, ಅರ್ಥಸ್ಪಂದನ ಸಾಮರ್ಥ್ಯವಿರುವ ಚಲನಶೀಲ ಮಾಧ್ಯಮ. ಕವಿ ಪ್ರತಿಭೆಯ ಮೂಲಕ ಪ್ರತಿಮೆ ಅನಾವರಣಗೊಂಡು ಕಾವ್ಯಕೃತಿಗೆ ಮುಕುಟವಾಗಿಯೂ ಕಂಗೊಳಿಸಬಲ್ಲುದು. "ಪ್ರತಿಮೆಯೆಂಬುದು ಮೂಲತಃ ಕವಿ ಮನಸ್ಸಿನ ಸೃಜನೆ. ಒಂದು ಮತ್ತೊಂದಕ್ಕೆ ದೂರದಲ್ಲಿರುವ ಮತ್ತು ಯಾವುದೇ ಸಂಬಂಧವಿದೆಯೆಂಬಂತೆ ತೋರದ ಎರಡು ಅಥವಾ ಹೆಚ್ಚಿನ ವಸ್ತು ಸತ್ಯಗಳ ಹೋಲಿಕೆಯಿಂದ ಸಂಭವಿಸುವುದಲ್ಲ; ಅದರ ಬದಲು ದೂರ ದೂರದ ಆ ಎರಡು ವಸ್ತುಗಳಿರುವ ಯಾವುದೇ ಸಾದೃಶ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಅವೆರಡಕ್ಕಿರುವ ಒಳಸಂಬಂಧವನ್ನು ಕವಿಯ ಪ್ರಜ್ಞೆ ಗ್ರಹಿಸಿ, ಅವುಗಳನ್ನು ಸಂಘಟಿಸಿದ್ದರಿಂದ ಅದುವರೆಗೂ ಮನೋಗೋಚರವಾಗದಿದ್ದ ಹೊಸತೊಂದು ಹುಟ್ಟಿಕೊಳ್ಳುತ್ತದೆ ಅದೇ ಪ್ರತಿಮೆ."[೩]

ಇಂದ್ರಿಯಾನುಭವವನ್ನು ಸ್ಮರಿಸಿಕೊಂಡು ಸಂಕ್ಷಿಪ್ತ ಶಬ್ಧಗಳಲ್ಲಿ ನಾವೀನ್ಯವಾಗಿ ಶಬ್ಧಚಿತ್ರವೊಂದು ನಿರ್ಮಿತಿ ಹೊಂದುವುದೇ ಪ್ರತಿಮೆ. ಅದು ಕೇವಲ ಮೇಲ್ನೋಟದ ಹೋಲಿಕೆಯಾಗಿರದೆ, ಎರಡು ವಸ್ತು ವಿಷಯಗಳ ಅಂತರ್ ಸಂಬಂಧದ ಸಂಯೋಜನೆಯಾಗಿರುವುದು. ಪ್ರತಿಮೆಯ ಮುಖ್ಯ ಲಕ್ಷಣಗಳು ಸಂಕ್ಷಿಪ್ತತೆ, ನವೀನತೆ, ಅಂತರದರ್ಶನ, ಭಾವತೀತ್ರತೆ ಮತ್ತು ಜಾಗೃತಶಕ್ತಿಗಳು.

೧. ಸಂಕ್ಷಿಪ್ತತೆ

ಪ್ರತಿಮಾಕೃತಿಯಲ್ಲಿ ಪದ ಮಿತಿಯಿದ್ದರೂ ಅಪರಿಮಿತ ಅರ್ಥವನ್ನು ಹೊರಹೊಮ್ಮಿಸುವ ಶಕ್ತಿಯಿರುತ್ತದೆ. ಕವಿಯ ಲೋಕಾನುಭವ ಅಂತರಂಗದ ಜ್ಞಾನದ ಬೆಳಕಿನಲ್ಲಿ ಮನೋನೆಲೆಯಾಚೆಗಿನ ಅನುಭಾವವನ್ನು ಮೂರ್ತರೂಪದಲ್ಲಿ ಹಿಡಿದಿಡುವ ಸಾಮರ್ಥ್ಯ ಪ್ರತಿಮೆಯಲ್ಲಿ ತೋರುತ್ತದೆ. ಒಂದು ಪದ ಕೂಡ ಪ್ರತಿಮೆಯಾಗಿ ಅಪಾರ ಅರ್ಥವ್ಯಾಪ್ತಿಯನ್ನು ಹೊರಸೂಸಬಲ್ಲದು. ದೇಶೀ ಭಾಷೆಯ ಒಗಟು, ಗಾದೆ, ನುಡಿಗಟ್ಟುಗಳು ಅಪ್ರತಿಮವಾದ ಪ್ರತಿಮೆಯಾಗಿ ಕಲಾವೈಭವವನ್ನು ಪಡೆದು ಅನಂತ ಅರ್ಥತರಂಗಗಳನ್ನು ಸ್ಫುಟವಾಗಿ ಬಿಂಬಿಸಬಲ್ಲವು. ಶಬ್ಧ ಸಂಕ್ಷಿಪ್ತತೆಯಲ್ಲಿಯೇ ಪ್ರತಿಮೆಯ ಸ್ವಾರಸ್ಯ ಅಡಗಿರುವುದು.

೨. ನವೀನತೆ

ಭೂತ, ಭವಿಷ್ಯತ್ತಿನ ಪ್ರಜ್ಞೆಯನ್ನಾಧರಿಸಿದ ಘಟನೆಗಳು, ವಸ್ತುವಿಷಯಗಳು, ಚರಿತ್ರಾಧಾರಿತ ಸಂಗತಿಗಳು, ಪುರಾಣ ಕಾವ್ಯಗಳ ಉಕ್ತಿ ವಿಶೇಷಗಳು, ಸಂಕಥನಗಳನ್ನು ತನ್ನ ಅನುಭವದ ಮೂಸೆಯಲ್ಲಿ ಪದಗಳನ್ನು ಪಳಗಿಸಿ, ಸಂಯೋಜಿಸಿ ಹೊಸದೊಂದು ನೆಲೆಯನ್ನು, ಮೌಲ್ಯವನ್ನು ಕಟ್ಟಿಕೊಡುವ ನವೀನತೆ ಪ್ರತಿಮೆಯಲ್ಲಿ ಕಂಡು ಬರುತ್ತದೆ. ಸ್ಥಾಪಿತಗೊಂಡ ಮೌಲ್ಯಗಳನ್ನು ವಿಭಿನ್ನ ನೆಲೆಯಿಂದ ಅರ್ಥೈಸುವ, ಅಭಿವ್ಯಕ್ತಿಸುವ ನಾವಿನ್ಯಪೂರ್ಣತೆಯನ್ನು ಪ್ರತಿಮೆ ಹೊಳಯಿಸುತ್ತದೆ.

೩. ಅಂತರದರ್ಶನ

ಮೂರ್ತರೂಪದ ಪದಗಳಿಂದ ಅಮೂರ್ತ ಅನುಭಾವವನ್ನು ಸಾಕ್ಷೀಕರಿಸಿಕೊಡುವ ಪ್ರತಿಮೆ ಶಬ್ಧಸಾಕಾರದಿಂದ ನಿರಾಕಾರ ಅನುಭವಗಳನ್ನು ನಿರೂಪಿಸುವುದು. ಆ ಮೂಲಕ ಬಹಿರಂಗದ ಶಬ್ಧಗಳಿಂದ ಆಲೋಚನೆಗಳನ್ನು ಅವಿಷ್ಕರಿಸಿ ಅಂತರಂಗವನ್ನು ಅವಿರ್ಭಾವಗೊಳಿಸುವುದು. ಪ್ರತಿಮೆಯಲ್ಲಿ ಕವಿಯ ಅನುಭವ, ಆಲೋಚನೆ, ಭಾವಲಹರಿಗಳು, ಚಿಂತನೆಗಳು ಶಬ್ಧದಲ್ಲಿ ರೂಪು ಪಡೆದು ನಾವಿನ್ಯಪೂರ್ಣವಾದ ಶಬ್ಧಚಿತ್ರವೊಂದು ಕಲಾಜೀವಂತಿಕೆಯೊಂದಿಗೆ ಕಂಗೊಳಿಸುತ್ತದೆ. ಕೃತಿಕಾರನ ಮನೋದರ್ಪಣದಲ್ಲಿ ಓದುಗನಿಗೆ ತನ್ನತನವನ್ನು ನೋಡಿಕೊಳ್ಳುವ, ಕಂಡುಕೊಳ್ಳುವ ಅವಕಾಶ ಪ್ರತಿಮೆಯಲ್ಲಿ ಒದಗುತ್ತದೆ. ತನ್ಮೂಲಕ ಅನಿರ್ವಚನೀಯ ಆನಂದ ವುಂಟಾಗುವುದು.

೪. ಭಾವತೀವ್ರತೆ

ಸಹೃದಯನಲ್ಲಿ ಭಾವನೆಗಳನ್ನು ಪ್ರಚೋದಿಸಿ ಪರಿಣಾಮಕಾರಿಯಾದ, ತೀಕ್ಷ್ಣವಾದ ಪ್ರತಿ ಸ್ಪಂದನವನ್ನುಂಟು ಮಾಡುವ, ಅದಮ್ಯ ಶಕ್ತಿ ಪ್ರತಿಮೆಗಿದೆ. ಓದುಗನಲ್ಲಿ ತೀವ್ರತೆ, ಪ್ರತಿಕ್ರಿಯಾತ್ಮಕತೆಯನ್ನು ಹುಟ್ಟಿಸುವ, ತನ್ಮೂಲಕ ಒಳನೋಟವನ್ನು ಪ್ರತಿಬಿಂಬಿಸುವ ಪ್ರತಿಮೆಗಳು, ರಸಾನಂದವನ್ನು ನೀಡುವುದರೊಂದಿಗೆ ಚೈತನ್ಯಾತ್ಮಕ ಶಕ್ತಿಯನ್ನು ಜಾಗ್ರತೆಗೊಳಿಸುತ್ತವೆ. ಬದುಕಿನ ರೀತಿ ನೀತಿ, ಧ್ಯೇಯ ದೃಷ್ಟಿಗಳನ್ನು ನಿರ್ದೇಶಿಸುತ್ತವೆ.

೫) ಜಾಗ್ರತಶಕ್ತಿ

ಕಾವ್ಯದಲ್ಲಿ ಕೇವಲ ರಸಾನುಭವಕ್ಕಾಗಿ ಪ್ರತಿಮೆಗಳು ಪ್ರತಿಪಾದಿಸಲ್ಪಡದೇ ಓದುಗನಲ್ಲಿ ಭಾವ ತರಂಗಗಳಿಗೆ ಒಂದು ರೀತಿಯ ಮೌಲ್ಯವರ್ಧಕಗಳಂತೆ ಚೈತನ್ಯಾತ್ಮಕ ಶಕ್ತಿಯನ್ನೊದಗಿಸುತ್ತವೆ. ಮೌಲ್ಯಗಳ, ಚಿಂತನೆಗಳ, ಮೂಲಜ್ಞಾನ ಸತ್ಯ ದರ್ಶನವನ್ನುಂಟು ಮಾಡಿ ಕಾವ್ಯಸೌಂದರ್ಯ, ಸತ್ಯದರ್ಶನ ಏಕಕಾಲಕ್ಕೆ ಪ್ರಜ್ವಲಿಸುವಂತಹ ಜಾಗೃತಶಕ್ತಿಯನ್ನು ಹೊಂದಿರುವವು. ಪ್ರತಿಮಾಕೃತಿ ಸಹೃದಯನಲ್ಲಿ ಪರಿಣಾಮಕಾರಿ ಪ್ರಭಾವ ಬೀರಿ ನೀತಿಯುತ ಮಾರ್ಗದಲ್ಲಿ ಚರಿಸಲು ಪ್ರೇರಣೆ ನೀಡುತ್ತವೆ. ಕವಿಯ ಅನುಭಾವ, ಅಂತರ್‌ಭಾವಗಳು, ಸತ್‌ಚಿಂತನೆಗಳು ಪ್ರತಿಮಾ ಮಾಧ್ಯಮದ ಮೂಲಕ ಅಭಿವ್ಯಕ್ತಿ ಹೊಂದಿ ಓದುಗರಲ್ಲಿ ಜ್ಞಾನ ಸಂಚಲನವನ್ನುಂಟು ಮಾಡುವವು.

ಪ್ರತಿಮೆಗಳು ಗದ್ಯ ಪದ್ಯ ಎರಡರಲ್ಲಿಯೂ ಮೈದೊರಲು ಸಾಧ್ಯವಿದೆ. ಪ್ರತಿಮಾ ನಿರ್ಮಿತಿ ಆಯಾ ಕೃತಿಕಾರನ ಪ್ರತಿಭೆ, ಲೋಕಾನುಭವವನ್ನು ಆಧರಿಸಿ ನಿರ್ಮಾಣಗೊಂಡು ಕಾವ್ಯಕ್ಕೆ ಸೌಂದರ್ಯವನ್ನು, ಅರ್ಥ ಸ್ವಾರಸ್ಯವನ್ನು ಹೆಚ್ಚಿಸುತ್ತವೆ. "ತನ್ನ ಕಾವ್ಯ ವಸ್ತುವಿಗಾಗಿ ಇತಿಹಾಸ ಪುರಾಣಗಳನ್ನು ಆಶ್ರಯಿಸುವ ಕವಿ ನಿರ್ಮಿತಿಯಂತೂ ಪ್ರತಿಮಾ ಪ್ರಪಂಚದ ಭಾಂಡಾರದ

ಮುದ್ರೆಯನ್ನೆ ಒಡೆಯುತ್ತದೆ. ಒಂದು ದೇಶದ ಮನಸ್ಸು ಶತಶತಮಾನಗಳಿಂದ ತಾನು ಗ್ರಹಿಸಿದ ಸತ್ಯಕ್ಕೆ ಅಥವಾ ವಿಚಾರಗಳಿಗೆ ತೊಡಿಸಿದ ಅನೇಕ ಪ್ರತಿಮೆಗಳು ಇತಿಹಾಸ ಹಾಗೂ ಪುರಾಣಗಳಲ್ಲಿರುತ್ತವೆ. ಪ್ರತಿಮಾ ನಿರ್ಮಿತಿ ಎಂಬುದು ಒಂದು ಜನಾಂಗದ ಸಮಷ್ಟಿ ಮನಸ್ಸಿನ ಅವಿಚಾರಕ ಅವಿರ್ಭೂತಿಗಳು; ಕಥೆಗಳು ಅದರ ಮೊದಲ ಅಭಿವ್ಯಕ್ತಿಗಳು."[೪]

ಸಂದರ್ಭವೊಂದರ ಚಿತ್ರಣವನ್ನು ಕ್ಷಣಮಾತ್ರದಲ್ಲಿ ಕಣ್ಮುಂದೆ ಕಟ್ಟಿಕೊಡಬಲ್ಲ ಶಕ್ತಿ ಪ್ರತಿಮೆಗಿದೆ. ಇಂಥ ಪ್ರತಿಮಾ ಪರಿಕರವನ್ನು ಪರಿಣಾಮಕಾರಿಯಾಗಿ ಪಾಶ್ಚಾತ್ಯರು ಬಳಸಿಕೊಂಡಿರುವಂತೆಯೇ ಭಾರತೀಯ ಸಾಹಿತಿಗಳು, ತಮ್ಮ ಕಾವ್ಯ, ಗದ್ಯ, ವಚನಗಳಲ್ಲಿ ಉಪಯೋಗಿಸಿ ಸತ್ವಯುತ ಸಾಹಿತ್ಯ ಕೃಷಿಗೈದಿದ್ದಾರೆ. ಆಧುನಿಕ ಕಾಲದ ಪಾಶ್ಚಾತ್ಯ ವಿಮರ್ಶಕರು ಪ್ರತಿಮೆಯ ಕುರಿತು ಚಿಂತನೆಗೈದಿರುವರು. ಪ್ರತಿಮೆಯನ್ನು ಆರಂಭದ ದಿನಗಳಲ್ಲಿ ಅದೊಂದು ಅಲಂಕಾರವೆಂದೇ ಭಾವಿಸಲಾಗಿತ್ತು. ಸೂಸನ್ ಕೆಲಾಂಗರ್, ಲೇವಿಸ್, ಡಿ.ಎರಿಚರ್ಡ್, ಎಜ್ರಾಪೌಂಡ್, ಕೊಲರಿಜ್ ಮೊದಲಾದ ಪಾಶ್ಚಾತ್ಯ ವಿಮರ್ಶಕರು ಕಾವ್ಯ ಪ್ರತಿಮೆ ಕುರಿತು ವಿವಿಧ ದೃಷ್ಟಿಕೋನಗಳಿಂದ ಅರ್ಥೈಸಿ, ಸಾಹಿತ್ಯದ ಸಂದರ್ಭದಲ್ಲಿ 'ಪ್ರತಿಮೆ' ಹೊಂದಿರುವ ಮಹತ್ವವನ್ನು ಗುರುತಿಸಿದ್ದಾರೆ. ತದನಂತರದ ಪ್ರಸಿದ್ಧ ಕವಿಗಳು ಪ್ರತಿಮೆಯನ್ನು ತಮ್ಮ ಕಾವ್ಯದ ಬರವಣಿಗೆಯ ಆಕರ್ಷಿತ ಭಾಗವೆಂದೇ ಪರಿಗಣಿಸಿ, ಸಾಹಿತ್ಯದಲ್ಲಿ ನಿರಂತರವಾಗಿ ಉಪಯೋಗಿಸುತ್ತ ಬಂದಿದ್ದಾರೆ.

ಭಾರತೀಯ, ಪಾಶ್ಚಾತ್ಯ ಕವಿಗಳು ತಮ್ಮ ಕಾವ್ಯಗಳಲ್ಲಿ ಅಪರೋಕ್ಷವಾಗಿ ಅಲಂಕಾರದ ಹಿನ್ನೆಲೆಯಲ್ಲಿಯೇ ಪ್ರತಿಮೆಯನ್ನು ಬಳಸಿ ಕಾವ್ಯಕೃತಿಯ ಕಸುವನ್ನು ಹೆಚ್ಚಿಸಿದ್ದಾರೆ. ಆಧುನಿಕ ನವೋದಯ ಕಾಲದ ಕವಿಗಳಲ್ಲಿ ಕುವೆಂಪುರವರು 'ತಮ್ಮ ತಪೋನಂದನ' ಕೃತಿಯಲ್ಲಿ ಪ್ರತಿಮೆ ಕುರಿತು ಚರ್ಚಿಸಿದ್ದಾರೆ. ಜಿ.ಎಸ್.ಶಿವರುದ್ರಪ್ಪನವರು, ಪಾಶ್ಚಾತ್ಯ ಮತ್ತು ಪೌರ್ವಾತ್ಯ ಸಾಹಿತ್ಯದ ವಿವಿಧ ಮಜಲುಗಳಲ್ಲಿ ಒಳಗೊಳ್ಳುತ್ತ ಬಂದಿರುವ 'ಪ್ರತಿಮೆ' ಬಗೆಗಿನ ಆಳವಾದ ಚಿಂತನಗಳನ್ನು ಕಟ್ಟಿಕೊಟ್ಟಿರುವರು. ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ, ನಡುಗನ್ನಡ, ಹೊಸಗನ್ನಡ, ಭಾಷಾ ಸಂದರ್ಭದ ಸಾಹಿತ್ಯದ ಪದ್ಯ, ಗದ್ಯಗಳೆರಡರಲ್ಲಿಯೂ ಪ್ರತಿಮೆ ಪರೋಕ್ಷ, ಮತ್ತು ಪತ್ಯಕ್ಷ ಎರಡೂ ರೂಪದಲ್ಲಿ ಸಾಹಿತ್ಯದ ಭಾಗವಾಗಿ ಅನಾವರಣಗೊಳ್ಳುತ್ತಲೇ ಇರುವುದು ಅದರ ವೈಶಿಷ್ಟವನ್ನು ತಿಳಿಸುತ್ತದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೆ ಅಗ್ರಮಾನ್ಯ ಕಾಲಘಟ್ಟವೆಂದು ಗುರುತಿಸಲ್ಪಡುವ ಹನ್ನೆರಡನೆ ಶತಮಾನದ ವಚನ ಚಳುವಳಿಯ ಹರಿಕಾರರಾದ ವಚನಕಾರರು ಅದುವರೆಗಿನ ಮಾರ್ಗ ಸಂಪ್ರದಾಯವನ್ನು ಮುರಿದು ದೇಶೀ ಭಾಷೆಯನ್ನೇ ಸಾಹಿತ್ಯ ಭಾಷೆಯಾಗಿ ಬಳಸಿ ವಚನ ರಚನೆ ಗೈದರು. ಅಂತಹ ಹಿನ್ನೆಲೆಯಲ್ಲಿ ಮೂಡಿ ಬಂದಿರುವ ವಚನ ಸಾಹಿತ್ಯದಲ್ಲಿ ದೇಶೀ ಸಂಸ್ಕೃತಿಯ ಮೂಲನೆಲೆಗಳಾದ ಒಗಟು, ಗಾದೆ, ನುಡಿಗಟ್ಟು, ವೃತ್ತಿ ಪರಿಕರಗಳು, ವೃತ್ತಿಭಾಷೆ ಸಹಜವಾಗಿಯೇ

ನೆಲೆಗೊಂಡು ಅಭಿವ್ಯಕ್ತಿಗೆ ಹೊಸರೂಪನ್ನು ತಂದುಕೊಟ್ಟಿತು. ತಮ್ಮ ಧ್ಯೇಯ ಧೋರಣೆಗಳನ್ನು ಜನಸಾಮಾನ್ಯರಿಗೆ ತಿಳಿಯುವಂತೆ ವ್ಯಕ್ತಪಡಿಸಲು ವಚನಕಾರರು 'ಪ್ರತಿಮೆ'ಯಂತಹ ಪರಿಕರಗಳನ್ನು ಬಳಸಿದರು. ವಚನಗಳಲ್ಲಿ ತಮ್ಮ ಸುತ್ತಲಿನ ಪರಿಸರದ ಅನುಭವಗಳನ್ನು ವ್ಯಕ್ತಗೊಳಿಸಲು ಅಮೂರ್ತ ಆಧ್ಯಾತ್ಮಿಕ ಅನುಭಾವವನ್ನು ಮೂರ್ತರೂಪದಲ್ಲಿ ದೃಶ್ಯೀಕರಿಸಲು ಪ್ರತಿಮಾ ವಿಧಾನವನ್ನು ಬಳಸಿಕೊಂಡಿರುವುದುಂಟು.

ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಚೆನ್ನಬಸವಣ್ಣನವರಾದಿಯಾಗಿ ಶರಣ ಶರಣೆಯರು ತಮ್ಮ ವಚನಗಳಿಗೆ ಹೆಚ್ಚಿನ ಅರ್ಥವಂತಿಕೆ, ಭಾವತೀವ್ರತೆಯನ್ನು ಹೆಚ್ಚಿಸಲು, ಪ್ರತಿಮೆಗಳನ್ನು ವಚನಗಳಲ್ಲಿ ಅಳವಡಿಸಿ, ಓದುಗರಿಗೆ ಸುಲಭವಾಗಿ ವಚನಾರ್ಥವನ್ನು ಗ್ರಹಿಸಲು, ಅನುವಾಗುವಂತೆ ಸರಳಶಬ್ಧಗಳಲ್ಲಿ ಸಂಕ್ಷಿಪ್ತವಾದ ನಿರೂಪಣೆ, ನಾವೀನ್ಯಪೂರ್ಣ ತಂತ್ರದಿಂದ ಶಬ್ಧಚಿತ್ರಗಳನ್ನು ಕಟ್ಟಿಕೊಟ್ಟಿರುವರು. ಬಸವಾದಿ ವಚನಕಾರರ ಸಮಕಾಲೀನಳಾದ ಅಕ್ಕಮಹಾದೇವಿ ವಚನ ರಚನೆ, ಭಾಷೆ, ತಾತ್ವಿಕ ದೃಷ್ಟಿಗಳನ್ನು, ವಚನಕಾರರ ಜೀವನ ಮೌಲ್ಯ, ರೀತಿ ನೀತಿಗಳನ್ನು ಒಪ್ಪಿಕೊಂಡವಳು. ಆದರೂ ಅವರೆಲ್ಲರಲ್ಲಿ ವಿಶಿಷ್ಟವಾಗಿ ನಿಲ್ಲುವಂತವಳು. ಕಾರಣ ಅಕ್ಕನ ವಚನ ರಚನೆ, ಭಾಷಾ ಬಳಕೆಯ ರೀತಿ, ಜೀವನಧ್ಯೇಯ, ಅದರ ಸಾಧನೆಗಾಗಿ ಅವಳ ಜೀವನದಲ್ಲಿ ಎದುರಿಸಬೇಕಾಗಿ ಬಂದ ಅಡ್ಡಿ ಆತಂಕಗಳೆಲ್ಲ ವಚನಗಳ ವಿಷಯ ವಸ್ತುಗಳಾಗಿವೆ. ಅಂಥ ಸಂದರ್ಭದಲ್ಲಿ ಬಳಸಿದ ಭಾಷೆಯೂ ಭಿನ್ನವಾಗಿದೆ. ಮಧುರ ಭಕ್ತಿಯ ನಿವೇದನೆ ಏಕಮುಖಿ, ಬಹುಮುಖಿ ಸಂವೇದನೆಗಳ ಅಭಿವ್ಯಕ್ತಿಯಲ್ಲಿ ಅಕ್ಕ ಆಯ್ದುಕೊಂಡದ್ದು ಹೃದ್ಯವೇದ್ಯವಾದ ಮಧುರಭಾಷೆ, ಹಾಗೆಯೇ ತನ್ನ ದೃಷ್ಟಿಗೆ ವಿರುದ್ಧವಾದುದರ ಬಗೆಗಿನ ವೇದನೆ ಮತ್ತು ಆಕ್ರೋಶಗಳಲ್ಲಿ ಬಂಡಾಯದ ಮನಸ್ಸಿನ ಹೋರಾಟದ ಭಾಷೆ, ಪ್ರಕಟಗೊಂಡಿದೆ. ಅಲ್ಲೆಲ್ಲಿಯೂ ಭಾಷೆ ಶುಷ್ಕವಾಗದೆ ತನ್ನ ಸಹಜ ಸೌಂದರ್ಯವನ್ನು ಕಾಯ್ದುಕೊಂಡಿರುವುದೇ ವಿಶೇಷ!

ಅಕ್ಕಮಹಾದೇವಿ ತನ್ನಂತರಂಗದ ಭಾವಗಳನ್ನು ನಿವೇದಿಸಿಕೊಳ್ಳುವಾಗ ಸಹಜ ಅಭಿವ್ಯಕ್ತಿ ಹರಿವ ನದಿಯಂತೆ ಒಮ್ಮೆ ಪ್ರಶಾಂತ, ಮತ್ತೊಮ್ಮೆ ಪ್ರವಾಹದೋಪಾದಿಯಲ್ಲಿ ಕಂಡುಬರುತ್ತದೆ. ಪ್ರಾಸ ಯತಿ, ಗಣ, ಛಂದಸ್ಸಿನ ಕಾವ್ಯ ಕಟ್ಟಳೆಗಳ ಹೊರೆಯನ್ನು ಮುರಿದು ಸಹಜ ಸುಂದರ ಭಾವ ನಿವೇದನೆಯಲ್ಲಿ ಕಾವ್ಯ ಲಕ್ಷಣಗಳು ಪುಷ್ಪದಲ್ಲಿ ಪರಿಮಳ ಬೆರೆತಂತೆ ವ್ಯಕ್ತಗೊಂಡು ಅನುಭವ ವೇದ್ಯವಾಗುತ್ತವೆ. ಅಮೂರ್ತ ಅನುಭಾವಗಳನ್ನು ಸಂಕ್ಷಿಪ್ತ ಶಬ್ಧಗಳಲ್ಲಿ ಶಬ್ಧಚಿತ್ರಗಳ ಮುಖೇನ ಮೂರ್ತ ರೂಪದಲ್ಲಿ ಅಕ್ಕ ತನ್ನ ವಚನಗಳಲ್ಲಿ ಚಿತ್ರಿಸಿದ್ದಾಳೆ. ಅಲ್ಲಿ ವಚನಕ್ಕೆ ಹೊರೆಯಾಗದೆ ಅರ್ಥ ಹೊಳಹು ಹೆಚ್ಚಿಸಿ ಕಾವ್ಯ ಸೌಂದರ್ಯ ಮತ್ತು ಧ್ವನಿಶಕ್ತಿಗಳೆರಡೂ ಮೇಳೈಸಿವೆ.

ಪ್ರತಿಮೆಗಳು ವಚನಗಳ ಅರ್ಥವನ್ನು ಸುಲಭವಾಗಿ ಗ್ರಹಿಸಲು ಪೂರಕವಾಗಿರುವಂತೆಯೇ ಜೀವಂತಿಕೆಯ ಕಳೆಯನ್ನು ಕಟ್ಟಿಕೊಟ್ಟಿವೆ. ಅವಳ ವಚನಗಳಲ್ಲಿ ಕೀಟ, ಪ್ರಾಣಿ, ಪಕ್ಷಿ, ಸಸ್ಯ ಪ್ರತಿಮೆಗಳು ಲೋಕಾನುಭವ ಸಂದರ್ಭದ ಸಾಮಾಜಿಕ ಪ್ರತಿಮೆಗಳು. ಭಕ್ತಿ, ಜ್ಞಾನ ವೈರಾಗ್ಯವನ್ನು ಪ್ರತಿನಿಧಿಸುವ ಧಾರ್ಮಿಕ ಪ್ರತಿಮೆಗಳು, ದಾಂಪತ್ಯ ಪ್ರತಿಮೆಗಳು, ಅಲೌಕಿಕ ಅಮೂರ್ತ ಆಧ್ಯಾತ್ಮಿಕ ಅನುಭಾವಗಳನ್ನು ಮೂರ್ತರೂಪದಲ್ಲಿ ಚಿತ್ರಿಸಿದ ಆಧ್ಯಾತ್ಮಿಕ ಪ್ರತಿಮೆಗಳು ಸಾಂದರ್ಭಿಕವಾಗಿ ಮೂಡಿಬಂದು ಅಭಿವ್ಯಕ್ತಿಯ ಅರ್ಥಸ್ವಾರಸ್ಯ, ಕಾವ್ಯಸತ್ವವನ್ನು ಹೆಚ್ಚಿಸಿವೆ.

ಕೀಟ ಪ್ರತಿಮೆಗಳು

ಅಕ್ಕಮಹಾದೇವಿ ಉದ್ದೇಶಪೂರ್ವಕವಾಗಿ ವಚನಗಳನ್ನು ಬರೆದವಳಲ್ಲ. ಕಾವ್ಯಸೌಂದರ್ಯಕ್ಕಾಗಿಯೇ ಅಲಂಕಾರ ಪ್ರತಿಮೆಗಳನ್ನು ಬಳಸಿದವಳಲ್ಲ. ಅವಳ ಸಹಜ ಅಭಿವ್ಯಕ್ತಿಗೆ ಸಾಧನವಾಗಿ ವಚನಗಳಲ್ಲಿ ಕಾವ್ಯಾಂಶಗಳು ಬೆರೆತು ಹೃದ್ಯವೇದ್ಯವೆನಿಸುತ್ತವೆ. ಮಾನವನ ಆಂತರ್ಯದಲ್ಲಿ ದೇವನಿದ್ದರೂ ಅದನ್ನರಿಯದೇ ಬಾಹ್ಯ ಪ್ರಪಂಚದ ಮಾಯಾಮೋಹಗಳಿಗೊಳಗಾಗಿ ಬಂದ ಬಟ್ಟೆಯನರಿಯದೆ ಭವದ ಬೀಜವಾದ ದುರಾಶೆಗಳಿಗೆ ದಾಸನಾಗಿ ಭವಚಕ್ರದಲ್ಲಿ ತೊಳಲಾಡುವ ವೈಚಿತ್ರ್ಯವನ್ನು ತೆರಣಿಯ ಹುಳುವಿನ ಸುಂದರವಾದ ಪ್ರತಿಮಾಕೃತಿಯ ಮೂಲಕ ಚಿತ್ರಿಸಿದ್ದಾಳೆ.

ತೆರಣಿಯಹುಳು

"ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯಮಾಡಿ
ತನ್ನ ನೂಲು ತನ್ನನೆ ಸುತ್ತಿ ಸಾವಂತೆ,
ಮನ ಬಂದುದನು ಬಯಸಿ ಬೇವುತ್ತಿದ್ದೇನಯ್ಯಾ.
ಎನ್ನ ಮನದ ದುರಾಶೆಯ ಮಾಣಿಸಿ
ನಿಮ್ಮತ್ತ ತೋರಾ ಚೆನ್ನಮಲ್ಲಿಕಾರ್ಜುನಾ"[೫]

ತೆರಣಿಯ ಹುಳು-ರೇಷ್ಮೆಹುಳು ಅಜ್ಞಾನ, ಮೋಹದ, ಭವಬಂಧನದ ಸಂಕೇತವಾಗಿದೆ. ರೇಷ್ಮೆಹುಳು ತನ್ನ ದೇಹದೊಳಗಿನ ಜಿಗುಟಾದ ರಸವನ್ನು ಹೊರಹಾಕಿ ಆ ರಸದಿಂದಲೇ ಗೂಡು ಕಟ್ಟುತ್ತದೆ. ತನ್ನಲ್ಲಿಯ ರಸದಿಂದ ನೂಲು ತೆಗೆದು ಗೂಡು ಕಟ್ಟುವಾಗ ಅದೇ ತನ್ನ ಮರಣದ ಗೋಡೆಯಾಗುತ್ತದೆಂಬುದನ್ನರಿಯದು. ಸಂತಸ ಸ್ನೇಹದಿಂದಲೇ ಸ್ವಯಂಕೃತವಾಗಿ ನೂಲು ತೆಗೆದು ಗೂಡುಕಟ್ಟಿ ಕೊನೆಗೊಮ್ಮೆ ಆ ಗೂಡಿನಿಂದ ಹೊರಬರಲಾಗದೆ ಅಲ್ಲಿಯೇ ಸಾಯುತ್ತದೆ. ತೆರಣಿಯ ಹುಳು ತನ್ನ ನೂಲನ್ನು ಸುತ್ತಿಕೊಂಡಾಗ ರೇಷ್ಮೆಯ ವ್ಯಾಪಾರಿ ಆ ಹುಳವನ್ನು ಗೂಡುಸಮೇತ ಬಿಸಿ ನೀರಿನಲ್ಲಿ ಕುದಿಸಿ ಸಾಯಿಸುತ್ತಾನೆ. ತೆರಣಿಯ ಹುಳುವಿನ ತೆರನಂತೆಯೇ ಮನುಷ್ಯನು ಮನಬಂದಂತೆ

ಜಗದ ವಸ್ತು ವಿಷಯಾದಿಗಳನ್ನು ಬಯಸುತ್ತಾನೆ. ಅವು ದೊರೆಯದಿದ್ದಾಗ ಬೇಯುತ್ತಾನೆ. ಬೆಂದು ಬಳಲುತ್ತಾನೆ. ಮನದ ದುರಾಶೆಗಳಿಗಾಗಿ ಧೂರ್ತತನಕ್ಕೂ ಇಳಿಯುತ್ತಾನೆ. ದುರಾಶೆಯಿಂದ ದೂರವಾದಾಗಲೇ ದೇವದರ್ಶನ ಎಂಬುದನ್ನು ಮರೆತು ವರ್ತಿಸುತ್ತಾನೆ. ತನ್ನ ಅವಸಾನದ ಅಪಾಯವನ್ನು ಸ್ವಯಂ ನಿರ್ಮಿಸಿಕೊಂಡು ಭವಚಕ್ರಕ್ಕೆ ಸಿಲುಕುತ್ತಾನೆ.

ಲೋಕ ವ್ಯಾಪಾರಗಳನ್ನರಿತ ಅನುಭಾವಿ ಅಕ್ಕಮಹಾದೇವಿ ದೇವನ ಮೊರೆ ಹೊಕ್ಕಿರುವಳು. ಎಂಥವರನ್ನು ದುರಾಶೆ ದುರ್ಗತಿಗೆ ಒಯ್ಯಬಲ್ಲುದಾದ್ದರಿಂದ ದೇವಾ ನಿನ್ನ ಕೃಪೆಯಾದರೆ ಮಾತ್ರ ದುರಾಶೆ, ವಿಷಯ ಚಾಪಲ್ಯ ದೂರವಾಗಬಲ್ಲುದು. ನೀನೇ ನನ್ನ ಮನದ ದುರಾಶೆ ಬಿಡಿಸಿ ನಿಮ್ಮೆಡೆಗೆ ಮುಖಮಾಡಿಸೆಂದು ಅಂಗಲಾಚಿರುವಳು. ಮನದ ಆಶೆ, ವಿಷಯ ಚಂಚಲತೆಗಳು ಅಳಿದು ದೇವನನ್ನು ನಂಬಿದಾಗ ಭವಬೀಜಕ್ಕೆ ಕಾರಣವಾದ ಪ್ರಾಪಂಚಿಕ ಬಂಧನಗಳು ನಾಶವಾಗುವವು. ಹುಟ್ಟು ಸಾವುಗಳ ಭವಚಕ್ರದಿಂದ ಪಾರಾಗಿ ಮುಕ್ತಿಯ ನಿರ್ವಯಲ ಸ್ಥಿತಿಗೆ ಸಾಗಬಲ್ಲೆನೆಂಬ ಸಾರ್ವಕಾಲಿಕ ಸತ್ಯವನ್ನು ತೆರಣಿಯ ಹುಳುವಿನ ಪ್ರತಿಮೆಯ ಮೂಲಕ ನಿರೂಪಿಸಿದ್ದಾಳೆ. ಮನಸ್ಸಿನ ಪಲ್ಲಟದ ಅನಿವಾರ್ಯತೆಯನ್ನು ಅಕ್ಕಮಹಾದೇವಿ ಅರಿತಿರುವಳು. ಮನದ ದುರಾಶೆ ಅಳಿಯಬೇಕಾದರೆ ಅದಕ್ಕೆ ಬದಲಾಗಿ ದೇವ ನಾಮಸ್ಮರಣೆಯ ದಾರಿ ಹಿಡಿಯಬೇಕು. ಅದು ಮನುಷ್ಯನ ಸತತ ಸಾಧನೆಯಿಂದ ಸಾಧ್ಯವಾಗುವುದಾದರೂ ದೇವರ ದಯೆಯೂ ಆಗಬೇಕು. ಅಂದಾಗ ಅಳಿಮನ ಘನಮನವಾಗುವುದು.

ವಚನದ ಆಂತರ್ಯದಲ್ಲಿ ಹುದುಗಿರುವ ಧ್ವನಿಶಕ್ತಿ, ಗತಿಶೀಲತೆಯು ಭವಬಂಧನಕ್ಕೆ ಕಾರಣವಾಗುವ ಮನಸ್ಸಿನ ತೊಳಲಾಟವನ್ನು ಸಶಕ್ತವಾಗಿ ಪ್ರತಿಬಿಂಬಿಸುತ್ತದೆ. ತೆರಣಿಯ ಹುಳುವಿನ ತೆರನಾದ ತನ್ನ ಬದುಕನ್ನು ವಿಮರ್ಶೆಗೆ ಒಳಪಡಿಸುತ್ತಾಳೆ. ಸಾಧನೆಯ ಹಂತಗಳನ್ನು ಏರುವಾಗ ಅನುಭವಿಸಿದ ತಲ್ಲಣಗಳನ್ನು ಮುಚ್ಚುಮರೆಯಿಲ್ಲದೆ ಬಿಚ್ಚಿಡುವ ಅಕ್ಕನ ಅಭಿವ್ಯಕ್ತಿ ಶ್ರೇಷ್ಠ ಕಾವ್ಯಶಕ್ತಿಯನ್ನು ಪಡೆದುಕೊಂಡಿದೆ. ಆಧ್ಯಾತ್ಮಿಕ ಸಾಧನೆ, ಆತ್ಮಾನುಸಂಧಾನಕ್ಕಾಗಿ ಆಂತರಿಕವಾದ ಹಲವು ಸಂಘರ್ಷಗಳನ್ನು ಎದುರಿಸಿ ಸಾಧನೆ, ಸಿದ್ಧಿಗೆ ತೊಡಕಾದ ಮನದ ವಿಷಯಾದಿಗಳ ಬಯಕೆಯನ್ನು ತೊರೆಯಲು ಪ್ರಯತ್ನಿಸುತ್ತ ದೇವರ ಕರುಣೆಯನ್ನು ಬಯಸಿದ ರೀತಿ ಅನನ್ಯವಾಗಿದೆ. ತೆರಣಿಯ ಹುಳು ಕೀಟಸೂತ್ರದ ಪ್ರತಿಮೆಯನ್ನು ವಚನಕಾರರು ತಮ್ಮ ಅನೇಕ ವಚನಗಳಲ್ಲಿ ವಿವಿಧ ಭಾವಾಭಿವ್ಯಕ್ತಿಗೆ ಬಳಸಿದ್ದಾರೆ.

ಅಕ್ಕಮಹಾದೇವಿಯಂತೆ ಬಸವಣ್ಣನವರು ತಮ್ಮನ್ನು ಸ್ವವಿಮರ್ಶೆಗೆ ಒಳಪಡಿಸಿಕೊಂಡು ಇಹಪರ ಬದುಕಿನ ಹಾದಿಯಲ್ಲಿ ಎದುರಿಸಿದ ಹಲವು ಸಂಘರ್ಷ ಸವಾಲುಗಳನ್ನು ವಚನಗಳಲ್ಲಿ ಬಿಚ್ಚಿಟ್ಟಿರುವುದುಂಟು. ತೆರಣಿಯ ಹುಳುವಿನ ಪ್ರತಿಮಾಕೃತಿ ಅವರ ವಚನದಲ್ಲಿ ಸೃಷ್ಟಿಕರ್ತನ

ಲೀಲೆಯನ್ನು ವ್ಯಕ್ತಪಡಿಸಿದೆ. 'ತೆರಣಿಯ ಹುಳು' ಪ್ರತಿಮೆ ಪರಮಾತ್ಮನ ಅವಿರ್ಭಾವವಾದ ಪ್ರಕೃತಿಯ ಅನಂತ ವೈವಿಧ್ಯವನ್ನು, ವಿಸ್ತಾರವನ್ನು, ಅದರ ಹಿಂದಿನ ಸೂತ್ರಧಾರತ್ವ ಶಕ್ತಿಯನ್ನು, ಪ್ರತಿಮೆಯಲ್ಲಿ ಬಸವಣ್ಣನವರು ಪ್ರತ್ಯಕ್ಷೀಕರಿಸಿರುವರು. ವಿಶ್ವದ ಸೃಷ್ಟಿ, ಸ್ಥಿತಿ, ಲಯಗಳನ್ನು ಸೃಷ್ಟಿಕರ್ತನ ಲೀಲೆಯನ್ನು ಕೀಟಸೂತ್ರದ ಪ್ರತಿಮೆಯಲ್ಲಿ ಹಿಡಿದಿಟ್ಟಿರುವರು.

ಕೀಟ

"ಕೀಟಕ ಸೂತ್ರದ ನೂಲ ಗೂಡಮಾಡಿ ಸುತ್ತಿರ್ಪಂತೆ
ಸೂತ್ರಕ್ಕೆ ನೂಲನೆಲ್ಲಿಂದ ತಂದಿತ್ತಯ್ಯಾ?
ರಾಟೆಯಿಲ್ಲ, ಹಂಜಿ ಮುನ್ನವೆ ಇಲ್ಲ. ನೂತವರಾರೊ?
ತನ್ನೊಡಲ ನೂಲ ತೆಗೆದು ಪಸರಿಸಿ, ಅದರೊಳು ಪ್ರೀತಿಯಿಂದೊಲಿದಾಡಿ
ತುದಿಯಲ್ಲಿ ತನ್ನೊಳಗದ ಮಡಗಿಕೊಂಡಿಪ್ಪಂತೆ,
ತನ್ನಿಂದಾದ ಜಗವ ತನ್ನೊಳಗೈದಿಸಿಕೊಳಬಲ್ಲ
ನಮ್ಮ ಕೂಡಲಸಂಗಮದೇವರು."[೭]

ಇವೆರಡೂ ವಚನಗಳಲ್ಲಿ 'ಕೀಟಸೂತ್ರದ' ಪ್ರತಿಮಾಕೃತಿ ವೈವಿಧ್ಯಮಯ ವಿಚಾರ, ಆಲೋಚನೆಗಳನ್ನು ಒಳಗೊಂಡು ಕಾವ್ಯಸೌಂದರ್ಯ, ಧ್ವನಿಶಕ್ತಿಯಿಂದೊಡಗೂಡಿದ ಸಮರ್ಥ ಕಾವ್ಯಕಲೆಯನ್ನು ಅನಾವರಣಗೊಳಿಸಿವೆ. ಭಾವಗೀತೆಯ ಸತ್ವ, ಸೌಂದರ್ಯವನ್ನೊಳಗೊಂಡ ಅಕ್ಕಮಹಾದೇವಿಯ ವಚನಗಳು ಬಿಡಿಬಿಡಿಯಾದ ಮುಕ್ತಕಗಳಂತಿವೆ. ತನ್ನ ಧ್ಯೇಯ ಸಾಧನೆಗಾಗಿ ಸಂಚರಿಸುವ ಸಂದರ್ಭದಲ್ಲಿ ಎದುರಾದ ವಸ್ತುಸ್ಥಿತಿಯನ್ನು ತನ್ನ ಭಾಷೆ ಮತ್ತು ಅನುಭವದ ಹಿನ್ನೆಲೆಯಲ್ಲಿ ಗ್ರಹಿಸಿ ಸುತ್ತಲಿನ ಪ್ರಪಂಚವನ್ನೇ ಪ್ರತಿಮಾಕೃತಿಗಳಾಗಿ ಚಿತ್ರಿಸಿದ್ದಾಳೆ.

ದುಂಬಿ

"ಪಂಚೇಂದ್ರಿಯದ ಉರವಣೆಯ
ಉದುಮದದ ಭರದ ಜವ್ವನದೊಡಲು ವೃಥಾ ಹೋಯಿತ್ತಲ್ಲಾ!
ತುಂಬಿ ಪರಿಮಳವಕೊಂಡು ಲಂಬಿಸುವ ತೆರನಂತೆ
ಇನ್ನೆಂದಿಂಗೆ ಒಳಕೊಂಬೆಯೊ, ಅಯ್ಯಾ ಚೆನ್ನಮಲ್ಲಿಕಾರ್ಜುನಾ?"[೭]

ಪುಷ್ಪದ ಪರಿಮಳವನ್ನು ಆಸ್ವಾದಿಸಿ ಆನಂದಿಸುವ ದುಂಬಿ ಉಪಮೆ ಪ್ರತಿಮೆಯಲ್ಲಿ ಪ್ರಧಾನವೆನಿಸಿದೆ. ದುಂಬಿಯ ರಸಾಸ್ವಾದನೆಯು ಅಕ್ಕನ ಮನಸ್ಸನ್ನು ಆಕರ್ಷಿಸಿದೆ. ಕಾರಣ ದುಂಬಿ ತನಗೆ ಬೇಕಾಗಿರುವುದನ್ನಷ್ಟೇ ಗ್ರಹಿಸಿ ಶ್ರೇಷ್ಠತೆಯನ್ನು ಸಂತೋಷವನ್ನು ಹೊಂದುತ್ತದೆ. ದುಂಬಿಯ ಗುಣ

ವಿಶಿಷ್ಟತೆಯನ್ನು ತನ್ನ ಜೀವನದಲ್ಲಿಯೂ ಅಳವಡಿಸಿಕೊಳ್ಳಲು ಹಾತೊರೆಯುವ ಹಂಬಲಿಸುವ ಕ್ರಿಯಾಶೀಲ ಮನಸ್ಸಿನ ಚಿತ್ರಣವಿಲ್ಲಿದೆ.

ಪ್ರಪಂಚದಲ್ಲಿ ಕೆಲವು ಜೀವಿಗಳು ಏಕೇಂದ್ರಿಯಗಳಾಗಿ ಒಂದೊಂದು ವಿಷಯರಸಕ್ಕೆ ಇಂದ್ರಿಯ ಸುಖದ ವ್ಯಾಮೋಹಕ್ಕೆ ಒಳಗಾಗಿ ತಮ್ಮ ಜೀವವನ್ನು ಕಳೆದುಕೊಳ್ಳುತ್ತವೆ. ಬಂಧನಕ್ಕೆ ಒಳಗಾಗುತ್ತವೆ. ಐದೀಂದ್ರಿಯಗಳನ್ನು ಹೊಂದಿದ ತಾನು ಅವುಗಳ ಉರುವಣೆ ಉಪಟಳವನ್ನು ತಾಳುವುದು ಬಹಳ ಕಷ್ಟವೆಂಬುದನ್ನು ಅರುಹುತ್ತ ಪಂಚೇಂದ್ರಿಯಗಳಾದ ಗಂಧ, ರಸ, ರೂಪ, ಸ್ಪರ್ಶ, ಶಬ್ದಾದಿ ವಿಷಯಗಳ ವ್ಯಾಮೋಹಕ್ಕೊಳಗಾಗಿ ಬಂಧಿತನಾದ ಮನುಷ್ಯ ಯೌವನಾವಸ್ಥೆಯಲ್ಲಿ ಕಾಮ, ಕ್ರೋಧ, ಲೋಭ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳ ಉಪಟಳಕ್ಕೆ ಪಾತ್ರನಾಗಿ ಅಹಂಕಾರದಿಂದ ವ್ಯರ್ಥವಾಗಿ ಶರೀರ ಸಂಪತ್ತನ್ನು ಹಾಳು ಮಾಡಿಕೊಳ್ಳುವನು.

ಪ್ರತಿಮೆಯಲ್ಲಿ ತುಂಬಿದ ಒಡಲು ಕೆಡುವ ಬಗೆಯನ್ನು ನಿರೂಪಿಸುವ ಜೊತೆಯಲ್ಲೇ ಸ್ವಗತ ಧ್ವನಿಯೊಂದು ತುಂಬಿದೆ. ವೃಥಾ ಕೆಡುವ ಒಡಲನ್ನೇ ದೇವನೊಲಿಸುವ ದಾರಿ ಮಾಡಿಕೊಳ್ಳುವ ಬಗೆಯನ್ನು ದುಂಬಿ ಪುಷ್ಪದ ಪರಿಮಳವನ್ನು ಘ್ರಾಣಿಸುವ ತೆರದಂತೆ ಉಪಮೆಯಲ್ಲಿ ಸಮೀಕರಿಸಿ ದೇವನೊಲುಮೆ ಯಾವಾಗ ಉಂಟಾಗುವುದೆಂಬ ಕಳವಳವನ್ನು ಮಹಾದೇವಿಯಕ್ಕ ಅಭಿವ್ಯಕ್ತ ಗೊಳಿಸಿದ್ದಾಳೆ. ಉತ್ಕಟ ದೈವೀಪ್ರೇಮ ಪ್ರತಿಮೆಯಲ್ಲಿ ಅನಾವರಣಗೊಂಡಿದೆ. ಅಕ್ಕಮಹಾದೇವಿಯ ಕಾವ್ಯ ವೈಶಿಷ್ಟ್ಯ 'ದುಂಬಿ' ಉಪಮೆಯಲ್ಲಿ ಅಂತರ್‌ಶಕ್ತಿಯಾಗಿ ಸತಿಪತಿ ಭಾವ ಪ್ರತಿಮಾಕೃತಿಯಲ್ಲಿ ತುಂಬಿನಿಂತಿದೆ.

'ಶರಣಸತಿ ಲಿಂಗಪತಿ' ಸ್ಥಾಯಿ ಭಾವದ ಅಕ್ಕನ ವಚನಗಳಲ್ಲಿ ಲೌಕಿಕದ ಹೆಣ್ಣು ಮಗಳೊಬ್ಬಳು ತನ್ನ ಪ್ರೇಮಿಯನ್ನು ಕೂಡಲು ತವಕಿಸುವ, ತಲ್ಲಣಿಸುವ ವಿರಹದ ಭಾವ ಲಹರಿಗಳು ಪ್ರೇಮದ ಉತ್ಕಟಾವಸ್ಥೆ, ತೀವ್ರಹಂಬಲ ಸತ್ವಯುತವಾಗಿ ಅಭಿವ್ಯಕ್ತಗೊಂಡಿವೆ. ಆದರದು ಭೌತಿಕ ಜಗತ್ತಿನ ಗಂಡು ಹೆಣ್ಣಿನ ನಡುವಿನ ಪ್ರೇಮದಂತಲ್ಲ. ಅಲೌಕಿಕ ಆನಂದದ ಅನುಭೂತಿಗಾಗಿ ಭಕ್ತ ದೇವನಿಗಾಗಿ ಪರಿತಪಿಸುವ, ಪ್ರಾರ್ಥಿಸುವ, ಅಮೂರ್ತ ಸಮರಸ ಭಕ್ತಿಯದು. ಭಕ್ತಿಯ ಪರಾಕಾಷ್ಠೆಯ, ವಿರಹದ ಭಾವ ಕೀಡಿ, ಭ್ರಮರ, ಪಕ್ಷಿ ಪ್ರತಿಮೆಯಲ್ಲಿ ವಿಶಿಷ್ಟವಾಗಿ ಮೂಡಿಬಂದಿದೆ.

ದುಂಬಿ(ಭ್ರಮರ)

"ಕೀಡಿ ತುಂಬಿಯ ಹಂಬಲದಿಂದ ತುಂಬಿಯಾಗಿ
ತನ್ನ ಬಿಡಲುಂಟೆ ಅಯ್ಯಾ?
ಆನು ನಿಮ್ಮ ನೆನೆದು

ಎನ್ನ ಕರತುಂಬಿ, ಎನ್ನ ಮನತುಂಬಿ, ಎನ್ನ ಭಾವ ತುಂಬಿ
ಮತ್ತಿಲ್ಲದೆ ನಿನ್ನ ಕೂಟದ ಸವಿಗಲೆಯನೆಂತು
ಕಾಣುವೆನಯ್ಯಾ ಚೆನ್ನಮಲ್ಲಿಕಾರ್ಜುನಾ?"[೮]

ತಾನೊಲಿದ ಒಲುಮೆಗಾಗಿ ವೇದನೆಗೆ ಒಳಗಾಗಿ ನಿವೇದಿಸಿಕೊಳ್ಳುವ ಪ್ರೇಮದ ಪರಿ ಪ್ರತಿಮೆಗಳಲ್ಲಿ ದೃಷ್ಟಾಂತಗಳಿಂದ ಚಿತ್ರಿಸಲ್ಪಟ್ಟಿದೆ. ವಿರಹದ ತೀವ್ರತೆ, ದೇವರನ್ನು ಕೂಡುವ ಸುಖಕ್ಕಾಗಿ ಕಾಯುವ, ಕಾತರಿಸುವ ಭಾವ ಭ್ರಮರ ದೃಷ್ಟಾಂತದಲ್ಲಿ ಸೂಕ್ತವಾಗಿ ಅಭಿವ್ಯಕ್ತಗೊಂಡಿದೆ. 'ತುಂಬಿ' ಪದವು ಶ್ಲೇಷಾರ್ಥದಲ್ಲಿ ಬಳಕೆಯಾಗಿರುವುದು ವಿಶೇಷ! 'ನಾಮಪದ' ಕ್ರಿಯಾಪದಗಳಾಗಿ 'ತುಂಬಿ' ಶಬ್ಧವು ವಚನದ ಅರ್ಥವಿಸ್ತಾರವನ್ನು ಹೆಚ್ಚಿಸಿದೆ. ಕೀಡಿ ಹಸಿರುಹುಳ ಊರ್ಧ್ವಮುಖವುಳ್ಳದ್ದು, ಭ್ರಮರದ ಬರುವಿಕೆಗಾಗಿ ಸದಾ ಕಾಯುವ, ಭ್ರಮರದ ಸಂಗವನ್ನು ಬಯಸುವ ಬಯಕೆವುಳ್ಳದ್ದು ತುಂಬಿ ಭ್ರಮರದ ಬಯಕೆಯಿಂದ ಕೀಡಿ ಭ್ರಮರವಾಗಿ ಮಾರ್ಪಾಡುವುದು. ಪ್ರಾಕೃತಿಕ ವೈಚಿತ್ರ್ಯ! ಕೀಡಿ ತುಂಬಿ ದೃಷ್ಟಾಂತವನ್ನು ಭಕ್ತ ದೇವನ ಅನುಭಾವಿಕ ಸಂಬಂಧವನ್ನು ನಿರೂಪಿಸಲು ಅಕ್ಕಮಹಾದೇವಿ ಬಳಕೆ ಮಾಡಿರುವಳು.

ಎನ್ನ ಕರತುಂಬಿ, ಎನ್ನ ಮನತುಂಬಿ, ಎನ್ನ ಭಾವತುಂಬಿ ಶಬ್ಧ ಪ್ರಯೋಗ ವಿಶಿಷ್ಟವಾಗಿದ್ದು ಪದಗಳೊಂದಿಗಿನ ಅಕ್ಕನ ಅನುಸಂಧಾನ ಅನುಭಾವ ಸಮೃದ್ಧಿ 'ನಾದದ ಅನುರಣನ' ಪದಾಲಾಲಿತ್ಯ ಧ್ವನಿಪೂರ್ಣವಾಗಿ ವ್ಯಕ್ತವಾಗಿವೆ. ಎನ್ನ ಪದದ ಪುನರುಕ್ತಿ 'ತುಂಬಿ' ಪದದ ಶ್ಲೇಷೆ ಪ್ರತಿಮೆ ಕಲಾಕೃತಿಯಾಗಿ ವ್ಯಕ್ತಗೊಳ್ಳಲು ಪೂರಕವಾಗಿವೆ. ಕರದಲ್ಲಿ ಇಷ್ಟಲಿಂಗವಾಗಿ, ಮನದಲ್ಲಿ ಪ್ರಾಣಲಿಂಗ, ಭಾವದಲ್ಲಿ ಭಾವಲಿಂಗವಾಗಿ ತನು ಮನ ಭಾವಗಳಲ್ಲಿ ಲಿಂಗಭಾವವನ್ನು ಭರಿಸಿಕೊಂಡ ಭಕ್ತೆ ದೇವ ಭ್ರಮರದ ಬಯಕೆಯಲ್ಲಿ ಪರಿಣಾಮಿಸಿ ಸಮರಸ ಹೊಂದಲು ಕಾತುರತೆಯಿಂದ ಕಾಯುವ ಬಯಕೆಯ ತೀವ್ರತೆ ಈ ವಚನ ಪ್ರತಿಮೆಯಲ್ಲಿ ಕಲಾತ್ಮಕವಾಗಿ ವ್ಯಕ್ತವಾಗಿದೆ.

ಪ್ರಾಣಿ ಪ್ರತಿಮೆಗಳು

ತನ್ನ ಭಾವ ನಿವೇದನೆಗೆ, ಮಾನವರ ಗುಣ ಸ್ವಭಾವಗಳನ್ನು ನಿರೂಪಿಸಲು, ಪ್ರಾಣಿ ಪ್ರತಿಮೆಗಳನ್ನು ಬಳಸಿ ಅರ್ಥಪೂರ್ಣವಾದ ನಿಲುವನ್ನು ಪ್ರಕಟಿಸುತ್ತಾಳೆ. ಅಜ್ಞಾನ, ಅಹಂಕಾರದ ಮನಸ್ಥಿತಿಯನ್ನು ಚಿತ್ರಿಸಲು ಎಮ್ಮೆ ಪ್ರತಿಮೆಯ ಮೂಲಕ ಬಣ್ಣಿಸಿದ ವಚನ ವಾಸ್ತವ ಪ್ರಪಂಚದ ನೈಜರೂಪವನ್ನು ಕಣ್ಮುಂದೆ ತಂದು ನಿಲ್ಲಿಸುತ್ತದೆ.

ಎಮ್ಮೆ

"ಎಮ್ಮೆಗೊಂದು ಚಿಂತೆ; ಸಮಗಾರಗೊಂದು ಚಿಂತೆ.
ಧರ್ಮಿಗೊಂದು ಚಿಂತೆ; ಕರ್ಮಿಗೊಂದು ಚಿಂತೆ.

ಎನಗೆ ಎನ್ನ ಚಿಂತೆ, ತನಗೆ ತನ್ನ ಕಾಮದ ಚಿಂತೆ.
ಒಲ್ಲೆಹೋಗು, ಸೆರಗ ಬಿಡು ಮರುಳೆ.
ಎನಗೆ ಚೆನ್ನಮಲ್ಲಿಕಾರ್ಜುನದೇವರು
ಒಲಿವರೊ ಒಲಿಯರೊ ಎಂಬ ಚಿಂತೆ!"

ಅಕ್ಕನ ಜೀವನದಲ್ಲಿ ಎದುರಾದ ವೈವಾಹಿಕ ಘಟನೆಯನ್ನು ಎಮ್ಮೆ, ಸಮಗಾರ, ಧರ್ಮಿ, ಕರ್ಮಿ ಪ್ರತಿಮಾಕೃತಿಯಲ್ಲಿ ಹಿಡಿದಿಟ್ಟು ಸಾಂಪ್ರದಾಯಿಕ ಮದುವೆ, ಅಸಮಾನ ದಾಂಪತ್ಯವನ್ನು ವಿರೋಧಿಸಿದ ಪ್ರತಿಭಟನೆಯ ಧ್ವನಿ ಇಲ್ಲಿ ವ್ಯಕ್ತಗೊಂಡಿದೆ. 'ಎಮ್ಮೆ' ಅಜ್ಞಾನ ಅಹಂತೆಯ ಸಂಕೇತವಾಗಿ 'ಸಮಗಾರ' ವ್ಯಾಮೋಹದ ಪ್ರತೀಕವಾಗಿರುವನು. ಅಕ್ಕಮಹಾದೇವಿ ಈ ವಚನ ಪ್ರತಿಮೆಯಲ್ಲಿ ಚಿಂತೆಗಳ ಕಂತೆಯನ್ನು ಸವಿವರವಾಗಿ ಪ್ರಕಟಿಸುತ್ತ,, ಲೋಕದ ಭೌತಿಕ ಚಿಂತೆಗಳ ಜಾಡ್ಯದಿಂದ ದೂರವಾಗಿ ಆಧ್ಯಾತ್ಮಿಕ ಆನಂದದ ಅನುಭೂತಿಯನ್ನು ಹೊಂದುವ ಅಭಿಲಾಷೆಯನ್ನು ಹೊಂದಿರುವಳು. ಅವಳ ಆಶಯಕ್ಕೆ ಅರಸ ಅಡ್ಡಿಯಾದಾಗ ಆತನು ಮತ್ತು ಆತನ ಅರಸೊತ್ತಿಗೆಯ ವ್ಯಾಮೋಹವನ್ನು ಧಿಕ್ಕರಿಸಿ ಅಲೌಕಿಕ ಪಥದ ಸಾಧನೆಗಾಗಿ ಹಂಬಲಿಸಿದ ಚಿತ್ರಣ ಪ್ರತಿಮೆಯಾಗಿ ಅನಾವರಣಗೊಂಡಿದೆ.

ಪ್ರಪಂಚದ ಪ್ರತಿಯೊಂದು ಜೀವಿಗೂ ಹೊಟ್ಟೆ ಹೊರೆಯುವುದೇ ಚಿಂತೆ. ಎಮ್ಮೆಗೆ ಹೊಟ್ಟೆ ತುಂಬಿಸಿಕೊಳ್ಳುವ ಚಿಂತೆಯಾದರೆ, ಬಲಿಷ್ಠವಾದ ಎಮ್ಮೆ ಯಾವಾಗ ಸತ್ತೀತು! ಅದರ ಚರ್ಮವನ್ನು ಹದಗೊಳಿಸಿ ಚಮ್ಮಾವುಗೆ ಮಾಡಿ ಮಾರುವ ಚಿಂತೆ ಸಮಗಾರನದು. ಧರ್ಮವಂತನಿಗೆ ಪರೋಪಕಾರದ ಬಯಕೆ. ದೀನ ದುಃಖಿತರ ಕಷ್ಟಗಳನ್ನು ಕಳೆಯುವ ದಯಾಪರತೆ ಒಂದೆಡೆಯಾದರೆ, ದುಷ್ಟ ಕಾರ್ಯಗಳಿಗೆ ಹವಣಿಸುವ ದುರ್ಜನರ ಚಿಂತೆಯ ಪರಿಯೇ ಬೇರೆ! ಅಕ್ಕನ ದೇಹಸಿರಿಗೆ ದಾಹಗೊಂಡ ಕಾಮುಕನ ಚಿಂತೆಯ ಲೌಕಿಕ ವ್ಯಾಮೋಹವೇ ಬೇರೆ! ಆಧ್ಯಾತ್ಮಿಕ ಆನಂದಾತಿಶಯಕಕ್ಕೆ ಅಣಿಯಾಗುತ್ತಿರುವ ಅಕ್ಕನ ಮೋಹವೇ ವಿಭಿನ್ನ. ಚಿಂತೆಗಳ ವೈರುಧ್ಯವನ್ನು 'ಎಮ್ಮೆ' ಪ್ರತಿಮಾಕೃತಿಯ ಮೂಲಕ ಸ್ಪಷ್ಟಪಡಿಸುವ ಮಹಾದೇವಿಯಕ್ಕನ ಮನೋಭಿಲಾಷೆ ಅರ್ಥಪೂರ್ಣ, ವಿಶಿಷ್ಟ ಧ್ವನಿಶಕ್ತಿ ಪಡೆದು ಅರ್ಥ ವಿಸ್ತಾರ ಮತ್ತು ಭಾವತೀವ್ರತೆಯನ್ನು ಹೊಳೆಯಿಸುತ್ತದೆ. ಲೌಕಿಕ ಸಂಪ್ರದಾಯಗಳ ಕಟ್ಟಳೆಗಳನ್ನು ಮೀರಿ ನಿಲ್ಲುವ ಮನೋಸ್ಥೈರ್ಯ ಇಲ್ಲಿ ಸಶಕ್ತವಾಗಿ ಮೂಡಿ ಬಂದಿರುವುದೇ ವಿಶೇಷ. ವಿವಾಹ ಪಾತಿವ್ರತ್ಯ ದಾಂಪತ್ಯ, ಪತಿ ದೇವರೆಂಬ ಸಂಪ್ರದಾಯ ಸಮಾಜದ ನಿರ್ಬಂಧನೆಗಳನ್ನೆಲ್ಲ ಮೆಟ್ಟಿನಿಂತು ತನ್ನ ಗುರಿ ಸಾಧನೆಗಾಗಿ ಅರಸೊತ್ತಿಗೆಯನ್ನು ಧಿಕ್ಕರಿಸಿದ ಧೀಮಂತ ಶಕ್ತಿಯ ಚಿತ್ರಣ ಒಂದಡೆಯಾದರೆ, ನಿರಾಕಾರ ನಿರ್ಮೋಹಿಯಾದ ದೇವನನ್ನು ಕೂಡುವ ತೀವ್ರ ಹಂಬಲ ಮತ್ತೊಂದೆಡೆ! ವ್ಯವಸ್ಥೆಯ ಪಲ್ಲಟಕ್ಕಾಗಿ ಹಾತೊರೆಯುವ ವಿಭಿನ್ನ ಧೋರಣೆಯೇ ಪ್ರಧಾನವಾಗಿ ಕಂಡುಬರುತ್ತದೆ.

ಅಕ್ಕಮಹಾದೇವಿ ಪಾರಮಾರ್ಥಿಕ ಪುರುಷಾರ್ಥವನ್ನು ಬಯಸಿ ಮುನ್ನಡೆದವಳಾದರೂ ವಾಸ್ತವ ಪ್ರಪಂಚವನ್ನು ತನ್ನ ವಚನಗಳಲ್ಲಿ ಚಿತ್ರಿಸಿ ಭೌತಿಕ ಜಗತ್ತಿನ ಬಾಹ್ಯ ಸಂಗತಿಗಳನ್ನು ಸಂಶೋಧನಾ ಭಾವದಿಂದ ಗುರುತಿಸಿ ಜೀವಿಗಳ ಆಹಾರ ಸರಪಳಿ ವ್ಯವಸ್ಥೆಯನ್ನು ಆಧ್ಯಾತ್ಮಿಕ ಅನುಭಾವಕ್ಕೆ ಸಮೀಕರಿಸಿ ಸರ್ಪ ಕಪ್ಪೆಯ ಪ್ರತಿಮೆಯಲ್ಲಿ ನಿರೂಪಿಸಿದ ರೀತಿ ಬೆರಗುಗೊಳಿಸುವಂತಹದು.

ಸರ್ಪ(ಹಾವು)

"ಸರ್ಪನ ಬಾಯ ಕಪ್ಪೆ ನೊಣಕ್ಕೆ ಹಾರುವಂತೆ
ಅಪ್ಯಾಯನ ಬಿಡದು.
ಕಾಯವರ್ಪಿತವೆಂಬ ಹುಸಿಯ ನೋಡಾ.
ನಾನು ಭಕ್ತಳೆಂಬ ನಾಚಿಕೆಯ ನೋಡಾ.
ನಾನು ಯುಕ್ತಳೆಂಬ ಹೇಸಿಕೆಯ ನೋಡಾ.
ಓಗರವಿನ್ನಾಗದು, ಪ್ರಸಾದ ಮುನ್ನಿಲ್ಲ;
ಚೆನ್ನಮಲ್ಲಿಕಾರ್ಜುನಯ್ಯ ಉಪಚಾರದರ್ಪಿತವನವಗಡಿಸಿಕಳೆವ."[೧೦]

ಅಕ್ಕಮಹಾದೇವಿ ಸಂಸಾರ, ಭವಬಂಧನವನ್ನು ಸರ್ಪಕ್ಕೆ ಹೋಲಿಸಿದ್ದಾಳೆ. ಕಪ್ಪೆ ಜೀವಾತ್ಮ, ಸರ್ಪ–ಸಂಸಾರ. ಅವೆರಡರ ಸಂಬಂಧದ ದೃಶ್ಯ ಚಿತ್ರವೊಂದನ್ನು ಕಲಾತ್ಮಕವಾಗಿ ಕಟ್ಟಿಕೊಡುವ ರೀತಿಯೇ ವಿಶಿಷ್ಟವಾಗಿದೆ. ಸರ್ಪವೊಡ್ಡಿದ ಮೃತ್ಯು ಭೀಕರತೆಯ ನೆರಳಲ್ಲಿದ್ದರೂ ವಿಷಯಾದಿಗಳಿಗೆಳಸುವ ಜೀವಿಯ ಅಲ್ಪತನವನ್ನು ಅಜ್ಞಾನ ಅಂಧಕಾರವನ್ನು 'ಸರ್ಪನಬಾಯ' ಕಪ್ಪೆ ನೊಣಕ್ಕೆ ಹಾರುವ ಪ್ರತಿಮೆಯಲ್ಲಿ ಚಿತ್ರಿಸಲಾಗಿದೆ. ಹಾವಿನ ಬಾಯಿಗೆ ಆಹಾರವಾಗಿ ಆಹುತಿಯಾದ ಕಪ್ಪೆ ತಾನು ಸಾಯುವ ಅಂಚಿನಲ್ಲಿದ್ದರೂ ಅದರ ಪರಿವಿಲ್ಲದೆ ಮತ್ತೊಂದಕ್ಕೆಳಸುವುದು. ಹಾವು ಕಪ್ಪೆಯನ್ನು ನುಂಗುತ್ತಲಿದೆ ಕಪ್ಪೆಯು ಹಾವಿನ ಬಾಯಲ್ಲಿ ಆಹಾರವಾಗಿ ಹೋಗುತ್ತಿರುವಾಗಲೇ ಅದು ನೊಣವನ್ನು ತಿನ್ನಲು ಹಾತೊರೆಯುತ್ತಿದೆ. ಹಾವಿಗೆ ಕಪ್ಪೆ ಆಹಾರ ಮತ್ತು ಹಿತಕರ. ಅದರಂತೆಯೆ ಹಾವಿಗೆ ಆಹುತ್ತಿಯಾಗುತ್ತಿರುವ ಕಪ್ಪೆಯ ಎದುರಲ್ಲಿ ಹಾರಾಡುತ್ತಿರುವ ನೊಣವನ್ನು ತಿನ್ನಬೇಕೆಂಬ ಬಯಕೆ. ಕಪ್ಪೆಗೆ ನೊಣ ಅಪ್ಯಾಯಮಾನವಾಗಿ ಕಾಣುತ್ತಿದೆ. ಅಕ್ಕಮಹಾದೇವಿಯು ಈ ಪ್ರತಿಮೆಯಲ್ಲಿ ಒಂದು ಗತಿಶೀಲ ಜೀವಂತ ದೃಶ್ಯವೊಂದನ್ನು ವಿಸ್ಮಯಗೊಳ್ಳುವಂತೆ ಚಿತ್ರಿಸಿದ್ದಾಳೆ.

'ಸರ್ಪನ ಬಾಯ ಕಪ್ಪೆ ನೊಣಕ್ಕೆ ಹಾರುವ' ಪ್ರತಿಮೆ ಸಂಸಾರದಲ್ಲಿ ಸಿಲುಕಿರುವ ಜೀವಾತ್ಮನ ಪರಿಯನ್ನು ಬಣ್ಣಿಸಲು ಬಳಸಿದ್ದಾಳೆ. ಶರೀರ ಮನ, ಬುದ್ಧಿ, ಅಹಂಕಾರಗಳಿಂದ ತುಂಬಿರುವಾಗ ದೇವನಿಗೆ ಸಮರ್ಪಿತವಾಗದು. ವಿಷಯಾದಿಗಳಿಂದ ತುಂಬಿದ ಕಾಯವನ್ನು ಭಗವಂತನಿಗೆ ಅರ್ಪಿಸಿದ್ದೇನೆಂದು ಹೇಳುವುದು ಅಸತ್ಯ. ಭಕ್ತ, ಯುಕ್ತನೆಂದು ಹೇಳುತ್ತ ಬಾಹ್ಯಾಡಂಬರ ತೋರುವುದು

ನಾಚಿಕೆ ಮತ್ತು ಹೇಸಿಕೆಯ ವಿಷಯ. ಹುಟ್ಟುಸಾವು ಭವ ಬಂಧನವೆಂಬ ಸರ್ಪನ ಬಾಯಲ್ಲಿ ಸಿಕ್ಕಿರುವ ಜೀವಾತ್ಮನೆಂಬ ಕಪ್ಪೆ ವಿಷಯಾದಿಗಳೆಂಬ ನೊಣಕ್ಕೆ ಎಳಸುತ್ತ ಇರುವುದು. ತಾನು ಭವಚಕ್ರದಲ್ಲಿ ಸಿಲುಕಿರುವೆನೆಂಬ ಪರಿವಿಲ್ಲದೆ, ಭಯವಿಲ್ಲದೇ ಮನ ಬುದ್ಧಿ ಅಹಂಕಾರಗಳೆಂಬ ವಿಷಯಗಳಿಗೆ ಆಸೆದೋರುತ್ತ ಅದುವೆ ಹಿತವೆಂದು ಭಾವಿಸಿರುವುದು. ವಿಷಯಾದಿಗಳಿಂದೊಡ ಗೂಡಿದ ಶರೀರ ಶಿವನಿಗೆ ಸಮರ್ಪಣೆಯಾಗದೆ ಕೇವಲ ತೋರಿಕೆಯ ಭಕ್ತಿಯೆನಿಸುವುದು. ವಿಷಯಾಸಕ್ತಿಗಳಿಂದ ಕೂಡಿದವನು ಭಕ್ತನಾಗಲಾರನು. ಶಿವನ ಸನ್ನಿಧಿಗೆ ಯೋಗ್ಯನಾಗಲಾರನು.

ನಮ್ಮ ಸದ್ಭಾವದ ನಡೆ ನುಡಿಗಳಿಂದ ದೇವ ಸಾನಿಧ್ಯ ಹೊಂದಲು ಸಾಧ್ಯ. ಸದ್ಭಾವ, ಸದ್ಭಕ್ತಿ, ಸತ್ಕ್ರಿಯೆಗಳೇ ಶಿವನಿಗೆ ಓಗರ, ಪ್ರಸಾದ! ಕೇವಲ ಬಾಯಿಮಾತಿನ ಉಪಚಾರದ ಭಕ್ತಿಯಿಂದ ಶಿವನೊಲುಮೆ ಸಾಧ್ಯವಾಗದು. ಅಕ್ಕಮಹಾದೇವಿಯು ಬಾಹ್ಯಾಡಂಬರದ ಭಕ್ತಿಯ ಬೂಟಾಟಿಕೆಯ ಅಸತ್ಯವನ್ನು ಈ ಪ್ರತಿಮಾಕೃತಿಯ ಮೂಲಕ ಬಿಚ್ಚಿಟ್ಟು ನಿಜ ಭಕ್ತಿಯೆ ದೇವನೊಲಿಸುವ ದಾರಿ ಎಂಬುದನ್ನು ಅಪರೋಕ್ಷವಾಗಿ ಪ್ರತಿಬಿಂಬಿಸಿದ್ದಾಳೆ.

ವಚನಕಾರರಲ್ಲಿ 'ಸರ್ಪ' ಪ್ರತಿಮೆ ಹಲವಾರು ವಚನಗಳಲ್ಲಿ ವಿವಿಧ ಭಾವಗಳನ್ನು ಅಭಿವ್ಯಕ್ತಗೊಳಿಸಲು ಬಳಸಲ್ಪಟ್ಟಿದೆ. ಆಧ್ಯಾತ್ಮಿಕ ಪಥಿಕನಾದ ಸಾಧಕನಿಗೆ ಸಂಸಾರವೆಂಬ ಸರ್ಪ ಅಪಾಯಕಾರಿ ಅನುಭವ ನೀಡಿ ಮೃತ್ಯು ಭೀಕರತೆಯ ಭಯವನ್ನುಂಟು ಮಾಡುತ್ತದೆ. ಅದೇ ಸಾಧಕ ಸತತ ಸಾಧನೆಯಿಂದ ಸಂಸಾರದಲ್ಲಿದ್ದುಕೊಂಡೇ ಸಾಧನೆಯ ಶಿಖರವನ್ನೇರಿದಾಗ ಸಂಸಾರ ಸರ್ಪದ ಸಂಗವೂ ಸಹ್ಯವಾಗುವುದು. ಸರ್ಪದ ವಿಷದ ಹಲ್ಲು ಕಳೆದಾಗ ಅದರ ಸಹವಾಸ ಸಹ್ಯವಾಗುವುದು ಎಂಬ ಪರಿಕಲ್ಪನೆಯನ್ನು ಅಕ್ಕಮಹಾದೇವಿ ಅಪೂರ್ವವಾದ ಪ್ರತಿಮೆಯ ಮೂಲಕ ಪ್ರಕಟಿಸಿದ್ದಾಳೆ.

ಹಾವು(ಸರ್ಪ)

"ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲಡೆ
ಹಾವಿನ ಸಂಗವೆ ಲೇಸು ಕಂಡಯ್ಯಾ
ಕಾಯದ ಸಂಗವ ವಿವರಿಸಬಲ್ಲಡೆ
ಕಾಯದ ಸಂಗವೆ ಲೇಸು ಕಂಡಯ್ಯಾ.
ತಾಯಿ ರಕ್ಕಸಿಯಾದಂತೆ ಕಾಯವಿಕಾರವು.
ಚೆನ್ನಮಲ್ಲಿಕಾರ್ಜುನಯ್ಯಾ,
ನೀನೊಲಿದವರು ಕಾಯಗೊಂಡಿದ್ದರೆನಬೇಡ."[೧೧]

ಅಕ್ಕಮಹಾದೇವಿಯ ಈ ವಚನದಲ್ಲಿ ಸಂಸಾರದ ಬಗೆಗಿನ ಅನುಭಾವದ ನಿಲುವು ಬೆಡಗಿನ ರೂಪದಲ್ಲಿ ಅಪೂರ್ವ ಪ್ರತಿಮೆಯಾಗಿ ನಿಂತಿದೆ. ಅಕ್ಕ ಹೇಳುವ 'ಹಾವು' ಎಂದರೆ ಸಂಸಾರ, 'ಕಾಯ' ಅದು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳ ವಿಷದ ಹಲ್ಲುಗಳನ್ನು ಹೊಂದಿದೆ. ಅದರ ಒಡನಾಟ ಅನಿವಾರ್ಯವೂ ಆಗಿರುವುದರಿಂದ ಅದಕ್ಕಂಜಿ ಓಡಿದರೆ ಬಿಡಲಾರದೆ ಬೆನ್ನಟ್ಟುವುದು. ಅದರೊಂದಿಗಿನ ಸ್ನೇಹದಿಂದಲೆ ಅದರ ಭಾದೆಯನ್ನು ಪರಿಹರಿಸಿಕೊಳ್ಳುವುದೊಂದೆ ಪರಿಹಾರ. ಅರಿಷಡ್ವರ್ಗಗಳೆಂಬ ವಿಷದ ಹಲ್ಲುಗಳನ್ನು ಕಿತ್ತು ತೆಗೆದು ಅದರೊಂದಿಗೆ ಸಖ್ಯವನ್ನು ಬೆಳೆಸುವುದು. ವಿಷದ ಹಲ್ಲುಗಳನ್ನು ಕಿತ್ತಾಗ ಹಾವಿನ ಭಯವಿಲ್ಲ. ಅದನ್ನು ಬೇಕಾದಂತೆ ಆಡಿಸಿದರೂ ಅಪಾಯವಿಲ್ಲ.

ಹಾವಿನ ಹಲ್ಲು ಕಳೆದಾಗ ಅದರ ಸಂಗವೂ ಸಹ್ಯವಾಗುವುದು. ಅದರ ಭಾದೆಯಿಂದ ಪಾರಾಗಬೇಕೆಂದರೆ ಹಾಗೆಯೇ ಅಸಾಧ್ಯ! ಅರಿತು ಸಂಗ ಮಾಡಿದರೆ ಅನುಕೂಲ. ಕಾಯವೆಂಬ ಹಾವಿನ ಅರಿಷಡ್ವರ್ಗಗಳೆಂಬ ವಿಷದ ಹಲ್ಲುಗಳನ್ನು ಕಳೆದು ಸಾಧನೆಗೆ ಸೋಪಾನ ಮಾಡಿಕೊಳ್ಳುವ ಪರಿಯನ್ನು ವಿವರಿಸಿದ್ದಾಳೆ. ಸರ್ಪವನ್ನು ಆಡಿಸುವ ರಹಸ್ಯವನ್ನು ತಿಳಿದರೆ ಅದರ ಸ್ನೇಹ ಸಲುಗೆ ಸಹ್ಯಕರ! ಅದರಂತೆ ಕಾಯದ ಕಳವಳವನ್ನು ಕಳೆದುಕೊಂಡರೆ ಕಾಯ ಪ್ರಸಾದ ಕಾಯವಾಗುವುದು. ಮನದ ಚಂಚಲತೆ, ಬುದ್ಧಿಯ ಅಹಂಕಾರ ಅಳಿದ ಶರೀರ ಪ್ರಸಾದ ಕಾಯವಾಗಿ ಪರಿವರ್ತನೆ ಹೊಂದುವುದು. ಲಿಂಗಾಂಗ ಸಾಮರಸ್ಯದ ಆನಂದ ಲಭಿಸುವುದು. ಬದಲಾಗಿ ಕಾಯದಲ್ಲಿ ಕಾಮವಿಕಾರ ಉಂಟಾದರೆ ಹೆತ್ತ ತಾಯಿ ರಕ್ಕಸಿಯಾಗಿ ತನ್ನ ಮಕ್ಕಳನ್ನೇ ನುಂಗಿ ಹಾಕುವಂತೆ ದೇಹವು ಇಂದ್ರಿಯ ವಿಕಾರಗಳಿಂದ ಪೀಡಿತಗೊಳ್ಳುವುದು. ವಿಕಾರಗಳಲ್ಲಿ ಸಿಕ್ಕು ಬಳಲುವ ಶರೀರ ಸಾಧನೆಗೆ ಅಡ್ಡಿಯಾಗುವುದು. ಅಕ್ಕಮಹಾದೇವಿ ತನ್ನ ಆರಾಧ್ಯದೇವ ಚೆನ್ನಮಲ್ಲಿಕಾರ್ಜುನನಲ್ಲಿ ನಿವೇದಿಸಿಕೊಳ್ಳುವಳು. ನಿನ್ನೊಲುಮೆಯಾದವರು ಅಂದರೆ ಅಂಗಭಾವವಳಿದು ಲಿಂಗಭಾವ ಅಳವಟ್ಟ ಲಿಂಗಸ್ವರೂಪಿಗಳಾದವರು ಕಾಯಗೊಂಡಿದ್ದರೂ ಅರಿಷಡ್ವರ್ಗಗಳ ಭಾದೆಯಿಂದ ಪಾರಾಗಿ ಕಾಯವನ್ನೇ ಶಿವನೊಲಿಸುವ ಸಾಧನವಾಗಿ ಮಾಡಿಕೊಂಡ ಅನುಭಾವಿಗಳು ಜನನ ಮರಣವನ್ನು ಗೆಲಿದ ಮಹಾಂತರು. ಭೌತಿಕ ಪ್ರಪಂಚದಲ್ಲಿ ಎಲ್ಲರೊಂದಿಗೆ ಎಲ್ಲರಂತಿದ್ದೂ ಅನುಭಾವದ ಔನತ್ಯವನ್ನು ಮುಟ್ಟಿದವರು.

ಸಂಸಾರವನ್ನು ವಿಭಿನ್ನ ದೃಷ್ಟಿಯಿಂದ ನೋಡಿದ ವಚನಕಾರರು 'ಮರ್ತ್ಯವನ್ನೇ ಕರ್ತಾರನ ಕಮ್ಮಟ' ವೆಂದು ಭಾವಿಸಿ ಸಂಸಾರ ಹೇಯ, ಮಾಯೆ, ಅಜ್ಞಾನವೆಂಬ ಪೂರ್ವಾಗ್ರಹ ಪೀಡಿತ ವಿಚಾರಗಳನ್ನು ಅಲ್ಲಗಳೆದು ಸಂಸಾರ ತ್ಯಾಜ್ಯವೆಂದು ಅನಿತ್ಯವೆಂದು ಅಂಜಿ ಓಡದೇ ಮುಕ್ತಿ ಪಥದ ಸೋಪಾನ ಮಾಡಿಕೊಂಡವರು. ವಚನಕಾರರ ಉದಾತ್ತೀಕರಣದ ಧ್ಯೇಯ

ಅಕ್ಕಮಹಾದೇವಿಯ ವಚನದಲ್ಲಿ ಅನುಭಾವವಾಗಿ ಅನನ್ಯ ಪ್ರತಿಮಾಕೃತಿಯಾಗಿ ನಿರ್ಮಾಣಗೊಂಡು ಸಹಜ ಸೌಂದರ್ಯವನ್ನೊಳಗೊಂಡಿದೆ. ವಿಷದ ಹಲ್ಲು ಕಳೆದ ಹಾವು ಉದಾತ್ತೀಕರಿಸಿಕೊಂಡ ಪ್ರಸಾದ ಕಾಯದ ಸಂಕೇತವಾಗಿ ಮೂಡಿಬಂದಿದೆ.

ಅಕ್ಕಮಹಾದೇವಿ ತನ್ನ ಬದುಕಿನ ವಿವಿಧ ಮಜಲುಗಳನ್ನು ಒಳತುಡಿತಗಳನ್ನು ಅನುಭವಿಸಿದ ಕಳವಳಗಳನ್ನು ಲೋಕ ದೃಷ್ಟಾಂತಗಳ ಮುಖೇನ ಚಿತ್ರಿಸುವಳು. ಕಾಯ ಮನ ಭಾವಗಳ ನಡುವೆ ಉಂಟಾಗುವ ವೈರುಧ್ಯಗಳನ್ನು ಸಶಕ್ತವಾಗಿ ಅದ್ಭುತವಾಗಿ 'ಸರ್ಪ' ಪ್ರತಿಮೆಯಲ್ಲಿ ಅಭಿವ್ಯಕ್ತಗೊಳಿಸಿರುವಳು.

ಸರ್ಪ

"ಕೊಳಲ ದನಿಗೆ ಸರ್ಪ ತಲೆದೂಗಿದಡೇನು
ಒಳಗಣ ವಿಷದ ಬಯಕೆ ಬಿಡದನ್ನಕ್ಕ?
ಹಾಡಿದಡೇನು, ಕೇಳಿದಡೇನು
ತನ್ನಲುಳ್ಳ ಅವಗುಣ ಬಿಡದನ್ನಕ್ಕ?
ಒಳಗನರಿದು ಹೊರಗೆ ಮರೆದವರ
ನೀ ಎನಗೆ ತೋರಯ್ಯಾ ಚೆನ್ನಮಲ್ಲಿಕಾರ್ಜುನಾ"[೧೨]

ಕೊಳಲದನಿಗೆ ಸರ್ಪ ತಲೆದೂಗುವ ದೃಷ್ಟಾಂತದಲ್ಲಿ ಲೋಕವ್ಯವಹಾರದ ದೈನಂದಿನ ಬದುಕಿನ ಸಂಕಥನವನ್ನು ಕಟ್ಟಿಕೊಡುವ ಮಹಾದೇವಿಯಕ್ಕ ಪ್ರಾಣಿ ಪ್ರತಿಮೆ ಮೂಲಕ ಮನುಷ್ಯನಲ್ಲಿಯ ಪಶುತ್ವ, ಅಂತರಂಗ ಶುದ್ಧಿಯಲ್ಲದ ಬಹಿರಂಗದ ಆಡಂಬರದ ಭಕ್ತಿಯನ್ನು ವಿಡಂಬಿಸಲು 'ಸರ್ಪ' ಪ್ರತಿಮೆಯನ್ನು ಬಳಸಿದ್ದಾಳೆ. ಸ್ವಗತ ಧ್ವನಿಯಾಗಿ ಹೊರಹೊಮ್ಮಿದ ಈ ವಚನದಲ್ಲಿ ಪಾರಮಾರ್ಥಿಕ ಸಾಧನೆಗಾಗಿ ಬಹಿರಂಗದ ಮಾನವ ಜಗತ್ತಿನಲ್ಲಿ ನಿಂತುಕೊಂಡು ತಾನು ನಡೆಸಿದ ಅಂತರಂಗ ಬಹಿರಂಗದ ನಡುವಿನ ವೈರುಧ್ಯ, ತಲ್ಲಣಗಳನ್ನು ಬಿಚ್ಚಿಟ್ಟಿದ್ದಾಳೆ. ಇದು ಕೇವಲ ಅವಳ ಸಂಘರ್ಷವಲ್ಲದೆ ಪ್ರಾಪಂಚಿಕರ ಜೀವನ ವೈರುಧ್ಯದ ಚಿತ್ರಣವನ್ನು ಒಳಗೊಂಡಿದೆ.

ದಿನನಿತ್ಯದ ಹೊಟ್ಟೆಪಾಡಿಗಾಗಿ ಹಾವನ್ನು ಆಡಿಸುವ ಹಾವಾಡಿಗನ ಚಿತ್ರಣ, ಗ್ರಾಮೀಣ ಬದುಕಿನಲ್ಲಿ ಸಂತೆ ಕೂಟಗಳಲ್ಲಿ ತನ್ನ ಕೊಳಲದನಿಗೆ ಹಾವು ಹೆಡೆಯೆತ್ತಿ ಕುಣಿಯುವಂತೆ ಮಾಡಿ ಜನರಿಂದ ಹಣ ಪಡೆದು ಹೊಟ್ಟೆ ಹೊರೆಯುವ ಸಂಗತಿಯನ್ನು ನಿರೀಕ್ಷಿಸಿದ ಅಕ್ಕ ಲೋಕ ವ್ಯವಹಾರದ ಚಿತ್ರಣವನ್ನು ವಚನದಲ್ಲಿ ಹಿಡಿದಿಟ್ಟು ತನ್ಮೂಲಕ ವಿಶೇಷವಾದ ಅನುಭಾವವನ್ನು ನಿರೂಪಿಸಿದ್ದಾಳೆ. ಕೊಳಲ ದನಿಗೆ ಹಾವು ಹೆಡೆ ಬಿಚ್ಚಿ ಆಡುತ್ತದೆಯಾದರೂ, ತನ್ನ ಮೂಲ ಒಳಗಿನ ವಿಷದ

ಗುಣವನ್ನು ಬಿಡಲಾರದು. ಕೊಳಲದನಿಗೆ ತಲೆದೂಗುವ ಹಾವಿನ ನೋಟ ಅಂದವೆನಿಸುವುದು ಮನರಂಜನೆಯನ್ನೀಯುವುದು. ಆದರೆ ಅದರ ಅಂತರಂಗದ ವಿಷದ ಸ್ವಭಾವ ಅಳಿಯದು. ತೋರಿಕೆಯ ರಂಜನೆ ಅಂತರಂಗದಲ್ಲಿರುವ ವಿಷಯವಾಸನೆ, ಅವಗುಣಗಳು ವೈರುಧ್ಯ ನೆಲೆಯುಳ್ಳವುಗಳು.

ಸರ್ಪದ ತೋರಿಕೆಯ ಸ್ವಭಾವವೇ ಬೇರೆ ಅಂತರಂಗದಲ್ಲಿರುವ ವಿಷವೇ ವಿಭಿನ್ನ! ಹೊರನೋಟಕ್ಕೆ ಕಾಣಲಾರದು. ಅದರಂತೆಯೇ ಪ್ರಾಪಂಚಿಕ ಜಗತ್ತಿನ ಜನರ ನಡವಳಿಕೆಯಲ್ಲಿನ ವ್ಯಸ್ತತೆಯನ್ನು ಗಮನಿಸಿ ಅವರೊಂದಿಗೆ ತನ್ನ ಅಂತರಂಗವನ್ನು ಅವಿಷ್ಕಾರ ಮಾಡಿಕೊಂಡಿದ್ದಾಳೆ. ವ್ಯಕ್ತಿ ತನ್ನ ಗಾಯನದಿಂದ ಸಂಗೀತದಿಂದ ಜನಮನವನ್ನು ಆಕರ್ಷಿಸಬಹುದು. ಅಂತಹ ಸಂಗೀತ ರಸವನ್ನು ಕಂಡು ಜನ ತಲೆದೂಗಬಹುದು. ಆದರೆ ಅಂತರಂಗದಲ್ಲಿರುವ ವಿಷಯಾದಿ ಬಯಕೆಗಳು ಅಲ್ಲಿಯೇ ನೆಲೆಯೂರಿರುತ್ತವೆ. ತೋರಿಕೆಯ ಭಕ್ತಿ ಆಡಂಬರದ ಪೂಜೆ, ವೃತಾದಿಗಳು ಒಳಗಣ ಶುದ್ಧಿಯನ್ನು ಸಾಧಿಸಲಾರವು. ಬಹಿರಂಗದ ಬೂಟಾಟಿಕೆಗಿಂತ ಅಂತರಂಗದ ಶುದ್ಧತೆ ಮೇಲು. ಸಾಧನೆಯಿಂದ ಸಿದ್ಧಿಪಡೆದ ಶರಣರನ್ನು ತನಗೆ ತೋರಿಸೆಂದು ದೇವನಲ್ಲಿ ನಿವೇದಿಸಿಕೊಂಡಿದ್ದಾಳೆ.

ಅಕ್ಕಮಹಾದೇವಿ ಲೋಕವ್ಯವಹಾರಗಳನ್ನು ಬೆರಗಿನಿಂದ ತೀಕ್ಷ್ಣತೆಯಿಂದ ಗ್ರಹಿಸಿ ಅವುಗಳನ್ನೇ ವಚನ ಪರಿಕರಗಳಾಗಿ ಅಳವಡಿಸಿಕೊಂಡು ಸಾಮಾನ್ಯ ಸಂಗತಿಗಳು ಸೌಂದರ್ಯದಿಂದ ಕಂಗೊಳಿಸುವಂತೆ ಮಾಡುವ ವಿಶಿಷ್ಟ ಭಾಷಾಶಕ್ತಿಯನ್ನು ಸಿದ್ಧಿಸಿಕೊಂಡಿರುವಳು. ಆಧ್ಯಾತ್ಮ ಪಥದಲ್ಲಿ ನಡೆಯುವಾಗ ಸುತ್ತಲಿನ ಸಂಗತಿಗಳನ್ನು ಅಭಿವ್ಯಕ್ತಿಗಾಗಿ ಬಳಸಿರುವಳು. ಆಯಾ ಸಂದರ್ಭಗಳಲ್ಲಿ ಮೂಡಿ ಬಂದ ವಿವಿಧ ಮನಸ್ಥಿತಿಯಲ್ಲಿ ಹಂಚಿಕೊಂಡ ವಿರಹ, ವಿಷಾದ, ವಿನಮ್ರಭಾವ, ಅನುಭಾವಗಳು ಕ್ರಮಬದ್ಧವಾಗಿಲ್ಲವಾದರೂ ಕಾವ್ಯಸೌಂದರ್ಯದ ಕಲಾಕೃತಿಗಳಾಗಿವೆ. ಲೋಕೋಪಮೆಗಳಿಂದ ಲೋಕೋತ್ತರವಾದ ಅನುಭಾವವನ್ನು ಮೂರ್ತಗೊಳಿಸಿದ ಮಹಾದೇವಿಯಕ್ಕ ಮಹಾದೇವನಲ್ಲಿ ವಿನಮ್ರಭಾವದಿಂದ ಅರುಹುವ ವಚನದಲ್ಲಿ ದೊಂಬರಾಟ, ಬೊಂಬೆಯಾಟದ ಉಪಮೆಗಳನ್ನೊಳಗೊಂಡ ಕೋಡಗ ಪ್ರತಿಮೆ ವಿಶಿಷ್ಟವಾಗಿದೆ.

'ಕೋಡಗ'

"ಕೋಲ ತುದಿಯ ಕೋಡಗದಂತೆ,
ನೇಣ ತುದಿಯ ಬೊಂಬೆಯಂತೆ,
ಆಡಿದೆನಯ್ಯಾ ನೀನಾಡಿಸಿದಂತೆ,
ಆನು ನುಡಿದೆನಯ್ಯಾ ನೀ ನುಡಿಸಿದಂತೆ,

ಆನು ಇದ್ದೆನಯ್ಯಾ ನೀನು ಇರಿಸಿದಂತೆ,

ಜಗದ ಯಂತ್ರವಾಹಕ ಚೆನ್ನಮಲ್ಲಿಕಾರ್ಜುನ ಸಾಕೆಂಬನ್ನಕ್ಕ."[೧೩]

ಕೋಲ ತುದಿಗೆ ಕುಣಿಯುವ ಕೋಡಗ, ನೇಣ ತುದಿಗೆ ಕಟ್ಟಲ್ಪಟ್ಟ ಸೂತ್ರದ ಬೊಂಬೆ ಉಪಮೆಗಳು ಅಧೀನತ್ವವನ್ನು ವಿನಮ್ರವಾಗಿ ಸ್ವೀಕರಿಸಿದಕ್ಕೆ ಪ್ರತೀಕಗಳಾಗಿವೆ. ದೇವನೇ ಜಗತ್ತಿನ ಜೀವ ಜಾಲದ ರಕ್ಷಕ. ಜಗತ್ತು ಆತನ ರಂಗಮಂಟಪ. ಸಕಲ ಜೀವಿಗಳ ಸಂರಕ್ಷನಾದ ಭಗವಂತನು ಆಡಿಸಿದಂತೆ ಆಡುವ, ಬೊಂಬೆಗಳು ನಾವು. ಅವನೆ ಸೂತ್ರದಾರ. ಸೃಷ್ಟಿ, ಸ್ಥಿತಿ, ಲಯಗಳೆಲ್ಲ ಪರಮಾತ್ಮನ ಅಧೀನ. ಪ್ರಕೃತಿ ಪರಶಿವನ ಲೋಲಾವಿನೋದದ ರಂಗಮಂಚ. ಆತ ನಡೆಸಿದಂತೆ, ನುಡಿಸಿದಂತೆ, ಆಡಿಸಿದಂತೆ ನಡೆವ, ನುಡಿವ, ಆಡುವ ಜೀವಿಗಳು ನಾವು. ಸರ್ವ ಶಕ್ತನಾದ ಸರ್ವೇಶನೇ ಸೃಷ್ಟಿಯ ಸಂರಕ್ಷಕ. ಜಗನ್ನಿಯಾಮಕನಾದ ದೇವನ ಅಧೀನವೇ ಸಕಲ ಸಚರಾಚರವೆಲ್ಲ ತಮ್ಮ ಕ್ರಿಯೆಯನ್ನು ನೆರವೇರಿಸುವವು. ಜೀವಿಗಳು ಸ್ವತಂತ್ರರಲ್ಲ. ಕಾಣದ ಶಕ್ತಿಯ ಕೈಚಳಕದಿಂದಲೇ ನಿಸರ್ಗ, ಜೀವಿಗಳ ಜಗತ್ತಿನ ವ್ಯವಹಾರಗಳೆಲ್ಲ ನೆರವೇರುವವು ಎಂಬುದನ್ನು ಕೋಡಗ, ಸೂತ್ರದ ಬೊಂಬೆ ಉಪಮೆಗಳಿಂದೊಡಗೂಡಿದ ಪ್ರತಿಮೆಯ ಮೂಲಕ ಪ್ರತಿಪಾದಿಸುವ ಪರಿ ಸೊಗಸಾಗಿದೆ.

ಈ ಪ್ರಪಂಚ ರಂಜನಾತ್ಮಕವಾದುದು. ಮಾನವನಿಗೆ ಒಂದಿಲ್ಲೊಂದು ಬಗೆಯ ಮೋಜು, ರಂಜನೆ ಬೇಕು. ರಂಜನೆಯ ಜೊತೆಗೆ ಹೊಟ್ಟೆ ಹೊರೆಯಲು ವೈವಿಧ್ಯಮಯ ಆಟಗಳು, ಕಸರತ್ತುಗಳು ಪ್ರದರ್ಶನಗಳನ್ನು ಕೈಕೊಳ್ಳುವರು. ಹೊಟ್ಟೆ ಪಾಡಿಗೆ ಬಗೆ ಬಗೆಯ ಆಟಗಳಿಗೆ ಮೊರೆ ಹೋಗುವರು. ಗಿಳಿ, ಮಂಗಗಳಿಗೆ ಮಾತು ಕಲಿಸಿ, ಸಂಜ್ಞೆ ಮೂಲಕ ಜನರನ್ನು ರಂಜಿಸಿ ಬದುಕು ನಡೆಸುವರು. ಪ್ರಸ್ತುತ ವಚನದಲ್ಲಿ ಅಕ್ಕಮಹಾದೇವಿ ಅಂಥಹ ಲೋಕ ದೃಷ್ಟಾಂತವನ್ನು ಸಾಕ್ಷೀಕರಿಸುವಳು. ಮಂಗನನ್ನು ಆಡಿಸುವವನು ಕೋಲಿನ ನೆರವಿನಿಂದ ಕೋಡಗನನ್ನು ಆಡಿಸಿ ರಂಜಿಸುವನು. ಕೋಲಿನ ಆಧೀನ ಕೋಡಗ. ಕೋಲಿನ ತಾಳಕ್ಕೆ ತಕ್ಕಂತೆ, ಆಡಿಸುವವನ ಮನದಿಚ್ಛೆಯಂತೆ ಆಡುವುದು. ಸೂತ್ರದ ಗೊಂಬೆ ಪರದೆಯ ಮೇಲೆ ಸ್ವತಂತ್ರವಾಗಿ ಆಡುತ್ತಿರುವಂತೆ ತೋರಿದರೂ ಸೂತ್ರದಾರನ ಕೈಯಲ್ಲಿ ನಿಯಂತ್ರಿಸಲ್ಪಟ್ಟಿರುವುದು. ಗೊಂಬೆಗಳನ್ನು ಆಡಿಸುವಾತನು ದಾರದ ತುದಿಗೆ ಗೊಂಬೆಗಳನ್ನು ಕಟ್ಟಿ ಪರದೆಯ ಮೇಲೆ ಕುಣಿಸುವನು. ಮರೆಯಲ್ಲಿ ನಿಂತು ತನ್ನ ಕೈಬೆರಳಿನಿಂದ ಗೊಂಬೆಗಳನ್ನಾಡಿಸುವನು. ಗೊಂಬೆ ಸೂತ್ರದಾರನ ಅಧೀನವೇ ಹೊರತು ಸ್ವತಂತ್ರವಲ್ಲ. ಅದರಂತೆಯೇ ಜಗನ್ನಿಯಾಮಕನಾದ ಜಗದೀಶ್ವರನು ಜಗತ್ತಿನ ಯಂತ್ರವನ್ನು ನಡೆಸುವನು. ಆತನು ಆಡಿಸಿದಂತೆ ಎಲ್ಲ ಜೀವಿಗಳು ಆಡುತ್ತವೆ. ಪರಮಾತ್ಮನ ಪ್ರೇರಣೆಯಿಲ್ಲದೆ ಒಂದು ಹುಲ್ಲು ಕಡ್ಡಿಯೂ ಅಲುಗಾಡದು. "ತೇನವಿನಾ ತೃಣಮಪಿ ನ ಚಲತಿ" ಉಕ್ತಿ ಪರಮಾತ್ಮನ ಸರ್ವಶಕ್ತತೆಯನ್ನು ಪ್ರತಿಬಿಂಬಿಸುವುದು.

ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನದೇವನಲ್ಲಿ ನೀನಾಡಿಸಿದಂತೆ ಆಡುವೆನು, ನೀನು ನುಡಿಸಿದಂತೆ ನುಡಿವೆನು. ಅಷ್ಟೇ ಅಲ್ಲದೆ ನೀನಿರಿಸಿದಂತೆ ಇರುವೆನು. ತಾನು ಸ್ವತಂತ್ರಳಲ್ಲ! ನಿನ್ನಾಧೀನ! ನೀನು ಸಾಕೆನ್ನುವವರೆಗೆ ನನ್ನ ಜೀವನ. ಅನನ್ಯ ಶರಣಾಗತಿಯ ಭಾವವನ್ನು ಸಹಜವಾಗಿ ವ್ಯಕ್ತಪಡಿಸುವಳು. ದೇವರ ದಯೆಯಿರುವ ತನಕ ತನ್ನ ಅಸ್ತಿತ್ವವೆಂಬುದನ್ನು ವಿನೀತವಾಗಿ ಉದ್ಗರಿಸುವಳು. ಸಾಧಕನ ಶರಣಾಗತಿಯ ಭಾವ ಕೋಡಗ, ಬೊಂಬೆ, ಪ್ರತಿಮೆಗಳಲ್ಲಿ ಅನನ್ಯವಾಗಿ ಚಿತ್ರಿತವಾಗಿದೆ. ಮಹಾದೇವಿಯಕ್ಕ ತನ್ನ ಆರಾಧ್ಯದೈವದ ಸಾಕ್ಷಾತ್ಕಾರದ ಅವಿಷ್ಕಾರದಲ್ಲಿದ್ದರೂ, ಆಧ್ಯಾತ್ಮಿಕ ಸಾಧನಾ ಪಥದಲ್ಲಿ ತನ್ಮಯಳಾಗಿದ್ದರೂ ತನ್ನ ಸುತ್ತಲಿನ ಮರ್ತ್ಯದಲ್ಲಿಯ ಘಟನೆಗಳನ್ನು ಜನರ ಚಟುವಟಿಕೆಗಳನ್ನು ನಿರೀಕ್ಷಿಸಿ ಅದನ್ನೇ ವಸ್ತು ವಿಷಯವನ್ನಾಗಿ ಮಾಡಿಕೊಂಡು ಕಾವ್ಯಗುಣ, ಸೌಂದರ್ಯ, ಅರ್ಥಸ್ಫುರಣವನ್ನು ಹೊಮ್ಮಿಸುವ ವಚನಗಳನ್ನು ರಚಿಸಿ ಹೃದ್ಯವೇದ್ಯವಾಗಿಸಿರುವಳು.

ಸಾಮಾನ್ಯ ಸಂಗತಿಗಳಿಂದ ಸಶಕ್ತ ಸಂದೇಶವೊಂದನ್ನು ಕಟ್ಟಿಕೊಡಬಲ್ಲ ಬಹುಮುಖ ಪ್ರತಿಭೆ ಅವಳದು. ದೈನಂದಿನ ವ್ಯವಹಾರದ ಮೂರ್ತ ವಿಷಯಗಳ ಮುಖೇನ ಅಮೂರ್ತ, ಅನಂತವಾದ ಅನುಭಾವವನ್ನು ತಾತ್ವಿಕ ನೆಲೆಯನ್ನು ಬಿತ್ತರಿಸಿದ್ದಾಳೆ. ಉಪಮೆ, ರೂಪಕ, ದೃಷ್ಟಾಂತ, ಸಾಲು ಪ್ರತಿಮೆಗಳು ಅಕ್ಕನ ವಚನಗಳಲ್ಲಿ ಮೈದೋರಿವೆ. ಪ್ರಾಣಿ ಪ್ರತಿಮೆಗಳು ವಚನಗಳಲ್ಲಿ ಹೇರಳವಾಗಿ ಬಳಕೆಗೊಂಡು ವಿವಿಧ ಭಾವಲಹರಿಗಳ ಅಭಿವ್ಯಕ್ತಿಗೆ ಮಾಧ್ಯಮವಾಗಿವೆ. ಮರ್ಕಟ ಪ್ರತಿಮೆಯುಳ್ಳ ಅಂಥಹ ವಚನವೊಂದು ಬೃಹತ್ ಶಬ್ದಚಿತ್ರವಾಗಿ ಮೂಡಿನಿಂತಿರುವುದನ್ನು ಈ ವಚನದಲ್ಲಿ ಕಾಣಬಲ್ಲೆವು.

'ಮರ್ಕಟ'(ಮಂಗ)

"ತನ್ನವಸರಕ್ಕಾಗಿ ಹಗಲುಗನ್ನವನಿಕ್ಕಿದಡೆ
ಕನ್ನ ಸವೆಯಲಿಲ್ಲ, ಕಳುವು ದೊರೆಯಲಿಲ್ಲ!
ಬೊಬ್ಬುಲಿಯನೇರಿದ ಮರ್ಕಟನಂತೆ
ಹಣ್ಣ ಮೆಲ್ಲಲಿಲ್ಲ, ಕುಳ್ಳಿರೆ ಠಾವಿಲ್ಲ.
ನಾನು ಸರ್ವಸಂಗ ಪರಿತ್ಯಾಗ ಮಾಡಿದವಳಲ್ಲ,
ನಿಮ್ಮ ಕೂಡಿ ಕುಲವಳಿದವಳಲ್ಲ, ಚೆನ್ನಮಲ್ಲಿಕಾರ್ಜುನಾ."[೧೪]

'ಮರ್ಕಟ' ಚಂಚಲತೆ ಮತ್ತು ಅಜ್ಞಾನಕ್ಕೆ ಸಂಕೇತವಾಗಿ ವಚನದಲ್ಲಿ ಬಳಕೆಯಾಗಿದೆ. ಶಬ್ದಚಿತ್ರದ ಪುಷ್ಟಿಗೆ 'ಮರ್ಕಟ' ಉಪಮೆಯನ್ನು ಉಪಯೋಗಿಸಿ ಅಜ್ಞಾನ, ಚಾಂಚಲ್ಯದಿಂದ ನೆರವೇರಿಸುವ ಕಾರ್ಯಗಳ ವ್ಯರ್ಥ ಪ್ರಯತ್ನವನ್ನು ಈ ಮೂಲಕ ಚಿತ್ರಿಸಲಾಗಿದೆ. ವಚನಾಂತರ್ಯದಲ್ಲಿ

ವಿಡಂಬನೆಯ ಧ್ವನಿ ಅಡಗಿದೆ. ಲೋಕದಲ್ಲಿ ಜನರು ತಮ್ಮ ಜೀವನ ನಡೆಸಲು ಕಾಯಕ ಮಾಡುವುದು ಅನಿವಾರ್ಯ, ಅವಶ್ಯಕ. ದುಡಿದು ಉಣ್ಣುವುದು ಲೋಕನೀತಿ. ಕಾಯಕ ಸತ್ಯಶುದ್ಧತೆಯಿಂದ ಕೂಡಿರಬೇಕೆಂಬುದು ಬಸವಾದಿ ಶರಣರ ಧ್ಯೇಯದೃಷ್ಟಿ! ಸತ್ಯಶುದ್ಧ ದುಡಿಮೆಯಿಂದ ಸತ್‌ಪಥದಲ್ಲಿ ಬಾಳುವುದು ಶಿವನೊಪ್ಪುವ ಜೀವನ. ಆದರೆ ವ್ಯತಿರಿಕ್ತವಾಗಿ ಬದುಕುವವರಿಗೇನೂ ಕೊರತೆಯಿಲ್ಲ. ದುಡಿದು ಸಂಪಾದಿಸಿದ ಜನರ ಸಂಪತ್ತನ್ನು ಕನ್ನ ಹಾಕಿ, ಕಳ್ಳತನ ಮಾಡಿ ಹೊಟ್ಟೆ ಹೊರೆಯುವವರು ಜಗತ್ತಿನಲ್ಲಿರುವರು. ಅಂಥಹ ಸನ್ನವೇಶವನ್ನು ಬಳಸಿ ವ್ಯಷ್ಟಿ, ಸಮಷ್ಟಿ ಬದುಕಿನ ವಿಮರ್ಶೆ ಮಾಡಿ ಆತ್ಮಾವಲೋಕನ ಮತ್ತು ಲೋಕಚಿಂತನಗಳೆರಡೂ ಪರಿಶುದ್ಧತೆಯಿಂದ ಕೂಡಿರಬೇಕೆಂಬ ಆಶಯವನ್ನು ಪ್ರತಿಮಾಕೃತಿಯಲ್ಲಿ ಅಭಿವ್ಯಕ್ತಗೊಳಿಸಿದ್ದಾಳೆ.

ವಚನದಲ್ಲಿ ಚಿತ್ರಿತವಾದ ಕಳ್ಳನಿಗೆ ಬಹಳ ಆತುರ, ಅವಸರ. ಸಾಮಾನ್ಯವಾಗಿ ಕಳ್ಳತನ ದರೋಡೆಯಂತಹ ಕೃತ್ಯಗಳು ರಾತ್ರಿ ಹೊತ್ತಿನಲ್ಲಿ ಕತ್ತಲಲ್ಲಿ ಯಾರೂ ಇಲ್ಲದುದನ್ನು ಗಮನಿಸಿ ಮನೆಯವರೆಲ್ಲರೂ ನಿದ್ರೆ ಹೋದ ಮೇಲೆ ಕಳ್ಳತನ ಮಾಡಿ ಸಂಪತ್ತನ್ನು ಗೊತ್ತಿಲ್ಲದಂತೆ ದೋಚಿಕೊಂಡು ಬೆಳಗಾಗುವುದರೊಳಗೆ ಓಡಿಹೋಗಿ ತಪ್ಪಿಸಿಕೊಳ್ಳುವುದು. ಕಳ್ಳತನ ರಾತ್ರಿಯಲ್ಲಿ ರಹಸ್ಯವಾಗಿ ನಡೆಸಲ್ಪಡುವುದು. ಆದರೆ ಕಳ್ಳನೊಬ್ಬ ಹೊಟ್ಟೆಹೊರೆಯಲು ಆತುರದಿಂದ ಹಗಲಿನಲ್ಲಿಯೇ ಕನ್ನ ಹಾಕತೊಡಗಿದ ಆದರೆ ಭಯದಿಂದ ಕಳ್ಳನಿಗೆ ಮನೆಯ ಸಂಪತ್ತನ್ನು ಕದಿಯಲಾಗದೆ ವ್ಯರ್ಥಪ್ರಯತ್ನಿಸಿ ಆಯಾಸಗೊಂಡ. ಅಕ್ಕ ಚಿತ್ರಿಸಿದ ಅವಸರದ ಕಳ್ಳತನದ ಚಿತ್ರಣ ಗತಿಶೀಲತೆಯಿಂದ ಕೂಡಿದ ವಿಡಂಬನಾತ್ಮಕ ಧ್ವನಿಯನ್ನೊಳಗೊಂಡು 'ಹಗಲುಗನ್ನ' ಪ್ರಯತ್ನ ಕಣ್ಮುಂದೆ ತೋರುತ್ತಿದೆಯೇನೋ ಎಂಬ ಭಾವವುಂಟಾಗುತ್ತದೆ.

ಬೊಬ್ಬುಲಿಯನೇರಿದ ಮರ್ಕಟ ಉಪಮೆ ಚಂಚಲ ಮನಸ್ಸಿನ ಅಜ್ಞಾನಿಯ ನಡೆಯನ್ನು ಪ್ರತಿಧ್ವನಿಸುತ್ತದೆ. ಬೊಬ್ಬುಲಿ–ಜಾಲಿಮರ, ಮರ್ಕಟ–ಮಂಗ, ಹಣ್ಣು ತಿನ್ನಲು ಮರ್ಕಟ ಜಾಲಿಮರವನೇರುವುದು. ಜಾಲಿ ಮರದಲ್ಲಿ ಹಣ್ಣು ಹುಡುಕುವ ಅದರ ಅಜ್ಞಾನವನ್ನು ಸೊಗಸಾಗಿ ಚಿತ್ರಿಸಿದ್ದಾಳೆ. ಜಾಲಿಮರದಲ್ಲಿ ಹಣ್ಣು ದೊರೆಯುವುದಿರಲಿ, ಕುಳಿತುಕೊಳ್ಳಲು ಸ್ಥಳವೂ ದೊರೆಯದು. ಮುಳ್ಳಿನಿಂದ ತುಂಬಿದ ಜಾಲಿಮರವನೇರಿ ಹಣ್ಣು ಹುಡುಕಿ ತಿನ್ನುವ, ಕುಳಿತುಕೊಳ್ಳಲು ಆಶ್ರಯ ಬಯಸುವ ಮಂಗನ ಬಯಕೆ ಹಾಸ್ಯಾಸ್ಪದ! ವ್ಯರ್ಥ ಕಸರತ್ತು ಅಜ್ಞಾನದ ಸಂಕೇತ.

ಪ್ರತಿಮೆಯಲ್ಲಿ ಎರಡು ಸನ್ನಿವೇಶಗಳು ಅಕ್ಕನ ಆಶಯಕ್ಕೆ ಪೂರಕವಾಗಿ ನಿರೂಪಿತವಾಗಿವೆ. ಆತ್ಮವಿಮರ್ಶೆ ತನ್ಮೂಲಕ ಸಮಾಜದ ಜನರ ವ್ಯರ್ಥ ಪ್ರಯತ್ನಗಳನ್ನು, ಅಜ್ಞಾನಿಗಳ ಕೃತ್ಯಗಳನ್ನು ವಿಡಂಬಿಸಿದ್ದಾಳೆ. ಅಂತರಂಗವನ್ನು ತನ್ನ ದೇವನಲ್ಲಿ ತೆರೆದಿಟ್ಟು ತನ್ನ ರಕ್ಷಣೆಯ ಹೊಣೆಯನ್ನು ದೇವನಿಗೆ ಹೊರಿಸುತ್ತಾಳೆ. ಶಿವಪಥದ ಸಾಧಕಳಾದ ತನ್ನೊಳಗಿನ ದೌರ್ಬಲ್ಯಗಳನ್ನು ಮನ್ನಿಸಿ,

ಶಿವನ ಸನ್ನಿಹಿತ ದೊರೆಯಬೇಕೆಂದು ವಿನಮ್ರವಾಗಿ ನಿವೇದನೆ ಮಾಡಿಕೊಳ್ಳುವಳು. ಅಂಗಕ್ರಿಯೆಗಳು ವಿಷಯಾದಿಗಳು ಸಾಧನೆಗೆ ಅಡ್ಡಿಯುಂಟಾಗುವುದನ್ನು ಅರಿತು ಪರಿಹಾರಗೊಳಿಸುವ ದಾರಿಯನ್ನು ದಯಾಮಯನಾದ ದೇವನು ತೋರಿಸುವನೆಂದು ಬಲವಾಗಿ ನಂಬಿ, ಮುನ್ನಡೆಯುವ ಆತ್ಮವಿಶ್ವಾಸದ ಪ್ರತೀಕವಾಗಿ ಗೋಚರಿಸುವಳು. ಎರಡು ಬೇರೆ ಉಪಮೆಗಳು ಸೂತ್ರೀಕರಿಸಿದಂತೆ ಅಪ್ರತಿಮ ಪ್ರತಿಮೆಗಳಾಗಿ ಮುತ್ತು ಪೋಣಿಸಿದಂತೆ ಹೊಳಪುಗೊಳ್ಳುವಂತೆ ಮಾಡಿರುವುದು ಮಹಾದೇವಿಯಕ್ಕನ ಕಾವ್ಯನಿರ್ಮಿತಿ, ಪ್ರತಿಭಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿವೆ.

ಶರಣರ ಮಹಾತ್ಮರ ನಡೆನುಡಿ ಬದುಕನ್ನು ಅರಿಯದ ಅಜ್ಞಾನಿ ಮನುಜರ ಸ್ಥಿತಿಯನ್ನು 'ವಾನರ' ಪ್ರತಿಮೆಯಲ್ಲಿ ಸುಂದರವಾದ ದೃಶ್ಯವನ್ನು ಸಾಕ್ಷೀಕರಿಸುತ್ತ ಲೋಕದ ಜನರು ಮತ್ತು ಜ್ಞಾನಿಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವಂತೆ ಸಂದೇಶ ನೀಡುವ ಪ್ರತಿಮೆ ಶರಣ ಚಾರಿತ್ರ್ಯವನ್ನು ಅರಿಯದ ಅಜ್ಞಾನಿಗಳ ಪ್ರತಿಕ್ರಿಯೆಯ ಚಿತ್ರಣವನ್ನು ಮನೋಜ್ಞವಾಗಿ ಪ್ರತಿಬಿಂಬಿಸುತ್ತದೆ.

ವಾನರ(ಮಂಗ)

"ವಾನರಂಗಳಿಗೆ ಭೈತ್ರ ತಪ್ಪಿಬಂದಡೆ
ಮುತ್ತು ಮಾಣಿಕ್ಯ ನವರತ್ನದ ಪೆಟ್ಟಿಗೆಗಳು ಸಾರಿದವು.
ಸಾರಿದಡೆ ಆ ವಾನರಂಗಳು ಬಲ್ಲವೆ ಮುತ್ತಿನ ರಕ್ಷೆಯ?
ನವರತ್ನದ ಪೆಟ್ಟಿಗೆಯ ತೆರೆದು ನೋಡಿ,
ಕೆಯ್ಕೊಂಡು, ವಾನರಂಗಳು ಮೆದ್ದು ನೋಡಿ,
ಹಣ್ಣಲ್ಲವೆಂದು ಬಿಟ್ಟು ಕಳೆದವು.
ಲೋಕದೊಳಗೆ ಶರಣ ಸುಳಿದಡೆ,
ಆ ಶರಣನ ನಡೆ ನುಡಿ ಚಾರಿತ್ರವ ಕರ್ಮಿಗಳೆತ್ತ ಬಲ್ಲರು!
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣರ ಇರವನು ನಿಮ್ಮ ಶರಣರು ಬಲ್ಲರಲ್ಲದೆ
ಆ ವಾನರರಂತಹ ಮನುಜರೆತ್ತ ಬಲ್ಲರು"[೧೫]

ಕರ್ಮಠ ಲೋಕದ ಜನರನ್ನು 'ವಾನರ' ಪ್ರತಿಮೆ ಸಾಂಕೇತಿಸುತ್ತದೆ. ಮುತ್ತು ಮಾಣಿಕ್ಯಗಳು, ಜ್ಞಾನದ ಬೆಳಕನ್ನು ಹೊಂದಿರುವ ಶರಣರು ಜ್ಞಾನಿಗಳ ಪ್ರತೀಕವಾಗಿವೆ. ಈ ವಚನ ಪ್ರತಿಮೆಯಲ್ಲಿ ಅಕ್ಕಮಹಾದೇವಿ ಒಂದು ಸುಂದರವಾದ ಶಬ್ಧಚಿತ್ರದಲ್ಲಿ ಅಜ್ಞಾನಿಗಳು ಶರಣರನ್ನು ಅರಿಯದ ವಾನರನ ಮನಸ್ಥಿತಿಯವರೆಂಬುದನ್ನು ವಿಡಂಬಿಸಿದ ಧ್ವನಿಯನ್ನು ಅಂತರ್ಗತಗೊಳಿಸಿ ಸಶಕ್ತವಾದ ಪ್ರತಿಮಾಕೃತಿಯನ್ನು ನಿರ್ಮಿಸಿರುವಳು.

ನದಿಯ ದಡದಲ್ಲಿ ನಿಂತ ವಾನರಗಳು ಒಂದು ದೋಣಿಯಲ್ಲಿ ಬಂದು ಕುಳಿತು ಅದರಲ್ಲಿರುವ ಪೆಟ್ಟಿಗೆಗಳನ್ನು ಕುತೂಹಲದಿಂದ ತೆರೆದು ನೋಡಿದಾಗ, ಮುತ್ತು, ಮಾಣಿಕ್ಯ, ನವರತ್ನಗಳ ಪೆಟ್ಟಿಗೆಗಳು! ಆದರೆ ಅವುಗಳ ಮೌಲ್ಯ ಮಂಗನಿಗೆ ತಿಳಿಯದು. ನವರತ್ನದ ಪೆಟ್ಟಿಗೆಯಲ್ಲಿ ಮುತ್ತು, ರತ್ನ, ಮಾಣಿಕ್ಯಗಳನ್ನು ತೆಗೆದು ಹಣ್ಣೆಂದು ಭಾವಿಸಿ ಬಾಯಲ್ಲಿಟ್ಟುಕೊಂಡು ಮೆಲ್ಲಲು ಪ್ರಯತ್ನಿಸುತ್ತವೆ. ಅವು ಹಣ್ಣಲ್ಲವೆಂದು ಅಲ್ಲಿಯೇ ಬಿಟ್ಟು ಮತ್ತೆ ಜಿಗಿದು ಹೋಗುತ್ತವೆ. ಮಾಣಿಕ್ಯದ ಮೌಲ್ಯ ಮಂಗನಿಗೆಂತು ಅರ್ಥವಾದೀತು?

ವಾನರ ಉಪಮೆಯಂತೆಯೇ ಜಗತ್ತಿನಲ್ಲಿ ಶರಣರು ಸುಳಿದಾಡಿದರೆ, 'ಜಂಗಮ ಸುಳಿಗಾಳಿ' ಎಂದರಿಯದೆ ಅವರ ನಡೆ ನುಡಿ, ಸದ್ಗುಣ ಸಂಪನ್ನತೆಯನ್ನು ಜ್ಞಾನ ವಿಸ್ತಾರವನ್ನು, ಚಾರಿತ್ರ್ಯವನ್ನು ಅಜ್ಞಾನಿಗಳು ಗುರುತಿಸಲಾರರು. ನವರತ್ನ ಮಾಣಿಕ್ಯಗಳನ್ನು ಹಣ್ಣುಗಳಲ್ಲವೆಂದು ಮಂಗಗಳು ಬಿಸುಟಿದಂತೆ ಸುಜ್ಞಾನಿಗಳ ಮಹತ್ವವನ್ನು ಲೋಕದ ಕರ್ಮಿಗಳು ಅರಿಯದೇ ಹೋಗುವರು. ಶರಣರ ನಡೆ ನುಡಿಯನ್ನು ಶರಣರೆ ಅರಿಯುವರು ಹೊರತು ಅಜ್ಞಾನಿಗಳು, ಕುಹಕಿಗಳು ಮಂಗನಂತೆ ವರ್ತಿಸುವರು. ಅಕ್ಕಮಹಾದೇವಿ ಏಕಾಂತವಾಗಿ ಆಧ್ಯಾತ್ಮ ಸಿದ್ಧಿಗಾಗಿ ಸಂಚಾರ ಮಾಡುತ್ತ ಸುತ್ತಲಿನ ಪ್ರಪಂಚವನ್ನು ನಿರೀಕ್ಷಿಸಿ ಅವುಗಳನ್ನು ವಚನ ವಸ್ತುಗಳನ್ನಾಗಿಸಿ ಅನುಭಾವ ನಿವೇದನೆ ಮಾಡಿದ ಅಭಿವ್ಯಕ್ತಿ ಸತ್ವಶಾಲಿಯಾದ ಪ್ರತಿಮಾ ನಿರ್ಮಾಣದ ಪ್ರತಿ ಹಂತದಲ್ಲೂ ಗೋಚರಿಸುತ್ತದೆ. ಸಾಮಾಜಿಕ ಹೋರಾಟದಲ್ಲಿ ತೀವ್ರ ಪ್ರತಿಭಟನೆ, ಪ್ರತಿಕ್ರಿಯೆ ನೀಡಿದ ಸಂದರ್ಭದ ವಚನಗಳಲ್ಲಿ ಕಾವ್ಯದ ಮಾಧುರ್ಯತೆ ಕಂಡುಬರುವುದಿಲ್ಲ. ಈ ವಚನಗಳಲ್ಲಿ ಪ್ರಾಣಿ ಪ್ರತಿಮೆಗಳು ಅಜ್ಞಾನಿ ಮಾನವರ ನಡೆಯನ್ನು ಸಶಕ್ತವಾಗಿ ಪ್ರತಿಬಿಂಬಿಸುತ್ತವೆ. ಆದರೂ ಕಾವ್ಯಗುಣ ಕಳೆದುಕೊಂಡು ಶುಷ್ಕ ಗದ್ಯದ ನಿರೂಪಣೆಯಂತೆ ಗೋಚರಿಸುತ್ತದೆ.

ಸಾಂಸಾರಿಕ ವ್ಯಾಮೋಹಗಳಿಗೆ ಸಿಲುಕಿ ಮನಸ್ಸು ಅಲ್ಲಿಯೇ ತನ್ಮಯವಾಗಿ ಅಂತರ್ಗತ ಚೇತನ ಶಕ್ತಿಯನ್ನು ಮರೆತು ಭವಬಂಧನಗಳಿಗೆ ಈಡಾಗುವ ಜೀವವನ್ನು 'ಆನೆ' ಪ್ರತಿಮೆಯ ಮೂಲಕ ಕಟ್ಟಿಕೊಟ್ಟ ರೀತಿ ಅನನ್ಯವಾಗಿದೆ.

ಆನೆ(ಗಜ)

"ಚಂದ್ರಕಾಂತದ ಶಿಲೆಗೆ ಒಂದು ಗಜ ಹೋರುವಂತೆ,
ತನ್ನ ನೆಳಲಿಂಗೆ ತಾನೆ ಹೋರಿ ಸಾವಂತೆ,
ಆನೆಯ ಗತಿ ಆನೆಯ ಮತಿ.
ಆನೆಯಹುದು ಆನೆಯಲ್ಲ, ಅದನೇನೆಂಬೆ?

ನೀನೆನ್ನ ಕರಸ್ಥಲದಲ್ಲಿ ಸಿಲ್ಕಿದೆಯಾಗಿ ನೀನಾನೆಂಬ ಭ್ರಾಂತೇಕೆ?
ನಾನು ನೀನಲ್ಲದ ತೆರಹಿಲ್ಲ, ಚೆನ್ನಮಲ್ಲಿಕಾರ್ಜುನಾ.[೧೬]

ಅಕ್ಕನ ಭಾವನಿರ್ಭರತೆ, ತೀವ್ರತೆಗಳು ಭಾಷೆಯಲ್ಲಿ ಮಡುಗಟ್ಟಿ ನಿಂತಿದೆ. ಅರ್ಥವಿಸ್ತಾರ, ಭಾವಲಹರಿ, ಧ್ವನಿಶಕ್ತಿಯೊಳಗೊಂಡ ಅನುಭಾವದ ಉನ್ನತ ನಿಲುವನ್ನು ಪ್ರತಿಪಾದಿಸಲು 'ಆನೆ' ಪ್ರತಿಮೆಯನ್ನು ಉಪಯೋಗಿಸಿರುವಳು. ದೇಹದಲ್ಲಿ ಸಿಲುಕಿರುವ ಜೀವಾತ್ಮ ಮನ ಬುದ್ಧಿ ಅಹಂಕಾರಗಳು, ವಿಷಯಾದಿ ಮೋಹಗಳಿಗೆ ಒಳಗಾಗಿ ಅಲ್ಲಿಯೇ ವಿರಮಿಸಿ ತಾನಾರೆಂಬುದನ್ನು ಮರೆತಿದೆ. ದೇಹಭಾವದಿಂದ ಶಿವಭಾವದೆಡೆಗೆ ವಿಕಾಸಗೊಳ್ಳುವ ದೇಹಾಂತರ್ಗತವಾದ ಜೀವಾತ್ಮನಿಗೆ ಪರಮಾತ್ಮನ ಅರಿವುಂಟು ಮಾಡಿ ಭ್ರಾಮಕ ಭಾವವನ್ನು ತೊಲಗಿಸಲು ಸಾಧಕನಾದವನು ಶ್ರದ್ಧೆ, ನಿಷ್ಠೆಯಿಂದ ಚರಿಸಬೇಕೆಂಬ ಜಾಗೃತಿಯನ್ನು ಈ ವಚನದಲ್ಲಿ 'ಆನೆ' ಪ್ರತಿಮೆ ಸಂಕೇತಿಸುತ್ತದೆ.

ಆನೆಗೆ ತಂಪು ಹಿತಕಾರಿ, ತಂಪಾದ ಚಂದ್ರಕಾಂತ ಶಿಲೆ ಸಿಕ್ಕರೆ ಅದಕ್ಕೆ ತನ್ನ ಮೈಯನ್ನು ತಿಕ್ಕುತ್ತ ಅದರಲ್ಲಿ ತನ್ಮಯವಾಗುವುದು. ಕೆಲವೊಮ್ಮೆ ಆನೆ ತನ್ನ ಬೃಹತ್ತಾದ ದೇಹದ ನೆರಳನ್ನೇ ಚಂದ್ರಕಾಂತ ಶಿಲೆಯೆಂದು ಭ್ರಮಿಸಿ ನೆಲಕ್ಕೆ ಮೈಯನ್ನು ತಿಕ್ಕಿ ತಿಕ್ಕಿ ಬಳಲಿ ಹೋರಿ ಸಾಯುವುದು. ಆನೆಯ ಭ್ರಾಮಕ ಬುದ್ಧಿ, ಅಜ್ಞಾನದ ನಡವಳಿಕೆಯಿಂದ ತನ್ನನ್ನು ನಾಶಪಡಿಸಿಕೊಳ್ಳುವುದು. ಆನೆ ಬೃಹತ್ತತೆ ಶಕ್ತಿ ಹೊಂದಿದ್ದರೂ ಭ್ರಮೆಯಿಂದ ಬಳಲುವದು. ಆನೆ ಭ್ರಮೆಗೆ ಒಳಗಾಗದೆ ಇದ್ದರೆ ಬಲಶಾಲಿಯಾಗಿ ಬಾಳುವುದು. ಆದರದು ಬೌದ್ಧಿಕ ಜ್ಞಾನಕ್ಕಿಂತ ಭ್ರಮಾತ್ಮಕ ಸುಳಿಯಲ್ಲಿ ಸಿಲುಕಿ ತನ್ನ ಅವಸಾನದ ಅಪಾಯವನ್ನು ಸ್ವಯಂಕೃತವಾಗಿ ಆವರಿಸಿಕೊಂಡಿದೆ.

ಪ್ರಾಣಿ ಪ್ರಪಂಚದ ಸ್ಥಿತಿಯನ್ನು ನಿರೀಕ್ಷಿಸಿದ ಮಹಾದೇವಿಯಕ್ಕ ಅನುಭಾವದ ನಿಲುವನ್ನು ಸಾಕ್ಷೀಕರಿಸಲು 'ಗಜ' ಪ್ರತಿಮಾಕೃತಿಯಲ್ಲಿ ಬದುಕಿನ ರೀತಿಯನ್ನು ನಿರೂಪಿಸಿದ್ದಾಳೆ. ತನ್ನ ದೇವನಲ್ಲಿ ಅರುಹಿಕೊಳ್ಳುತ್ತ ನಾನು ನೀನೆಂಬ ಉಭಯವಳಿದು ಸ್ವಸ್ವರೂಪವನ್ನು ಅರಿಯಲು ದೃಢತೆ, ಸತತ ಸಾಧನೆ ಅವಶ್ಯವೆಂಬ ಸಾರ್ವತ್ರಿಕ ಸತ್ಯವನ್ನು ಬಿಚ್ಚಿಡುತ್ತಾಳೆ.

ವೈಯಕ್ತಿಕ ನೆಲೆಯಿಂದ ಸಮಕಾಲೀನ ಸಮಾಜದ ಬದುಕನ್ನು ಎದುರಿಸಿದ ಅಕ್ಕಮಹಾದೇವಿ ಲೌಕಿಕರ ನಿಂದೆ ತಿರಸ್ಕಾರಗಳಿಗೆ ಆಘಾತಕ್ಕೊಳಗಾಗಿ ಮನುಷ್ಯ ಸೋಲದೆ, ಬಂದ ಸವಾಲುಗಳನ್ನು ಗಟ್ಟಿತನದಿಂದ ಪರಿಹರಿಸಿಕೊಂಡು, ಸಮಾಧಾನದಿಂದ ಬಾಳ್ವೆ ನಡೆಸಬೇಕು. ಸತ್ಪಥದಿಂದ ಸಮರಸ ಬದುಕನ್ನು ನಿರ್ಮಿಸಿಕೊಳ್ಳಬೇಕೆಂಬ ಪ್ರಬಲ ಆಶಾವಾದವನ್ನು ತನ್ನ ವಚನಗಳಲ್ಲಿ ಪ್ರತಿಪಾದಿಸಿರುವಳು. ವ್ಯಕ್ತಿಗತ ಹೋರಾಟದಲ್ಲಿ ಅಕ್ಕಮಹಾದೇವಿ ತಾಳಿದ ನಿಲುವು ಸಾಮಾಜಿಕ ಬದುಕಿಗೂ ವಿಸ್ತೃತ ಗೊಳ್ಳುತ್ತದೆ. ಸ್ತುತಿ ನಿಂದೆಗಳಿಗೆ ಸಮಚಿತ್ತದಿಂದ ಪ್ರತಿಕ್ರಿಯಿಸುವ ಮನೋಭಾವ ಬೆಳೆಸಿಕೊಳ್ಳಲು

ಸಂದೇಶ ನೀಡಿದ್ದಾಳೆ. ಮಾನವ ಜೀವನದ ವಿವಿಧ ಹಂತಗಳನ್ನು, ಮನಸ್ಥಿತಿಗಳನ್ನು ಅಭಿವ್ಯಕ್ತಗೊಳಿಸಲು ಪ್ರಾಣಿಪ್ರತಿಮೆಗಳನ್ನು ವಿವಿಧ ನೆಲೆಯಲ್ಲಿ ವಚನಗಳಲ್ಲಿ ಬಳಸಿ ವಚನದ ಭಾವ ಸರಳವಾಗಿ ಅರ್ಥೈಸಲು ನೆರವಾಗುತ್ತವೆ.

ಅಲೌಕಿಕ ಆನಂದಕ್ಕಾಗಿ ಲೋಕ ಸಂಚಾರಿಯಾಗಿ ತಾನರಸುವ ಸತ್ಯದರ್ಶನಕ್ಕಾಗಿ ಹಂಬಲಿಸಿ ವಿರಾಗಿಣಿ ಜೀವನವನಪ್ಪಿಕೊಂಡು ತನ್ನಲ್ಲಿ ತಾನು ಸ್ವಯವಾಗಿದ್ದರೂ ಪ್ರಪಂಚದ ಜನರು ದೈಹಿಕವಾಗಿ ಮಾನಸಿಕವಾಗಿ, ಭಾವನಾತ್ಮಕವಾಗಿ ಘಾಸಿಗೊಳಿಸಲೆತ್ನಿಸಿದಾಗ ಅಂಥಹ ಘಟನೆಗಳಿಗೆ ತೀವ್ರ ಪ್ರತಿಭಟನೆ, ಪ್ರತಿಕ್ರಿಯೆ ನೀಡುವ ಆತ್ಮವಿಶ್ವಾಸದ ಧ್ವನಿ ವಚನಗಳಲ್ಲಿ ತುಂಬಿಕೊಂಡಿದೆ. ಅವಳ ನಡವಳಿಕೆ ಲೌಕಿಕ ಜನರಿಗೆ ವಿಚಿತ್ರವಾಗಿ ತೋರಿದಾಗಲೂ, ನಿಂದೆ, ಅಪವಾದಗಳು, ತಿರಸ್ಕಾರದ ನುಡಿಗಳು ಎದುರಾದಾಗಲೂ, ಧೀರತೆಯಿಂದ ಪ್ರತಿಕ್ರಿಯಿಸಿದ ಭಾವನಿರ್ಭರತೆ ಮನೋಸ್ಥೈರ್ಯ, ಎಂದಿಗೂ ಪ್ರಸ್ತುತವಾಗಿವೆ. ಅಂಥ ಸನ್ನಿವೇಶವೊಂದನ್ನು 'ಆನೆ' ಪ್ರತಿಮೆಯ ಮೂಲಕ ಬಣ್ಣಿಸಿದ್ದಾಳೆ.

ಆನೆ(ಮದಕರಿ)

> "ಹಂದಿಯೂ ಮದಕರಿಯೂ ಒಂದೇ ದಾರಿಯಲ್ಲಿ ಸಂಧಿಸಿದಡೆ
> ಹಂದಿಗಂಜಿ ಮದಕರಿ ಕೆಲಕ್ಕೆ ಸಾರಿದಡೆ
> ಈ ಹಂದಿಯದು ಕೇಸರಿಯಪ್ಪುದೆ ಚೆನ್ನಮಲ್ಲಿಕಾರ್ಜುನಾ?"[೧೭]

ವಚನದಲ್ಲಿ ಬಳಕೆಯಾಗಿರುವ ಹಂದಿ 'ಹೇಡಿತನಕ್ಕೂ' ನಿಂದಕರನ್ನು ಪ್ರತಿನಿಧಿಸಿದರೆ ಮದಕರಿ(ಆನೆ) ಧೀರತೆ, ದೃಢತೆ, ನಿರ್ಭಯ ಸ್ವಭಾವದ ಮನಸ್ಥಿತಿಯನ್ನು ಸೂಚಿಸುತ್ತದೆ. 'ಆನೆ' ಪ್ರತಿಮೆಯಲ್ಲಿ ಸರಳ ಸನ್ನಿವೇಶದ ಸಹಜವಾದ ಶಬ್ಧಚಿತ್ರಣವಿದೆ. ಹಂದಿ, ಆನೆಗಳೆರಡೂ ಒಂದೇ ದಾರಿಯಲ್ಲಿ ಎದುರು ಬದುರಾದಾಗ ಹಂದಿಯ ಹೊಲಸುತನ ಕಂಡು ಆನೆ ಕೆಲಕ್ಕೆ(ಪಕ್ಕಕ್ಕೆ) ಸರಿದು ದಾರಿ ಬಿಟ್ಟು ಕೊಡುವುದು. ಆದರೆ ಹಂದಿಗಂಜಿ ಹಂದಿಗೆ ದಾರಿ ಬಿಟ್ಟು ಪಕ್ಕಕ್ಕೆ ಸರಿದ ಆನೆ, ಆನೆಯೇ! ಆನೆಯ ನಡವಳಿಕೆಯನ್ನು ಗಮನಿಸಿ ಹಂದಿ ತನಗಂಜಿ ದಾರಿ ಬಿಟ್ಟಿತೆಂದು ಭಾವಿಸಿದರೆ ಅದು ಅದರ ಭ್ರಮೆಯಾದೀತೇ ಹೊರತು ವಾಸ್ತವವಲ್ಲ! ಹಂದಿಯೆಂದಿಗೂ ಸಿಂಹವಾಗದು! ಅದರ ಮೂಲ ಪ್ರಾಣಿತನ ಹೋಗಲಾರದು. ಅದರಂತೆ ಲೋಕದ ಜನ ನಿಂದಕರು ಮಹಾಂತರನ್ನು ಶರಣರನ್ನು ಸದ್ಗುಣಿಗಳನ್ನು ತೆಗಳಿದರೂ ಅದಕ್ಕೆ ಪ್ರತಿಕ್ರಿಯಿಸಲಾರರು. ಮೌನವಾಗಿ ಸಮತೆಯಿಂದ ಬಂದುದನ್ನು ಸ್ವೀಕರಿಸಿ ಧೀರರಾಗಿ ಮುನ್ನಡೆಯುವರು. ಅವರ ಸಮಾಧಾನ ಸೈರಣೆಯನ್ನೇ ಹೇಡಿತನವೆಂದು ತಮಗಂಜಿದರೆಂದು ತಿಳಿದರೆ ಹಂದಿಯ ಭಾವನೆಯಂತೆ ಅದೂ ಭ್ರಮೆಯೇ! ನಿಂದನೆಗೆ, ಪರಪೀಡಕರಿಗೆ ಪ್ರತಿಕ್ರಿಯಿಸದ ಸನ್ಮಾರ್ಗಿಗಳು ಲೋಕದೊಳಗಿದ್ದು ಭಿನ್ನನಡೆಯುಳ್ಳವರು. ಅಂಥವರು ಕೇಸರಿಯಂತೆ, ಆನೆಯಂತೆ ನಿರ್ಭಯರಾಗಿಯೇ ಇರುವರು.

ಆನೆ(ಕುಂಜರ)

"ಹಿಂಡನಗಲಿ ಹಿಡಿವಡೆದ ಕುಂಜರ
ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯಾ.
ಬಂಧನಕ್ಕೆ ಬಂದ ಗಿಳಿ
ತನ್ನ ಬಂಧುವ ನೆನೆವಂತೆ ನೆನೆವೆನಯ್ಯಾ
ಕಂದಾ, ನೀನಿತ್ತ ಬಾ ಎಂದು
ನೀವು ನಿಮ್ಮಂದವ ತೋರಯ್ಯಾ, ಚೆನ್ನಮಲ್ಲಿಕಾರ್ಜುನಾ."[೧೮]

ಹಿಂಡನಗಲಿ ಪ್ರತ್ಯೇಕವಾದ ಆನೆ ಅಸಹಾಯಕತೆಯ ಸಂಕೇತವಾಗಿ ಗೋಚರಿಸುವುದು. ಅದೇ ರೀತಿ ತನ್ನ ಬಳಗದಿಂದ ಬೇರೆಯಾಗಿ ಪಂಜರ ಪಕ್ಷಿಯಾಗಿ ಬಂಧಿಯಾದ ಗಿಳಿಯ ವ್ಯಥೆಯೂ ಕರುಣಾಜನಕ! ಹಿಂಡನಗಲಿದ ಆನೆ, ಬಂಧಿಯಾದ ಗಿಳಿ ಎರಡೂ ತಮ್ಮವರ ಪ್ರೀತಿ, ಕರುಣೆ, ಸ್ನೇಹದಿಂದ ದೂರವಾಗಿ ಸದಾ ಅವರನ್ನೇ ಸ್ಮರಿಸುವವು. ಪ್ರತ್ಯೇಕತೆ ಜೀವ ಜಗತ್ತಿನ ಸಂಕುಲಕ್ಕೆಲ್ಲ ಸಂಕಟ ಉಂಟು ಮಾಡುವುದೆಂಬ ಸತ್ಯವನ್ನು ಅರಿತು, ಆ ಸಂಕಷ್ಟದ ಸ್ಥಿತಿಯನ್ನು ಪ್ರತಿಮೆಯಲ್ಲಿ ಕರುಣಾಭಾವವನ್ನು ಭಾಷೆಯಲ್ಲಿ ಹಿಡಿದಿಟ್ಟ ರೀತಿ ಅನುಪಮವಾಗಿದೆ.

ಹಿಂಡಿನಿಂದ ಬೇರೆಯಾದ ಆನೆ, ಬಂಧಿಯಾದ ಗಿಳಿಯಂತಹ ಎರಡೂ ಸ್ಥಿತಿಗಳಲ್ಲಿ ಅಕ್ಕಮಹಾದೇವಿ ಸಿಲುಕಿರುವುದನ್ನು, ತನ್ನ ಕರುಣಾಜನಕ ಮನೋವ್ಯಥೆಯನ್ನು ತನ್ನ ಆರಾಧ್ಯ ದೈವದಲ್ಲಿ ನಿವೇದಿಸಿಕೊಳ್ಳುತ್ತ ಭವಬಂಧನದಿಂದ ಪಾರುಮಾಡಿ ದೇವರ ಸ್ವರೂಪ ದರ್ಶನ ತೋರಲು ವಿನಮ್ರವಾಗಿ ಬಳಿವಿಡಿವಳು. ಎಳೆಮಗು ತಾಯಿಯಿಂದ ಕಳೆದುಹೋಗಿ ತಾಯಿಯನ್ನರಸಿ ಹುಡುಕುವ ದಯಾಮಯ ಭಾವ ವಚನದಲ್ಲಿ ಮಡುಗಟ್ಟಿದೆ. ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದ ಸಾಧಕ, ಶಿವನ ಕಾರುಣ್ಯವನ್ನು ಬಯಸುವ ವಿನಮ್ರಭಾವ, ಕಾತರ, ತೀವ್ರ ಹಂಬಲ. 'ಹಿಂಡನಗಲಿದ ಕುಂಜರ' ಪ್ರತಿಮೆಯಲ್ಲಿ ಅಭಿವ್ಯಕ್ತಗೊಂಡಿದೆ.

ಅಕ್ಕಮಹಾದೇವಿಯ ಲೋಕಾನುಭವ, ಭಾವಕ್ಕೆ ತಕ್ಕ ಭಾಷೆ, ವೈವಿಧ್ಯ, ವಸ್ತು ವಿಷಯ ಮತ್ತು ನಿರೂಪಿಸುವ ಆರ್ದ್ರಶೈಲಿಯಲ್ಲಿ ರಚಿತವಾದ ವಚನಗಳು ಮೇರು ಕಾವ್ಯಕ್ಕೆ ಸಾಕ್ಷಿಯಾಗಿವೆ. ಸೂಕ್ಷ್ಮಗ್ರಹಿಕೆ, ಅನುಭವ ವೈವಿಧ್ಯ ಸೂಕ್ತವಾದ ನುಡಿಗಡಣದಲ್ಲಿ ನಿರೂಪಿಸುವ ಸಾಮರ್ಥ್ಯ, ಶಕ್ತಿಶಾಲಿಯಾಗಿದೆ. ಭಕ್ತದೇವನ ಸ್ನೇಹಸಂಬಂಧ ಬೆಸೆಯಲು ತಾನು ಭವಕ್ಕೆ ಬಂದುದನ್ನು ಉಪಮಾಕೃತಿಗಳ ಮೂಲಕ ಶಬ್ದಚಿತ್ರದಲ್ಲಿ ಬಣ್ಣಿಸಿರುವಳು.

ಹುಲ್ಲೆ(ಜಿಂಕೆ)

"ಧರೆಯ ಮೇಗಣ ಹುಲ್ಲೆ, ಚಂದ್ರಮನೊಳಗಣ ಎರಳೆ
ಕೂರ್ತಡೆ ಫಲವೇನೋ ಕೂಟವಿಲ್ಲದನ್ನಕ್ಕ?
ಇಂಬನರಿಯದ ಠಾವಿನಲ್ಲಿ ಕಣ್ಣೋಟವ ಮಾಡಿದಡೆ,
ತುಂಬಿದ ತೊರೆಯ ನಡುವೆ ಮಾಮರ ಕಾತಂತೆ,
ಚೆನ್ನಮಲ್ಲಿಕಾರ್ಜುನ ದೇವಾ,
ದೂರದ ಸ್ನೇಹವ ಮಾಡಲು ಬಾರದ ಭವಕ್ಕೆ ಬಂದೆ."[೨೯]

ಎರಡು ದೂರದ ವಸ್ತುವಿಷಗಳು ಸಂಬಂಧ ಹೊಂದಿದ್ದರೂ ಸುಖಿಸದ ಪರಿಯನ್ನು ನಿರೂಪಿಸಲು ಧರೆಯ ಮೇಲಿನ ಜಿಂಕೆ, ಚಂದ್ರಮನೊಳಗಣ ಬಿಂಬವನ್ನು ಪ್ರತೀಕವಾಗಿ ಪ್ರತಿಮೆಯಲ್ಲಿ ಆಯ್ದುಕೊಂಡಿದ್ದಾಳೆ. ತುಂಬಿದ ತೊರೆಯ ನಡುವಣ ಮಾಮರ ಉಪಮೆ ಸಶಕ್ತವಾಗಿ ಪ್ರತಿಮೆಗೆ ವಿಶಿಷ್ಟಾರ್ಥವನ್ನು ತಂದುಕೊಟ್ಟಿದೆ. ವೈವಿಧ್ಯಮಯ ಸಂಗತಿಗಳಿದ್ದರೂ ಪ್ರತಿಮೆಯಲ್ಲಿ ಮನುಷ್ಯ ದೇವನ ಸಂಬಂಧವನ್ನು ಪುಷ್ಟೀಕರಿಸುವ ವಿಚಾರಕ್ಕೆ ಪೂರಕವಾಗಿ ಆಯತಪ್ಪದಂತೆ ಕ್ರಮಬದ್ಧವಾಗಿ ಹೆಣೆಯಲ್ಪಟ್ಟಿವೆ. ಸೂಕ್ತ ಶಬ್ಧಪಾಕದಲ್ಲಿ ಪ್ರತಿಮೆಯಲ್ಲಿ ಭಾವ ರಸಗಟ್ಟಿಯಾಗಿ ನಿಂತಿರುವಂತೆ ತೋರುತ್ತದೆ. ಉಪಮೆ, ರೂಪಕಗಳು, ವಿಭಿನ್ನವಾಗಿಯೂ ಪ್ರತಿಮೆಯ ಏಕೋಭಾವವನ್ನು ಸಶಕ್ತಗೊಳಿಸುತ್ತವೆ. ದೇವಸಾನಿಧ್ಯಕ್ಕಾಗಿ ಸದಾ ಹಂಬಲಿಸುವ ಅಕ್ಕಮಹಾದೇವಿ ಕೆಲವೊಮ್ಮೆ ತೀವ್ರ ಒತ್ತಡಕ್ಕೆ ಸಂಕಟಕ್ಕೆ ಗುರಿಯಾಗಿದ್ದಾಳೆ. ಭವಬಂಧನದ ತೊಡಕು ಪರಿಹರಿಸಿಕೊಂಡು ಭವಹರನ ಕೂಡುವುದಕ್ಕೆ ಕಾತರಳಾಗಿ ಕನವರಿಸುವ ಮತ್ತು ತನ್ನ ಕಳವಳವನ್ನು ಕಳೆದು ಕಾರುಣ್ಯ ತೋರಲು ದೇವರಲ್ಲಿ ಮೊರೆಯಿಡುವ ರೀತಿ ಕರುಣರಸದ ಪ್ರತೀಕವಾಗಿವೆ. ತನ್ನ ಭಾವನೆಗಳನ್ನು ಪ್ರಕೃತಿ, ಪ್ರಾಣಿ, ಜೀವಜಗತ್ತಿನ ದೃಷ್ಟಾಂತಗಳ ಮೂಲಕ ಚಿತ್ರಿಸಿರುವಳು. 'ಆನೆ' ಪ್ರತಿಮೆ ವಿವಿಧ ಭಾವಗಳಿಗೆ ಸೂಚಕವಾಗಿ ಅವಳ ವಚನಗಳಲ್ಲಿ ಬಳಕೆಯಾಗಿರುವುದನ್ನು ಕಾಣುತ್ತೇವೆ.

'ಪಶುವಿನ ಅಸಹಾಯಕತೆ' ವಚನಕಾರರಲ್ಲಿ ಹಲವು ರೀತಿಯಲ್ಲಿ ವ್ಯಕ್ತವಾಗಿದೆ. ಅಕ್ಕಮಹಾದೇವಿ ಮತ್ತು ಬಸವಣ್ಣನವರ ವಚನಗಳಲ್ಲಿ ಆತ್ಮವಿಮರ್ಶೆ, ಸಾಧಕನ ತಲ್ಲಣ, ದೇವಕೃಪೆಗಾಗಿ ಹಂಬಲಿಸಿದ ರೀತಿ, ಭಾಷೆ ಮತ್ತು ಭಾವಾಭಿವ್ಯಕ್ತಿಯ ಹಲವು ಸಾಮ್ಯತೆ, ಸಾಧ್ಯತೆಗಳನ್ನು ಹುಟ್ಟು ಹಾಕಿವೆ. ಪಶುವಿನ ಅಸಹಾಯಕ ಕರುಣಾಜನ ಸ್ಥಿತಿ ಅಕ್ಕಮಹಾದೇವಿಯ ವಚನದ ಪ್ರತಿಮಾಕೃತಿಯಂತೆಯ ಬಸವಣ್ಣನವರ ವಚನ ಪ್ರತಿಮೆಯಲ್ಲಿ ಪ್ರತಿಪಾದಿಸಲ್ಪಟ್ಟಿದೆ.

ಪಶು

> "ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ
> 'ಅಂಬೆ' 'ಅಂಬೆ' ಎಂದು ಕರೆಯುತ್ತಲಿದ್ದೇನೆ,
> 'ಅಂಬೆ' 'ಅಂಬೆ' ಎಂದು ಒದುರುತ್ತಲಿದ್ದೇನೆ,
> ಕೂಡಲಸಂಗಮದೇವ 'ಬಾಳು ಬಾಳೆಂಬ'ನ್ನಕ್ಕ"[೨೦]

ಈ ಪ್ರತಿಮೆಯಲ್ಲಿ ಅಸಹಾಯಕ ಧ್ವನಿ ಪ್ರತಿಧ್ವನಿತಗೊಂಡಂತೆ ಭಾಸವಾಗುತ್ತದೆ. ತನ್ನ ಬಳಗದಿಂದ ಬೇರ್ಪಟ್ಟ, ಪಶುವಿನ ವ್ಯಥೆ 'ಅಂಬೆ' ಎಂದು ಕರೆಯುವ, ಒದರುವ ಆರ್ತತೆಯ ಧ್ವನಿಗಳು ಹೃದಯಸ್ಪರ್ಶಿಯಾಗಿವೆ. ಆರಾಧ್ಯದೈವದ ಅನುಸಂಧಾನ ಮತ್ತು ಆತ್ಮ ಪರಮಾತ್ಮರ ಮಿಲನದ ಹಂಬಲ, ಅದಕ್ಕಾಗಿ ಪ್ರಾರ್ಥಿಸುವ ರೀತಿ ಅನೋನ್ಯವಾಗಿದೆ. ಶಿವನು ಸರ್ವಜಗತ್ತಿನ ಜೀವಜಾಲದ ಸಂರಕ್ಷಕ. ಬಿದ್ದವರನ್ನು ಎತ್ತುವ ದಯಾಮಯಿಯೂ! ಎಳಗರು ತಾಯಿಯನ್ನು ಹಿಂಬಾಲಿಸುವ ದೃಶ್ಯವನ್ನು 'ವೃಷಭ' ಪ್ರತಿಮೆಯಲ್ಲಿ ಹೃದಯಂಗಮವಾಗಿ ಮಹಾದೇವಿಯಕ್ಕ ಹಿಡಿದಿಟ್ಟಿರುವಳು.

ವೃಷಭ

> "ವೃಷಭನ ಹಿಂದೆ ಪಶುವಾನು ಬಂದೆನು;
> ನಂಬಿ ನಚ್ಚಿ ಪಶುವಾನು ಬಂದೆನು.
> ಸಾಕಿ ಸಲಹಿಹನೆಂದು ಸಲೆ ನಚ್ಚಿ ಬಂದೆನು.
> ಒಲಿದಹ ಒಲಿದಹನೆಂದು ಬಳಿಯಲ್ಲಿ ಬಂದೆನು.
> ಚೆನ್ನಮಲ್ಲಿಕಾರ್ಜುನಯ್ಯಾ,
> ನಿಮ್ಮ ನಂಬಿ ಬಂದ ಹೆಂಗೂಸ ಹಿಂದೊಬ್ಬರೆಳದೊಯ್ದರೆ
> ಎಂತು ಸೈರಿಸಿದೆ ಹೇಳಾ, ಎನ್ನ ದೇವರದೇವಾ?"[೨೦]

ಹಲವು ಅರ್ಥ ವಿಸ್ತಾರವನ್ನು ದಯಾರ್ದ್ರ ಭಾವವನ್ನು ಸೂಚಿಸುವ ವೃಷಭ ಪ್ರತಿಮೆಯಲ್ಲಿ ವೃಷಭ(ನಂದಿ) ದೇವನ ಪ್ರತೀಕವಾಗಿದೆ. ಹಿಂಬಾಲಿಸುವ ಪಶು ಅಸಹಾಯಕ ಮತ್ತು ತಾಯಿಯನ್ನು ನಿಶ್ಚಲವಾಗಿ ನಂಬಿರುವ ಮಗುವಿನ ಮುಗ್ಧತೆಯನ್ನು, ನಂಬಿಕೆಯ ದೃಢತೆಯನ್ನು ಸಂಕೇತಿಸುತ್ತದೆ. ದೇವನ ದಯೆಯೇ ಸರ್ವಸ್ವ ಆತನ ಕಾರುಣ್ಯದಿಂದ ತಾನು ಆನಂದವಾಗಿರಬಲ್ಲೆನೆಂಬ ವಿಶ್ವಾಸ, ದೇವರೊಡನೆ ಸಾಗುವಾಗ ಯಾವ ಭಯವೂ ಇರದೆಂಬ ನಂಬಿಕೆಯಿಂದ ಭಕ್ತ ಹಿಂಬಾಲಿಸುವನು. ಹಿಂಬಾಲಿಸಿದ ಸಂದರ್ಭದಲ್ಲೇ ಹೆಣ್ಣು ಕೂಸನ್ನು ಯಾರೋ ಎಳೆದೊಯ್ಯುವ ದೃಶ್ಯವನ್ನು ನಿರೂಪಿಸುತ್ತ, ಆ ಸ್ಥಿತಿಯಲ್ಲಿರುವ ಮಗುವನ್ನು ಬಿಟ್ಟು ಮುಂದೆ ಯೋಚಿಸದೇ ಸಾಗುವುದು ಮಾತೃಸ್ವರೂಪಿ ದೇವನಿಗೆ ತಕ್ಕುದೆ? ಎಂಬ ಪ್ರಶ್ನೆಯಲ್ಲಿಯೇ ಪ್ರತಿಮೆ ನಿಲುಗಡೆ ಹೊಂದುತ್ತದೆ. ಒಂದು ರೋಮಾಂಚಕ

ದೃಶ್ಯಕಾವ್ಯವನ್ನು ಈ ಪ್ರತಿಮೆಯಲ್ಲಿ ನಿರೂಪಿಸಿ ಅಕ್ಕಮಹಾದೇವಿ 'ನಿನ್ನ ನಂಬಿ ಬಂದ ಹೆಂಗೂಸ' ಎಂಬಲ್ಲಿ ಸ್ವತಃ ತನ್ನನ್ನೇ ಚಿತ್ರಿಸಿರುವುದು ವಿಶೇಷ. ಅಂತರಂಗದ ಭಾವ ಎಳೆಎಳೆಯಾಗಿ ಹೊರಹೊಮ್ಮಿದೆ.

ನಂಬಿದ ಭಕ್ತನನ್ನು ಕಾಯುವುದು ದೇವರ ಧರ್ಮ, ಪ್ರಾಪಂಚಿಕ ವಿಷಯಾದಿಗಳು ದೇವನ ಸಾನಿಧ್ಯಕ್ಕಾಗಿ ಹಾತೊರೆಯುವ ಭಕ್ತನನ್ನು ವಿಚಲಿಸಿದರೆ ದಯಾಪರನಾದ ದೇವನು ಸುಮ್ಮನಿರದೇ ಸಂರಕ್ಷಿಸಬೇಕೆಂಬ ವಿನಮ್ರ ಹಕ್ಕೊತ್ತಾಯ ಭಾವ ಪ್ರತಿಮೆಯಲ್ಲಿ ಮೂಡಿಬಂದಿದೆ. ಅಸಹಾಯಕತೆಯಿಂದ ಎಳಗರು ತಾಯಿಯನ್ನು, ಹಸುಳೆ ತನ್ನ ಮಾತೆಯನ್ನು ಕಾಯಬಲ್ಲರೆಂಬ ದಿಟದ ನಂಬುಗೆಯಿಂದ ಹಿಂಬಾಲಿಸುತ್ತವೆ ಎಂಬ ಲೋಕ ನೀತಿಯನ್ನು ಲೋಕೋತ್ತರ ಅನುಭಾವದೆತ್ತರಕ್ಕೆ ಕೊಂಡೊಯ್ದಿದ್ದಾಳೆ. ಚಲನಶೀಲ ದೃಶ್ಯವೊಂದನ್ನು ಭಾಷೆಯಲ್ಲಿ ಕಟ್ಟಿದ ಅಕ್ಕಮಹಾದೇವಿಯ ಕಾವ್ಯ ಪ್ರತಿಮೆ ಪದ ಮತ್ತು ಅರ್ಥಸ್ವಾರಸ್ಯದಿಂದ ಆಕರ್ಷಿತವಾಗಿದೆ.

ಸರ್ವಾಂತರಯಾಮಿಯಾಗಿರುವ ಪರಮಾತ್ಮನ ದರ್ಶನಕ್ಕಾಗಿ ತೀವ್ರತರವಾಗಿ ಹಂಬಲಿಸಿದ ಅಕ್ಕಮಹಾದೇವಿ ತನ್ನ ಅಂತರಂಗದ ವೇದನೆ, ನಿವೇದನೆ, ಸಂವೇದನಗಳನ್ನು ಪ್ರತಿಮಾಕೃತಿಯಾಗಿ ನಿರ್ಮಿಸಿ ಪ್ರಕೃತಿಯೆಲ್ಲವನ್ನು ಅದರಲ್ಲಿ ಅನಾವರಣಗೊಳಿಸಿ ಕಾವ್ಯಸೌಂದರ್ಯ ಶಬ್ಧಾರ್ಥಗಳಲ್ಲಿ ಅನುರಣಿಸುವಂತೆ ಮಾಡಿದ್ದಾಳೆ. ತನಗೆ ಶಿವನ ಸಾಕ್ಷಾತ್ಕಾರ ಮಾಡಿಸುವಂತೆ ಸಚರಾಚರ ಪ್ರಾಣಿ ಪಕ್ಷಿಗಳನ್ನೆಲ್ಲ ಆರ್ತಳಾಗಿ ಕೇಳುತ್ತ ಪ್ರಕೃತಿಯೊಡನೆ ಸಂಭಾಸಿಸುವ ದೃಶ ಪ್ರತಿಮೆಗಳಲ್ಲಿ ಹಲವು ಉಪಮೆ, ರೂಪಕ, ದೃಷ್ಟಾಂತಗಳ ಮೂಲಕ ನಿರೂಪಿತಗೊಂಡಿವೆ. ಪಕ್ಷಿಗಳ ಕಲರವದಲ್ಲಿ ಕರುಣಾಮಯಿ ದೇವನ ಸುಳಿವು ದೊರೆಯುವುದೆಂಬ ಆಶಾಭಾವನೆಯಿಂದ ಆತ್ಮೀಯತೆಯಿಂದ ಮಾತನಾಡಿಸುವ ಪಕ್ಷಿ ಪ್ರತಿಮೆ ವಿಶಿಷ್ಟವೆನಿಸಿದೆ.

ಪಕ್ಷಿ ಪ್ರತಿಮೆ

"ಚಿಲಿಪಿಲಿ ಎಂದೋದುವ ಗಿಳಿಗಳಿರಾ!
ನೀವು ಕಾಣಿರೆ, ನೀವು ಕಾಣಿರೆ.
ಸರವೆತ್ತಿ ಪಾಡುವ ಕೋಗಿಲೆಗಳಿರಾ!
ನೀವು ಕಾಣಿರೆ, ನೀವು ಕಾಣಿರೆ.
ಎರಗಿ ಬಂದಾಡುವ ತುಂಬಿಗಳಿರಾ!
ನೀವು ಕಾಣಿರೆ, ನೀವು ಕಾಣಿರೆ.
ಕೊಳನ ತಡಿಯೊಳಾಡುವ ಹಂಸೆಗಳಿರಾ!
ನೀವು ಕಾಣಿರೆ, ನೀವು ಕಾಣಿರೆ.

ಗಿರಿಗಹ್ವರದೊಳಗಾಡುವ ನವಿಲುಗಳಿರಾ,
ನೀವು ಕಾಣಿರೆ, ನೀವು ಕಾಣಿರೆ.
ಚೆನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೆ.[೨೨]

ವಿಭಿನ್ನ ಅರ್ಥಗಳನ್ನು ಗರ್ಭೀಕರಿಸಿಕೊಂಡಿರುವ ಈ ವಚನವು ವಿಶಿಷ್ಟ ಧ್ವನಿ ತರಂಗಗಳನ್ನು ಬಿಚ್ಚುತ್ತ ಕ್ರಿಯಾಶೀಲ ನಡೆಯಿಂದ ಪಕ್ಷಿಗಳ ಗುಣವಿಶಿಷ್ಟವನ್ನು ಬಣ್ಣಿಸುತ್ತದೆ. ವ್ಯಕ್ತಿಯೋರ್ವ ಕಳೆದುಹೋದ ವಸ್ತುವನ್ನು ಹುಡುಕುವ, ದಾರಿಯಲ್ಲಿ ಎದುರಾದವರನ್ನೆಲ್ಲ ವಸ್ತುವನ್ನು ನೋಡಿರುವಿರೇನು? ಎಂಬ ದೃಶ್ಯ ಚಿತ್ರಣವಿಲ್ಲಿ ಪ್ರಕಟಗೊಂಡಿದೆ. ಅಕ್ಕಮಹಾದೇವಿ ಪರಮಾತ್ಮನನ್ನು ಹುಡುಕುತ್ತ ತನಗೆದುರಾದ ಮನುಷ್ಯರನ್ನು ಕೇಳದೆ ಪ್ರಕೃತಿಯ ಅಂಗಗಳಾದ ಪಕ್ಷಿಗಳನ್ನು ಮಾತನಾಡಿಸುವುದು ವಿಶೇಷವಾಗಿದೆ. ಮನುಷ್ಯ ಪ್ರಪಂಚಕ್ಕಿಂತ ಪ್ರಕೃತಿಯೇ ಅಕ್ಕನಿಗೆ ಆಪ್ತವೆನಿಸಿದೆ.

ತೀವ್ರ ಆತುರ, ಅನ್ವೇಷಣೆ ವಚನದುದ್ದಕ್ಕೂ ಕಾಣುತ್ತದೆ. ಗಿಳಿ, ಕೋಗಿಲೆ, ದುಂಬಿ, ಹಂಸೆ, ನವಿಲುಗಳ ಕ್ರಿಯಾಶೀಲತೆ, ಅವುಗಳ ಗುಣ ವೈಶಿಷ್ಟ್ಯ, ಅವು ವಾಸಿಸುವ ಪ್ರಾಕೃತಿಕ ಪರಿಸರವನ್ನು ಪ್ರತಿಮೆ ಪ್ರತಿನಿಧಿಸುತ್ತದೆ. ಪಕ್ಷಿ ಪ್ರತಿಮೆಯಲ್ಲಿ ಶ್ಲೇಷಾರ್ಥವೂ ಅಂತರ್ಗತವಾಗಿ ಕಾವ್ಯ ಬಹುಮುಖಿ ವ್ಯಕ್ತಿತ್ವವನ್ನು ಪ್ರಕಟಿಸುತ್ತದೆ. ಮೇಲ್ನೋಟಕ್ಕೆ ಪ್ರಕೃತಿಯಲ್ಲಿಯ ಪಕ್ಷಿಗಳೊಡನೆ ಮಾತನಾಡುವಂತೆ ತೋರಿದರೂ, ವಚನಾಂತರ್ಯದಲ್ಲಿ ವಿಡಂಬನೆಯ ಧ್ವನಿಯೊಂದು ಸುಪ್ತವಾಗಿರುವಂತಿದೆ.

ಶಾಸ್ತ್ರ ಪುರಾಣ ಕಾವ್ಯಗಳನ್ನು ಕಂಠಪಾಠ ಮಾಡಿ ಮಹಾನ್ ಪಂಡಿತರೆಂದು ಬೀಗುವ ಸಾಧಕರೇ ನೀವು ದೇವರನ್ನು ಕಾಣಲಾರಿರಿ. ಸ್ವರಸಾಧಕ, ಗವಾಯಿ, ಕೀರ್ತನಕಾರಿ ಕೋಗಿಲೆಗಳು, ವಿಷಯ ವಾಸನೆ ಅಳಿಯದ ದುಂಬಿಯಂತಿರುವ ಸಾಧಕರು, ಹಂಸೆಗಳಂತೆ ಧ್ಯಾನ, ಯೋಗ, ತಪಸ್ಸು ಮಾಡುವ ಮುನಿಗಳು, ಜ್ಞಾನದಾಳಕ್ಕಿಳಿಯದ ಸುಲಭ ಸನ್ಯಾಸಿಗಳು, ಗಿರಿಗಹ್ವರಗಳಲ್ಲಿ ಕಠಿಣತಮ ಯೋಗಸಾಧನೆಗಳಲ್ಲಿ, ದೈಹಿಕ ದಂಡನೆಯಲ್ಲಿ ತೊಡಗಿದ ಸಾಧಕರು ಭಕ್ತಿ ಡಂಭಕತನದ ಪ್ರದರ್ಶನದಲ್ಲಿ ತಲ್ಲೀನರಾದ ಭಕ್ತರು, ನೀವು ಯಾರಾದರೂ ದೇವನನ್ನು ಕಂಡಿರುವರೇನು? ಎಂದು ಪ್ರಶ್ನಿಸುತ್ತ ಕಂಡಿಲ್ಲವೆಂದು ವಿಡಂಬಿಸಿದ್ದಾಳೆ.

ಅಂತರಂಗ ಶುದ್ಧಿಯಿಲ್ಲದೆ, ಬಾಹ್ಯಾಡಂಬರದ ಕ್ರಿಯಾಚರಣೆಗಳಲ್ಲಿ ಮುಳುಗಿದ ಮೌಢ್ಯತೆಯ ಮಾನವರಿಗೆ ದೇವನನ್ನು ಕಾಣಲು ಸಾಧ್ಯವಿಲ್ಲವೆಂದು ಅಕ್ಕ ನೀವು ಕಾಣಿರೆ? ಎಂದು ಪ್ರಶ್ನಿಸಿದ ಶ್ಲೇಷಾರ್ಥದಲ್ಲಿ ರಚಿಸಿದ ವಚನ ಪ್ರತಿಮಾಕೃತಿ ಅಪೂರ್ವ ಕಾವ್ಯಸೌಂದರ್ಯ ಮತ್ತು ದ್ವನಿಶಕ್ತಿಯನ್ನೊಳಗೊಂಡಿದೆ.

ಪ್ರಕೃತಿ ಪರಮಾತ್ಮನ ಅವಿನಾಭಾವ ಸಂಬಂಧವನ್ನು ಅರಿತಿರುವ ಅಕ್ಕಮಹಾದೇವಿ ಸಕಲ ಜೀವಿಗಳಿಗೂ ಆ ಸಂಬಂಧದ ಗಾಢ ಅನುಭವವಿರುವುದೆಂಬ ನಂಬಿಕೆಯಿಂದ ಪರಮಾತ್ಮನನ್ನು

ಕೂಡುವುದಕ್ಕಾಗಿ ಪ್ರಕೃತಿಯನ್ನು ಆಶ್ರಯಿಸುತ್ತಾಳೆ. ತನ್ನ ಆಶಯಕ್ಕೆ ಸಹಕರಿಸಲು ಆಗ್ರಹಿಸುತ್ತಾಳೆ. ವಿನಮ್ರವಾಗಿ ನಿವೇದಿಸಿಕೊಳ್ಳುವ ಪ್ರತಿಮೆಯಲ್ಲಿ ಪ್ರಕೃತಿ ಹಲವು ರೂಪದಲ್ಲಿ ಚಿತ್ರಿತಗೊಂಡಿದೆ.

ಅಳಿಸಂಕುಲ

"ಅಳಿಸಂಕುಲವೆ, ಮಾಮರವೆ, ಬೆಳುದಿಂಗಳೆ, ಕೋಗಿಲೆಯೆ
ನಿಮ್ಮನೆಲ್ಲರನೂ ಒಂದ ಬೇಡುವೆನು.
ಎನ್ನೊಡೆಯ ಚೆನ್ನಮಲ್ಲಿಕಾರ್ಜುನದೇವ ಕಂಡಡೆ
ಕರೆದು ತೋರಿರೆ."[೨೩]

ಈ ಪ್ರತಿಮೆಯಲ್ಲಿ ಅಕ್ಕಮಹಾದೇವಿ ಅಳಿಸಂಕುಲ ದುಂಬಿಗಳ ಸಮೂಹ, ಮಾಮರ, ಬೆಳುದಿಂಗಳು, ಕೋಗಿಲೆಗಳ ಚಿತ್ರಣವನ್ನು ಕಟ್ಟಿಕೊಡುತ್ತ ಚೈತ್ರ ಮಾಸದ ಪ್ರಾಕೃತಿಕ ಸಂಭ್ರಮ, ವಸಂತ ಋತುವಿನಲ್ಲಿ ಉಂಟಾಗುವ ಪ್ರಾಕೃತಿಕ ಬದಲಾವಣೆಗಳನ್ನು ಬಣ್ಣಿಸಿದ್ದಾಳೆ. ಹೂವಿನ ಮಕರಂದವನ್ನು ಹೀರಿ ಸಂತಸಪಡುವ ಅಳಿಸಂಕುಲ, ಚಿಗುರಿದ ಮಾಮರ, ಪೂರ್ಣಚಂದಿರನ ಬೆಳದಿಂಗಳು, ವಸಂತಾಗಮನದಿಂದ ಹಿಗ್ಗಿ ಹಾಡುವ ಕೋಗಿಲೆಗಳ ಮನದಲ್ಲಿ ಮೂಡಿದ ಮಂದಹಾಸ ತನ್ನ ಹೃದಯದಲ್ಲಿಯೂ ಹರಡಬೇಕೆಂದು ಹಂಬಲಿಸಿದ್ದಾಳೆ. ಸರ್ವಾಂತರಯಾಮಿಯಾಗಿ ಸ್ಥಾಪಿತಗೊಂಡಿರುವ ಶಿವತತ್ವ, ಸಚೇತನ, ಪ್ರಾಣದಾಧಾರ. ಪ್ರಕೃತಿಭರಿತ! ಅದರ ಆನಂದದ ಅನುಭೂತಿಗಾಗಿ ಪ್ರಾರ್ಥಿಸುವ ಪರಿ ಅನನ್ಯವಾಗಿದೆ, ನಿರಾಕಾರ ದೇವಶಕ್ತಿಯನ್ನು ಸಾಕಾರವಾಗಿರುವ ಪ್ರಕೃತಿಯಲ್ಲಿ ಅರಸುವ ಅಕ್ಕನ ಚೆನ್ನಮಲ್ಲಿಕಾರ್ಜುನ ಚೇತನಶಕ್ತಿ, ಕ್ರಿಯಾಶೀಲ, ಜೀವ ವೈವಿಧ್ಯದಲ್ಲಿ ಉಪಸ್ಥಿತಿ. ಆ ಆನುಭಾವಿಕ ನೆಲೆ ತನಗೆ ದೊರಕಲಿ ಎಂಬ ಅದಮ್ಯ ಬಯಕೆ ಅವಳದು. ಚೈತ್ರದ ಚೈತನ್ಯ ನವಹುರುಪು ವಚನದಲ್ಲಿ ಬೆರೆತು ಪ್ರಕೃತಿಯ ಸಾಕ್ಷಾತ್ ದರ್ಶನ ಮಾಡಿದ ಅನುಭವವುಂಟಾಗುತ್ತದೆ. ಬೇಡಿಕೆಯು ವಿವಿಧ ಆಯಾಮಗಳಲ್ಲಿ ಸಂಚರಿಸುತ್ತ ಪ್ರತಿಮೆಯು ಪರಿಭಾವಿಸಿದಷ್ಟು ಅರ್ಥವಿಸ್ತಾರವನ್ನು ಧ್ವನಿಸುತ್ತದೆ.

ಅಕ್ಕನ ಪ್ರತಿಮಾ ನಿರ್ಮಾಣಶಕ್ತಿ, ಜಾಣ್ಮೆಗಳು ಹಲವಾರು ವಚನಗಳಲ್ಲಿ ಗೋಚರಿಸುತ್ತವೆ. ಮೂರ್ತ ಅನುಭವಗಳ ಮುಖೇನ ಅನುಭಾವಿಕ ನೆಲೆಯನ್ನು, ಅಮೂರ್ತ ಆನಂದವನ್ನು ಭಾವಗಮ್ಯವಾಗಿಸುವ ಕುಶಲತೆ ಎದ್ದು ತೋರುತ್ತದೆ. ಅಕ್ಕನ ಜೀವನ ಮತ್ತು ವಚನಗಳು ಒಂದು ಮತ್ತೊಂದರ ಪ್ರತಿರೂಪ. ಜೀವನಾನುಭವ ವಚನದಲ್ಲಿ ಮಡುಗಟ್ಟಿ ಕಾವ್ಯಶಕ್ತಿ ಹೊಳೆಯುತ್ತಿದೆ. ದೇವನಿಗಾಗಿಯೇ ಕಾಯುತ್ತ ಕನವರಿಸುತ್ತ ಅವನಲ್ಲದೆ ಮತ್ತೊಂದನರಿಯಳು. ಹಿಡಿಗೆ ಬಾರದ, ತಡೆಗೆ ನಿಲುಕದ ದೇವರನ್ನು ದಕ್ಕಿಸಿಕೊಳ್ಳುವ ದೃಢನಿಲುವು ಅಭಿವ್ಯಕ್ತಗೊಂಡ ಪಕ್ಷಿ ಪ್ರತಿಮೆ ಅಕ್ಕನ ಅಚಲ ಮನೋಭಾವಕ್ಕೆ ಸಾಕ್ಷಿಯಾಗಿದೆ.

ನವಿಲು

"ಗಿರಿಯಲಲ್ಲದೆ ಹುಲ್ಲು ಮೊರಡಿಯಲ್ಲಾಡುವುದೆ ನವಿಲು?
ಕೊಳಕ್ಕಲ್ಲದೆ ಕಿರುವಳ್ಳಕ್ಕೆಳಸುದೆ ಹಂಸೆ?
ಮಾಮರ ತಳಿತಲ್ಲದೆ ಸರಗೈವುದೆ ಕೋಗಿಲೆ?
ಪರಿಮಳವಿಲ್ಲದ ಪುಷ್ಪಕ್ಕೆಳಸುವುದೆ ಭ್ರಮರ?
ಎನ್ನ ದೇವ ಚೆನ್ನಮಲ್ಲಿಕಾರ್ಜುನಂಗಲ್ಲದೆ
ಅನ್ಯಕ್ಕೆಳಸುವುದೆ ಎನ್ನ ಮನ?
ಪೇಳಿರೆ ಕೆಳದಿಯರಿರಾ!"[೨೪]

ವಚನ ಪ್ರತಿಮೆಯಲ್ಲಿ ಚಿತ್ರಿತವಾಗಿರುವ ನವಿಲು, ಹಂಸೆ, ಕೋಗಿಲೆ, ಭ್ರಮರಗಳ ಗುಣಶ್ರೇಷ್ಠತೆಯನ್ನು ಅವುಗಳ ಪ್ರಾತಿನಿಧಿಕ ಯೋಗ್ಯವಾದ ಪ್ರಾಕೃತಿಕ ಪರಿಸರವನ್ನು ಸಂಕೇತಿಸುತ್ತವೆ. ವಿಶಾಲವಾದ ಗಿರಿ, ಪರ್ವತಗಳಲ್ಲಿ ನವಿಲು ನರ್ತಿಸುವುದೇ ಹೊರತು ಹುಲ್ಲಿನ ಸಣ್ಣ ದಿನ್ನೆಯಲ್ಲಿ ಆಡುವುದಿಲ್ಲ. ಹಂಸ ಪಕ್ಷಿಯು ಸರೋವರದಲ್ಲಿ ವಾಸಿಸುವುದೇ ವಿನಃ ಕಿರಿದಾದ ಹಳ್ಳದಲ್ಲಲ್ಲ. ಕೋಗಿಲೆ ಮಾವು ಚಿಗುರುವ ಸಮಯದಲ್ಲಿ ಸುಮಧುರವಾಗಿ ಹಾಡುವುದು. ಹೂವಿನ ಸುಗಂಧಕ್ಕಲ್ಲದೆ, ಅಂಥಹ ಹೂವಿನ ಸಾಮಿಪ್ಯಕ್ಕೆ ಅಲ್ಲದೆ ಅನ್ಯಕ್ಕೆ ಎಳಸದ ದುಂಬಿ ಗುಣಗ್ರಾಹಿತ್ವವುಳ್ಳದ್ದು. ಇವೆಲ್ಲ ಪ್ರಕೃತಿದತ್ತವಾದ ಪಕ್ಷಿ ಸಂಸ್ಕೃತಿಯಂತೆ ಶರಣ ಮಾರ್ಗದಲ್ಲಿ ತನ್ಮಯಳಾದ ಅಕ್ಕಮಹಾದೇವಿ ತನ್ನ ಆರಾಧ್ಯದೇವನ ವಿನಃ ಮತ್ತೊಂದನರಿಯಳು. ಸದಾ ಲಿಂಗಾನುಸಂಧಾನದಲ್ಲಿ ತಲ್ಲೀನಳಾದ ತನ್ನ ಅಂತರಂಗವನ್ನು ಕೆಳದಿಗೆ ಹೇಳುವ ಧಾಟಿ ಆತ್ಮೀಯ ಭಾವವನ್ನು ಅಭಿವ್ಯಕ್ತಿಗೊಳಿಸುತ್ತದೆ.

ವಿವಿಧ ಪಕ್ಷಿಗಳ ದೃಷ್ಟಾಂತಗಳು ಪ್ರತಿಮೆಗೆ ಪೂರಕವಾಗಿವೆ. ಆತ್ಮನಿರೀಕ್ಷಣೆ, ಲಿಂಗಾನುರಾಗದಲ್ಲಿ ತಾದಾತ್ಮ್ಯಭಾವ ಹೊಂದಿದ ಮೇರು ನಿಲುವನ್ನು ಶರಣಸ್ಥಲದಲ್ಲಿ ವಿರಮಿಸಿದ ಭಕ್ತನ ಭಾವ ಔನತ್ಯವನ್ನು ಪುಷ್ಟೀಕರಿಸಲು, ಪಕ್ಷಿಗಳು ಪ್ರಾಕೃತಿಕ ಪರಿಸರ ಸೊಗಸಾಗಿ ನಿರೂಪಿತಗೊಂಡಿದೆ. ಪ್ರತಿಮೆಯಲ್ಲಿ ಚಲನಶೀಲತೆ ಕಂಡು ಬಂದರೂ, ತಟ್ಟನೆ ನಿರ್ಧರಿತ ಭಾವವನ್ನು ಪ್ರಕಟಿಸುವ ಆತುರತೆಯಿಲ್ಲ.

'ಗಿರಿ' ಹುಲ್ಲುಮೊರಡಿ, ಕೊಳ 'ಕಿರುವಳ್ಳ' ನವಿಲು, ಕೋಗಿಲೆ, 'ದುಂಬಿ' ಪದಗಳು ಪ್ರತಿಮಾಕೃತಿಯ ಚೆಲುವನ್ನು ಇಮ್ಮಡಿಗೊಳಿಸಿವೆ. ಪ್ರತಿಮೆ ಪ್ರಶ್ನೆಗಳನ್ನೊಳಗೊಂಡ 'ಉತ್ತರದ' ಮತ್ತೊಂದು ಆಯಾಮವನ್ನು ಒಳಗೊಂಡು ಅನುಭವ ವಿಸ್ತಾರಗೊಳ್ಳುತ್ತ ಪೂರ್ಣಗೊಳ್ಳುತ್ತದೆ. ನವಿಲು, ಹಂಸ, ಕೋಗಿಲೆ, ದುಂಬಿಗಳು ಶರಣರ ಗುಣ ಶ್ರೇಷ್ಠತೆಯನ್ನು ಬಣ್ಣಿಸಲು ಬಳಕೆಯಾಗಿರುವಂತೆಯೇ, ಮಾನವರ ವ್ಯರ್ಥ ಪ್ರಯತ್ನವನ್ನು ಸಾಧನೆಯ ಅನುಭಾವವನ್ನು ಪಡೆಯದೆ, ಡಂಭಾಚಾರದ

ಕಸರತ್ತುಗಳನ್ನು ಮಾಡುವ ಅಳಿಮನದವರ ನಡವಳಿಕೆಗಳನ್ನು ವಿಡಂಬಿಸಲು ಹಲವು ವಚನಗಳಲ್ಲಿ ಉಪಯೋಗಿಸಲ್ಪಟ್ಟಿವೆ. ಆಯಾ ಸಂದರ್ಭದ ನೈಜ ಚಿತ್ರಣವನ್ನು ಕಟ್ಟಿಕೊಡಲು ಮಹಾದೇವಿಯಕ್ಕ ಪಕ್ಷಿ ಪ್ರತಿಮೆಗಳನ್ನು ಬಳಸಿ ವಚನಕ್ಕೆ ಅರ್ಥ ವೈಶಿಷ್ಟ್ಯವನ್ನು ತಂದುಕೊಟ್ಟಿದ್ದಾಳೆ.

ಮಹಾದೇವನನ್ನೆ ಮನದೊಡೆಯನಾಗಿ ಮಾಡಿಕೊಂಡ ಮಹಾದೇವಿಯಕ್ಕ ಅವನೊಂದಿಗೆ ಸಾಮರಸ್ಯ ಹೊಂದಲು ಹವಣಿಸುತ್ತ ಸಮಾಗಮಕ್ಕಾಗಿ ಹಾತೊರೆಯುವ ಅವಳ ದೈವೀ ಪ್ರೇಮ, ಉತ್ಕಟವಾದ ಆಕಾಂಕ್ಷೆ ಲೌಕಿಕ ಪ್ರೇಮಿಗಳ ಸ್ನೇಹ ವಿರಹದಂತೆಯೇ ತೋರುತ್ತದೆ. ಆದರೂ ಅನುಭಾವಿಕ ನೆಲೆಯಲ್ಲಿ ಅಭಿನ್ನವಾಗಿ ಆನಂದದ ಅನುಭೂತಿಯನ್ನು ಉಂಟುಮಾಡುತ್ತದೆ. ಅನುಭಾವಿಕ ಸ್ಥರವನ್ನು ಸರಳ ಶಬ್ಧಗಳಲ್ಲಿ ಪಕ್ಷಿ ಪ್ರತಿಮೆಯಲ್ಲಿ ಹಿಡಿದಿಟ್ಟ ರೀತಿ ಸತ್ವಯುತವಾಗಿದೆ.

ಅಲೌಕಿಕ ಆನಂದಕ್ಕಾಗಿ ತುಡಿಯುವ ಅಕ್ಕನ ಮನಸ್ಸು ಕೆಲವೊಮ್ಮೆ ಸಾಂಸಾರಿಕ ಸಂಘರ್ಷ ಕ್ಕೊಳಗಾಗಿ ದಿಕ್ಕು ಗಾಣದಂತೆ ಮಾಡುವದು. ದೇಹ ಮನಸ್ಸಿನ ಆಂತರಿಕ ಹೊಯ್ದಾಟಗಳನ್ನು ಕೊನೆಗಾಣಿಸಿ ಘನಕ್ಕೆ ಘನವಾದ ಪರವಸ್ತುವಿನಲ್ಲಿ ಲೀನಗೊಳಿಸಬೇಕೆಂಬ ನಿವೇದನೆಯನ್ನು ತನ್ನ ಆರಾಧ್ಯದೇವನಲ್ಲಿ ಮಾಡಿಕೊಳ್ಳುತ್ತ 'ಜಕ್ಕವಕ್ಕಿ' ಉಪಮೆಯುಳ್ಳ ವಚನ ಪ್ರತಿಮೆಯಲ್ಲಿ ತನ್ನ ಬಯಕೆಯನ್ನು ಹೃದ್ಯವೇದ್ಯವಾಗುವಂತೆ ಚಿತ್ರಿಸಿರುವಳು.

ಜಕ್ಕವಕ್ಕಿ

"ಕಾಯದ ಕಳವಳದ ಕೆಡಿಸಿ, ಮನದ ಮಾಯೆಯ ಮಾಣಿಸಿ,
ಎನ್ನ ಹರಣವ ಮೇಲೆತ್ತಿ ಸಲಹಿದೆಯಯ್ಯಾ.
ಶಿವಶಿವಾ, ಎನ್ನ ಭವಬಂಧನವ ಬಿಡಿಸಿ,
ನಿಮ್ಮತ್ತ ತೋರಿದ ಘನವನುಪಮಿಸಬಾರದಯ್ಯಾ.
ಇರುಳೋಸರಿಸಿದ ಜಕ್ಕವಕ್ಕಿಯಂತೆ
ನಾನಿಂದು ನಿಮ್ಮ ಶ್ರೀಪಾದವನಿಂಬುಗೊಂಡು
ಸುಖದೊಳೋಲಾಡುವೆನಯ್ಯಾ, ಚೆನ್ನಮಲ್ಲಿಕಾರ್ಜುನಾ."[೨೫]

ಅಕ್ಕಮಹಾದೇವಿಯ ಬಹುಪಾಲು ವಚನಗಳು ಅವಳ ಜೀವನ, ಹೋರಾಟ ಆಧ್ಯಾತ್ಮಿಕ ಅನುಭೂತಿಗಾಗಿ ನಡೆಸಿದ ಸಂಘರ್ಷದ ವಿವಿಧ ಮನಸ್ಥಿತಿಗಳನ್ನು ಒಳಗೊಂಡು, ವ್ಯಕ್ತಿಗತ ಧೋರಣೆಯೇ ಸಾಹಿತ್ಯಿಕ ಧೋರಣೆಯಾಗಿ, ಜೀವನದ ಪ್ರತಿಕೃತಿಯೆಂಬಂತೆ ಪ್ರತಿಮಾರೂಪದಲ್ಲಿ ಅಭಿವ್ಯಕ್ತಗೊಂಡಿದೆ. 'ಜಕ್ಕವಕ್ಕಿ' ಪಕ್ಷಿ ಪ್ರತಿಮೆಯಲ್ಲಿ ಭಕ್ತನ ಸಾಧನೆಯ ಸಿದ್ಧಿಯ ಆನಂದದ ಮನಸ್ಥಿತಿಯ ಚಿತ್ರಣ ದೊರೆಯುತ್ತದೆ. ಇರುಳೋಸರಿಸದ 'ಜಕ್ಕವಕ್ಕಿ' ಭಗವಂತನಿಂದ ಆತನ ಕಾರುಣ್ಯವಿಲ್ಲದೆ ಕಳವಳಿಸುವ ಭಕ್ತನ ಜೀವನವನ್ನು ಸಾಂಕೇತಿಸುತ್ತದೆ.

ವಿವಿಧ ಕಾರಣಗಳಿಂದ ಕಸಿವಿಸಿಗೊಳ್ಳುವ ಶರೀರ, ಮನಸ್ಸಿನ ವ್ಯಾಮೋಹ, ನಾನು ನನ್ನದೆಂಬ ಅಹಂಕಾರ ಮಮಕಾರದ ಮಾಯೆ, ಆಶೆಯನ್ನು ಹೋಗಲಾಡಿಸಿ ಪ್ರಾಣವನ್ನು ಊರ್ಧ್ವಮುಖಗೊಳಿಸಿ ಸುಜ್ಞಾನದೆಡೆಗೆ ಕರೆದೊಯ್ದು ಭವಬಂಧನ ಬಿಡಿಸಿ, ಮನಕ್ಕೆ 'ಶಿವಮಂತ್ರ' ಕರುಣಿಸಿ ಘನವಾದ ಪರವಸ್ತುವಿನಲ್ಲಿ ಸಮರಸಗೊಂಡ ಮನದ ಆನಂದಾತಿಶಯ ವರ್ಣಿಸಲಸದಳ!

ಕತ್ತಲೆಯಲ್ಲಿ ಬೇರೆಯಾಗಿ ಕಳವಳಿಸುವ ಜೋಡಿ ಜಕ್ಕವಕ್ಕಿ(ಚಕ್ರವಾಕ ಪಕ್ಷಿ)ಗಳು, ಸಂಗ ಸಾನಿಧ್ಯಕ್ಕಾಗಿ ಹಾತೊರೆಯುವಂತೆ ದೇವನ ಚರಣದಲ್ಲಿ ಒಂದಾಗಿ ಸುಖ ಸಾಗರದಲ್ಲಿ ವಿರಮಿಸಿದ ಧನ್ಯತೆ ತನ್ನದೆಂದು ಅಕ್ಕ ಬಣ್ಣಿಸುತ್ತಾಳೆ. ಪ್ರತಿಮೆಯಲ್ಲಿ ಇರುಳೋಸರಿಸದ 'ಜಕ್ಕವಕ್ಕಿ' ಅಪೂರ್ವ ಧ್ವನಿರಮ್ಯತೆಯಿಂದ ಅಭಿವ್ಯಕ್ತಗೊಂಡಿದೆ. ಸಾಧಕನ ಜೀವನದಲ್ಲಿ ಪ್ರಣಯದ ಜೋಡಿಗಳು ಬೇರೆಯಾಗಿ ರಾತ್ರಿಯಿಡಿ ಸಂಗ ಸುಖಕ್ಕಾಗಿ ತವಕಿಸುವ ಪ್ರಸಂಗದಂತಹ ಮನಸ್ಥಿತಿ ಉಂಟಾಗುವುದು. ಅಗಲಿದಾಗಿನ ತೀವ್ರಾಸಕ್ತಿ, ಕುತೂಹಲ, ಕಳವಳ, ಜೋಡಿಗಳು ಒಂದಾಗಿ ಬೆರೆತು ಬೇರೆಯಾಗದ ಆನಂದದ ಭಾವಪರವಶತೆ, ಎರಡನ್ನೂ ಪ್ರತಿಮೆಯಲ್ಲಿ ಜೋಡಿಸಿ ಅರ್ಥ, ಭಾವ, ಲಯಗಳು ಮೇಳವಿಸಿ ಶೃಂಗಾರ, ವಿರಹ, ಮಿಲನಗಳ ಭಾವ ವೈವಿಧ್ಯವನ್ನು ಸಹಜವಾಗಿ ಮೂರ್ತಗೊಳಿಸಿರುವುದು ಅಕ್ಕನ ಅನಾದೃಶ್ಯ ಕಾವ್ಯಪ್ರತಿಭಾಶಕ್ತಿಗೆ ಸಾಕ್ಷಿಯಾಗಿದೆ. ಶರಣಸತಿ–ಲಿಂಗಪತಿ ಬರುವಿಕೆಗಾಗಿ ಹಂಬಲಿಸಿ ಹಾತೊರೆಯುವ ಬರುವನೆಂದು ಹಾದಿ ನೋಡುವ ಸಾಧಕನ ಮನಸ್ಥಿತಿಯ ತಲ್ಲಣವನ್ನು 'ಜಕ್ಕವಕ್ಕಿ' ಪಕ್ಷಿ ಪ್ರತಿಮೆಯಲ್ಲಿ ಮಹಾದೇವಿಯಕ್ಕ ಸಮರ್ಪಕವಾಗಿ ಸೂತ್ರೀಕರಿಸಿದ್ದಾಳೆ.

ಜಕ್ಕವಕ್ಕಿ

"ಬಂದಹನೆಂದು ಬಟ್ಟೆಯ ನೋಡಿ
ಬಾರದಿದ್ದೊಡೆ ಕರಗಿ ಕೊರಗಿದೆನವ್ವಾ,
ತಡವಾದರೆ ಬಡವಾದೆ ತಾಯೆ,
ಚೆನ್ನಮಲ್ಲಿಕಾರ್ಜುನನ ಒಂದಿರುಳಗಲಿದಡೆ
ತಕ್ಕೆಸಡಲಿದ ಜಕ್ಕವಕ್ಕಿಯಂತಾದೆನವ್ವಾ"[೨೬]

ಪ್ರಣಯದ ಪರವಶಭಾವ ಇರುಳಿನಲ್ಲಿ ಆಲಿಂಗಿನವಿಲ್ಲದ ವಿರಹ ವೇದನೆ, ಕಾಯ, ಜೀವ, ಭಾವಗಳಲ್ಲಿ ದೇವನ ಸಾನಿಧ್ಯಕ್ಕಾಗಿ, ಸಮರಸಕ್ಕಾಗಿ ಪರಿತಪಿಸುವ ವಿರಹಿಣಿಯ ಪ್ರೇಮಾಲಾಪವನ್ನು ನಿರೂಪಿಸಲು 'ತೆಕ್ಕೆಸಡಲಿದ ಜಕ್ಕವಕ್ಕಿ' ಉಪಮೆಯನ್ನು ಪ್ರತಿಮಾ ನಿರ್ಮಿತಿಯಲ್ಲಿ ಅಕ್ಕಮಹಾದೇವಿ ಬಳಸಿ ವಿರಹದುರಿಯ ಪರಿಣಾಮವನ್ನು ಲೋಕಾಂತಗೊಳಿಸಿರುವಳು.

ನಲ್ಲನ ಬರುವಿಕೆಗಾಗಿ ದಾರಿ ಕಾಯುತ್ತ, ಬಾರದಿದ್ದಡೆ ಕರಗಿ ಕೊರಗುವ ಸತಿಯ ತಲ್ಲಣದ ಹೃದಯ ವೇದನೆಯ ಚಿತ್ರಣ, ಕರುಣಾಜನಕ ಸ್ಥಿತಿ ಪ್ರತಿಮೆಯ ಪ್ರಧಾನ ವಸ್ತು ವಿಷಯ. ದಾರಿ

ನೋಡಿ ದೀನಳಾಗಿ ಸೊರಗಿದ ಸತಿಯು ಅಗಲಿಕೆ ಸಹಿಸದ ನೋವು ಆಲಿಂಗನದಿಂದ ದೂರವಾದ ಚಕ್ರವಾಕ ಪಕ್ಷಿಯ ಕೂಗಿನಂತೆ ಇರುಳೆಲ್ಲ ಧ್ವನಿಗೈಯುತ್ತಾಳೆ. ಬಸವಳಿಯುತ್ತಿರುವ ತೀವ್ರ ಹಂಬಲದ ಪ್ರಣಯಿನಿಯ ನೋವಿನ ಭಾವ, ಅಗಲಿದ ಸತಿಯ ಪ್ರತಿಮೆಯಲ್ಲಿ ಆರ್ದ್ರಭಾವ ಸೂಕ್ಷ್ಮ ಸಂವೇದನೆಗಳೆಲ್ಲ ಏಕಕಾಲಕ್ಕೆ ಅನುಭವ ವೇದ್ಯವಾಗುತ್ತವೆ.

ದೇವನೊಲುಮೆಗೆ ದಾರಿ ಕಾಯ್ದು ದಣಿದು ಬಸವಳಿದ ಭಕ್ತನ ತೀವ್ರ ಆಕಾಂಕ್ಷೆ ವಚನದಲ್ಲಿನ ಭಾವವು ಅನ್ಯ ಹೃದ್ಯವೇದ್ಯವಾಗುವ ಪ್ರತಿಮಾಕೃತಿಯಾಗಿದೆ. "ಅಕ್ಕನು ನಿರಂತರವಾಗಿ ಪ್ರಕೃತಿ ಶಕ್ತಿಯನ್ನು ತನ್ನ ಒಳಗೂ ಮತ್ತು ಹೊರಗೂ ಶೋಧಿಸಿಕೊಂಡಿದ್ದಾಳೆ. ಅವಳ ಸೌಂದರ್ಯಪ್ರಜ್ಞೆ ಒಂದು ದಿವ್ಯಕ್ರಿಯಾಶೀಲತೆ. ಪ್ರಖರ ಸೃಜನಶೀಲತೆ. ಒಂದು ಮಹಾನ್ ಸಾಮುದಾಯಿಕ ಚಲನಶೀಲತೆ. ಅದಕ್ಕೇ ಅಕ್ಕ "ಚಿಲಿಮಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೆ ...." ಎನ್ನುತ್ತಾ ಪ್ರಕೃತಿಯ ಶೃಂಗಾರ ಮತ್ತು ಸಖ್ಯದ ಜೀವರಾಶಿಗಳ ಜೊತೆ ಸಂವಾದಿಸುತ್ತಾಳೆ. ತನ್ನ ಆತ್ಯಂತಿಕ ಆನಂದದ ಸಂಗಾತಿಯನ್ನು ಪ್ರಕೃತಿಯಲ್ಲೇ ಹುಡುಕುತ್ತಾಳೆ."[೨೭]

ಮೇಲ್ನೋಟಕ್ಕೆ ಅಕ್ಕನ ವಚನಗಳಲ್ಲಿ ಸಂಸಾರ ಮಾಯೆ, ತಾಜ್ಯವೆಂದು ತೋರಬಹುದಾದರೂ, ಸಂಸಾರ, ಸಂಗಾತಿಯ ಬಯಕೆ, ಪ್ರೇಮದ ಉತ್ಕಟತೆ, ಪ್ರೇಮಿಯೊಂದಿಗಿನ ತಾದಾತ್ಮ್ಯತೆ ಪ್ರಿಯಕರನಿಗಾಗಿ ಹಂಬಲಿಸುವ, ಪರಿತಪಿಸುವ, ಸರಸಭಾವ ಪ್ರೇಮಭಾವದಲ್ಲಿಯ ತನ್ಮಯತೆ ಪ್ರಣಯಿನಿಯ ಶೃಂಗಾರ ವಿರಹ ಮಿಲನದ ಭಾವಲಹರಿಗಳು ಲೋಕದ ಜನರಿಗಿಂತ ಹೆಚ್ಚಾಗಿತ್ತೆಂಬ ಅಂಶ ಅವಳ ಹಲವು ವಚನಗಳ ಪ್ರತಿಮಾಕೃತಿಗಳಲ್ಲಿ ಕಾಣಸಿಗುತ್ತದೆ.

ಲೋಕದ ರೀತಿ ನೀತಿಗಳನ್ನು ವಿರೋಧಿಸಿ ವಿಮರ್ಶಿಸಿ, ವಿಡಂಬಿಸುವ ಚಿಂತನಶೀಲ ಮನಸ್ಸೊಂದು ಅವಳಲ್ಲಿರುವುದು ಅವಳ ಕ್ರಿಯಾಶೀಲತೆಗೆ ಪುರಾವೆಯನ್ನೊದಗಿಸುತ್ತವೆ. ಅವಳಲ್ಲೊಬ್ಬ ಜೀವನ್ಮುಖಿ, ಇರುವುದನ್ನು ಲೋಕನೀತಿಗಳ ಬಗೆಗಿನ ಕಾಳಜಿಯನ್ನು ಪುಷ್ಟೀಕರಿಸುವ ಹಲವು ವಚನಗಳಿವೆ. ಪ್ರಕೃತಿ, ಅದರ ಅಂಗಗಳಾದ ಪ್ರಾಣಿ, ಪಕ್ಷಿ, ಮರಗಿಡ, ಕಲ್ಲು ಬೆಟ್ಟಗಳೆಲ್ಲ ಜೀವಂತಿಕೆ ಪಡೆದುಕೊಂಡು ಮಾನವರ ನಡವಳಿಕೆಗಳಿಗೆ ಮಾರ್ಗದರ್ಶಿ ಎಂಬುದನ್ನು ಗುರುತಿಸಿರುವ ವಚನ ಪ್ರತಿಮೆಯಲ್ಲಿ ಅಂಧಶ್ರದ್ಧೆಯನ್ನು ವಿಡಂಬಿಸಲು 'ಗಿಳಿ' ಉಪಮೆಯನ್ನು ಉಪಯೋಗಿಸಿರುವಳು.

'ಅರಗಿಳಿ'

"ಕರುವಿನ ರೂಹು ಅರಗಿಳಿಯನೋದಿಸುವಂತೆ,
ಓದಿಸುವುದಕ್ಕೆ ಜೀವವಿಲ್ಲ; ಕೇಳುವುದಕ್ಕೆ ಜ್ಞಾನವಿಲ್ಲ,
ಚೆನ್ನಮಲ್ಲಿಕಾರ್ಜುನಯ್ಯಾ,

ನಿಮ್ಮನರಿಯದವನ ಭಕ್ತಿ

ಕರುವಿನ ರೂಹು ಆ ಅರಗಿಳಿಯನೋದಿಸುವಂತೆ"[೨೮]

ಅಕ್ಕಮಹಾದೇವಿಯ ಲೋಕಾನುಭವ ಅಗಾಧ! ವೈವಿಧ್ಯಮಯ! ಲೋಕದ ನಿತ್ಯದ ಅನುಭವಗಳಿಂದ ಲೋಕೋತ್ತರ ಅನುಭಾವವನ್ನು ಶಬ್ಧದಲ್ಲಿ ಸಂಗ್ರಹಿಸಿ ತತ್ವಸಾರವನ್ನು ಸಂಕ್ಷಿಪ್ತವಾಗಿ ಪ್ರತಿಮಾರೂಪದಲ್ಲಿ ನಿರೂಪಿಸುವ ಪ್ರತಿಮಾ ನಿರ್ಮಿತಿ ಕಲೆ ಅಪೂರ್ವವಾಗಿದೆ. ಪ್ರತಿಮೆಯಲ್ಲಿ ಎರಡು ಬೇರೆ ಬೇರೆ ಸಂದರ್ಭದ ರೂಪಕಗಳನ್ನು ಏಕೀಕರಿಸಿ, ಅನುಭಾವಿಕ ನೆಲೆಯನ್ನು ಬಿತ್ತರಿಸುವ ಅಕ್ಕ ಕ್ರಿಯಾ ಜ್ಞಾನ ಸಮನ್ವಯ ಸಿದ್ಧಾಂತವನ್ನು ಪ್ರತಿಪಾದಿಸುವಳು. ಕರು–ಶಿಷ್ಯನನ್ನು ಸಂಕೇತಿಸಿದರೆ, 'ಅರಗಿಳಿ' ಮನಸ್ಸಿನ ಪ್ರತೀಕವಾಗಿದೆ. ಕರುವನ್ನು ಕಂಡಾಗ ತಾಯಿಗೆ ವಾತ್ಸಲ್ಯ ಹೆಚ್ಚುವುದು. ಕರುವನ್ನು ಪ್ರೀತಿಸುತ್ತ ಆಕಳು ಹಾಲನ್ನು ಕರೆಯುತ್ತದೆ. ಪ್ರೀತಿಯಿಂದ ಗಿಳಿಗೆ ಮಾತು ಕಲಿಸಲು ಬರುತ್ತದೆ. ಗುರುವೆಂಬ ತಾಯಿ ಶಿಷ್ಯನೆಂಬ ಕರುವಿಗೆ ಜ್ಞಾನದಮೃತವನ್ನು ಶಿಷ್ಯವಾತ್ಸಲ್ಯದಿಂದ ಧಾರೆ ಎರೆಯುವನು. ಗುರುವಿನ ಜ್ಞಾನಾಮೃತವನ್ನು ಆಲಿಸುವ ಮನಸ್ಸೆಂಬ ಅರಗಿಳಿ ಸ್ವತಂತ್ರವಲ್ಲ. ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳಲ್ಲಿ ಸಿಲುಕಿ ಅಸ್ತಿತ್ವವನ್ನು ಕಳೆದುಕೊಳ್ಳಲೂಬಹುದು.

ಗುರುವಿನ ಕೃಪೆಯಿಂದ ಜ್ಞಾನ ಸಂಪಾದಿಸಿ ಪರಮಾತ್ಮನನ್ನು ಅರಿಯಲು ಸಾಧ್ಯ. ವ್ಯತಿರಿಕ್ತವಾಗಿ ಅಂಧಶ್ರದ್ಧೆ, ಡಾಂಭಿಕ ಆಚರಣೆಗಳಲ್ಲಿ ತೊಡಗಿದರೆ ಶಿವನ ಸಾನಿಧ್ಯ ಹೊಂದಲು ಸಾಧ್ಯವಾಗದೆಂಬ ಸತ್ಪಥವನ್ನು ಅರುಹಿಸಿದ್ದಾಳೆ ಅಕ್ಕಮಹಾದೇವಿ. ಅಜ್ಞಾನದಿಂದ ಕೂಡಿದ ವ್ಯರ್ಥ ಆಚರಣೆಗಳಿಂದ ಡಾಂಭಿಕ ಭಕ್ತಿಯಿಂದ ದೇವನೊಲುಮೆ ಸಾಧ್ಯವಿಲ್ಲ. ಸರ್ವ ಸಮರ್ಪಣೆಯ ಭಕ್ತಿಯಿಂದ ಪರಮಾತ್ಮನ ನಿಲುವನ್ನು ಅರಿಯಲು ಸುಲಭ ದಾರಿಯೆಂಬ ಸುಜ್ಞಾನ ಸತ್ಕ್ರಿಯೆಗಳ ಸಮನ್ವಯದ ಷಟಸ್ಥಲ ಮಾರ್ಗವನ್ನು ಅಕ್ಕ ಅರಗಿಳಿ ಪ್ರತಿಮೆಯಲ್ಲಿ ಅರುಹುತ್ತಾಳೆ.

ಸಂಸಾರ ವ್ಯಾಮೋಹ ತೊರೆದ ಅಕ್ಕಮಹಾದೇವಿ ಶರಣರ ಮೋಹದ ಮಗಳಾಗಿ ಬೆಳೆದುದೆ ವೈಶಿಷ್ಟಪೂರ್ಣ! ಸತ್ಯಶರಣರ ಸಂಗದಿಂದ ಅಕ್ಕ ಚೆನ್ನಮಲ್ಲಿಕಾರ್ಜುನನಿಗೆ ಅಪೂರ್ವವಾದ ಆಭರಣವಾಗಿ ಕಂಗೊಳಿಸಿರುವುದನ್ನು ಅಭಿಮಾನ ಆದರದಿಂದ ಸಾರಿದ್ದಾಳೆ. ಶರಣರ ನಿಲುವು, ಅವರು ಸಾಧಿಸಿದ ಸಾಧನೆಯಿಂದ ಪ್ರಭಾವಿತಳಾದ ಮಹಾದೇವಿಯಕ್ಕ ಅವರ ಕುರಿತು ಹಗುರಾಗಿ ಮಾತನಾಡುವ ಹೀನಮಾನವರನ್ನು ಖಂಡಿಸಲು ಹಲವು ಪಕ್ಷಿಗಳ ದೃಷ್ಟಾಂತಗಳನ್ನು ಬಳಸಿದ ವಚನ ಪ್ರತಿಮೆ ಶರಣರ ನಿಲುವನ್ನು ಅವರ ಘನತೆಯನ್ನು ಸಾದರಪಡಿಸುತ್ತದೆ.

ಹದ್ದು

"ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ,

ಕಡೆಯಲಿದ್ದಾಡುವ ಹದ್ದು ಬಲ್ಲುದೆ ಅಯ್ಯಾ?

ನದಿಯ ಗುಂಪ ತಾವರೆ ಬಲ್ಲುದಲ್ಲದೆ,
ಕಡೆಯಲಿದ್ದ ಹೊನ್ನಾವರಿಕೆ ಬಲ್ಲುದೆ ಅಯ್ಯಾ?
ಪುಷ್ಪದ ಪರಿಮಳವ ತುಂಬಿ ಬಲ್ಲುದಲ್ಲದೆ,
ಕಡೆಯಲಿದ್ದಾಡುವ ನೊರಜು ಬಲ್ಲುದೆ ಅಯ್ಯಾ?
ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣರ ನಿಲವ ನೀವೆ ಬಲ್ಲಿರಲ್ಲದೆ,
ಈ ಕೋಣನ ಮೈಮೇಲಣ ಸೊಳ್ಳೆಗಳೆತ್ತ ಬಲ್ಲವಯ್ಯಾ?"[೨೯]
(ಗಗನ–ಆಕಾಶ, ಗುಂಪ–ಸಮೂಹ, ಆಳ ಗಾಂಭೀರ್ಯ)

ಶರಣರ ವ್ಯಕ್ತಿತ್ವವನ್ನು ಶ್ರುತಪಡಿಸಲು ಜನಭಾಷೆಯ ಲೋಕ ದೃಷ್ಟಾಂತಗಳನ್ನು ವಚನ ಪ್ರತಿಮೆಯಲ್ಲಿ ಹೋಲಿಸಲಾಗಿದೆ. ಶರಣರ ಶ್ರೇಷ್ಠತೆ, ಹೀನ ಮನುಜರ ನಿಂದನೆಗಳು, ಕನಿಷ್ಟ ನಡವಳಿಕೆಗಳನ್ನು ಅಕ್ಕ ತುಲನಾತ್ಮಕವಾಗಿ ವಿಮರ್ಶಿಸಲು ಪಕ್ಷಿ ಪ್ರತಿಮೆಯಲ್ಲಿ ಪ್ರಾತಿನಿಧಿಕವಾಗಿ ದೃಷ್ಟಾಂತಗಳಲ್ಲಿ ವ್ಯಕ್ತಪಡಿಸಿದ್ದಾಳೆ. ಶರಣರ ಗುಣಸ್ವರೂಪ ಗಗನದಷ್ಟು ವಿಸ್ತಾರ, ಸಾಗರದಷ್ಟು ಆಳ, ಗಾಂಭೀರ್ಯದಿಂದ ಕೂಡಿದ್ದಾಗಿರುವುದು. ಅದರ ಮಹತಿಯನ್ನು ಮಹಾಂತರೆ ಬಲ್ಲರಲ್ಲದೆ ಅಹಂಕಾರದಿಂದ ವರ್ತಿಸುವ ಲೋಕದ ಮನುಜರು ಅರಿಯರು.

ಆಕಾಶದಲ್ಲಿರುವ ಚಂದ್ರನು ನಕ್ಷತ್ರ, ತಾರಾಮಂಡಲಗಳ ಸಮೂಹವನ್ನು ಬಲ್ಲವನು. ಆಕಾಶದ ಕೆಳಗಡೆ ಹಾರುವ ಹದ್ದು ಅರಿಯದು. ನದಿಯ ಆಳ, ವಿಸ್ತಾರವನ್ನು ಅದರಲ್ಲಿರುವ ಕಮಲ ಅರಿಯುವುದೇ ಹೊರತು ದಡದಲ್ಲಿರುವ ಹೊನ್ನಾವರಿಕೆ(ಹಳದಿ ಹೂವಿನ ಸಸ್ಯ) ತಿಳಿಯದು. ಪುಷ್ಪದ ಪರಿಮಳ ದುಂಬಿಗೆ ತಿಳಿದಿರುವುದು ಅಲ್ಲದೆ, ನೊರಜು ಪರಿಮಳದ ಪರಿಣಾಮ ಅರಿಯಲಾರದು. ಶರಣರ ಮಹತ್ವವನ್ನು ದೇವನಲ್ಲದೆ ಹೀನಮಾನವರು ತಿಳಿಯಲು ಸಾದ್ಯವಾಗುವುದಿಲ್ಲ. 'ಕೋಣನ ಮೈಮೇಲಿನ ಸೊಳ್ಳೆ' ಶಬ್ಧಶಯ್ಯೆ, ಪ್ರತಿಮೆಯ ಸತ್ವವನ್ನು ಹೆಚ್ಚಿಸಿದೆ. ಪ್ರತಿಮೆಯಲ್ಲಿ ವಿಡಂಬನೆ ಧ್ವನಿಯೊಡನೆ ಗಾಂಭಿರ್ಯತೆಯಿಂದ ಕೂಡಿದ ಶರಣರ ಸಾತ್ವಿಕ ಶಕ್ತಿಯನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿದೆ. ಹೀನ ಮಾನವರ ನಿಂದಾತ್ಮಕ ಮಾತುಗಳನ್ನು ಖಂಡಿಸುವ ಗೂಗೆ ಪ್ರತಿಮೆಯಲ್ಲಿಯೂ ಶರಣರ ಗುಣ ಶ್ರೇಷ್ಠತೆಯನ್ನು ಬಣ್ಣಿಸಿದ್ದಾಳೆ. ಅಂಥವರ ಸ್ವಭಾವಕ್ಕೆ ಶಿವನ ಪ್ರತಿಕ್ರಿಯೆಯನ್ನು ಪ್ರಕಟಿಸಿ ಜಾಗ್ರತಗೊಳಿಸಿದ್ದಾಳೆ.

ಗೂಗೆ

"ಗೂಗೆ ಕಣ್ಣ ಕಾಣಲರಿಯದೆ ರವಿಯ ಬಯ್ವುದು.
ಕಾಗೆ ಕಣ್ಣ ಕಾಣಲರಿಯದೆ ಶಶಿಯ ಬಯ್ವುದು.
ಕುರುಡ ಕಣ್ಣ ಕಾಣಲರಿಯದೆ ಕನ್ನಡಿಯ ಬಯ್ವನು.

ಇವರ ಮಾತೆಲ್ಲವು ಸಹಜವೆ
ನರಕಸಂಸಾರದಲ್ಲಿ ಹೊದಕುಳಿಗೊಳ್ಳುತ್ತ
ಶಿವನಿಲ್ಲ, ಮುಕ್ತಿಯಿಲ್ಲ, ಹುಸಿಯೆಂದಡೆ
ನರಕದಲ್ಲಿಕ್ಕದೆ ಬಿಡುವನೆ ಚೆನ್ನಮಲ್ಲಿಕಾರ್ಜುನಯ್ಯಾ?"[೩೦]

ಗೂಗೆ, ಕಾಗೆ, ಪಕ್ಷಿಗಳು, ನಿಂದಕರ, ಅಜ್ಞಾನಿಗಳ ಪ್ರತೀಕಗಳಾಗಿ ಪ್ರತಿಮೆಯ ಭಾವಕ್ಕೆ ಪುಷ್ಟಿನೀಡಲು ಬಳಕೆಗೊಂಡಿವೆ. ಗೂಗೆ, ಕಾಗೆ, ಪಕ್ಷಿಗಳು ತದ್ವಿರುದ್ಧವಾಗಿ ಹಗಲು ರಾತ್ರಿಯಲ್ಲಿ ಕಣ್ಣು ಕಾಣದೆ ಸಾರ್ವಕಾಲಿಕ ಸತ್ಯವಾದ, ಪ್ರಾಕೃತಿಕ ಅಸ್ತಿತ್ವವೆನಿಸುವ ಸೂರ್ಯ ಚಂದ್ರರನ್ನು ಅಲ್ಲಗಳೆಯುವವು. ಇದಕ್ಕಿಂತಲೂ ಹಗಲಿರುಳು ಕಣ್ಣು ಕಾಣದ ಕುರುಡ ಕನ್ನಡಿಯನ್ನೇ ಬಯ್ವುದು. ಅರ್ಥಹೀನ! ಲೋಕ ನೀತಿ ಅರಿತ ಅಕ್ಕಮಹಾದೇವಿ ಸಕಾರಾತ್ಮಕ ಧೋರಣೆಯಿಂದಲೇ ಪ್ರತಿಕ್ರಿಯಿಸುವುದು, ಪ್ರತಿಮೆಯಲ್ಲಿ ಪ್ರಾಮುಖ್ಯತೆ ಪಡೆದಿದೆ.

ಜಗತ್ತಿನ ಅಜ್ಞಾನಿಗಳ, ದುಃಖಿಗಳ ಮಾತುಗಳು ಸಹಜವಾಗಿ ನಿಂದನಾತ್ಮಕ, ನಕರಾತ್ಮಕ ದೃಷ್ಟಿಕೋನವುಳ್ಳವುಗಳು. ಅಂಥಹ ಮನೋಭಾವನೆಯ ಜನರಿಗೆ ಸುಜ್ಞಾನದ, ಶಿವನ ಅಸ್ತಿತ್ವ ಕಾಣಲಾರದು. ಅವರ ಮನಸ್ಸಿನಂತೆ ಮಹಾದೇವ. ಅವರ ನಡೆಯಂತೆ ಬದುಕು ದುಃಖದಾಯಕವೂ ಆಗಿರುವುದು. ಅಕ್ಕಮಹಾದೇವಿ ತನ್ನ ಸುತ್ತಲಿನ ಪರಿಸರದ ಜನರ ಬದುಕಿನ ರೀತಿ ನೀತಿಗಳನ್ನು ಅದೇ ಪರಿಸರದಲ್ಲಿರುವ ಪಶು ಪಕ್ಷಿ, ಲೋಕ ದೃಷ್ಟಾಂತಗಳ ಮೂಲಕ ವ್ಯಕ್ತಿಗತವಾಗಿ ಹೇಳಿಕೊಂಡಂತಿರುವ ಪ್ರತಿಮಾಕೃತಿಗಳಲ್ಲಿ ಸಾಮಾಜಿಕ ನೀತಿ, ಕಳಕಳಿಯೂ ವ್ಯಕ್ತವಾಗಿದೆ.

ಕೌಟುಂಬಿಕ, ವೈವಾಹಿಕ, ಸಾಂಸಾರಿಕ ಸಂಬಂಧಗಳಿಂದ ಬಂಧನಗಳಲ್ಲಿದ್ದೂ ಅದನ್ನು ಮೀರಿ ಹೊರ ನಡೆದ ಅಕ್ಕಮಹಾದೇವಿ ತನ್ನ ಗುರಿ ಸಾಧನೆಗಾಗಿ ಲೋಕ ಸಂಚಾರಿಯಾಗಿ ಉಡುತಡಿಯಿಂದ ಕಲ್ಯಾಣಕ್ಕೆ, ಕಲ್ಯಾಣದಿಂದ ಕದಳಿ ಬನಕ್ಕೆ ಸಾಗುವಾಗ ತನಗೆದುರಾದ ಪ್ರಾಕೃತಿಕ ಪರಿಸರದಲ್ಲಿ ತನ್ಮಯಳಾಗಿ, ನೋವು, ನಿರಾಶೆ, ನಿರೀಕ್ಷೆ, ಹುಡುಕಾಟ, ಹೋರಾಟಗಳಿಗೆ ಸಂಗಾತಿಯನ್ನಾಗಿ ಪ್ರಾಣಿ, ಪಕ್ಷಿ ಪ್ರಕೃತಿಗಳನ್ನೇ ಆಯ್ಕೆ ಮಾಡಿಕೊಂಡಳು. ಲೌಕಿಕ ಜನರ ಒಡನಾಡದ ದ್ವಂದ್ವಗಳನ್ನು, ನಿಂದೆ, ಕ್ರೌರ್ಯಗಳನ್ನು ಎದುರಿಸಿ, ಹತಾಶಳಾದಾಗ ಅವಳ ತನು-ಮನ-ಭಾವಗಳಿಗೆ ಶಾಂತಿ ಸಮಾಧಾನವನ್ನು ನೀಡಿ ಸಾಂತ್ವನಗೊಳಿಸಿದ ಪ್ರಕೃತಿಯ ಪರಿಕರಗಳಲ್ಲಿ ಪರಮಾತ್ಮನನ್ನು ಪರಿಶೋಧಿಸಿ, ಪರಿಣಾಮಿಸಿ, ಪರಿಪೂರ್ಣ ವ್ಯಕ್ತಿತ್ವ ಹೊಂದಿದವಳು. ಅವಳ ಪ್ರತಿ ಹೆಜ್ಜೆಯಲ್ಲಿಯೂ ಜೊತೆಯಾದ ವಚನಗಳಲ್ಲಿ ರಮ್ಯವಾಗಿ ಭಾವಗಮ್ಯವಾಗುವಂತೆ ಪ್ರಕೃತಿ ಅನಾವರಣಗೊಂಡಿರುವುದು.

ಸಸ್ಯ ಪ್ರತಿಮೆಗಳು

ಪ್ರಕೃತಿಯ ಅಗಾಧತೆ, ನಿಗೂಢತೆ, ಅಂತಃಶಕ್ತಿ ಪಂಚಭೂತಗಳ ಮಹಾನ್ ಶಕ್ತಿಯನ್ನರಿತ ಅಕ್ಕಮಹಾದೇವಿ ಪ್ರಕೃತಿಯಲ್ಲಿಡಗಿದ ಪರಮಾತ್ಮನ ಸೃಷ್ಟಿ ವೈಚಿತ್ರ್ಯಗಳನ್ನು ಕಂಡು ಬೆರಗಾಗಿ ಬಣ್ಣಿಸಿದ ಪ್ರತಿಮೆಯಲ್ಲಿ ಪ್ರಾಕೃತಿಕ ಸೊಬಗು ಭಾಷೆಯಲ್ಲಿ ಕಾವ್ಯಸೌಂದರ್ಯದಿಂದ ಕಂಗೊಳಿಸಿದೆ.

"ಈಳೆ ನಿಂಬೆ, ಮಾವು ಮಾದಲಕೆ
ಹುಳಿನೀರನೆರೆದವರಾರಯ್ಯಾ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ
ಸಿಹಿನೀರನೆರೆದವರಾರಯ್ಯಾ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆ
ಓಗರದ ಉದಕವನೆರೆದವರಾರಯ್ಯಾ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ
ಪರಿಮಳದುದಕವನೆರೆದವರಾರಯ್ಯಾ?
ಇಂತೀ ಜಲವು ಒಂದೆ, ನೆಲನು ಒಂದೆ, ಆಕಾಶವು ಒಂದೆ,
ಜಲವು ಹಲವು ದ್ರವ್ಯಂಗಳ ಕೂಡಿ
ತನ್ನ ಪರಿ ಬೇರಾಗಿಹ ಹಾಗೆ,
ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನು?
ತನ್ನ ಪರಿ ಬೇರೆ"[೨೧]

ಪ್ರಕೃತಿಯಲ್ಲಿ ಬೆಳೆಯುವ ಸಸ್ಯ, ಹಣ್ಣು, ಹೂವು, ಆಹಾರ ಧಾನ್ಯಗಳ ರುಚಿ ವಿಶಿಷ್ಟ, ಗುಣ ವೈಶಿಷ್ಟಗಳನ್ನು, ವೈವಿಧ್ಯತೆಗಳನ್ನು ಗಮನಿಸಿ ಗುಣಗ್ರಾಹಿತ್ವವನ್ನು ಅಕ್ಕ ಸೊಗಸಾಗಿ ಚಿತ್ರಿಸುತ್ತಾಳೆ. ಪ್ರಶ್ನಿಸುತ್ತ ಆರಂಭಗೊಳ್ಳುವ ಪ್ರತಿಮೆ ದೇವರ ಸೃಷ್ಟಿಗೆ ಶರಣಾಗಿ ಧನ್ಯತೆಯನ್ನು ಪ್ರಕಟಿಸುತ್ತ ನಿಲುಗಡೆ ಹೊಂದುತ್ತದೆ. ಅಕ್ಕ ನಾಲ್ಕು ರೀತಿಯ ವೈವಿಧ್ಯಮಯ ರಸ ರುಚಿಗಳುಳ್ಳ ಪದಾರ್ಥಗಳನ್ನು ವಿವರಿಸುತ್ತಾಳೆ. ಹುಳಿ ರುಚಿಯುಳ್ಳ, ಈಳೆ(ಕಿತ್ತಳೆ) ನಿಂಬೆ, ಮಾವು ಮಾದಲ(ದೊಡ್ಡ ನಿಂಬೆಹಣ್ಣು)ಗಳು. ಕಬ್ಬು, ಬಾಳೆ, ಹಲಸು, ನಾರಿವಾಳ(ತೆಂಗು) ಸಿಹಿರುಚಿಯನ್ನು, ಕಳವೆ, ರಾಜಾನ್ನ ಶಾಲ್ಯಾನ್ನ (ಅಂಬೆಮುರಿ, ಸುಗಂಧಿ ಬಾಸುಮತಿ) ಭತ್ತಗಳಿಗೆ ಪ್ರಸಾದ ರುಚಿ. ಮರುಗ, ಮಲ್ಲಿಗೆ ಪಚ್ಚೆ, ಮುಡಿವಾಳ ಸುಗಂಧವನ್ನು ಹೊಂದಲು ಕಾರಣವಾದ ನೀರು, ಭೂಮಿ, ಆಕಾಶಗಳು ಇವೆಲ್ಲ ಸಸ್ಯಗಳಿಗೆ ಒಂದೇ ರೀತಿಯ ಪೋಷಣೆ ನೀಡಿವೆ.

ಆದರೆ ಪದಾರ್ಥಗಳು, ವೈವಿಧ್ಯಮಯ ಹಾಗೂ ಭಿನ್ನವಾಗಿವೆ. ಪ್ರಕೃತಿಯನ್ನು ವಿಭಿನ್ನ ಸ್ವರೂಪದಲ್ಲಿ ಸೃಷ್ಟಿಸಿದವನು ಸೃಷ್ಟಿಕರ್ತನೆಂಬುದನ್ನು ಅವನ ಕುಶಲತೆಯನ್ನು ಬಣ್ಣಿಸುತ್ತ ಪರಮಾತ್ಮ ಪ್ರಕೃತಿಯಲ್ಲಿ ತಾದಾತ್ಮ್ಯತೆ ಹೊಂದಿದ್ದರೂ ಯಾವುದಕ್ಕೂ ಅಂಟಿಕೊಳ್ಳದೆ ತಾನು ಬೇರೆಯಾಗಿ ಸರ್ವಕ್ಕೂ ಸಾಕ್ಷೀಭೂತನೆಂಬುದನ್ನು ಅಭಿಮಾನ, ಆದರದಿಂದ ಆತ್ಮೀಯವಾಗಿ ಅಕ್ಕ ಅಭಿವ್ಯಕ್ತಗೊಳಿಸಿದ್ದಾಳೆ. ಮೂರ್ತ ಪ್ರಕೃತಿಯಲ್ಲಿ ಅಮೂರ್ತವಾದ ಪರಮಾತ್ಮನ ಚೈತನ್ಯವನ್ನು ತುಂಬಿಕೊಂಡು ಹಲವು ಬಗೆಯ ಗುಣವೈಶಿಷ್ಟ್ಯದಿಂದ ತೋರುತ್ತಿರುವ ಪ್ರಕೃತಿ ಮತ್ತು ಪರಮಾತ್ಮನ ಚೆಲುವನ್ನು ಕಾವ್ಯಾತ್ಮಕವಾಗಿ ವಿವರಿಸಿದ್ದಾಳೆ.

ಭೌತಿಕ ಜಗತ್ತಿನಲ್ಲಿ ಏಕಾಂಗಿಯಾಗಿ ಸಂಚರಿಸಿದ ಸಂದರ್ಭದಲ್ಲಿ ಎದುರಿಸಿದ ಆಂತರಿಕ ಮತ್ತು ಬಾಹ್ಯ ಸಂಕಷ್ಟಗಳೆಲ್ಲ ಭಾವನಾತ್ಮಕ, ಆಧ್ಯಾತ್ಮಿಕ ಸಾಮಾಜಿಕ ಚಿಂತನೆಗಳಾಗಿ ಸಾಹಿತ್ಯರೂಪದಲ್ಲಿ ಸೃಷ್ಟಿಗೊಂಡಿವೆ. ಸಂಕಷ್ಟಗಳು ಸಂಯಮದ ಅನುಭವವನ್ನು ನೀಡಿದ ರೀತಿಯನ್ನು ವಿವಿಧ ಸಸ್ಯ ದೃಷ್ಟಾಂತಗಳಲ್ಲಿ ನಿರೂಪಿಸಿದ ಪ್ರತಿಮೆ ಮಾನವ ಕುಲಕೋಟಿಗೆ ದಾರಿ ದೀವಿಗೆಯಾಗಿದೆ.

"ಚಂದನ"

"ಚಂದನವ ಕಡಿದು ಕೊರೆದು ತೇದಡೆ
ನೊಂದೆನೆಂದು ಕಂಪ ಬಿಟ್ಟಿತ್ತೆ?
ತಂದು ಸುವರ್ಣವ ಕಡಿದೊರೆದೊಡೆ
ಬೆಂದು ಕಳಂಕ ಹಿಡಿಯಿತ್ತೆ?
ಸಂದುಸಂದು ಕಡಿದ ಕಬ್ಬನ್ನು ತಂದು ಗಾಣದಲ್ಲಿಕ್ಕಿ ಅರೆದಡೆ
ಬೆಂದು ಪಾಕಗುಡದೆ ಸಕ್ಕರೆಯಾಗಿ ನೊಂದೆನೆಂದು ಸಿಹಿಯ ಬಿಟ್ಟಿತ್ತೆ?
ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು
ನಿಮಗೇ ಹಾನಿ.
ಎನ್ನ ತಂದೆ ಚೆನ್ನಮಲ್ಲಿಕಾರ್ಜುನಯ್ಯಾ,
ನೀ ಕೊಂದಡೆಯೂ ಶರಣೆಂಬುದ ಮಾಣೆ."[೩೨]

ಪ್ರಕೃತಿಯಲ್ಲಿರುವ ಚಂದನ(ಶ್ರೀಗಂಧದ ಮರ) ಸುವರ್ಣ(ಬಂಗಾರ) ಕಬ್ಬು ದೃಷ್ಟಾಂತಗಳ ಮೂಲಕ ಭಕ್ತನ ಶ್ರದ್ಧೆ, ಮಾಹೇಶ್ವರನ ನಿಷ್ಠೆಯಾಗಿ ಪರಿವರ್ತಿತಗೊಳ್ಳುವ ಬಗೆಯನ್ನು ನಿರೂಪಿಸಿರುವಳು. ಪ್ರತಿಮೆಯ ನಿಷ್ಠೆ ಗಟ್ಟಿಗೊಂಡು ಅನನ್ಯ ಶರಣಾಗತಿ ಹೊಂದುವಲ್ಲಿ ಮುಕ್ತಾಯಗೊಳ್ಳುತ್ತದೆ. ವಚನವು ಭಕ್ತನ ಮನಸ್ಥಿತಿಯ ಬೆಳವಣಿಗೆಯಂತೆ ಪ್ರತಿಚರಣದಲ್ಲಿ ನಿಷ್ಠೆಯು ಪರಾಕಾಷ್ಠೆ ಹೊಂದುತ್ತ ಬೆಳೆಯುತ್ತ, ಬೆಳಗುತ್ತ, ದೇವನ ಚರಣದಲ್ಲಿ ಐಕ್ಯಗೊಳ್ಳುವ ಭಾವಪೂರ್ಣ

ನಿಲುಗಡೆ ಅನನ್ಯವೆನಿಸುತ್ತದೆ. ಚಂದನ, ಸುವರ್ಣ, ಕಬ್ಬು, ಕಷ್ಟ ಸಹಿಸಿ ನಿಷ್ಠೆ ಬಲಗೊಳ್ಳುವ ಭಕ್ತನ ಮನಸ್ಥಿತಿಯನ್ನು ಸಾಂಕೇತಿಕರಿಸುತ್ತವೆ.

ಕಡಿದು ಕೊರೆದು ತೇಯ್ದಂತೆ ಕಂಪು ಬೀರುವುದೇ ಶ್ರೀಗಂಧದ ಶ್ರೇಷ್ಠತೆ! ಪುಟಕ್ಕಿಟ್ಟಂತೆ ಚಿನ್ನ ಹೊಳೆಯತೊಡಗುತ್ತದೆ. ಕಬ್ಬನ್ನು ಕಡಿದು ಸಂದು ಸಂದು ಸಣ್ಣ ಮಾಡಿ ಅರೆದು ಗಾಣದಲ್ಲಿಕ್ಕುತ್ತ ಹೋದಂತೆ ರಸರುಚಿ ಹೆಚ್ಚಾಗುತ್ತದೆ. ಚಂದನ, ಚಿನ್ನ, ಕಬ್ಬು ಕಡಿದಂತೆ, ಕೊರೆದಂತೆ ಕಷ್ಟದಿಂದ ಸಹನೆ ಬೆಳೆಸಿಕೊಂಡು ಶ್ರೇಷ್ಠತೆಯನ್ನು ಪಡೆಯುತ್ತವೆಯೋ ವಿನಃ ನೋಯುವುದಿಲ್ಲ. ಕಷ್ಟಗಳಿಂದ ಕಂಗೆಡದೆ ನಿಷ್ಠೆ ಗಟ್ಟಿಗೊಳ್ಳುವ, ಜಗತ್ತಿಗೆ ಬೆಳಕನ್ನೇ ಸಿಹಿಯನ್ನೇ ನೀಡುವ ಗುಣವೈಶಿಷ್ಟ್ಯ ಶರಣರಲ್ಲಿ ಅಳವಟ್ಟಿರುವುದನ್ನು ಬಣ್ಣಿಸಲು ಪ್ರಕೃತಿಯ ಪರಿಕರಗಳನ್ನು ಬಳಸಿ ರಚಿಸಿದ 'ಚಂದನ' ಪ್ರಕೃತಿ ಪ್ರತಿಮೆ ಅಪೂರ್ವವಾದ ಭಾವಗೀತೆಯಂತಿದೆ. ಲಿಂಗಭಾವದಿಂದ ಅಂಗಭಾವವಳಿದು ಪುಟಕ್ಕಿಟ್ಟ ಚಿನ್ನದಂತೆ ಶೋಭಿಸುವ ಅಕ್ಕಮಹಾದೇವಿ ಪ್ರಪಂಚದಲ್ಲಿದ್ದೂ ಸಾಂಸಾರಿಕ ವ್ಯಾಮೋಹಗಳಿಂದ ಮುಕ್ತಳೆಂಬುದನ್ನು 'ವಟವೃಕ್ಷ' ಪ್ರತಿಮೆಯಲ್ಲಿ ಸ್ಪಷ್ಟಪಡಿಸಿದ್ದಾಳೆ.

ವಟವೃಕ್ಷ

"ವಟವೃಕ್ಷದೊಳಡಗಿದ ಸಮರಸ ಬೀಜ
ಭಿನ್ನ ಭಾವಕ್ಕೆ ಬಪ್ಪುದೆ?
ಕಂಗಳ ನೋಟ, ಕರುವಿಟ್ಟ ಮನದ ಸೊಗಸು
ಅನಂಗನ ದಾಳಿಯ ಗೆಲಿದವು ಕಾಣಾ.
ಮರೀಚಿಕಾಜಲದೊಳಡಗಿದ ಪ್ರಾಣಿ
ವ್ಯಾಧನ ಬಲೆಗೆ ಸಿಲುಕುವುದೆ?
ನಿನ್ನ ಕೈವಶಕ್ಕೆ ಸಿಕ್ಕಿಹಳೆಂಬುದ ಮರೆಯಾ ಮರುಳೆ.
ಚೆನ್ನಮಲ್ಲಿಕಾರ್ಜುನನಲ್ಲದೆ ಪರಪುರುಷ
ನಮಗಾಗದ ಮೋರೆ ನೋಡಣ್ಣಾ."[೩೩]

ವಟವೃಕ್ಷ(ಆಲದಮರ)ದಲ್ಲಿ ಅಡಗಿದ ಬೀಜ ಭಿನ್ನವಾಗಿ ತೋರದು, ಅಸ್ತಿತ್ವದಲ್ಲಿದ್ದರೂ ಬೇರೆಯಾಗಿ ಕಾಣಿಸದು. ಮರೀಚಿಕಾ ಜಲದೊಳಡಗಿದ ಪ್ರಾಣಿ ಕಾಣಿಸುವುದಾದರೂ ಬೇಟೆಗಾರನ ಬಲೆಗೆ ಸಿಲುಕದು. ಮರೀಚಿಕಾ ಜಲದಲ್ಲಿ ತೋರುವ ಪ್ರಾಣಿ ಅಸ್ತಿತ್ವಕ್ಕೆ ಬರದು. ವಟವೃಕ್ಷದಲ್ಲಿ ಸಮರಸಗೊಂಡ ಬೀಜದಂತೆ ದೃಷ್ಟಿಯೋಗದಿಂದ ಇಷ್ಟಲಿಂಗ-ಪ್ರಾಣಲಿಂಗ-ಭಾವಲಿಂಗ ತ್ರಿವಿಧ ಲಿಂಗಾರ್ಚನೆಯಿಂದ ತ್ರಿಕರಣ ಶುದ್ಧವಾದ ಅಕ್ಕನ ಮನಸ್ಸು ಕಾಮನ ಕಾಟವನ್ನು ಗೆದ್ದು ಘನಮನವಾಗಿ ಸಮರಸ ಭಕ್ತಿಯಿಂದ ಬಲಗೊಂಡಿದೆ. ಮರಿಚಿಕಾ ಜಲದೊಳಡಗಿದ ಪ್ರಾಣಿ ವ್ಯಾಧನ ಬಲೆಗೆ ಸಿಲುಕದಂತೆ

ಭಾವ ನಿರ್ಭಾವಗೊಂಡಿದೆ. ಲಿಂಗಾನುಭಾವದಿಂದ ಶರಣಸತಿ ಲಿಂಗಪತಿ ಭಾವ ಸಿದ್ಧಿಸಿದೆ. ಪ್ರತಿಮೆಯ ಪ್ರಧಾನ ಗುಣ ಸಮರಸ ಭಕ್ತಿಯಾಗಿ ಹೊರಹೊಮ್ಮಿದೆ.

ಸತತ ಸಾಧನೆಯಿಂದ ಶರಣರ ಸಂಗದಿಂದ ಅನುಭಾವದ ಶಿಖರವೇರಿದ ಅಕ್ಕಮಹಾದೇವಿಗೆ ಸಮಸ್ತ ಪ್ರಕೃತಿ ಪರಮಾತ್ಮನ ಅವಿರ್ಭಾವವೆನಿಸಿದೆ. ಪರುಷದೃಷ್ಟಿ ಪ್ರಾಪ್ತವಾಗಿದೆ. ನಯನ ಪರುಷದಿಂದ ಸಕಲವೂ ಶಿವನರೂಪ 'ಸತ್ಯ, ಶಿವ, ಸುಂದರ' ವೆಂಬ ಭಾವವೈಶಾಲ್ಯ ಬೆಳೆದಿದೆ. ಕಲ್ಯಾಣದಿಂದ ಕದಳಿವನಕ್ಕೆ ಆಗಮಿಸಿದ ಸಂದರ್ಭವನ್ನು ಪ್ರಕೃತಿ ಪ್ರತಿಮೆಯಲ್ಲಿ ಸಾಕ್ಷೀಕರಿಸಿದ್ದಾಳೆ.

ವನ

"ವನವೆಲ್ಲ ಕಲ್ಪತರು, ಗಿಡವೆಲ್ಲಾ ಮರುಜವಣಿ,
ಶಿಲೆಗಳೆಲ್ಲಾ ಪರುಷ, ನೆಲವೆಲ್ಲಾ ಅವಿಮುಕ್ತಿ ಕ್ಷೇತ್ರ,
ಜಲವೆಲ್ಲಾ ನಿರ್ಜರಾಮೃತ, ಮೃಗವೆಲ್ಲಾ ಪುರುಷಾಮೃಗ,
ಎಡಹುವ ಹರಳೆಲ್ಲಾ ಚಿಂತಾಮಣಿ.
ಚೆನ್ನಮಲ್ಲಿಕಾರ್ಜುನಯ್ಯನ ನೆಚ್ಚಿನ ಗಿರಿಯ ಸುತ್ತಿ,
ನೋಡುತ್ತ ಬಂದು ಕದಳಿಯ ಬನವ ಕಂಡೆ ನಾನು"[೩೪]

ಶ್ರೀಶೈಲದ ಕದಳಿ ಬನದ ಸಾಕ್ಷಾತ್ ದರ್ಶನ ಪ್ರತಿಮೆಯಲ್ಲಿ ಚಿತ್ರಿತಗೊಂಡಿದೆ. ಮಹಾಂತರ ದೃಷ್ಟಿ, ಸಮರಸಭಾವಗಳ ಅನುಭಾವವು ಸಾಂಕೇತಿಕವಾಗಿ ಭಾಷೆಯಲ್ಲಿ ಪಾಕಗೊಂಡಿದೆ. ವನದಲ್ಲಿರುವ ಸಸ್ಯಗಳೆಲ್ಲ ಕಲ್ಪವೃಕ್ಷ, ಗಿಡಗಳೆಲ್ಲಾ ಮರುಜವಣಿ(ಸಂಜೀವಿನಿ) ಜಲ ಪಾವನ ತೀರ್ಥ, ಮೃಗಗಳಲ್ಲಿ ಸದ್ಭಾವ. ಬೆಟ್ಟದ ಕಲ್ಲುಗಳೆಲ್ಲ ಮುತ್ತು ರತ್ನಗಳು. ಪ್ರಕೃತಿಯಲ್ಲಿ ಪರಶಿವನ ನೆಲೆಯನ್ನು ಅನುಭವಿಸಿ ಆನಂದಿಸಿದ ಅನುಭೂತಿ, ಪ್ರತಿಮೆಯ ಪ್ರತಿಯೊಂದು ಪದ, ಚರಣಗಳಲ್ಲಿ ಆನಂದಾತಿಶಯದ ಮೇರುವರ್ಣನೆ ತುಂಬಿ ಹೊರಸೂಸಿದೆ. ಕದಳಿಯ ನೆಲ, ಜಲ, ಪಕ್ಷಿ, ಪಶು, ಶಿಲೆ ತರುಲತೆಗಳಲ್ಲಿ ಅಡಗಿರುವ ಶಿವನ ಸೌಂದರ್ಯವನ್ನು ಶಬ್ಧಗಳಲ್ಲಿ ಸೆರೆ ಹಿಡಿದಿರುವಳು.

ವಚನದ ಹೊರನೋಟ ಕದಳಿಬನ ಹಾಗೂ ಶ್ರೀ ಗಿರಿಯ ವರ್ಣನೆಯ ಅನುಭವವನ್ನು ನೀಡುತ್ತ ಶ್ಲೇಷಾರ್ಥದಲ್ಲಿ ಕದಳಿ, ಶ್ರೀಗಿರಿ ಲಿಂಗಾನುಭಾವದಿಂದ ತುಂಬಿದ ಶಿರವು ಶಿವನ ನಿಜನಿವಾಸ. ಅದನರಿತು ಅಕ್ಕಮಹಾದೇವಿ ಘಟಾಕಾಶದ ಅಮೂರ್ತ ಅನುಭಾವವನ್ನು ದಿಟದ ಶ್ರೀಶೈಲಗಿರಿಯ ಕದಳಿಯ ಮೂರ್ತ ಸಂಗತಿಗಳೊಂದಿಗೆ ಸಮೀಕರಿಸಿದ್ದಾಳೆ. ಒಳನೋಟವನ್ನು ಹೊರನೋಟದೊಡನೆ ಹೋಲಿಸುವ ಅಕ್ಕಮಹಾದೇವಿಯ ಪ್ರತಿಭಾಶಕ್ತಿ ಅನುಭಾವವನ್ನು ಪದಗಳಲ್ಲಿ ಅನುರಣಗೊಳ್ಳುವಂತೆ ಮಾಡುವ ಸಾಮರ್ಥ್ಯದಿಂದ ವಚನಕಾರರಲ್ಲೇ ವಿಶಿಷ್ಟತೆಯನ್ನು ಸಾಧಿಸಿದ್ದಾಳೆ.

ನಿರಾಕಾರ ಪರಶಿವನನ್ನು ವನದೊಳಗೆ ಅರಸುವ ಕುತೂಹಲ ಭಾವವನ್ನು ಪ್ರಕಟಿಸುವ 'ವನ' ಪ್ರತಿಮೆ ಭಾವನೆಗಳ ತೀವ್ರತೆ, ಶಿವನನ್ನು ಕಾಣುವ ತುಡಿತ ಅದರ ಸ್ವರೂಪವನ್ನು ಅಭಿವ್ಯಕ್ತಗೊಳಿಸುತ್ತದೆ.

'ವನ'

"ವನವೆಲ್ಲಾ ನೀನೆ, ವನದೊಳಗಣ ದೇವತರುವೆಲ್ಲಾ ನೀನೆ,
ತರವಿನೊಳಗಾಡುವ ಖಗಮೃಗವೆಲ್ಲಾ ನೀನೆ.
ಚೆನ್ನಮಲ್ಲಿಕಾರ್ಜುನಾ,
ಸರ್ವಭರಿತನಾಗಿ ಎನಗೇಕೆ ಮುಖದೋರೆ?"[೩೫]

ಸೃಷ್ಟಿಗೆ ಮೂಲಾಧಾರನಾದ ಶಿವನನ್ನು ಬಣ್ಣಿಸುತ್ತ, ಆತ್ಮೀಯವಾಗಿ ಸಲುಗೆಯಿಂದ ಮಾತನಾಡುತ್ತಿರುವ ಅಕ್ಕಮಹಾದೇವಿ ವನ, ತರುಲತೆ, ಗಿಡಗಳಲ್ಲಿ, ಖಗ, ಮೃಗಗಳಲ್ಲಿ ನೀನೇ ತುಂಬಿಕೊಂಡಿರುವೆ. ಆದರೆ ಸಾಕಾರ ರೂಪದಲ್ಲಿ ಎನಗೇಕೆ ದರ್ಶನ ನೀಡಲಾರೆ ಎಂದು ತಾಯಿಯನ್ನು ಮಗು ಸಲುಗೆಯಿಂದ, ಹತಾಶೆಯಿಂದ ಕೇಳುವ ಪ್ರಶ್ನಿಸುವ ಧಾಟಿಯಲ್ಲಿ ಪ್ರತಿಮಾಕೃತಿ, ಪ್ರಕೃತಿ ಪ್ರೇಮದ ಕಲಾಕೃತಿಯಾಗಿ ಮೂಡಿ ನಿಂತು ಪರಮಾತ್ಮನು ಸರ್ವಭರಿತನು ಎಂಬ ನಿಲುವು ಅಕ್ಕನ ಭಾವವೈಶಾಲ್ಯವನ್ನು ಪ್ರತಿನಿಧಿಸುತ್ತದೆ.

ದೇವದರ್ಶನಕ್ಕಾಗಿ ಹಂಬಲಿಸಿ ಹಾಡುತ್ತ ಪ್ರಕೃತಿಯಲ್ಲಿ ಪರಿಪರಿಯಾಗಿ ಬೇಡುತ್ತ ಕಾಯದ ಕಳವಳ, ಮನಸ್ಸಿನ ಮಾಯೆಯನ್ನು ಲಿಂಗಾನುಸಂಧಾನದಿಂದ ಪರಿಹರಿಸಿ ಬಯಲ ನಿರ್ವಯಲ ಕದಳಿಯಲ್ಲಿ ಲೀನಳಾದ ಅಕ್ಕಮಹಾದೇವಿ 'ಕದಳಿ' ಪ್ರತಿಮೆಯಲ್ಲಿ ಆಧ್ಯಾತ್ಮಿಕ, ಅಲೌಕಿಕ ಸಾಧನೆಯ ಒಳನೋಟವನ್ನು, ಲೌಕಿಕ ಕದಳಿಯಲ್ಲಿ ಸಮರಸಗೊಳಿಸಿ ಚಿತ್ರಿಸಿ 'ಕದಳಿ' ಬೆಡಗಿನ ಬೆಳಕಿನಿಂದ, ಕಾವ್ಯಕಾಂತಿಯಿಂದ ಕಂಗೊಳಿಸುವಂತೆ ವಚನ ನಿರ್ವಚನವು ಸಹೃದಯರ ಹೃದಯಾಂತರಾಳದಲ್ಲಿ ನೆಲೆ ನಿಲ್ಲುತ್ತದೆ. ಪ್ರತಿ ಪದದಲ್ಲಿ ಪರಿಶ್ರಮದಿಂದ ಪರಮಾತ್ಮನನ್ನು ಕೂಡಿದ ಬಗೆಯನ್ನು ಕದಳಿ ಪ್ರತಿಮೆಯಲ್ಲಿ ಬಿಚ್ಚಿಡುತ್ತ ದೇವರ ಹೃದಯ ಕಮಲದಲ್ಲಿ ಅಡಗಿದ ಭಾವ ಸಮರಸದ ಪ್ರಶಾಂತತೆಯನ್ನೊಳಗೊಂಡು ಪ್ರತಿಮೆ ಪೂರ್ಣಗೊಳ್ಳುತ್ತದೆ.

ಕದಳಿ

"ಕದಳಿ ಎಂಬುದು ತನು, ಕದಳಿ ಎಂಬುದು ಮನ,
ಕದಳಿ ಎಂಬುದು ವಿಷಯಂಗಳು
ಕದಳಿ ಎಂಬುದು ಭವಘೋರಾರಣ್ಯ.
ಈ ಕದಳಿ ಎಂಬುದು ಗೆದ್ದು ತವೆ ಬದುಕಿ ಬಂದು

ಕದಳಿಯ ಬನದಲ್ಲಿ ಭವಹರನ ಕಂಡೆನು.
ಭವಗೆದ್ದು ಬಂದ ಮಗಳೆ ಎಂದು
ಕರುಣದಿ ತೆಗೆದು ಬಿಗಿಯಪ್ಪಿದಡೆ
ಚೆನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿದೆನು."[೨೬]

ಕದಳಿ–ಬಾಳೆ, 'ಕದಳಿ' ಪದದಲ್ಲಿ ಶ್ಲೇಷಾರ್ಥವನ್ನಿಟ್ಟು ಪ್ರತಿಮೆಯಲ್ಲಿ ಲೋಕದ ಸಂಗತಿಗಳಿಂದ ಅನುಭಾವವನ್ನು ಕಟ್ಟಿಕೊಟ್ಟು ಅಲೌಕಿಕ ಅನುಭೂತಿ ಭಾವಗಮ್ಯವಾಗುವಂತೆ ರಚಿಸಿದ ಶಬ್ದಚಿತ್ರದಲ್ಲಿ ಕಾವ್ಯ ಸೌಂದರ್ಯ ಧ್ವನಿಶಕ್ತಿಗಳೆರಡೂ ತಕ್ಷಣಕ್ಕೆ ಹೃದ್ಯವೇದ್ಯವೆನಿಸುತ್ತವೆ. ಕದಳಿ ಎಂಬುದು ತನು ಮನ ವಿಷಯಂಗಳು, ಭವ ಘೋರಾಣ್ಯವೆಂಬುದನ್ನು ಅರುಹುತ್ತ ಅರಿವಿನಿಂದ ಅವನ್ನೆಲ್ಲ ಜಯಿಸಿ 'ಲಿಂಗಾಂಗಸಮರಸ' ಹೊಂದಿದ ಬಗೆಯನ್ನು 'ಚೆನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿದೆನು' ನುಡಿಯಲ್ಲಿ ವಚನ ನಿರ್ವಚನ ಹೊಂದುತ್ತ ಅಪೂರ್ವ ಸಂದರ್ಭ ಪರಿಸಮಾಪ್ತಿಗೊಳ್ಳುತ್ತದೆ.

ನದಿಯಲ್ಲಿ ನದಿ ಬೆರೆಸಿದಂತೆ, ಬೆಳಗನ್ನು ಬೆಳಗು ಬೆರೆತಂತೆ, ಗಾಳಿ ಸುಗಂಧವನ್ನಪ್ಪಿಕೊಂಡಂತೆ, ಬಯಲು ಬಯಲನೆ ಬೆರೆಸಿ ನಿರ್ವಯಲ ಹೊಂದಿದ ನಿಜಾನಂದದ ನಿಲುವು ಪ್ರತಿಮೆಯಲ್ಲಿ ಸತ್ವ ಶಕ್ತಿಗಳೆರಡನ್ನೂ ಮೇಳವಿಸಿಕೊಂಡು ಅನುಭಾವದೆತ್ತರವನ್ನು ಅಭಿವ್ಯಕ್ತಗೊಳಿಸುತ್ತದೆ.

ಲಿಂಗಾಯತ ಶರಣರ ಸಿದ್ಧಾಂತ ತಾತ್ವಿಕ ಚಿಂತನೆಯ ಭಕ್ತ ಬಯಲಾಗುವ ಐಕ್ಯ ಸ್ಥಿತಿಯ ಶಬ್ಧ ನಿಶಬ್ಧಗೊಂಡ ವರ್ಣನೆಯನ್ನು ಅಕ್ಕಮಹಾದೇವಿ ಸಾಕಾರಗೊಳಿಸಿದ್ದಾಳೆ. ಅಕ್ಕನಂತೆ ಬಸವಣ್ಣನವರು 'ಬಾಳೆ' ಪ್ರತಿಮೆಯಲ್ಲಿ ಭಕ್ತನ ನಿಲುವನ್ನು ಪ್ರತಿಪಾದಿಸಿರುವುದನ್ನು ಗಮನಿಸಬಹುದಾಗಿದೆ.

"ಮಾಡುವ ಭಕ್ತನ ಕಾಯ ಬಾಳೆಯ ಕಂಬದಂತಿರಬೇಕು.
ಮೆಲ್ಲಮೆಲ್ಲನೆ ಹೊರೆಯೆತ್ತಿ ನೋಡಿದಡೆ
ಒಳಗೆ ಕೆಚ್ಚಿಲ್ಲದಿರಬೇಕು.
ಮೇಲಾದ ಫಲವನ್ನು ನಮ್ಮವರು ಬೀಜರಹಿತ ನುಂಗಿದರು.
ಎನಗಿನ್ನಾವ ಭಯವಿಲ್ಲ ಕಾಣಾ,
ಕೂಡಲಸಂಗಮದೇವಾ."[೨೭]

ಅಕ್ಕಮಹಾದೇವಿಯ 'ಕದಳಿ' ಪ್ರತಿಮೆಯಲ್ಲಿ ಮೂಡಿ ಬಂದಿರುವ ಭಾವ ಇಲ್ಲಿಯ ಚಿಂತನೆಗೆ ಪೂರಕವಾಗಿದೆ. "ಇಲ್ಲಿ ಬಾಳೆಯ ಗಿಡವನ್ನು ಅನುಭಾವಿಯ ಅನುಭಾವಿಕ ಚಿಂತನೆಗೆ ಪ್ರತಿಮೆಯಾಗಿ

ತೆಗೆದುಕೊಳ್ಳಲಾಗಿದೆ. ಭಕ್ತಿಯನ್ನು ಮಾಡುವವನ ಕಾಯ ಬಾಳೆಯ ದಿಂಡಿನ ಹಾಗೆ ಇರಬೇಕು. ನಿಧಾನವಾಗಿ ಅದರ ಪೊರೆಯನ್ನು ಕಳಚುತ್ತ ಹೋದಂತೆ ಒಳಗೆ ಅದು ಕೆಚ್ಚಿಲ್ಲದೆ ಬರಿದಾಗುವಂತೆ ಇರಬೇಕು. ಇಂಥ ಭಕ್ತನ ಕಾಯವೆಂಬ ಬಾಳೆಯಿಂದ, ಬಿಟ್ಟ ಕರ್ಮದ ಫಲಗಳನ್ನು ಕೂಡಲಸಂಗನ ಶರಣರು ಅನುಭವಿಸುತ್ತಾರೆ. ಅದನ್ನು ಬೀಜಸಹಿತ ನುಂಗಿದ್ದರಿಂದ ಇನ್ನು ಮತ್ತೆ ಆ ಕಂಬ ಬೆಳೆಯುವಂತಿಲ್ಲ. ಪೊರೆ ಕೀಳುವಂತಿಲ್ಲ."[೩೮]

ಷಟಸ್ಥಲ ಮಾರ್ಗದ ಸಾಧನೆಯ ಮೂಲಕ ಭಕ್ತ ಅನುಭಾವದ ಮೇರುನಿಲುವನ್ನು ಹೊಂದಿ ಬಯಲು ನಿರ್ವಯಲಾಗುವ ಕ್ರಮವನ್ನು ಅಕ್ಕಮಹಾದೇವಿ, ಬಸವಣ್ಣನವರು 'ಬಾಳೆ' ಪ್ರತಿಮೆಯಲ್ಲಿ ಸೊಗಸಾಗಿ ನಿರೂಪಿಸಿರುವುದು. ಸಮಾನ ಪ್ರತಿಮಾ ನಿರ್ಮಿತಿ ಗುಣವೈಶಿಷ್ಟ ಪ್ರತಿಭೆಯನ್ನು ಪ್ರತಿನಿಧಿಸುತ್ತದೆ.

ಧಾರ್ಮಿಕ ಆಧ್ಯಾತ್ಮಿಕ ಮತ್ತು ಇತರ ಪ್ರತಿಮೆಗಳು

ಅಕ್ಕಮಹಾದೇವಿಯ ವಚನಗಳಲ್ಲಿ ಪ್ರತಿಮಾ ವಿಧಾನ ದೃಶ್ಯಕಾವ್ಯದಂತೆ, ಕೆಲವೊಮ್ಮೆ ಸಂಕಥನದ ರೀತಿಯಲ್ಲಿ ರೂಪುಗೊಳ್ಳುತ್ತದೆ. ಹಗಲಿರುಳು ದೇವನ ಹಂಬಲದಲ್ಲಿರುವ ಅಕ್ಕನಿಗೆ ಕನಸು ಮನಸ್ಸಿನಲ್ಲಿ ಅದೇ ಭಾವ ಹೆಪ್ಪುಗಟ್ಟಿದಂತಿರುವುದನ್ನು 'ಕನಸು' ಪ್ರತಿಮೆಗಳಲ್ಲಿ ಗಮನಿಸಬಹುದು. "ಕನಸು ಯಾವಾಗಲೂ ಪ್ರತಿಮಾಲಕ್ಷಣದಿಂದ ಕೂಡಿಯೆ ಇರುತ್ತದೆ. ಅದನ್ನು ಕಟ್ಟುವುದು ಜಾಗ್ರತ್‌ಸತ್ತೆಯ ಬುದ್ಧಿಯಲ್ಲ. ಅದು ತನಗೆ ತಾನೆ ಅಪ್ರಯತ್ನವಾಗಿ ಎಂಬಂತೆ ಸುಪ್ತಚಿತ್ತದಿಂದ ಮೂಡುತ್ತದೆ."[೩೯]

ಅಕ್ಕಮಹಾದೇವಿಯ ಕನಸಿನ ಪ್ರತಿಮೆ ಅಪೂರ್ವವಾದ ಚಿರನೂತನವಾದ ಕಾವ್ಯಕಲಾಕೃತಿ ಯೆನಿಸಿದೆ.

'ಕನಸು'

"ಅಕ್ಕ ಕೇಳೌ ನಾನೊಂದು ಕನಸ ಕಂಡೆ.
ಅಕ್ಕಿ ಅಡಕೆ ಓಲೆ ತೆಂಗಿನಕಾಯ ಕಂಡೆ.
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವಾ.
ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು.
ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು."[೪೦]

ಕನಸು

"ಅಕ್ಕ ಕೇಳಕ್ಕಾ, ನಾನೊಂದು ಕನಸ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಬಂದೆನ್ನ ನೆರೆದ ನೋಡವ್ವಾ
ಆತನನಪ್ಪಿಕೊಂಡು ತಳವೆಳಗಾದೆನು
ಚೆನ್ನಮಲ್ಲಿಕಾರ್ಜುನನ ಕಂಡು
ಕಣ್ಣುಮುಚ್ಚಿ ತೆರೆದು ತಳವೆಳಗಾದೆನು."[೬೧]

ಕನಸು ಎರಡು ವಚನ ಪ್ರತಿಮೆಗಳ ವಸ್ತು ವಿಷಯವಾಗಿದ್ದರೂ, ಸಂದರ್ಭಗಳು ವಿಭಿನ್ನವಾಗಿವೆ. ಶಿವನ ಸಾಕಾರ ರೂಪದ ವರ್ಣನೆ, ಅಕ್ಕ ಕೇಳವ್ವ, ಕೇಳಕ್ಕ ಎಂದು ಪ್ರಾರಂಭಗೊಳ್ಳುವ ವಚನಗಳು ಆತ್ಮೀಯಳೆದುರು ಕುಳಿತು ತಾನು ಕಂಡ ಕನಸಿನ ವರ್ಣನೆಯ ನಾಟಕಾಭಿಯ ಎರಡರಲ್ಲಿಯೂ ಸಾಮಾನ್ಯವಾಗಿದೆ. ಮೊದಲಿನ ವಚನ ಪ್ರತಿಮೆಯಲ್ಲಿ ಶಿವ ಭಿಕ್ಷಕ್ಕೆ ಬಂದು, ತೆರಳುವ ಸಂದರ್ಭದ ತೀವ್ರತೆ, ಅವನ ಬೆನ್ನಟ್ಟಿ ಕೈಹಿಡಿದ ಭಾವಾಭಿನಯ, ಕನಸು ನಿಜವೆಂದು ಕಣ್ತೆರೆಯುತ್ತಿರುವ ಗತಿಶೀಲತೆ ಅಪ್ಯಾಯಮಾನವೆನಿಸುತ್ತದೆ. ಅಕ್ಕ ಕೇಳಕ್ಕ, ಅಕ್ಕ ಕೇಳಾ ಆತ್ಮೀಯ ಸಲುಗೆಯನ್ನು ಸಂಕೇತಿಸುತ್ತವೆ.

ಮಿಕ್ಕು ಮೀರಿ ಹೊರಟವನು, ತಿರುಗಿ ಬಂದು ಕೂಡಿದ ಸುಖದ, ಆಶ್ಚರ್ಯದ ಭಾವಗಳು ಮೇಳವಿಸಿ, ಅಪ್ಪಿಕೊಂಡು ತಳವೆಳಗಾದೆ ಆನಂದಭರಿತಳಾದ ಭಾವವು ವಚನ ಪ್ರತಿಮೆಗಳಲ್ಲಿ ಪ್ರೇಮಿಯು, ಸತಿಯು ಆರಂಭದಲ್ಲಿ ಪತಿಯ ಹೆಸರು ಹೇಳದೆ, ಅವನ ರೂಪಲಾವಣ್ಯವನ್ನು ವರ್ಣಿಸಿ, ಕೊನೆಯಲ್ಲಿ 'ಚೆನ್ನಮಲ್ಲಿಕಾರ್ಜುನ' ನಾಮವನ್ನು ಬಹಿರಂಗಪಡಿಸುವ ಕ್ರಿಯೆ, ವಿಶಿಷ್ಟ ಹಿನ್ನೆಲೆಯುಳ್ಳದ್ದು. ನಮ್ಮ ದೇಶೀಯ ಸಂಸ್ಕೃತಿಯಲ್ಲಿ ಸತಿ ಒಗಟು ಹೇಳುತ್ತ ಕುತೂಹಲ ಹುಟ್ಟಿಸಿ ಪತಿಯ ಹೆಸರನ್ನು ಕೊನೆಯಲ್ಲಿ ಹೇಳುವ ರೂಢಿ, ಆಚರಣೆಗಳು ಪ್ರಚಲಿತವಿದ್ದುದನ್ನು ಅಕ್ಕಮಹಾದೇವಿ ತನ್ನ ವಚನದಲ್ಲಿ ಅಳವಡಿಸಿ, ವಚನ ಪ್ರತಿಮೆ ದೇಶೀ ಸಂಸ್ಕೃತಿಯ ಪ್ರಭಾವಲಯವನ್ನು ಹೊಂದಿರುವುದು ಸೊಗಸೆನಿಸುತ್ತದೆ.

ಅಕ್ಕಮಹಾದೇವಿಯ ಜೀವನ ಧ್ಯೇಯ ದೃಷ್ಟಿಗಳೆರಡು ಅಲೌಕಿಕ ಅನುಭೂತಿಗಾಗಿ ಏಕಾಗ್ರಗೊಂಡಿದ್ದ ರಿಂದ ವಚನಗಳಲ್ಲಿ ಆ ಭಾವಗಳೆಲ್ಲ ತುಂಬಿಕೊಂಡಿವೆ. ಅನುಭಾವವನ್ನು ಮೂರ್ತವಾಗಿ ನಿರೂಪಿಸಲು ಶಬ್ಧಚಿತ್ರಗಳು ಪೂರಕವಾಗಿ ಧಾರ್ಮಿಕ, ಆಧ್ಯಾತ್ಮಿಕ ಚಿಂತನೆಗಳು ಪ್ರತಿಮೆಯಲ್ಲಿ ಸಾಕಾರಗೊಂಡು ಅಂತರ್ಯದ ಅನುಭಾವ, ಬಾಹ್ಯದ ಭಾಷೆಯಲ್ಲಿ ಸಾಕ್ಷಾತ್ಕರಿಸಲ್ಪಟ್ಟಿದೆ. ತಾನು ಮೆಚ್ಚಿದ ಚೆನ್ನಮಲ್ಲಿಕಾರ್ಜುನನೊಡನೆ ಸಮಾಗಮ ಹೊಂದಲು ಬಯಸಿದ ಹೋರಾಟ ಹಂಬಲಗಳಲ್ಲಿ

'ಸತಿಪತಿ' ಸ್ಥಾಯಿ ಭಾವ ಮಡುಗಟ್ಟಿ ನಿಂತಿರುವುದನ್ನು ಹಲವು ಪ್ರತಿಮೆಗಳ ಉದಾಹರಣೆಗಳನ್ನು ನೋಡಬಹುದಾಗಿದೆ.

ಪ್ರೇಮ

> "ಇಂದ್ರನೀಲದ ಗಿರಿಯನೇರಿಕೊಂಡು,
> ಚಂದ್ರಕಾಂತದ ಶಿಲೆಯನಪ್ಪಿಕೊಂಡು,
> ಕೊಂಬ ಬಾರಿಸುತ ಎಂದಿಪ್ಪೆನೊ ಶಿವನೆ?
> ನಿಮ್ಮ ನೆನೆವುತ್ತ ಎಂದಿಪ್ಪೆನೊ?
> ಅಂಗಭಂಗ ಮನಭಂಗವಳಿದು
> ನಿಮ್ಮನೆಂದಿಂಗೊಮ್ಮೆ ನೆರೆವೆನಯ್ಯಾ ಚೆನ್ನಮಲ್ಲಿಕಾರ್ಜುನಾ?"[೪೨]

ಪ್ರೇಮ ಪರಿಕಲ್ಪನೆ ಅಕ್ಕಮಹಾದೇವಿಯಲ್ಲಿ ಅದ್ಭುತವಾಗಿ ವ್ಯಕ್ತವಾಗಿದೆ. ಪ್ರೇಮವನ್ನು ಆಂಗಿಕ ಭಾವನೆಗಳಲ್ಲಿ ಪ್ರಕಟಿಸಿದ ಮಹಾದೇವಿಯಕ್ಕ ದೇವನನ್ನು ಕೂಡುವ ತೀವ್ರತೆ ತಲ್ಲಣಗಳನ್ನು ಹೃದಯ ವೇದ್ಯವೆನಿಸುವಂತೆ ವರ್ಣಿಸಿದ್ದಾಳೆ. "ಪ್ರೇಮ ಹೆಣ್ಣಿನ ವಿಶಿಷ್ಟಗುಣ. ಆಕೆ ಅದು ಒಬ್ಬ ಗಂಡಿನ ಕಡೆ ತಿರುಗಿದಾಗ ಯಾವ ಉತ್ಕಟತೆಯನ್ನು ತೋರುತ್ತಾಳೊ, ಅದೇ ಉತ್ಕಟತೆಯನ್ನು ಆ ಪ್ರೇಮ ದೈವತ್ವದ ಕಡೆ ತಿರುಗಿದಾಗಲೂ ತೋರುತ್ತಾಳೆ. ಹೀಗೆ ದೈವತ್ವದ ಪ್ರೀತಿಗಾಗಿ ಹಾರೈಸುವ ಹೆಣ್ಣು ಹಾಗೆ ಹಾರೈಸುವ ಗಂಡಿಗಿಂತ, ಬಹುಶಃ ಹೆಚ್ಚು ಭಾವೋನ್ಮಾದಕ್ಕೆ ಉತ್ಕಟತೆಗೆ ಒಳಗಾಗುತ್ತಾಳೆ. ಮಾನವ ಪ್ರೇಮ ದೈವಿಕ ಪ್ರೇಮಗಳು ಒಂದಾಗುತ್ತವೆ. ಅಂದರೆ ಮಾನವ ಪ್ರೇಮವೆ ಅತೀತವಾದ ಪರತತ್ವದ ಕಡೆಗೆ ಕೈಚಾಚುವುದಾಗಿದೆ."[೪೩]

ಪರವಸ್ತುವಿನಲ್ಲಿನ ಸಮರಸದ ಬಯಕೆ, ಪ್ರೇಮದ ಅಭಿವ್ಯಕ್ತಿ ಲೈಂಗಿಕ ರೂಪಕ, ಪ್ರತಿಮಾ ವಿಧಾನದಲ್ಲಿ ಅಭಿವ್ಯಕ್ತಗೊಂಡಿದೆ. ದೈವಿಕ ಪ್ರೇಮಕ್ಕಾಗಿ ಪರಿತಪಿಸುವ ಪರಾಕಾಷ್ಠೆ ಭಾವ ಪ್ರತಿಮೆಯಲ್ಲಿದೆ. ಅಕ್ಕಮಹಾದೇವಿ ಆತ್ಮಾನುಸಂಧಾನದ ಗುರಿ ಸಾಧನೆಯಲ್ಲಿ ಎದುರಿಸಿದ ಸಂಕಷ್ಟಗಳು, ಆಂತರಿಕವಾದ ಮನೋವೇದನೆಯನ್ನು ಲೈಂಗಿಕ ಪರಿಭಾಷೆಯಲ್ಲಿ 'ಅಲಗು' ಪ್ರತಿಮೆಯಲ್ಲಿ ನಿರೂಪಿಸಿದ ರೀತಿ ತುಂಬಾ ಸತ್ವಶಾಲಿಯಾಗಿದೆ. ಗ್ರಾಮೀಣ ಬದುಕಿನ ದೇಶಿಭಾಷೆ ಪ್ರತಿಮೆಗೆ ಪೂರಕವಾಗಿ ಬಳಕೆಗೊಂಡಿರುವುದೇ ವೈಶಿಷ್ಯಪೂರ್ಣ.

'ಅಲಗು'

> "ಬಂಜೆ ಬೇನೆಯನರಿವಳೇ?
> ಬಲದಾಯಿ ಮುದ್ದ ಬಲ್ಲಳೆ?
> ನೊಂದವರ ನೋವ ನೋಯದವರೆತ್ತ ಬಲ್ಲರೋ?

ಚೆನ್ನಮಲ್ಲಿಕಾರ್ಜುನಯ್ಯನಿರಿದಲಗು
ಒಡಲಲ್ಲಿ ಮುರಿದು ಹೊರಳುವೆನ್ನಳಲನು
ನೀವೆತ್ತ ಬಲ್ಲಿರೆ, ಎಲೆ ತಾಯಿಗಳಿರಾ?"[೪೪]

'ಅಲಗು' ನೋವಿನ ತೀವ್ರತೆಯ ಸಂಕೇತವಾಗಿದೆ. 'ಬಂಜೆ' 'ಬಲದಾಯಿ'ನೋವು ನಲಿವನ್ನು ಅರಿಯದವರ ಪ್ರತೀಕವಾಗಿದೆ. ಚೆನ್ನಮಲ್ಲಿಕಾರ್ಜುನಯ್ಯನಿರಿದ ಅಲಗು ಒಡಲಲ್ಲಿ ಮುರಿದು ಭಾವ ಮೆಲುದನಿಯಲ್ಲಿ ನೋವಿನ ಚಿತ್ರಣವನ್ನು ಭಾಷೆಯಲ್ಲಿ ಕಣ್ಮುಂದೆ ತಂದು ನಿಲ್ಲಿಸುವಂತೆ ಚಿತ್ರಿಸಿದ್ದಾಳೆ. ಒಡಲಲ್ಲಿ ಮುರಿದ ಅಲಗು ಎತ್ತ ಹೊರಳಿದರೂ ನೋವು ನೀಡುವುದು. ಲೈಂಗಿಕ ಭಾಷೆ, ಕ್ರಿಯೆಯ ಮೂಲಕ ಆತ್ಮಾನುಸಂಧಾನದ ಸಂಕಷ್ಟವನ್ನು ಸಮೀಕರಿಸಿ ಅಭಿವ್ಯಕ್ತಗೊಂಡ ಪ್ರತಿಮೆಯಲ್ಲಿ ಬಾಹ್ಯದ ಪರಿಕರಗಳಿಂದ ಅಂತರಂಗವು ಪ್ರಕಟಗೊಂಡಿದೆ. ಲೌಕಿಕ ಅನುಭವದ ಮೂಲಕ ಚಿತ್ರಿಸಿದ ಸತಿಪತಿ ಭಾವದ ಪ್ರತಿಮೆ ಪ್ರಣಯ ಭಾವದ, ತೂರಿಯಾವಸ್ಥೆಯನ್ನು ಪ್ರತಿನಿಧಿಸುತ್ತದೆ.

ಸ್ನೇಹ

"ಮಚ್ಚು ಅಚ್ಚುಗವಾಗಿ ಒಪ್ಪಿದ ಪರಿಯ ನೋಡಾ.
ಎಚ್ಚಡೆ ಗರಿದೋರದಂತಿರಬೇಕು.
ಅಪ್ಪಿದಡೆ ಅಸ್ಥಿಗಳು ನುಗ್ಗುನುಸಿಯಾಗಬೇಕು.
ಬೆಚ್ಚಡೆ ಬೆಸುಗೆಯರಿಯದಂತಿರಬೇಕು.
ಮಚ್ಚು ಒಪ್ಪಿತ್ತು ಚೆನ್ನಮಲ್ಲಿಕಾರ್ಜುನನ ಸ್ನೇಹ ತಾಯೆ"[೪೫]

ತಾನೊಲಿದ ಚೆಲುವ ಚೆನ್ನಮಲ್ಲಿಕಾರ್ಜುನ ದೇವನನ್ನು ಕೂಡುವ ಕೂಟದ ಮಜಲುಗಳನ್ನು ಪ್ರತಿಮೆಯಲ್ಲಿ ಮಚ್ಚು(ಮೆಚ್ಚು, ಪ್ರೀತಿಸು) ಅಚ್ಚು ಪದಗಳಲ್ಲಿ ಸ್ನೇಹವಾದ ಬಗೆಯನ್ನು ಹೇಳಿದರೆ, ಸ್ನೇಹದಿಂದ ಕೂಡಿ ಸಮರಸವಾದ ರೀತಿಯನ್ನು 'ಎಚ್ಚರೆ ಗರಿದೋರದಂತೆ', ಅಪ್ಪಿದಡೆ ಅಸ್ಥಿಗಳು ನುಗ್ಗು ನುಸಿಯಾಗುವ ತೆರದಂತೆ, ಬಣ್ಣಿಸುವ ಅಕ್ಕ ಬೆರತಲ್ಲಿ ನಾನು ನೀನೆಂಬ ಭೇದ ತೋರದಂತಿರಬೇಕೆಂಬ ಮಾತಿನಲ್ಲಿ ಸಂಭೋಗದ ಸಮಾನ ಪ್ರತಿಮೆಯ ಮೂಲಕ ಲಿಂಗಾಂಗ ಸಮರಸದ ಕೂಟವನ್ನು 'ತಾಯೆ' ಪದದಲ್ಲಿ ಆತ್ಮೀಯತೆಯಿಂದ ಹೇಳುತ್ತಿರುವ ಅಭಿನಯ ಪ್ರತಿಮೆಯಲ್ಲಿ ಔಚಿತ್ಯಪೂರ್ಣ ಪದಗಳಿಂದ ಸೂಕ್ತ ನಾದ, ಲಯಗಳಿಂದ ಗ್ರಹಿತವಾಗುವದರಿಂದ ಶಬ್ಧಚಿತ್ರ ಅರ್ಥಪೂರ್ಣವೆನಿಸುತ್ತದೆ. ವಿರಹ, ವಿನೋದ, ಆನಂದ ವಚನ ಪ್ರತಿಮೆಗಳಲ್ಲಿ ಅಂತರ್ಗತವಾಗಿವೆ. ದೇವನ ಸಮಾಗಮದ ಅನುಭವವನ್ನು ಸದಾ ಸಾಕ್ಷಾತ್ಕಾರ ಮಾಡಿಕೊಳ್ಳುವ ಅದಮ್ಯ ಬಯಕೆ, ಅದರ ಬಗೆಯನ್ನು ಬಣ್ಣಿಸುವ ಆತ್ಮೀಯ ಧಾಟಿಯಿಂದ ಕೂಡಿದ ಪ್ರತಿಮೆ ಅಕ್ಕನ ಆಂತರ್ಯವನ್ನು ತೆರೆದಿಡುತ್ತದೆ.

ಸುಖ

"ಕೂಡಿ ಕೂಡುವ ಸುಖದಿಂದ
ಒಪ್ಪಚ್ಚಿ ಅಗಲಿ ಕೂಡುವ ಸುಖ ಲೇಸು, ಕೆಳದಿ!
ಒಚ್ಚೊತ್ತಗಲಿದಡೆ ಕಾಣದಿರಲಾರೆ.
ಎನ್ನ ದೇವ ಚೆನ್ನಮಲ್ಲಿಕಾರ್ಜುನನಗಲಿಯಗಲದ
ಸುಖವೆಂದಪ್ಪುದೋ?"[೪೬]

'ಕೂಡಿ ಕೂಡುವ ಸುಖದಿಂದ ಒಪ್ಪಚ್ಚಿ ಅಗಲಿ ಕೂಡುವ ಸುಖ ಲೇಸು' ವಾಕ್ಯವೇ ಒಂದು ಅಪರೋಕ್ಷ ಸಂದರ್ಭವನ್ನು ಕಟ್ಟಿಕೊಡುತ್ತದೆ. ಪ್ರೇಮಿಗಳು ಯಾವಾಗಲೂ ಕೂಡಿಕೊಂಡಿರುವ ಸುಖಕ್ಕಿಂತ ಕೆಲಕಾಲ ಅಗಲಿ ಮತ್ತೆ ಕೂಡಿದಾಗ ಹೆಚ್ಚು ಸುಖ, ಕುತೂಹಲ, ರಮ್ಯತೆಯಿಂದ ಪ್ರೇಮ ಮಧುರವೆನಿಸುತ್ತದೆ. ಅಕ್ಕಮಹಾದೇವಿಯ ಸುಖ ಭೌತಿಕ ಪ್ರಪಂಚದ ಧಾವತಿಯ ಸುಖದಂತಲ್ಲ. ಪಾರಮಾರ್ಥಿಕ ಆನಂದದ ಮಿಲನವದು. ಆದರೆ ಪ್ರತಿಮಾ ವಿಧಾನ ಮಾತ್ರ ಪ್ರಾಪಂಚಿಕ ನೆಲೆಯುಳ್ಳದ್ದು.

ಲೌಕಿಕ ಪ್ರೇಮ ಸಂಬಂಧದಲ್ಲಿರುವ ತೀವ್ರತೆ, ಕಾತುರ, ಕಳವಳ, ಅಗಲಿ ಕೂಡಿದಾಗ ಅನುಭವಿಸುವ ಮಧುರ ಯಾತನೆಯ ಪ್ರೇಮ ಶೃಂಗಾರ ದೃಶ್ಯಕಾವ್ಯವನ್ನು ಪ್ರತಿಮೆಯಲ್ಲಿ ಸಮೀಕರಿಸಿ ತನ್ನೊಲುಮೆಯ ದೇವ ಚೆನ್ನಮಲ್ಲಿಕಾರ್ಜುನನನ್ನು ಇಷ್ಟಲಿಂಗ ದೃಷ್ಟಿ ಧ್ಯಾನದಿಂದ ಪ್ರಾಣಲಿಂಗಾನುಸಂಧಾನದ ಪರಮ ಸುಖವನ್ನು ಹೊಂದುವ ಅಪಾರ ಆಕಾಂಕ್ಷೆ. ಅನುಸಂಧಾನದಿಂದ ಅಗಲದ ಸುಖ ಎಂದು ಸಾಧ್ಯವಾಗುವುದೊ ? ಎಂಬ ಪ್ರಶ್ನಾರ್ಥಕ ಭಾವ ಹೃದಯಸ್ಪರ್ಶಿಯಾದ ಅನುಭವದಲ್ಲಿ ಪ್ರತಿಮೆ ಅಂತ್ಯಗೊಳ್ಳುತ್ತದೆ.

ಭಾಷೆಯಲ್ಲಿ ಭಾವಾಭಿನಯವನ್ನು ನಿರ್ಮಿಸಿ ಒಂದು ಸುಂದರ ರೂಪಕದ ಮುಖೇನ ಹಮ್ಮು ಬಿಮ್ಮುಗಳಿಲ್ಲದೆ ಪ್ರತಿಮಾಕೃತಿ ರೂಪುಗೊಳ್ಳುವ ಶಬ್ಧಶಿಲ್ಪವನ್ನು ಉದಾಹರಣೆಗಾಗಿ ನೋಡಬಹುದು.

ದಾಂಪತ್ಯ

"ಗಂಡನೀನು ಹೆಂಡತಿಯಾನು ಮತ್ತೊಬ್ಬರಿಲ್ಲಯ್ಯಾ.
ನಿನ್ನ ಬೆಂಬಳಿಯಲಾನು ಮೆಚ್ಚಿ ಬಂದೆ.
ಕಂಡಕಂಡವರೆಲ್ಲ ಬಲುಹಿಂದ ಕೈಹಿಡಿದರೆ,
ಗಂಡಾ, ನಿನಗೆ ಸೈರಣೆಯೆಂತಾಯಿತ್ತು ಹೇಳಾ?
ಚೆನ್ನಮಲ್ಲಿಕಾರ್ಜುನಯ್ಯಾ,

ನಿನ್ನ ತೋಳ ಮೇಲಣವಳನನ್ಯರೆಳದೊಯ್ಯುವರೆ
ನೋಡುತಿಹುದುಚಿತವೆ ಕರುಣಿಗಳರಸಾ?"[೪೭]

ಪ್ರತಿಮೆಯಲ್ಲಿ ಸತಿಪತಿ ಸ್ಥಾಯಿಭಾವ ಪ್ರಧಾನವಾಗಿದ್ದು ಸಂರಕ್ಷಣೆಯ ಹೊಣೆಯನ್ನು ಹೆಂಡತಿ ಗಂಡನಿಗೆ ನೆನಪಿಸುವ ಸಂದರ್ಭವನ್ನು ಸೊಗಸಾಗಿ ಚಿತ್ರಿಸಿದ್ದಾಳೆ. ಮೆಚ್ಚಿ ಬಂದ ಹೆಂಡತಿಯ ಸಂರಕ್ಷಣೆಯ ಭಾರ ಗಂಡನದು. ಕಂಡಕಂಡವರೆಲ್ಲ ಬಲುಹಿಂದ ಕೈಹಿಡಿದರೆ, ಗಂಡನಾದವನು ಸಹಿಸಬಹುದೆ? ಲೋಕ ನೀತಿಯಲ್ಲಿ ಗಂಡನಿಗೆ ಅದು ಸಹ್ಯವೆ? ಅದನ್ನು ನೋಡುತ್ತ ಸುಮ್ಮನಿರುವುದು ಗಂಡನಾದವನಿಗೆ ಯೋಗ್ಯವಲ್ಲ, ಲೋಕವ್ಯವಹಾರದಲ್ಲಿಯ ಪತಿ ಧರ್ಮವನ್ನು ಅಲೌಕಿಕ ಪತಿ ಚೆನ್ನಮಲ್ಲಿಕಾರ್ಜುನನು ಈಡೇರಿಸಬೇಕೆಂಬ ಅಂತಃಕರಣ, ಕರುಣಾಭಾವ ಪ್ರತಿಮೆಯಲ್ಲಿ ಅನಾವರಣಗೊಂಡಿದೆ. ನಿನ್ನ ತೋಳ ಮೇಲಣವಳ ಅನ್ಯರೆಳದೊಯ್ಯುವರೆ ನೋಡುತಿಹುದುಚಿತವೆ ಕರುಣಿಗಳರಸಾ? ಇದು ಸವಾಲೆಸೆದು ಸಾಮರ್ಥ್ಯ ಪರೀಕ್ಷೆಯನ್ನುಂಟು ಮಾಡುತ್ತದೆ. ಅನ್ಯ ವಿಷಯಾದಿಗಳು ಎಳೆದೊಯ್ಯುವಾಗ ನೋಡದೆ, ಸುಮ್ಮನಿರದೆ ಕರುಣಿಸು, ರಕ್ಷಿಸು, ಎಂಬ ಆರ್ತನಾದ ವಚನ ಧೋರಣೆಗೆ ತಕ್ಕುದಾಗಿದೆ. ಆಧ್ಯಾತ್ಮದ ಪಥದಲ್ಲಿ ಮುನ್ನಡೆಯುವಾಗ ಬಾಹ್ಯ ಅಡೆತಡೆಗಳೆಷ್ಟೋ, ಅದಕ್ಕಿಂತಲೂ ಆಂತರಿಕ ಸಂಘರ್ಷಗಳು ಭಕ್ತನ ಮನವನ್ನು ಭಂಗಗೊಳಿಸಿ ಕಂಗೆಡಿಸುವ ತಲ್ಲಣವನ್ನು ಶಬ್ಧಗಳಲ್ಲಿ ಸಾಕ್ಷೀಕರಿಸಿದ್ದಾಳೆ ಅಕ್ಕಮಹಾದೇವಿ.

ಹಳ್ಳ

"ಹಿಂದಣ ಹಳ್ಳ, ಮುಂದಣ ತೊರೆ,
ಸಲ್ಲುವ ಪರಿಯೆಂತು ಹೇಳಾ!
ಹಿಂದಣ ಕೆರೆ, ಮುಂದಣ ಬಲೆ,
ಹದುಳವಿನ್ನೆಲ್ಲಿಯದು ಹೇಳಾ!
ನೀನಿಕ್ಕಿದ ಮಾಯೆ ಕೊಲುತಿಪ್ಪುದು
ಕಾಯಯ್ಯಾ, ಕಾಯಯ್ಯಾ ಚೆನ್ನಮಲ್ಲಿಕಾರ್ಜುನಾ."[೪೮]

ಲೌಕಿಕ ಪಾರಮಾರ್ಥಿಕ ದ್ವಂದ್ವ ಮನಸ್ಥಿತಿಯ ಸಂಕೇತವಾಗಿ ಹಳ್ಳ, ತೊರೆ, ಕೆರೆ, ಬಲೆಗಳು ವಚನ ಪ್ರತಿಮೆಯಲ್ಲಿ ಬಳಕೆಗೊಂಡಿವೆ. ದ್ವಂದ್ವದಲ್ಲಿ ಸಿಲುಕಿದ ಮನುಷ್ಯನಿಗೆ ಎತ್ತ ಸಾಗಬೇಕೆಂಬ ದಾರಿ ತೋರದಿರುವಾಗ ಆಗುವ ತೊಳಲಾಟ ತಲ್ಲಣಗಳು, ವರ್ಣಿಸಲಸದಳ! ತನು–ಮನ– ಭಾವಗಳಲ್ಲಿ ದೇವನನ್ನು ಕೂಡುವ ಹಂಬಲವನ್ನೇ ಹೊಂದಿದ ಅಕ್ಕಮಹಾದೇವಿಗೆ, ಲೌಕಿಕ ಬದುಕಿನ ಅಡ್ಡಿ ಆತಂಕಗಳು ಆಂತರಿಕ ವಿಷಯಾದಿಗಳಿಂದ ಉಂಟಾಗುವ ಕಳವಳಗಳು ಕಂಗೆಡಿಸಿವೆ.

'ಹಿಂದಣ ಹಳ್ಳ, ಮುಂದಣ ತೊರೆ' ಹಿಂದಣ ಕೆರೆ, ಮುಂದಣ ಬಲೆ, ಉದ್ಗಾರಗಳು ಹೃದಯಸ್ಪರ್ಶಿಯಾಗಿ ಅಭಿವ್ಯಕ್ತಗೊಂಡಿವೆ. ನೋವಿನ ವಿಶಾದದ ಧ್ವನಿ ತರಂಗಗಳು ಹೊರಹೊಮ್ಮುತ್ತಿರುವ ಅನುಭವ ಪ್ರತಿಮೆಯಲ್ಲಿ ಪರಿಣಾಮಕಾರಿಯಾಗಿ ಮೂಡಿನಿಂತಿದೆ. ದೇವನಲ್ಲಿ ಆಂತರ್ಯವನ್ನು ತೆರೆದಿಟ್ಟು ಅನನ್ಯ ಶರಣಾಗತಿ ಭಾವ ಅರ್ಥಪೂರ್ಣತ್ವ ಪಡೆದುಕೊಂಡಿದೆ.

ಅಕ್ಕಮಹಾದೇವಿ ಪಾರಮಾರ್ಥಿಕ ದಿವ್ಯಾನುಭವ ಪಡೆಯಲು ಮಾರ್ಗದರ್ಶಿಯಾದ ಗುರು, ತೋರಿದ ಮಾರ್ಗವನ್ನು 'ಹೋರಾಟ' ಪ್ರತಿಮೆಯ ಮೂಲಕ ಅದ್ಭುತವಾಗಿ ಅಭಿವ್ಯಕ್ತಗೊಳಿಸಿ ಧನ್ಯತೆಯನ್ನು ಹೊಂದಿದ್ದಾಳೆ.

'ಹೋರಾಟ'

"ಗುರುವೆಂಬ ತೆತ್ತಿಗನು
ಲಿಂಗವೆಂಬಲಗನು ಮನನಿಷ್ಠೆಯೆಂಬ ಕೈಯಲ್ಲಿ ಕೊಡಲು,
ಕಾದಿದೆ ಗೆಲಿದೆ ಕಾಮನೆಂಬವನ,
ಕ್ರೋಧಾದಿಗಳು ಕೆಟ್ಟು, ವಿಷಯಂಗಳೋಡಿದವು.
ಅಲಗು ಎನ್ನೊಳು ನಟ್ಟು, ಆನಳಿದ ಕಾರಣ
ಚೆನ್ನಮಲ್ಲಿಕಾರ್ಜುನಲಿಂಗವ ಕರದಲ್ಲಿ ಹಿಡಿದೆ."[೪೯]

ಶಬ್ಧದ ಸಾಕಾರ ರೂಪದಿಂದ ನಿರಾಕಾರ ದೀಪ್ತಿಯಾಗಿ ಆನಂದದ ಅನುಭಾವವನ್ನು ಮೂರ್ತ ಶಬ್ಧ ಪರಿಕರಗಳಿಂದ ಪ್ರತಿಮಾಕೃತಿಯಲ್ಲಿ ಹಿಡಿದಿಟ್ಟಿರುವ ಅಕ್ಕಮಹಾದೇವಿಯ ಅದ್ಭುತ ಪ್ರತಿಭಾಶಕ್ತಿ ದೈವದತ್ತವಾದುದು. ಯುದ್ಧದ ವೇಷಧರಿಸಿ ಹೋರಾಡುತ್ತಿರುವ ವೀರ ಯೋಧನ ಭೌತಿಕ ಹೋರಾಟದ ಸಂದರ್ಭದ ಚಿತ್ರಣವನ್ನು ಅಲೌಕಿಕ ಅಂತರಂಗದ ಹೋರಾಟದೊಡನೆ ಸಮೀಕರಿಸಿ, ಶಬ್ಧಶಿಲ್ಪದಲ್ಲಿ ವ್ಯಕ್ತಗೊಳಿಸಿರುವಳು. ಹಿತಚಿಂತಕನಾದ ಗುರು ನಿಷ್ಠೆಯುಳ್ಳ ಮನಸ್ಸಿನ ಕೈಯಲ್ಲಿ ಲಿಂಗವೆಂಬ ಅಲಗನ್ನು ಕೊಟ್ಟು ಹೋರಾಡಲು ಪ್ರೇರೆಪಿಸುವನು. ಲಿಂಗವೆಂಬ ಕತ್ತಿಯ ನೆರವಿನಿಂದ ಕಾಮನೊಡನೆ ಕಾದು ಗೆದ್ದೆ. ಕ್ರೋದಾಧಿ ಅರಿಷಡ್ವರ್ಗಗಳು ಓಡಿಹೋದವು. ಗುರುಕೊಟ್ಟ ಲಿಂಗವೆಂಬಲಗು ಅಂತರಂಗದಲ್ಲಿ ನಟ್ಟು ನಾನೆಂಬ ಭಾವವಳಿದು ದೇವ ಚೆನ್ನಮಲ್ಲಿಕಾರ್ಜುನನಲ್ಲಿ ಬೆರೆತೆನೆಂಬ ಧನ್ಯತೆಯ ನುಡಿ ಹೋರಾಟದ ರೂಪಕ, ಸುಂದರ ಪ್ರತಿಮಾಕೃತಿಯಾಗಿ ಬದಲಾಗುವ ಅಖಂಡ ಚಿತ್ರಣ ಎಲ್ಲಿಯೂ ಮುಕ್ಕಾಗದಂತೆ ಅಭಿವ್ಯಕ್ತಗೊಂಡಿದೆ. 'ಗುರುತೆತ್ತಿಗ' ಲಿಂಗವೆಂಬ ಅಲಗು, ಮನ ನಿಷ್ಠೆಯೆಂಬ ಕೈಯಲ್ಲಿ ಕಾದಿದೆ ಕೊಡಲು ಗೆಲಿದೆ ಕ್ರೋದಾಧಿಗಳು ಕೆಟ್ಟು ಓಡಿದ ಗತಿ ತೀವ್ರತೆ, 'ಅಲಗು ಎನ್ನೊಳು ನಟ್ಟು' ಎಂಬ ಮೆಲುಧ್ವನಿ 'ಆನಳಿದು' ಸಮರಸದ ಮೌನ ಭಾವದಲ್ಲಿ ಪ್ರತಿಮೆ ನಿಲುಗಡೆ ಹೊಂದುತ್ತದೆ. 'ಶಬ್ಧದಿಂದ ನಿಶ್ಯಬ್ಧದೆಡೆಗೆ' ಪ್ರತಿಮೆ ಪ್ರವಾಹದ

ರೀತಿಯಲ್ಲಿ ಚಲಿಸುತ್ತ ಮೌನ ವಾರಿಧಿಯಲ್ಲಿ ಲೀನವಾದ ಅನುಭವ ವ್ಯಕ್ತವಾಗಿದೆ. ಅಕ್ಕಮಹಾದೇವಿ ಯೋಧನಾಗಿ ಪುರುಷತ್ವದ ನೆಲೆಯಲ್ಲಿ ಪರಿವರ್ತಿತಳಾದ ಪರಾಕ್ರಮ ಮನಸ್ಥಿತಿಯು ಪ್ರತಿಮೆಯಲ್ಲಿ ವೀರ ರಸವನ್ನು ಪ್ರತಿಧ್ವನಿಸುತ್ತದೆ.

ದೈನಂದಿನ ಭೌತಿಕ ಜಗತ್ತಿನ ಲಘು ಸಂಗತಿಗಳಿಂದ ಘನವನ್ನು ವಿವರಿಸಿದ ಅಕ್ಕಮಹಾದೇವಿ ಶಬ್ಧಗಳಲ್ಲಿ ಸಜೀವ ರೂಪವನ್ನು ಕಟ್ಟಿಕೊಡಬಲ್ಲ ಶಕ್ತಿ ಹೊಂದಿದವಳು. ಗುರುಕಾರುಣ್ಯದಿಂದ ಹರನ ಕೂಡಿದ ಬಗೆಗಿನ ಕೃತಜ್ಞ ಭಾವವನ್ನು ಪ್ರಕೃತಿಯ ಎರಡು ಭಿನ್ನ ವಸ್ತು ವಿಷಯಗಳಿಂದ ಬಣ್ಣಿಸಿದ್ದಾಳೆ.

ಗುರುಕಾರುಣ್ಯ

"ಅರಲುಗೊಂಡ ಕೆರೆಗೆ ತೊರೆಬಂದು ಹಾಯ್ದಂತಾಯಿತ್ತು.
ಬರಲುಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು ನೋಡಾ ಇಂದೆನಗೆ.
ಇಹದ ಸುಖ ಪರದ ಗತಿ ನಡೆದು ಬಂದಂತಾಯಿತ್ತು ನೋಡಾ ಎನಗೆ.
ಚೆನ್ನಮಲ್ಲಿಕಾರ್ಜುನಯ್ಯಾ,
ಗುರುಪಾದವ ಕಂಡು ಧನ್ಯಳಾದೆ ನೋಡಾ."[೫೦]

ಆರಲುಗೊಂಡ ಕೆರೆಗೆ ತೊರೆ ಬಂದು ಹಾಯುವುದು. ಬರಲುಗೊಂಡ ಸಸಿಗೆ ಮಳೆ ಸುರಿಯುವುದು. ಎರಡು ಉಪಮೆಗಳು ವಿಭಿನ್ನ ಸಂದರ್ಭಗಳು ಪ್ರತಿಮೆಯಲ್ಲಿ ಒಂದಕ್ಕೊಂದು ಪೂರಕವಾಗಿ ಸಂಯೋಜಿತಗೊಂಡಿರುವುದು ವೈಶಿಷ್ಟ್ಯಪೂರ್ಣ! ಆರಲುಗೊಂಡ ಕೆರೆ, ಬರಲುಗೊಂಡ ಸಸಿ, ದೀನತೆಯ ಭಾವ ಸೂಚಕಗಳಾಗಿವೆ. ತೊರೆ, ಮಳೆ, ಕರುಣೆಯ ಪ್ರತೀಕಗಳಾಗಿ ಪ್ರತಿಮೆಗೆ ಜೀವಚೈತನ್ಯ ತುಂಬಿವೆ. ಭಕ್ತನಿಗೆ ಗುರುವಿನ ಕರುಣೆ ಸಾರ್ಥಕತೆಯ ಪಥವನ್ನು ಅರುಹುತ್ತದೆ. ಆನಂದದ ಅನುಭೂತಿಯನ್ನು ನೀಡುತ್ತದೆ. ಲಿಂಗಾನುಸಂಧಾನದಿಂದ ಹರ್ಷೋಲ್ಲಾಸ ಹೊಂದಿದ ಅಕ್ಕಮಹಾದೇವಿಯ ಹೃದಯಾಂತರಾಳದಿಂದ ಹೊರಹೊಮ್ಮಿದ ಧನ್ಯತಾಭಾವ ವಚನ ಪ್ರತಿಮೆಯಲ್ಲಿ ಅನಾವರಣಗೊಂಡಿದೆ.

ಸಾಮಾಜಿಕ ಪ್ರತಿಮೆಗಳು

ಅಕ್ಕಮಹಾದೇವಿ ಬಸವಾದಿ ಶರಣರಂತೆ ಸಮಾಜ ಸುಧಾರಣೆಯ ಧ್ಯೇಯೋದ್ದೇಶವನ್ನು ಪ್ರಧಾನವಾಗಿಟ್ಟುಕೊಂಡು ತತ್ವಬೋಧೆ ಮಾಡಿದವಳಲ್ಲ. ವೈಯಕ್ತಿಕ ನೆಲೆಯಲ್ಲಿ ಆಧ್ಯಾತ್ಮಿಕ ಅನುಭಾವಕ್ಕೆ ತುಡಿಯುವ ಮನಸ್ಥಿತಿ ಹೊಂದಿದ್ದರೂ, ಸಮಾಜದಿಂದ ವಿಮುಖಳಾದವಳಲ್ಲ. ವ್ಯಕ್ತಿಗತ ಬದುಕು, ವಿಚಾರಗಳಲ್ಲಿ ಸಮಾಜದ ಸಾಂಪ್ರದಾಯಿಕ ರೂಢಿ, ಆಚರಣೆಗಳನ್ನು ಮೀರಿದ್ದರೂ, ಸಮಾಜದ

ಒಳಿತು ಕೆಡುಕುಗಳ ಬಗೆಗಿನ ಆಲೋಚನೆ ಚಿಂತನೆಗಳಿಂದ ದೂರ ಸರಿದವಳಲ್ಲ. ಸಾಂದರ್ಭಿಕವಾಗಿ ಸಾಮುದಾಯಿಕ ಹಿತಚಿಂತನೆಯ ಬಗೆಗೂ ಅಭಿವ್ಯಕ್ತಿಗೊಳಿಸಿದ ಹಲವಾರು ವಚನಗಳು ಕಾಣಸಿಗುತ್ತವೆ.

ಸಮಾಜದ ಶಾಂತಿ ಸೌಹಾರ್ದತೆ, ಜೀವಿಗಳಲ್ಲಿ ಸಾಮರಸ್ಯ, ಅಪಮಾನ, ನಿಂದೆ, ತಿರಸ್ಕಾರಗಳೆದುರಾದಾಗ ಅಂಜದ ದೃಢ ಮನೋಭಾವವನ್ನು ಬೆಳೆಸಿಕೊಳ್ಳುವ ಸಕಾರಾತ್ಮಕ ಪ್ರತಿಕ್ರಿಯೆ ಧೋರಣೆಗಳು, ಸಮಾಜಮುಖಿ ಕಳಕಳಿಯನ್ನು ವ್ಯಕ್ತಪಡಿಸುತ್ತ, ಜನಸಾಮಾನ್ಯರಿಗೂ ಅರ್ಥವಾಗುವಂತೆ ಸರಳ ಶಬ್ಧಚಿತ್ರಗಳ ಮೂಲಕ, ದೇಶೀ ನುಡಿಗಟ್ಟುಗಳನ್ನು ಬಳಸಿ ಸಮಾಜ ಸಂಸ್ಕೃತಿ ಪ್ರಗತಿಪರವಾಗಿರಬೇಕೆಂಬ ಆಶಯವನ್ನು ಅಭಿವ್ಯಕ್ತಗೊಳಿಸಿದ್ದಾಳೆ. ಸಾಮಾಜಿಕ ಪ್ರತಿಮೆಗಳ ತಾತ್ವಿಕ ಚಿಂತನೆಗಳನ್ನು ಒಳಗೊಂಡು ಸಮಾಜಮುಖಿಯಾದ ಬದುಕನ್ನು ಎತ್ತಿ ಹಿಡಿದಿರುವಳು.

ಬೆಟ್ಟ

"ಬೆಟ್ಟದ ಮೇಲೊಂದು ಮನೆಯ ಮಾಡಿ,
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯ ಮಾಡಿ,
ನೊರೆ ತೊರೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯ ಮಾಡಿ,
ಶಬ್ಧಕ್ಕೆ ನಾಚಿದೊಡೆಂತಯ್ಯ?
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯ,
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು."[೫೧]

ಬೆಟ್ಟ, ಸಮುದ್ರ, ಸಂತೆ, ಪದಗಳಲ್ಲಿ ಅಕ್ಕಮಹಾದೇವಿ ವಚನ ಪ್ರತಿಮೆಯನ್ನು ರೂಪಿಸಿ, ಲೌಕಿಕ ಜಗತ್ತಿನಲ್ಲಿ ಏರಿಳಿತಗಳ ಸಂಕೇತವಾಗಿ ಸಮುದ್ರ, ನೊರೆತೊರೆ ಸಂತೆಯಲ್ಲಿನ ಮನೆ, ಸ್ಥೈರಣೆ ಸಮಾಧಾನಗಳ ಪ್ರತೀಕವಾಗಿ ಬಳಸಿ, ಬೆಟ್ಟ ಸ್ಥಿರತೆಯನ್ನು ದೃಢತೆಯನ್ನು ಪ್ರತಿನಿಧಿಸುವಂತೆ ಸಮಾಜಜೀವಿ ಸ್ತುತಿ ನಿಂದೆಗಳಿಗೆ ಸೋಲದ ಧೃತಿಗೆಡದ ಮನಸ್ಥಿತಿಯನ್ನು ಹೊಂದಬೇಕೆಂಬ ಅಭೀಪ್ಸೆಯನ್ನು ಅಭಿವ್ಯಕ್ತಗೊಳಿಸಿರುವಳು. "ಇದರಲ್ಲಿ ಕೊನೆಯ ಸಾಲುಗಳಲ್ಲಿ ಹೇಳಿರುವ ಸತ್ಯವನ್ನು ಬಲಪಡಿಸುವ ಸಲುವಾಗಿ ಮೊದಲಿನ ಪ್ರತಿಮೆಗಳು ಮೂಡಿಬಂದಿವೆ. ಅವು ಒಂದೊಂದು ಬೇರೆ ಬೇರೆ ಚಿತ್ರಗಳನ್ನು ಇರಿಸುತ್ತ ಹೋದರೂ ಕೂಡ ಒಂದೇ ಮೂಲಭೂತವಾದ ಅನುಭವವನ್ನು ತೀವ್ರಗೊಳಿಸುವಲ್ಲಿ ಸಾರ್ಥಕವಾಗುತ್ತವೆ. ಈ ಏಕಮುಖ ಪರಿಣಾಮಕಾರತ್ವ ಬಿಡಿ ಪ್ರತಿಮೆಗಳಲ್ಲಿ

ವಿಶಿಷ್ಟವಾಗಿ ಕಂಡುಬರುತ್ತದೆ. ಆ ಮೂಲಕ ಅಲ್ಲಿ ವ್ಯಕ್ತವಾಗುವ ಭಾಷೆಯ ಧ್ವನಿಶಕ್ತಿ ಇಡೀ ವಚನಕ್ಕೆ ಒಂದು ಸಾಮಾಜಿಕ ಆಯಾಮವನ್ನು ತಂದುಕೊಡುತ್ತದೆ."[೫೨]

ಬಸವಾದಿ ಶರಣರ ತಾತ್ವಿಕ ಸಿದ್ಧಾಂತಗಳನ್ನು ಒಪ್ಪಿಕೊಂಡು ಅಕ್ಕಮಹಾದೇವಿ ಆ ಚಿಂತನೆಗಳನ್ನು ವಚನಾಭಿವ್ಯಕ್ತಿಯಲ್ಲಿ ಪ್ರತಿಮಾರೂಪದಲ್ಲಿ ಚಿತ್ರಿಸಿ ಸಾಮಾಜಿಕ ಚಿಂತನೆಗಳನ್ನು ಗೈದು ಸುಜ್ಞಾನ ಮತ್ತು ಸದಾಚಾರದ ಅವಶ್ಯಕತೆಯನ್ನು ಸುಂದರ ಸರಳ ಶಬ್ದಾಕೃತಿಯಲ್ಲಿ ನಿರೂಪಿಸಿ, ಅರಿವಿಲ್ಲದ ಆಚಾರ ನಿಷ್ಪ್ರಯೋಜಕವಾದುದೆಂಬ ಅರಿವನ್ನು ಅರುಹಿರುವಳು.

ತುಷ

"ಅಕ್ಕಿಯಿಲ್ಲದ ತುಷಕ್ಕೆ ಅಗ್ಗವಣಿಯನೆರೆದಡೆ
ಅದೆಂದಿಗೆ ಬೆಳೆದು ಫಲವಪ್ಪುದಯ್ಯಾ?
ಅರಿವಿಲ್ಲದವರಿಗೆ ಆಚಾರವಿದ್ದಡೆ
ಅರಕೆಗೆಟ್ಟು ಸುಖವೆಂದಪ್ಪುದಯ್ಯಾ?
ಹೊರೆದ ಪರಿಮಳ ಸ್ಥಿರವಾಗಬಲ್ಲುದೆ?
ಎನ್ನದೇವ ಚೆನ್ನಮಲ್ಲಿಕಾರ್ಜುನನರಿಯದವರಿಗೆ
ಆಚಾರವಿಲ್ಲ ಕಾಣಿರಣ್ಣಾ."[೫೩]

ಅರಿವಿಲ್ಲದ ಅಂಧಾನುಕರಣೆಯನ್ನು ಅಕ್ಕಿಯಿಲ್ಲದ ತುಷಕ್ಕೆ(ತೌಡು) ಹೋಲಿಸಲಾಗಿದೆ. ಅರಿವು, ಆಚಾರಗಳ ಸಮನ್ವಯದ ಪ್ರಾಮುಖ್ಯತೆಯನ್ನು ಎರಡು ವಿಭಿನ್ನ ವಸ್ತು ವಿಷಯಗಳೊಂದಿಗೆ ತಾದಾತ್ಮ್ಯಗೊಳಿಸಿ ಪ್ರತಿಮೆಗೆ ಹೆಚ್ಚಿನ ಅರ್ಥವಂತಿಕೆ ನೀಡಲು ಅಕ್ಕಮಹಾದೇವಿ ದಿನನಿತ್ಯದ ಪರಿಕರಗಳನ್ನು ಔಚಿತ್ಯಪೂರ್ಣ ಶಬ್ಧಗಳಲ್ಲಿ ಗ್ರಹಿಸಿ ಪರಿಣಾಮಕಾರಿಯಾಗಿ ಚಿತ್ರಿಸಿರುವುದನ್ನು ಕಾಣುತ್ತೇವೆ. ನಿಜದರಿವಿಲ್ಲದ ಮೌಢ್ಯ ಆಚರಣೆಗಳು, ಅಂಧಾನುಕರಣೆಗಳು ಎಷ್ಟೊಂದು ನಿಷ್ಪ್ರಯೋಜಕ ಎಂಬುದನ್ನು ಸಮರ್ಥಿಸಲು ಅಕ್ಕಮಹಾದೇವಿ ಎರಡು ದೃಷ್ಟಾಂತಗಳಿಂದ ಹೇಳುತ್ತ ಅಕ್ಕಿಯಿಲ್ಲದ ತೌಡು, ಹೊಟ್ಟನ್ನು ಭೂಮಿಯಲ್ಲಿ ಬಿತ್ತಿ ಅಗ್ಗವಣಿ(ನೀರು) ಎರೆದರೆ ಫಲ ನೀಡುವುದೆ? ಸಿಂಪಡಿಸಿಕೊಂಡ ಸುವಾಸನೆ ಕೆಲವು ಗಂಟೆಗಳವರೆಗೆ ಪರಿಮಳ ಬೀರಬಹುದಲ್ಲದೆ ಮಕರಂದವನ್ನು ಸ್ಥಿರವಾಗಿ ಸೂಸುವುದೆ? ಪ್ರತಿಮೆಯಲ್ಲಿ ಪ್ರಶ್ನಿಸುತ್ತ ಉತ್ತರವನ್ನು ಅಡಕವಿಟ್ಟು ನಿರೂಪಿಸುವ ಕೌಶಲ್ಯ ಎದ್ದು ತೋರುತ್ತದೆ. 'ಅರಕೆಗೆಟ್ಟು' ಪದ ಅಜ್ಞಾನದ ನಡುವಳಿಕೆಗಳಿಂದ ಸುಖ ಸಿಗದು ಎಂಬುದನ್ನು ಸಮರ್ಥವಾಗಿ ಪ್ರತಿಬಿಂಬಿಸುತ್ತದೆ. ಸುಜ್ಞಾನ ಸತ್ಕ್ರಿಯೆ ಎರಡು ದೃಷ್ಟಿಗಳಂತೆ. ಒಂದನ್ನು ಹೊರತು ಪಡಿಸಿದರೆ ಮತ್ತೊಂದಕ್ಕೆ ಅಸ್ತಿತ್ವವಿರದು. ಅರಿವು ಆಚಾರದ ಧ್ಯೇಯ ದೇವನರಿಯುವುದು.

ಅನುಭವದ ನಿಲುವನ್ನು ಹೊಂದಲು ಅರಿವು ಆಚಾರಗಳ ಸಮನ್ವಯವಿರಬೇಕೆಂಬುದನ್ನು ಪ್ರತಿಮೆಯಲ್ಲಿ ಸಾಕ್ಷೀಕರಿಸಲಾಗಿದೆ.

ಮಾನವ ಜನ್ಮದಲ್ಲಿ ನಿಜಾನುಭವ ಹೊಂದದೆ ಅಶನ ವ್ಯಸನಕ್ಕಾಗಿ ಹೋರಾಡಿ ವ್ಯರ್ಥ ಸತ್ತು ಹೋಗುವ ಮನುಷ್ಯನ ಜೀವನವನ್ನು ಸೂಚಿಸಲು ಅಕ್ಕಮಹಾದೇವಿ ಬಳಸುವ ಉಪಮಾಕೃತಿಯ ವೈಶಿಷ್ಟ್ಯವನ್ನು ನೀರೊಳಗಿದ್ದು ಅಗಸ ಬಾಯಾರಿ ಸತ್ತಂತಹ ಪ್ರತಿಮೆಯಲ್ಲಿ ಗುರುತಿಸಬಹುದಾಗಿದೆ. ದೇಶೀ ಉಪಮೆಯ ಸಶಕ್ತ ನಿರೂಪಣೆ ಪ್ರತಿಮೆಗೆ ಕಾವ್ಯ ಸೌಂದರ್ಯ, ಧ್ವನಿ ಶಕ್ತಿಯನ್ನು ತಂದುಕೊಟ್ಟಿದೆ. ನಿಜಾನುಭವವನ್ನು ಹೊಂದದ ಮನುಷ್ಯನ ಬಾಳುವೆ ಗೋಳಿನ ಕಂತೆ ಎಂಬುದನ್ನು ಮನವರಿಕೆ ಮಾಡಿ ಜಾಗ್ರತಗೊಳಿಸುವ ಪರಿ ಪ್ರತಿಮೆಯಲ್ಲಿ ವ್ಯಕ್ತವಾಗಿದೆ.

"ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು.
ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು.
ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ,
ತಮ್ಮೊಳಗಿರ್ದ ಮಹಾಘನವನರಿಯರು ಚೆನ್ನಮಲ್ಲಿಕಾರ್ಜುನಾ."[೨೪]

ಹಗಲು ನಾಲ್ಕು ಜಾವ, ಅಂದರೆ ಹನ್ನೆರಡು ಗಂಟೆಗಳು ಅಸನ(ಅನ್ನ)ಕ್ಕೆ ಹೋರಾಟ ಇರುಳು ನಾಲ್ಕು ಜಾವ ವ್ಯಸನಾದಿಗಳಿಗಾಗಿ ಹೆಣಗಾಟ ನಡೆಸುವ ಮನುಷ್ಯನ ಜೀವನವನ್ನು ಅಗಸ ನೀರೊಳಗಿದ್ದು ಬಾಯಾರಿ ಸತ್ತಂತೆ ಉಪಮೆ ಸಶಕ್ತವಾಗಿ ಪ್ರತಿನಿಧಿಸುತ್ತದೆ. ನೀರೊಳಗಿದ್ದು, ನೀರನ್ನು ಹೊರಗಿನಿಂದ ಬಯಸುವ ಅಗಸನ ಬಯಕೆ ಹಾಸ್ಯಾಸ್ಪದವಷ್ಟೇ ಅಲ್ಲದೆ ಅಜ್ಞಾನದ ಸಂಕೇತವೂ ಆಗಿದೆ. ಬರೀ ಅಶನ ವ್ಯಸನಕ್ಕೆ ಬಡಿದಾಡುವ ಜನರೆಲ್ಲರನ್ನು ಅಗಸ ಪ್ರತಿನಿಧಿಸುತ್ತಾನೆ. ವಚನ ಪ್ರತಿಮೆಯ ಸಮಗ್ರ ಸಾರವನ್ನು ಒಂದೇ ಉಪಮೆ, ಶಬ್ಧಗಳಲ್ಲಿ ಸಾಕ್ಷೀಕರಿಸಿರುವದು. ಅಕ್ಕಮಹಾದೇವಿಯ ಉಜ್ವಲ ಪ್ರತಿಭಾಶಕ್ತಿ, ಅನುಭಾವಕ್ಕೆ ಸಾಕ್ಷಿಯಾಗಿದೆ.

ನಮ್ಮಲ್ಲಿರುವ ಮಹಾಘನವನ್ನು ಅರಿಯದೆ ವ್ಯರ್ಥವಾಗಿ ಜೀವನ ಕಳೆದರೆ ಬದುಕು ಸಾರ್ಥಕವಾಗುವುದಿಲ್ಲ. ಜೀವನ ಪರ್ಯಂತ ಅನ್ನ ವ್ಯಸನಗಳಿಗೆ ಹೋರಾಡುತ್ತ, ಬದುಕುವ ಮನುಷ್ಯ ನೀರೊಳಗಿದ್ದು ನೀರು ಬಯಸಿದ ಅಗಸನಂತೆ ವ್ಯರ್ಥ ಪ್ರಯತ್ನವಾಗುತ್ತದೆಂಬ ಎಚ್ಚರಿಕೆ ಪ್ರತಿಮೆಯ ಆಂತರ್ಯದಲ್ಲಿ ಹುದುಗಿರುವುದು ಅನನ್ಯವೆನಿಸುಸುತ್ತದೆ. ಅಕ್ಕಮಹಾದೇವಿ ವ್ಯಕ್ತಿಗತ ನೆಲೆಯಲ್ಲಿ ಬಿತ್ತರಿಸಿದ ವಿಚಾರಗಳು ಸಾಮಾಜಿಕ ಆಶಯಗಳನ್ನು ಹೊಂದಿವೆ. ವ್ಯಷ್ಟಿ ಶುಧ್ಧಿಯಿಂದ ಸಮಾಜದ ಶುದ್ಧೀಕರಣ ಸಾಧ್ಯವೆಂಬುದನ್ನು ಈ ವಚನ ಪ್ರತಿಮೆಯಲ್ಲಿ ಸ್ಪಷ್ಟಪಡಿಸಿದ್ದಾಳೆ.

"ಅರ್ಥಸನ್ಯಾಸಿಯಾದಡೇನಯ್ಯಾ,
ಆವಂಗದಿಂದ ಬಂದಡೂ ಕೊಳದಿರಬೇಕು.
ರುಚಿಸನ್ಯಾಸಿಯಾದಡೇನಯ್ಯಾ,
ಜಿಹ್ವೆಯ ಕೊನೆಯಲ್ಲಿ ಮಧುರವನರಿಯದಿರಬೇಕು.
ಸ್ತ್ರಿಸನ್ಯಾಸಿಯಾದಡೇನಯ್ಯಾ,
ಜಾಗ್ರ, ಸ್ವಪ್ನ ಸುಷುಪ್ತಿಯಲ್ಲಿ ತಟ್ಟಲ್ಲದಿರಬೇಕು.
ದಿಗಂಬರಿಯಾದಡೇನಯ್ಯಾ,
ಮನ ಬತ್ತಲೆ ಇರಬೇಕು.
ಇಂತೀ ಚತುರ್ವಿದದ ಹೊಲಬರಿಯದೆ ವೃಥಾ ಕೆಟ್ಟರು
ಕಾಣಾ ಚೆನ್ನಮಲ್ಲಿಕಾರ್ಜುನಾ."[೨೫೫]

ಭಕ್ತನ ಶ್ರದ್ಧೆ, ಮಾಹೇಶ್ವರನ ನಿಷ್ಠೆಯಾಗಿ ಬಲಗೊಳ್ಳುವ ಮನಸ್ಥಿತಿಯನ್ನು ಪ್ರತಿಮೆಯು ಹುದುಗಿಸಿಕೊಂಡಿದೆ. ಬತ್ತಲೆಯ ಬಯಲೀಕರಣ, ಭಾಷೆಯಲ್ಲಿ ಭಾವವೇದ್ಯವಾಗುವ ಹಾಗೆ ಅಭಿವ್ಯಕ್ತಗೊಳಿಸಿದ ರೀತಿ, ಸನ್ಯಾಸದ ಸಮರ್ಥತೆಯನ್ನು ಶಬ್ಧಪಾಕದಲ್ಲಿ ಅನುಭವ ರಸರುಚಿಯಾಗಿ ನಿವೇದಿಸಿದ ವಚನಾಕೃತಿ ಸನ್ಯಾಸದೊಳಗಿನ ಸಾಮರ್ಥ್ಯವನ್ನು ಪರೀಕ್ಷಿಸುತ್ತದೆ.

ಪರಧನ, ಪರಸ್ತ್ರೀ, ವಿಷಯಾದಿಗಳ ವ್ಯಾಮೋಹದಿಂದ ಬಿಡಿಸಿಕೊಳ್ಳದ, ಬಾಹ್ಯನೋಟದ ಸನ್ಯಾಸತ್ವದ ವಿಡಂಬನೆಯ ಧ್ವನಿಯು ಪ್ರತಿಮೆಯಲ್ಲಿ ಪ್ರತಿ ಪದ, ಚರಣಗಳಲ್ಲಿ ಪ್ರತಿಧ್ವನಿಸುತ್ತದೆ. ಹೊರನೋಟದ ತೊರೆಯುವಿಕೆಗಿಂತ ಆಂತರ್ಯದ ಅರ್ಥಪೂರ್ಣ ಅರಿವಿನಿಂದ ಮೋಹವನ್ನು ಮೀರುವುದು ಶ್ರೇಷ್ಠ ಸನ್ಯಾಸತ್ವ, ಅದರಿಂದ ವ್ಯಕ್ತಿ ಮತ್ತು ಸಮಾಜ ಶುದ್ಧಿ ಸಾಧ್ಯವಾಗುವುದೆಂಬ ಆಶಯವನ್ನು ಪ್ರತಿಮಾಕೃತಿಯಲ್ಲಿ ಮನೋಜ್ಞವಾಗಿ ವ್ಯಕ್ತಗೊಳಿಸಿರುವುದನ್ನು ಗ್ರಹಿಸಬಹುದಾಗಿದೆ.

ಸಾಮಾಜಿಕ ಆಶಯಗಳುಳ್ಳ ವಚನ ಪ್ರತಿಮೆಗಳಲ್ಲಿ ಅಕ್ಕನ ಭಾಷೆ ಸರಳೀಕರಣಗೊಳ್ಳುತ್ತ ಸಾಗುತ್ತದೆ. ಆಧ್ಯಾತ್ಮಿಕ, ಧಾರ್ಮಿಕ, ಪ್ರಕೃತಿ, ಪ್ರಾಣಿ, ಪಕ್ಷಿ ಪ್ರತಿಮೆಗಳಲ್ಲಿ ಭಾಷೆಯ ಚೆಲುವು, ಅರ್ಥದ ಹೊಳಹು ರಮ್ಯವಾಗಿರುವಷ್ಟು ಸಾಮಾಜಿಕ ಪ್ರತಿಮೆಗಳಲ್ಲಿ ಕಾಣುವುದಿಲ್ಲ. ಜನಸಾಮಾನ್ಯರಿಗೆ ಅರ್ಥವಾಗುವಂತೆ ಉಪಮೆ, ರೂಪಕಗಳನ್ನು ದೇಶೀ ಸಂಸ್ಕೃತಿಯಿಂದಲೇ ಆಯ್ದುಕೊಂಡು ಸರಳ ಶಬ್ಧಚಿತ್ರಗಳಲ್ಲಿ ನಿರೂಪಿಸುವುದು ಆಶಯವಾಗಿರುವುದು.

ಸತ್ಸಂಗದಿಂದ ಶಿವಸಾನಿಧ್ಯ ಹೊಂದುವ ಮಹತ್ವವನ್ನು ಎಲ್ಲಾ ಕಾಲದ ಪ್ರದೇಶ ಭಾಷೆಯ, ದಾರ್ಶನಿಕರು ಪ್ರತಿಪಾದಿಸಿದ್ದಾರೆ. ಸಜ್ಜನರ ಸಂಗಸುಖ, ದುರ್ಜನರ ಸಂಗದ ಅಪಾಯವನ್ನು ಅಕ್ಕಮಹಾದೇವಿ ಸರಳವಾಗಿ ನಿರೂಪಿಸಿರುವಳು.

ಸಂಗ

> "ಅರಿಯದವರೊಡನೆ ಸಂಗವ ಮಾಡಿದಡೆ
> ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಬಂತೆ.
> ಬಲ್ಲವರೊಡನೆ ಸಂಗವ ಮಾಡಿದಡೆ
> ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ.
> ಚೆನ್ನಮಲ್ಲಿಕಾರ್ಜುನಯ್ಯಾ ನಿಮ್ಮ ಶರಣರ ಸಂಗವ ಮಾಡಿದಡೆ
> ಕರ್ಪುರದ ಗಿರಿಯನುರಿಕೊಂಬಂತೆ."[೫೬]

ಭಕ್ತ ಪರಿಶುದ್ಧ ಬದುಕನ್ನು ಹೊಂದಲು ಸತ್ಸಂಗದ ಅವಶ್ಯಕತೆಯಿರುವುದನ್ನು ಮನಗಂಡ ಅಕ್ಕಮಹಾದೇವಿ ಸಮಾಜದಲ್ಲಿರುವ ದುರ್ಜನರ ಧೂರ್ತತನವನ್ನು ಬಲ್ಲವಳಾದ್ಧರಿಂದ ಎರಡರ ಒಳನೋಟವನ್ನು ಭಾಷೆಯಲ್ಲಿ ಬಿಚ್ಚಿಡುತ್ತ ಭವಬಂಧನದಿಂದ ಮುಕ್ತಿ ಪಡೆಯುವ ವಿಧಾನವನ್ನು ಸ್ಪಷ್ಟಪಡಿಸಿದ್ದಾಳೆ. ಮೂರು ಬಗೆಯ ಸಂಗಗಳಿಗೂ ಮೂರು ಉಪಮೆಗಳನ್ನು ಬಳಸಿ ಸಹಜವಾಗಿ ಸಂಗಸುಖದ ಸೌಂದರ್ಯಾನುಭವವನ್ನು ಪ್ರತಿಪಾದಿಸಿದ್ದಾಳೆ. ಮೊದಲನೆಯದು ಅರಿಯದವರ ಸಂಗ ಅಜ್ಞಾನಿಗಳು, ದುರ್ಜನರು, ಧೂರ್ತರು ಅವರ ಒಡನಾಟ ಕಲ್ಲು ಹೊಯ್ದು ಕಿಡಿಯ ತೆಗೆದು ಕೊಂಬಂತಿಹುದು, ಅಪಾಯಕರ. ದ್ವೇಷ ಅಸೂಯೆಗಳ ಅಪಾಯದ ಕಿಡಿ ಹುಟ್ಟುವುದು. ಎರಡನೆಯದು ಬಲ್ಲವರ ಸಂಗ ಸುಜ್ಞಾನಿಗಳ, ಅನುಭಾವಿಗಳ ಸಂತ ಮಹಾಂತರ ದಾರ್ಶನಿಕರ ಸಂಗ, ಮೊಸರ ಹೊಸೆದು ಬೆಣ್ಣೆಯನ್ನು ತೆಗೆದುಕೊಳ್ಳುವಂತಹದು.

ಸುಜ್ಞಾನಿಗಳಿಂದ ಸುಜ್ಞಾನದ ನವನೀತ ಹೊರಬರುವುದು. ಚೆನ್ನಮಲ್ಲಿಕಾರ್ಜುನನ ಶರಣರ ಸಂಗ ಕರ್ಪುರ ಗಿರಿಯನುರಿಯಕೊಂಬಂತೆ ಸಾಲು ಪ್ರತಿಮೆಯ ಅರ್ಥವಲಯವನ್ನು ವಿಸ್ತರಿಸಿ ನಿರ್ವಚನದ ನಿಲುವನ್ನು ಹೊಳೆಯಿಸುತ್ತದೆ. ಈ ವಚನ ಪ್ರತಿಮಾಕೃತಿ ವಿಭಿನ್ನ ಬಗೆಯ ಸಂಗ ವಿಭಿನ್ನ ಪರಿಣಾಮ ಬೀರುವ ಬಗೆಯನ್ನು ವಿಭಿನ್ನ ಉಪಮಾಕೃತಿಗಳಿಂದ ಹೊರಹೊಮ್ಮಿಸುತ್ತದೆ. ಇಲ್ಲಿ ಅಕ್ಕನ ವಚನ ಪ್ರತಿಮಾ ವಿಧಾನದ ಇನ್ನೊಂದು ವೈಶಿಷ್ಟ್ಯವನ್ನು ಗ್ರಹಿಸಬಹುದಾಗಿದೆ. ಸಾಲು ಪ್ರತಿಮೆಗಳಿಂದ ಮೂಲ ಪ್ರತಿಮೆಯ ಆಶಯವನ್ನು ಪುಷ್ಟೀಕರಿಸುವುದು.

ಸದ್ಗುಣಗಳಿಂದ ಲೋಕ ಕಲ್ಯಾಣ ಬಯಸುವ ಶರಣರ ನಿಲುವನ್ನು ಅಕ್ಕಮಹಾದೇವಿ ಸುಂದರ ರೂಪಕಾಕೃತಿಯು ಪ್ರತಿಮೆಯಲ್ಲಿ ಸಮೃದ್ಧಿಯನ್ನು ಪಡೆದ ಬಗೆಯನ್ನು ಬಣ್ಣಿಸಿರುವುದು ಪರಿಭಾವಿಸಿ ದಷ್ಟು ಪರಿಣಾಮಕಾರಿ ಪ್ರಭಾವಶಾಲಿಯಾಗಿದೆ.

ಶಾಂತಿ

"ಉಸುರಿನ ಪರಿಮಳವಿರಲು ಕುಸುಮದ ಹಂಗೇಕಯ್ಯಾ?
ಕ್ಷಮೆ, ದಮೆ, ಶಾಂತಿ ಸೈರಣೆಯಿರಲು,
ಸಮಾಧಿಯ ಹಂಗೇಕಯ್ಯಾ?
ಲೋಕವೇ ತಾನಾದ ಬಳಿಕ ಏಕಾಂತದ ಹಂಗೇಕಯ್ಯಾ?
ಚೆನ್ನಮಲ್ಲಿಕಾರ್ಜುನಾ"[೫೭]

ಶರಣರ ಜೀವನ ಶಾಂತಿ ಸುಯಿಧಾನದಿಂದ ತುಂಬಿರುವುದನ್ನು ಅಕ್ಕಮಹಾದೇವಿ ಉಸುರಿನ ಪರಿಮಳವಿರಲು ಕುಸುಮದ ಹಂಗೇಕಯ್ಯಾ? ಎಂಬ ನಿಶ್ಚಯವನ್ನು ಅಭಿವ್ಯಕ್ತಗೊಳಿಸಿ, ಶರಣರ ಮಹಾಂತರ ಜೀವನದ ಸದ್ಗುಣಗಳೆ ಪರಿಮಳ, ಕ್ಷಮೆ, ದಯೆ, ಶಾಂತಿ, ತನು ಮನ ಭಾವಗಳಲ್ಲಿ ನೆಲೆಗೊಂಡಿರುವುದರಿಂದ ಸಮಾಧಿಯ ಹಂಗೂ ಇರದು. ಲೋಕಕಲ್ಯಾಣ, ಸಕಲ ಜೀವಿಗಳ ಲೇಸ ಬಯಸುವ ಶರಣರು ಏಕಾಂತದ ಗುಹೆಗಳಲ್ಲಿ ತಪಸ್ಸು ಗೈಯುವ ಅಗತ್ಯವಿರದು. ಅನುಭಾವದ ಮೇರುಗಿರಿಯನ್ನು ಏರಿದ ಮಹಾನುಭಾವಿಗಳು ಲೋಕವನ್ನು ನೋಡುವ ಏಕೋಭಾವ ದೃಷ್ಟಿ, ಸಮರಸ ಭಾವಗಳನ್ನು ಔಚಿತ್ಯಪೂರ್ಣ ಶಬ್ಧಗಳಲ್ಲಿ ಪ್ರತಿಮೆಯಲ್ಲಿ ಅನಾವರಣಗೊಳಿಸಿದ್ದಾಳೆ. ಅಕ್ಕಮಹಾದೇವಿಯ ವಚನಗಳು ಪ್ರಜ್ಞಾಪೂರ್ವಕವಾಗಿ ರಚಿಸಿದ ಕಾವ್ಯದಂತೆ ಬಂಧದ ನಿಯಮಗಳುಳ್ಳ ರಚನೆಗಳಲ್ಲ. ಆಯಾ ಹೊತ್ತಿನ ಬದುಕಿನಲ್ಲಿ ಎದುರಾದ ಸಂದರ್ಭಗಳು ವಚನಗಳಲ್ಲಿ ವಿಷಯ ವಸ್ತುಗಳಾಗಿ ಗಹನವಾದ, ಗೂಡಾರ್ಥವುಳ್ಳ ಅನುಭಾವ ಶಬ್ಧಚಿತ್ರಗಳಲ್ಲಿ ಮೂರ್ತರೂಪದಲ್ಲಿ ಅಭಿವ್ಯಕ್ತಗೊಂಡಿವೆ.

ಅಕ್ಕನ ಹೋರಾಟದ ಬದುಕು ಜೀವನದಲ್ಲಿ ಎದುರಿಸಿದ ಸಂಕಟ, ನೋವುಗಳು, ದೇವನಿಗಾಗಿ ಹಂಬಲಿಸಿದ ರೀತಿ, ಲಿಂಗಾಂಗ ಸಾಮರಸ್ಯದ ಅನುಭಾವ, ಲೋಕಾನುಭಗಳೆಲ್ಲ ವಚನಗಳಲ್ಲಿ ಪ್ರತಿಮಾಕೃತಿಗಳಾಗಿ ರೂಪು ತಳೆದಿವೆ. "ಕಾವ್ಯದಲ್ಲಿ ಪ್ರತಿಮೆಯೇ ಎಲ್ಲವೂ ಅಲ್ಲ. ಪ್ರತಿಮೆ ಕವಿಪ್ರತಿಭೆ ಕೃತಿ ನಿರ್ಮಾಣದಲ್ಲಿ ತೊಡಗುವಾಗ ನಿರ್ಮಿಸುವ ಒಂದು ಅಭಿವ್ಯಕ್ತಿ ಪ್ರಕಾರ. ಕವಿ ಪ್ರತಿಭೆ ವಸ್ತುವೊಂದನ್ನು ನಿರ್ವಹಿಸುವಾಗ ಅದು ಸಂಕೇತಗಳಲ್ಲಿ ಸಂಚರಿಸಿ, ಪ್ರತೀಕಗಳಲ್ಲಿ ಮಿಂಚಿ, ಪ್ರತಿಮೆಗಳಲ್ಲಿ ಮಡುಗಟ್ಟಿ ಅನೇಕಾರ್ಥಗಳನ್ನು ಪ್ರತಿಫಲಿಸುತ್ತಾ, ಅಭಿವ್ಯಕ್ತಿಗೆ ಸೊಗಸನ್ನು, ಅರ್ಥದೀಪ್ತಿ ಹಾಗೂ ಧ್ವನಿ ಪ್ರಚುರತೆಗಳನ್ನು ತಂದುಕೊಡುತ್ತದೆ."[೫೮]

ಶಿವರುದ್ರಪ್ಪನವರು ಗುರುತಿಸಿದ ಪ್ರತಿಮೆಯ ಎಲ್ಲ ಲಕ್ಷಣಗಳು ಅಕ್ಕನ ವಚನಗಳಲ್ಲಿ ಅಂತರ್ಗತ ಗೊಂಡು ಅನುಭಾವದ ಅವಿರ್ಭಾವವಾಗಿ ಪ್ರತಿಮಾಕೃತಿಯಲ್ಲಿ ಸುಂದರ, ಸೊಗಸಾದ ಭಾವಸ್ಫುರಣ ವನ್ನು ಕಟ್ಟಿಕೊಡುತ್ತವೆ. ಅಕ್ಕಮಹಾದೇವಿಯ ಲೋಕಾನುಭವವು ವೈವಿಧ್ಯಮಯ. ದೈವದತ್ತ ಪ್ರತಿಭೆ,

ಲೋಕಾನುಭಗಳೆರಡು ಮೇಳವಿಸಿ ಭಾಷೆಯಲ್ಲಿ ಪ್ರತಿಮಾ ರೂಪದಲ್ಲಿ ಭಾವಲಹರಿಗಳು ತೆರೆಗಳಂತೆ ಒಂದರ ನಂತರ ಮತ್ತೊಂದು ಹೊರಹೊಮ್ಮುತ್ತ ಹೃದ್ಯವೇದ್ಯವೆನಿಸುತ್ತವೆ. ಅಕ್ಕಮಹಾದೇವಿಯ ವಚನಗಳಲ್ಲಿ ಅಭಿವ್ಯಕ್ತಗೊಂಡ ಪ್ರತಿಮೆಗಳು, ಸಾಮಾಜಿಕ ಸಾಂಸ್ಕೃತಿಕ ಅನನ್ಯತೆಯನ್ನು ಪ್ರತಿನಿಧಿಸುತ್ತವೆ. ವ್ಯಕ್ತಿಗತವಾಗಿ ಆಧ್ಯಾತ್ಮ ಸಾಧನೆಯ ತುಡಿತವನ್ನು ಹೊಂದಿದ್ದರೂ ಆ ಪಥದಲ್ಲಿ ಮುನ್ನಡೆಯುವಾಗ ಕಂಡಂತಹ ಸಂದರ್ಭಗಳು ವಚನಗಳಲ್ಲಿ ಹಾಸುಹೊಕ್ಕಾಗಿವೆ.

ಅಕ್ಕಮಹಾದೇವಿ ಬದುಕಿದ್ದ ಕಾಲದಲ್ಲಿ ಪ್ರಚಲಿತವಿದ್ದ ಭಾಷೆ, ಸಮುದಾಯ ಸಂಸ್ಕೃತಿ, ಗಾದೆ, ನುಡಿಗಟ್ಟುಗಳು ಜನಪದ ಸಂಕಥನಗಳು, ಜನರ ಜೀವನಶೈಲಿ, ಪ್ರತಿಮೆಗಳಲ್ಲಿ ಅನಾವರಣಗೊಂಡಿವೆ. ಭಕ್ತಿ, ಮುಕ್ತಿ ಸಾಧನೆಯಷ್ಟೇ ಅಲ್ಲದೆ ಸುತ್ತಲಿನ ಸಮಾಜದ ಬದುಕು ವಚನಗಳಲ್ಲಿ ಸೊಗಸಾಗಿ ನಿರೂಪಿತಗೊಂಡಿವೆ. ದೇಶೀಭಾಷೆ, ಸಂಸ್ಕೃತಿ, ಜನರ ನಡವಳಿಕೆಗಳು, ಅದರ ವೈರುಧ್ಯಗಳು, ಧಾರ್ಮಿಕ ನಂಬುಗೆಗಳು, ಅನುಭಾವದ ನಿಲುವುಗಳೆಲ್ಲ ವಚನ ಪ್ರತಿಮೆಯಲ್ಲಿ ಜೀವಂತಿಕೆ ಪಡೆದಿವೆ. ಅಕ್ಕನ ಬದುಕಿನ ಸವಾಲುಗಳು, ಸಮಾಜದ ಜನರ ಸವಾಲುಗಳೂ ಆಗಿರುವುದರಿಂದ ವಚನ ಪ್ರತಿಮೆಗಳು ಎಂದೆಂದಿಗೂ ಪ್ರಸ್ತುತವೆನಿಸುತ್ತವೆ. ಭಕ್ತಿ, ಬಂಡಾಯ, ವ್ಯಕ್ತಿಗತ ನೋವು, ನಿರಾಶೆ, ಸಾಮಾಜಿಕ ಚಿಂತನೆಗಳು ವಚನ ಪ್ರತಿಮೆಗಳಲ್ಲಿ ಮೂಡಿನಿಂತಿವೆ. ಜನಭಾಷೆಯ, ಪ್ರಾದೇಶಿಕ ವಲಯದ ಸಾಂಸ್ಕೃತಿಕ ಬದುಕು ವಚನಗಳಲ್ಲಿ ವೈವಿಧ್ಯಮಯವಾಗಿ ಅಭಿವ್ಯಕ್ತಗೊಂಡಿದೆ.

ವ್ಯಕ್ತಿಗತ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಐತಿಹಾಸಿಕ ನೆಲೆಗಳು ಅಕ್ಕನ ವಚನ ಪ್ರತಿಮೆಗಳಲ್ಲಿ ಜೀವಂತಿಕೆಯನ್ನು ಪಡೆದುಕೊಂಡು ಬದುಕನ್ನು ಎದುರಿಸಿ ಸಂಕಷ್ಟಗಳನ್ನು ಸ್ವೀಕರಿಸಿ ಸಕಾರಾತ್ಮಕ ಮನೋಭಾವನೆಯಿಂದ ಲೌಕಿಕ ಮತ್ತು ಅಲೌಕಿಕ ಬದುಕಿನ ಆಶೋತ್ತರಗಳನ್ನು ನಿಜನೆಲೆಯಲ್ಲಿ ಈಡೇರಿಸಿಕೊಳ್ಳಲು ಮನುಷ್ಯ ಸಂಬಂಧವನ್ನು ಉನ್ನತೀಕರಿಸಿ ದೈವತ್ವದೊಂದಿಗೆ ಮಾನವ ಪ್ರೇಮವನ್ನು ಬೆಸೆಯುವ ಅಂಶಗಳು ಅಕ್ಕಮಹಾದೇವಿಯ ವಚನ ಪ್ರತಿಮೆಗಳಲ್ಲಿ ಗೋಚರಿಸುತ್ತವೆ.

ಜನಪರವಾದ ಕಾಳಜಿ, ಭಗವಂತನ ಚಿಂತನೆಗಳೆರಡೂ ಅಕ್ಕಮಹಾದೇವಿಯ ವಚನ ಪ್ರತಿಮಾಕೃತಿಯಲ್ಲಿ ಮೂಡಿಬಂದಿವೆ. "ಅಕ್ಕ ತಾನು ಆರಿಸಿಕೊಂಡ ಜೀವನದ ಸಂದರ್ಭದಲ್ಲಿ ತಾನು ಅನುಭವಿಸಿದ ಅನುಭವಗಳು, ಎದುರಿಸಿದ ಸಮಸ್ಯೆಗಳು ಇವೆಲ್ಲಕ್ಕೂ ವಚನಗಳಲ್ಲಿ ರೂಪುಕೊಟ್ಟಳು. ಮನಸ್ಸಿನ ಅತಿಗೂಢತರ ಸ್ತರಗಳನ್ನು ಹುಡುಕುವ, ಅದನ್ನು ಭಾಷೆಯಲ್ಲಿ ಆಗಿಸುವ ಅವಳ ಪ್ರಯತ್ನದಿಂದ ಹುಟ್ಟಿದ ವಚನಗಳು ಉತ್ತಮ ಕಾವ್ಯಕ್ಕೆ ಮಾನದಂಡಗಳಾಗಿವೆ."[೫೯] ಅಕ್ಕಮಹಾದೇವಿಯ ಪ್ರತಿಮೆಗಳು ಅವಳ ಕಾವ್ಯಮೀಮಾಂಸೆಗೆ ಪೂರಕವಾಗಿವೆ. ಬಹುಮುಖ್ಯವಾಗಿ ವಚನಗಳು ಪ್ರತಿಮಾನಿಷ್ಠವಾಗಿವೆ. ಪ್ರತಿಮೆಯಲ್ಲಿ ಲೌಕಿಕ ಪಾರಮಾರ್ಥಿಕ ಸಂಗತಿಗಳು ಕ್ರಿಯಾಶೀಲತೆಯಿಂದ ಕಂಗೊಳಿಸುತ್ತ, ನಿತ್ಯನೂತನವಾದ ಅನುಭವದ ಮೇರುಕೃತಿಗಳಾಗಿವೆ.

ಆ. ಭಾಷೆಯ ರಚನೆ

ಮನುಷ್ಯನು ಅನಾದಿ ಕಾಲದಿಂದಲೂ ತನ್ನ ಭಾವನೆಗಳ ಅಭಿವ್ಯಕ್ತಿಗೆ ವಿವಿಧ ಆಯಾಮಗಳನ್ನು ಸೃಷ್ಟಿಸಿಕೊಂಡಿರುವನು. ಪ್ರಾಚೀನ ಕಾಲದಲ್ಲಿ ಸಂಕೇತ, ಸಂಜ್ಞೆಗಳ ಮೂಲಕ ಆರಂಭವಾದ ಅಭಿವ್ಯಕ್ತಿ ಕ್ರಿಯೆ. ಭಾಷೆ, ಅದರ ಪುನರ್‌ಸೃಷ್ಟಿಯೊಡನೆ ಭಾಷಾ ಬೆಳವಣಿಗೆ ಹರಿವ ನೀರಿನಂತೆ ನಿರಂತರವಾಗಿ ಚಲನಶೀಲ, ಚೈತನ್ಯಮಯ ಶಕ್ತಿಯಾಗಿ ಪ್ರವಹಿಸುತ್ತಿದೆ. ಚಲನಶೀಲತೆ, ಜೀವಂತಿಕೆ ಭಾಷೆಯ ಜೀವಾಳ. ಭಾಷೆಯಿರದೆ ಭಾವಾಭಿವ್ಯಕ್ತಿ ಪೂರ್ಣಗೊಳ್ಳದು. ಆದ್ದರಿಂದ ಆಯಾ ಕಾಲಮಾನ, ಪ್ರದೇಶ, ಜನಾಂಗಗಳ ಬೆಳವಣಿಗೆ ಬೇಡಿಕೆಗನುಸಾರವಾಗಿ ಜಗತ್ತಿನಲ್ಲಿ ಅಸಂಖ್ಯ ಭಾಷೆಗಳು ಹುಟ್ಟಿಕೊಂಡಿವೆ. ಭಾಷಾ ಸೃಷ್ಟಿ, ಅಭಿವೃದ್ಧಿ, ನಿರಂತರ ಪ್ರಕ್ರಿಯೆಯಾಗಿ ಸಮಾಜೋಭಾಷಿಕ ನೆಲೆಯಲ್ಲಿ ಸಂವಹನ ಮಾಧ್ಯಮವಾಗಿ ಕಾರ್ಯಗೈಯುತ್ತದೆ. "ಭಾಷೆಯ ಮುಖ್ಯ ಉದ್ದೇಶ ಸಾಮಾಜಿಕ ಸಂಪರ್ಕ. ಭಾಷೆಯಷ್ಟು ಪರಸ್ಪರ ವಿನಿಮಯ ಸಾಮರ್ಥ್ಯ ಬೇರಾವ ಸಂವಹನಕ್ಕೂ ಇಲ್ಲ. ಭಾಷೆ ಸಂಸ್ಕೃತಿಯ ಮುಖ್ಯ ಅಂಗವಾಗಿರುವುದರಿಂದ ಭಾಷಾ ಸಮುದಾಯದಲ್ಲಿ ಭಾಷಿಕರು ಪರಸ್ಪರ ಸಂಬಂಧವನ್ನು ಹೊಂದಿರುತ್ತಾರೆ. ಭಾಷೆಯನ್ನು ಸಾಮಾಜಿಕ ಚೌಕಟ್ಟಿಗೆ ಒಳಪಡಿಸಿ ಅದರ ಬಳಕೆಯ ಪರಿಸರದಲ್ಲಿ ಅಭ್ಯಸಿಸಿದರೆ ಸಮಾಜೋಭಾಷಿಕ ಅನನ್ಯತೆಯನ್ನು ಗುರುತಿಸಿದಂತಾಗುತ್ತದೆ. ಭಾಷಿಕರ ವರ್ಗ, ಜಾತಿ, ಅಂತಸ್ತು, ಲಿಂಗ, ವಯಸ್ಸು ಇಂತಹ ಜೈವಿಕ ಅಂಶಗಳು ಭಾಷಾ ಬಳಕೆಯಲ್ಲಿ ಪರಿಣಾಮ ಬೀರುತ್ತವೆ. ತತ್ಪರಿಣಾಮವಾಗಿ ಭಾಷಾ ಬಳಕೆಯಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಈ ಏಣಿ ಶ್ರೇಣಿ ಕ್ರಿಯೆಗೆ ಭಾಷಿಕ ಸ್ತರವಿನ್ಯಾಸ ಎಂದು ಕರೆಯುತ್ತಾರೆ."[೨೦]

ಭಾಷೆ ಸಂವಹನಕ್ಕೆ ಸಹಾಯಕವಾಗಿರುವಂತೆಯೇ, ಸಾಹಿತ್ಯ, ಸಂಸ್ಕೃತಿಯ ವಾಹಕವೂ ಆಗಿದೆ. ದಿನನಿತ್ಯದ ವ್ಯವಹಾರದೊಂದಿಗೆ, ಭಾಷೆ ಸಾಹಿತ್ಯದ ಮೂಲದ್ರವ್ಯವೂ ಆಗಿರುವುದರಿಂದ ಭಾಷೆಗೆ ವೈವಿಧ್ಯಮಯ ಆಯಾಮಗಳಿರುವವು. ಸಾಹಿತ್ಯ ಕೃತಿ ಭಾಷೆಯಲ್ಲಿ ನಿರ್ಮಿತಿ ಹೊಂದುವುದರಿಂದ ಸಾಹಿತ್ಯ ಮತ್ತು ಅದರ ಭಾಷಾ ಸ್ವರೂಪವನ್ನು ಒಟ್ಟಿಗೆ ಪರಿಶೀಲಿಸಿದಾಗ ಕೃತಿಯ ಸಂಪೂರ್ಣ ರೂಪ ಅನುಭವಕ್ಕೆ ಬರುತ್ತದೆ. ಭಾಷೆ, ಮನುಷ್ಯನ ಅನುಭವಗಳನ್ನು ಸಾಂಕೇತಿಕವಾಗಿ ನಿರೂಪಣೆ ಮಾಡುವ, ವಿನಿಮಯ ಮಾಡಿಕೊಳ್ಳುವ ಸಾಧನವೂ ಆಗಿದೆ. ಭಾಷೆ ಕೇವಲ ಸಂಕೇತಗಳ ವರ್ಗಾವಣೆಯಲ್ಲ. ಶಬ್ದಗಳ ವಿನಿಮಯವೂ ಅಲ್ಲ! ಶಬ್ದಗಳೊಳಗೆ ಅಡಗಿರುವ ಅರ್ಥ, ಭಾವನೆಗಳು, ಕಲ್ಪನೆಗಳು, ಮೂರ್ತ, ಅಮೂರ್ತ ಅನುಭವಗಳ ವಿನಿಮಯವಾಗಿದೆ. ಭಾಷಾ ಬಳಕೆಯಲ್ಲಿ ವ್ಯತ್ಯಾಸಗಳಿರುವುದು ಸಹಜ. ಆದರೆ ಅದರ ಬಳಕೆಯ ಹಿಂದಿರುವ ಉದ್ದೇಶ ಮಾತ್ರ ಏಕರೂಪವಾದುದು.

ಅಭಿವ್ಯಕ್ತಿ ಶಕ್ತಿಯಾಗಿರುವ ಭಾಷೆ ಮಾನವ ಜನಾಂಗದ ಇತಿಹಾಸವನ್ನು ಪ್ರತಿನಿಧಿಸುತ್ತದೆ. ಮಾನವ ಸಮುದಾಯದಲ್ಲಿ ಭಾಷೆಯದೇ ಪಾರಮ್ಯ! ಶಾಬ್ದಿಕವಲ್ಲದ ಜಗತ್ತು ಊಹಿಸಲಸಾಧ್ಯ! ಬರೀ ಸಂಕೇತಗಳ ನಿರೂಪಣೆಯಿಂದ ಭಾಷೆ ಅರ್ಥಪೂರ್ಣವಾಗುವುದಿಲ್ಲ. ಅನುಭವಗಳನ್ನು ಶಾಬ್ದಿಕ ರೂಪದಲ್ಲಿ ಪರಿವರ್ತಿಸುವುದು ಭಾಷೆಯ ಮುಖ್ಯ ಉದ್ದೇಶವಾಗಿದೆ. "ವಿಲಿಯಂ ಹಂಬೋಲ್ಟ ಅವರ ಅಭಿಪ್ರಾಯದಲ್ಲಿ ಭಾಷೆಗೆ ದೈವೀ ಮೂಲವಿಲ್ಲ. ಭಾಷೆ ಮೂರ್ತತೆ ಅಮೂರ್ತತೆಗಳ ನಡುವೆ ದೃಶ್ಯ ಅದೃಶ್ಯಗಳ ನಡುವೆ, ವ್ಯಕ್ತಿ ವ್ಯಕ್ತಿಗಳ ನಡುವೆ ಸೇತುವೆ ಕಟ್ಟುತ್ತದೆ. ಈ ಎರಡೂ ದ್ವಂದ್ವಗಳ ಮಿಲನದಲ್ಲಿಯೇ ಭಾಷೆಯ ಜನ್ಮವಿದೆ. ಅದರ ಬೆಳವಣಿಗೆ ಇದೆ. ಹಾಗೂ ಈ ಮಿಲನದ ಸಾಧನವೂ ಭಾಷೆಯೇ. ಭಾಷೆ ಒಂದು ವಸ್ತುವಲ್ಲ; ದ್ರವ್ಯವಲ್ಲ; ಮನುಷ್ಯನ ಆಂತರಿಕ ಜೀವನಕ್ಕೆ ರೂಪುಕೊಟ್ಟು ಅದನ್ನು ಅರ್ಥಪೂರ್ಣವಾಗಿ ಮಾಡುವ ಕೆಲಸವನ್ನು ಭಾಷೆಯೇ ಮಾಡುತ್ತದೆ. ಹೀಗೆ ಭಾಷೆ ಮನುಷ್ಯನ ಜೀವನದಲ್ಲಿ ಮನುಷ್ಯ ಸಮಾಜದಲ್ಲಿ ಹಾಸುಹೊಕ್ಕಾಗಿ ನಿಂತುಬಿಟ್ಟಿದೆ."[೬೧] ಈ ಮಾತನ್ನು ಹೇಳುವ ಉದ್ದೇಶವೆಂದರೆ ಭಾಷಾ ಬೆಳವಣಿಗೆ ಅನುವಂಶಿಕ ವಾಗಿಯೂ ಮತ್ತು ಪರಿಸರದ ಕೂಸಾಗಿಯೂ ಬೆಳೆಯುತ್ತದೆ.

ಭಾಷೆ ಆತ್ಮ ಚೈತನ್ಯದ ಸಾಧನವಾಗಿರುವಂತೆಯೇ ಸಾಹಿತ್ಯದ ವಿಶಿಷ್ಟ ಅಂಗವಾಗಿ ಮೂಲದ್ರವ್ಯ ರೂಪದಲ್ಲಿ ಕಾರ್ಯನಿರ್ವಹಿಸುತ್ತದೆ. ಭಾಷೆಯನ್ನು ಸಾಹಿತ್ಯ ಸಂಸ್ಕೃತಿಯ ರೂಪವೆಂದು ವಿದ್ವಾಂಸರು ಗುರುತಿಸಿರುವರು. ಇಂಥಹ ಸಂವಹನಶೀಲವಾದ ಭಾಷೆಯನ್ನೊಳಗೊಂಡು ಮೈದಾಳಿದ ಕೃತಿ ವಿಶಿಷ್ಟ ಸಾಹಿತ್ಯವಾಗಿ ಪರಿವರ್ತಿತಗೊಂಡು ಭಾಷೆಯ ಮೇರುಗುಣಗಳು ಮೇಳವಿಸಿ ಓದುಗರ ಮೇಲೆ ನಿರಂತರವಾಗಿ ಪ್ರಭಾವ ಬೀರುವುದು. ಮನುಷ್ಯನ ಸಂಪರ್ಕ ಮಾಧ್ಯಮವಾಗಿ ಕಾರ್ಯನಿರ್ವಹಿಸುವ ಭಾಷೆ ಕುವೆಂಪುರವರು ತಮ್ಮ ದಾರ್ಶನಿಕ ಕಾವ್ಯಮೀಮಾಂಸೆಯಲ್ಲಿ ಭಾಷೆ ಒಂದು ಲೋಕೋಪಯೋಗಿ, ಇನ್ನೊಂದು ಭಾವೋಪಯೋಗಿ, ಎಂಬ ಎರಡು ವಿಧಗಳ ಭಾಷೆಗಳ ಬಗ್ಗೆ ಚರ್ಚಿಸಿದ್ದಾರೆ. ಲೋಕೋಪಯೋಗಿ ಭಾಷೆ ದಿನನಿತ್ಯದ ವ್ಯವಹಾರಕ್ಕಾಗಿ ಬಳಸುವ ಭಾಷೆ. ಭಾವೋಪಯೋಗಿ ಭಾಷೆ, ಭಾವನೆಗಳ ಅಭಿವ್ಯಕ್ತಿಗಾಗಿ ವಿಶಿಷ್ಟ ಪದ ಪ್ರಯೋಗಗಳ ಮೂಲಕ ಪ್ರಜ್ಞಾಪೂರ್ವಕವಾಗಿ ಕಲಾತ್ಮಕವಾಗಿ ಹೆಣೆದ ಸುಂದರ ಬಂಧುರವದು!

ಭಾಷೆಯ ಪ್ರಯೋಗಗಳಲ್ಲಿ ವೈವಿಧ್ಯತೆಯಿರುವುದು. ಪ್ರತಿಯೊಬ್ಬ ಮನುಷ್ಯನ ಆಲೋಚನೆ, ಚಿಂತನೆ, ಭಾವನೆಗಳು, ಸಂವೇದನೆಗಳು ವಿಭಿನ್ನವಾಗಿರುವುದರಿಂದ ಭಾಷೆಯ ಬಳಕೆಯಲ್ಲಿ ವ್ಯತ್ಯಾಸಗಳು ಗೋಚರಿಸುತ್ತವೆ. ಹಾಗೆಯೇ ವ್ಯವಹಾರಿಕ ಭಾಷೆ, ಸಾಹಿತ್ಯದ ಭಾಷೆಗಳಲ್ಲಿ ವಿಭಿನ್ನತೆಯಿದೆ. "ಡಾ. ಶಾಂತಿನಾಥ ದೇಸಾಯಿಯವರ ಅಭಿಪ್ರಾಯದಲ್ಲಿ ದಿನನಿತ್ಯದ ಭಾಷೆಯನ್ನು ಸಾಹಿತ್ಯದ ಭಾಷೆಯೊಡನೆ ಹೋಲಿಸಿ ನೋಡಿದಾಗ ನಮಗೆ ಮೊಟ್ಟ ಮೊದಲಿಗೆ ಅನುಭವವಾಗುವ

ಅಂಶವೆಂದರೆ, ದಿನನಿತ್ಯದ ಭಾಷೆಯಲ್ಲಿ ಭಾಷಾಪ್ರಜ್ಞೆ ಅಷ್ಟು ಜಾಗರೂಕವಾಗಿರುವುದಿಲ್ಲ. ಹಾಗೂ ಸಾಹಿತ್ಯದ ಭಾಷೆಯಲ್ಲಿ ಭಾಷಾಪ್ರಜ್ಞೆ ಸ್ವಲ್ಪ ಹೆಚ್ಚು ಜಾಗರೂಕವಾಗಿ ಕೆಲಸಮಾಡುತ್ತದೆ ಎಂಬುದು. ಆಡುಭಾಷೆಯಲ್ಲಿ ಭಾಷೆಯ ವಿವಿಧ ಅಂಗಗಳ ಸಂಯೋಜನೆ ಸ್ವಲ್ಪ ಸಡಿಲಾಗಿ, ಸ್ವಚ್ಛಂದವಾಗಿ ಅಚಿಂತಿತವಾಗಿರುತ್ತದೆ. ಇಲ್ಲಿ ಒಂದು ರೀತಿಯ ಸಂಯೋಜನೆ ಇರುತ್ತದೆಯಾದರೂ ಅದು ಸಡಿಲಾಗಿದೆ. ಅದರ ಹಿಂದೆ ಒಂದು ನಿಷ್ಠುರ ಸೂತ್ರ ಕಾಣಿಸುವುದಿಲ್ಲ. ಇದಕ್ಕೆ ವಿರುದ್ಧವಾಗಿ ಸಾಹಿತ್ಯದ ಭಾಷೆಯಲ್ಲಿ ಉದ್ದೇಶಪೂರ್ವಕವಾದ ಬಿಗುವಿರುತ್ತದೆ. ಜಾಗರೂಕತೆ ಇರುತ್ತದೆ. ಸುಸೂತ್ರತೆ ಇರುತ್ತದೆ. ಅದರಲ್ಲಿ ಭಾಷಾ ಪ್ರಜ್ಞೆ ಹೆಚ್ಚು ಏಕಾಗ್ರತೆಯಿಂದ ಅರ್ಥಪೂರ್ಣವಾಗಿ ಕೆಲಸಮಾಡುತ್ತದೆ."೬

ದಿನನಿತ್ಯದ ವ್ಯವಹಾರಿಕ ಭಾಷೆಗಿಂತಲೂ ಸಾಹಿತ್ಯ ಕೃತಿಯಲ್ಲಿ ನಿರೂಪಿತಗೊಳ್ಳುವ ಭಾಷೆ ವಿಶಿಷ್ಟವೂ, ವಿವೇಚನಾಪೂರ್ವಕವೂ ಅನುಭವಜನ್ಯವೂ, ಪ್ರಜ್ಞಾಪೂರ್ವಕ ಕಲಾ ಸೃಷ್ಟಿಯಾಗಿಯೂ ರೂಪಗೊಳ್ಳುವುದು. ಸಾಹಿತ್ಯಿಕ ಭಾಷೆ ಕಾವ್ಯಸೌಂದರ್ಯ, ಧ್ವನಿಶಕ್ತಿಗಳನ್ನೊಳಗೊಂಡ ಗುಣಗ್ರಾಹಿತ್ವ ಭಾಷೆಯಾಗಿರುವುದು. ಭಾಷೆಯಲ್ಲಿ ಭಾವನೆಗಳು ಸಂಸ್ಕಾರ ಹೊಂದಿ ಮೂರ್ತರೂಪ ತಾಳುವವು. ಅಮೂರ್ತ ಭಾವಗಳು ಕಾವ್ಯಭಾಷೆಯಲ್ಲಿ ಮೂರ್ತರೂಪದಲ್ಲಿ ಕಲಾತ್ಮಕವಾಗಿ ಸಾಹಿತ್ಯ ಕೃತಿಯಲ್ಲಿ ಅಭಿವ್ಯಕ್ತಗೊಳ್ಳುವುದು.

ಈ ಎಲ್ಲ ವಿದ್ವಾಂಸರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ, ಭಾಷೆ, ಸಾಹಿತ್ಯಭಾಷೆಯ ಕುರಿತಾದ ನಿಲುವುಗಳನ್ನು ಈ ಕೆಳಕಂಡಂತೆ ಸೂತ್ರೀಕರಿಸಿ ಗಮನಿಸಬಹುದಾಗಿದೆ. ಈ ಅಭಿಪ್ರಾಯಗಳು ಅಕ್ಕನ ವಚನಗಳ ಭಾಷೆಯ ಸ್ವರೂಪ, ರಚನೆ ಕುರಿತಾದ ಅಧ್ಯಯನಕ್ಕೊಂದು ಮಾರ್ಗದರ್ಶಿ ಸೂತ್ರದಂತೆ ನೆರವಾಗುವವು.

೧. ಭಾಷೆ ಮಾನವನ ಭಾವನೆಗಳ ಅಭಿವ್ಯಕ್ತಿ ಮಾಧ್ಯಮ ಹಾಗೂ ಸಾಮಾಜಿಕ ಸಂಪರ್ಕದ ಉದ್ಧೇಶವನ್ನೊಳಗೊಂಡು ಸೇತುವೆಯಂತೆ ಭಾಷಿಕರ ಮಧ್ಯೆ ಕಾರ್ಯನಿರ್ವಹಿಸುತ್ತದೆ.

೨. ಭಾಷೆಯು ಭಾಷಿಕರ ನಡುವೆ ಬಾಂಧ್ಯವ್ಯವನ್ನು ಸೃಷ್ಟಿಸುತ್ತದೆ. ಭಾಷೆಯ ಬಳಕೆಯಲ್ಲಿ ಭಾಷಿಕರ ವರ್ಗ, ಜಾತಿ, ಅಂತಸ್ತು, ಲಿಂಗ, ವಯಸ್ಸು ಮೊದಲಾದ ಜೈವಿಕ ಅಂಶಗಳು ಪರಿಣಾಮ ಬೀರುತ್ತವೆ.

೩. ಭಾಷೆಯು ಸಂಸ್ಕೃತಿ, ಸಾಹಿತ್ಯ, ಪ್ರತಿಭಾಶಕ್ತಿಯ ವಾಹಕವೂ ಆಗಿದೆ. ಭಾಷೆ ಸಾಂಕೇತಿಕವಾಗಿದ್ದರೂ ಅನುಭವಗಳ ವಿನಿಮಯ ಸಾಧನವಾಗಿದೆ.

೪. ಭಾಷೆ ಲೋಕೋಪಯೋಗಿ, ಭಾವೋಪಯೋಗಿ ಎಂಬೆರಡು ಆಯಾಮಗಳನ್ನು ಹೊಂದಿದ್ದು, ವ್ಯವಹಾರಿಕ ಭಾಷೆಗಿಂತ ಕಾವ್ಯಭಾಷೆ, ಸಾಹಿತ್ಯಭಾಷೆ, ಕಲಾತ್ಮಕವಾದ, ಪ್ರಜ್ಞಾಪೂರ್ವಕವಾದ ಕ್ರಿಯೆಯಾಗಿದೆ.

೫. ಭಾಷೆ ಒಂದು ಸುಂದರ ಬಂಧುರ ಭಾವಗಳ ವಿನಿಮಯ ಕ್ರಿಯೆಯನ್ನೊಳಗೊಂಡ ಜೀವಂತ, ಚಲನಶೀಲ ಆತ್ಮಚೈತನ್ಯವಾಗಿದೆ.

ಭಾಷೆಯ ವಿಚಾರಗಳ ಹಿನ್ನೆಲೆಯಲ್ಲಿ ಹನ್ನೆರಡನೆ ಶತಮಾನದ ವಚನಕಾರರು ಬಳಸಿದ ಭಾಷೆ ಅವುಗಳ ಉದ್ದೇಶವನ್ನು ಅವಲೋಕಿಸಿದರೆ ಭಾಷೆಯ ಹೊಸ ಸಾಧ್ಯತೆಗಳನ್ನು ವಚನಕಾರರು ಸಾಧಿಸಿ ತೋರಿಸಿದ್ದಾರೆ. ಜನ ಭಾಷೆಯನ್ನೇ ಸಾಹಿತ್ಯದ ಭಾಷೆಯಾಗಿ ಪರಿವರ್ತಿಸಿ, ಸಂಸ್ಕರಿಸಿ ಸ್ವಾನುಭವದ ಅಭಿವ್ಯಕ್ತಿಗಾಗಿ, ಸಮರ್ಥವಾಗಿ ಬಳಸಿಕೊಂಡು ಕನ್ನಡ ಭಾಷೆಯ ಸತ್ವವನ್ನು ಹೆಚ್ಚಿಸಿದವರು ಶಿವಶರಣರು. ಧರ್ಮ, ಆಧ್ಯಾತ್ಮ, ಸಾಮಾಜಿಕ ಸುಧಾರಣೆಯ ಚಿಂತನೆಗಳು, ಮೂರ್ತ, ಅಮೂರ್ತ ಅನುಭವ, ಅನುಭಾವದ ನೆಲೆಗಳನ್ನು ವಚನಗಳಲ್ಲಿ ಹಿಡಿದಿಟ್ಟಿರುವರು. ದೇವವಾಣಿಯೆನಿಸಲ್ಪಟ್ಟಿದ್ದ ಸಂಸ್ಕೃತ ಭಾಷೆಯು ಜನ ಸಾಮಾನ್ಯರ ಧ್ವನಿಯಾಗದೇ ವಾಸ್ತವ ಬದುಕಿನಿಂದ ದೂರಸರಿದಾಗ ಜನವಾಣಿಯಲ್ಲಿಯೇ ಲೌಕಿಕ ಪಾರಮಾರ್ಥಿಕ ಬದುಕನ್ನು ವಚನ ಭಾಷೆಯಲ್ಲಿ ಸಾಕ್ಷೀಕರಿಸಿದುದು ಬಸವಾದಿ ಶರಣರಿಗೆ ಕನ್ನಡ ಭಾಷೆಯ ಬಗೆಗಿರುವ ಆತ್ಮವಿಶ್ವಾಸವನ್ನು ದೃಢಪಡಿಸುತ್ತದೆ. ಅದುವರೆಗಿನ ಸಿದ್ಧ ಮಾರ್ಗ ಸಂಪ್ರದಾಯವನ್ನು ತ್ಯಜಿಸಿ ಸರಳ, ನೇರ ಸತ್ವಶಾಲಿಯಾದ ವಚನವಾಣಿಯನ್ನು ಅನುಷ್ಠಾನಗೊಳಿಸಿದರು. ಹನ್ನೆರಡನೆ ಶತಮಾನದಲ್ಲಿ ಕರ್ನಾಟಕದಲ್ಲಿ ಜರುಗಿದ ವಚನ ಚಳುವಳಿ ಅದು ವೈಚಾರಿಕ ಕ್ರಾಂತಿಯೆಂದೆ ಬಣ್ಣಿಸಲ್ಪಟ್ಟಿದೆ. "ಸಮಾಜದಲ್ಲಿ ವೈಚಾರಿಕ ಕ್ರಾಂತಿಯಾದಾಗ ಅದರ ಕಾವು ಭಾಷೆಗೆ ತಟ್ಟುತ್ತದೆ. ಮಲಗಿದ್ದ ಭಾಷೆ ಹುರುಪಿನಿಂದ ಎದ್ದು ಹೊಸ ಸಂವೇದನೆಗಳನ್ನು ಶಾಬ್ದಿಕವಾಗಿ ಜನರಿಗೆ ತಲುಪಿಸುವ ಕಾರ್ಯದಲ್ಲಿ ತೊಡಗುತ್ತದೆ."[೬೩]

ವಚನಕಾರರು ಏಕಾಂತದಲ್ಲಿ ಕುಳಿತುಕೊಂಡು ಪಾಂಡಿತ್ಯ ಪ್ರದರ್ಶನಕ್ಕಾಗಿ, ಸಾಹಿತ್ಯ ರಚನೆಗಾಗಿ, ರಾಜಾಶ್ರಯ ಮನ್ನಣೆಗಾಗಿ ವಚನ ರಚಿಸಿದವರಲ್ಲ. ತಮ್ಮ ಭಾವನೆಗಳನ್ನು ಸಮಾಜದೊಂದಿಗೆ ಹಂಚಿಕೊಂಡು ಲೋಕಾಂತದಲ್ಲಿ ನಿಂತುಕೊಂಡು ಸಮಾಜ ಪರಿವರ್ತನೆಗೆ ಪ್ರಯತ್ನಿಸಿದವರು. ಅದರ ಪ್ರತಿಫಲವಾಗಿಯೇ ವಚನಸಾಹಿತ್ಯ ಜನಮುಖಿಯಾಗಿ ಸೃಷ್ಟಿಯಾಗಿ, ಸಮಾಜಮುಖಿಯಾಗಿ ತೊಡಗಿಸಿಕೊಂಡಿತು. ಸಾಮಾಜಿಕ ಚಿಂತನೆಯ ವಚನಕಾರರು ಆಡುನುಡಿಯನ್ನೆ ಆಧ್ಯಾತ್ಮದ ಸಾಧನವಾಗಿಸಿ ಔನತ್ಯಕ್ಕೇರಿಸಿದರು. ಕನ್ನಡಭಾಷೆ ಅದುವರೆಗಿನ ಜಡತ್ವವನ್ನು ಕೊಡವಿಕೊಂಡು ಜಂಗಮತ್ವ ಪಡೆದು ಜನವಾಹಿನಿಯಾದುದು, ಭಾಷಾ ಬೆಳವಣಿಗೆ ದೃಷ್ಟಿಯಿಂದ ಪ್ರಮುಖವಾದ ಘಟ್ಟವೆನಿಸಿದೆ. " ತನ್ನ ಕಾಲದ ಸಂಘರ್ಷದ ಆಶಯಗಳನ್ನು ನಿರೂಪಿಸುವ ವಕ್ತಾರನ ಸ್ಥಾನದಲ್ಲಿ ಭಾಷೆ ನಿಲ್ಲುತ್ತದೆ. ಕ್ಲಿಷ್ಟವಾದ ಗ್ರಾಂಥಿಕವಾದ ಹಳಗನ್ನಡವನ್ನು ಸುಲಲಿತ ನಡುಗನ್ನಡಕ್ಕೆ ತಿರುಗಿಸಲು ಹನ್ನೆರಡನೆ ಶತಮಾನದ ಶಿವಶರಣರ ಕ್ರಾಂತಿಯು ಕಾರಣವಾಗಿದೆ. "ದೇಶೀ ಸಾಹಿತ್ಯ ಪ್ರಚಾರ" ಮತ್ತು ಜನಸಮ್ಮುಖದೃಷ್ಟಿ ಪ್ರಥಮಥಃ ಮೂಡಿಬಂದದ್ದು ಈ ಶತಮಾನದಲ್ಲಿ."[೬೪]

ವಚನ ಚಳುವಳಿ ವೈಚಾರಿಕ ಕ್ರಾಂತಿಯ ಫಲವಾಗಿ ಏಕಕಾಲದಲ್ಲಿ ವಿಭಿನ್ನ ಸಾಮಾಜಿಕ ಸ್ಥರ, ಹಿನ್ನೆಲೆಯಿಂದ ಬಂದ ಅನೇಕ ವಚನಕಾರರು ವರ್ಗ, ವರ್ಣ, ಲಿಂಗ ಭೇದಗಳೆನ್ನದೆ ಸರ್ವ ಸಮಾನತೆಯ ತಳಹದಿಯಲ್ಲಿ ನಿಂತು ವಚನ ರಚನೆ ಗೈದಿರುವುದು ಜಗತ್ತಿನ ಇತಿಹಾಸದಲ್ಲಿಯೇ ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ದೃಷ್ಟಿಗಳಿಂದ ಅಪೂರ್ವವೆನಿಸಿದೆ. ಬಸವಾದಿ ಶರಣರ ಸಮಕಾಲೀನ ವಚನಕಾರರಲ್ಲಿ ಹಲವು ವಚನಕಾರ್ತಿಯರು ತಮ್ಮ ಆಧ್ಯಾತ್ಮಿಕ ಸಾಧನೆ, ಸಾಹಿತ್ಯ ಸೃಷ್ಟಿಯಿಂದ ಗಮನ ಸೆಳೆದಿರುವರು. ಈ ಹಿನ್ನೆಲೆಯಲ್ಲಿ ಕನ್ನಡ ಸಾರಸ್ವತ ಪ್ರಪಂಚದ ಅಮೂಲ್ಯ ಪ್ರತಿಭೆ ಅಕ್ಕಮಹಾದೇವಿ ವಚನಕಾರರಲ್ಲಿ ವಿಶಿಷ್ಟವಾಗಿ ನಿಲ್ಲುವಂತವಳು. ಅವಳ ಅಗಾಧವಾದ ಲೋಕಾನುಭವ, ಸತ್ವಯುತ ಭಾಷಾ ಸಾಮರ್ಥ್ಯ, ಭಾವ ಪ್ರತಿಪಾದನೆ ಪರಿಣತಿ, ಅವಳ ಸಹಜ ಸುಂದರವಾದ ವಚನ ವಾಙ್ಮಯ, ಕನ್ನಡ ಭಾಷೆಗೆ ಅನನ್ಯ ಬಳುವಳಿಯಾಗಿವೆ.

ಅಕ್ಕನ ವೈವಿಧ್ಯಮಯ ಭಾವನೆಗಳಿಗೆ ಭಾಷೆ ಅವಳೊಲುಮೆಯಂತೆ ಅನುಸರಿಸುತ್ತದೆ. ಅಕ್ಕಮಹಾದೇವಿಯ ಆರಾಧ್ಯ ದೇವನಾದ ಚೆನ್ನಮಲ್ಲಿಕಾರ್ಜುನನ ಪರಿಭಾವನೆಗೆ, ಅಸ್ವಾದನೆಗೆ, ಆರಾಧನೆಗೆ, ನಿಧಿಧ್ಯಾಸಕ್ಕೆ, ಧ್ಯಾನಕ್ಕೆ ತತ್ವಜಿಜ್ಞಾಸೆಗೆ, ಚಿಂತನೆಗೆ, ಭಾವನೆಗಳಿಗೆ, ಸಹಜ ಅಭಿವ್ಯಕ್ತಿಗೆ ಭಾಷೆ ಬೀಸರವೋಗದೆ ಬಳಿವಿಡಿದಿದೆ. ಮಹಾದೇವಿಯಕ್ಕನ ಸಮಕಾಲೀನ ಶರಣ ಶರಣೆಯರ ವಚನ ರಚನೆಯಲ್ಲಿ ಅವರವರ ಕಾಯಕ, ಜೀವನಕ್ರಮ, ಸಾಮಾಜಿಕ ಆಚಾರ ವಿಚಾರಗಳ, ನೇಮ ವ್ರತ ನಿಷ್ಠೆಗಳು ಹೆಚ್ಚಾಗಿ ನಿರೂಪಿತಗೊಂಡಿವೆ. ವಚನಕಾರರು ಮತ್ತು ವಚನಕಾರ್ತಿಯರು ವಚನಗಳಲ್ಲಿ ಬಳಸಿದ ಭಾಷೆಯಲ್ಲಿ ಭಿನ್ನತೆಗಳುಂಟು. ವಚನ ಚಳುವಳಿಯಲ್ಲಿ ಪಾಲ್ಗೊಂಡ ಎಲ್ಲ ವಚನಕಾರರ ಭಾಷೆ ಮೇಲ್ನೋಟಕ್ಕೆ ಸಾಮಾನ್ಯವಾದ, ಸಮಾನಭಾಷೆ ಎನಿಸಿದರೂ ಆಂತರಿಕ ವಿಚಾರ ಆಚಾರಗಳ ವೈರುಧ್ಯಕ್ಕೆ ಬಳಸಿದ ಭಾಷೆಯೂ ಭಿನ್ನವಾಗಿವೆ.

ವಿವಿಧ ಸಾಮಾಜಿಕ ಹಿನ್ನೆಲೆ ಆಧ್ಯಾತ್ಮಿಕ ಸಾಧನೆ, ಸಿದ್ಧಿಯ ಪ್ರತಿಭೆಯ ವಚನಕಾರರ ಭಾವ ಪ್ರತಿಪಾದನೆಯಲ್ಲಿ ವ್ಯತ್ಯಾಸಗಳಿರುವಂತೆ ಭಾಷಾ ಪ್ರಯೋಗದಲ್ಲಿಯೂ ವೈವಿಧ್ಯತೆಯುಂಟು. ಶರಣರಿಗೆ ಸತಿಯಾಗಿದ್ದುಕೊಂಡು ವಚನ ಚಳುವಳಿಯಲ್ಲಿ ಪಾಲ್ಗೊಂಡ ಶರಣೆಯರ ವಚನಭಾಷೆ "ಪತಿಯಾಜ್ಞೆಯಲಿ ಚರಿಪ ಸತಿಗೇಕೆ ಪ್ರತಿಜ್ಞೆಯು" ಶರಣೆ ಗಂಗಾಂಬಿಕೆಯ ನುಡಿಯನನುಸರಿಸಿ ಪತಿಯ ಭಾಷೆ, ಜೀವನ ಶೈಲಿಯನ್ನು ಆಧರಿಸಿರುವ ಪುರುಷಭಾಷೆ, ವಿನಮ್ರತೆ, ಹಿಂಬಾಲಿಸುವಿಕೆ, ಗಂಡ ತಪ್ಪಿದಾಗ ಕೆಲವೊಂದು ವೇಳೆ ಎಚ್ಚರಿಸುವಿಕೆ, ಸಹಜವಾಗಿ ಕಾಣುವ ನಿಯಮಾಚರಣೆ, ವ್ರತನೇಮಗಳ ನಿಷ್ಠೆಯ ಭಾಷೆಯನ್ನು ಬಳಸಿದ್ದಾರೆ. ಆದರೆ ಅಕ್ಕಮಹಾದೇವಿಯ ವಚನಗಳ ಭಾಷೆ, ಪುರುಷ ಮತ್ತು ಸ್ತ್ರೀ ವಚನಕಾರರ ಭಾಷೆಗಿಂತ ಬೇರೊಂದು ನೆಲೆಯಲ್ಲಿ ಅಭಿವ್ಯಕ್ತಗೊಳ್ಳುತ್ತದೆ.

ಸಾಮಾಜಿಕ ರೂಢಿ, ಸಂಪ್ರದಾಯ ಆಚರಣೆಗಳನ್ನು ಮೆಟ್ಟಿ ನಿಂತು ವೈವಾಹಿಕ ಜೀವನ, ಸಂಸಾರದ ವ್ಯಾಮೋಹದ ಬಂಧಗಳನ್ನೆಲ್ಲ ಕಳಚಿಕೊಂಡು ಸ್ತ್ರೀ ಸ್ವಾತಂತ್ರ್ಯದ ಮುಕ್ತ ಜೀವನವನ್ನು ಅಪ್ಪಿಕೊಂಡು ತನ್ನ ಜೀವನವನ್ನೇ ತಾ ಮೆಚ್ಚಿದ ದೇವನಿಗಾಗಿ ಸಮರ್ಪಿಸಿದ ವಿಚಾರ ಸ್ವಾತಂತ್ರ್ಯದ ದಿಟ್ಟ ಧೀರೆ ಅಕ್ಕಮಹಾದೇವಿ. ತನ್ನ ಹೆಣ್ತನವನ್ನೇ ಹೆಮ್ಮೆ ಪಟ್ಟುಕೊಂಡು ಹಿರಿತನ ಮಾಡಿಕೊಂಡು ಮಾಯೆಯನ್ನು ಮೀರಿ ನಿಂತವಳು. ತನ್ನ ವಿರತಿಗೆ ಒರೆಗಲ್ಲಾಗಿ ಬಂದ ಸಂಕಷ್ಟಗಳನ್ನೆಲ್ಲ ಸಹಿಸಿ ತನ್ನ ದೇವನಲ್ಲಿ ಅನನ್ಯ ಶರಣಾಗತಿ ಹೊಂದುತ್ತ "ಶರಣಸತಿ, ಲಿಂಗಪತಿ" ಯಾಗಿ ಬಾಳುವೆ ನಡೆಸಿ ಭುವಿಗೆ ಬೆಳಕಾದ, ಭಾಷೆಗೆ ಧ್ವನಿಯಾದ ಮಹಾದೇವಿಯಕ್ಕನ ಬದುಕು ಬರಹ ತಾದಾತ್ಮ್ಯಗೊಂಡುದು ಅವಳ ವಚನಗಳ ಭಾಷೆಯಲ್ಲಿ ತುಂಬಿಕೊಂಡಿದೆ.

ತನ್ನ ಜೀವನದಲ್ಲಿ ಎದುರಾದ ಸಂಗತಿಗಳೇ ಸಾಹಿತ್ಯವಾಗಿ ಭಾಷೆಯಲ್ಲಿ ಬೆಳಕು ಕಂಡಿವೆ. ಬದುಕು ವಚನಗಳ ವಿಷಯ ವಸ್ತು, ಅಂತರಂಗದ ಆತ್ಮಸಾಂಗತ್ಯ ಮೇಳವಿಸಿದ ವಚನಗಳಲ್ಲಿ ಒಳತೋಟಿಗಳನ್ನೆಲ್ಲ ಬಿಚ್ಚಿಟ್ಟು ಹಾಡಿ ಹೃದಯ ಹಗುರ ಮಾಡಿಕೊಂಡಿದ್ದಾಳೆ. ಅವೆಲ್ಲ ಹೃದಯಂಗಮವಾದ ಭಾವಗೀತೆಗಳೆನಿಸಿವೆ. ನೋವು ನಲಿವು, ಭಕ್ತಿ ಭಾವುಕತೆ, ವಿನಯ, ದೈನ್ಯತೆ, ಶರಣಾಗತಿ, ಅಸಹಾಯಕತೆ, ಸಮರ್ಪಣೆ, ಶ್ರದ್ಧೆ, ಸ್ವಗತ ಸಾಂತ್ವನದ ಭಾವ ಸಮುಚ್ಚಯದಿಂದ ಆರ್ದ್ರವಾದ ಭಾಷೆ, ಮೃದುಮಧುರವಾಗಿ ಹೊರಹೊಮ್ಮುತ್ತದೆ. ಸಂದರ್ಭಾನುಸಾರ ಸಮಾಜದ ಸವಾಲುಗಳಿಗೆ ಎದುರಾದಾಗ ಭಾಷೆ ಬಂಡಾಯ ಸ್ವರೂಪತಾಳುತ್ತದೆ. ಅಲ್ಲೆಲ್ಲ ಭಾಷೆ ವಾಚ್ಯಾರ್ಥ, ಲಕ್ಷಾರ್ಥ ಧ್ವನಿಯಾಗದೆ ವ್ಯಂಗವೇ ಧ್ವನಿಯಾಗುತ್ತದೆ. ದಿಟ್ಟ ನಡೆಯೆಲ್ಲ ಭಾಷೆಯಲ್ಲಿ ಗಟ್ಟಿಕೊಂಡು ಜೀವಂತಿಕೆ ಪಡೆದು ಅಕ್ಕನ ಆತ್ಮಸ್ಥೈರ್ಯ, ಆತ್ಮಾಭಿಮಾನ, ಭೋರ್ಗರೆವ ಕಡಲಂತೆ ಧುಮ್ಮಿಕ್ಕುತ್ತದೆ. ಅಕ್ಕನ ಬಾಳುವೆಯೇ ಅವಳ ವಚನಗಳ ಭಾಷೆಯಾಗಿದೆ. **"ಶರಣಸತಿ ಲಿಂಗಪತಿ"** ಎಂಬ ಭಾವವನ್ನು ಜೀವನದಲ್ಲಿ ಅನುಸಂಧಾನಕ್ಕೆ ತಂದುಕೊಂಡ ಅಕ್ಕಮಹಾದೇವಿ ಅದನ್ನು ಪುರುಷ ಶರಣರಿಗಿಂತ ಹೆಚ್ಚು ನಿಕಟವಾಗಿ, ಆತ್ಮೀಯವಾಗಿ ಪ್ರಕಟಿಸುತ್ತಾಳೆ. ಆಕೆಯ ನುಡಿಗಳಲ್ಲಿ ಆಧ್ಯಾತ್ಮಿಕ ವಿರಹ ಶೃಂಗಾರಗಳ ಸುಮಧುರ ಸಮನ್ವಯವನ್ನು ಕಾಣುತ್ತೇವೆ. ಹೆಣ್ಣಿನ ಸಹಜ ಸಂವೇದನಶೀಲತೆ, ಭಾವೋತ್ಕರ್ಷಗಳು ಮಿಡಿಯುವಂತೆ ಭಾಷೆ ಅಭಿವ್ಯಕ್ತಗೊಳ್ಳುತ್ತದೆ. ಭಾಷೆಯ ಪರಿಕರಗಳಾದ ಧ್ವನಿಮಾ, ಆಕೃತಿಮಾ, ಹಾಗೂ ವಾಕ್ಯಗಳಲ್ಲಿ ತನ್ನದೇ ಆದ ಲಯಗಾರಿಕೆಯನ್ನು ತರುವುದು ಹಾಗೂ ವರ್ಣನಾತ್ಮಕ ಶೈಲಿ ಆಕೆಯ ವ್ಯಕ್ತಿ ಭಾಷೆಯ ವೈಲಕ್ಷಣಗಳಾಗಿವೆ."[೬೫]

ಸ್ತ್ರೀ ಸಂವೇದನೆ

ಷಟಸ್ಥಲ ಮಾರ್ಗದಲ್ಲಿ ನಡೆಯುವ ಭಕ್ತ, ಸ್ತ್ರೀತ್ವವನ್ನು ಆರೋಪಿಸಿಕೊಂಡು ಶರಣಸತಿ ಲಿಂಗಪತಿಯಾಗಿ ಪರಿವರ್ತನೆಗೊಂಡು ಸ್ತ್ರೀ ಸಂವೇದನೆಗಳನ್ನು ವಚನಗಳಲ್ಲಿ ವ್ಯಕ್ತಪಡಿಸಿದ ಬಸವಣ್ಣ,

ಉರಿಲಿಂಗದೇವ, ಗಜೇಶ ಮಸಣಯ್ಯ ಆದಿಯಾಗಿ ಪುರುಷ ವಚನಕಾರರು ಸ್ತ್ರೀಯಾಗಿ ಬದಲಾವಣೆ ಹೊಂದುವುದು ಶರಣಸತಿ ಲಿಂಗಪತಿಯಾಗಿ ತಾನೊಲಿದ ದೇವನಿಗಾಗಿ ಹಂಬಲಿಸಿರುವುದು ಗಮನಾರ್ಹ. ಅವರ ವಚನಗಳಲ್ಲಿ 'ಶರಣಸತಿ ಲಿಂಗಪತಿ' ಭಾವ ತುಂಬಿಕೊಂಡಿದೆ. ಆದರೆ ಪುರುಷ ಸ್ತ್ರೀಯಾಗಿ ಬದಲಾವಣೆಗೊಂಡು ವ್ಯಕ್ತಗೊಳ್ಳುವ ವಚನ ಭಾವ ಭಾಷೆಗೂ, ಅಕ್ಕಮಹಾದೇವಿ ಸ್ತ್ರೀ ಸಹಜವಾದ ಸಂವೇದನೆಗಳನ್ನು ಹೊಂದಿ ಅವುಗಳನ್ನು ಅಭಿವ್ಯಕ್ತಗೊಳಿಸುವುದಕ್ಕೂ ಸೂಕ್ಷ್ಮ ಭಿನ್ನತೆಯುಂಟು. ಸ್ತ್ರೀಪರವಾದ ಸಹಜ ಸಂವೇದನೆಗಳು ಪುರುಷ ಸ್ತ್ರೀಯಾಗಿ ಆರೋಪಿಸಿಕೊಂಡು ಅಭಿವ್ಯಕ್ತಗೊಳ್ಳುವ ಸಂವೇದನೆಗಳಿಗಿಂತ ಹೆಚ್ಚು ನಿಕಟವಾಗಿ ಉತ್ಕಟವಾಗಿ, ಸಹಜತೆಯಿಂದ ಸೌಂದರ್ಯವನ್ನು ಹೊರಹೊಮ್ಮಿಸುತ್ತವೆ.

ಅಕ್ಕಮಹಾದೇವಿ ಹೆಣ್ಣಾಗಿರುವುದಕ್ಕೆ ಅಭಿಮಾನ ಪಡುತ್ತಾಳೆ. ಪಾರಲೌಕಿಕ ಗಂಡನ ಪ್ರೇಮಕ್ಕಾಗಿ ಪರಿತಪಿಸುವಾಗ ಹೊರಹೊಮ್ಮಿದ ವಿರಹಿಣಿಯ ಭಾವಗಳು ವಿರಹ ಶೃಂಗಾರ ಕಾವ್ಯವನ್ನೇ ಅನಾವರಣಗೊಳಿಸುತ್ತವೆ. ಅಕ್ಕನ ಪ್ರಣಯ ಶೃಂಗಾರ ವಿರಹ ಲೌಕಿಕದ ಪರಿಯಂತಲ್ಲ. ಅಶ್ಲೀಲತೆಗೆಡೆಯಿಲ್ಲದೆ, ಭಕ್ತಿಭಾವ, ವೇದನೆ, ನಿವೇದನೆಗಳನ್ನೊಳಗೊಂಡ ಶೃಂಗಾರ ಪ್ರಣೀತ ಭಕ್ತಿಕಾವ್ಯವದು. ಮೃದುಮಧುರ ಯಾತನೆ, ಒಳತೋಟಿಯಲ್ಲಿ ಕಾಡುವ ವಿರಹ ತನ್ನ ಸಂಗಾತಿಯ ಸಾಮಿಪ್ಯಕ್ಕಾಗಿ ಹಾತೊರೆಯುವ ಹಂಬಲ, ಹವಣಿಕೆ, ತಲ್ಲಣ, ತವಕ, ಕಾತರ ಕಳವಳಗಳೆಲ್ಲ ಭಾಷೆಯಲ್ಲಿ ಝರಿಯಂತೆ, ತೊರೆಯಂತೆ ಪ್ರವಹಿಸುತ್ತವೆ.

ಅಕ್ಕಮಹಾದೇವಿಯ ವಚನಗಳಲ್ಲಿ ಸಹಜವಾಗಿ ಸ್ಫುಟವಾಗಿ ಸ್ತ್ರೀಜನ್ಯ ಸಂವೇದನೆಗಳು ನಿರ್ಮಲವಾಗಿ ನಿರ್ಭಯವಾಗಿ ಭಾಷೆಯಲ್ಲಿ ಅಭಿವ್ಯಕ್ತಗೊಂಡಿವೆ. ಅಕ್ಕ ತಾನು ಭಾವಿಸಲು ಗಂಡು ರೂಪು ಎಂದಿದ್ದರೂ ಸ್ತ್ರೀ ಸಂವೇದನೆಗಳು ಪ್ರಧಾನ ಭಾವಗಳೇ ವಚನಗಳಲ್ಲಿ ಮೂಡಿ ಬಂದಿವೆ. ಓರ್ವ ಸ್ತ್ರೀಯಾಗಿ ಸಾಮಾಜಿಕ ನೆಲೆಯಲ್ಲಿ ವ್ಯಕ್ತಿಗತವಾಗಿ ತಾನನುಭವಿಸಿದ ಅನುಭವಗಳು, ಕಷ್ಟಕಾರ್ಪಣ್ಯಗಳು, ನಿಷ್ಠುರ ಪ್ರಸಂಗಗಳು ವಿಷಮ ವಿವಾಹದ ಅವಘಡಗಳೆಲ್ಲ ವಚನಗಳಲ್ಲಿ ನೆಲೆ ಪಡೆದಿರುವಂತೆ, ಲಿಂಗಾಯತ, ನಿಜತತ್ವ, ಸಿದ್ಧಾಂತ, 'ಶಕ್ತಿವಿಶಿಷ್ಟಾದ್ವೈತ' ತತ್ವ 'ಶರಣಸತಿ, ಲಿಂಗಪತಿ' ಭಾವವೂ ಸ್ತ್ರೀತ್ವದ ನಿಲುವೇ ಆಗಿರುವುದರಿಂದ ಸ್ತ್ರೀಪರವಾದ ಭಾವ ಸಮುಚ್ಚಯಗಳು ವಚನಗಳಲ್ಲಿ ಮಡುಗಟ್ಟಿ ನಿಂತಿವೆ.

ಮಹಾದೇವಿಯಕ್ಕ ಮಹಾದೇವನ ಮಡದಿಯಾಗಲು ಚೆನ್ನಮಲ್ಲಿಕಾರ್ಜುನನ ಚೆನ್ನಸತಿಯಾಗಲು ಅವನೊಲುಮೆಗಾಗಿ ಅನುಭವಿಸಿದ, ತಲ್ಲಣಿಸಿದ ಮಧುರ ಯಾತನೆಯ, ಪ್ರೇಮ ವಿರಹ ಭಾವಗಳು, ಸ್ತ್ರೀಯು ತನ್ನ ಸಂಗಾತಿಗಾಗಿ ಪರಿತಪಿಸಿದ ಪ್ರಣಯಿನಿಯ ಪ್ರೇಮದ ಪರಿಯೆಲ್ಲವನ್ನು ಸ್ತ್ರೀಪರ ಧ್ವನಿಯಾಗಿ ಅಕ್ಕನ ವಚನಗಳು ಪ್ರತಿನಿಧಿಸುತ್ತವೆ. ಅಕ್ಕಮಹಾದೇವಿಯ ಭಾಷೆಯೇ ಬದುಕು!

ಬದುಕೇ ಭಾಷೆ. ಅವಳ ಅಂತರಂಗ ಬಹಿರಂಗದ ಚರಿತ್ರೆಯೇ ಅವಳ ಸಮಗ್ರ ವ್ಯಕ್ತಿತ್ವ. ಭಕ್ತಿಯ ಉನ್ಮಾದ, ವಿರಹವೇದನೆ, ಸಮ್ಮಿಲನದ ಹರ್ಷೋದ್ಗಾರಗಳೆಲ್ಲಾ ತೀವ್ರ ಅನುಭಾವಿಕ ನೆಲೆಯಲ್ಲಿ ಪ್ರಕಟಗೊಂಡ ಸ್ತ್ರೀ ಸಂವೇದನೆಗಳು. ಕಿರಿಯ ವಯಸ್ಸಿನಲ್ಲಿ ಹಿರಿದಾದ ಲೋಕಾನುಭವ ಪಡೆದುಕೊಂಡ ಅಕ್ಕ ತನ್ನ ಸುತ್ತಲಿನ ಪ್ರಪಂಚದ ಸೂಕ್ಷ್ಮತೆಗಳನ್ನೆಲ್ಲ ಗ್ರಹಿಸಿ ಶಬ್ಧರೂಪದಲ್ಲಿ ಸಂಗ್ರಹಿಸಿ ರಸಧ್ವನಿ ಹೊರಹೊಮ್ಮಿಸುವ ಕಾವ್ಯ ಕಟ್ಟಬಲ್ಲ, ಕಾವ್ಯಕ್ಕೆ ಕಾಂತಿಯನ್ನು ತಂದುಕೊಡಬಲ್ಲ ಅಪ್ರತಿಮ ಪ್ರತಿಭಾಶಕ್ತಿ ಸಂಪನ್ನೆ. ಆಕೆಯ ವಚನಗಳು ಸುಂದರವಾದ ಭಾವಗೀತೆಗಳು. ಭಾವಗೀತಾತ್ಮಕ ಗುಣವುಳ್ಳ ವಚನಗಳಲ್ಲಿ ನಾವಿನ್ಯತೆಯಿದೆ. "ಭಾವಗೀತೆ ಕವಿಯ ವೈಯಕ್ತಿಕ ಭಾವದ ನೇರ ಅಭಿವ್ಯಕ್ತಿ. ಕಥೆ, ಕಾವ್ಯದ ಹಂಗಿಗೆ ಒಳಗಾಗದೆ ನೇರ ವ್ಯಕ್ತಿನಿಷ್ಠ ರಚನೆ. ಒಂದು ಕ್ಷಣದ ಭಾವ, ಅನುಭವ ಮತ್ತು ಸಂವೇದನೆ ಅದರಲ್ಲಿ ಮೂರ್ತವಾಗಿರುತ್ತದೆ. ಆದ್ದರಿಂದಲೇ ಭಾವಗೀತೆ ಒಂದು ಕ್ಷಣದ ಸ್ಮಾರಕ (Moments of monument) ಭಾವತೀವ್ರತೆ, ಸಂಕ್ಷಿಪ್ತತೆ ಮತ್ತು ಗೇಯತೆ ಈ ಮೂರು ಗುಣಗಳನ್ನು ಒಳಗೊಂಡಿರುತ್ತದೆ."[೬೬]

ಸನ್ನಿವೇಶಕ್ಕೆ ತಕ್ಕಂತೆ ಬಳಸುವ ಭಾಷೆ, ಪದ, ವಾಕ್ಯ ಸಂಯೋಜನೆ, ಸುಂದರವಾದ ವರ್ಣನೆ, ಗದ್ಯದ ಸೋಪಜ್ಞತೆಯು ಅಕ್ಕಮಹಾದೇವಿಯ ವಚನಗಳಲ್ಲಿ ಪರಿಣಮಕಾರಿಯಾಗಿ ಪ್ರತಿಪಾದನೆಗೊಂಡು ಪದ್ಯದ ಭಾವಗೀತಾತ್ಮಕ ಮಧುರ ಭಾವ, ಗದ್ಯದ ಬೆಡಗು ಹೊಂದಿದ ಭಾವದ ಬೆಳಕಿನ ಪುಂಜಗಳು ವಚನಭಾಷೆಯಲ್ಲಿ ಸಂಯೋಜಿತಗೊಂಡಿವೆ. ದೇವನ ಸಾಮಿಪ್ಯಕ್ಕಾಗಿ ಹಂಬಲಿಸುವಾಗಲೆಲ್ಲ ಅಕ್ಕ ಕರಗುತ್ತಾಳೆ ಕೊರಗುತ್ತಾಳೆ. ಕರುಣರಸ ಪ್ರಧಾನವಾದ ವಚನಗಳಲ್ಲಿ ಭಾಷೆ ಕರುಣಾಭಾವದಿಂದ ಹರಿಯುತ್ತದೆ. ಭಾವತೀವ್ರತೆಯ ಅರ್ಥದೀಪ್ತಿಯನ್ನು ಹೊರಹೊಮ್ಮಿಸುವ ಹಲವು ವಚನಗಳನ್ನು ಉದಾಹರಿಸಬಹುದಾಗಿದೆ.

> "ಎರೆಯಂತೆ ಕರಕರಗಿ, ಮಳಲಂತೆ ಜರಿಜರಿದು,
> ಕನಸಿನಲಿ ಕಳವಳಿಸಿ ಆನು ಬೆರಗಾದೆ.
> ಆವಿಗೆಯ ಕಿಚ್ಚಿನಂತೆ ಸುಳಿ ಸುಳಿದು ಬೆಂದೆ;
> ಆಪತ್ತಿಗೆ ಸಖಿಯನಾರನೂ ಕಾಣೆ.
> ಅರಸಿ ಕಾಣದ ತನುವ, ಬೆರಸಿ ಕೂಡದ ಸುಖವ,
> ಎನಗೆ ನೀ ಕರುಣಿಸಾ, ಚೆನ್ನಮಲ್ಲಿಕಾರ್ಜುನಾ."[೬೭]

ವಚನದಲ್ಲಿಯ ಲಯಗಾರಿಕೆ, ಸ್ವರಾಘಾತ, ತೀವ್ರತೆಯನ್ನು ಪ್ರತಿನಿಧಿಸುವ ದ್ವಿರುಕ್ತಿಗಳು ಅಕ್ಕನ ಭಾಷಾ ಪ್ರೌಢಿಮೆಗೆ ಸಾಕ್ಷಿಯಾಗಿವೆ. ಎರೆಯಂತೆ ಕರಗುವ, ಮಳಲಂತೆ ಜರಿಯುವ ಮನಸ್ಸಿನ ತಲ್ಲಣವನ್ನು ಕುಂಬಾರ ಗಡಿಗೆಯನ್ನು ಕಿಚ್ಚಿನಲ್ಲಿ ಹಾಕಿ ಬೇಯಿಸುವ ತೆರನಂತೆ ತನ್ನ ಸಂಗಾತಿಯ

ಸಾಮಿಪ್ಯಕ್ಕಾಗಿ ಹಾತೊರೆಯುವ ತನು ಮನ ಭಾವಗಳಲ್ಲಿ ಕೂಡದ, ಕಾಣದ ಸುಖ, ಹೃದ್ಯವೇದ್ಯವಾಗುವ ಸ್ತ್ರೀ ಸಂವೇದನೆಯ ಸಂಗಾತದ ಬಯಕೆಯ ಭಾವ ಈಡೇರದೆ ಹೋದಾಗ, ಉಂಟಾಗುವ ಕಳವಳ, ಸ್ತ್ರೀಸಹಜವಾದ ವೇದನೆಯಾಗಿ ದೇವನಲ್ಲಿ ಶರಣಾಗತಿಯ ನಿವೇದನೆಯೊಂದಿಗೆ ಅಂತ್ಯಗೊಳ್ಳುವ, ವಚನಭಾವ ಹೃದಯಸ್ಪರ್ಶಿಯಾಗಿ ನಿರೂಪಿತವಾಗಿದೆ. ಕಷ್ಟದಿಂದ ಕಳವಳಿಸಿ, ನಿತ್ರಾಣ ಹೊಂದಿದ ಜೀವ ಕೊನೆಗೆ ಕರುಣೆಗಾಗಿ ದೇವನಲ್ಲಿ ಮೊರೆಯಿಡುವ ಅಸಹಾಯಕತೆ, ಅನನ್ಯ ಶರಣಾಗತಿ ಭಾವ ಭಾಷೆಯಲ್ಲಿ ವಿಶಿಷ್ಟ ಲಯ, ನಾದಗುಣದಿಂದ ಆಕರ್ಷಿತಗೊಳಿಸುತ್ತ ಅರ್ಥ ದೀಪ್ತಿಯನ್ನು ಹೊಳೆಯಿಸುತ್ತದೆ.

ತಾನೊಲಿದ ದೈವ ಸಾಕ್ಷಾತ್ಕಾರಕ್ಕೆ ಕಾಯ ಮನಗಳನ್ನು ಲೆಕ್ಕಿಸದೆ ಹಾತೊರೆಯುವ ಕ್ರಿಯಾಶೀಲ ಮನಸ್ಸೊಂದು ಪ್ರತಿಕ್ರಿಯಿಸುವ ಪರಿ ಅಕ್ಕಮಹಾದೇವಿಯಲ್ಲಿ ನಿರ್ಭಿಡೆಯಿಂದ ಅಭಿವ್ಯಕ್ತಗೊಳ್ಳುವುದನ್ನು ಹಲವು ವಚನಗಳಲ್ಲಿ ಗುರುತಿಸಬಹುದು. ಶಿವನೊಲುಮೆಗೆ ಸಾಧನವಾದ ಕಾಯದ ನಿರಾಕರಣೆಯ ಆಶಯ ಅಂತರಂಗದಲ್ಲಿ ಸಿದ್ಧಿಸಿದ ಅರಿವಿನ ಬೆಳಕಿನಲ್ಲಿ ಬಾಹ್ಯದ ದೇಹ ಗೌಣವಾಗುವ ಅವಳ ಭಾಷಾಭಿವ್ಯಕ್ತಿ ಸಹಜವಾಗಿ ಮೂಡಿಬಂದಿದೆ.

"ಕಾಯ ಕರ್ರನೆ ಕಂದಿದಡೇನಯ್ಯಾ?
ಕಾಯ ಮಿರ್ರನೆ ಮಿಂಚಿದಡೇನಯ್ಯಾ?
ಅಂತರಂಗ ಶುದ್ಧವಾದ ಬಳಿಕ
ಚೆನ್ನಮಲ್ಲಿಕಾರ್ಜುನಯ್ಯಾ
ನೀನೊಲಿದ ಕಾಯವು ಹೇಗಿದ್ದಡೇನಯ್ಯಾ?"[೬೮]

ಸ್ವರಗಳ ಏರಿಳಿತ, ಲಯದ ನಡೆ, ಭಾವಕ್ಕೆ ತಕ್ಕಂತೆ ಭಾಷೆಯ ಬಳಕೆ ಪರಿಣಾಮಕಾರಿಯಾದ ಸಮುನ್ನತ ಭಾವಾನುಭಾವಗಳ ರಸಪ್ರತಿಪಾದನೆ ಪದ್ಯದ ಗೇಯತೆ ಗದ್ಯದ ಸೋಪಜ್ಞತೆಯ ಸೊಗಡಿನ ವಚನಗಳು ಶ್ರೇಷ್ಠ ಕಾವ್ಯದ ಮಟ್ಟಕ್ಕೇರುತ್ತವೆ. ಕಾಯದ ಬಗೆಗಿನ ನಿರಾಶೆಯ ಭಾವ, ಅದು ಹೇಗಿದ್ದಡೇನು? ಎಂಬ ನಿರ್ಲಕ್ಷವನ್ನು ಒಳಗೊಂಡಿರುವುದು ವಿಶೇಷ! ಇಂತಹ ನಿರ್ಲಕ್ಷ ಸುಮ್ಮನೆ ಹೊರಹೊಮ್ಮಿದುದಲ್ಲ. 'ದೇವನರಿವು' ಸಿದ್ಧಿಸಿದ ಬಳಿಕ ಉಂಟಾದ ನಿರ್ಲಿಪ್ತ ಮನೋಧೋರಣೆಯು, ಸ್ಥಿತ ಪ್ರಜ್ಞೆಯ ನಿಲುವನ್ನು ಅಕ್ಕಮಹಾದೇವಿ ಪ್ರಕಟಿಸುವಳು.

ಅಲ್ಲದೆ ಭೂತದ ಬಗೆಗಿನ ನಿಶ್ಚಿಂತ ನಿರ್ಲಿಪ್ತ ಸ್ಥಿತಿ ಪ್ರಾಪ್ತವಾಗಿರುವ ಭಾವನೆಗಳು ಅಂತರ್ಗತವಾಗಿವೆ. "ಅಕ್ಕನಲ್ಲಿ ಏಕಕಾಲಕ್ಕೆ ಶರೀರದ ಶೃಂಗಾರ ಸಾಧ್ಯತೆಗಳು, ಇನ್ನೊಂದು ಕಡೆ ಶರೀರವನ್ನು ತುಚ್ಛೀಕರಿಸಿ ಕಡೆಗಣಿಸುವ ಪ್ರತಿಮೆಗಳು ಗಣನೀಯ ಪ್ರಮಾಣದಲ್ಲಿದೆ. ಅಕ್ಕನಲ್ಲಿ ಕಾಯದ ಕಲ್ಪನೆ

ಎಷ್ಟರಮಟ್ಟಿಗೆ ವಿಸ್ತೃತವಾಗಿದೆ ಎಂದರೆ ನಮಗೆ ಒಟ್ಟಿಗೆ ಸ್ವೀಕಾರ ಮತ್ತು ತಿರಸ್ಕಾರವನ್ನು ಬಿಂಬಿಸುವ ವಚನಗಳು ಸಿಗುತ್ತವೆ. ಅಕ್ಕ ಸಾಮಾನ್ಯವಾಗಿ ಕಂಡುಬರುವ ಕಾಯದ ಕಲ್ಪನೆಯನ್ನು ಕೂಡ ನಾವು ದೇವರನ್ನು ಹೊಂದಲು ಬೇಕಾಗುವ ಪೂರ್ವಸಿದ್ಧತೆಯ ಸಾಧನವಾಗಿ ಪರಿಗಣಿಸಿರುವುದನ್ನು ಕಾಣುತ್ತೇವೆ. ಅಕ್ಕನಲ್ಲಿ ದೇಹ ಒಂದೇ ಕಾಲಕ್ಕೆ ಪ್ರಕೃತಿಯ ಭಾಗವೂ ಹೌದು. ಸಂಸ್ಕೃತಿ ಮತ್ತು ಸಮಾಜದ ಭಾಗವೂ ಹೌದು. ಅಕ್ಕನಲ್ಲಿ ಈ ಪರಸ್ಪರ ಕ್ರಿಯೆ ತುಂಬಾ ಕುತೂಹಲ ಮೂಡಿಸುವಂತ ಹದ್ದಾಗಿದೆ."[೬]

ಅಕ್ಕನ ವಿಶಿಷ್ಟ ಭಾವಾಭಿವ್ಯಕ್ತಿ ಮತ್ತು ಸಿದ್ಧಿತ್ವ ನೆಲೆಯಲ್ಲಿ ಬಳಸಿದ ಭಾಷೆಯ ಮೇರುಗುಣವನ್ನು ವಚನಗಳಲ್ಲಿ ಗುರುತಿಸಲು ಸಾಧ್ಯವಿದೆ. ದೇಹದ ಬಗೆಗಿನ ನಿರಾಕರಣೆ ಕುರಿತು ಸಮಾಜಕ್ಕೆ ಹೇಳುವಲ್ಲಿ ಅಕ್ಕನ ವಚನಗಳ ಭಾಷೆ ಬಂಡಾಯದ ಧ್ವನಿಯಾಗಿ ತಿರಸ್ಕೃತ ರೂಪದಲ್ಲಿ ಹೊರಹೊಮ್ಮಿದ ಸ್ತ್ರೀ ಸಂವೇದನೆಯ ಗಟ್ಟಿಧ್ವನಿಯಾಗಿ ಮತ್ತೆ ಮತ್ತೆ ಪ್ರತಿಧ್ವನಿಸುತ್ತದೆ. ದೇವರ ಕುರಿತು ನಿವೇದಿಸಿಕೊಳ್ಳುವಾಗ ಮಧುರ ಶರಣಾಗತಿಯ ಭಾವ ಭಾಷೆಯಲ್ಲಿ ಅನಾವರಣಗೊಂಡಿದೆ. ಸಮಾಜದ ಜನರನ್ನು ವಿಡಂಬಿಸುವ ಅಂತರಧ್ವನಿಯೊಳಗೊಂಡ ಮಧುರ ಭಾಷೆಯ ವಚನ, ಮೇಲ್ನೋಟಕ್ಕೆ ಪ್ರಕೃತಿಯ ಸಚರಾಚರವನ್ನೆಲ್ಲ ಮಾತನಾಡಿಸುವ ಧಾಟಿಯಲ್ಲಿರುವುದನ್ನು ಪರಿಭಾವಿಸಿದಷ್ಟು ಅರ್ಥ ವಿಸ್ತಾರವನ್ನು ತನ್ನೊಳಗಿಟ್ಟುಕೊಂಡು ಪ್ರಾಕೃತಿಕ ನೆಲೆಯಲ್ಲಿ ಸಮುದಾಯ ವನ್ನು ಕೆಣಕಿದಂತಿದೆ.

"ಚಿಲಿಪಿಲಿ ಎಂದೋದುವ ಗಿಳಿಗಳಿರಾ!
ನೀವು ಕಾಣಿರೆ? ನೀವು ಕಾಣಿರೆ?
ಸರವರದೊಳಗಾಡುವ ಹಂಸೆಗಳಿರಾ!
ನೀವು ಕಾಣಿರೆ? ನೀವು ಕಾಣಿರೆ?
ಸರವೆತ್ತಿ ಪಾಡುವ ಕೋಗಿಲೆಗಳಿರಾ!
ನೀವು ಕಾಣಿರೆ? ನೀವು ಕಾಣಿರೆ?
ಎರಗಿ ಬಂದಾಡುವ ತುಂಬಿಗಳಿರಾ!
ನೀವು ಕಾಣಿರೆ? ನೀವು ಕಾಣಿರೆ?
ಗಿರಿಗಹ್ವರದೊಳಗಾಡುವ ನವಿಲುಗಳಿರಾ!
ನೀವು ಕಾಣಿರೆ? ನೀವು ಕಾಣಿರೆ?
ಚೆನ್ನಮಲ್ಲಿಕಾರ್ಜುನದೇವನೆಲ್ಲಿದ್ದಾನೆಂಬುದ ಬಲ್ಲಡೆ
ನೀವು ಹೇಳಿರೇ!"[೭೦]

ನೀವು ಕಾಣಿರೆ? ಕೊನೆಯಲ್ಲಿ ಬರುವ ಪ್ರಶ್ನೆಯಲ್ಲಿಯೇ ನಾನಾರ್ಥಗಳನ್ನಿಟ್ಟು ಮನುಷ್ಯರನ್ನು ಬಿಟ್ಟು ಪ್ರಕೃತಿಯೆಲ್ಲವನ್ನು ಮಾತನಾಡಿಸುವ ಆತ್ಮೀಯ ಧಾಟಿಯಿಲ್ಲಿದೆ. ಸಂಸಾರ ದಂದುಗ ಹಿಂಗಿ ದೇವನಲ್ಲಿ ಬೆರೆಯಬೇಕೆನ್ನುವ ಅಕ್ಕಮಹಾದೇವಿಯ ಹಂಬಲ, ತಳಮಳದಿಂದ ಪರಮಾತ್ಮನ ಅವಿರ್ಭಾವವಾದ ಪ್ರಕೃತಿಯ ಸಚರಾಚರವನ್ನೆಲ್ಲ ಭಿನ್ನವಿಸುತ್ತಾಳೆ. ಅಕ್ಕ ಪ್ರಾರ್ಥಿಸುವ, ಆರ್ತಿಸುವ ಅಪೇಕ್ಷಿತ ಧ್ವನಿತರಂಗಗಳು ಹೊರಟು ಸಷ್ಟಿಯ ಮುಗ್ಧತೆಯ ಜೀವಿಗಳಲ್ಲಿ ಆಪ್ತವಾಗಿ ಸಂಭೋದಿಸುವಂತಿದೆ. ವಚನದ ಭಾವದಂತೆ ಭಾಷೆಯು ಮುಗ್ಧತೆ, ಆತ್ಮೀಯತೆಯ ಪದ ಸಂಯೋಜನೆಗಳನ್ನೇ ಹೊಂದಿದೆ. ತನ್ನಿಂದ ದೂರವಾದ ವ್ಯಕ್ತಿಯನ್ನು ಕಳೆದುಹೋದ ವಸ್ತುವನ್ನೋ ಹುಡುಕುವ ರೀತಿಯಲ್ಲಿಯೇ ಸಾಗುವ ವಚನ ಮಗುವೊಂದು ಮುನಿಸಿಕೊಂಡು ತಾಯಿಯಿಂದ ದೂರವೆಲ್ಲಿಗೋ ಹೋಗಿ ಮರೆಯಾದಾಗ ಆ ಮಗುವನ್ನು ಹುಡುಕುತ್ತ ತಾಯಿ ತನಗೆದುರಾದವರನ್ನು ನೀವೇನಾದರೂ ಕಂಡಿರಾ? ಎನ್ನುತ್ತ ಪ್ರಶ್ನಿಸುವ ತಾಯಿಯ ದುಗುಡ, ಆತಂಕದಂತೆ ಅಕ್ಕ ತನಗೆದುರಾದ ಪ್ರಕೃತಿಯೆನ್ನೆಲ್ಲಾ ತನ್ನ ದೇವ ತನ್ನಿಂದ ದೂರವಾದಾಗ ಹುಡುಕುವ ಅದಕ್ಕಾಗಿ ತವಕಿಸುವ ತಳಮಳಗೊಳ್ಳುವ ಪ್ರೀತಿಯಿಂದ ಮಾತನಾಡಿಸುವ ಸ್ತ್ರೀಸಂವೇದನೆಗಳೆಲ್ಲಾ ಒಂದಾಗಿವೆ.

ಪದಗಳ, ವಾಕ್ಯಗಳ ಪುನರಾವರ್ತನೆ, ಅಕ್ಕನ ಭಾವನೆಗಳ ತೀವ್ರತೆಯು ಎಷ್ಟೆಂಬುದನ್ನು ಗ್ರಹಿಕೆಗೆ ತರುತ್ತದೆ. ವಿವಿಧ ಅರ್ಥವಿನ್ಯಾಸವುಳ್ಳ ಬಹುವಿಧ ಸಂವೇದನೆಯ ವಚನದಲ್ಲಿ ಮತ್ತೊಂದರ್ಥದಲ್ಲಿ ಓದುವ, ಪಾಡುವ, ಆಡುವ, ನಲಿದಾಡುವ, ಗಿಳಿ, ಕೋಗಿಲೆ, ತುಂಬಿ, ನವಿಲು ಅವುಗಳು ವಾಸಿಸುವ ಸರೋವರ, ಪುಷ್ಪ, ಗಿರಿಗಹ್ವರಗಳೆಲ್ಲ ಒಂದಕ್ಕೊಂದು ಪೂರಕವಾಗಿ ಸೃಷ್ಟಿಯ ಸೊಬಗನ್ನು ವರ್ಣಿಸುತ್ತ, ಪ್ರಕೃತಿಯನ್ನು ಮಾತನಾಡಿಸುವ ಧಾಟಿಯ ಆಂತರ್ಯದ ಧ್ವನಿ ವಿಡಂಬನಾತ್ಮಕವಾಗಿದೆ. ಕಂಠಪಾಠ ಮಾಡಿ, ತತ್ವಶಾಸ್ತ್ರಗಳನ್ನೆಲ್ಲ ಉಲಿದು ಒಣ ಜಂಭ ತೋರಿಸುವ ಪಂಡಿತವರ್ಗ ಪಾಂಡಿತ್ಯ ಪ್ರದರ್ಶನದವರು, ಗಿಳಿಗಳೆಂದು ಅಕ್ಕ ಸಂಭೋಧಿಸುವಳು. ಸಂಗೀತ ವಿದ್ವತ್ತಿನವರು, ಕೋಗಿಲೆಗಳು ವಿಷಯಾಸಕ್ತಿಗಳಿಗೆಳಸುವ ಸಾಧಕರು, ತುಂಬಿಗಳು, ತತ್ವ ತಿರುಳರಿಯದವರು ಹಂಸೆಗಳು, ನೃತ್ಯಕಲೆ, ಕಸರತ್ತಿನ ಜನರು ನವಿಲುಗಳು, ಯೋಗ, ಧ್ಯಾನ, ತಪಗಳಿಂದ ಗಿರಿಗಹ್ವರದೊಳಗಿನ ಕಾಡಸಿದ್ದರು, ನೀವು ಕಾಣಿರೆ? ಡಾಂಭಿಕ ಭಕ್ತಿ ಪಾಂಡಿತ್ಯ ಪ್ರದರ್ಶಿಸುವವರನ್ನು ವಿಡಂಬಿಸುತ್ತ ನೀವೆಲ್ಲ ಶಿವನನ್ನು ಕಂಡಿರಲಾರಿರಿ! ಕಾಣಲಾರಿರಿ! ತೋರಿಕೆಗೆ ಪರತತ್ವದ ಅನುಭಾವ ದಕ್ಕದೆಂಬುದು ವ್ಯಂಗತನದ ಮೊನಚು ಈ ವಚನದ ಭಾಷೆಯಲ್ಲಿ ಅಡಗಿದ ಸೂಕ್ಷ್ಮಸಂವೇದನೆ.

ಬಾಹ್ಯಾಂಡಂಬರಗಳಿಗೆ ದೇವನರಿಯುವ ಸಾಮರ್ಥ್ಯವಿಲ್ಲ. ಸಾಧ್ಯವಾಗದು ಎಂದರುಹುವ ಅಕ್ಕ ನೀವು ಕಾಣಿರೆ? ನೀವು ಕಾಣಿರೆ? ಎಂದಂತಿದೆ ಪುನರುಕ್ತಿಯಿಂದ ದೃಢವಾಗಿ ಹೇಳುವ

ಧ್ವನಿಯೊಂದು ಹುದುಗಿದ ವಚನದಲ್ಲಿ ಅಕ್ಕನ ಭಾಷಾ ವಿಶೇಷತೆ, ಸಂವೇದನಾ ಸೂಕ್ಷ್ಮತೆಯನ್ನು ಗ್ರಹಿಸಲು ಸಾಧ್ಯವಾಗಿದೆ. ದೇವನೆಡೆಗೆ ಸಾಗುವ ಕೂಡುವ ಧಾವಂತ ಅಕ್ಕನಲ್ಲಿ ತೀವ್ರವಾದುದು. ತನ್ನ ಮೆಚ್ಚಿನ ಪ್ರಿಯಕರನ ಸಾಂಗತ್ಯಕ್ಕಾಗಿ ಹಂಬಲಿಸುವ ಕಳವಳಿಸುವ ಹೆಣ್ಣೊಬ್ಬಳ ಮನೋಸ್ಥಿತಿಯನ್ನು ಅಕ್ಕ ನಿರೂಪಿಸುವ ರೀತಿ ಅದಕ್ಕೆ ಸೂಕ್ತವೆನಿಸುವ ಪದ, ವಾಕ್ಯ, ಪ್ರತಿಮೆ, ರೂಪಕಗಳ ಸಂಯೋಜನೆ, ಭಾವಕ್ಕೆ ತಕ್ಕಂತೆ ಭಾಷೆಯನ್ನು ಬಳಸಿದ ಪರಿ ಬೆರಗುಗೊಳಿಸುತ್ತದೆ. ಸ್ತ್ರೀ ಸಹಜವಾದ ಸಾಂಗತ್ಯಕ್ಕೆ ತುಡಿಯುವ ತಲ್ಲಣಿಸುವ ತಹತಹಿಕೆಗಳಲ್ಲೆಲ್ಲ ಅಕ್ಕನ ಅಂತರಂಗ, ಬಹಿರಂಗದ ಭಾಷೆಯಲ್ಲಿ ಅಭಿವ್ಯಕ್ತಗೊಂಡ ರೀತಿಯೇ ಅನನ್ಯವಾಗಿದೆ. ಅಗಲಿಕೆಯ ನೋವಿನಿಂದ ಕಳವಳಿಸಿ ತಲೆಕೆಳಗಾದ ಮನೋವ್ಯಥೆಯನ್ನು ಭಾಷೆಯಲ್ಲಿ ಹಿಡಿದಿಟ್ಟ ಅಕ್ಕನ ಈ ವಚನ ವಿರಹದ ಬೇಗೆಯನ್ನು ನಿರೂಪಿಸುತ್ತದೆ.

"ಕಳವಳದ ಮನ ತಲೆಕೆಳಗಾದುದವ್ವಾ;
ಸುಳಿದು ಬೀಸುವ ಗಾಳಿ ಉರಿಯಾದುದವ್ವಾ;
ಬೆಳುದಿಂಗಳು ಬಿಸಿಯಾಯಿತ್ತು ಕೆಳದಿ.
ಹೊಳಲ ಸುಂಕಿಗನಂತೆ ತೊಳಲುತ್ತಿದ್ದೆನವ್ವಾ;
ತಿಳುಹಾ, ಬುದ್ಧಿಯ ಹೇಳಿ ಕರೆತಾರೆಲಗವ್ವಾ;
ಚೆನ್ನಮಲ್ಲಿಕಾರ್ಜುನಂಗೆ ಎರಡರ ಮುನಿಸವ್ವಾ"[೮೧]

ಅಕ್ಕಮಹಾದೇವಿಯ ವಚನ ಭಾಷೆಯಲ್ಲಿ ಹೆಣ್ತತನದ, ತಾಯ್ತನದ ಸಂವೇದನೆಗಳು ಉತ್ಕಟವಾಗಿ ಪ್ರತಿಧ್ವನಿಸುತ್ತದೆ. ಮತ್ತೆ ಮತ್ತೆ ಅನುರಣಿಸಿದಂತೆ ಭಾಸವಾಗುತ್ತದೆ. ಭಾಷಾ ಬಳಕೆಯು ಆಡುನುಡಿ ಲಯದಿಂದ ಗಮನ ಸೆಳೆಯುತ್ತದೆ. ಅವ್ವಾ, ಕೆಳದಿ, ಕರೆತಾರೆಲಗೆವ್ವಾ ಪದ ಪ್ರಯೋಗಗಳು ಗ್ರಾಮೀಣ ಭಾಷಾ ಸೊಗಡಿನ ಆತ್ಮೀಯ ಭಾವವನ್ನೇ ವ್ಯಕ್ತಗೊಳಿಸುತ್ತವೆ. "ಇದೊಂದು ನಿತ್ಯದ ನಡೆ, ಜಾನಪದೀಯ ಮನಸ್ಸೊಂದರ ಸಮೂಹ ಧಾಟಿ. ತಾಯ್ತತನದ ಆರ್ತತೆ, ಮನದ ಕಳವಳದಿಂದಾಗುವ ಅನಾಹುತಗಳು ಅಮಿಪರಿಮಿತವಾದವುಗಳು. ಅಪಾರ ಸೃಷ್ಟಿಯ ಸಮತೋಲನವನ್ನೇ ತಲೆಕೆಳಗಾಗಿಸುವ ಕ್ರಿಯೆ. ತಲೆ ಕೆಳಗಾದ ಪ್ರತಿಮೆ. ಉರಿಯ ಪ್ರತಿಮೆ. ಬಿಸಿಲ ಪ್ರತಿಮೆ ಎಲ್ಲವೂ ಸಹಜವಲ್ಲ. ಈ ರೂಪಕಗಳು ಅಂತಿಮವಾಗಿ Chaos ಅನ್ನು ಪ್ರಳಯವನ್ನು ಸೂಚಿಸುವಂಥವು. ಅದು ಒಳಗಿನ ಮತ್ತು ಹೊರಗಿನ ಪ್ರಳಯ ಎರಡನ್ನು ಮೇಳೈಸಿಕೊಂಡಂಥವು. ಈ ಸಮತೋಲನ ಸಮತೋಲನವಾಗಿಯೇ ಉಳಿಯಬೇಕೆಂದರೆ, ತನ್ನ ಆಳದ ಕಳವಳ ಕಳೆಯಬೇಕೆಂದರೆ 'ಬುದ್ಧಿಯಹೇಳಿ' ಮಲ್ಲಿಕಾರ್ಜುನನನ್ನು ಕರೆತರಲೇಬೇಕು. ಅದಕ್ಕೆ ಈ ವಿಶ್ವಾತ್ಮಕ ಪ್ರತಿಮೆಗಳೆಲ್ಲವೂ ಹೆಣ್ತನದ ರೂಪ ಧರಿಸಿಕೊಳ್ಳುತ್ತವೆ."[೮೨]

ಅಕ್ಕ ಹೆಣ್ಣಾಗಿ ಹುಟ್ಟಿ ಪುರುಷ ಸಾಮರ್ಥ್ಯವನ್ನು ಪಡೆದು ಸಿದ್ಧಿತ್ವ ನೆಲೆಯಲ್ಲಿ ನಿಂತು ಮಾತನಾಡುವಾಗ ಕಾಯದ, ಜೀವದ ನಿರ್ವಚನ ಬೇರೆ ರೀತಿಯಲ್ಲಿ ವ್ಯಕ್ತವಾಗುತ್ತದೆ. ಸಾಧಕನ ಹಂತದ ತುಡಿತ, ಹಂಬಲ ಆ ಸ್ಥಿತಿಯಲ್ಲಿ ಕಾಯ ಜೀವದ ಬಗೆಗಿನ ನಿಲುವು ಅಪ್ಪಟ ಸ್ತ್ರೀ ಸಹಜವಾದ ನೆಲೆಯಲ್ಲಿ ಭಾಷೆಯ ಮೂಲಕ ಅಭಿವ್ಯಕ್ತಗೊಂಡಿದೆ. ಸಕಲ ಪ್ರಪಂಚದ ರೂಹಿನಲ್ಲಿ ಮಾನವ ಜೀವಿ ಆತ್ಮದ ಸಮ್ಮಿಲನದ ಅರಿವನ್ನು ಹೊಂದಿರುವ ಶ್ರೇಷ್ಠತೆಯಿದ್ದರೂ, ನೆಲದ ಮರೆಯ ನಿಧಾನದಂತಿರುವ ಅರಿವು ಪ್ರಜ್ಞೆಗೆ ನಿಲುಕದು. ಸತತ ಸಾಧನೆಯಿಂದ ಕಷ್ಟ ನಿಷ್ಠುರಗಳನ್ನೆದುರಿಸಿ ಆತ್ಮಶಕ್ತಿಯ ಅರಿವನ್ನು ಹೊಂದುವುದೇ ಆತ್ಯಂತಿಕ ಧ್ಯೇಯ. ಆಗಲೇ ಸಾರ್ಥಕತೆ! ಆ ಸಾಧನೆಯ ಹಾದಿ ಸುಲಭ ಸಾಧ್ಯವಿಲ್ಲವೆಂಬ ಅರಿವು ಅಕ್ಕನಿಗೆ ಇರುವುದರಿಂದ ಅಂಗ ಲಿಂಗ, ಶರೀರ ಆತ್ಮಗಳ ಸಕೀಲವನ್ನರಿಯುವುದು, ದೇವನನ್ನು ಬೆರೆಯುವುದು ಕಷ್ಟಸಾಧ್ಯವೆಂಬ ಮನದಿಂಗಿತವನ್ನು ಭಾಷೆಯಲ್ಲಿ ಪ್ರತಿಪಾದಿಸಿದ ವಚನ ಭಕ್ತನ ಸಂದಿಗ್ಧ ಸ್ಥಿತಿ ಮತ್ತು ಸಮರ್ಪಣೆಯ ಭಾವ ತೀವ್ರತೆಯುಳ್ಳದ್ದು.

"ಎನ್ನ ಕಾಯ ಮಣ್ಣು, ಜೀವ ಬಯಲು,
ಆವುದ ಹಿಡಿವೆನಯ್ಯಾ.
ದೇವಾ, ನಿಮ್ಮನಾವ ಪರಿಯಲ್ಲಿ ನೆನೆವೆನಯ್ಯಾ?
ಎನ್ನ ಮಾಯೆಯನು ಮಾಣಿಸಯ್ಯಾ
ಚೆನ್ನಮಲ್ಲಿಕಾಜುನಾ."[೭೩]

ದೇವ ಭಕ್ತನ ನಡುವೆ ಸಂಭಾಷಣೆ ತೀವ್ರತೆಯಿಂದ ಕೂಡಿದೆ. ಅಕ್ಕಮಹಾದೇವಿ ದೇಹ, ಜೀವದ ಬಗೆಗಿನ ದ್ವಂದ್ವದ ಜೀವಂತಿಕೆಯನ್ನು ಭಾಷೆಯಲ್ಲಿ ನಿವೇದಿಸಿದ ರೀತಿ ಪ್ರಜ್ಞಾಪೂರ್ವಕ ಭಾಷೆಯ ಬಳಕೆಯ ಗಾಂಭೀರ್ಯವನ್ನು ಸೂಚಿಸಿದಂತಿದೆ. ಅಕ್ಕನ ಭಾಷೆಯಲ್ಲಿ ಸೃಜನಶೀಲತೆಯಿದೆ. ಆದರೆ ಸಂಕೋಚವಿಲ್ಲ. ಆಂತರ್ಯದ ಭಾವಗಳನ್ನು ಬಹಿರಂಗಗೊಳಿಸುವಲ್ಲಿ ಮುಕ್ತತೆಯನ್ನು ಹೊಂದಿದ್ದಾಳೆ. ನೋವು, ದ್ವಂದ್ವ, ದೇವನ ಸಾಮಿಪ್ಯಕ್ಕಾಗಿ ಅವಶ್ಯವಿರುವ ದೇಹ, ಮನ ಇಂದ್ರಿಯಗಳು ಅವಶ್ಯವೆನಿಸಿದರೂ ಅವುಗಳ ಉರವಣೆ ಅವಳನ್ನು ದಿಕ್ಕುಗಾಣಿಸದಂತೆ ಮಾಡಿದಾಗ ದೇವನ ಮೊರೆಹೋಗುವುದೆ ಅವಳ ಕೊನೆಯ ನಡೆ, ನುಡಿ ತೀರ್ಮಾನವಾಗಿ ಬಿಡುತ್ತದೆ. ತನಗೆ ಮಾಣಿಸಲು ಸಾಧ್ಯವಾಗದ ಮಾಯೆ, ಮಾಯಾಪ್ರಪಂಚ ಅದರ ನಿರ್ಮಾತೃವೇ ನಿರ್ಣಯಿಸಿ ಪರಿಹರಿಸಬೇಕೆಂಬ ಸರ್ವಸಮರ್ಪಣೆಯ ಭಾವ ವಚನಗಳಲ್ಲಿ ಓತಪ್ರೋತವಾಗಿ ನಿರ್ಮಲವಾಗಿ ಪ್ರವಹಿಸಿದಂತಿದೆ. ಸಂಸಾರದಲ್ಲಿದ್ದೂ ಪಾರಮಾರ್ಥಿಕ ಅನುಭಾವ ಪಡೆಯುವ ಅನಿವಾರ್ಯತೆಯನ್ನು ವಿನಮ್ರವಾಗಿ ಭಿನ್ನವಿಸುವಲ್ಲಿ ಅವಳ ಶರಣಾಗತಿಯ ಸೂಕ್ಷ್ಮಸಂವೇದನೆ ಪ್ರಕಟಗೊಳ್ಳುವ ರೀತಿ ಮನೋಜ್ಞವಾಗಿದೆ.

“ಉಳ್ಳುದೊಂದು ತನು, ಉಳ್ಳುದೊಂದು ಮನ.
ನಾನಿನ್ನಾವ ಮನದಲ್ಲಿ ಧ್ಯಾನವ ಮಾಡುವೆನಯ್ಯಾ?
ಸಂಸಾರವನಾವ ಮನದಲ್ಲಿ ತಲ್ಲೀಯವಾಹೆನಯ್ಯಾ?
ಅಕಟಕಟಾ, ಕೆಟ್ಟೆ, ಕೆಟ್ಟೆ! ಸಂಸಾರಕ್ಕಲ್ಲಾ, ಪರಮಾರ್ಥಕ್ಕಲ್ಲಾ!
ಎರಡಕ್ಕೆ ಬಿಟ್ಟ ಕರುವಿನಂತೆ!
ಬಿಲ್ವ ಬೆಳವಲಕಾಯನೊಂದಾಗಿ ಹಿಡಿಯಬಹುದೆ
ಚೆನ್ನಮಲ್ಲಿಕಾರ್ಜುನಾ?”[೭೪]

ಆಧ್ಯಾತ್ಮಿಕ ಪಥಕ್ಕೆ ಶರೀರ ಸಾಧನ. ಮನವೇ ಪ್ರಧಾನ. ಹಾಗೆಯೇ ಸಂಸಾರಕ್ಕೂ. ಪಾರಮಾರ್ಥ, ಸಂಸಾರ ವಿಭಿನ್ನ ದೃಷ್ಟಿವುಳ್ಳವುಗಳು. ಒಂದು ಕತ್ತಲೆ, ಮತ್ತೊಂದು ಬೆಳಕು. ಅವೆರಡೂ ಅನಿವಾರ್ಯ. ದ್ವಂದ್ವದ ಸ್ಥಿತಿಗೆ ಸಿಲುಕಿದ ಅಕ್ಕನ ಮನಸ್ಥಿತಿ ಪಲ್ಲಟಗೊಳ್ಳಲು ಬಯಸುತ್ತದೆ. ಆದರೂ ಸಾಧಕನಿಗೆ ಸಹಜವಾದುದಲ್ಲ! ಆ ಕಳವಳ ಪಶ್ಚಾತ್ತಾಪದ ಧ್ವನಿ ಭಾಷೆಯಲ್ಲಿ ಪರಿಣಾಮಕಾರಿಯಾಗಿ ವ್ಯಕ್ತಗೊಂಡಿದೆ. ಅಕ್ಕನ ಭಾಷಾಜ್ಞಾನ ಸೂಕ್ತ ಸಂದರ್ಭದಲ್ಲಿನ ಔಚಿತ್ಯಪೂರ್ಣ ಪದಪ್ರಯೋಗ, ಭಾವ-ಭಾಷೆಯ ಸಮರಸದ ನಡೆ, ಅತ್ಯಂತ ಪ್ರಭಾವ ಬೀರುವಂತಹದು. ಭಾಷೆಯಲ್ಲಿ ನಿರಂತರ ಬದಲಾವಣೆ ತರಲು ಅಕ್ಕ ಬಯಸುತ್ತಾಳೆ. ಸಿದ್ಧಮಾದರಿಯ ಶಬ್ಧಗಳು, ವಾಕ್ಯಗಳು, ಉಪಮೆಗಳ ಹೊರತಾಗಿ ಸೃಜನಶೀಲ ಮನಸ್ಸೊಂದು ಭಾಷೆಯ ಬದಲಾವಣೆಗೆ ತುಡಿಯುತ್ತ ನಡೆ, ನುಡಿಗಳ ನಡುವಿನ ಅನೋನ್ಯ ಬೆಸುಗೆಗೆ ಬೇಕಾದ ಭಾಷೆಯನ್ನು ಬಳಸಿ ಭಾವಗಮ್ಯವಾಗಿಸುವ ಕಲೆ ಅಕ್ಕನಿಗೆ ಸಿದ್ಧಿಸಿದೆ.

ಅಭಿವ್ಯಕ್ತಿಗೆ ಧ್ವನಿಶಕ್ತಿ ನೀಡುವ ಅಕ್ಕಮಹಾದೇವಿಯು ಅನುಭವಿಸಿದ, ಬದುಕಿದ ಸತ್ಯವನ್ನೇ ಭಾಷೆಯಲ್ಲಿ ಅನಾವರಣಗೊಳಿಸುವುದರಿಂದ ವೇದನೆಯಿಂದ ನಿವೇದನೆಯೆಡೆಗಿನ ಗತಿಶೀಲತೆ ಭಾಷೆಗೆ ಪ್ರಾಪ್ತವಾಗುತ್ತದೆ. “ಅಕಟಕಟಾ ಕೆಟ್ಟೆ, ಕೆಟ್ಟೆ” ನೋವಿನಿಂದ ಗ್ರಹಿತವಾಗುವ ದ್ವಿರುಕ್ತಿ ವಚನದ ಭಾಷೆಯ ಸಂವೇದನಾ ಶಕ್ತಿಗೆ ಮತ್ತಷ್ಟೂ ಪುಷ್ಟಿ ನೀಡಿದೆ. ಪಾರಮಾರ್ಥ, ಸಂಸಾರಗಳಲ್ಲಿ ಸಿದ್ಧಿ ಪಡೆದು ಶಾಂತಿ ಪ್ರಾಪ್ತವಾಗದ ದೀನತೆಯನ್ನು ಎರಡಕ್ಕೆ ಬಿಟ್ಟ, ಕರುವಿನ ಕರಣಾಜನಕ, ಅಸಹಾಯಕ ಉಪಮೆಯನ್ನು ಕೊಡುವುದರಲ್ಲಿ ಭಾಷೆಯ ಅಗಾಧತೆ ಎದ್ದು ತೋರುತ್ತದೆ. ಬಿಲ್ವ ಬೆಳವಲ ರೂಪಕವೂ ಅಕ್ಕನ ಭಾವಾಭಿವ್ಯಕ್ತಿಗೆ ಪೂರಕವಾಗಿ ಕಾವ್ಯಶಕ್ತಿಯನ್ನು ಇಮ್ಮಡಿಗೊಳಿಸಿವೆ. ಇಲ್ಲೆಲ್ಲ ಅಕ್ಕನ ಅಸಹಾಯಕ ಮನಸ್ಥಿತಿಯ ಸಂವೇದನೆಗಳು ಸ್ತ್ರೀಸಹಜವಾದ ನೆಲೆಯಲ್ಲೇ ಅಭಿವ್ಯಕ್ತಗೊಂಡು ಭಾವತೀವ್ರತೆಯ ಅನುಭವವನ್ನು ಭಾಷೆಯಲ್ಲಿ ಜೀವಂತಗೊಳಿಸುತ್ತವೆ. ಹೆಣ್ಣಿನ ಶಕ್ತಿ ಸಾಮರ್ಥ್ಯವನ್ನು ತೋರಿಸಿಕೊಡುವ ಧ್ವನಿಯೊಂದು ಅಕ್ಕನ ವಚನಗಳಲ್ಲಿ ತುಂಬಿಕೊಂಡಿದೆ. ಸಿದ್ಧಿತ್ವ ನೆಲೆಯಲ್ಲಿ ಮಾತನಾಡುವ ವಚನ ಭಾಷೆಯಲ್ಲಿ ಅಧಿಕಾರವಾಣಿಯೂ ಇರುವುದು ಸ್ಪಷ್ಟವಾಗಿ ಕಾಣಿಸುತ್ತದೆ.

"ಅಲ್ಲದವರೊಡನಾಡಿ ಎಲ್ಲಾ ಸಂಗವ ತೊರೆದೆ ನಾನು.
ನಾರಿ ಸಂಗವತೊರೆದೆ, ನೀರ ಹೊಳೆಯ ತೊರೆದೆ ನಾನು.
ಎನ್ನ ಮನದೊಡೆಯ ಚೆನ್ನಮಲ್ಲಿಕಾರ್ಜುನನ ಕೂಡುವ ಭರದಿಂದ
ಎಲ್ಲಾ ಸಂಗವ ತೊರೆದೆ ನಾನು."[೭೫]

ಲಿಂಗಾಂಗ ಸಮರಸದ ಹಂಬಲದಿಂದ ಧಾಪಂತದಿಂದ ಓಡುವ ಅಕ್ಕಮಹಾದೇವಿ ಆ ಧಾವಂತದ ಭಾವವನ್ನು ಭಾಷೆಯಲ್ಲಿ ಗತಿಶೀಲಗೊಳಿಸಿದ್ದಾಳೆ. 'ನಾರಿ ಸಂಗವ ತೊರೆದೆ' ಎನ್ನುವ ಅಕ್ಕಮಹಾದೇವಿ ಸ್ತ್ರೀಯಾಗಿ, ಸ್ತ್ರೀತನದ ಸಂಗ ತೊರೆದ ಪರಿ ಬೆರಗು ಹುಟ್ಟಿಸುತ್ತದೆ. ಹರನ ಕೂಡುವ ಅವಸರದಲ್ಲಿ ತನ್ನ ಹೆಣ್ತನವನ್ನು ಕಳೆದುಕೊಂಡು ಧೀರತೆಯಿಂದ ಮುನ್ನಡೆದು ಮನದೊಡೆಯನ ಇಂಬುಗೊಳ್ಳಲು ದೇಹ, ಮನಸ್ಸುಗಳ, ಲೌಕಿಕ, ಅಲೌಕಿಕಗಳ ದ್ವಂದ್ವವನ್ನು ಕಳೆದುಕೊಂಡು ಪರಿಶುದ್ಧ ಪುರುಷತ್ವದಿಂದ ಕಂಡುಬಂದರೂ ಹಾಗೆ ಹೇಳುವಲ್ಲಿಯೂ ಸ್ತ್ರೀ ಸಂವೇದನೆಯೇ ಪ್ರಧಾನವಾಗಿ ತೋರುತ್ತದೆ.

ಅಕ್ಕಮಹಾದೇವಿ ಮಹಿಳೆಯಾಗಿ, ಹೆಣ್ಣುತನದ ಎಲ್ಲ ಆಯಾಮಗಳನ್ನು ಮೀರಿ ನಿಲ್ಲಲು ಕೆಲವೊಮ್ಮೆ ಪುರುಷರೂಪ ಧರಿಸಿ ಸಮಾಜದ, ಆಧ್ಯಾತ್ಮಿಕ ಸವಾಲುಗಳನ್ನು ಮೆಟ್ಟಿ ನಿಲ್ಲುವ ಸಂದರ್ಭದಲ್ಲಿನ ಅವಳ ಭಾವ, ಭಾಷೆ ವೀರಯೋಧನ ರೀತಿಯಲ್ಲಿ ಶಕ್ತಿಯುತವಾಗಿ, ಓಜಸ್ಸಿನಿಂದ ಕಂಗೊಳಿಸುವುದನ್ನು ನೋಡಬಹುದಾಗಿದೆ.

"ಆಳುತನದ ಮಾತನೇರಿಸಿ ನುಡಿದಡೆ
ಆಗಳೆ ಕಟ್ಟಿದೆನು ಗಂಡುಗಚ್ಚೆಯ.
ತಿಗುರನೇರಿಸಿ ತಿಲಕವನಿಟ್ಟು
ಕೈದುವ ಕೊಂಡು ಕಳನೇರಿದ ಬಳಿಕ,
ಕಟ್ಟಿದ ನಿರಿ ಸಡಿಲಿದಡೆ ಇನ್ನು ನಿಮ್ಮಾಣೆ,
ಕಾಣಾ ಚೆನ್ನಮಲ್ಲಿಕಾರ್ಜುನಾ."[೭೬]

ಹೆಣ್ಣು ಹೆಣ್ತನವನ್ನು ಕೀಳೀಕರಿಸುವ ಸಂಪ್ರದಾಯ, ಸಮಾಜದ ರೂಢಿಗಳಿಗೆ ಸವಾಲಾದ ಅಕ್ಕ ಹೆಣ್ಣಿನ ಸಾಮರ್ಥ್ಯವನ್ನು ಹೊರಗೆಡುಹುವ ಗಟ್ಟಿಯಾದ ಧ್ವನಿ ವಚನದಲ್ಲಿ ಮಾರ್ಧನಿಸಿದೆ. ಹೆಣ್ಣಾಗಿ ಅಭಿಮಾನ ಹೊಂದಿದ ಅಕ್ಕಮಹಾದೇವಿ, ಹೆಣ್ತನದಲ್ಲಿಯೂ ಪುರುಷ ಸಾಮರ್ಥ್ಯ, ವೀರಯೋಧನ ಸಾಮರ್ಥ್ಯ, ಶಕ್ತಿಯನ್ನು ಕಂಡು ಅನುಭವಿಸಿ ಆಚರಿಸಲು ಮುಂದಾಗಿ ಮುನ್ನಡೆದು, ಸ್ವತಃ ತನ್ನೊಳಗಿನ, ಹೊರಗಿನ ಅಡೆತಡೆಗಳನ್ನು ಮೀರಲು, ಹೋರಾಟ ನಡೆಸಿದವಳು. ಕಳನೇರಿದ ಬಳಿಕ ಕಟ್ಟಿದ ನಿರಿ ಸಡಿಲಿಸಿದಡೆ, ಮಾತು ಸ್ತ್ರೀಯೋರ್ವಳು ಯುದ್ಧ ಪೋಷಾಕಿನಲ್ಲಿ ಕಾಣಿಸಿಕೊಳ್ಳುವ

ಅದರೊಳಗಿನ ವೀರತ್ವವನ್ನು ಘೋಷಿಸುವ ಸ್ತ್ರೀ ಸಂವೇದನೆ ಅತ್ಯದ್ಭುತವಾಗಿ ಭಾಷೆಯಲ್ಲಿ ಗಂಭೀರತೆಯಿಂದ, ಜಾಗ್ರತೆ, ಎಚ್ಚರಿಕೆ ನೀಡುವ ಪರಿಯಲ್ಲಿಯೆ ವೀರಾವೇಷದಿಂದ ವ್ಯಕ್ತಗೊಂಡಿದೆ.

ದೇವನನ್ನು ವರಿಸುವಲ್ಲಿ ಅಂತರಂಗ ಬಹಿರಂಗಗಳಲ್ಲಿ ಎದುರಾದ ಸಂಘರ್ಷಗಳನ್ನು ಮೆಟ್ಟನಿಂತು ಗೆಲ್ಲಲೇ ಬೇಕೆಂಬ ಪ್ರತಿಜ್ಞೆಗೈಯ್ದು ಅದಕ್ಕೆ ತಕ್ಕ ಶಾರೀರಿಕ, ಮಾನಸಿಕ, ಭಾವನಾತ್ಮಕ ಸಿದ್ಧತೆಯನ್ನು ಮಾಡಿಕೊಂಡು, ಗಂಡುಗಚ್ಚೆ ಹಾಕಿ ಸ್ರೀತನವನ್ನು ಒರಗೆ ಹಚ್ಚುವ ಅಕ್ಕ ಅಲ್ಲಿ ಪುರುಷತ್ವ, ನಾಯಕತ್ವ ಗುಣಗಳಾದ ದೃಢನಿಷ್ಠೆ, ಯೋಧನ ಪ್ರಾಬಲ್ಯ ಶೌರ್ಯ, ಅಂಜದೇ ಮುನ್ನುಗ್ಗುವ, ಹಿಮ್ಮೆಟ್ಟದಿರುವ ಅಂತಿಮ ಗೆಲುವಿನ ಒಟ್ಟು ಸಾಮರ್ಥ್ಯವನ್ನು ಅಕ್ಕಮಹಾದೇವಿ ಗಟ್ಟಿಗೊಳಿಸಿಕೊಂಡು ಯುದ್ಧಕ್ಕೆ ಸನ್ನದ್ಧಳಾಗಿ ತನ್ನ ಸಿದ್ಧತೆಯನ್ನು ಸಮಾಜಕ್ಕೆ, ದೈವಕ್ಕೆ ಸಾರುವ ಧ್ವನಿ, ವೀರರಸವನ್ನು ಅಭಿವ್ಯಕ್ತಗೊಳಿಸುತ್ತವೆ. ಮಹಿಳೆಯೊಳಗೊಬ್ಬ ಗಂಡಸು ನಿರ್ಮಾಣಗೊಳ್ಳುವ, ಪುರುಷ ಯೋಧನಾಗುವ ಪ್ರಕ್ರಿಯೆ ವಚನದಲ್ಲಿ ಮನೋಜ್ಞವಾಗಿ ಚಿತ್ರಿತಗೊಂಡಿದೆ.

"ಮುಂಗೈಯಲ್ಲಿ ವೀರಗಂಕಣವಿಕ್ಕಿ,
ಮುಂಗಾಲಲ್ಲಿ ತೊಡರುಬಾವುಲಿಯ ಕಟ್ಟಿದೆ.
ಗಂಡುಡಿಗೆಯನುಟ್ಟೆನೆಂಬ ಮಾತಿನ ಬಿರಿದ ನುಂಗಿದೆನು.
ಚೆನ್ನಮಲ್ಲಿಕಾರ್ಜುನಾ,
ನಿಮ್ಮಾಣೆಗೆ ಊಣೆಯವ ತಂದೆನಾದಡೆ,
ನಿಮ್ಮ ತೊತ್ತಿನ ಮಗಳಲ್ಲಯ್ಯಾ."[೭೭]

'ತೋರಲು ಹೆಣ್ಣು, ಭಾವಿಸಲು ಗಂಡುರೂಪು' ಅಕ್ಕಮಹಾದೇವಿಯ ಸ್ತ್ರೀತ್ವದ ನೆಲೆಯಲ್ಲೆ ಪುರುಷತ್ವ ಹೊಂದಿದ ಪರಿಯದು. ಯುದ್ಧ ಪುರುಷತ್ವದ ಅವನ ಸಾಮರ್ಥ್ಯವನ್ನು ತೋರ್ಪಡಿಸುವ ಅವಕಾಶ. ಅಕ್ಕನಲ್ಲಿಯೂ ಒಳಹೊರಗಿನ ಯುದ್ಧವನ್ನು ಗೆದ್ದು, ಶಿವನಲ್ಲಿ ಒಂದಾಗುವ, ಗೆಲುವಿನ ಸಂಭ್ರಮವನ್ನು ಆಸ್ವಾದಿಸುವ ಆಕಾಂಕ್ಷೆ, ಮಹಾತ್ವಾಕಾಂಕ್ಷೆ. ಮಹಾಯುದ್ಧಕ್ಕೆ ಪೂರ್ವಸಿದ್ಧತೆ ಮಾಡಿಕೊಂಡ ರೀತಿ, ಅದರೊಳಗಿನ ಪ್ರತಿಜ್ಞೆ ಭಾವಗಳು, ನಿಮ್ಮ ತೊತ್ತಿನ ಮಗಳು ಎಂಬಲ್ಲಿ ಹೆಣ್ತನದ ಪರಿಧಿಯಲ್ಲೇ ಅದನ್ನು ಮೀರಿದ ಪುರುಷ ನಿಲುವು ಯೋಧನ ಪರಾಕ್ರಮದ ಭಾಷೆಯಲ್ಲಿಯೇ ಅಭಿವ್ಯಕ್ತಗೊಳಿಸಿದ್ದಾಳೆ. ಭಕ್ತ ಶ್ರದ್ಧೆಯಿಂದ, ನಿಷ್ಠೆಯನ್ನು ಗಟ್ಟಿಗೊಳಿಸುತ್ತ ಮಾಹೇಶ್ವರನಾಗಿ ಪರಿವರ್ತಿತಗೊಳ್ಳುವ ಮನೋಧೋರಣೆ ಅಕ್ಕನ ಭಾವ ಭಾಷೆಗಳಲ್ಲಿ ಆ ನಿಷ್ಠೆ ಗಂಭೀರ ಧ್ವನಿಯಲ್ಲಿಯೇ ವ್ಯಕ್ತವಾಗಿದೆ. "ಸ್ತ್ರೀತ್ವ ಎನ್ನುವುದು ಗುರಿಮುಟ್ಟಲು ಒಂದು ಸಾಮರ್ಥ್ಯ ಮತ್ತು ಸದ್ಗುಣವಾಗಿ ನೋಡಲಾಗಿದೆ. ಗಂಡಾಗಲಿ, ಹೆಣ್ಣಾಗಲಿ ಈ ಸ್ತ್ರೀತ್ವವನ್ನು ಪಡೆಯುವ ಸಾಧ್ಯತೆ ಇದೆ. ಅದು ಎಲ್ಲರೂ ಆಚರಣೆಗೆ ತರಬಹುದಾದ ಗುಣವಾಗಿದೆ. ಹೀಗೆ ಸ್ತ್ರೀತ್ವ ಅಕ್ಕನಲ್ಲಿ

ಒಂದು ಸಾಮರ್ಥ್ಯವೂ ಹೌದು, ಶಕ್ತಿಯೂ ಹೌದು. ಹೀಗಾಗಿ ಅಕ್ಕನಲ್ಲಿ ನಾವು ಕಾಣಬಹುದಾದಂತಹ ದೇಹದ ಮೂಲಕ ನಿರ್ಮಿತವಾಗುವಂತಹ ಸ್ತ್ರೀತ್ವ ಸಾಧನವೂ ಹೌದು, ಸಾಧನೆಯ ಒಂದು ವಿಧಾನವೂ ಹೌದು. ಮತ್ತು ಗುರಿಯೂ ಆಗಿದೆ."[೭೮]

ಭಕ್ತಿಯ ಮಧುರಭಾಷೆ, ಸವಾಲುಗಳನ್ನು ಸ್ವೀಕರಿಸಿ ಎದುರಿಸುವಾಗ ಬಂಡಾಯದ ಭಾಷೆಯಾಗಿ ಬದಲಾಗುತ್ತದೆ. ಸ್ತ್ರೀ ಸಂವೇದನೆಗಳು ಪುರುಷತ್ವದ ನೆಲೆಯಲ್ಲಿ ಅಭಿವ್ಯಕ್ತಗೊಂಡಿರುವುದು ಆ ಹಿನ್ನೆಲೆಯಲ್ಲಿಯೇ.

ಭಾವೋತ್ಕರ್ಷತೆ

ಮಹಾದೇವಿಯಕ್ಕ ಆಧ್ಯಾತ್ಮಿಕ ಪಥಿಕಳಾಗಿ ಸಾಮಾಜಿಕ ಸಂಕಷ್ಟಗಳನ್ನು ಎದುರಿಸಿ, ಅನುಭವಿಸಿ, ತಾನು ಬದುಕಿನ ಸತ್ಯವನ್ನೆ ಸತ್ವಯುತವಾಗಿ ಭಾಷೆಯಲ್ಲಿ ಜೀವಂತಗೊಳಿಸಿರುವಳು. ಅನುಭಾವಿಕ ಔನತ್ಯಕ್ಕೆ ಸದಾ ಹಂಬಲಿಸುತ್ತಿದ್ದರೂ ಲೋಕ ವಿಮುಖಳಲ್ಲ. ವಾಸ್ತವ ಪ್ರಪಂಚವನ್ನು ಗ್ರಹಿಸಿ, ವ್ಯವಹಾರಿಕ, ಪ್ರಾಕೃತಿಕ ಸೂಕ್ಷ್ಮತೆಗಳು, ಭೌತಿಕ ಪ್ರಪಂಚದ ಸೃಷ್ಟಿ, ಚಲನಶೀಲತೆ, ಮನುಷ್ಯನ ನಡುವಳಿಕೆಗಳು, ಶಿವನ ಲೀಲಾವಿನೋದ, ಪ್ರಕೃತಿಯ ಅಗಾಧತೆ, ಅನಂತತೆ, ತನ್ನತನವನ್ನು ಅರಿಯುವ ಬಯಕೆ, ಅದಕ್ಕಾಗಿ ನಡೆಸಿದ ಹೋರಾಟ, ಸಾಮಾಜಿಕ ಬಹುಮುಖ ದೃಷ್ಟಿಕೋನ, ಮನುಷ್ಯ ಜೀವನದ ನಶ್ವರತೆ, ಸಾರ್ಥಕತೆ, ಅದನ್ನು ಹೊಂದುವ ರೀತಿ ಎಲ್ಲವೂ ಅಕ್ಕನ ವಚನಗಳ ವಿಷಯವಸ್ತುಗಳು. ಪ್ರಕಾಂಡ ಪ್ರತಿಭೆಯ ಮೂಸೆಯಲ್ಲಿ ಮೂಡಿದ ವಚನಗಳು ಕಾವ್ಯದ ಹೊಳಪನ್ನು ಹೊಂದಿದ್ದು ವಚನಗಳಿಗೆ ಶಬ್ದದೊಳಗೆ ನಿಶ್ಯಬ್ಧವನ್ನು, ಮಾತಿನಲ್ಲಿ ಅರ್ಥದ ಬೆಳಕನ್ನು ನೀಡುವ ಸಂವೇದನಾಶೀಲತೆ ಅಕ್ಕನದು. ಕಿರಿದರಲ್ಲಿ ಹಿರಿದರ್ಥವನ್ನು ಹಿಡಿದಿಡುವ ಮೂರ್ತದಲ್ಲಿ ಅಮೂರ್ತತೆಯನ್ನು, ಅನಂತತೆಯನ್ನು ಸೃಷ್ಟಿಸುವ ಕಲೆ, ಕಾವ್ಯಶಕ್ತಿ ಅಕ್ಕಮಹಾದೇವಿಯ ವಚನಗಳಲ್ಲಿದೆ.

ಅಕ್ಕನದು ದೇವನನ್ನು ಕೂಡುವ ತವಕದಲ್ಲಿ ಹಂಬಲದಿಂದ ಹಾರೈಸಿದ ಭಾವುಕ ಭಕ್ತಿಗೆ ಭಾಷೆ ಮೃದುವಾಗಿ ಉದಾತ್ತವಾಗಿ ಬಳಿಸಾರಿದೆ. ವಿಚಾರ ನಿರ್ಭರತೆ ಮಾಧುರ್ಯಭರಿತ ಭಾವಲಹರಿಗಳು ಭಾವಗೀತಾತ್ಮಕ ಗೇಯತೆ, ಸಂಕ್ಷಿಪ್ತತೆ, ನಾವಿನ್ಯತೆ ಒಡೆವರೆದು ಬೆರೆತು ನವನವೀನ ಭಾವದೀಪ್ತಿಯನ್ನು ಹೊರಸೂಸುವ ವಚನಗಳು ಶ್ರೇಷ್ಠ ಕಾವ್ಯದ ಪರಿಕಲ್ಪನೆಗಳನ್ನೊಳಗೊಂಡಿದೆ. ಮನ–ಬುದ್ಧಿ ಭಾವಗಳಿಗತೀತವಾದ ಸತ್‌ಚಿತ್ ಆನಂದ ಸ್ವರೂಪಿಯಾದ ಪರಶಿವನ ಒಲುಮೆಗಾಗಿ ಅಕ್ಕ ಹಾರೈಸುವ ಸರ್ವಸಮರ್ಪಣಾ ಭಾವ, ಪರಿಶುದ್ಧ ಪ್ರೇಮ, ಮಧುರ ಭಕ್ತಿ, ನಿಷ್ಕಾಮ ಪ್ರೀತಿಯೊಂದೇ ಶಿವನೊಲುಮೆಯ ಸಾಧನವೆಂದು ಅರಿತು, ಆಚರಿಸಿ, ಭಕ್ತಿಯಿಂದ ಪರಿಭಾವಿಸಿ, ಪರಿತಪಿಸಿ ಶಿವನ ಸನ್ನಿಧಿಗೆ ಸೇರಲು ಭಾವುಕಳಾಗಿ ಭಿನ್ನವಿಸುವ ರೀತಿ ಉಪಮಾತೀತ! ವೇದನೆ ನಿವೇದನೆಯಾಗಿ ಮೂಡಿಬಂದಿರುವ ವಚನಗಳಲೆಲ್ಲ ಭಾವೋತ್ಕರ್ಷತೆ ಪ್ರಧಾನವಾಗಿ ವ್ಯಕ್ತವಾಗಿದೆ.

"ಅಯ್ಯಾ, ನೀನು ಕೇಳಿದಡೆ ಕೇಳು, ಕೇಳದಡೆ ಮಾಣು;
ಆನು ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ.
ಅಯ್ಯಾ, ನೀನು ನೋಡಿದಡೆ ನೋಡು, ನೋಡದಡೆ ಮಾಣು;
ಆನು ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ.
ಅಯ್ಯಾ, ನೀನು ಮೆಚ್ಚಿದಡೆ ಮಚ್ಚು, ಮಚ್ಚದಡೆ ಮಾಣು;
ಆನು ನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯಾ.
ಅಯ್ಯಾ, ನೀನು ಒಲಿದಡೆ ಒಲಿ, ಒಲಿಯದಡೆ ಮಾಣು;
ಆನು ನಿಮ್ಮ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ.
ಚೆನ್ನಮಲ್ಲಿಕಾರ್ಜುನಯ್ಯಾ,
ಆನು ನಿಮ್ಮನರ್ಚಿಸಿ ಪೂಜಿಸಿ ಹರುಷದೊಳೋಲಾಡುವೆನಯ್ಯಾ."[೭೯]

ದೇವ ಭಕ್ತನ ನಡುವಿನ ಸಂಭಾಷಣೆ, ಪ್ರೇಮಿಯೊಂದಿಗಿನ ಸಲ್ಲಾಪ ಆತ್ಮೀಯ ಧಾಟಿಯಿರುವ, ಅಕ್ಕನ ವಚನಗಳಲ್ಲಿ ದೀನತೆಯ ಧ್ವನಿಗಿಂತ ಧೀರತೆಯ ಧ್ವನಿ ಪ್ರಧಾನವಾದ ಅಭಿವ್ಯಕ್ತಿಯಿದು. ದೇವ ಒಲಿದರೂ, ಒಲಿಯದಿದ್ದರೂ ತನ್ನ ನಡೆಯನ್ನು ಬದಲಿಸಿಕೊಳ್ಳದ ಮನೋಬಲದ ಮಹಾದೇವಿಯಕ್ಕ ಮಾಹೇಶ್ವರನ ನಿಷ್ಠೆಯನ್ನು ತನ್ನಲ್ಲಿ ಗಟ್ಟಿಗೊಳಿಸಿಕೊಳ್ಳುವ ಪರಿಯಿದು.

"ನೋಡೆನೆಂಬವರ ನೋಡಿಸುವೆ,
ನುಡಿಯೆನಂಬವರ ನುಡಿಯಿಸುವೆ,
ಒಲ್ಲೆನೆಂಬವರನೊಲಿಸುವೆ,
ಒಲಿದೆನೆಂಬವರ ತೊಲಗಿಸುವೆ ನೋಡಯ್ಯಾ.
ಚೆನ್ನಮಲ್ಲಿಕಾರ್ಜುನಯ್ಯಾ,
ನೀನಲ್ಲದನ್ಯರ ಮುಖವ ನೋಡೆನೆಂದಡೆ
ನೋಡುವಂತೆ ಮಾಡಿದೆಯಲ್ಲಾ ಲಿಂಗವೆ?"[೮೦]

ನಿವೇದನೆ, ಅನನ್ಯ ಶರಣಾಗತಿಯ ಭಾವದಲ್ಲಿ ನಿರ್ಭಿಡೆಯ ನಿಲುವನ್ನು ಅಭಿವ್ಯಕ್ತಗೊಳಿಸುವುದು ಅಕ್ಕಮಹಾದೇವಿಗೆ ಮಾತ್ರ ಸಾಧ್ಯವಾಗುವಂತಹದು. ದೇವನೊಲಿಸುವ ಪಥದಲ್ಲಿ ಸಾಗಿದ ಅಕ್ಕಮಹಾದೇವಿ ಆತನೊಲುಮೆ ಸಾಧ್ಯವಾಗದಿರುವಾಗ ಹಿಡಿದ ಛಲ ಬಿಡಲಾರಳು. 'ಕೇಳಿದರೆ ಕೇಳು, ಕೇಳದಿದ್ದರೆ ಮಾಣು' ಎನ್ನುವ ಸ್ವತಂತ್ರ ಮನೋಭಾವ ಸ್ವಾಭಿಮಾನದ ಭಾವ ಭಾಷೆಯಲ್ಲಿ ಅನ್ಯೋನ್ಯತೆಯಿಂದ ಅಭಿವ್ಯಕ್ತಗೊಂಡು ಭಾವತೀವ್ರತೆಯ ಅನುಭವವುಂಟಾಗುತ್ತದೆ. ಅಕ್ಕಮಹಾದೇವಿಯ ಭಾವತೀವ್ರತೆಯ ವಚನಗಳಲ್ಲಿ ಆವೇಶವಿದ್ದರೂ, ಪ್ರಜ್ಞಾಪೂರ್ವಕ, ವೈಚಾರಿಕ ನೆಲೆಯಲ್ಲೆ ಭಾಷೆಯ

ನಡೆಯಿದೆ. ನಡೆ ನುಡಿಗಳ ನಡುವೆ ಅನ್ಯೋನ್ಯ ಬೆಸುಗೆಯಿದೆ. ಅಲ್ಲೆಲ್ಲ ಗಾಳಿಗಂಧವನ್ನಪ್ಪಿದಂತೆ, ಪುಷ್ಪ ಪರಿಮಳವನೊಳಗೊಂಡಂತೆ ಅಭೇದವೆನಿಸುವಷ್ಟು ಸೂಕ್ಷ್ಮಸಂವೇದನೆ ಯಿಂದ ವ್ಯಕ್ತಗೊಂಡಿರುವುದು ಅಕ್ಕನ ಭಾಷಾ ಬಳಕೆಯಲ್ಲಿನ ಔಚಿತ್ಯವನ್ನು ಪ್ರಕಟಿಸುತ್ತವೆ.

"ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ.
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗೆ ನಾನೊಲಿದೆ ಎಲೆ ಅವ್ವಗಳಿರಾ!
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು.
ಸೀಮೆಯಿಲ್ಲದ ನಿಸ್ಸೀಮಂಗೊಲಿದೆ ನಾನು.
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆ
ಮಿಗೆ ಮಿಗೆ ಒಲಿದೆ ಎಲೆ ಅವ್ವಗಳಿರಾ."[೮೧]

ಸಾವಿಲ್ಲದ ಸಂಗಾತಿಯನ್ನರಸಿ, ವರಿಸಿದ ಮಹಾದೇವಿಯಕ್ಕ ಆತನ ವರ್ಣನೆಗೆ ಬಳಸಿದ ಭಾಷೆಯೂ ಸಾವನ್ನು ಮೀರಿದ ಅಮರತ್ವದ್ದು. 'ಗಂಡ' ಪದದ ಪರಿಭಾಷೆಯನ್ನೇ ಜೀವಂತಗೊಳಿಸಿ ಸಾವಕೆಡುವ ಗಂಡನ ಹೊರತಾಗಿ ಭವಭಯವಿಲ್ಲದ ನಿರ್ಭಯ ಚೆಲುವನನ್ನು ಹೊಗಳಲು ಬಳಸಿದ ಭಾಷೆಯೂ ನಿರ್ಭಯ ಚೆಲುವಿನ ಚೈತನ್ಯದ ಭಾಷೆಯದು. ಲೋಕದ ಗಂಡನ ನಿರ್ನಾಮ, ಅಲೌಕಿಕ ಪತಿಯ ನಿರ್ಮಾಣದ ಚೆಲುವು, ನಿಲುವು ಭಾಷೆಯಲ್ಲಿ ಏಕಾತ್ಮಕಗೊಂಡು, ಕ್ರಾಂತಿಕಾರಕ ವಿಚಾರವನ್ನು ಸ್ಫೋಟಿಸುವಲ್ಲಿ ಅಕ್ಕಮಹಾದೇವಿಯ ಭಾವತೀವ್ರತೆಯ ಅಗಾಧತೆಯ ಅರಿವುಂಟಾಗುತ್ತದೆ. ಮಹಾದೇವಿ ಮೆಚ್ಚಿದ ಮನದೊಡೆಯ ಚೆನ್ನಮಲ್ಲಿಕಾರ್ಜುನನ ಸ್ವರೂಪ ನಿರೂಪಿಸುವ, ತಾಯಿ ಮತ್ತು ಗೆಳತಿಗೆ ಅವನ ನಿಲುವನ್ನು ಚೆಲುವನ್ನು ಬಣ್ಣಿಸುವಲ್ಲಿ ಭಾವಕ್ಕೆ ತಕ್ಕಂತೆ ಭಾಷೆ ಮೈಚಳಿ ಕೊಡವಿಕೊಂಡು ನಿರ್ಭಯವಾಗಿ ಹರಿಯುತ್ತ ಸೌಂದರ್ಯಾನುಭವ ಮತ್ತು ಭಾವತೀವ್ರತೆಯನ್ನು ಹೆಚ್ಚಿಸುತ್ತ ಸಾಗಿದ ವಚನಭಾಷೆಯಲ್ಲಿ, ಸ್ವತಂತ್ರ ಅಭಿವ್ಯಕ್ತಿಯಲ್ಲಿ ಅಕ್ಕನ ಆಂತರ್ಯವೇ ಅನಾವರಣಗೊಂಡಂತಿದೆ.

ಅಕ್ಕಮಹಾದೇವಿಯ ಸೃಜನಶೀಲ ಮನಸ್ಸು ಹುಡುಕಾಟದಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳುತ್ತ ಪರಮಾತ್ಮನ ಬಳಿಸಾರಲು ಭೂತವನ್ನು ಬದಿಗೊತ್ತಿ ವರ್ತಮಾನದತ್ತ ತುಡಿಯುವ ಬೆನ್ನಲ್ಲೆ ಭವಬಂಧನದ ಸಂಸಾರ ಬೆನ್ನಟ್ಟುತ್ತದೆ. ಕೊಡವಿಕೊಂಡು ಹೊರಟು ಬಿಡಬೇಕೆನ್ನುವಷ್ಟರಲ್ಲಿ ಬೆಂಬಿಡದೆ ಹಿಂಬಾಲಿಸುತ್ತ ಕಾಡಿಸಿ ಪೀಡಿಸಿ ಕಳವಳಗೊಳ್ಳುವಂತೆ ಮಾಡುತ್ತದೆ. ಸಂಸಾರದ ಘಾಸಿತನಕ್ಕೆ ರೋಸಿ ಹೋದ ಅಕ್ಕ ದೇವನಲ್ಲಿ ಮೊರೆಹೋಗುವ ವಿನಮ್ರ ಭಾವ ಅನನ್ಯತೆ, ಭಾವತೀವ್ರತೆ ಅನಂತ ತುಡಿತವನ್ನು ತನ್ನೊಳಗಿಂಬಿಟ್ಟುಕೊಂಡು ಶರಣಾಗತಿ ಹೊಂದುವ ಪರಿ ಅಪ್ರತಿಮ!

"ಬೆಂದಸಂಸಾರ ಬೆಂಬಿಡದೆ ಕಾಡಿಹುದಯ್ಯ

ಏವೆನೇವೆನಯ್ಯಾ?

ಅಂದಂದಿನ ದಂದುಗಕ್ಕೆ ಏವೆನೇವೆನಯ್ಯಾ?

ಬೆಂದ ಒಡಲ ಹೊರೆವುದಕ್ಕೆ ನಾನಾರೆ.

ಚೆನ್ನಮಲ್ಲಿಕಾರ್ಜುನಯ್ಯಾ, ಕೊಲ್ಲು ಕಾಯಿ, ನಿಮ್ಮ ಧರ್ಮ."[೮೨]

ತಾಪತ್ರಯಗಳಲ್ಲಿ ಬಳಲಿ ಬೆಂದು ಬಸವಳಿದು ಭವಹರನ ಮೊರೆಹೋಗಿ ಕೊಲ್ಲುವ, ಕಾಯುವ ಕರ್ತವ್ಯವನ್ನು ದೇವನ ಹೆಗಲಿಗೇರಿಸಿ ನಿರ್ಲಿಪ್ತಳಾಗುವ ಅಕ್ಕಮಹಾದೇವಿ, ದೈನ್ಯತೆಯಿಂದ ಧನ್ಯತೆ ಪಡೆದುದನ್ನು ಭಾವಗಮ್ಯವಾಗಿಸುವ ರೀತಿ ವಿಶಿಷ್ಟ! ಆತ್ಮಾನುಸಂಧಾನದ ಮಾರ್ಗದಲ್ಲಿ ಅಡ್ಡಿಯಾದ ಹೊರಗಣ ಸಾಮಾಜಿಕ ಸಂಘರ್ಷಗಳಿಗೆ ಪ್ರತಿರೋಧವನ್ನು ಒಡ್ಡುತ್ತ, ಒಳಗಣ ತಲ್ಲಣಗಳನ್ನು ಮೆಟ್ಟಿ ನಿಲ್ಲುವ, ಸತತ ಪ್ರಯತ್ನದಲ್ಲಿನ ಸೋಲು ಗೆಲುವುಗಳ ಅನುಭವವನ್ನು ವಿವರಿಸುತ್ತ, ನಿವೇದಿಸಿಕೊಳ್ಳುವ, ನಿಲಿಪ್ತಳಾಗುವ, ಭಾವಗಳು ಭಾಷೆಯಲ್ಲಿ ಮಡುಗಟ್ಟಿ ನಿಂತಿವೆ. ಒಳ ಹೊರಗಿನ ತೊಡರುಗಳನ್ನು ಎದುರಿಸಿದ ದಿವ್ಯ ಕ್ರಿಯಾಶೀಲತೆ, ಪರಿಣಾಮಕಾರಿಯಾಗಿದೆ.

"ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ.

ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ.

ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ.

ನೆನಹಿಂಗೆ ಅರುಹಾಗಿ ಕಾಡಿತ್ತು ಮಾಯೆ.

ಅರುಹಿಂಗೆ ಮರಹಾಗೆ ಕಾಡಿತ್ತು ಮಾಯೆ.

ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ.

ಚೆನ್ನಮಲ್ಲಿಕಾರ್ಜುನಾ,

ನೀನೊಡ್ಡಿದ ಮಾಯೆಯನಾರಿಗೂ ಗೆಲಬಾರದು."[೮೩]

ಆತ್ಮವಿಕಾಸಕ್ಕೆ ಅಡ್ಡಿಯಾಗಿರುವ ಮಾಯೆ ಕಾಯ, ಪ್ರಾಣ, ಮನ, ನೆನಹುಗಳಿಗೆ ಬೆಂಬಿಡದೆ ಕಾಡುವ, ಕಂಗೆಡಿಸುವ ರೀತಿ ಅತಿಶಯವಾದದ್ದು, ವಿನಾಶಕಾರಿಯಾದ ಮಾಯೆಯ ಮರಹಿಗೆ, ಜಗದ ಜನ ಒಳಗಾಗಿ, ಓಲಾಡಿ, ಬಂಧಿತರಾಗಿ, ಬಳಲಿದುದನ್ನು ಅರಿತ ಅಕ್ಕಮಹಾದೇವಿ ಮಾಯೆಯ ಆಕರ್ಷಣೆ, ಅದರ ಸಾರ್ವಕಾಲಿಕತೆ, ಸರ್ವವ್ಯಾಪಕತೆಯನ್ನು ಕಳೆದುಕೊಳ್ಳಲು ಹೋರಾಟ ನಡೆಸಿದ್ದಾಳೆ. ವಿರತಿಗೆ ವಿನಾಶಕಾರಿಯಾದ ಮಾಯೆ ಒಡ್ಡುವ ತೊಡರನ್ನು ತೊಡೆಯಲು ನಡೆಸಿದ ಹೋರಾಟದ ಮನಸ್ಸು ಕ್ರಾಂತಿಕಾರಕ ಭಾಷೆಯಲ್ಲಿಯೇ ಪ್ರತಿರೋಧಿಸುತ್ತದೆ. ಸೂಕ್ಷ್ಮವಾಗಿ ಪ್ರತಿಕ್ರಿಯಿಸುತ್ತದೆ. ಮಾಯೆಯ ಮರಹಿಗೆ, ಮೋಹಕ್ಕೆ ಒಳಗಾಗದಂತೆ ಜಾಗ್ರತೆಗೊಳ್ಳುವ

ಒಳಪ್ರಜ್ಞೆಯೊಂದು ಅಕ್ಕನಲ್ಲಿ ಜಾಗೃತಗೊಂಡು ಕ್ರಿಯಾಶೀಲತೆಯಿಂದ ಸ್ಪಂದಿಸುವುದು. ಅಕ್ಕಮಹಾದೇವಿಯ ಭಾವಸಂಸ್ಕಾರದಿಂದ ಎಚ್ಚರ ಪ್ರಜ್ಞೆಯಿಂದ ಮೂಡಿ ಬಂದ ವಚನ ಭಾಷೆಗೆ ವಿಶಿಷ್ಟ ಗಂತವ್ಯ ಪ್ರಾಪ್ತಿಯಾಗಿ ಗುರಿ, ಗಮನ ಎಲ್ಲವೂ ಸ್ಪಷ್ಟವಾಗಿ ಭಾಷೆಯಲ್ಲಿ ಎರಕ ಹೊಯ್ದಿದೆ.

ತಾನೊಲಿದ ಶಕ್ತಿಯ ಆವಾಹನೆಗಾಗಿ ಸದಾ ಸ್ಮರಿಸುವ, ಹಂಬಲಿಸುವ, ಸೃಷ್ಟಿಯಲ್ಲಿ ಶಿವನಿರುವನ್ನು ಅರಿತ ಅಕ್ಕಮಹಾದೇವಿ ಆತ್ಯಂತಿಕ ನೆಲೆಯಲ್ಲಿ ಪ್ರಾಕೃತಿಕ ಸಹಜ ಸೌಂದರ್ಯವನ್ನು ಭಾಷೆಯಲ್ಲಿ ಸಂಕ್ಷಿಪ್ತವಾಗಿ ಸೆರೆಹಿಡಿದು, ಭಾವ ತುಂಬಿ ಬಣ್ಣಿಸುವ, ಅಂತರ್ಯಾಮಿಯಾದ ಅನುಭಾವಕ್ಕೆ ಆವೇಗಗೊಳ್ಳುತ್ತ ಮುನಿಸಿಕೊಳ್ಳುತ್ತ, ಕಾಡುವ, ಬೇಡುವ ಮಗುವಿನಂತೆ ಎಲ್ಲರಿಗೂ ಕೊಟ್ಟು ತನಗೇಕೆ ಇಲ್ಲ? ಎಂದು ತಾಯಿಯನ್ನು ಪ್ರಶ್ನಿಸುವ ಮುಗ್ಧ ಮಗುವಿನ ಮನಸ್ಸಿನ ಭಾವನಾತ್ಮಕ ಪ್ರತಿಕ್ರಿಯೆ ಅಕ್ಕನ ಭಾಷೆಯಲ್ಲಿಯೂ ಕಾಣುತ್ತದೆ. ಅರಿವು, ಅದರ ಸ್ವರೂಪ ಜ್ಞಾನವಿರುವ ಅಕ್ಕನಿಗೆ ಅದು ನಿಲುಕದಿರುವಾಗ ಕಾಡುವ ಹತಾಶೆ, ಅಸಹಾಯಕತೆ, ವಿನಮ್ರತೆಯಿಂದ ಪಡೆದುಕೊಳ್ಳುವ ರೀತಿ ವಚನದ ಭಾವತೀವ್ರತೆಯ ತುಡಿತವನ್ನು ಮತ್ತಷ್ಟು ಹೆಚ್ಚಿಸುತ್ತವೆ.

> "ವನವೆಲ್ಲಾ ನೀನೆ, ವನದೊಳಗಣ ದೇವ ತರುವೆಲ್ಲಾ ನೀನೆ,
> ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ.
> ಚೆನ್ನಮಲ್ಲಿಕಾರ್ಜುನಾ,
> ಸರ್ವಭರಿತನಾಗಿ ಎನಗೇಕೆ ಮುಖದೋರೆ?"[೮೪]

ಸರ್ವಾಂತರ್ಯಾಮಿಯಾದ ಶಿವನು ಪ್ರಕೃತಿಯಲ್ಲಿ ತರು, ಲತೆ, ಖಗ, ಮೃಗಗಳನ್ನೆಲ್ಲಾ ಪ್ರತಿನಿಧಿಸುವ ಪರಮಾತ್ಮನ ಇರುವಿಕೆಯಿಂದ ಸತ್ಯ ಶಿವ ಸುಂದರವಾದ ಸ್ವರೂಪ ದರ್ಶನವಾಗಿದೆ. ನಿನ್ನ ಕರುಣೆಯಿಂದ ಪ್ರಕೃತಿಯೇ ಪರಮಾನಂದದಿಂದ, ಅಪ್ರತಿಮ ಚೆಲುವಿನಿಂದ ಕಂಗೊಳಿಸುತ್ತಿರುವಾಗ ಎನ್ನನೇಕೆ ಕಾಡುವಿ? ಎನಗೆ ಕಾಣಿಸಲಾರೆ? ಎನಗೂ ಒಲಿಯಬಾರದೆ? ನೋವಿನ ಭಾವ ಒಂದೆಡೆಯಾದರೆ ಸೃಷ್ಟಿಯಲ್ಲೆಲ್ಲ ಶಿವನ ಸಾಕ್ಷಾತ್ಕಾರವನ್ನು ಅನುಭವಿಸಿರುವುದು ವಚನದ ಮತ್ತೊಂದು ಭಾವ! ಅಕ್ಕನಲ್ಲಿಯ ಈ ಭಾವೋತ್ಕರ್ಷಗಳೇ ವಚನಗಳ ಜೀವಾಳ! ಅಕ್ಕಮಹಾದೇವಿ ತನ್ನ ಒಳಹೊರಗಿನ ಭಾವಗಳಿಗೆ ಭಾಷೆಯ ಉಡುಗೆ ತೊಡಿಸಿ ವಚನಕಾವ್ಯ ರಚಿಸಿ ಹೊಸ ಶಕ್ತಿ ಚೈತನ್ಯವನ್ನು ನೀಡಿ, ಭಾಷೆಯ ಚಲನಶೀಲತೆ, ಕ್ರಿಯಾಶೀಲತೆ, ಸೃಜನಶೀಲತೆಯ ಗುಣಗಳನ್ನು ಮೇರುಮಟ್ಟಕ್ಕೆ ಏರಿಸಿ ಭಾಷಾ ಶಕ್ತಿ ಸಾಮರ್ಥ್ಯವನ್ನು, ಸತ್ವವನ್ನು ಹೆಚ್ಚಿಸಿದ ಪ್ರತಿಭಾನ್ವಿತ ಶಬ್ಧ ಕಲಾನಿಪುಣೆ! ಭಕ್ತಿ, ಬಂಡಾಯ, ವೇದನೆ, ನಿವೇದನೆಗಳು, ದಿಟ್ಟತನ ನೇರ ನಿಷ್ಠುರ ಅಭಿವ್ಯಕ್ತಿಯಲ್ಲಿ ಅಕ್ಕ ತುಂಬ ಸ್ವತಂತ್ರಳು, ಅಂತೆಯೇ ಭಾಷಾ ಬಳಕೆಯಲ್ಲಿಯೂ ಮುಕ್ತಳು ಸ್ವತಂತ್ರಳು.

ಅಕ್ಕನದು ಬೀಸರವೋಗದ ಭಾಷೆ! ಭಾಷೆಯಲ್ಲಿ ಆತ್ಮಚೈತನ್ಯವನ್ನು ತುಂಬಿ ಹೃದಯ ತುಂಬಿ ಹಾಡಿದ ವಚನಗಳು ಸಹೃದಯರಲ್ಲಿ ಸಂಚಲನವನ್ನುಂಟು ಮಾಡುವ ಬೆಳಕಿನ ಕಿಡಿಗಳು. ಅನುಭವದ ನುಡಿಗಳು, ಭಾಷೆಯಲ್ಲಿ ಭಾವತೀವ್ರತೆ ನಿಗಿ ನಿಗಿ ಕೆಂಡದಂತೆ ಅವಿತುಕೊಂಡು ಅರಿಯಲನುವಾದಾಗ ತನ್ನ ಕಾವನ್ನು ಸತ್ವವನ್ನು, ಹೊರಹಾಕಿ ಅರ್ಥವಿಸ್ತಾರ ವೈವಿಧ್ಯತೆಯನ್ನು ದೊರಕಿಸಿಕೊಡುವ ಭಾವ ಬೆಳಕಿನ ಕಿರಣಗಳು. "ಅಕ್ಕನು ನಿರಂತರವಾಗಿ ಪ್ರಕೃತಿ ಶಕ್ತಿಯನ್ನು ತನ್ನ ಒಳಗೂ ಹೊರಗೂ ಶೋಧಿಸಿಕೊಂಡಿದ್ದಾಳೆ. ಅವಳ ಸೌಂದರ್ಯಪ್ರಜ್ಞೆ ಒಂದು ದಿವ್ಯ ಕ್ರಿಯಾಶೀಲತೆ, ಪ್ರಖರ ಸೃಜನಶೀಲತೆ. ಒಂದು ಮಹಾನ್ ಸಾಮುದಾಯಿಕ ಚಲನಶೀಲತೆ. ಅದಕ್ಕೆ ಅಕ್ಕ 'ಚಿಲಿಮಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೇ...... ಎನ್ನುತ್ತಾ ಪ್ರಕೃತಿಯ ಶೃಂಗಾರ ಮತ್ತು ಸಖ್ಯದ ಜೀವರಾಶಿಗಳ ಜೊತೆ ಸಂವಾದಿಸುತ್ತಾಳೆ. ತನ್ನ ಆತ್ಯಂತಿಕ ಆನಂದದ ಸಂಗಾತಿಯನ್ನು ಪ್ರಕೃತಿಯಲ್ಲೆ ಹುಡುಕುತ್ತಾಳೆ. ಈ ಬಗೆಯ ಸಹಜ ಹಾಗೂ ಜೀವಂತಿಕೆಯ ಸೌಂದರ್ಯವು ಆಕ್ರಮಣಕಾರಿ ಯಜಮಾನ ಸೌಂದರ್ಯವನ್ನು ಎದುರಿಸಬಲ್ಲ ಸಮರ್ಥಸಾಧನ."[೨೨]

ಆಧ್ಯಾತ್ಮಿಕ ಶೃಂಗಾರ ವಿರಹ

ಅಕ್ಕಮಹಾದೇವಿಯ ಅಂತರಂಗ ಬಹಿರಂಗಗಳ ಬದುಕೆಲ್ಲ ವಚನಗಳಲ್ಲಿಯ ವಿಷಯವಸ್ತು, ಬದುಕು ಬರಹದಲ್ಲಿ ಪ್ರತಿಧ್ವನಿತಗೊಂಡಿರುವ ಲೌಕಿಕ ಅಲೌಕಿಕ ಚಿಂತನಾಕ್ರಮ, ವೇದನೆ, ಶೃಂಗಾರ, ವಿರಹ, ನಿವೇದನೆ ಭಾವಗಳು ಮೇಳವಿಸಿದ ಭಕ್ತಿ ಪ್ರಧಾನ ಶೃಂಗಾರ ವಿರಹ ಕಾವ್ಯ ಭಾಷೆಯಲ್ಲಿ ಮೈದಾಳಿದೆ. ಲೌಕಿಕ ಜನರ ರೀತಿಯ ಮೋಹದ ಶೃಂಗಾರ ವಿರಹ ಒಂದು ಕ್ಷಣಿಕ ಪ್ರಲೋಭನೆ ಯಾದರೆ, ಅಕ್ಕನದು ಆಧ್ಯಾತ್ಮಿಕ ಅನುಭೂತಿಯ ಅಲೌಕಿಕ ಆನಂದದ ಭಕ್ತಿಯ ಪ್ರೇಮಕಾವ್ಯ. ಅದೊಂದು ಶೃಂಗಾರ ಪ್ರಣೀತ ಭಕ್ತಿಕಾವ್ಯ. ಅಮರ ಆನಂದದ ಪರಮಾತ್ಮನೊಡನಾಟದ ಪ್ರೇಮಪ್ರಣೀತ ಕಾವ್ಯ. ಭಕ್ತಿಯ ಅಲೌಕಿಕ ಆನಂದದಲ್ಲಿ ಸಂಚರಿಸುವ ಮಹಾದೇವಿಯಕ್ಕನ ದೈವೀಪ್ರೇಮ, ಶೃಂಗಾರ ವಿರಹ ಭಾವ, ವಿಹಿತ ಭಾಷೆ, ಅನುಸಂಧಾನಗೊಂಡು ಶ್ರೇಷ್ಠ ಆಧ್ಯಾತ್ಮಿಕ ಶೃಂಗಾರ ವಿರಹ ಕಾವ್ಯದ ಲಕ್ಷಣಗಳು ವಚನಗಳಲೆಲ್ಲ ಪವಿತ್ರವಾದ ಪರಮ ಪ್ರೇಮವನ್ನು ಬಿತ್ತರಿಸುತ್ತವೆ. ದೇವನ ಪ್ರೇಮದೊಲವನ್ನು ಎತ್ತರಿಸುತ್ತವೆ. ಅಂತಹ ಭಾವಗಳ ಅಭಿವ್ಯಕ್ತಿಗಾಗಿ ಅಕ್ಕ ಬಳಸಿದ ಭಾಷೆ ತೀವ್ರ ಸಂವೇದನಾಶೀಲತೆಯುಳ್ಳದ್ದು.

ಅಕ್ಕಮಹಾದೇವಿಯ ವಚನಗಳಲ್ಲಿ ಕಾಯದ ನಿರ್ವಚನ ನಿರಾಕರಣೆ, ಸ್ವೀಕೃತಿ ಎರಡೂ ನೆಲೆಗಳಲ್ಲಿ ವ್ಯಕ್ತಗೊಂಡಿರುವುದುಂಟು. ಕಾಯ, ಅದರೊಂದಿಗಿನ ಇಂದ್ರಿಯಗಳ ಜೀವದ ಜಂಜಡ ಆನಂದಾನುಭೂತಿಗೆ ಅಡಚಣೆ ಮಾಡಿರುವುದರಿಂದ ಅವುಗಳ ಉರುವಣೆಗೆ ಕಾರಣವಾದ ಮಾಯೆ, ಮಾಯಾ ಆವರಣದ ನಿವಾರಣೆಗೆ ಅಕ್ಕ ಅಣಿಗೊಳ್ಳುವ ಬಗೆಯೇ ವಿಭಿನ್ನ! ಭಾವದ ಮೈ ಭಾಷೆ,

ಭಾವದಂತೆ ಶಬ್ದ ಸಂಯೋಜನೆ, ಸಹಜ ಸೌಂದರ್ಯ ನಿರ್ಮಿತಿ ಅಕ್ಕನ ವಚನಗಳ ಅರ್ಥವಿಸ್ತಾರ ಅಗೆದಷ್ಟು ಮೊಗೆದಷ್ಟು ಆಳ, ಅನಂತತೆ! ಕಾಯದ ಕಳವಳವನ್ನು ನಿರೂಪಿಸಿರುವ ಅಕ್ಕಮಹಾದೇವಿ ಅದರ ನಿವಾರಣೆಗೂ ನಿವೇದಿಸಿಕೊಳ್ಳುವಳು.

"ಎನ್ನ ಮಾಯದ ಮದವ ಮುರಿಯಯ್ಯಾ
ಎನ್ನ ಕಾಯದ ಕತ್ತಲೆಯ ಕಳೆಯಯ್ಯಾ
ಎನ್ನ ಜೀವದ ಜಂಜಡವ ಮಾಣಿಸಯ್ಯಾ.
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯಾ,
ಎನ್ನ ಸುತ್ತಿದ ಪ್ರಪಂಚವ ಬಿಡಿಸಾ ನಿಮ್ಮ ಧರ್ಮ!"[೮೬]

ಆತ್ಮವಿಕಾಸದ ಪಥದಲ್ಲಿ ಅಡ್ಡಿಯಾದ ಮಾಯೆಯ ಮದ, ಕಾಯದ ಕತ್ತಲೆ ಜೀವದ ಜಂಜಡವನ್ನು ಬಿಡಿಸಿಕೊಳ್ಳುವುದು ಅನಿವಾರ್ಯ! ಆದರೆ ಅದು ಸುಲಭಕ್ಕೆ ಸಾಧ್ಯವಾಗದ ಸಂಗತಿ ಎಂಬುದನ್ನರಿತು ದೇವನಲ್ಲೆ ವಿನೀತಳಾಗುವ ಶರಣಾಗತಿ ಭಾವ, ತಳಮಳ, ತಲ್ಲಣಗಳು ಭಾಷೆಯಲ್ಲಿ ವ್ಯಕ್ತವಾಗಿರುವುದಕ್ಕೆ ಅಕ್ಕನ ಭಾಷಾ ನಿರ್ಮಿತಿ ಸಾಮರ್ಥ್ಯ ಭಾವಕ್ಕೆ ತಕ್ಕ ಭಾಷೆಯ ಮೇಲಿನ ಹಿಡಿತ ಗ್ರಹಿತವಾಗುತ್ತದೆ. ಮರೆವಿನಿಂದ ಅರಿನೆಡೆಗೆ ಸಾಗುವ ಪ್ರೇರಣೆ ದೊರಕುವುದು ಪರಮಾತ್ಮನ ದಿವ್ಯ ಬೆಳಕಿನಿಂದಲೆ ಎಂಬುದನ್ನು ಅಕ್ಕನ ಅಂತಃಪ್ರಜ್ಞೆ ಗ್ರಹಿಸಿ ಅದನ್ನು ಭಾಷೆಯಲ್ಲಿ ದಕ್ಕಿಸುವ ರೀತಿ ಪರಿಣಾಮಕಾರಿಯಾಗಿದೆ.

"ಶಿವನೇ ಉಳಿವ ಕರೆವ ನೇಹವುಂಟೆ?
ಸಂಸಾರಕಂ ನಿಮ್ಮಲ್ಲಿಗೆಡೆಯಾಡುವ ಭಕ್ತಿಯುಂಟೆ?
ಏನಯ್ಯ ಶಿವನೇ,
ಏನೆಂದು ಪೇಳ್ವೆ ಲಜ್ಜೆಯ ಮಾತ, ಚೆನ್ನಮಲ್ಲಿಕಾರ್ಜುನ."[೮೭]

ಸಂಸಾರ ಪಾರಮಾರ್ಥಿಕ ದ್ವಂದ್ವಗಳಲ್ಲಿ ಸಿಲುಕಿರುವ ಮನಸ್ಥಿತಿಯ ಚಿತ್ರಣ ನವಿರಾಗಿ, ಸತ್ವಯುತವಾಗಿ ಔಚಿತ್ಯಪೂರ್ಣ ಪದಗಳ ಜೋಡಣೆ, ವಾಕ್ಯಬಂಧ, ಭಾವಕ್ಕೆ ತಕ್ಕ ಭಾಷೆಯ ನಡೆ, ಅಕ್ಕನ ವಚನಗಳ ಅಂತರಿಕ ಮತ್ತು ಬಾಹ್ಯ ತಲ್ಲಣಗಳನ್ನು ಎಳೆಎಳೆಯಾಗಿ ಬಿಚ್ಚಿಡುವ ರೀತಿ ಬೆರಗಿನದು. ದೇಶೀಭಾಷೆಯನ್ನೇ ಕಾವ್ಯಾತ್ಮಕ ಲಯಕ್ಕೆ ಒಗ್ಗಿಸಿಕೊಳ್ಳುವ ನೈಪುಣ್ಯತೆ ಅಕ್ಕನದು. ತಾನೊಲಿದ ಅಲೌಕಿಕ ಶಕ್ತಿಯನ್ನು ದೇವ, ತಂದೆ, ಪ್ರೇಮಿ, ಸಂಗಾತಿ ಗಂಡ ವೈವಿಧ್ಯಮಯ ಪಾತ್ರಗಳಲ್ಲಿ ಚಿತ್ರಿಸಿದ ಅಕ್ಕನ ವಚನಗಳ ಭಾಷೆಯಲ್ಲಿ ವಾಸ್ತವಿಕ ರೂಪು ಪಡೆದಿರುವುದು ಸೋಜಿಗ. ತೀರ ಆತ್ಮೀಯವಾಗಿ ಎದುರಿಗಿರುವ ಸಂಗಾತಿಯೊಂದಿಗೆ, ಹತ್ತಿರದವರೊಂದಿಗೆ ಮಾತನಾಡುತ್ತಿರು

ವಂತಹ ಭಾವ ಭಾಷೆಯಲ್ಲಿ ಸಾಕಾರಗೊಂಡಿದೆ. ಮೂರ್ತ ಸಂದರ್ಭವನ್ನು ಎದುರಿಗಿರಿಸಿದಂತೆ ಅಪ್ಯಾಯಮಾನವಾಗಿ ನಿರೂಪಣೆ ಮಾಡುವ ಕಲೆ ಅಕ್ಕನಿಗೆ ಒಲಿದಿದೆ.

ಹೆಣ್ಣಾಗಿ ಹೆಣ್ತನವನ್ನು ಸಂಭ್ರಮಿಸಿದ ಅಕ್ಕಮಹಾದೇವಿ ಹೆಣ್ಣಿನ ದೇಹ ಹೊತ್ತು ದೇವನ ಬಳಿಸಾರಲು ಒಳಹೊರಗೂ ಸಂಘರ್ಷವನ್ನು, ಅಸಂಖ್ಯ ಪ್ರತಿರೋಧವನ್ನು ಎದುರಿಸಿರುವುದರಿಂದ ವಚನಗಳ ಭಾಷೆ, ಆಯಾ ತೆರನಾದ ಸಂದರ್ಭಕ್ಕೆ ತಕ್ಕಂತೆ ಬಳಕೆಯಾಗಿದೆ. ತೀರ ಸಾಮಾನ್ಯ ಸ್ತ್ರೀಯಳಂತೆ ವಿರಹಿಸುವ ಅಕ್ಕನ ಆತ್ಮೀಯ ಭಾವ ವಚನಗಳಲ್ಲಿ ಅಪೂರ್ವವಾದ ವಿರಹವೇದನೆಯನ್ನೇ ಬಿಚ್ಚಿಡುತ್ತದೆ.

> "ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ,
> ಏರಿಲ್ಲದ ಗಾಯದಲ್ಲಿ ನೊಂದೆನವ್ವಾ,
> ಸುಖವಿಲ್ಲದೆ ಧಾವತಿಗೊಂಡೆನವ್ವಾ,
> ಚೆನ್ನಮಲ್ಲಿಕಾರ್ಜುನದೇವಂಗೊಲಿದು,
> ಬಾರದ ಭವಂಗಳಲ್ಲಿ ಬಂದೆನವ್ವಾ"೮೮

ಭಾಷೆಯ ಸೃಷ್ಟ್ಯಾತ್ಮಕ ಗುಣ ಅಕ್ಕನಿಗೆ ತೀರ ಸಲೀಸು, ನಿತ್ಯಕ್ರಿಯೆಯನ್ನೇ ನಾವಿನ್ಯ ಪೂರ್ಣವಾಗಿ ಪರಿವರ್ತಿಸಿ, ಸಾಮಾನ್ಯ ಸಂಗತಿಗಳನ್ನೇ ಸಾಹಿತ್ಯಿಕ ವಲಯಕ್ಕೆ ಕೊಂಡೊಯ್ಯುವ ಪ್ರತಿಭಾಜನ್ಯೆ. ದೇಶಿನುಡಿಗಳ ಲಯ, ಪ್ರಾದೇಶಿಕ ಅನನ್ಯತೆ ಅಕ್ಕನ ಭಾಷೆಗೆ ಪ್ರಾಪ್ತವಾಗಿದೆ. ಕಿಚ್ಚಿಲ್ಲದ ಬೇಗೆ, ಏರಿಲ್ಲದ(ಪೆಟ್ಟು) ಗಾಯ, ಸುಖವಿಲ್ಲದ ಧಾವತಿ ರೂಪಕಗಳು ವಿರಹದುರಿಯನ್ನು ಸಶಕ್ತವಾಗಿ ಪ್ರತಿನಿಧಿಸುತ್ತವೆ. ಅವ್ವ ಶುದ್ಧ ದೇಶೀ ಪದಪ್ರಯೋಗ ವಚನದ ಭಾವಕ್ಕೆ ಆತ್ಮೀಯತೆಯ ಸೊಗಡನ್ನು ನೀಡಿದೆ. ರೂಪಕಾತ್ಮಕ ವರ್ಣನೆಯಿಂದ ಅನುಭಾವದ ನಿರ್ವಚನ ಗೈಯ್ಯುವ ಅಕ್ಕಮಹಾದೇವಿಯ ಭಾಷೆ, ಶೈಲಿ ಇತರ ವಚನಕಾರರಿಗಿಂತ ತೀರ ಭಿನ್ನ! ಮತ್ತು ಅಪ್ಯಾಯಮಾನ!!

ಶರಣಸತಿಯು ಲಿಂಗಪತಿಯೊಡನೆ ಸಮಾಗಮ ಹೊಂದಲು ಆಶಿಸುವ, ತವಕಿಸುವ, ನಲ್ಲನ ಬರುವಿಕೆಗಾಗಿ ಹಾತೊರೆದು ಬಸವಳಿದ ವಿರಹಿಣಿ ಸತಿಯ ವಿರಹವೇದನೆಯನ್ನು ಅನುಭವಿಸಿದ್ದಾಳೆ. ಆಕೆಯ ಗಂಡ ಮೂರ್ತರೂಪಪದವನಲ್ಲ. ವಾಸ್ತವಿಕ ಬಣ್ಣನೆಗೆ ಸಿಗದವನು. ಆದರೂ ಅಕ್ಕನ ವಚನಗಳಲ್ಲಿ ಆತ ವಾಸ್ತವಿಕ ಚೆಲುವ, ಚೆನ್ನ, ಆತನ ಬರುವಿಕೆ ಅವಳಿಗೆ ಅಸುವಿನ ಬರುವಿಕೆ, ಅವನೊಂದಿಗಿನ ಒಡನಾಟಕ್ಕೆ ಶೃಂಗರಿಸಿಕೊಂಡು ಕಾಯುವುದರಲ್ಲಿಯೇ ತೃಪ್ತಿ. ಆತನೊಲುಮೆ ಸಂಪಾದಿಸಲು ನವ ವಧುವಿನಂತೆ, ಮುತ್ತೈದೆ ಸ್ತ್ರೀಯಂತೆ, ಅಲಂಕರಿಸಿಕೊಂಡು ಕಂಗೊಳಿಸುವಳು.

ಅವಳ ಸಕಲ ಶೃಂಗಾರಗಳಿಗೆ ಮನದೊಡೆಯ ಮನವನಿಂಬುಗೊಳ್ಳುವನೆಂಬ ಭರವಸೆ. ಪರಮಾನಂದ ಪಡೆಯುವ ಅದಮ್ಯ ಬಯಕೆ. ಸಂಗಾತಿಯಿಂದ ಪರಿತ್ಯಕ್ತಳಾದ ಅಕ್ಕ ಅವನ ಬರುವಿಕೆಗೆ ಸದಾ ಹಾರೈಸುವ ಶರಣಸತಿ ಅವಳು.

"ಅರಿಸಿನವನೆ ಮಿಂದು, ಹೊಂದುಡಿಗೆಯನೆ ತೊಟ್ಟು,
ದೇವಾಂಗವನುಟ್ಟೆನೆಲೆ ಪುರುಷ ಬಾರಾ,
ಪುರುಷ ರತ್ನವೇ ಬಾರಾ.
ನಿನ್ನ ಬರವೆನ್ನ ಅಸುವಿನ ಬರವಾದುದೀಗ,
ಬಾರಯ್ಯಾ ಚೆನ್ನಮಲ್ಲಿಕಾರ್ಜುನಯ್ಯಾ,
ನೀನು ಬಂದಹನೆಂದು ಬಟ್ಟೆಯ ನೋಡಿ ಬಾಯಾರುತಿರ್ದೆನು."[೮]

ಶರಣ ಸತಿಯ ಶೃಂಗಾರದ ರೂಪಧಾರಣ ಕ್ರಿಯೆ ವಚನದಲ್ಲಿ ಅದ್ಭುತವಾಗಿ ಅನಾವರಣ ಗೊಂಡಿದೆ. ಅಕ್ಕನ ಚೆನ್ನ 'ಪುರುಷರತ್ನ' ಅವನನ್ನು ಕೂಡುವ ಸತಿಯ ತವಕ, ತೀವ್ರತೆ ಭಾಷೆಯಲ್ಲಿ ಚಲನಶೀಲತೆ ಪಡೆದುಕೊಂಡು ಜೀವಚೈತನ್ಯವೊಂದು ತನಗಿಷ್ಟವಾದ ಪ್ರಾಣಸಂಗಾತಿಯ ಬರುವಿಕೆಗೆ ಕಾತರಿಸುವ ಸನ್ನಿವೇಶ ಜೀವಂತಿಕೆಯಿಂದ ನಿರೂಪಿಸಲ್ಪಟ್ಟಿದೆ. ಶರಣಸ್ಥಲದಲ್ಲಿ ನಿಂದ ಅಕ್ಕಮಹಾದೇವಿ ಲಿಂಗಪತಿಗಾಗಿ ಹಂಬಲಿಸಿ ಮುತ್ತೈದೆ ಸ್ತ್ರೀಯಂತೆ ಅರಿಸಿಣ, ಕುಂಕುಮ ಧರಿಸಿ, ರೇಶಿಮೆ ಮಡಿಯನುಟ್ಟು ವಸ್ತ್ರಾಭರಣಗಳಿಂದ ಸಕಲ ಶೃಂಗಾರ ಸಾಧನಗಳಿಂದ ಅಲಂಕೃತಳಾಗಿದ್ದಾಳೆ. ಪ್ರೀತಿಯ ಪತಿಯ ದಾರಿ ಕಾಯುತ್ತ ಅಲೌಕಿಕ ಸಮರಸಕ್ಕಾಗಿ ಕಾಯ್ದು ಆಯಾಸಗೊಂಡು, ಬಸವಳಿದು, ಬಾಯಾರಿದ್ದಾಳೆ. ವಚನವು ಭಾವನಾತ್ಮಕ ಮತ್ತು ಕಾವ್ಯಾತ್ಮಕ ಎರಡೂ ನೆಲೆಗಳಿಂದ ಆತ್ಯಂತಿಕ, ಆಧ್ಯಾತ್ಮಿಕ ಶೃಂಗಾರ-ವಿರಹ ಕಾವ್ಯದ ಪರಿತ್ಯಕ್ತೆಯ, ವಿರಹಿಣಿಯ ತಲ್ಲಣಗಳನ್ನು ಸಶಕ್ತವಾಗಿ ಪ್ರಕಟಿಸುತ್ತದೆ. ಮುತ್ತೈದೆಯ ಸಂಭ್ರಮ, ನಲ್ಲನ ವರ್ಣನೆ, ಆತ ಬಾರದಿದ್ದಾಗ ಬೇಸರದಿಂದ ಹೊರಟ ಉಸುರು, ವಿರಹದ ಧ್ವನಿ ಶಬ್ಧಗಳಲ್ಲಿ ಅನುರಣನಗೊಂಡಂತಿದೆ.

ಸಾವಿಲ್ಲದ ಸಹಜಂಗೆ, ರೂಹಿಲ್ಲದ ಚೆಲುವಂಗೆ ಒಲಿದ ಅಕ್ಕಮಹಾದೇವಿಯ ಚೆನ್ನಮಲ್ಲಿಕಾರ್ಜುನ ಲೌಕಿಕರಂತೆ ವ್ಯವಸ್ಥಿತನಲ್ಲ. ಆತನು ಒರಟ, ಆದರೂ ಅಕ್ಕನಿಗೆ ಆತನೆ ಚೆಲುವ, ಅವನಲ್ಲಿಯೇ ಒಲವು! ಆತನೊಂದಿನ ವಿವಾಹ ಸಂದರ್ಭವನ್ನು ಸ್ಮರಿಸುವ ಅಕ್ಕಮಹಾದೇವಿ ಶೃಂಗಾರಮಯವಾಗಿ ಸೃಷ್ಟಿಸಿದ ರೀತಿಯೂ ಸೌಂದರ್ಯಾನುಭೂತಿಯ ಪರಾಕಾಷ್ಠೆಯ ನೆಲೆಯ ನಿಲುವಿನದು. ಅಕ್ಕಮಹಾದೇವಿಯ ಆಧ್ಯಾತ್ಮಿಕ ಶೃಂಗಾರ ವಿರಹ ಭಾವಗಳು ಮೂರ್ತದಿಂದ ಅಮೂರ್ತ ನೆಲೆಗೆ ಸಾಗಿದಂತವು. ಕವಿಗಳ ಕಾವ್ಯದ ಲೌಕಿಕ ಪ್ರಣಯ ಶೃಂಗಾರ ವಿರಹದಂತೆ ಸಮಾನ ನೆಲೆಯಲ್ಲಿ ಚಿತ್ರಿಸಲ್ಪಟ್ಟಿದ್ದರೂ, ಅದು ಆಧ್ಯಾತ್ಮಿಕ ಸೌಂದರ್ಯನುಭೂತಿ ವಿಪ್ರಲಂಭ ಶೃಂಗಾರ

ವಿರಹವದು. ಲೋಕ ವ್ಯವಹಾರದ ವಿವಾಹ ಸಂಗತಿಗಳ ರೀತಿಯ ಸಾಂಪ್ರದಾಯಿಕವಲ್ಲ. ಆಧ್ಯಾತ್ಮಿಕ ಲೋಕೋತ್ತರ ವಿವಾಹ ಬಂಧನವದು.

"ಹರನೆ ನೀನೆನಗೆ ಗಂಡನಾಗಬೇಕೆಂದು
ಅನಂತಕಾಲ ತಪಸ್ಸಿದ್ದೆ ನೋಡಾ.
ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದಡೆ,
ಶಶಿಧರನ ಹತ್ತಿರಕೆ ಕಳುಹಿದರೆಮ್ಮವರು.
ಭಸ್ಮವನೆ ಹೂಸಿ, ಕಂಕಣವನೆ ಕಟ್ಟಿದರು.
ಚೆನ್ನಮಲ್ಲಿಕಾರ್ಜುನ ತನಗೆ ನಾನಾಗಬೇಕೆಂದ."[೮೦]

ಶಿವನೊಲಿಸಲು ಗಿರಿಜೆಗೈದ ತಪಸ್ಸಿನಂತೆ ಅಕ್ಕ ಹರನೆ ಗಂಡನಾಗಬೇಕೆಂದು ಹಠತೊಟ್ಟು ಅವನೊಲಿಸಲು ಲೌಕಿಕ ಬಂಧಗಳನ್ನೆಲ್ಲ ಕೊಡವಿಕೊಂಡು ವಿರಾಗಿಯಾಗಿ, ವಿರಹಿಯಾಗಿ ಅನಂತಕಾಲ ಹಸಿವು ತೃಷೆಗಳನುಡುಗಿ, ತನುಮನಗಳ ಬಯಕೆ ನಿಲ್ಲಿಸಿ, ತಪ್ಪಸ್ಸು ಮಾಡಿ ಒಲಿಸಿದ ಸೌಂದರ್ಯೋಪಾಸನೆ, ವಚನ ಭಾಷೆಯಲ್ಲಿ ಸುಮಧುರವಾಗಿ ಸೂಕ್ತವಾಗಿ ಸಂಯೋಜಿತಗೊಂಡು ಆಧ್ಯಾತ್ಮಿಕ ಶೃಂಗಾರ ವಿರಹ ಕಾವ್ಯದ ಸಕಲ ಆಯಾಮಗಳನ್ನು ಸತ್ವಶಾಲಿಯಾಗಿ ಪ್ರತಿನಿಧಿಸುತ್ತದೆ. ಸದಾ ಶೋಧಿಸುವ, ಸಂಸ್ಮರಿಸುವ ಗತಿ ಶೀಲತೆಯ ಗುಣಗಳು ಅಕ್ಕನ ವಚನ ಭಾಷೆಯಲ್ಲಿ ಅಡಕವಾಗಿವೆ. ಅಕ್ಕಮಹಾದೇವಿಯ ಭಾಷಾಭಿವ್ಯಕ್ತಿಯ ವೈಶಿಷ್ಟ್ಯವೆಂದರೆ ಮಾತಿನ ಸಹಜತೆಯನ್ನೆ ಕಾವ್ಯಸ್ತರಕ್ಕೆ ಎತ್ತಿಕೊಳ್ಳುವ ಆ ಮೂಲಕ ಕಾವ್ಯ ಸೌಂದರ್ಯವನ್ನು ತುಂಬಿ ಸಾಹಿತ್ಯದ ಮೇರುಗುಣವನ್ನು ಸೃಷ್ಟಿಸುವುದು. ಅಚ್ಚದೇಶೀಯ ಜಾನಪದೀಯ ವಿವಾಹ ಬಂಧವನ್ನೇ ಮೆಚ್ಚಿನ ಮ್ಲಲಿಕಾರ್ಜುನನ ಅಲೌಕಿಕ ಆನಂದಾತಿಶಯಕ್ಕೆ ಷಟಸ್ಥಲ, ಮಾರ್ಗದ 'ಶಕ್ತಿವಿಶಿಷ್ಟಾದ್ವೈತ' ಸಿದ್ಧಾಂತದ ನಿರ್ವಚನವನ್ನು ಸಮೀಕರಿಸಿ ವಿನೂತನವಾಗಿ ವ್ಯಕ್ತಗೊಳಿಸುವ ಕ್ರಮ ವಿಶಿಷ್ಟವಾದದ್ದು.

ಹರನ ಸಂಗಾತ ಸುಖಕ್ಕಾಗಿ ಹೃದಯಾರೆ ಹಾರೈಸುವ ಅಕ್ಕಮಹಾದೇವಿ ಆತನ ಬರುವು ತಡವಾದಾಗ ತೀವ್ರ ಒತ್ತಡಕ್ಕೆ ಒಳಗಾಗಿ ತಲ್ಲಣಗೊಳ್ಳುವ ಮನಸ್ಥಿತಿ ಸಂಕ್ಷಿಪ್ತ ಪದಗಳಲ್ಲಿ ಸಶಕ್ತವಾಗಿ ಜೀವಂತಿಕೆ ಪಡೆದುಕೊಳ್ಳುವುದನ್ನು ಕಾಣುತ್ತೇವೆ.

"ಬಂದಹನೆಂದು ಬಟ್ಟೆಯ ನೋಡಿ,
ಬಾರದಿದ್ದಡೆ ಕರಗಿ ಕೊರಗಿದೆನವ್ವಾ
ತಡವಾದರೆ ಬಡವಾದೆ ತಾಯೆ,
ಚೆನ್ನಮಲ್ಲಿಕಾರ್ಜುನನ ಒಂದಿರುಳಗಲಿದಡೆ
ತಕ್ಕೆಸಡಲಿದ ಜಕ್ಕವಕ್ಕಿಯಂತಾದೆನವ್ವಾ"[೮೧]

ಅಗಲಿಕೆಯ ಧ್ವನಿಶಕ್ತಿ ಪಡೆದಿರುವ ವಚನ ಅಕ್ಕನ ಅಂತರ್ಯದ ತುಮುಲವನ್ನು ಭಾಷೆಯಲ್ಲಿ ಹಿಡಿದಿಟ್ಟುಕೊಂಡಿದೆ. 'ತಕ್ಕೆ ಸಡಲಿದ ಜಕ್ಕವಕ್ಕಿಯಂತೆ' ಉಪಮೆ ಇಡೀ ವಚನದ ವಿರಹದ ಭಾವವನ್ನು ಅಭಿವ್ಯಕ್ತಗೊಳಿಸುತ್ತದೆ. ಅಕ್ಕನ ವಚನಗಳ ಭಾವ ಮತ್ತು ಭಾಷೆಯಲ್ಲಿ ಅನೋನ್ಯತೆಯಿದೆ. ನಡೆನುಡಿ ಒಂದಾದ ಬದುಕಿದ ಸತ್ಯದ ಭಾಷೆಯದು. ಜೀವನದ ನಿರ್ವಚನ. ಶೃಂಗಾರ-ವಿರಹ ಮನಸ್ಥಿತಿ, ಭಾವೋತ್ಕರ್ಷತೆ, ಉತ್ಕಟ ಪ್ರೇಮ, ಸ್ತ್ರೀ ಸಂವೇದನೆ, ಭಕ್ತಿಯ ನಿವೇದನೆಯಲ್ಲಿ ಅಕ್ಕನ ವಚನಗಳ ಭಾಷೆ ಸಹಜ ಸೌಂದರ್ಯದಿಂದ ನಿರ್ಮಲ ಜಲದಂತೆ ಪ್ರಶಾಂತವಾಗಿ ಪ್ರವಹಿಸಿ ಭಾವವೇದ್ಯ, ಹೃದಯಂಗಮವಾಗುತ್ತದೆ. ಕಾವ್ಯಬಂಧದ ಸಕಲ ರಸಾನುಭವಗಳನ್ನು ಮೇಳವಿಸಿದ ವಚನಗಳು ಕಾವ್ಯದ ಸ್ತರವನ್ನು ಮೀರಿ ಅನುಭಾವದ ಔನತ್ಯವನ್ನು ಪಡೆದುಕೊಂಡು ನಿಶ್ಯಬ್ಧದಲ್ಲಿ ನಿಲುಗಡೆ ಹೊಂದುವ ಭಾಷೆ ತನ್ನ ಆತ್ಯಂತಿಕ ಮೇರು ನಿಲುವನ್ನು ಪ್ರತಿನಿಧಿಸುತ್ತದೆ. ಪ್ರೇಮ-ವಿರಹ ಶೃಂಗಾರದ ರಮ್ಯತೆಯನ್ನು ಆಧ್ಯಾತ್ಮಿಕ ಆನಂದದಲ್ಲಿ ಅಭಿವ್ಯಕ್ತಗೊಳಿಸಿದ ಅಕ್ಕನ ವಚನಗಳ ಭಾಷೆಗೆ ಅನನ್ಯ ಶಕ್ತಿ ಸಂಚಲನ ಸಿದ್ಧಿತ್ವ ಪ್ರಾಪ್ತವಾಗಿದೆ.

ಗಾದೆಗಳು

ಜನರ ಜೀವನಾನುಭವ ಹೊರತುಪಡಿಸಿದ ಸಾಹಿತ್ಯ ಜನಮನವನ್ನು ತಲುಪಲಾರದು. ಆದ್ದರಿಂದ ಜೀವನಾನುಭಕ್ಕೆ ಸಾಹಿತ್ಯದಲ್ಲಿ ಅಗ್ರಸ್ಥಾನ! ಆಯಾ ಜನಾಂಗ, ಪ್ರದೇಶ, ಭಾಷೆ, ಕಾಲಮಾನದ ಸಂಸ್ಕೃತಿ ಆಚರಣೆಗಳು ಸಾಹಿತ್ಯದಲ್ಲಿ ಬೆರೆತು ವಿಶಿಷ್ಟ ಅರ್ಥ ವಿಸ್ತಾರವನ್ನು ಪಡೆಯುತ್ತ ಮುಂದಿನ ಜನಾಂಗಕ್ಕೆ ದಾರಿದೀವಿಗೆಯಂತೆ ಮಾರ್ಗದರ್ಶಕವಾಗುತ್ತವೆ. ಗದ್ಯ, ಪದ್ಯ ಸಾಹಿತ್ಯದ ಯಾವುದೇ ಪ್ರಕಾರಗಳಲ್ಲಿ ಜನಜೀವನದ ಸೊಗಡು ತುಂಬಿರುವುದು ಸಹಜವೆ! ಗದ್ಯದಲ್ಲಿ ವಿವರ ವಿಸ್ತಾರವಿದ್ದರೆ, ಕಾವ್ಯದಲ್ಲಿ ಸಂಕ್ಷಿಪ್ತತೆಯೇ ವಿಶೇಷ! ಕಿರಿದರಲ್ಲಿ ಹಿರಿದರ್ಥವನ್ನು ಹಿಡಿದಿಟ್ಟು 'ಕರಿಯು ಕನ್ನಡಿಯೊಳಡಗಿದಂತೆ' ಚಿಂತನೆ ವಿಚಾರ ಕ್ರಮಗಳನ್ನು ಅಭಿವ್ಯಕ್ತಗೊಳಿಸುವ ಸಾಧನವೇ ಗಾದೆಗಳು. ಗಾದೆಗಳು ಜನರ ಜೀವನಾಡಿಗಳು. ಜೀವನಾನುಭವದ ಪ್ರತಿಧ್ವನಿಗಳು. "ಗಾದೆ ಒಂದು ಜನಾಂಗದ ನಿತ್ಯಮಾತಿನ ಅಂಗ. ಜನತೆಯ ಬದುಕು ಗಾದೆಗಳಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿದೆ. ಕಿರಿದರಲ್ಲಿ ಹಿರಿದಾದ ಅರ್ಥ ತುಂಬಿದ ಗಾದೆಗಳು ಜನಾನುಭವದ ಸರ್ವಾದರಣೀಯ ಹರಳುಗಳಂತೆ ಕಾಣಿಸಿಕೊಳ್ಳುತ್ತವೆ. ಗಾದೆಗಳಲ್ಲಿ ಬದುಕಿನ ಹಲವು ಮುಖಗಳು ಚಿತ್ರಿತವಾಗಿರುವುದರಿಂದ ಅವುಗಳಿಗೆ ಸಾರ್ವತ್ರಿಕ ಮುದ್ರೆ ಬಿದ್ದಿರುತ್ತದೆ."[೨]

ವೇದಗಳಿಗಿಂತಲೂ ಗಾದೆಗಳಿಗೆ ಮನ್ನಣೆ, ಮೌಲ್ಯ ಹೆಚ್ಚು. ಕಾರಣ ಅನಂತ ಕಾಲದ ಜನರ ಜೀವನಾನುಭವಗಳು ಹೆಪ್ಪುಗಟ್ಟಿ ರಸವತ್ತತೆಯನ್ನು, ಅರ್ಥಪಾರಮ್ಯವನ್ನೊಳಗೊಂಡ ಗಾದೆಗಳು ಸರಳ ರಚನೆಗಳು. ಕಾವ್ಯಬಂಧದ ಬಿಗಿ ಚೌಕಟ್ಟಿಗೆ ಸಿಲುಕದ ಆಡುನುಡಿಯ ರಸಘಟ್ಟಿಗಳು.

ಜನಪದ ಜೀವನದ ಆಚರಣೆ, ರೂಢಿ, ಅನುಭವಗಳ ಸಾರಸಂಗ್ರಹದ ಅಭಿವ್ಯಕ್ತಿ ಗಾದೆಗಳು, ಸರಳತೆ, ಸಂಕ್ಷಿಪ್ತೆ, ನಾವಿನ್ಯತೆ ಅದರ ಲಕ್ಷಣಗಳು. ಗಾದೆಗಳು ಸಾಹಿತ್ಯದಲ್ಲಿ ಬಳಕೆಗೊಂಡಾಗ ಆಡುನುಡಿಯ ಲಯ ಪ್ರಾಪ್ತವಾಗಿ ಅರ್ಥವಿಸ್ತಾರ ಹೆಚ್ಚುತ್ತದೆ. ಇಹಪರಗಳ ಸಮನ್ವಯವನ್ನು ಸಾಧಿಸಿದ ಶರಣರು ಕೆಡುಕನ್ನು ಖಂಡಿಸಿ, ಒಳಿತನ್ನು ಪುರಸ್ಕರಿಸಿ ಸಂಸಾರದಿಂದ ಸದ್ಗತಿಯ ಮಾರ್ಗವನ್ನು ಅನುಸರಿದರು. ಆ ಪಥದಲ್ಲಿ ಆಡುನುಡಿ, ವಾಸ್ತವಿಕ ಸಂಗತಿಗಳನ್ನು ಆಧಾರವಾಗಿಟ್ಟು ಕೊಂಡು ರಚಿತವಾದ ವಚನ ಸಾಹಿತ್ಯ ಸಾಮಾಜಿಕ ಆಧ್ಯಾತ್ಮಿಕ ಚಿಂತನೆಗಳನ್ನು ಜನಭಾಷೆಯಲ್ಲಿ ಬಿತ್ತರಿಸಲು ಜೀವನಾನುಭವಗಳನ್ನು ಸರಳಶೈಲಿ, ನೇರನುಡಿಗಳಲ್ಲಿ ನಿರೂಪಿಸಿದರು. ಗಾದೆ, ನಾಣ್ಣುಡಿ, ಲೋಕೋಕ್ತಿಗಳನ್ನು ಧಾರಾಳವಾಗಿ ಉಪಯೋಗಿಸಿ ಸಾಹಿತ್ಯ ಸಾಮಾನ್ಯರಿಗಾಗಿ, ಸಮಾಜ ಸುಧಾರಣೆಗಾಗಿ, ಅಂತರಂಗ ಬಹಿರಂಗಗಳ ಶುದ್ಧಿಗಾಗಿ ಎಂಬ ಹೊಸ ಪರಿಕಲ್ಪನೆಯನ್ನು ಸಾಧಿಸಿ ತೋರಿಸಿದರು.

ಬಸವಾದಿ ಶಿವಶರಣರ, ವಚನಕಾರರ, ಸಮಾಜೋಧಾರ್ಮಿಕ ಚಳುವಳಿ ಅದೊಂದು ರೀತಿಯ ಕನ್ನಡ ಭಾಷೆಯ ಚಳುವಳಿಯೆ! ತಮ್ಮ ಭಾವನೆಗಳ ಅಭಿವ್ಯಕ್ತಿಗೆ ಮಾರ್ಗ ಸಂಪ್ರದಾಯದ ಸಿದ್ಧ ಶೈಲಿಯನ್ನು ತಿರಸ್ಕರಿಸಿ ತಿರುಳಗನ್ನಡ, ನಡುಗನ್ನಡದ ಸರಳಭಾಷಾ ಮಾರ್ಗವನ್ನು ಆವಿಷ್ಕರಿಸಿ ಪುರಷ್ಕರಿಸಿ, ಅಮೂರ್ತ ಭಾವಗಳನ್ನು, ಉದಾತ್ತ ಧ್ಯೇಯ ದೃಷ್ಟಿಗಳನ್ನು, ವ್ಯಷ್ಟಿ ಸಮಷ್ಟಿಗಳ ಶುದ್ಧಿಗಾಗಿ ಭಾಷೆಯನ್ನು ಸರಳೀಕರಿಸಿದುದು ವಚನಕಾರರ ಹೆಗ್ಗಳಿಕೆ. ಅದರ ಫಲಶೃತಿಯಾಗಿಯೇ ವಚನಗಳಲ್ಲಿ ಆಡುನುಡಿಯ ಕೃಷಿಗೈದ ವಚನಕಾರರು ನಿತ್ಯನೂತನವಾದ ವಚನವಾರಿಧಿಯನ್ನು ಸೃಷ್ಟಿಸಿದರು. ವಚನವಾಙ್ಮಯ ಅನುಭಾವದೆತ್ತರ ಪಡೆದು ಕನ್ನಡ ಭಾಷೆಗೆ ಉದಾತ್ತತೆ ಪ್ರಾಪ್ತವಾಯಿತು. ಕನ್ನಡ ಭಾಷೆಯ ಜಾಯಮಾನವನ್ನರಿತ ವಚನಕಾರರು ವ್ಯಕ್ತಿ, ಸಮಾಜ, ಧರ್ಮ, ಸಮಗ್ರ ಚಿಂತನೆಗಳನ್ನು ಜನಸಾಮಾನ್ಯರ ಸ್ವತ್ತಾಗುವಂತೆ ಪ್ರಯತ್ನಿಸಿದರು. ಈ ಕಾಲದ ಕನ್ನಡದ ಮೊದಲ ವಚನಕಾರ್ತಿಯಾದ ಅಕ್ಕಮಹಾದೇವಿ ಭಾಷೆಯ ಸಿದ್ಧ ಸಂಪ್ರದಾಯವನ್ನು ಮುರಿದು ಸಹಜ ಅಭಿವ್ಯಕ್ತಿಗೆ, ದಿವ್ಯಾನುಭವಗಳನ್ನು ನಿರೂಪಿಸಲು ನಾಣ್ಣುಡಿ, ಗಾದೆಗಳನ್ನು ಉಪಯೋಗಿಸಿ ವಚನಕ್ಕೆ ಮೆರುಗನ್ನು, ಅರ್ಥವಲಯದ ವಿಸ್ತಾರವನ್ನು ಹೆಚ್ಚಿಸಿದ್ದಾಳೆ. ಲೋಕಾನುಭವವನ್ನೇ ತನ್ನ ಸೃಷ್ಟ್ಯಾತ್ಮಕ ಉದ್ದೇಶಕ್ಕಾಗಿ ಭಾಷೆಯನ್ನು ಪರಿಸ್ಕರಿಸಿ ವಚನಗಳಲ್ಲಿ ನಾದ, ಲಯ, ಪ್ರಾಸಗಳ ಸಮನ್ವಯಗಳ ನಡೆಯನ್ನು ಮೇಳವಿಸಿದ್ದಾಳೆ.

ವ್ಯಕ್ತಿಗತ ಅನುಭವಗಳ ಅಭಿವ್ಯಕ್ತಿಯ ನೆಲೆಯಲ್ಲೇ ಸಮಾಜೋಭಾಷಿಕ ಅನನ್ಯತೆಯನ್ನು ಅಕ್ಕಮಹಾದೇವಿ ಸಾಧಿಸಿದ್ದಾಳೆ. ಪ್ರಾದೇಶಿಕ ಭಾಷೆಯನ್ನು ಸಂಸ್ಕೃತಿಯನ್ನು, ಸಾಮಾಜಿಕ ಹಿನ್ನೆಲೆಯುಳ್ಳ ಅನುಭವಗಳನ್ನು ಸರಳವಾಗಿ ಎತ್ತಿಕೊಂಡು ತನ್ನ ವಚನಭಾಷೆಯಲ್ಲಿ ಕಾವ್ಯಾತ್ಮಕ ರೀತಿಯಲ್ಲಿ

ಅಣಿಗೊಳಿಸಿಕೊಂಡು ಭಾಷೆ ಮತ್ತು ಭಾವ ಅಪ್ಯಾಯಮಾನಗೊಳ್ಳುವಂತೆ ಮಾಡಿರುವುದು ಅಕ್ಕನ ಭಾಷಾ ಪ್ರೌಢಿಮೆಯನ್ನು ಪ್ರಕಟಿಸುತ್ತದೆ.

ಅಕ್ಕನ ವಚನಗಳಲ್ಲಿರುವ ಗಾದೆಗಳು ಮತ್ತು ನುಡಿಗಟ್ಟುಗಳು

೧. "ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ."(೪೦೭)

೨. "ಹಾಲ ಹಿಡಿದು ಬೆಣ್ಣೆಯನರಸಲುಂಟೆ?"(೪೧೭)

೩. "ಬಂಜೆ ಬೇನೆಯನರಿಯಳು ಬಲದಾಯಿ ಮುದ್ದು ಬಲ್ಲಳೆ?"(೨೯೦)

೪. "ಬಲ್ಲಿದನ ಹಗೆಹ ತೆಗೆವನ್ನಬರ ಬಡವನ ಹರಣ ಹಾರಿ ಹೋದಂತೆ."(೨೯೫)

೫. "ಅರಲುಗೊಂಡ ಕೆರೆಗೆ ತೊರೆಬಂದು ಹಾಯ್ದಂತೆ, ಬರಲುಗೊಂಡ ಸಸಿಗೆ ಮಳೆ ಸುರಿದಂತೆ."(೩೯)

೬. "ಕಟ್ಟಿದ ಕೆರೆಗೆ ಕೋಡಿ ಮಾಣದು, ಹುಟ್ಟಿದ ಪ್ರಾಣಿಗೆ ಪ್ರಳಯ ತಪ್ಪದು."(೧೪೦)

೭. "ಆವ ವಿದ್ಯೆ ಕಲಿತಡೇನು? ಸಾವ ವಿದ್ಯೆ ಬೆನ್ನಬಿಡದು."(೬೬)

೮. "ಲೋಕದ ಚೇಷ್ಟೆಗೆ ರವಿ ಬೀಜವಾದಂತೆ, ಕರಣಂಗಳ ಚೇಷ್ಟೆಗೆ ಮನವೇ ಬೀಜ."(೩೬೧)

೯. "ತನ್ನ ನೂಲು ತನ್ನನೆ ಸುತ್ತಿ ಸಾವಂತೆ."(೨೩೮)

೧೦. "ಹಿಂದಣ ಹಳ್ಳ ಮುಂದಣ ಕೆರೆ ಸಲ್ಲುವ ಪರಿಯೆಂತು?"(೪೨೧)

೧೧. "ಅಕ್ಕಿಯಿಲ್ಲದ ತುಷಕ್ಕೆ ಅಗ್ಗವಣಿಯನೆರೆದಡೆ."(೧೪)

೧೨. "ಹೊರೆದ ಪರಿಮಳ ಸ್ಥಿರವಾಗಬಲ್ಲುದೆ?"(೧೪)

೧೩. "ಅಮೃತವನುಂಬ ಶಿಶುವಿಂಗೆ ವಿಷವನೂಡುವರೆ?"(೨೨)

೧೪. "ಶಿವಂಗೆ ತಾಯಿಯಿಲ್ಲ, ಭುವನಕ್ಕೆ ಬೆಲೆಯಿಲ್ಲ ತರು ಗಿರಿ ಗಹ್ವರಕ್ಕೆ ಮನೆಯಿಲ್ಲ."(೩೬)

೧೫. "ಅರಿಯದವರೊಡನೆ ಸಂಗವ ಮಾಡಿದಡೆ ಕಲ್ಲು ಹೊಯ್ದು ಕಿಡಿಯ ತೆಗೆದುಕೊಂಬಂತೆ."(೪೩)

೧೬. "ಬಲ್ಲವರೊಡನೆ ಸಂಗವ ಮಾಡಿದಡೆ ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ."(೪೩)

೧೭. "ಶರಣರ ಸಂಗ ಕರ್ಪುರದ ಗಿರಿಯನುರಿಕೊಂಬಂತೆ."(೪೩)

೧೮. "ಮರೀಚಿಕಾಜಲದೊಳಡಗಿದ ಪ್ರಾಣಿ ವ್ಯಾಧನ ಬಲೆಯೊಳಗಹುದೆ?"(೪೯)

೧೯. "ಮಿಕ್ಕಿನ ಗಂಡರೆಲ್ಲ ಮುಗಿಲ ಮರೆಯ ಬೊಂಬೆಯಂತೆ."(೨೨)

೨೦. "ಉಣಲೆಂದು ಬಂದ ಸುಖ ಉಂಡಲ್ಲದೆ ಹರಿಯದು ಕಾಣಲೆಂದು ಬಂದ ದುಃಖ ಕಂಡಲ್ಲದೆ ಹರಿಯದು."(೮೦)

೨೧. "ಉಸುರಿನ ಪರಿಮಳವಿರಲು ಕುಸುಮದ ಹಂಗೇಕಯ್ಯಾ?"(೮೭)

೨೨. "ಬಿಲ್ವ ಬೆಳವಲಕಾಯನೊಂದಾಗಿ ಹಿಡಿಯಬಹುದೆ?"(೮೯)

೨೩. "ಊರ ಸೀರೆಗೆ ಅಸಗ ತಡಬಡಗೊಂಬಂತೆ."(೯೩)

೨೪. "ಬೆರಳು ತಾಳಹಣ್ಣ ಹಿಸುಕಿದಡೆ ಮೆಲಲುಂಟೆ?"(೯೪)

೨೫. "ಚಿನ್ನದೊಳಗಣ ಬಣ್ಣದಂತೆ."(೯೯)

೨೬. "ಎಮ್ಮೆಗೊಂದು ಚಿಂತೆ ಸಮಗಾರಗೊಂದು ಚಿಂತೆ."(೧೦೮)

೨೭. "ಅರಸಿ ತೊಳಲಿದರಿಲ್ಲ, ಹರಸಿ ಬಳಲಿದಡಿಲ್ಲ."(೪೦)

೨೮. "ಶರಣರು ಮೆಟ್ಟಿದ ಧರೆ ಪಾವನವಯ್ಯಾ."(೩೧)

೨೯. "ಈವಂಗವಗುಣವಿಲ್ಲ, ಕರುಣವುಳ್ಳವಂಗೆ ಪಾಪವಿಲ್ಲ."(೧೧೯)

೩೦. "ಸಿಂಹದ ಮರಿಯ ಸೀಳ್ನಾಯಿ ತಿಂಬಡೆ."(೧೨೬)

೩೧. "ಕಟಿಹಾದ ಬಿದಿರಿನಲ್ಲಿ ಮರಳಿ ಕಳಲೆ ಮೂಡಬಲ್ಲುದೆ? ಸುಟ್ಟ ಮಡಕೆ ಮುನ್ನಿನಂತೆ ಮರಳಿ ಧರೆಯನಪ್ಪಬಲ್ಲುದೆ?

ತೊಟ್ಟ ಬಿಟ್ಟು ಬಿದ್ದ ಹಣ್ಣು ಮರಳಿ ತೊಟ್ಟನಪ್ಪಬಲ್ಲುದೆ?"(೧೩೯)

೩೨. "ಕಡೆಗೆ ಮಾಡದ ಭಕ್ತಿ ದೃಢವಿಲ್ಲದಾಳುತನ."(೧೪೧)

೩೩. "ಕರುವಿನ ರೂಹು ಅರಗಿಳಿಯನೋದಿಸುವಂತೆ."(೧೪೬)

೩೪. "ಮೊರೆದು ಬೀಸುವ ಗಾಳಿ ಪರಿಮಳವನುಂಡಂತೆ"(೧೪೯)

"ಕಲ್ಲ ತಾಗಿದ ಮಿಟ್ಟೆ ಕೆಲಕ್ಕೆ ಸಾರುವಂತೆ."(೧೪೯)

೩೫. "ಕಲ್ಲ ಹೊತ್ತು ಕಡಲೊಳಗೆ ಮುಳುಗಿದಡೆ."(೧೫೩)

೩೬. ಕಳನೇರಿ ಇಳಿಯುವುದು ವೀರಂಗೆ ಮತವಲ್ಲ ಶಿವಶರಣಂಗೆ ಹಿಮ್ಮೆಟ್ಟುವುದು ಪಥವಲ್ಲ."(೧೫೪)

೩೭. "ಕೆಂಡದ ಶವದಂತೆ, ಸೂತ್ರತಪ್ಪಿದ ಬೊಂಬೆಯಂತೆ."(೧೭೮)

೩೮. "ಕೆಚ್ಚಿಲ್ಲದ ಮರನಕ್ರಿಮಿ ಇಂಬುಗೊಂಬಂತೆ ಒಡೆಯನಿಲ್ಲದ ಮನೆಯ ಶುನಕ ಸಂಚು ಗೊಂಬಂತೆ."(೧೭೯)

೩೯. "ಕೆತ್ತಿದ ತಿಗುಡು ಹತ್ತುದೆ ಮುನ್ನಿನಂತೆ?(೧೮೧)

೪೦. "ರಿಣ ತಪ್ಪಿದಲ್ಲಿ ಗುಣವನರಸುವರೆ?"(೧೮೧)

೪೧. "ಕೈಯ ಧನವ ಕೊಂಡಡೆ ಮೈಯ ಭಾಷೆಯ ಕೊಳಬಹುದೆ?"(೧೮೪)

೪೨. "ಕೈಸಿರಿಯ ದಂಡವ ಕೊಳಬಹುದಲ್ಲದೆ, ಮೈಸಿರಿಯ ದಂಡವ ಕೊಳಲುಂಟೆ?"(೧೮೬)

೪೩. "ಕೊಳಲದನಿಗೆ ಸರ್ಪ ತಲೆದೂಗಿದಡೇನು?"(೧೮೭)

೪೪. "ಕೋಲ ತುದಿಯ ಕೋಡಗದಂತೆ, ನೇಣ ತುದಿಯ ಬೊಂಬೆಯಂತೆ."(೧೮೮)

೪೫. "ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ ಕಡೆಯಲಿದ್ದಾಡುವ ಹದ್ದುಬಲ್ಲುದೆ?"(೧೯೪)

೪೬. " ಗಿರಿಯಲಲ್ಲದೆ ಹುಲ್ಲು ಮೊರಡಿಯಲ್ಲಾಡುವುದೆ ನವಿಲು?"(೧೯೬)

೪೭. "ಗೂಗೆ ಕಣ್ಣ ಕಾಣಲರಿಯದೆ ರವಿಯ ಬಯ್ವುದು, ಕಾಗೆ ಕಣ್ಣ ಕಾಣಲರಿಯದೆ ಶಶಿಯ ಬಯ್ವುದು."(೨೦೪)

೪೮. "ಬೊಬ್ಬುಲಿಯನೇರಿದ ಮರ್ಕಟನಂತೆ."(೨೩೧)

೪೯. "ತುಂಬಿದುದು ತುಳುಕದು, ನಂಬಿದುದು ಸಂದೇಹಿಸದು."(೨೩೭)

೫೦. "ನಡೆಯದ ನುಡಿಗಡಣ, ಮಾಡದ ಕಲಿತನ."(೨೪೮)

೫೧. "ಎಲೆಯಿಲ್ಲದ ಮರನು, ಜಲವಿಲ್ಲದ ನದಿಯು."(೨೪೮)

೫೨. "ನೀರಕ್ಷೀರದಂತೆ ನೀನಿಪ್ಪೆ."(೨೬೭)

೫೩. "ತುಂಬಿ ಪರಿಮಳವ ಕೊಂಡು ಲಂಬಿಸುವ ತೆರನಂತೆ."(೨೭೪)

೫೪. "ತಕ್ಕೆ ಸಡಲಿದ ಜಕ್ಕವಕ್ಕಿಯಂತೆ."(೨೯೧)

೫೫. "ಎಮ್ಮೆ ಗಾಳಿಗೆ ಹಾರಿ ಹೋದ ತೆರನಂತೆ."(೨೯೫)

೫೬. "ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯಾ?"(೩೦೭)

೫೭. "ಮಧ್ಯಾಹ್ನದಿಂದ ಮೇಲೆ ಹಿರಿಯರಿಲ್ಲ ಅಸ್ತಮಾನದಿಂದ ಮೇಲೆ ಜಿತೇಂದ್ರಿಯರಿಲ್ಲ."(೩೨೩)

೫೮. "ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ?"(೩೩೦)

೫೯. "ಮತ್ತು ಒಡೆದಡೆ ಬೆಸೆಯಬಹುದೆ? ಮನ ಮುರಿದಡೆ ಸಂತಕ್ಕೆ ತರಬಹುದೆ?"(೩೪೦)

೬೦. "ಭಾಷೆಗೆ ತಪ್ಪಿದರೆ ಮುಳ್ಳುಮೊನೆಯ ಕಿಚ್ಚಿನಂತೆ." (೩೪೦)

೬೧. "ರತ್ನದ ಸಂಕೋಲೆಯಾದಡೆ ತೊಡರಲ್ಲವೆ? ಮುತ್ತಿನ ಬಲೆಯಾದಡೆ ಬಂಧನವಲ್ಲವೆ?"(೩೪೮)

೬೨. "ಬೆಂದನುಲಿಯಂತೆ, ನೀರತಾವರೆಯಂತೆ."(೩೬೨)

೬೩. "ತಾಯಿನೊಂದಡೆ ಒಡಲಶಿಶು ನೋವತೆರನಂತೆ."(೩೭೭)

೬೪. "ಹೊಳ್ಳ ಬಿತ್ತಿ ಫಲವನರಸುವಂತೆ."(೩೮೭)

೬೫. "ಸತ್ತ ಹೆಣ ಕೂಗಿದುದುಂಟು, ಬೈಚಿಟ್ಟ ಬಯಕೆ ಕರೆದುದುಂಟು."(೩೮೯)

೬೬. "ಕಿಚ್ಚಿನೊಳಗೆ ಬಿದ್ದ ಕೀಡೆಯಂತೆ."(೩೯೦)

೬೭. "ಸರ್ಪನ ಬಾಯ ಕಪ್ಪೆ ನೊಣಕ್ಕೆ ಹಾರುವಂತೆ."(೩೯೫)

೬೮. "ಹಣ್ಣ ಮೆದ್ದ ಬಳಿಕ ಆ ಮರನನಾರು ತರಿದರೇನು?(೪೧೦)

೬೯. "ಹಾಲು ತುಪ್ಪವ ನುಂಗಿ ಬೇರಾಗಬಲ್ಲುದೆ?"(೪೧೮)

೭೦. "ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು."(೪೨೬)

೭೧. "ಹೂವು ಕಂದಿದಲ್ಲಿ ಪರಿಮಳವನರಸುವರೆ? ಕಂದನಲ್ಲಿ ಕುಂದನರಸುವರೆ?"(೪೨೮)

೭೨. "ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ ಗಂಡು ಗಂಡಾದಡೆ ಹೆಣ್ಣಿನ ಸೂತಕ."(೪೨೯)

೭೩. "ಹೊನ್ನು ಮುರಿದಡೆ ಬೆಸೆಯಬಹುದಲ್ಲದೆ, ಮುತ್ತು ಒಡೆದಡೆ ಬೆಸಸಬಹುದೆ?"(೪೩೧)

೭೪. "ಕಾಮಧೇನು ಕರೆವಡೆ ಕರುವಿನ ಹಂಗೇಕೆ?"(೨೦೮)

೭೫. "ಪುಷ್ಪದ ಪರಿಮಳ ತುಂಬಿ ಬಲ್ಲುದಲ್ಲದೆ ಕಡೆಯಲಿದ್ದಾಡುವ ನೊರಜು ಬಲ್ಲುದೆ?"(೧೯೪)

೭೬. "ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲಡೆ ಹಾವಿನ ಸಂಗವೇ ಲೇಸು!"(೪೧೯)

೭೭. "ನೆಲ ತಳವಾರನಾದಡೆ ಕಳ್ಳನೆಲ್ಲಿಗೆ ಹೋಹನು?"(೬೬)

೭೮. "ಕತ್ತಲೆಯ ಪಾಳಯವ ರವಿ ಹೊಕ್ಕಂತಾಯಿತ್ತು."(೩೩೩)

೭೯. "ನಿತ್ಯ ತೃಪ್ತಂಗೆ ನೈವೇದ್ಯದ ಹಂಗೇಕೆ?"(೨೫೯)

೮೦. "ಬೆಳುದಿಂಗಳು ಬಿಸಿಯಾಯಿತ್ತು"(೧೫೫)

೮೧. "ಕರ್ಮವೆಂಬ ಕದಳಿಯೆನಗೆ ಕಾಯವೆಂಬ ಕದಳಿ ನಿನಗೆ."(೧೪೨)"[೯೩]

ಬಸವಾದಿ ಶರಣರಂತೆ, ಅಕ್ಕಮಹಾದೇವಿ ಅಂದು ಪ್ರಚಲಿತವಿದ್ದ ಜನಪದ ಸಂಸ್ಕೃತಿಯ, ಭಾಷೆ, ದೇಶಿಯ ನೆಲೆಯ ಗಾದೆಗಳು, ನುಡಿಗಡಣಗಳು ದೇಶಿಬಂಧಗಳನ್ನು ಬಳಸುತ್ತ ವಚನಗಳ ಭಾವ ಭಾಷೆಗೆ ಪೂರಕವಾಗುವ ವಚನ ನುಡಿಗಟ್ಟುಗಳನ್ನು ಸೃಷ್ಟಿಸಿ ಕನ್ನಡ ಭಾಷೆಯ, ಸಾಹಿತ್ಯ ಶ್ರೀಮಂತಿಕೆಯನ್ನು ಹೆಚ್ಚಿಸಿರುವಳು. ತನ್ನ ಭಾವಾಭಿವ್ಯಕ್ತಿಗೆ, ಅರ್ಥಪುಷ್ಟಿಗೆ ಪೂರಕವಾಗಿ ಸಾಂದರ್ಭಿಕವಾಗಿ ಗಾದೆಗಳು, ಲೋಕೋಕ್ತಿ ಆಡುನುಡಿಯ ಬಂಧಗಳು, ವಚನ ನುಡಿಗಟ್ಟುಗಳನ್ನು ಉಪಯೋಗಿಸಿ ವಚನಗಳ ಭಾಷಿಕ ಹಾಗೂ ಅನುಭವಿಕ ಅಭಿವ್ಯಕ್ತಿಗೆ ಹೆಚ್ಚಿನ ಭಾವದೀಪ್ತಿಯನ್ನು ತಂದುಕೊಂಡಿದ್ದಾಳೆ. ಅಕ್ಕನ ಭಾಷಾ ಸೃಷ್ಟ್ಯಾತ್ಮಕ ಪ್ರತಿಭಾಶಕ್ತಿ ಅದ್ಭುತವಾದುದು. ಉಳಿದೆಲ್ಲ ವಚನಕಾರರಿಗಿಂತ ಅಕ್ಕನ ವಚನಗಳ ಭಾಷೆ ಕಾವಾತ್ಮಕ, ಲಕ್ಷಣಗಳನ್ನೊಳಗೊಂಡು ಮಧುರಭಾವ

ನಿರೂಪಣೆ, ಬಂಡಾಯದ ಶಕ್ತಿಸಂಚಲನವನ್ನುಂಟು ಮಾಡುತ್ತದೆ. ಸರಳತೆಯಲ್ಲಿ ಸಹಜವಾಗಿ ಅಭಿವ್ಯಕ್ತಗೊಂಡಿದ್ದರೂ, ವಚನಗಳು ಹೆಚ್ಚಾಗಿ ಕಾವ್ಯದ ಗುಣಗಳನ್ನು ಕಳೆದುಕೊಂಡು ವಾಚ್ಯಾರ್ಥಗಳಾಗದಂತೆ ಪ್ರಜ್ಞಾಪೂರ್ವಕ ಭಾಷೆಯನ್ನು ಅಕ್ಕಮಹಾದೇವಿ ಸೃಷ್ಟಿಸಿಕೊಂಡು ವಚನಕಾರರಲ್ಲೆ ವಿಶಿಷ್ಟ ಅಭಿವ್ಯಕ್ತಿಯನ್ನು ಪ್ರತಿನಿಧಿಸುತ್ತಾಳೆ.

ಬೈಗುಳಗಳ ರಚನೆ, ಅರ್ಥವಿನ್ಯಾಸ

ಬೈಗುಳಗಳು ಸಮಾಜೋಭಾಷಿಕ ಹಿನ್ನೆಲೆಯ ಅವಿಭಾಜ್ಯ ಘಟಕಗಳು. ಸಾಮಾಜಿಕ, ನೈತಿಕ, ಧಾರ್ಮಿಕ, ರೂಢಿಗತ ಸಾಮಾಜಿಕ ನಿಯಮಗಳನ್ನು ಪಾಲಿಸದ ಜನರನ್ನು, ಅವರ ನಡವಳಿಕೆಗಳನ್ನು ಖಂಡಿಸಲು, ವಿಡಂಬಿಸಲು, ಬೈಗುಳಗಳ ರಚನೆ ನಿರಂತರವಾಗಿ ನಡೆಯುತ್ತ ಬಂದಿರುವ ಪ್ರಕ್ರಿಯೆಯಾಗಿದೆ. ಸಮಾಜದಲ್ಲಿನ ಅನ್ಯೆತಿಕತೆಯನ್ನು ಪ್ರತಿಭಟಿಸಲು ಹುಟ್ಟಿಕೊಂಡಿರುವ ಬೈಗುಳಗಳ ಉದ್ದೇಶ ಕೇವಲ ವಿಡಂಬನೆ ಖಂಡನೆಯಷ್ಟೇ ಅಲ್ಲದೆ, ಅನಾಚಾರದಲ್ಲಿ ಕ್ರಮಿಸುವವರನ್ನು ನೈತಿಕ ನೆಲೆಗಟ್ಟಿಗೆ ತರುವ ಪ್ರತ್ಯಕ್ಷ ಪರೋಕ್ಷ ಪ್ರಯತ್ನಗಳನ್ನು ಒಳಗೊಂಡಿದೆ.

ಸಮಾಜದಲ್ಲಿರುವ ಜನಮನ ವೈವಿಧ್ಯಮಯವಾಗಿರುವುದರಿಂದ ಅವರ ನಡವಳಿಕೆಗಳು ವಿಭಿನ್ನವಾಗಿರುವುದು ಸಹಜ ಮತ್ತು ಅಪೇಕ್ಷಣೀಯವಾದವುಗಳು! ಕ್ಷಣಿಕ ಪ್ರಲೋಭನೆ, ದ್ರಾಷ್ಟ್ಯ, ಸ್ವಾರ್ಥ, ದ್ವೇಷ, ಅನ್ಯೆತಿಕತೆ, ಮೊದಲಾದ ಸಮಾಜದ ಹಿತ, ಶಾಂತಿ, ಸಹಬಾಳ್ವೆಗೆ ಧಾರ್ಮಿಕ, ನೈತಿಕ ವಿಚಾರಗಳ ಆಚರಣೆಗಳಿಗೆ ಭಂಗ ಬಂದಾಗ ಅಂತಹ ಸ್ಥಿತಿ ನಿರ್ಮಾಣಗೊಂಡಾಗ 'ಬೈದು ಬುದ್ಧಿ ಹೇಳುವ' ಹೊಣೆ ಪ್ರಜ್ಞಾವಂತರು, ಸಂತರು, ಮಹಾಂತರು, ಗುರುಹಿರಿಯರ ಮೇಲೆ ಇರುವುದರಿಂದ ಆಯಾ ಕಾಲಮಾನ, ಸನ್ನಿವೇಶ, ಪ್ರಾದೇಶಿಕತೆ ಸಾಮಾಜಿಕ ನೆಲೆಯಲ್ಲಿ ವೈವಿಧ್ಯಮಯ ಬೈಗುಳಗಳ ರಚನೆ ವಿನ್ಯಾಸಗೊಂಡು ಕಾಲಕ್ರಮೇಣ ಮುಂದುವರಿಯುತ್ತ ಸಾಮಾಜಿಕ ಒಪ್ಪಿಗೆಯನ್ನು ಪಡೆದುಕೊಳ್ಳುತ್ತವೆ.

ಬೈಗುಳಗಳ ರಚನೆ ಸಮಾಜದಲ್ಲಿ ರೂಢಿಗತವಾಗಿ ಬಂದಿರುವುದು ಒಂದು ಬಗೆಯಾದರೆ, ಆಯಾ ಸನ್ನಿವೇಶಕ್ಕೆ ತಕ್ಕಂತೆ ಹೊಸರೂಪು ಪಡೆದುಕೊಂಡ ರಚನೆಗಳೂ ಆಗಿರುತ್ತವೆ. ಇಲ್ಲವೆ ಸಂಪೂರ್ಣವಾಗಿ ನಾವಿನ್ಯವಾಗಿ ಹುಟ್ಟಿಕೊಂಡ ವಿನ್ಯಾಸಗಳು ಆಗುತ್ತ ನಿರಂತರ ಸಮಾಜ ಹಾಗೂ ಭಾಷಾ ಬದಲಾವಣೆಗೆ ತಕ್ಕಂತೆ ವಿಭಿನ್ನರೂಪ ಪಡೆಯುತ್ತ ಅಸ್ತಿತ್ವ ಪಡೆದುಕೊಂಡಿವೆ. ಸಮಾಜದಲ್ಲಿನ ಶೋಷಣೆ, ಅನ್ಯಾಯಗಳನ್ನು ಪ್ರತಿಭಟಿಸಲು ವ್ಯಕ್ತಿಗತ ಮತ್ತು ಸಾಮಾಜಿಕ ಸ್ವಾಸ್ಥ್ಯವನ್ನು ರಕ್ಷಿಸುವ ಕಾಳಜಿಪರವಾದ ಬೈಗುಳಗಳು ಮಾನವನ ಭಾಷಾ ಪ್ರಕ್ರಿಯೆಯಲ್ಲಿ ರಚಿತಗೊಳ್ಳುತ್ತಲೇ ಇವೆ. ದ್ವೇಷ, ವೈಮನಸ್ಸು, ವಿಡಂಬನೆಗಳಿಗೆ ಸಹ ಬೈಗುಳ ವಿನ್ಯಾಸ ಆಯಾ ಸಾಮಾಜಿಕ ಹಿನ್ನೆಲೆಯಲ್ಲಿ ನಿರಂತರವಾಗಿ ಎಲ್ಲಾ ಭಾಷಾ ಸಮುದಾಯದಲ್ಲಿ ಜರುಗುತ್ತಲಿದೆ.

ಬೈಗುಳಗಳಿಂದ ಸಮಾಜದ ರೂಢಿ, ಅಹಿತಕರ ಸಂಪ್ರದಾಯ ಮೌಢ್ಯ, ಅನಾಚಾರಗಳನ್ನು ಖಂಡಿಸಿ ಸಮಗ್ರ ಸಮಾಜದ ಶಾಂತಿ ಸ್ಥಾಪನೆ ಮತ್ತು ಸಾಮಾಜಿಕ ಪರಿವರ್ತನೆಯನ್ನು ತರಲು ಪ್ರಯತ್ನಿಸಿದ ಬಸವಾದಿ ಶರಣರು ತಮ್ಮ ವಚನಗಳಲ್ಲಿ ಬೈಗುಳಗಳನ್ನು ಹಲವು ನೆಲೆಯಲ್ಲಿ ಪ್ರಯೋಗಿಸಿದ್ದಾರೆ. ಕೆಟ್ಟದರ ವಿಡಂಬನೆ, ಖಂಡನೆಗಾಗಿ ರಚಿತವಾದ, ಬಳಕೆಯಾದ ಬೈಗುಳಗಳ ಹಿನ್ನೆಲೆ, ಉದ್ದೇಶ ಮಾತ್ರ ಹಿತಕರವೆ! ತಮ್ಮ ಸಾತ್ವಿಕ ಸಿಟ್ಟಿನಿಂದ ಸಮಾಜ ಮತ್ತು ವ್ಯಕ್ತಿಗತ ಅನಾಚಾರಗಳನ್ನು ಪ್ರತಿಭಟಿಸಿ ಸಾಮಾಜಿಕ ಪರಿವರ್ತನೆಗಾಗಿ ವಚನಕಾರರು ಹಲವು ಬೈಗುಳಗಳನ್ನು ವಚನಗಳಲ್ಲಿ ಬಳಸಿರುವರು.

ಮನುಷ್ಯನ, ಅಜ್ಞಾನ, ಅನಾಚಾರಗಳಿಗೆ ಪ್ರಾಣಿ, ಸಸ್ಯ ರೂಪಕಗಳನ್ನು ಬಳಸಿದ ಶರಣರು ಮನುಷ್ಯನ ಒಳ, ಹೊರಗಿನ ಮನಸ್ಥಿತಿಯನ್ನು ಖಂಡಿಸಿ ಸತ್ಪಥ ತೋರಿಸಲು, ನೈತಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಭಾಷಿಕ ಮೊದಲಾದ ಹಿನ್ನೆಲೆಯನ್ನು ಶುದ್ಧೀಕರಿಸಲು ಬೈಗುಳಗಳ ಪ್ರಯೋಗ ಮಾಡಿರುವರು. ಈ ಹಿನ್ನೆಲೆಯಲ್ಲಿ ಶರಣರ ಸಮಕಾಲಿನ ಅಕ್ಕಮಹಾದೇವಿಯು ತನ್ನ ವಚನಗಳಲ್ಲಿ ಸಾಂದರ್ಭಿಕವಾಗಿ ಬೈಗುಳಗಳನ್ನು ಬಳಸಿರುವಳು. ಅಂತಹ ಬೈಗುಳಗಳು ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ ಮೊದಲಾದ ಗಣಾಚಾರಕ್ಕೆ ಪ್ರಾಧಾನ್ಯ ನೀಡಿದ ಪುರುಷ ವಚನಕಾರರಿಗಿಂತ, ಬಸವಾದಿ ಶರಣರ ಸಾಮಾಜಿಕ ಪರಿವರ್ತನೆ ಧ್ಯೇಯೋದ್ದೇಶದ ಆಂದೋಲನದಲ್ಲಿ ಭಾಗಿಯಾದ ಇತರ ಶರಣೆಯರು, ವಚನಕಾರ್ತಿಯರಿಗಿಂತ ಮಹಾದೇವಿಯಕ್ಕನ ಬೈಗುಳಗಳ ರಚನೆ, ಪ್ರಮಾಣದಲ್ಲಿ ವ್ಯತ್ಯಾಸವಿದೆ. ವೈಯಕ್ತಿಕ ಸಾಧನೆಯ ಮಾರ್ಗದಲ್ಲಿ ಎದುರಾದ ಸನ್ನಿವೇಶಗಳಿಗೆ ಪ್ರತಿಭಟನೆ, ಪ್ರತಿಕ್ರಿಯಾತ್ಮಕವಾದ ಬೈಗುಳಗಳು ಅಕ್ಕನ ವಚನ ಭಾಷೆಯಲ್ಲಿ ಒಳಗೊಂಡಿವೆ. ಅಂತಹ ಬೈಗುಳಗಳ ಹಿನ್ನೆಲೆ ಇತರ ವಚನಕಾರರಂತೆ ಸಮಾಜದ ಪರಿವರ್ತನೆಯೇ ಪ್ರಧಾನವಾಗಿ ವ್ಯಷ್ಟಿ ಸಮಷ್ಟಿಗಳ ಹಿತ ಕಾಯುವ ಸದುದ್ದೇಶದಿಂದಲೇ ನಿರ್ಮಾಣವಾದಂತಹವುಗಳು. ಅಕ್ಕಮಹಾದೇವಿಯ ವಚನಗಳಲ್ಲಿ ಒಳಗೊಂಡಿರುವ ಬೈಗುಳಗಳನ್ನು ಈ ರೀತಿ ಕ್ರೋಢೀಕರಿಸಲಾಗಿದೆ.

ಅಕ್ಕಮಹಾದೇವಿಯ ವಚನಗಳಲ್ಲಿಯ ಬೈಗುಳಗಳು

೧. ಪ್ರಳಯಜೀವಿಗಳು (ವ.ಸಂ. ೫೧)

೨. ಸೂನೆಗಾರರು (ವ.ಸಂ. ೨೨)

೩. ಮೂಢ ಅಧಮರು (ವ.ಸಂ. ೩೭)

೪. 'ಶ್ವಾನಗರ್ಭದಲ್ಲಿ ಹುಟ್ಟಿಸದೆ ಬಿಡುವನೆ?' (ವ.ಸಂ.೪೪)

೫. 'ಒಲ್ಲೆ ಹೋಗು ಸೆರಗಬಿಡು ಎಲೆ ಮರುಳೆ?' (೧೦೮)

೬. "ಎಲೆ ಕಾಲಂಗೆ ಸೂರೆಯಾದ ಕರ್ಮಿ ಎಲೆ ಕಾಮಂಗೆ ಗುರಿಯಾದ ಮರುಳೆ." (ವ.ಸಂ.೧೧೩)

೭. 'ಗೊಂದಣದ ಕುಲಕೋಟಿಗೆ ನರಕ ಕಾಣಾ.' (೧೨೨)

೮. "ಕಷ್ಟಕರ್ಮಿ ಮನುಜರು ಕಾಣದೆ ಒಂದ ನುಡಿದಡೆ ನಿಷ್ಠೆಯುಳ್ಳ ಶರಣರು ಮರಳಿ ಮರ್ತ್ಯಕ್ಕೆ ಬಪ್ಪರೆ?" (೧೩೯)

೯. "ಕಳನೇರಿ ಕೈದು ಮರೆದಡೆ ಮಾರಂಕ ಚೆನ್ನಮಲ್ಲಿಕಾರ್ಜುನ ನಿಮ್ಮೈಗಾಣಲಿರಿವನು." (೧೫೪)

೧೦. "ನೃಪತಿಯಿಲ್ಲದ ದೇಶವ ಮನ್ನೆಯರಿಂಬುಗೊಂಬಂತೆ." (೧೭೯)

೧೧. "ನಿಮ್ಮ ಶರಣರ ನಿಲವ ನೀವೆ ಬಲ್ಲಿರಲ್ಲದೆ, ಈ ಕೋಣನ ಮೈಮೇಲಣ ಸೊಳ್ಳೆಗಳೆತ್ತ ಬಲ್ಲವಯ್ಯಾ?" (೧೯೪)

೧೨. "ಕುರುಡ ಕಣ್ಣ ಕಾಣಲರಿಯದೆ ಕನ್ನಡಿಯ ಬಯ್ವನು." (೨೦೪)

೧೩. "ಭಕ್ತನಾಗಿರ್ದು ಜೀವ ಹಿಂಸೆ ಮಾಡುವ ಮಾದಿಗರನೇನೆಂಬೆನಯ್ಯಾ?" (೨೧೫)

೧೪. "ತನ್ನಲ್ಲಿರ್ದ ಭಕ್ತಿಯ ಮಾರಿಕೊಂಡುಂಬವರು ನಿಮ್ಮ ನಿಜಭಕ್ತರಲ್ಲವಯ್ಯಾ?" (೨೩೩)

೧೫. "ಅವರಿಚ್ಛೆಯ ನುಡಿದು ತನ್ನುದರವ ಹೊರೆವ ಬಚ್ಚಣಿಗಳ ಮಚ್ಚುವನೆ ಚೆನ್ನ ಮಲ್ಲಿಕಾರ್ಜುನ?" (೨೪೪)

೧೬. "ನೋಡುವ ಕಂಗಳಿಗೆ ರೂಪಿಂಬಾಗಿರಲು ನೀವು ಮನನಾಚದೆ ಬಂದಿರಣ್ಣಾ." (೨೭೧)

೧೭. ಭವಿಯಾಚಾರವ ಬಿಡದೆ ಬಯಾಗರವ ಹೊಗದೆ
ಶಿವಾಚಾರದಲ್ಲಿ ನಡೆವ ನಾಯಿಗಳು ಬರಿದೆ ನಾವು
ಶಿವಾಚಾರಿಗಳೆಂದರೆ ನಮ್ಮ ಶಿವಾಚಾರಿ
ಶರಣ ಬಸವಣ್ಣ ಮೆಚ್ಚ ನೋಡಯ್ಯ." (೩೧೪)

೧೮. "ಮಾಟ ಮದುವೆಯ ಮನೆ,
ಧಾನಧರ್ಮ ಸಂತೆಯ ಪಸಾರ,
ಸಾಜಸಾಜೇಶ್ವರಿ ಸೂಳೆಗೇರಿಯ ಸೊಬಗು,
ವ್ರತನೇಮವೆಂಬುದು ವಂಚನೆಯ ಲುಬ್ಧವಾಣಿ,
ಭಕ್ತಿಯೆಂಬುದು ಬಾಜಿಗಾರರಾಟ." (೩೩೬)

೧೯. "ಹರದನಂತೆ ಹೇಸಿಯಾಗಿರ್ದಡೆ ವಿರಕ್ತನೆ?" (೩೬೮)

೨೦. "ಕಟ್ಟಿದ ಲಿಂಗವ ಕೈಯಲ್ಲಿ ಹಿಡಿದ ಭ್ರಷ್ಟರನೇನೆಂಬೆ." (೩೬೭)

೨೧. "ತನುವಿನ ಮೇಲಣ ಶಿವಲಿಂಗದೇವರು ಹೋಯಿತ್ತೆಂದು ಆತ್ಮಘಾತವ ಮಾಡಿಕೊಂಬ ಬ್ರಹ್ಮೇತಿ ಸೂನೆಗಾರರ ನೋಡಯ್ಯಾ" (೩೭೯)

೨೨. "ಪ್ರಾಣಘಾತಕ ಪಾತಕರಿವರೆತ್ತಲು" (೩೮೩)

೨೩. "ಗುರುಲಿಂಗ ಜಂಗಮದಲ್ಲಿ ಸಟೆಯ ಬಳಸಿದಡೆ ಅವನು ತ್ರಿವಿಧಕ್ಕೆ ದ್ರೋಹಿ, ಅಘೋರ ನರಕಿ." (೩೮೭)

೨೪. "ಹಂದಿಯದು ಕೇಸರಿಯಪ್ಪುದೆ? (೪೦೫)"[೯೪]

ಅಕ್ಕಮಹಾದೇವಿಯ ವಚನಗಳಲ್ಲಿ ಸಂಬೋಧನೆಗಳು, ಬಂಧುತ್ವ ಪರಿಕಲ್ಪನೆ

ಅಕ್ಕಮಹಾದೇವಿ ಲೌಕಿಕ ಕೌಟುಂಬಿಕ ಸಂಬಂಧವನ್ನು ಸಾಮಾಜಿಕ ಒತ್ತಡದ ಹಿನ್ನೆಲೆಯಲ್ಲಿ ಕಳೆದುಕೊಂಡು ಲೋಕ ಸಂಚಾರಿಯಗಿ ಲೋಕೋತ್ತರ ಅನುಭಾವಿಕ ನೆಲೆಯನ್ನು ಕಂಡುಕೊಳ್ಳಲು ಪ್ರಯತ್ನಿಸಿ ಯಶಸ್ವಿಯಾದವಳು. ರಕ್ತ ಸಂಬಂಧಕ್ಕಿಂತ ಸಾಮಾಜಿಕ ಸಂಬಂಧದ ಬಂಧುತ್ವ, ಪ್ರೀತಿ, ಅವಳ ವಚನಗಳಲ್ಲಿ ವ್ಯಕ್ತವಾಗಿವೆ.

ತನ್ನ ಆರಾಧ್ಯದೇವ ಚೆನ್ನಮಲ್ಲಿಕಾರ್ಜುನನ ಹುಡುಕಾಟದಲ್ಲಿ ತನ್ನೊಳಗೆ, ಹೊರಗೆ ನಡೆಸಿರಬಹುದಾದ ಸಂಘರ್ಷದ ಅನುಭವಗಳ ಅಭಿವ್ಯಕ್ತಿಯಲ್ಲಿಯೂ ಆಪ್ತತೆ, ಎದ್ದುತೋರುತ್ತದೆ. "ತನ್ನ ಭಾವನಿವೇದನೆಗೆ ಅಕ್ಕ ಬಳಸುವ ಸಂಬೋಧನೆ ಮುಖ್ಯವಾಗಿ ಮೂರು ನೆಲೆಗಳನ್ನು ಉದ್ದೇಶಿಸಿದಂತೆ ಇದೆ. ಒಂದು ತಾನು ಹುಡುಕಿ ಹೊರಟಿರುವ ಗಂಡ ಚೆನ್ನಮಲ್ಲಿಕಾರ್ಜುನನನ್ನು ಉದ್ದೇಶಿಸಿದ್ದು ಇವನು ಇವಳ ಒಳಗಣ ಗಂಡ. ತನ್ನಿಚ್ಛೆಯ ಕುಲಸೀಮೆ ಇಲ್ಲದ ನಿಸ್ಸೀಮ ಚೆಲುವ. ಇವಳ ವಚನಗಳ ಅಂಕೀತದೈವ. ಎಲ್ಲ ವಚನಗಳಲ್ಲಿ ಅಂಕಿತವಿದ್ದರೂ ಎಲ್ಲ ವಚನಗಳೂ ನೇರವಾಗಿ ಚೆನ್ನಮಲ್ಲಿಕಾರ್ಜುನನನ್ನೇ ಉದ್ದೇಶಿಸಿಲ್ಲ. ಎರಡನೆಯ ಸಂಬೋಧನೆ ತನ್ನಿಚ್ಛೆಯ ಗಂಡನಾದ ಚೆನ್ನಮಲ್ಲಿಕಾರ್ಜುನನನ್ನು ನೀವು ಕಂಡಿರಾ ಎಂದು ವ್ಯಕ್ತಮಧ್ಯದ ಜೀವಜಗತ್ತನ್ನು ಕುರಿತದ್ದು; ಆ ಜೀವಜಗತ್ತು ಮುಖ್ಯವಾಗಿ ಗಿಡಮರ ಗಿರಿಗಹ್ವರ ಗಿಳಿಕೋಗಿಲೆಗಳಿಂದ ಇಡುಕಿರಿದ ಜೀವಜಗತ್ತು. ಜನಸಮೂಹದ ನಡುವೆ ಸಂವಾದ ಸಾಧ್ಯವಾಗದೆ ಹೋದ ಏಕಾಂಗಿನಿಯೊಬ್ಬಳ ಭಾವದ ಭಾಷೆಗೆ ಪ್ರತಿಸ್ಪಂದಿಸಿದ ಕಾಡಿನ ಜಗತ್ತು. ಇನ್ನು ಮೂರನೆಯ ನೆಲೆ ಗೆಳತಿ ಸಖಿ ಅವ್ವ ಇಂಥ ಆಪ್ತ ಬಳಗದ ನೆಲೆ. ಈ ಸಖಿ ಇವಳ ಆಪ್ತತೆಯ ಭಾವಕ್ಕೆ ಎದೆಗೊಟ್ಟು ಕೇಳುತ್ತಿರುವ ಮೌನಿ. ಈ ಮೂರು ನೆಲೆಗಳಿಗೆ ಹೊರತಾದ ಮತ್ತೊಂದು ಸಂಬೋದನಾ ಜಗತ್ತು ಅಕ್ಕನ ವಚನಗಳಲ್ಲಿದೆ. ಅದು ಅವಳ ವ್ಯಕ್ತಿಸ್ವಾತಂತ್ರ್ಯಕ್ಕೆ ಧಕ್ಕೆ ಒಡ್ಡಿರುವ ಆಪ್ತವಲ್ಲದ ಪುರುಷಜಗತ್ತು. ವ್ಯವಸ್ಥೆಯೊಳಗಿನ ಧರ್ಮ, ಪ್ರಭುತ್ವ ಸಮಾಜಕೇಂದ್ರಿತ ಅಧಿಕಾರವನ್ನು ಪ್ರತಿನಿಧಿಸುವ ನೆಲೆ."[೯೫]

ಅಕ್ಕನ ಅಲೌಕಿಕ ಬಾಳುವೆಯಲ್ಲಿ ಎದುರಾದ ಜಗತ್ತಿನೊಡನೆ ಸಂಧಿಸುವಾಗ ಆಪ್ತವಾದ ಧ್ವನಿ ಹೊರಹೊಮ್ಮುತ್ತದೆ. ಅನುಭಾವಿಕ ನೆಲೆಯ ಹುಡುಕಾಟದ ಸಂದರ್ಭದಲ್ಲಿನ ಶರಣ ಸಮೂಹದೊಡನೆ ಅಕ್ಕಮಹಾದೇವಿಯ ಬಂಧುತ್ವ ಪರಿಕಲ್ಪನೆ ತೀರ ಆತ್ಮೀಯತೆಯಿಂದ ಅಭಿವ್ಯಕ್ತಗೊಳ್ಳುತ್ತದೆ. ಭಾಷೆ ವಿನಯತೆಯಿಂದ ಹೃದ್ಯವೆನಿಸುತ್ತದೆ. ಪುರುಷ ಪ್ರಧಾನ ವ್ಯವಸ್ಥೆಗೆ ಎದುರಾಗುವಾಗ ಅದು ತೀವ್ರ ಗಡಸು, ಒರಟುತನದಿಂದ ಕೂಡಿದ ಪ್ರತಿರೋಧ ಧ್ವನಿಯಾಗಿ ಹೊಮ್ಮುತ್ತದೆ. ಅಕ್ಕನ ವಚನಗಳಲ್ಲಿನ ಸಂಬೋಧನೆ, ಬಂಧುತ್ವದ ಪರಿಕಲ್ಪನೆಯ ಭಾಷೆ, ವಿನಯ, ವಿರೋಧ ಎರಡೂ ನೆಲೆಗಳಲ್ಲಿ ತೀವ್ರತೆಯಿಂದ ವ್ಯಕ್ತಗೊಳ್ಳುತ್ತದೆ. ಅಕ್ಕಮಹಾದೇವಿಯು ತಾನೊಲಿದ ದೇವನೊಂದಿಗೆ ಹೊಂದುವ ಅವಿನಾಭಾವ ಸಂಬಂಧಗಳ ಚಿತ್ರಣ ಭಾಷೆಯಲ್ಲಿ ಒಮ್ಮೆ ಸಂಬೋಧನೆ, ಮತ್ತೊಮ್ಮೆ ಸ್ವಗತ ಧ್ವನಿಯಾಗಿ ಪ್ರಕಟಗೊಳ್ಳುತ್ತದೆ.

"ಅಂದೂ ನೀನೆ, ಇಂದೂ ನೀನೆ, ಎಂದೂ ನೀನೆ ಕೇಳಾ ತಂದೆ.
ನಿನ್ನ ಬೆಂಬಳಿವಿಡಿದ ಹಳೆಮಗಳಾನಯ್ಯ,
ಅಂದೂ ಇಂದೂ ಎಂದೂ ನಿನ್ನ ನಂಬಿದ ಒಲವಿನ ಶಿಶು ನಾನಯ್ಯ.
ಒಂದಲ್ಲದೆ ಎರಡರಿಯೆನಯ್ಯಾ.
ಎನ್ನ ತಂದೆ ಕೇಳಾ, ಚೆನ್ನಮಲ್ಲಿಕಾರ್ಜುನಾ
ನಿಮ್ಮ ಎಂಜಲನುಂಬ ಹಳೆಯವಳಾನಯ್ಯಾ."[೯೬]

ಚೆನ್ನಮಲ್ಲಿಕಾರ್ಜುನನೊಂದಿಗೆ ತನ್ನ ಸಂಬಂಧ ತೀರಹಳೆಯದು, ತಾನು ಅವನ ಬೆಂಬಳಿವಿಡಿದ ಹಳೆಮಗಳು, ಎಂದೆಂದಿಗೂ ಆತ ತಂದೆ ಎಂಬ ಗೌರವ ಆತ್ಮೀಯದೃಷ್ಟಿ, ಧ್ವನಿ ಅಕ್ಕನದು. 'ಒಲವಿನ ಶಿಶು' ಶಬ್ಧದಲ್ಲಿಯ ತಂದೆ ಮಗಳ ಸಂಬಂಧದ ಕರುಣೆಯ ಧ್ವನಿ ಅಕ್ಕನ ಬಂಧುತ್ವದ ಆಪ್ತತೆಯನ್ನು ಪ್ರತಿನಿಧಿಸುತ್ತದೆ. ಅಪ್ಪನೊಂದಿಗೆ ಮಗಳು ಆತ್ಮೀಯವಾಗಿ ಮಾತನಾಡುವ ದೇಶೀಯ ನಡೆಯುಳ್ಳ ವಚನದಲ್ಲಿ ಅಕ್ಕನ ಬಂಧುತ್ವ, ತಂದೆಯಿಂದ ಕಂದನ ರಕ್ಷಣೆಯ ಕರ್ತವ್ಯವನ್ನು ನೆನಪಿಸುವ ರೀತಿಯೇ ಸೊಗಸಾಗಿದೆ.

"ಅಮೃತವನುಂಬ ಶಿಶುವಿಂಗೆ ವಿಷವನೂಡುವರೆ ಅಯ್ಯಾ?
ನೆಳಲ ತಂಪಿನಲ್ಲಿ ಬೆಳೆದ ಸಸಿಗೆ ಉರಿಯ ಬೇಲಿಯಕಟ್ಟುವರೆ ಅಯ್ಯಾ?
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಕರುಣದ ಕಂದನೊಡನೆ
ಸೂನೆಗಾರರ ಮಾತನಾಡಿಸುವರೆ ಅಯ್ಯಾ?"[೯೭]

ತೀವ್ರ ಒತ್ತಡಕ್ಕೊಳಗಾಗಿ ಮಗು ತನ್ನ ತಂದೆಯನ್ನು ಪ್ರಶ್ನಿಸುವ ತನ್ನನ್ನು ಕಷ್ಟದಿಂದ ರಕ್ಷಿಸಲು ಮೊರೆಯಿಡುವ ಮುಗ್ಧ ಮಗುವಿನ ಮನಸ್ಸಿನ ಭಾವವನ್ನು ವಚನದಲ್ಲಿ ಭಾವನಾತ್ಮಕ ಮತ್ತು ರಕ್ಷಣಾತ್ಮಕ ಬೇಡಿಕೆಗಳ ಹಿನ್ನೆಲೆಯಲ್ಲಿ ಹೆಣೆದಿರುವುದು ಅಪ್ಯಾಯಮಾನವೆನಿಸುತ್ತದೆ. ಆತ್ಮೀಯತೆಯ, ಆರ್ತತೆಯ ಸಂಭೋದನೆ ವಚನದ ಪ್ರಧಾನ ಗುಣವಾಗಿದೆ.

"ನಿಮ್ಮ ನಂಬಿದ ನಚ್ಚಿಹ ಮಗಳ ಬೆಂಬಿಟ್ಟರೆ
ಎಂತು ಬದುಕುವೆನಯ್ಯಾ, ಚೆನ್ನಮಲ್ಲಿಕಾರ್ಜುನ?"[೯೮]

"ಅಯ್ಯಾ ನೀನೆನ್ನ ಮೊರೆಯನಾಲಿಸಿದಡಾಲಿಸು,
ಆಲಿಸದಿರ್ದಡೆ ಮಾಣು."[೯೯]

"ನೀನು ಹೋಗೆಂದಡೆ ಹೋದೆನಯ್ಯಾ.
ನೀನು ಹುಟ್ಟೆಂದಡೆ ಹುಟ್ಟಿದೆನಯ್ಯಾ.
....
ನೀನು ಮಾಡೆಂದ ಕೆಲಸವ ಮಾಡಿಕೊಂಡು,
ನಿಮ್ಮ ಬೆಸಲಾದ ಮಗಳಾಗಿರ್ದೆ ಕಾಣಾ
ಚೆನ್ನಮಲ್ಲಿಕಾರ್ಜುನಾ."[೧೦೦]

ಅಕ್ಕಮಹಾದೇವಿಯ ಚೆನ್ನಮಲ್ಲಿಕಾರ್ಜುನ ಆಕೆಯ ವಚನಗಳ ಅಂಕಿತ, ಆರಾಧ್ಯದೇವ, ಹೆತ್ತ ತಂದೆ, ಕಾಯುವ ಗುರು, ಕೂಡುವ ಸಂಗಾತಿ, ಸೌಂದರ್ಯಾನುಭೂತಿ, ಪ್ರಿಯಕರ, ಗಂಡ, ಪರಮ ಪುರುಷರತ್ನ, ಆಕೆಯ ಭಾವ, ಭಾವಗಳ ಭಾಷೆ, ಲೌಕಿಕ, ಪಾರಲೌಕಿಕ ಸಂಗಾತಿ, ಚೆಲುವ, ಒರಟ, ಅಸ್ತವ್ಯಸ್ತ ಕ್ರಮಬದ್ಧವಲ್ಲದ ಅಸಾಂಪ್ರದಾಯಿಕ ಪತಿ, ಅವಳ ಗತಿ, ಮತಿ, ಮಾರ್ಗದರ್ಶಕ ರಕ್ಷಕ ಆತನ ಅನಂತ ಪಾತ್ರ ವೈವಿಧ್ಯಗಳು ವಚನಭಾಷೆಯಲ್ಲಿ ಜೀವಂತಿಕೆ ಪಡೆದುಕೊಂಡು ನೈಜ ವ್ಯಕ್ತಿಚಿತ್ರವನ್ನು ಸಾಕಾರ, ನಿರಾಕಾರಗಳೆರಡೂ ಶಬ್ಧ ಮತ್ತು ಅರ್ಥಗಳೊಂದಿಗೆ ಅನುಭವಕ್ಕೆ ಬರುವಂತೆ ಭಾವಾಭಿವ್ಯಕ್ತಗೊಳಿಸಿರುವುದು ಅಕ್ಕನ ಅಪ್ರತಿಮ ಭಾಷೆ ಮತ್ತು ಕಾವ್ಯಪ್ರತಿಭೆಗೆ ಸಾಕ್ಷಿಯಾಗಿವೆ. ಸರ್ವವ್ಯಾಪಕವಾದ ಪರಮಚೈತನ್ಯ ತನಗೆ ಅರಿವಿಗೆ ಬಾರದಿದ್ದಾಗ ಕಳವಳಗೊಳ್ಳುವ ಅಕ್ಕಮಹಾದೇವಿ ಅಮೂರ್ತ ಚೈತನ್ಯದ ಮೂರ್ತರೂಪ ಪ್ರಕೃತಿಯಲ್ಲಿ ಪರಿಶೋಧಿಸುತ್ತ ಪ್ರಕೃತಿಯನ್ನು ಪ್ರಶ್ನಿಸುವ, ಮಾತನಾಡಿಸುವ ಪ್ರಾಕೃತಿಕ ಬಂಧುತ್ವ ಹೃದಯಸ್ಪರ್ಶಿಯಾಗಿದೆ.

"ಚಿಲಿಪಿಲಿ ಎಂದೋದುವ ಗಿಳಿಗಳಿರಾ!
ನೀವು ಕಾಣಿರೆ? ನೀವು ಕಾಣಿರೆ?

....

....

ಚೆನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೆ!"[೧೦೦]

"ಅಳಿಸಂಕುಲವೆ, ಮಾಮರವೆ, ಬೆಳುದಿಂಗಳೆ, ಕೋಗಿಲೆಯೆ,
ನಿಮ್ಮನೆಲ್ಲರನೂ ಒಂದು ಬೇಡುವೆನು.
ಎನ್ನೊಡೆಯ ಚೆನ್ನಮಲ್ಲಿಕಾರ್ಜುನದೇವ ಕಂಡಡೆ
ಕರೆದು ತೋರಿರೆ."[೧೦೧]

ಅಕ್ಕಮಹಾದೇವಿಯ ಸಂಬೋಧನೆ, ಬಂಧುತ್ವಗಳು ಜನಮುಖಿ, ಅದಕ್ಕಿಂತಲೂ ಹೆಚ್ಚಾಗಿ ನಿಸರ್ಗಮುಖಿಯಾಗಿವೆ. ಅಕ್ಕನ ಮುಗ್ಧತೆಗೆ ಮೌನವಾಗಿ ಪ್ರತಿಕ್ರಿಯಿಸುವ ಪ್ರಕೃತಿ ಆಕೆಗೆ ಮನುಷ್ಯರಿಗಿಂತ ಹೆಚ್ಚು ನಿಕಟವರ್ತಿಯಾಗಿ ಆತ್ಮೀಯ ಅಪ್ಯಾಯಮಾನ ಭಾವ ಬೆಳೆಯುವಂತೆ ಮಾಡಿರುವುದರಿಂದ ಪ್ರಕೃತಿ ಅಕ್ಕನ ಭಾಷೆಯಲ್ಲಿ ಮೃದುಮಧುರವಾಗಿ ಮೂಡಿನಿಂತಿದೆ.

ಅಕ್ಕನ ವಚನಗಳಲ್ಲಿ ಅತ್ಯಂತ ಆತ್ಮೀಯವಾದ ಸಂಬೋಧನೆ, ಬಂಧುತ್ವ ಪ್ರಕಟಗೊಳ್ಳುವುದು. ಅವಳ ಮೆಲುಧ್ವನಿಗಳಿಗೆಲ್ಲ ಮೌನವಾಗಿ ಕಿವಿಗೊಡುವ ಕೆಳದಿ, ಅವಳು ಅಕ್ಕನ ಅಂತರಂಗದ ತಲ್ಲಣಗಳನ್ನು ಅರಿಯುವ, ಸಂತೈಸುವ, ಮೌನವಾಗಿಯೇ ಪ್ರತಿಕ್ರಿಯಿಸುವ ಸಖಿ. ಅವಳೆದುರಿಗೆ ಅಕ್ಕಮಹಾದೇವಿ ತನ್ನಿಯನ ರೂಪ, ಕೂಟ, ಅಗಲಿಕೆ, ವಿರಹವೇದನೆಗಳನ್ನು ಮುಕ್ತವಾಗಿ ಹಂಚಿಕೊಳ್ಳಬಲ್ಲಳು. ಅಂಥಹ ಸಖಿಯ ಆಪ್ತತೆ, ಅಕ್ಕನ ವಚನಗಳಲ್ಲಿ ಮನಮುಟ್ಟುವಂತೆ, ಸರಳ, ಸಹಜವಾಗಿ ಅಭಿವ್ಯಕ್ತಗೊಂಡಿದೆ.

"ಅಕ್ಕ ಕೇಳಕ್ಕಾ, ನಾನೊಂದು ಕನಸ ಕಂಡೆ.
ಚಿಕ್ಕ ಚಿಕ್ಕ ಕೆಂಜೆಡೆಗಳ ಸುಲಿಪಲ್ಲ ಗೊರವನು
ಬಂದೆನ್ನ ನೆರೆದ ನೋಡವ್ವಾ ...."[೧೦೩]

"ಅಕ್ಕ ಕೇಳೌ, ನಾನೊಂದು ಕನಸ ಕಂಡೆ.
ಅಕ್ಕಿ ಅಡಕೆ ಓಲೆ ತೆಂಗಿನಕಾಯ ಕಂಡೆ.
....
ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು.
ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು."[೧೦೪]

ಅಕ್ಕನ ವಚನಗಳಲ್ಲಿ ಪ್ರೀತಿ ಮೂಲದ ಬಂಧುತ್ವ ಪದಗಳು

ಕೆಳದಿಯಂತೆ, ತಾಯಿ, ಅವ್ವ ಪದಗಳು ದೇಶೀ ನುಡಿಯಲ್ಲಿ ಅಕ್ಕನ ಆತ್ಮೀಯ ಭಾವ, ತನ್ನ ತವಕ, ನಿರ್ಧಾರಗಳನ್ನು ಹೇಳುವಲ್ಲಿ ಅಭಿವ್ಯಕ್ತಗೊಂಡಿವೆ.

"ಎರದ ಮುಳ್ಳಿನಂತೆ ಪರಗಂಡರೆನಗವ್ವಾ
ಸೋಕಲಮ್ಮೆ ಸುಳಿಯಲಮ್ಮೆ;
ನಂಬಿ ನಚಿ ಮಾತಾಡಲಮ್ಮೆನವ್ವಾ
ಚೆನ್ನಮಲ್ಲಿಕಾರ್ಜುನನಲ್ಲದ ಗಂಡರಿಗೆ
ಉರದಲ್ಲಿ ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ"[೧೦೫]

ಆತ್ಮೀಯ ಸಲುಗೆಯ ಭಾವ ಅಕ್ಕನಿಗೆ ಅವ್ವನಲ್ಲಿ; 'ಅವ್ವ' ಪದವೇ ಅಕ್ಕನ ವಚನಗಳಲ್ಲಿ ಹೃದಯ ಮುಟ್ಟುವಂತೆ ಹಲವು ವಚನಗಳಲ್ಲಿ ವ್ಯಕ್ತವಾಗಿದೆ. ಕೌಟುಂಬಿಕ ಬಂಧನಗಳನ್ನು ಕಳಚಿಕೊಂಡು ಆಧ್ಯಾತ್ಮಿಕ ಹಂಬಲದಿಂದ ಲೋಕ ಸಂಚಾರಿಯಾಗಿ ಕಲ್ಯಾಣದ ಶರಣರೊಡನೆ ಕೂಡಿ ಕಳೆದು ತನ್ನ ಸಾಧನೆಗೆ ಸಿದ್ಧಿತ್ವದ ನೆಲೆಯನ್ನು ಕಲ್ಪಿಸಿಕೊಟ್ಟಿರುವ ಬಸವಾದಿ ಶರಣರನ್ನು ಅತೀ ಪ್ರೀತಿ, ಧನ್ಯತಾ ಭಾವದಿಂದ ಸ್ಮರಿಸಿದ ಆತ್ಮೀಯಭಾಷೆ ಬಂಧುತ್ವದ ಸುಖವನ್ನು ಹೃದಯಾರೆ ಹಂಚಿಕೊಂಡಿದ್ದಾಳೆ. 'ಹೆತ್ತ ತಂದೆ ಸಂಗನ ಬಸವಣ್ಣ' ಸಂಬೋಧನೆ ಅಕ್ಕನ ಭಾವದಲ್ಲಿ ಬಸವಣ್ಣನವರಿಗೆ ಮೇರುಸ್ಥಾನ ದೊರೆತಿದೆ.

ಅಣ್ಣಗಳಿರಾ, ಪ್ರಭುವೆ, ಬಂಧುತ್ವದ ನೆಲೆಯಲ್ಲಿ ಪ್ರಕಟಗೊಂಡಿವೆ. ಸಾಮಾಜಿಕ ಪ್ರತಿರೋಧ ಭಾಷೆಯಲ್ಲಿಯೂ ನಿರ್ಧರಿತ ನಿಲುವಿನ ಅಭಿವ್ಯಕ್ತಿಯ ಗಟ್ಟಿಯಾದ ಧ್ವನಿ, ಸಾಂಪ್ರದಾಯಿಕ ರೂಢಿ ವ್ಯವಸ್ಥೆ ಬಗೆಗಿನ ತಿರಸ್ಕಾರ, ಪ್ರಕಟಿಸುವಲ್ಲಿ ಬಂಡಾಯದ ಭಾಷೆಯಾಗಿ ಮತ್ತೆಮತ್ತೆ ಪ್ರತಿಧ್ವನಿತಗೊಂಡಿದೆ.

ಅಕ್ಕಮಹಾದೇವಿಯ ಮನೋವೃತ್ತಿ ಅತ್ಯಂತ ಸ್ವತಂತ್ರವಾದುದು. ಅಂತೆಯೇ ಅವಳ ಭಾಷೆಯು ಅಷ್ಟೇ ಸ್ವತಂತ್ರತೆಯುಳ್ಳದ್ದು. ಅವಳ ವಚನಗಳ ಭಾಷೆಯಲ್ಲಿ ಆಧ್ಯಾತ್ಮಿಕ ಭಾವನೆಗಳನ್ನು ಅಲೌಕಿಕ ಅನುಭಾವವನ್ನು ಲೌಕಿಕದ ಪ್ರತಿಮೆ, ಉಪಮೆ, ರೂಪಕ, ಅಲಂಕಾರಗಳಲ್ಲಿ ಭಾವಗಮ್ಯಗೊಳಿಸುವಂತೆ ನಿರೂಪಿಸುವುದು ಅಕ್ಕಮಹಾದೇವಿಗೆ ಅತ್ಯಂತ ಸರಳವಾದುದು. ಲೌಕಿಕ ದಾಂಪತ್ಯದ ಪ್ರತೀಕಗಳಲ್ಲಿಯೇ ತನ್ನ ಅನುಭವವನ್ನು ಮುಕ್ತವಾಗಿ ಹಂಚಿಕೊಳ್ಳುವುದು, ಅದಕ್ಕೆ ತಕ್ಕುದಾದ ಪದ, ಭಾಷಾ ಬಳಕೆಯಲ್ಲಿಯೂ ಮುಕ್ತತೆ ಪಡೆದಿರುವಳು. ಕಾವ್ಯ, ಕಾಮ, ಪ್ರೇಮ, ಅಭಿವ್ಯಕ್ತಿಗಳ ಬಗೆಗೆ ಸಂಪ್ರದಾಯ ಸಮಾಜ ವಿಧಿಸಿದ ಎಲ್ಲ ನಿರ್ಬಂಧಗಳನ್ನು ಅಕ್ಕಮಹಾದೇವಿ ವೈಯಕ್ತಿಕ ನೆಲೆಯಲ್ಲಿ ಮೀರುತ್ತ ಸ್ವತಂತ್ರ ಅಭಿವ್ಯಕ್ತಿಯ ಅಸ್ತಿತ್ವವನ್ನು ಭಾಷೆಯ ಮುಖೇನ ಪಡೆದುಕೊಂಡಿದ್ದಾಳೆ. ಭಾವಗಳಿಗೆ ತಕ್ಕ

ಭಾಷೆಯನ್ನು ಬಳಸುವಲ್ಲಿ ಅಕ್ಕಮಹಾದೇವಿ ತನ್ನದೆ ಮಾರ್ಗವನ್ನು ಕಂಡುಕೊಂಡಿರುವುದನ್ನು ತನ್ನೊಂದು ವಚನದಲ್ಲಿ ಅಭಿವ್ಯಕ್ತಗೊಳಿಸಿದ್ದಾಳೆ.

"ಕೈಯ ಧನವ ಕೊಂಡಡೆ ಮೈಯ, ಭಾಷೆಯ ಕೊಳಬಹುದೆ?
ಉಟ್ಟ ಉಡುಗೆಯ ಸೆಳೆದುಕೊಂಡರೆ,
ಮುಚ್ಚಿ ಮುಸುಕಿದ ನಿರ್ವಾಣವ ಸೆಳೆಯಬಹುದೆ?
ನೋಡುವಿರಿ ಎಲೆ ಅಣ್ಣಗಳಿರಾ,
ಕುಲವಳಿದು ಛಲವಳಿದು ಭವಗೆಟ್ಟು ಭಕ್ತೆಯಾದವಳ.
ಎನ್ನನೇಕೆ ನೋಡುವಿರಿ ಎಲೆ ತಂದೆಗಳಿರಾ,
ಚೆನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದು ಛಲವಳಿದವಳನು."[೧೦೬]

ಭೌತಿಕ ಧನ, ಕನಕಾದಿ, ವಸ್ತುಗಳನ್ನು ಅಪಹರಿಸಬಹುದು, ಆದರೆ ಅಭೌತಿಕವಾದ ಭಾಷೆ, ಭಾಷೆಯೊಳಡಗಿದ ಜ್ಞಾನ ಸಂಪತ್ತನ್ನು ಅನ್ಯರು ಕಸಿದುಕೊಳ್ಳಲಾರರು. ವಸ್ತ್ರಾದಿ ಒಡವೆಗಳನ್ನು ದೋಚಬಹುದಲ್ಲದೆ. ಭಾವದೊಳಗಿನ ಭಾಷೆ, ಭಾಷೆಯೊಳಗಿನ ಭಾವ, ನಿರ್ವಾಣದ ನಿರ್ಭಯತ್ವವನ್ನು, ನಿರ್ಲಿಪ್ತತತೆಯನ್ನು ಅನ್ಯರು ದೋಚಲು ಸಾಧ್ಯವಾಗದೆಂದ ಅಕ್ಕಮಹಾದೇವಿಯ ಅಭಿವ್ಯಕ್ತಿ, ಭಾಷೆಯ ಬಗೆಗಿನ ಅನನ್ಯತೆಯನ್ನು ಪ್ರಕಟಿಸುತ್ತದೆ. ಅವಳ ತೀವ್ರವೈರಾಗ್ಯ, ಉತ್ಕಟಪ್ರೇಮ ದೇವನನ್ನು ಕೂಡುವ ಹಂಬಲ, ಆ ಭಾವ ತಣಿಯದೇ ಹೋದಾಗ ಹೊಂದುವ ತೀವ್ರ ನೋವು, ನಿರಾಶೆ, ಶರಣಸತಿ ಲಿಂಗಪತಿಗಾಗಿ ಕಳವಳಗೊಳ್ಳುವ ರೀತಿ ಪತಿಯ ಬರುವಿಕೆಗಾಗಿ ಶೃಂಗರಿಕೊಂಡು ಕಾಯುವ, ವಿರಹವೇದನೆಯಿಂದ ತೀವ್ರವಾಗಿ ನೊಂದ ಅಂತರಂಗ ಧ್ವನಿ ಮಧುರವಾದ ಯಾತನೆಗಳೆಲ್ಲ ವಚನಗಳ ಭಾಷೆಯಲ್ಲಿ ಮೃದುವಾಗಿ, ಮಧುರವಾಗಿ ಮೂಡಿನಿಂತಿವೆ. ದೇವನನ್ನು ಕೂಡುವಲ್ಲಿ ದೇಹದ ಉರವಣೆಗಳಿಂದಾಗುವ ನೋವು, ದೇಹದ ಬಗೆಗಿನ ತೀವ್ರ ನಿರಾಸಕ್ತಿ, ದೇಹ ಮನಸ್ಸು ಭಾವಗಳ ಹೊಂದಾಣಿಕೆಯಲ್ಲಿ ದೇಹದ ಬಗೆಗೆ ಉಂಟಾಗುವ ತೀವ್ರ ಹಂಬಲ, ಹತಾಶೆ, ಲೌಕಿಕ, ಅಲೌಕಿಕ ಜೀವನದ ನಡೆನುಡಿಗಳಲ್ಲಿ ಉಂಟಾಗುವ ವೈರುದ್ಧ, ಸಾಧನೆ ಸಿದ್ಧಿಯ ಬಗೆಗಿನ ಒಳ ಹೊರಗಿನ ತೀವ್ರತರವಾದ ಸಂಘರ್ಷಗಳು, ಅಕ್ಕನ ವಚನಗಳ ಭಾಷೆಯಲ್ಲಿ ವೈವಿಧ್ಯತೆಯಿಂದ ಅಭಿವ್ಯಕ್ತಗೊಂಡಿವೆ.

ಶಬ್ಧ, ಅರ್ಥಗಳ ಮೋಹವನ್ನು ಬದಿಗಿರಿಸಿದ ಭಾಷೆ ಅಕ್ಕಮಹಾದೇವಿಯ ಅಂತರಂಗವನ್ನು ಸಶಕ್ತವಾಗಿ ಪ್ರತಿನಿಧಿಸುತ್ತದೆ. ಕೈಯ ಧನವನ್ನು ಕಸಿದುಕೊಂಡರೂ ಮೈಯ ಭಾಷೆಯನ್ನು ಇತರರು ದೋಚಲಾರರು. ಅದು ಅವ್ಯಕ್ತ, ಅನಂತರೂಪಿಯಾದುದು. ಭಾಷೆ ಭಾವನೆಗಳಲ್ಲಿ ಮಾತ್ರ ವ್ಯಕ್ತಗೊಳ್ಳುವುದರಿಂದ ಅಮೂರ್ತವಾದ ಅಭಿವ್ಯಕ್ತಿಯಲ್ಲಿ ಮಾತ್ರ ಮೂರ್ತವಾಗುವ ಸಂಪತ್ತದು.

"ಭಾಷೆಯನ್ನು ಅನ್ಯರು ಕೊಳ್ಳಲು ಆಗದಿರುವದರಿಂದ ಅಕ್ಕ ಮಿಕ್ಕೆಲ್ಲವುಗಳಿಗಿಂತ ಭಾಷೆಯ ವಿಷಯದಲ್ಲಿ ತುಂಬಾ ಸ್ವತಂತ್ರಳು. ತನ್ನ ಅಭಿವ್ಯಕ್ತಿಗೆ, ಮನೋಧರ್ಮಕ್ಕೆ, ತನ್ನ ತತ್ವಕ್ಕೆ, ಜೊತೆಗೆ ಲೌಕಿಕದ ನಿರಾಕರಣೆಗೆ ಯಾವ, ಯಾವ ಶಬ್ದಾರ್ಥಗಳನ್ನೊಳಗೊಂಡ ಭಾಷೆಯು ಬೇಕಾಗಬಹುದೋ ಅವೆಲ್ಲವುಗಳನ್ನು ಅಕ್ಕ ಯಾವುದೇ ನಿರ್ಬಂಧವಿಲ್ಲದೆ ಸ್ವತಂತ್ರವಾಗಿ ನಿರ್ಭೀತಿಯಿಂದ ಶಬ್ಧಗಳೆಡೆಗೆ ಮೋಹಗೊಳ್ಳದೆ ಅವುಗಳನ್ನು ವಚನಗಳಲ್ಲಿ ಬಳಸಿದ್ದಾಳೆ."[೧೦೭]

ಭಾಷಾಶಾಸ್ತ್ರದ ದೃಷ್ಟಿಯಿಂದ ಗಮನಿಸಿದಾಗ ಅಕ್ಕಮಹಾದೇವಿ ವಚನಗಳಲ್ಲಿ ಬಳಸಿರುವ ಭಾಷೆ, ಅದರ ಎಲ್ಲ ಆಯಾಮಗಳನ್ನು ಒಳಗೊಂಡಿರುವುದು ಅಲ್ಲದೆ, ಕಾವ್ಯದ ಎಲ್ಲ ಲಕ್ಷಣಗಳನ್ನು ಸಹಜವಾಗಿ ಹುದುಗಿಸಿಕೊಂಡು ಸೌಂದರ್ಯಾತ್ಮಕವಾಗಿ ವಚನಗಳು ಕಂಗೊಳಿಸಿ ಅರ್ಥಕಾಂತಿಯನ್ನು ಹೊರಹೊಮ್ಮಿಸುತ್ತವೆ. ಅಕ್ಕನ ವಚನಗಳು ಕಾವ್ಯಮೀಮಾಂಸೆಯ ದೆಸೆಯಿಂದಲೂ ಮಹತ್ತರವೆನಿಸಿವೆ. ಅಕ್ಕಮಹಾದೇವಿಯ ವಚನಗಳ ಭಾಷೆಯ ರಚನೆಯನ್ನು ಅದರ ಸ್ವರೂಪವನ್ನು ಅಭ್ಯಾಸ ಮಾಡಿದಾಗ ಒಂದು ಕಾಲ ಘಟ್ಟದ ಸಾಮಾಜಿಕ, ಸಾಂಸ್ಕೃತಿಕ ಆಯಾಮ ತಿಳಿದುಬರುತ್ತದೆ. ಅಕ್ಕನ ವಚನಗಳ ಭಾಷೆ ಸಮಾಜೋಭಾಷಿಕ ನೆಲೆಯಲ್ಲಿ ಅತ್ಯಂತ ಮಹತ್ವವನ್ನು ಹೊಂದಿದೆ.

ಇ. ಶೈಲಿಯ ನಿರ್ವಚನ

ಇಂಗ್ಲೀಷ ಭಾಷೆಯ **ಸ್ಟೈಲ್(Style)** ಪದಕ್ಕೆ ಸಂವಾದಿಯಾಗಿ ಕನ್ನಡ ಭಾಷೆಯಲ್ಲಿ ಶೈಲಿ ಎಂಬ ಪದವನ್ನು ಸಾಮಾನ್ಯವಾಗಿ ಬಳಸಲಾಗುತ್ತದೆ. ಶೈಲಿಯೆಂಬುದು ಕೃತಿಕಾರನ ಅಭಿವ್ಯಕ್ತಿ ವಿಧಾನದ ಇನ್ನೊಂದು ರೂಪ ಅಥವಾ ವಿಶಿಷ್ಟ ಕ್ರಮ. ಪ್ರತಿಯೊರ್ವ ಕವಿ, ಕೃತಿಕಾರನ ಬರವಣಿಯ ಕ್ರಮ ವಿಭಿನ್ನವಾಗಿರುವುದು ಸಹಜ! ಒಂದು ವಿಷಯವನ್ನು ವಿಶಿಷ್ಟವಾಗಿ, ಕ್ರಮಬದ್ಧವಾಗಿ ನಿರೂಪಿಸುವ ವಿಧಾನವೇ ಶೈಲಿ. ಅದು ಮಾತು, ಅಥವಾ ಬರವಣಿಗೆಯಾಗಿರಬಹುದು. ಕೃತಿಕಾರನು ಕಂಡುಕೊಂಡು ಅಭಿವ್ಯಕ್ತಿಗಾಗಿ ಬಳಸಿದ ತಂತ್ರವೇ ಶೈಲಿ. ಶೈಲಿ ಎಂಬ ಮಾತನ್ನು ಸಾಮಾನ್ಯವಾಗಿ ಎರಡು ಅರ್ಥಗಳಲ್ಲಿ ಬಳಸಲಾಗುವುದೆಂದು ಜಿ.ಎಸ್.ಶಿವರುದ್ರಪ್ಪನವರ ಅಭಿಪ್ರಾಯವಾಗಿದೆ. ಭಾಷಣ ಹಾಗೂ ಬರಹಗಳಲ್ಲಿ ಭಾಷೆಯನ್ನು ಬಳಸುವ ಕ್ರಮ, ರೀತಿ, ಅಥವಾ ಮಾರ್ಗ. ವಿಶೇಷವಾಗಿ ಬರಹದಲ್ಲಿ ಲೇಖಕನು ಭಾಷೆಯನ್ನು ಉಪಯೋಗಿಸುವ, ವಿಶಿಷ್ಟವಾಗಿ ಅಭಿವ್ಯಕ್ತಿಗೊಳಿಸುವ ಪರಿಯೇ ಶೈಲಿ.

ಶೈಲಿಯ ಕುರಿತು ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯರಲ್ಲಿ ವಿಮರ್ಶೆ ಚಿಂತನೆಗಳು ಬಹು ಹಿಂದಿನಿಂದಲೂ ನಡೆಯುತ್ತಲೇ ಇವೆ. ಅದೊಂದು ನಿರಂತರ ಪ್ರಕ್ರಿಯೆಯೂ ಆಗಿದೆ. "ಶೈಲಿ ಎನ್ನುವುದು ಕವಿ ಭಾಷೆಯನ್ನು ಬಳಸುವ ಕ್ರಮವಾದರೂ ಅದು ಭಾಷೆಯನ್ನು ಒಂದು ರೀತಿಯಲ್ಲಿ ಪುನರ್ ಸೃಷ್ಟಿಸುವ ಕ್ರಮವೂ ಹೌದು. ಕಾವ್ಯದ ಸಂದರ್ಭದಲ್ಲಂತೂ ಅದು ಪಡೆದುಕೊಳ್ಳುವ

ಸೊಗಸು ಹಾಗೂ ನಿಲುವುಗಳೇ ಬೇರೆ. ಅಲ್ಲಿ ಅದು ಪ್ರಾಸ, ಛಂದಸ್ಸುಗಳ ಒಂದು ಶಿಸ್ತಿಗೆ ಒಳಪಟ್ಟು ಒಂದು ವಕ್ರತ್ವವನ್ನು ಪಡೆದುಕೊಂಡಿರುತ್ತದೆ. ಲೋಕವ್ಯವಹಾರದ ಭಾಷೆ ನಡೆದಾಡುವಂತಿದ್ದರೆ, ಕಾವ್ಯದ ಭಾಷೆ ರಂಗದ ಮೇಲಿನ ನರ್ತಕಿಯಂತಿರುತ್ತದೆ. ಗದ್ಯದಲ್ಲಿ ಭಾಷೆಗೆ ಕಾವ್ಯದಲ್ಲಿರುವಂಥ ಪ್ರಾಸ ಛಂದಸ್ಸುಗಳ ಶಿಸ್ತು ಇಲ್ಲದೇ ಹೋದರೂ ಸಮರ್ಥವಾದ ಲೇಖಕನ ಗದ್ಯಕ್ಕೆ ಗುರುತಿಸಬಹುದಾದ, ಅದರದೇ ಆದ ಒಂದು ಲಯವಿರುತ್ತದೆ. ಕುಂತಕನ ಮಾತಿನಲ್ಲಿ ಹೇಳುವುದಾದರೆ ಸಾಹಿತ್ಯದ ಭಾಷಾ ನಿರ್ಮಿತಿ ವಿದಗ್ಧನಾದವನು ಭಾಷೆಯನ್ನು ಬಳಸುವ ಕ್ರಮದ ಪರಿಣಾಮವಾಗಿದೆ. ಭಾಷೆಯನ್ನು ಹೇಗೆ ಬಳಸಬೇಕೆಂಬ ಬಗ್ಗೆ ಅತ್ಯಂತ ಪರಿಣಿತನಾದ ವ್ಯಕ್ತಿಯೊಬ್ಬನು ಭಾಷೆಯನ್ನು ವಿಶಿಷ್ಟವಾಗಿ ಬಳಸುವ ಕ್ರಮವನ್ನು ನಾವು ಗುರುತಿಸುತ್ತೇವೆ. ಈ ವಿಶಿಷ್ಟತೆಯಿಂದಾಗಿ ಭಾಷೆಗೆ ಒಂದು ಬಗೆಯ ಸಂಗ್ರಹಗುಣ ಲಭಿಸುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಭಾಷೆಯಲ್ಲಿ ಭಾವವು ಹರಳುಗೊಳ್ಳುವ(**Crystalisation**) ಕ್ರಿಯೆಯೊಂದು ಇಲ್ಲಿ ಸಂಭವಿಸುತ್ತದೆ. ಲೋಕವ್ಯವಹಾರದ ಓರೆಕೋರೆಯ ಹಾಗೂ ನೀರುನೀರಾದ ಭಾಷೆಗೆ ಕಲಾನಿರ್ಮಿತಿಯ ಹಂತದಲ್ಲಿ ನಡೆಯುವ ಈ ಹರಳುಗೊಳ್ಳುವ ಕ್ರಿಯೆಯೇ ಉತ್ಕೃಷ್ಟವಾದ ಶೈಲಿಯ ಲಕ್ಷಣವೆಂದು ಹೇಳಲಾಗಿದೆ.[೧೦೮]

ಶೈಲಿಯೆಂಬುದು ಭಾಷೆಯನ್ನು ಬಳಸುವ ಕ್ರಮದೊಂದಿಗೆ ಅದನ್ನು ನಿರ್ವಹಿಸುವ ರೀತಿಯನ್ನು ಒಳಗೊಳ್ಳುತ್ತದೆ. ವ್ಯಕ್ತಿಯೋರ್ವನು ತನ್ನ ಅನುಭವವನ್ನು ಅಭಿವ್ಯಕ್ತಗೊಳಿಸಲು ಭಾಷೆಯು ಮಾಧ್ಯಮ. ಆ ಭಾಷೆಯನ್ನು ಹೇಗೆ ಬಳಸುತ್ತಾನೆಂಬುದೇ ಶೈಲಿ. ಅದನ್ನೇ ಅಭಿವ್ಯಕ್ತಿ ವಿಧಾನವೆಂತಲೂ ಗುರುತಿಸಲಾಗಿದೆ. ಶೈಲಿ ಕಾವ್ಯದ ಒಳರೂಪು ಅಥವಾ ಆಂತರಿಕ ನೇಯ್ಗೆ. ಅದರ ಬಾಹ್ಯನೋಟ ಭಾಷೆ. ಭಾಷೆಯ ಬಾಹ್ಯರೂಪದ ಮೂಲಕ ಶೈಲಿಯೆಂಬ ಆಂತರಿಕ ನೇಯ್ಗೆ ಪ್ರಕಟಗೊಳ್ಳುತ್ತದೆ. ಶೈಲಿಗೆ ಇಂತಹುದೇ ಆದ ವ್ಯಾಖ್ಯೆಯನ್ನು ನಿರ್ದಿಷ್ಟಪಡಿಸುವುದು ಸಾಧ್ಯವಾಗದು. ಕಾರಣ ಪ್ರತಿ ಕವಿ, ಲೇಖಕನ ಕಾವ್ಯದ ಶೈಲಿ ವಿಭಿನ್ನವಾಗಿರುವುದು. ಅದು ಇನ್ನೊಬ್ಬರ ಅನುಕರಣೆಯಾಗದೆ ಸ್ವಯಂ ನಿರ್ಮಿತ ಕಲಾಕೃತಿಯಾಗಿದೆ.

ಪಾಶ್ಚಾತ್ಯ ಕವಿಗಳ ಲೇಖಕರ ಶೈಲಿಗಳು ವಿಭಿನ್ನ. ಹಾಗೆಯೇ ಪಂಪ, ರನ್ನ, ಪೊನ್ನ, ಹರಿಹರ ರಾಘವಾಂಕ, ಕುಮಾರವ್ಯಾಸ, ಸರ್ವಜ್ಞ, ವಚನಕಾರರು, ದಾಸರು, ಇವರೆಲ್ಲರ ಕಾವ್ಯದ ಶೈಲಿಗಳು ಒಂದಕ್ಕಿಂತ ಇನ್ನೊಂದು ಭಿನ್ನರೂಪ!! ಆಧುನಿಕ ನವೋದಯ ಕಾಲದ ಕವಿಗಳಾದ ಕುವೆಂಪು, ಬೇಂದ್ರೆ, ಮೊದಲಾದವರ ಶೈಲಿಗಳೂ ಅನಂತರೂಪ! ಬೇಂದ್ರೆ ಶೈಲಿ, ಕುವೆಂಪು ಶೈಲಿಯೆಂದೇ ಖ್ಯಾತವಾದವು. ನವ್ಯ ಕವಿ ಅಡಿಗರ ಕಾವ್ಯದ ಶೈಲಿ ಅವೆಲ್ಲಕ್ಕಿಂತ ವಿಭಿನ್ನ. ದಲಿತ ಬಂಡಾಯ ಕವಿಗಳು, ಲೇಖಕರ ಕವನ, ಲೇಖನಗಳ ಅಭಿವ್ಯಕ್ತಿ ವಿಧಾನವೂ ಅವರದೇ ಆದ ರೀತಿಯಲ್ಲಿ ಹೊರಹೊಮ್ಮಿವೆ.

ಮೇಲ್ನೋಟಕ್ಕೆ ಒಂದು ಶೈಲಿ ಇನ್ನೊಬ್ಬರ ಶೈಲಿಗೆ ಹೋಲಿಕೆಯಾಗುವಂತೆ ತೋರಿದರೂ, ಆಂತರ್ಯದಲ್ಲಿ ಅದು ಭಿನ್ನವಾಗಿಯೇ ಇರುವುದು. ಕವಿಯ ವ್ಯಕ್ತಿತ್ವ, ಭಾಷಾ ಪ್ರಯೋಗ, ಪ್ರತಿಭೆಗಳು ಮೇಳವಿಸಿದ ಅಭಿವ್ಯಕ್ತಿಕ್ರಮ, ಅನನ್ಯತೆ, ಮತ್ತು ನಾವಿನ್ಯತೆಯಿಂದಲೇ ಕೂಡಿರುವುದು. ವಸ್ತು ವಿಷಯಗಳು ಒಂದೇಯಾಗಿದ್ದರೂ ಅಭಿವ್ಯಕ್ತಿ ವಿಧಾನ ಮಾತ್ರ ಭಿನ್ನವಾಗಿರುವುದು ಕನ್ನಡ ಕಾವ್ಯಪರಂಪರೆಯಲ್ಲಿ ನಿಚ್ಚಳವಾಗಿ ಗೋಚರಿಸುವುದು. 'ಮಹಾಭಾರತ ವಸ್ತುವಿಷಯವನ್ನಾಧರಿಸಿ ರಚಿಸಿದ ಪ್ರಾಚೀನ ಕಾವ್ಯ ಪರಂಪರೆಯಲ್ಲಿಯೇ ಪಂಪ, ರನ್ನ, ಕುಮಾರವ್ಯಾಸರ ಅಭಿವ್ಯಕ್ತಿ ವಿಧಾನ ಅಂದರೆ ಶೈಲಿ ಭಿನ್ನವಾಗಿದೆ. ಹರಿಹರ, ರಾಘವಾಂಕ ಸಮಕಾಲಿನರು ವಸ್ತು ವಿಷಯಗಳಲ್ಲಿ ಏಕತೆಯಿದ್ದರೂ ನಿರೂಪಣಾ ತಂತ್ರದಲ್ಲಿ ವಿಭಿನ್ನತೆಯಿದೆ.

ವಚನಕಾರರು ಏಕ ಕಾಲದಲ್ಲಿ ಸಮಾನ ಆಸಕ್ತಿ, ವಿಷಯಗಳಲ್ಲಿ ಒಂದೇಯಾಗಿದ್ದರೂ ವಚನಗಳ ಆಂತರಿಕ ನೇಯ್ಗೆ ಒಳರೂಪು, ಅಭಿವ್ಯಕ್ತಿ ಕ್ರಮದಲ್ಲಿ ವ್ಯತ್ಯಾಸವಿದೆ. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಸಿದ್ಧರಾಮ, ಚೆನ್ನಬಸವಣ್ಣ ಮೊದಲಾದ ವಚನಕಾರರ ಅಭಿವ್ಯಕ್ತಿ ವಿಧಾನ ನಾವಿನ್ಯತೆ ಮತ್ತು ಅನನ್ಯತೆಯಿಂದ ಕೂಡಿದ ಅವರದೇ ಶೈಲಿ ಎನ್ನುವಷ್ಟರ ಮಟ್ಟಿಗೆ ವಿಭಿನ್ನವಾಗಿದೆ. ಅಷ್ಟೇ ಅಲ್ಲದೆ ಒಬ್ಬ ವಚನಕಾರರ ವಚನಗಳಲ್ಲಿಯೇ ಬೇರೆ ಬೇರೆ ಶೈಲಿಗಳಿರುವುದು ವಚನಸಾಹಿತ್ಯದ ವಿಶಿಷ್ಟತೆಗಳಲ್ಲೊಂದು! "ವಚನ ಭಾಷೆಯಲ್ಲಿ ಉದ್ದೇಶಪೂರ್ವಕವಾದ ಜಾಗರೂಕತೆ ಇರುತ್ತದೆ. ಸುಸೂತ್ರತೆ ಇರುತ್ತದೆ. ಅದರಲ್ಲಿ ಭಾಷಾಪ್ರಜ್ಞೆ ಹೆಚ್ಚು ಏಕಾಗ್ರತೆಯಿಂದ ಅರ್ಥಪೂರ್ಣವಾಗಿ ಕೆಲಸ ಮಾಡುತ್ತದೆ. ವಚನಕಾರರು ತಮ್ಮ ಕಾಲದ ವ್ಯವಹಾರಿಕ ಭಾಷೆಯನ್ನೇ ವಚನ ಕಟ್ಟುವ ಪ್ರಕ್ರಿಯೆಯಲ್ಲಿ ಬಳಸಿದ್ದಾರೆ. ಆ ಸಂದರ್ಭದ ಭಾಷೆಯಲ್ಲಿ ಒಂದು ಪುನರ್ ಸಂಯೋಜನೆ ಇರುತ್ತದೆ. ವಚನದೊಳಗೆ ಪ್ರಾಸ, ಛಂದಸ್ಸು, ಅಲಂಕಾರಗಳ ಬಳಕೆಯ ಮೂಲಕ ವಚನದ ಅಭಿವ್ಯಕ್ತಿಯ ಶಕ್ತಿ ಹೆಚ್ಚುತ್ತದೆ. ಭಾಷೆಗೆ ಒಂದು ಬಗೆಯ ಅಡಕತನದ ಸಿದ್ಧಿ ಪ್ರಾಪ್ತವಾಗುತ್ತದೆ. ಅಂದರೆ ಶೈಲಿಯ ತುಡಿತವೆಂದರೆ ಅನುಭವವನ್ನು ಹರಳು ಗಟ್ಟಿಸುವ ಪ್ರಯತ್ನ. ಅಲ್ಲಿ ವಚನಕಾರರ ಪ್ರತಿಭಾಶಕ್ತಿ ಮತ್ತು ವಸ್ತು ಪ್ರತಿರೂಪ ಭಾಷೆಯಲ್ಲಿ ಪಾಕಗೊಂಡಿರುತ್ತದೆ."[೧೯]

ಕಾವ್ಯ ಕಟ್ಟುವ ಪ್ರಕ್ರಿಯೆಯಲ್ಲಿ ಕವಿಯು ತನ್ನ ಕಾಲದ ವ್ಯವಹಾರಿಕ ಭಾಷೆಯನ್ನು ಬಳಸಿದರೂ ಮುರಿದು ಕಟ್ಟುವ, ಕಾವ್ಯಕ್ಕೆ ಆ ರೀತಿಯಲ್ಲಿ ಹೊಳಪು ನೀಡುವ ಕ್ರಿಯೆ ಪ್ರತಿಭಾನ್ವಿತ ಕೃತಿಕಾರನಿಗೆ ಸಾಧ್ಯವಾಗುತ್ತದೆ. ತನ್ನ ಭಾವ ಸಂವಹನಕ್ಕೆ ಪೂರಕವಾದ ಭಾಷೆಯನ್ನು ಸ್ವತಃ ಸೃಜಿಸಿಕೊಂಡು ವಿಶಿಷ್ಟ ರೀತಿಯಲ್ಲಿ ಅಭಿವ್ಯಕ್ತಗೊಳಿಸಿದಾಗ ಅವನದೇ ಆದ ಸ್ವಯಂ ನಿರ್ಮಿತ ಶೈಲಿ ಸಿದ್ಧಗೊಳ್ಳುತ್ತದೆ. "ಶೈಲಿ ಎನ್ನುವುದು ಭಾಷೆಯಲ್ಲಿ ಕವಿಯ ಅನುಭವವು ಪಡೆಯುವ ಆಕಾರ ಇದನ್ನೇ ವಿಶಾಲವಾದ

ಅರ್ಥದಲ್ಲಿ ಅಭಿವ್ಯಕ್ತಿ ಎಂದು ಕರೆಯುತ್ತೇವೆ. ಅಭಿವ್ಯಕ್ತಿಯನ್ನು ಕುರಿತು ಕ್ರೋಚೆ ಎಂಬ ವಿಮರ್ಶಕ ಹೇಳುವ ಕೆಲವು ಸಂಗತಿಗಳನ್ನು ಇಲ್ಲಿ ಪರಿಶೀಲಿಸುವುದು ಅಗತ್ಯ. ಕ್ರೋಚೆಯ ಪ್ರಕಾರ ಕಲಾವಿದನ ಪ್ರತಿಭಾನ(**Intution**)ದಿಂದ ಮೊಟ್ಟ ಮೊದಲಿಗೆ ಅವನ ಮನಸ್ಸಿನಲ್ಲಿ ಮೂಡುವ ಕಲಾಕೃತಿಯೇ ಅಭಿವ್ಯಕ್ತಿ(**Expression**). ಕಲಾವಿದ ತನ್ನ ಮನಸ್ಸಿನಲ್ಲಿ ಹೊಳೆದ ಭಾವಾನುಭವಕ್ಕೆ ರೂಪು ಕೊಡುವ ಕೆಲಸ ಅವನ ಒಳಗೆ ಪೂರ್ಣಗೊಳ್ಳುತ್ತದೆ. ಹಾಗೆ ಕಲಾವಿದನ ಪ್ರತಿಭಾನದಿಂದ ಆತನ ಮನಸ್ಸಿನಲ್ಲಿ ಮೂಡಿ ನಿಲ್ಲುವ ಕಲಾಕೃತಿಯೇ ನಿಜವಾದ ಅಭಿವ್ಯಕ್ತಿ."[೧೧೦]

ಶೈಲಿ ಮತ್ತು ಅಭಿವ್ಯಕ್ತಿ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಅಕ್ಕಮಹಾದೇವಿಯ ವಚನಗಳ ಒಟ್ಟು ನೋಟವನ್ನು ಪರಿಶೀಲಿಸುವುದು. ಹಾಗೂ ಅಕ್ಕಮಹಾದೇವಿಯ ವಚನಗಳಲ್ಲಿಯ ಪದ ಸಂಯೋಜನೆ ಆಯ್ಕೆ, ನಿರೂಪಣಾ ತಂತ್ರಗಳನ್ನು ಹಲವು ರೀತಿಯಲ್ಲಿ ವಿಶ್ಲೇಸಿಸಬಹುದಾಗಿದೆ. ಅಕ್ಕನ ಅಗಾಧವಾದ ಪ್ರತಿಭೆ, ಲೋಕಾನುಭವ, ಭಾವನಿರೂಪಣಾ ಕೌಶಲ್ಯ, ಭಾಷಾ ಪ್ರಾಢಿಮೆಗಳೆಲ್ಲ ಸಂಕಲಿತಗೊಂಡು ಅವಳ ವಚನಾಭಿವ್ಯಕ್ತಿಗೆ ಪೂರಕವಾಗಿ ಶಕ್ತಿಶಾಲಿಯಾದ, ಸಮರ್ಥವಾದ ಶೈಲಿ ಸಿದ್ಧಿಸಿದೆ. ಪರಿಚಿತವಾದ ಉಪಮೆಗಳು ಸಹಜ ಸುಂದರವಾದ ಅಲಂಕಾರಗಳು, ಪ್ರಾಸ, ಲಯ, ಗೇಯತೆಯಿಂದ, ಭಾವುಕತೆಯಿಂದ ರಮ್ಯವಾದ, ಮಧುರಭಕ್ತಿಯನ್ನು ನಿವೇದಿಸುವ ರೀತಿಯೇ ಸೊಗಸಾಗಿದೆ. ಚಿಕ್ಕ ಚಿಕ್ಕ ವಾಕ್ಯಗಳು, ಪದಬಂಧ, ಸ್ವರಭಾವಗಳು ಸಂದರ್ಭಕ್ಕೆ ತಕ್ಕಂತೆ ಹೊರಹೊಮ್ಮಿಸುವ ಅರ್ಥಸ್ಫುರಣಗಳು, ಅಕ್ಕನ ಭಾವಾಭಿವ್ಯಕ್ತಿಗೆ ಹೆಚ್ಚಿನ ಪುಷ್ಠಿಯನ್ನೊದಗಿಸಿವೆ. ಧ್ವನಿವಿಶಿಷ್ಟತೆಯನ್ನು ಹೊಂದಿವೆ. "ಬಸವಾದಿ ಶರಣರು ತಮ್ಮ ಅಭಿವ್ಯಕ್ತಿಯಲ್ಲಿ **ಶಿಷ್ಟ(ಗ್ರಾಂಥಿಕ)** ಮತ್ತು **ವ್ಯವಹಾರಿಕ** ಶೈಲಿಯನ್ನು ಬಳಸಿದ್ದಾರೆ. ಗ್ರಾಂಥಿಕ ಶೈಲಿಯು ಬರೆಹದ ಭಾಷೆಗೆ ನಿಕಟವಾಗಿರುತ್ತದೆ. ಮತ್ತು ಔಪಚಾರಿಕ ಭಾಷಿಕ ಸಂದರ್ಭದಲ್ಲಿ ಅದು ಬಳಕೆಯಾಗುತ್ತದೆ. ವ್ಯಾವಹಾರಿಕ ಶೈಲಿಯು ಮಾತು ಮತ್ತು ಬರವಣಿಗೆಯಲ್ಲಿ ಪರಸ್ಪರ ಆತ್ಮೀಯ ಸಲುಗೆ ಇರುತ್ತದೆ. ಅಲ್ಲಿ ಆಡು ಮಾತಿನ ಬಳಕೆ ಹೆಚ್ಚಿರುತ್ತದೆ."[೧೧೧]

ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ, ಮೊದಲಾದ ವಚನಕಾರರ ವಚನಗಳಲ್ಲಿ ಹಾಗೆಯೇ ಅಕ್ಕಮಹಾದೇವಿಯ ವಚನಗಳಲ್ಲಿ ಗ್ರಾಂಥಿಕ ಮತ್ತು ವ್ಯಾವಹಾರಿಕ ಶೈಲಿ ಬಳಕೆಯಾಗಿರುವುದನ್ನು ಗುರುತಿಸಲಾಗಿದೆ. ಅಕ್ಕಮಹಾದೇವಿಯು ವಚನಗಳ ನಿರೂಪಣೆಗೆ ಸಾಂದರ್ಭಿಕವಾಗಿ ಶಿಷ್ಟ ಮತ್ತು ವ್ಯವಹಾರಿಕ ಶೈಲಿಗಳೆರಡನ್ನು ಉಪಯೋಗಿಸಿ ರಚಿಸಿರುವ ವಚನಗಳು ವಿಶಿಷ್ಟ ಧ್ವನಿಶಕ್ತಿ ಮತ್ತು ಅರ್ಥಬಿತ್ತರ ಸಾಮರ್ಥ್ಯವನ್ನು ಪಡೆದಿವೆ.

ಶೈಲಿಯ ವಿಧಗಳು

೧. ಗ್ರಾಂಥಿಕ ಶೈಲಿ

"ಅಪಾರ ಗಂಭೀರದ ಅಂಬುಧಿಯಲ್ಲಿ
ತಾರಾಪಥವ ನೋಡಿ ನಡೆಯೆ,
ಛೈತ್ರದಿಂದ ದ್ವೀಪಾಂತರಕ್ಕೆ
ಸಕಲ ಪದಾರ್ಥವನೆಯ್ದಿಸುವುದು.
ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯನ ಸಮೀಪ
ತುರ್ಯಸಂಭಾಷಣೆಯನರಿದಡೆ ಮುನ್ನಿನಲ್ಲಿಗೆಯ್ದಿಸುವುದು."[೧೧೨]

"ಅಶನದಾಶೆಯಿಂ, ತೃಷೆಯ ತೃಷ್ಣೆಯಂ,
ಬೆಸನದ ಬೇಗೆಯಂ, ವಿಷಯದ ವಿಹ್ವಳತೆಯಂ,
ತಾಪತ್ರಯದ ಕಲ್ಪನೆಗಳಂ ಗೆಲಿದೆ.
ಇನ್ನೇನಿನ್ನೇನೆನ್ನಿಚ್ಛೆಯಾದುದು,
ಚೆನ್ನಮಲ್ಲಿಕಾರ್ಜುನ, ನಿನಗಂಜೆನಂಜೆ!"[೧೧೩]

"ದೃಶ್ಯವಾದ ರವಿಯ ಬೆಳಗು, ಆಕಾಶದ ವಿಸ್ತೀರ್ಣ,
ವಾಯುವಿನ ಚಲನೆ, ತರುಗುಲ್ಮಾದಿಗಳಲ್ಲಿಯ ತಳಿರು ಪುಷ್ಪ
ಷಡುವರ್ಣಂಗಳೆಲ್ಲ ಹಗಲಿನ ಪೂಜೆ!
ಚಂದ್ರಪ್ರಕಾಶ, ನಕ್ಷತ್ರ, ಅಗ್ನಿ,
ವಿದ್ಯುದ್ ಆದಿಗಳು ದೀಪ್ತಿಮಯವೆನಿಸಿಪ್ಪವುಗಳೆಲ್ಲ
ಇರುಳಿನ ಪೂಜೆ;
ಹಗಲಿರುಳು ನಿನ್ನ ಪೂಜೆಯಲ್ಲಿ ಎನ್ನ ಮರೆದಿಪ್ಪೆನಯ್ಯ,
ಚೆನ್ನಮಲ್ಲಿಕಾರ್ಜುನ."[೧೧೪]

"ಸೆಜ್ಜೆ ಉಪ್ಪರಿಸಿ, ಶಿವಲಿಂಗ ಕರಸ್ಥಲತೆ ಬರೆ,
ಪ್ರಜ್ವಲಿಸಿ ತೊಳಗಿ ಬೆಳಗುತ್ತಿಹ ಕಾಂತಿಯಲ್ಲಿ
ಜಜ್ಝರಿಸಿ ತನು–ಮನ, ದೃಷ್ಟಿನಟ್ಟು,
ನಟ್ಟದೃಷ್ಟಿಯೊಳು ಒಜ್ಜರಿಸಿ ಹರಿವ
ಶಿವಸುಖರಸದೊಳೋಲಾಡುತೆಂದಿಪ್ಪೆನೊ

ನಿಮ್ಮ ಸಜ್ಜನಿಕೆ ಸದ್ಭಕ್ತಿಯ ತಲೆಯೊತ್ತಿ ಕೂಡಿ ಆಡಿ ಲಜ್ಜೆಗೆಟ್ಟು
ನಿಮ್ಮನೆಂದಿಗೆ ನೆರೆವೆ ಚೆನ್ನಮಲ್ಲಿಕಾರ್ಜುನ?[-೧೧೫]

ಸ್ವಾನುಭಾವದ ಅಭಿವ್ಯಕ್ತಿಗೆ ಅಕ್ಕ ಬಳಸಿರುವ ಭಾಷೆ, ವಚನಗಳ ಒಳನೇಯ್ಗೆಯ ಶೈಲಿ ಎರಡೂ ಸಮರ್ಥವಾಗಿ ಒಂದಕ್ಕೊಂದು ಪೂರಕವಾಗಿ ವಚನಗಳಲ್ಲಿ ಅರ್ಥ ಮಡುಗಟ್ಟಿ ನಿಂತಿದೆ. ಅಂತರಂಗ ಬಹಿರಂಗಗಳೆರಡೂ ಅಕ್ಕನ ವಚನಗಳಲ್ಲಿ ಬೆರಗುಗೊಳಿಸುವ ಪರಿಯಲ್ಲಿ ನಿರೂಪಿತವಾಗಿವೆ. ಗ್ರಂಥಸ್ಥ ಭಾಷೆ, ಶೈಲಿ ಹಲವಾರು ವಚನಗಳಲ್ಲಿ ನೆಲೆಗೊಂಡು ಕನ್ನಡ ಭಾಷೆಯ ಅಂತಃಸತ್ವವನ್ನು ಇಮ್ಮಡಿಗೊಳಿಸಿವೆ. ಮೇಲ್ನೋಟಕ್ಕೆ ಸರಳವೆನಿಸಿದರೂ ಆಂತರ್ಯದಲ್ಲಿ ಅನಂತ ರಹಸ್ಯಗಳನ್ನು, ನಿಗೂಢವಾದ ವಿಶಿಷ್ಟ ಅರ್ಥತರಂಗಗಳನ್ನು ಹೊರಹೊಮ್ಮಿಸಬಲ್ಲ ಅಕ್ಕನ ವಚನಗಳ ಶೈಲಿ ನಾವೀನ್ಯವೂ, ಅನನ್ಯವೂ ಆಗಿರುವುದು ವಿಶೇಷ. ಅದಕ್ಕೆ ಕಾರಣ ಅಕ್ಕಮಹಾದೇವಿಯ ವ್ಯಕ್ತಿತ್ವ ವಿಶೇಷ! ಅವಳು ಜೀವನದಲ್ಲಿ ಎದುರಿಸಿದ ಸಂಘರ್ಷ, ಸನ್ನಿವೇಶಗಳು, ಅದಕ್ಕಿಂತಲೂ ಮಿಗಿಲಾಗಿ ಅಲೌಕಿಕ ಆಧ್ಯಾತ್ಮಿಕ ತೀವ್ರ ಹಂಬಲ!!

ಗ್ರಾಂಥಿಕ ಶೈಲಿಯ ವಚನಗಳಲ್ಲಿ ಭಾವ ವಿಸ್ತಾರವಾಗುತ್ತ, ಏಕಕಾಲಕ್ಕೆ ಭಾವದಾಳಕ್ಕೆ ಮತ್ತು ಎತ್ತರಕ್ಕೆ ವಿಸ್ತರಿಸಿ, ಭಾವ ಔನ್ನತ್ಯ ಹೊಂದಿ ಸಾರ್ಥಕತೆಯನ್ನು ಪಡೆಯುವುದು. ಅಕ್ಕಮಹಾದೇವಿ ತನ್ನ ಭಾವಾಭಿವ್ಯಕ್ತಿಗೆ ಆಲೋಚನೆ, ಚಿಂತನೆಗಳಿಗೆ ಸೂಕ್ತವಾದ, ಸಮರ್ಥವಾದ ಅರ್ಥವನ್ನೊಳಗೊಂಡ ಪದಸಂಯೋಜನೆ, ವಾಕ್ಯಬಂಧಗಳು, ವಿಷಯವಸ್ತುಗಳನ್ನು ಆಯ್ಕೆಮಾಡಿಕೊಂಡು ನಿರೂಪಿಸುವ ಕೌಶಲ್ಯ, ತಂತ್ರವನ್ನು ಸರಳವಾಗಿ, ಸಹಜವಾಗಿ, ಯಾವ ಸಂಕೋಚಗಳಿಗೆ ಒಳಗಾಗದೇ ಅಭಿವ್ಯಕ್ತ ಗೊಳಿಸುವ ಸ್ವತಂತ್ರ ನಿರ್ಭೀತ ಮನೋಧರ್ಮದ ಶೈಲಿಯನ್ನು ಅಳವಡಿಸಿಕೊಂಡಿದ್ದಾಳೆ. ಭಾಷೆಯ ಎಲ್ಲ ಇತಿಮಿತಿಗಳನ್ನು ಮೀರಿ ಅದರ ಪರಿಧಿಗಳನ್ನು ಮೀರಿ ನವನವೀನ ಸೃಜನಾತ್ಮಕ ಭಾಷೆಯ ಪುನರ್ ಸಂಯೋಜನೆ ಅಕ್ಕನ ವಚನಗಳಲ್ಲಿ ಕಂಡುಬರುತ್ತದೆ. ಭಾವನಿರ್ಭರತೆ ಭಾಷೆಯಲ್ಲಿ ಮಡುಗಟ್ಟಿ ಮೇರೆ ಮೀರಿ ಪ್ರವಹಿಸುವ ಅಭಿವ್ಯಕ್ತಿ ವಿಧಾನ ಅಳವಟ್ಟಿದೆ.

ಅಕ್ಕಮಹಾದೇವಿ ವಿವಿಧ ರೀತಿಯ ಶೈಲಿ ಅಭಿವ್ಯಕ್ತಿ ವಿಧಾನಗಳನ್ನು ಆಯಾ ಸಂದರ್ಭ ಮತ್ತು ಭಾವದೀಪ್ತಿಯ ಹೊಳಹಿಗೆ ಅನುಸಾರವಾಗಿ ಉಪಯೋಗಿಸಿ ವಚನಗಳ ಅರ್ಥವಲಯವನ್ನು ವಿಸ್ತಾರಗೊಳಿಸುತ್ತ ಸಮಕಾಲೀನ, ವಚನಕಾರರು ಮತ್ತು ವಚನಕಾರ್ತಿಯರ ವಚನ ಶೈಲಿಗಿಂತ ಭಿನ್ನತೆಯನ್ನು ಪಡೆದಿರುವಳು. ಗ್ರಾಂಥಿಕ ಶೈಲಿಯಲ್ಲಿ ಭಾಷಾ ಪ್ರೌಢಿಮೆ ಒಂದು ರೀತಿಯ ಎತ್ತರವನ್ನು ಪಡೆದಿದ್ದರೆ, ವ್ಯಾವಹಾರಿಕ ಶೈಲಿಯಲ್ಲಿ ಅಕ್ಕನ ಭಾಷೆ, ಭಾವಗಳು ಆತ್ಮೀಯತೆಯಿಂದ ಹೃದಯದಾಳಕ್ಕೆ ಇಳಿಯುತ್ತ ಭಾವ ತರಂಗಗಳನ್ನು ಹೊರಹೊಮ್ಮಿಸುತ್ತವೆ. ಅಕ್ಕನದು ಆತ್ಮೀಯ ಶೈಲಿ, ದೇಶೀ, ಜನಪದೀಯ ಮನೋಧರ್ಮಕ್ಕೂ ನಿಲುಕುವ ಪರಿಯೇ ವಿಶಿಷ್ಟ.

೨. ವ್ಯಾವಹಾರಿಕ ಶೈಲಿ

"ಎಲ್ಲಿ ಹೋದರೂ ಕಲಿಗೆ ಭಯವಿಲ್ಲ.
ಹಂದೆಗೆ ಸುಖವಿಲ್ಲ ಕೇಳಿರಣ್ಣ!
ಈವಂಗವಗುಣವಿಲ್ಲ, ಕರುಣ ಉಳ್ಳವಂಗೆ ಪಾಪವಿಲ್ಲ!
ಇನ್ನು ಪರಧನ-ಪರಸ್ತ್ರೀಯ ತೊರೆದಾತಂಗೆ
ಮುಂದೆ ಭವವಿಲ್ಲ, ಚೆನ್ನಮಲ್ಲಿಕಾರ್ಜುನ!"[೧೧೬]

"ಎಮ್ಮೆಗೊಂದು ಚಿಂತೆ! ಸಮಗಾರನಿಗೊಂದು ಚಿಂತೆ!!
ನನಗೆ ನನ್ನಚಿಂತೆ! ತನಗೆ ತನ್ನ ಕಾಮದ ಚಿಂತೆ!!
ಒಲ್ಲೆ ಹೋಗು, ಸೆರಗ ಬಿಡು ಮರುಳೆ!
ನನಗೆ ಚೆನ್ನಮಲ್ಲಿಕಾರ್ಜುನದೇವರು
ಒಲಿವನೋ ಒಲಿಯನೋ ಎಂಬ ಚಿಂತೆ!!"[೧೧೭]

ಸ್ಪುಟವಾದ ಪದ ಪುಂಜಗಳ ಸರಳ ವಾಕ್ಯಗಳ ಸಂಯೋಜನೆ ಭಾವಕ್ಕೆ ರೂಪು ನೀಡುವ ಭಾಷೆ, ಅಭಿವ್ಯಕ್ತಿಗಳು ಅಕ್ಕನ ವಚನಗಳಲ್ಲಿ ಎದ್ದುತೋರುತ್ತವೆ. ಲೋಕಾನುಭವ ವ್ಯವಹಾರಿಕ ವಚನಗಳಲ್ಲಿ ಗಟ್ಟಿಗೊಂಡಿದೆ. ತಟ್ಟನೆ ಅರ್ಥವಲಯದ ವಿಸ್ತಾರ ಮತ್ತು ಭಾವಗಳು ಏಕಕಾಲಕ್ಕೆ ಎದುರಿಗಿರುವವರೊಂದಿಗೆ ಸಂಭಾಷಿಸುವ ಆತ್ಮೀಯ ಸಲುಗೆಗಳು ಅಪ್ಯಾಯಮಾನವೆನಿಸುವುದು. ಅಕ್ಕಮಹಾದೇವಿಗೆ ಲೌಕಿಕ ಹೆಣ್ಣುಮಕ್ಕಳಂತೆ ಪ್ರಿಯಕರ, ಗಂಡ, ವಿವಾಹ, ದಾಂಪತ್ಯದ ಅನುಭವ, ಕನಸು, ವಿರಹಗಳ ಅಭಿವ್ಯಕ್ತಿಯಲ್ಲಿ ಸಂಕೋಚವಿಲ್ಲ, ಮುಜುಗರವಿಲ್ಲ. ತನ್ನ ಅನುಭವಗಳ ಅಭಿವ್ಯಕ್ತಿಗೆ ಬಳಸುವ ಪದ, ಅರ್ಥಗಳ ಬಗೆಗೂ ಸಂಕೋಚತನವಿಲ್ಲ. ಅಕ್ಕನದು ನಿರ್ಭರವಾದ ವ್ಯಕ್ತಿತ್ವ ನಿರ್ಭಯವಾದ ಅಭಿವ್ಯಕ್ತಿ ದೇಹ ದಿಗಂಬರ, ಪ್ರಾಣ ಚಿದಂಬರ, ಭಾವ ನಿರ್ಭರ, ಈ ದೇಹ, ಪ್ರಾಣ ಭಾವಗಳ ಬಗೆಗಿನ ಅಭಿವ್ಯಕ್ತಿಗಳಲ್ಲಿ ಭಾಷೆ ಭಾವಕ್ಕೆ ತಕ್ಕಂತೆ ನಿರ್ಭಯವಾಗಿ ಅಷ್ಟೇ ತಾದಾತ್ಮ್ಯದಿಂದ ವಚನಗಳಲ್ಲಿ ಆಕೃತಿ ಪಡೆದಿದೆ.

ಅಕ್ಕ ತನ್ನ ಭಾವಾಭಿವ್ಯಕ್ತಿಗೆ ಬಳಸಿದ ಆತ್ಮೀಯತೆಯ ಧಾಟಿ ಅನನ್ಯ ಮತ್ತು ನಾವಿನ್ಯವಾದುದು. ತನ್ನ ಕನಸನ್ನು ಹೇಳಿಕೊಳ್ಳುವ ಅಕ್ಕಮಹಾದೇವಿ ಅದನ್ನು ಕೇಳುವವಳು, ತನಗೆ ಅತೀ ಆತ್ಮೀಯಳು, ಹತ್ತಿರದವಳು, ತನ್ನ ಭಾವನೆಗೆ ಸ್ಪಂದಿಸುವವಳು ಎಂಬುದನ್ನು ಅಭಿವ್ಯಕ್ತಗೊಳಿಸಿದ ವಚನ ಅಕ್ಕನ ಅಭಿವ್ಯಕ್ತಿಯ ವಿಶಿಷ್ಟತೆಯನ್ನು ಸಾಕ್ಷೀಕರಿಸುತ್ತದೆ.

"ಅಕ್ಕ ಕೇಳವ್ವ, ಅಕ್ಕಯ್ಯ, ನಾನೊಂದ ಕನಸ ಕಂಡೆ!
ಅಕ್ಕಿಯಡಕೆ ಓಲೆ, ತೆಂಗಿನ ಕಾಯ ಕಂಡೆ!
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವ!
ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು!
ಚೆನ್ನಮಲ್ಲಿಕಾರ್ಜುನಯ್ಯನ ಕಂಡು ಕಣ್ತೆರೆದೆನು!"[೧೧೮]

ಅಕ್ಕನ ವಚನಾಭಿವ್ಯಕ್ತಿ ತುಂಬ ಸತ್ವಶಾಲಿ. ತನ್ನ ಕನಸಿನಲ್ಲಿ ತನ್ನ ಮನೆಗೆ ಭಿಕ್ಷಕ್ಕೆ ಬಂದವನ ರೂಪಾಕೃತಿ ಅವಳ ಮನ ಭಾವದಲ್ಲಿ ನಿಚ್ಚಳವಾಗಿ ಮೂಡಿದ ಬಗೆ, ಅವನ ರೂಪವನ್ನು ಕಣ್ಮುಂದೆ ತಂದು ನಿಲ್ಲಿಸುವ ಅಭಿವ್ಯಕ್ತಿ ಬೆರಗುಗೊಳಿಸುವಂತಹದು. ಭಿಕ್ಷಕೆ ಬಂದವನ ಮೋಹಕ್ಕೆ ಒಳಗಾಗಿ, ಪರವಶಳಾಗಿ, ಹಿಂದಿರುಗಿ ಹೋಗುವವನ ಬೆನ್ನು ಹತ್ತಿ ಕೈವಿಡಿದು ಕೂಡಿಕೊಳ್ಳುವ ಭಾವತೀವ್ರತೆ, ಆನಂದಾತಿಶಯದಲ್ಲಿ ಅಕ್ಕನಿಗಾದ ತನ್ಮಯತೆ, ಆ ಸಂತಸ ಸುಖಾನುಭವದಲ್ಲಿ ಕಣ್ಮುಚ್ಚಿ ಅನುಭವಿಸಿದ ಆರ್ದ್ರಭಾವ, ಕನಸು ನೈಜವೆಂದು ಮನದಲ್ಲಿ ಮೂಡಿದವವನ್ನು ಕಣ್ತೆರೆದು ನೋಡುವ ಆ ತವಕ, ತಲ್ಲಣ, ಆನಂದಾತಿರೇಕಗಳ ವಿಭಿನ್ನ ಭಾವಗಳೆಲ್ಲ ಏಕೀಭವಿಸಿ ಅಭಿವ್ಯಕ್ತಗೊಳಿಸಿದ ಅಕ್ಕನ ಅಭಿವ್ಯಕ್ತಿ ಸಾಮರ್ಥ್ಯ ಅಗಾಧವಾದುದು. ಅಕ್ಕ, ಅಕ್ಕಯ್ಯ, ಅವ್ವ ಸಂಬೋಧನೆ ತೀರ ಸನಿಹ, ಸ್ನೇಹ, ಸಲುಗೆಯನ್ನು ವ್ಯಕ್ತಪಡಿಸುತ್ತವೆ. ಕನಸನ್ನು ಕೇಳುವ ವ್ಯಕ್ತಿ ಆತ್ಮೀಯವಾಗಿದ್ದರೆ ಹೇಳಿಕೊಳ್ಳಲು ಸಾಧ್ಯವಾಗುವುದಲ್ಲದೆ, ಸಲಹೆ ಸಾಂತ್ವನವನ್ನು ಅವರಿಂದ ಪಡೆಯಬಹುದೆಂಬ ಭರವಸೆಯ ಭಾವ ಅಕ್ಕನದು. ಕನಸಿನ ಅಭಿವ್ಯಕ್ತಿಯ ಮತ್ತೊಂದು ವೈಶಿಷ್ಟವೆಂದರೆ, ಪ್ರಿಯಕರನ ರೂಪು, ಗುಣಗಳನ್ನು ಬಣ್ಣಿಸುವಳು. ಆದರೆ ಹೆಸರನ್ನು ಗೌಪ್ಯವಾಗಿಟ್ಟ ರೀತಿ, ಬಣ್ಣಿಸುವ ಗುಣವೈಶಿಷ್ಟ್ಯದಿಂದಲೇ ಆತನಾರೆಂಬುದನ್ನು ಅರುಹಬಲ್ಲ ಶಕ್ತಿ ಅಕ್ಕನ ವಚನಗಳಲ್ಲಿ ಅಭಿವ್ಯಕ್ತಗೊಂಡಿದೆ.

"ಅಕ್ಕ ಕೇಳಕ್ಕ!
ಆನೊಂದು ಕನಸ ಕಂಡೆ!
ಚಿಕ್ಕ ಚಿಕ್ಕ ಜಡೆಯ ಸುಲಿಪಲ್ಲ ಗರುವನು
ಬಂದೆನ್ನ ನೆರೆದ ನೋಡವ್ವ!
ಆತನನಪ್ಪಿಕೊಂಡು ತಳವೆಳಗಾದೆನೆಲಗೇ!
ಚೆನ್ನಮಲ್ಲಿಕಾರ್ಜುನನ ಕೂಡಿ
ಕಣ್ತೆರೆದು ತಳವೆಳಗಾದೆನೆಲಗೇ!!"[೧೧೯]

ತನ್ನ ನಲ್ಲನ ಕೂಡುವ ಉತ್ಕಟ ಆಕಾಂಕ್ಷೆ ಅಕ್ಕನ ತನು–ಮನ–ಭಾವಗಳನ್ನೆಲ್ಲ ವ್ಯಾಪಿಸಿ, ಅದು ಕನಸಿನಲ್ಲಿ ಸಾಕಾರಗೊಂಡು, ಬಯಕೆ ಪೂರ್ಣಗೊಂಡು ಆನಂದತುಂದಿಲಿತಳಾದ, ತಲ್ಲಣಗೊಳಗಾದ ಭಾವ ತೀವ್ರತರವಾಗಿ ಹೃನ್ಮನಗಳನ್ನು ತಟ್ಟುತ್ತದೆ. ಮಾಧುರ್ಯಭರಿತ, ಶೃಂಗಾರಭಾವ ಬೆರಗು ಬಿನ್ನಾಣಗಳೆಲ್ಲ ಕ್ಷಣಕ್ಷಣಕ್ಕೂ ಕುತೂಹಲ ಮೂಡಿಸುವ ಕನಸಿನ ಅಭಿವ್ಯಕ್ತಿ ಅಕ್ಕನಿಗೆ ವಿಶೇಷವಾಗಿ ಒಲಿದಿದೆ. ಚೆನ್ನಮಲ್ಲಿಕಾರ್ಜುನನ ಸಾನಿಧ್ಯಸುಖದ ಆನಂದ ಭರಿತಭಾವ, ಅದನ್ನು ಅನುಭವಿಸಿ ಎಚ್ಚರಗೊಂಡು ಅಕ್ಕ ಕೆಳದಿಗೆ ನಿವೇದಿಸುವ ರೀತಿಯೇ ಸೊಗಸಿನದು. ಆಕೆ ಅಕ್ಕನ ಭಾವಗಳನ್ನೆಲ್ಲ ಅರಿಯುವ, ಗೌರವಿಸುವ, ಹರ್ಷಿಸುವ ಪ್ರಾಣಸಖಿ, ಅವಳು ಆಗಾಗ ಅಕ್ಕನ ಅಂತರಂಗದ ಆವೇಶ, ಆನಂದಗಳನ್ನು ಅರಿತು ಸಂತೈಸುವ ಸ್ನೇಹಿತೆ. ಹಿರಿಯಳು, ಅವಳೆದುರಿಗೆ ಅಕ್ಕ ತನ್ನೆಲ್ಲ ಭಾವನೆಗಳನ್ನು ಬಿಚ್ಚಿಡುವಳು. ಯಾವ ಸಂಕೋಚ, ಬಿಗುಮಾನವಿಲ್ಲದೆ ತನ್ನಿನಿಯನ ರೂಪ, ಸೇರಿದ ಸುಖ ಪರಮ ಸಂತೃಪ್ತಿಯನ್ನು ಬಣ್ಣಿಸುವಳು. ಈ ಸಲುಗೆ ಎಲ್ಲರಲ್ಲಿ ದೊರೆಯದು. ಸ್ತ್ರೀ ಸಹಜವಾದ ಸಂವೇದನೆಗಳನ್ನು ಪರಿಭಾವಿಸುವ ನಿರೂಪಿಸುವ ಅಕ್ಕನ ಆರ್ದ್ರ ಆತ್ಮೀಯ ಶೈಲಿ ಅಭಿವ್ಯಕ್ತಿ ಧ್ವನಿಪೂರ್ಣವಾದುದು.

ಭಿನ್ನ ಭಾವಾಭಿವ್ಯಕ್ತಿಗೆ, ಆಯಾ ಸಂದರ್ಭಕ್ಕೆ ತಕ್ಕಂತೆ ಅಕ್ಕಮಹಾದೇವಿ ವಿಭಿನ್ನ ಶೈಲಿಗಳನ್ನು ಉಪಯೋಗಿಸಿ ಅಭಿವ್ಯಕ್ತಿಗೆ ಒಂದು ಸಮರ್ಥ ಶಕ್ತಿಯನ್ನು ತುಂಬಿರುವಳು. ಗ್ರಾಂಥಿಕ, ವ್ಯಾವಹಾರಿಕ ಶೈಲಿಗಳ ವಚನಗಳಲ್ಲದೆ ಒಂದೇ ವಚನದಲ್ಲಿ ಎರಡೂ ಶೈಲಿಗಳನ್ನು ಬಳಸಿ ಶಿಷ್ಟ ಮತ್ತು ದೇಶೀ ಭಾಷೆ, ಸಂಸ್ಕೃತಿಯನ್ನು ಮೇಳವಿಸಿ ವಚನಕ್ಕೆ ಭಾವಗೀತೆ ಮತ್ತು ದೇಶೀ ಸೊಗಡನ್ನು ಏಕಕಾಲಕ್ಕೆ ಅನುಭವಕ್ಕೆ ತಂದುಕೊಡುವ ವಚನಗಳ ವೈಶಿಷ್ಟ್ಯವೇ ಅನನ್ಯ!

ಶಿಷ್ಟ ಮತ್ತು ವ್ಯವಹಾರಿಕ ಶೈಲಿ

"ಇಹಕೊಬ್ಬ ಗಂಡನೆ? ಪರಕೊಬ್ಬ ಗಂಡನೆ?
ಲೌಕಿಕಕೊಬ್ಬ ಗಂಡನೆ? ಪಾರಮಾರ್ಥಕೊಬ್ಬ ಗಂಡನೆ?
ನನ್ನ ಗಂಡ ಚೆನ್ನಮಲ್ಲಿಕಾರ್ಜುನದೇವರಲ್ಲದೆ
ಮಿಕ್ಕಿದ ಗಂಡರೆಲ್ಲ ಮುಗಿಲಮರೆಯ ಬಣ್ಣದ ಬೊಂಬೆಯಂತೆ!"[೧೨೦]

"ಸಜ್ಜನವಾಗಿ ಮಜ್ಜನಕ್ಕೆರೆವೆ!
ಶಾಂತಳಾಗಿ ಪೂಜೆಯ ಮಾಡುವೆ!
ಸಮರತಿಯಿಂದ ನಿಮ್ಮ ಕೂಡುವೆ!
ಚೆನ್ನಮಲ್ಲಿಕಾರ್ಜುನಯ್ಯ,
ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ."[೧೨೧]

"ಎನ್ನ ಮನವ ಮಾರುಗೊಂಡನವ್ವ!
ಎನ್ನ ತನುವ ಸೊರೆಗೊಂಡನವ್ವ!
ಎನ್ನ ಸುಖವನೊಪ್ಪುಗೊಂಡನವ್ವ!
ಎನ್ನಿರವನಿಂಬುಗೊಂಡನವ್ವ!
ಚೆನ್ನಮಲ್ಲಿಕಾರ್ಜುನನೊಲುಮೆಯವಳಾನು!"[೧೨]

ಅಕ್ಕನ ಗಂಡ ಚೆನ್ನಮಲ್ಲಿಕಾರ್ಜುನ ಲೋಕದ ಜನರಂತೆ ವಾಸ್ತವಿಕನಲ್ಲವಾದರೂ ಆತನೊಂದಿಗಿನ ಸಂಬಂಧ ಮಾತ್ರ ವಚನಗಳಲ್ಲಿ ವಾಸ್ತವಿಕವಾಗಿ ಚಿತ್ರಿತಗೊಂಡಿರುವುದಕ್ಕೆ ಕಾರಣ, ಅಕ್ಕನ ಲೋಕಾನುಭವ ಹಾಗೂ ಅದನ್ನು ಭಾಷೆಯಲ್ಲಿ ಪಾಕಗೊಳಿಸಿದ ರೀತಿ ಅಪ್ಯಾಯಮಾನವಾಗಿ ಅಭಿವ್ಯಕ್ತಗೊಳಿಸಿದ ಪರಿ. ಲೌಕಿಕ ಜನರ ಬಾಳುವೆಯಂತೆಯೇ ಅವಳ ಬಾಳುವೆ ವಚನಗಳ ಭಾವಗಳಲ್ಲಿ ತೋರಿದರೂ ಅದು ವಾಸ್ತವ ದಾಂಪತ್ಯವಲ್ಲ. ಕಲ್ಪನೆ ಅದಕ್ಕೂ ಮೀರಿದ ಅಲೌಕಿಕ, ಅಮೂರ್ತ, ಆಧ್ಯಾತ್ಮಿಕ ಬಾಳುವೆ! ತನ್ನ ಆಲೋಚನೆ, ವಿಚಾರಗಳಿಗೆ ಅಕ್ಕ ಬಳಸಿರುವುದು ತನಗೆ ನಿಲುಕಿದ ವಾಸ್ತವ ಪ್ರಪಂಚವನ್ನೇ! ಅವಾಸ್ತವ ಬಾಳುವೆಗೆ ಅಕ್ಕನಿಗೆ ಆಸರೆಯಾಗಿರುವುದು ಪ್ರಾಯೋಗಿಕವಾದ ಲೌಕಿಕ ಜಗತ್ತೇ! ಎಂಬುದು ಗಮನಿಸಬೇಕಾದ ವಿಚಾರ!

ಅಕ್ಕಮಹಾದೇವಿಯ ಅಭಿವ್ಯಕ್ತಿ ನದಿಯಂತೆ ನಿರ್ಭರ ಸ್ವತಂತ್ರ ಮತ್ತು ಯಾವುದೋ ಅಮೂರ್ತ ಅನುಭವಾನಂದಕ್ಕೆ ತುಡಿಯುವ ತವಕ, ತಲ್ಲಣ, ನಿಲ್ಲದ ಪಯಣ, ಗುರಿ ಗಮ್ಯತೆಗಳ ಕಡೆಗೆ ಸದಾ ಧ್ಯಾನ! ತನ್ನ ಆಧ್ಯಾತ್ಮ ಯಾತ್ರೆಯಲ್ಲಿ ಅಡೆತಡೆಗಳೆದುರಾದಾಗ ಎದುರಿಸಿದ ರೀತಿ, ಸಹನೆ, ಸ್ವಗತ ಸಾಂತ್ವನ, ಏನೇ ಬಂದರೂ ನಿಲ್ಲದ ಸೋಲದ ಆತ್ಮಸ್ಥೈರ್ಯ, ಛಲ, ಬಲ, ಅಕ್ಕನ ವಚನಗಳಲ್ಲಿ ಆ ಭಾವಗಳಿಗೆ ತಕ್ಕಂತೆ ಅಭಿವ್ಯಕ್ತಿ ಏರಿಳಿತಗೊಳ್ಳುತ್ತದೆ, ಒಮ್ಮೆ ಆಕಾಶದೆತ್ತಕ್ಕೆ! ಮತ್ತೊಮ್ಮೆ ವಾರಿಧಿಯಾಳಕ್ಕೆ!! ಶಬ್ದಕ್ಕೂ ನಿಲುಕದ ಅಮೂರ್ತ ಭಾವಗಳನ್ನು ಭಾಷೆಗೆ ನಿಲುಕಿಸಿದ ಅಕ್ಕನ ಅಭಿವ್ಯಕ್ತಿ ವಿಭಿನ್ನ! ಅನಿರ್ವಚನೀಯವಾದ ಅಮೂರ್ತ ಭಾವಗಳನ್ನು ಸಾಂದರ್ಭಿಕವಾಗಿ, ಔಚಿತ್ಯಪೂರ್ಣವಾಗಿ ನಿರೂಪಿಸುವ ಅಕ್ಕನ ಪ್ರತಿಭಾಪೂರ್ಣ, ಗ್ರಾಂಥಿಕ, ವ್ಯವಹಾರಿಕ, ಶಿಷ್ಟ ವ್ಯವಹಾರಿಕ ಶೈಲಿಗಳಲ್ಲಿ ಮೂಡಿಬಂದ ವಚನಗಳು ಅನುಭಾವದ ರಸಗಟ್ಟಿಗಳು!

೨. ಪ್ರಾಸ

ಮಹಾದೇವಿಯಕ್ಕನ ವಚನ ರಚನೆಯ ಉದ್ದೇಶ. ಬಸವಾದಿ ಶರಣರಂತೆ ತತ್ವೋಪದೇಶವಾಗಲಿ, ಸಮಾಜ ಸುಧಾರಣೆ, ಧಾರ್ಮಿಕ ನೀತಿಬೋಧೆಯಾಗಲಿ ಆಗಿರದೆ, ತನ್ನ ಆಧ್ಯಾತ್ಮಿಕ ಪಥದ ಧ್ಯೇಯ ಸಾಧನೆಗಾಗಿ ಬದುಕಿನಲ್ಲಿ ಎದುರಾದ ಘಟನೆಗಳೆಲ್ಲ ಹಾಡಾಗಿ ಹರಿದಿವೆ. ರಸಾನುಭವದ ಧ್ವನಿರಮ್ಯತೆಯಿಂದೊಡಗೂಡಿದ ಅಕ್ಕನ ವಚನಗಳು ಮಾರ್ಗ ಸಂಪ್ರದಾಯದಂತೆ

ಛಂದೋಬಂಧಗಳಿಗೆ ಒಳಪಟ್ಟು ರಚಿತವಾದವುಗಳಲ್ಲ. ಸಹಜವಾಗಿ ಹರಿದು ಬಂದ ಝರಿಯಂತೆ! ತೊರೆಯಂತೆ! ಸಹಜತೆಯಲ್ಲೆ ಕಾವ್ಯದ ಕಸುವು ಆವರಿಸಿದೆ. ಅಕ್ಕನ ಕಾವ್ಯಾಭಿವ್ಯಕ್ತಿಯಲ್ಲಿ, ಮಧುರ ಭಕ್ತಿಯ ನಿರೂಪಣೆಯಲ್ಲಿ ಪ್ರಾಸ, ನಾದ, ಲಯಗಳೆಲ್ಲ ಮೇಳವಿಸಿ ವಚನಗಳಿಗೆ ಕಾವ್ಯಸ್ವರೂಪ ತಾನಾಗಿಯೇ ಒಲಿದು ಬಂದಿದೆ. ಪ್ರಾಸಾನುಪ್ರಾಸಗಳ ಸಂಯೋಜನೆ, ಪುನರುಕ್ತಿ, ಅಂತ್ಯಪ್ರಾಸಗಳುಳ್ಳ ವಚನಗಳು ವಿಶಿಷ್ಟಶೈಲಿಯೊಂದನ್ನು ರೂಪಿಸಿವೆ. "ಭಾರತೀಯ ಕಾವ್ಯಮೀಮಾಂಸೆಯಲ್ಲಿ ಅಲಂಕಾರಗಳಲ್ಲೊಂದೆಂದು ಗಣಿಸಿ ಶಬ್ಧಾಲಂಕಾರವೆಂಬ ಹೆಸರಿನಿಂದ ಕರೆಯಲಾಗಿದೆ. ಒಂದೇ ಬಗೆಯ ನಾದಗುಣವುಳ್ಳ ವರ್ಣಗಳ ಆವೃತ್ತಿಯನ್ನು ಕಾವ್ಯದಲ್ಲಿ ಪ್ರಾಸವೆಂದು ಕರೆಯಲಾಗುತ್ತದೆ ಯಲ್ಲದೆ, ಎಲ್ಲ ಕವಿಗಳು ಒಂದಲ್ಲ ಒಂದು ರೀತಿಯಲ್ಲಿ ಇಂಥ ಪ್ರಾಸಮೋಹಕ್ಕೆ ಒಳಗಾಗಿರುವುದು ಕಂಡು ಬರುತ್ತದೆ."[೧೨]

ಮಧುರಭಕ್ತಿಯ ವಚನಗಳು ಬಿಡಿಬಿಡಿಯಾದ ಮುಕ್ತಕಗಳು ಸ್ವಚ್ಛಂದವಾಗಿ ಅನಾವರಣಗೊಂಡಿವೆ. ಆದಿ, ಅಂತ್ಯ, ಅನು ಪ್ರಾಸಗಳು ಸಹಜವಾಗಿ ವಚನದಲ್ಲಿ ರಚನೆಯಾಗಿವೆ. "ಇಡೀ ಕಾವ್ಯವನ್ನೇ ಒಂದು ನೆಯ್ಗೆಯ ಹಾಸು ಎಂದು ಭಾವಿಸಿದರೆ, ಅದಕ್ಕೆ ದಡಿ, ಸೆರಗು, ಇರಬಹುದು. ಅದು ಸುಂದರವಾಗಿ ಕಾಣಲೆಂದು ನೇಕಾರನು ಹಾಸಿನ ಇಡೀ ಒಡಲಿನಲ್ಲಿ ಅನೇಕ ವಿನ್ಯಾಸಗಳನ್ನು ತಂದು ಬಟ್ಟೆಯ ಒಟ್ಟಂದ ಹೆಚ್ಚುವಂತೆ ಮಾಡುತ್ತಾನೆ. ಹೀಗೆಯೆ ಕಾವ್ಯದಲ್ಲಿ ಆದಿ, ಅಂತ್ಯ ಪ್ರಾಸಗಳು ಬಟ್ಟೆಯ ಇಡೀ ಅಂಚಾದರೆ ನಡುವಿನ ವಿನ್ಯಾಸಗಳನ್ನು ಅನುಪ್ರಾಸಗಳೆಂದು ಹೇಳಬಹುದು. ವಿನ್ಯಾಸದ ಪುನರುಕ್ತಿ ಪ್ರಮಾಣ ಚಂದಕ್ಕೆ ಕಾರಣವಾಗುವಂತೆ ಕಾವ್ಯದಲ್ಲಿಯ ಅನುಪ್ರಾಸಗಳ ಪುನರಾವರ್ತನೆಯು ರಚನೆಯ ಚೆಲುವನ್ನು ಹೆಚ್ಚಿಸುತ್ತದೆ."[೧೪]

ಪ್ರಾಸ ಪದ್ಯಕ್ಕೆ ಅನಿವಾರ್ಯವಲ್ಲದಿದ್ದರೂ ಭಾವಲಹರಿಗೆ, ಗೇಯತೆ, ರಮ್ಯತೆಯನ್ನು ತಂದು ಕೊಡಬಲ್ಲದು. ಪದ್ಯದ ಹೊರನೋಟ ಹಾಗೂ ಆಂತರಿಕ ಸೌಂದರ್ಯಾಭಿವ್ಯಕ್ತಿಗೆ ಪ್ರಾಸ ಅವಕಾಶವೀಯುವುದು. ಈ ಹಿನ್ನೆಲೆಯಲ್ಲಿ ಅಕ್ಕಮಹಾದೇವಿಯ ವಚನಗಳಲ್ಲಿ ಅನಾವರಣಗೊಂಡ ಪ್ರಾಸ ವೈವಿಧ್ಯತೆಗೆ ಹಲವು ಉದಾಹರಣೆಗಳನ್ನು ಗಮನಿಸಬಹುದಾಗಿದೆ. ಆದಿ ಪ್ರಾಸವನ್ನು ಅಕ್ಕ ತನ್ನ ಅನೇಕ ವಚನಗಳಲ್ಲಿ ಬಳಸಿಕೊಂಡು ವಚನದ ಧ್ವನಿಶಕ್ತಿ, ಭಾವಗಮ್ಯತೆಯನ್ನು ವ್ಯಕ್ತಪಡಿಸಿದ ರೀತಿಯೇ ಅನನ್ಯವಾದುದು.

"ಆಲಿಸೆನ್ನ ಬಿನ್ನಪವ!
ಲಾಲಿಸೆನ್ನ ಬಿನ್ನಪವ!
ಪಾಲಿಸೆನ್ನ ಬಿನ್ನಪವ!

ಏಕೆನ್ನ ಮೊರೆಯ ಕೇಳೆ?

ನೋಡೆಯೆನ್ನ ದುಃಖವ ಚೆನ್ನಮಲ್ಲಿಕಾರ್ಜುನಯ್ಯ?"[೧೨]

ವಚನದ ಆದಿ ಪ್ರಾಸವಾಗಿ ಕ್ರಮವಾಗಿ ಆಲಿಸು, ಲಾಲಿಸು, ಪಾಲಿಸು ಪದಗಳಲ್ಲಿ 'ಲ' ಕಾರವು ಪ್ರಧಾನವಾಗಿ ಅಭಿವ್ಯಕ್ತಗೊಂಡು 'ಲ' ವರ್ಣ ಹೃದ್ಯವೇದ್ಯವಾದ ಮೃದುಮಧುರ ಭಾವ ಕರುಣರಸವನ್ನು ವ್ಯಕ್ತಪಡಿಸುವುದು. ಈ ವಚನದ ಭಾವಾಂತರಂಗದಲ್ಲಿ ಅಕ್ಕನ ಆರ್ತತೆ, ಪ್ರಾರ್ಥನೆ, ಚೆನ್ನಮಲ್ಲಿಕಾರ್ಜುನನಲ್ಲಿ ಮೊರೆಯಿಡುವ ಅಭಿವ್ಯಕ್ತಿ, ಕರುಣಾರಸವಾಗಿ ಹರಿದಿದೆ. ನಾಲ್ಕು ಮತ್ತು ಐದನೆಯ ಚರಣಗಳಲ್ಲಿ ವರ್ಣಪಲ್ಲಟಗೊಂಡು 'ನ' ಕಾರವು ಕರುಣರಸದ ಭಾವತೀವ್ರತೆಯನ್ನು ಇಮ್ಮಡಿಗೊಳಿಸುತ್ತದೆ. ಅಕ್ಕನ ಬಹುಪಾಲು ವಚನಗಳ ಅಭಿವ್ಯಕ್ತಿಯ ಪ್ರಧಾನರಸ, ಕರುಣಾರಸ, ತನ್ನ ಅಧಿದೈವ, ಚೆನ್ನಮಲ್ಲಿಕಾರ್ಜುನನಲ್ಲಿ ಒಲುಮೆಗಾಗಿ ಪ್ರಾರ್ಥಿಸುತ್ತ ಪ್ರಾರಂಭವಾಗುವ ವಚನವು ಪ್ರಶ್ನೆಯಲ್ಲಿ ಅಂತ್ಯಗೊಳ್ಳುತ್ತದೆ. ಭಕ್ತನ ಮೇಲೆ ಕರುಣೆ ತೋರಿಸಬೇಕೆಂಬ ಆರ್ತತೆ ಮತ್ತು ದೇವನ ಒಲುಮೆ ತೋರದಾದಾಗ ಉಂಟಾಗುವ ನಿರಾಶೆ ಭಾವಗಳೆರಡು ಏಕಕಾಲಕ್ಕೆ ಅಭಿವ್ಯಕ್ತಗೊಂಡಿವೆ. ವಚನದ ಮೊದಲ ಭಾಗದಲ್ಲಿ ಆದಿ ಪ್ರಾಸದ ಬದಲಾದ ಸಂಯೋಜನೆಯಿದ್ದರೆ ಅಂತ್ಯದ ಭಾಗ ಪುನರಾವರ್ತನೆಗೊಳ್ಳುತ್ತ ಭಿನ್ನವಿಸುವ ಭಾವ ಅನುರಣಿಸುತ್ತದೆ. ಪ್ರಾರ್ಥನೆ, ಪರಿಪರಿಯಾಗಿ, ತೇಲುತ್ತ ಹೋದ ಭಾವ ಭಾಸವಾಗುತ್ತದೆ. ವಚನದ ಮೊದಲ ಪದ ಬದಲಾಗುತ್ತ ಹೋಗುವುದು. ಅಂತ್ಯಪದ ಪುನರಾವರ್ತನೆಗೊಂಡು ಸ್ಥಿರಗೊಂಡಿದೆ.

ಅಕ್ಕನ ಭಾವಾಭಿವ್ಯಕ್ತಿಗೆ ಪೂರಕವಾಗಿ ಲೋಕಾನುಭವ ವಚನಗಳಲ್ಲಿ ಹಾಸು ಹೊಕ್ಕಾಗಿ ತುಂಬಿಕೊಂಡಿದೆ. ವಿರಕ್ತಿ, ಆಧ್ಯಾತ್ಮಿಕ ಪಥಿಕಳಾದ ಅಕ್ಕ ಲೋಕವ್ಯವಹಾರ, ಅನುಭವಗಳಿಂದ ವಿಮುಖಳಾದವಳಲ್ಲ. ಅಲೌಕಿಕ, ಅನುಭಾವಕ್ಕೆ ವಾಸ್ತವಿಕ ಪ್ರಪಂಚವನ್ನು ಆಶ್ರಯಿಸಿದ ವಾಸ್ತವವಾದಿ. ಅಂತಹ ಮನೋಭಾವಗಳೆಲ್ಲ ಅಕ್ಕಮಹಾದೇವಿಯ ವಚನಗಳಲ್ಲಿ ತುಂಬಿಕೊಂಡಿರುವುದಕ್ಕೆ ಈ ವಚನವನ್ನು ಉದಾಹರಿಸಬಹುದು.

"ಚಂದನವ ಕಡಿದು ಕೊರೆದು ತೇದೊಡೆ

ನೊಂದೆನೆಂದು ಕಂಪ ಬಿಟ್ಟಿತ್ತೆ?

ತಂದು ಸುವರ್ಣವ ಕಡಿದೊರೆದೊಡೆ ಬೆಂದು ಕಳಂಕ ಹಿಡಿದಿತ್ತೆ?

ಸಂದುಸಂದನು ಕಡಿದು ಕಬ್ಬನು ತಂದು ಗಾಣದಲಿಕ್ಕಿ ಅರೆದಡೆ

ಬೆಂದು ಪಾಕಗೂಳ ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟಿತ್ತೆ?

ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು

ನಿಮಗೆ ಹಾನಿ!

ಎನ್ನ ತಂದೆ ಚೆನ್ನಮಲ್ಲಿಕಾರ್ಜುನದೇವಯ್ಯ
ಕೊಂದೊಡೆ ಶರಣೆಂಬುದ ಮಾಣೆ."[೧೨೬]

ಆದಿ ಪ್ರಾಸದಲ್ಲಿ ಸೊಗಸಾಗಿ ಸಂಯೋಜನೆಗೊಂಡ ವಚನದಲ್ಲಿ ಅಕ್ಕನ ಪ್ರತಿಭಾಪೂರ್ಣ ಶೈಲಿ ಗೋಚರಿಸುತ್ತದೆ, ಚಂದನ, ನೊಂದು, ತಂದು, ಸಂದು, ಬೆಂದು ಹಿಂದೆ ಪದಗಳ ಔಚಿತ್ಯಪೂರ್ಣ ನಡಿಗೆ ಎಲ್ಲ ಚರಣಗಳಲ್ಲಿ ಮುಂದುವರಿದು ಕೊಂದರೂ ಶರಣೆಂಬುದ, ಮಾಣೆನೆಂಬ ದೃಢನಿಲುವಿನಲ್ಲಿ ಪೂರ್ಣಗೊಳ್ಳುತ್ತದೆ. ತೊಂದರೆ ತಾಪತ್ರಯ, ಕಷ್ಟಗಳಿಗೆ ಅಂಜದ ಮನಸ್ಥಿತಿಯ ಭೌತಿಕ ಪ್ರಪಂಚದ ಪರಿಕರಗಳೇ ಗಟ್ಟಿಗೊಂಡಿರುವಾಗ, ಅಲೌಕಿಕ ಅನುಭಾವದ ಅನುಭೂತಿ ಪಡೆಯ ಹೊರಟ ಅಕ್ಕ ಆತ್ಮಸ್ಥೈರ್ಯದಿಂದ ಬಂದ ಸಂಕಷ್ಟಗಳನ್ನು ಸವಾಲಾಗಿ ಸ್ವೀಕರಿಸಿ ಗೆಲುವೆನೆಂಬ ಛಲ ಹೊಂದಿದ ವಾಸ್ತವವಾದಿ ಆಶಾವಾದಿಯಾಗಿ ನಿಲ್ಲುತ್ತಾಳೆ.

ಅಕ್ಕನ ವಚನಗಳಲ್ಲಿ ಆದಿಪ್ರಾಸ, ಅನುಪ್ರಾಸ, ಅಂತ್ಯಪ್ರಾಸಗಳು ಸಹಜವಾಗಿ ಮೂಡಿಬಂದಿರುವಂತೆಯೇ, ಸಹಜ ಭಾವಗಳು, ಅನುಭಾವಗಳು, ಹರಳುಗಟ್ಟಿ ನಿಂತಿವೆ. "ಅರ್ಥಪೂರ್ಣವಾದ ಚಿಕ್ಕ ಚಿಕ್ಕ ವಾಕ್ಯಗಳಿಂದೊಡಗೂಡಿದ ಅಕ್ಕನ ವಚನಗಳು ಸುಲಭವಾಗಿ ಅರ್ಥೈಸುವಂತಿದ್ದು ಭಾವಸ್ಫುರಣದ ಅಂತಃಶಕ್ತಿಯನ್ನು ಪಡೆದಿವೆ. ಬದುಕಿನ ಚಿರಂತನ ಮೌಲ್ಯಗಳ ಅನ್ವೇಷಣೆ ನಡೆಸುವ ಅಕ್ಕನ ವಚನಗಳು ಉದ್ಬೋಧಕವಾಗಿವೆ. ಮೇಲುನೋಟಕ್ಕೆ ಕೆಲವು ವಚನಗಳು ವಾಚ್ಯವೆನಿಸಿದರೂ ನಿಗೂಢವಾದ ವಿಶಿಷ್ಟಾರ್ಥ ತರಂಗಗಳನ್ನು ಹೊರಡಿಸಬಲ್ಲ ಧ್ವನಿಶಕ್ತಿಯಿಂದ ಗಮನಾರ್ಹವಾಗಿವೆ" ಆಡುಮಾತಿನ ದನಿಯಿಂದ ಆರ್ದವಾದ ಅಕ್ಕನ ಆತ್ಮೀಯ ಶೈಲಿ ಅಂತರಂಗವನ್ನು ತಟ್ಟುವಂತಿದೆ."[೧೨೭]

ಅಕ್ಕಮಹಾದೇವಿಯ ಹಲವಾರು ವಚನಗಳಲ್ಲಿ ಆದಿಪ್ರಾಸ ಅಂತ್ಯಪ್ರಾಸಗಳ ಸಂಯೋಜನೆಯಿಂದ ವಚನದ ಭಾವ ಮತ್ತಷ್ಟು ಹೊಳಪನ್ನು ಪಡೆದಿವೆ. ಶಬ್ಧಭಾರ ಎಲ್ಲೂ ಗೋಚರಿಸದೆ ಕಾವ್ಯ ಶಕ್ತಿಯನ್ನು, ಅರ್ಥವೈಶಾಲ್ಯವನ್ನು, ಭಾವವಿಸ್ತಾರವನ್ನು ಅಡಗಿಸಿಕೊಂಡ ವಚನಗಳು, ಭಾವಗೀತಾತ್ಮಕ ನಾದಲಯಗಳಿಂದ ಮೇಳವಿಸಿವೆ.

"ಕಳವಳದ ಮನವು ತಲೆಕೆಳಗಾದುವವ್ವ!
ಸುಳಿದು ಬೀಸುವ ಗಾಳಿ ಉರಿಯಾಯಿತವ್ವ!
ಬೆಳುದಿಂಗಳು ಬಿಸಿಲಾಯಿತ್ತು ಕೆಳದಿ!
ಹೊಳಲ ಸುಂಕಿಗನಂತೆ ತೊಳಲುತ್ತಿದ್ದೆನವ್ವ!
ತಿಳುಹಾ ಬುದ್ಧಿಯ ಹೇಳಿ ಕರೆತಾರೆಲೆಗವ್ವ!
ಚೆನ್ನಮಲ್ಲಿಕಾರ್ಜುನಂಗೆ ಎರಡರ ಮುನಿಸವ್ವ!"[೧೨೮]

ಆತ್ಮೀಯ ಭಾವದಲ್ಲಿ ಮೂಡಿ ಬಂದ ವಚನವಿದು. ನಲ್ಲನ ಕೂಡುವ ತವಕ ಹೆಚ್ಚಾದಂತೆ ತಲ್ಲಣವೂ ಅದರೊಂದಿಗೆ ಇಮ್ಮಡಿಗೊಳ್ಳುತ್ತದೆ. ತವಕ, ತಲ್ಲಣಗಳ ಕಳವಳದಿಂದ ಮನಸ್ಸು ಘಾಸಿಗೊಂಡಾಗ ಸಂತೈಸುವ ಸಂಗಾತಿಗಾಗಿ ಜೀವ ಹಾತೊರೆಯುವುದು. ಮಧುರ ಭಕ್ತಿ ಕಾವ್ಯದ ಎಲ್ಲ ಲಕ್ಷಣಗಳು ವಚನದಲ್ಲಿ ನಿರೂಪಿತವಾಗಿವೆ. ಆದಿ ಪ್ರಾಸದಲ್ಲಿ ಕಳವಳ, ಸುಳಿದು ಬೆಳುದಿಂಗಳು, ಹೊಳಲ, ತಿಳುಹೌ ಪದಗಳಲ್ಲಿ 'ಳ' ಕಾರವು ಪ್ರಧಾನವಾಗಿ, ಅನುಕ್ರಮವಾಗಿ ಅಲೆಯಂತೆ ತೇಲಿಬರುತ್ತದೆ. ಅಂತ್ಯಪ್ರಾಸದಲ್ಲಿ ಕರುಣಾಭಾವ ಆತ್ಮೀಯವಾಗಿ, 'ಅವ್ವ' ಪದದೊಂದಿಗೆ ಮುಕ್ತಾಯಗೊಂಡು ಕಾತರ, ಕಳವಳದಿಂದ ತೊಳಲಾಡುವ ತನು-ಮನಗಳಿಗೆ ಸಹಜವಾದ ಸೃಷ್ಟಿಯ ಗಾಳಿ, ಬೆಳದಿಂಗಳು, ಹಿತ ನೀಡದಾದಾಗ ತನ್ನ ಮನವರಿತು, ಸಂತೈಸುವ ಸ್ನೇಹಿತೆಯೊಡನೆ ತನ್ನ ಕಷ್ಟವನ್ನು ನಿವೇದಿಸಿಕೊಳ್ಳುವ ಪ್ರಣಯಿನಿಯ ಭಾವ ಸೊಗಸಾಗಿ ಮೂಡಿನಿಂತ ಅನುಭವ ವಾಗುತ್ತದೆ. ಅಕ್ಕಮಹಾದೇವಿ ಪಾರಮಾರ್ಥಿಕ ಅನುಭಾವವನ್ನು ಹೊಂದಲು ಆಶ್ರಯಿಸಿದ್ದು ಪ್ರಕೃತಿ, ಪ್ರಪಂಚವನ್ನೇ. ಮೂರ್ತಕಲ್ಪನೆ ಅಮೂರ್ತ ಅನುಭಾವ ಸಿದ್ಧಿಗೆ ಅಕ್ಕನಿಗೆ ನೆರವಾಗಿದೆ. ಪ್ರಾಪಂಚಿಕ ಸಂದರ್ಭಗಳೇ ಪಾರಮಾರ್ಥ ಸಾಧನೆಗೆ ಸೋಪಾನಗಳಾಗಿವೆ. ಅಂತೆಯೇ ಅಕ್ಕನ ಆಂತರ್ಯವೆಲ್ಲ ಲೋಕಾಂತಗೊಂಡಿರುವುದಕ್ಕೆ ವಚನಗಳೇ ಸಾಕ್ಷಿಯಾಗಿವೆ.

"ಹಣ್ಣ ಮೆದ್ದ ಬಳಿಕ, ಆ ಮರನ ಆರು ತರಿದರೇನು?
ಹೆಣ್ಣ ಬಿಟ್ಟ ಬಳಿಕ, ಆಕೆಯ ಕೂಡಿಕೊಂಡರೇನು?
ಮಣ್ಣ ಬಿಟ್ಟ ಬಳಿಕ, ಆ ಕೆಯ್ಯನಾರುತ್ತರೇನು?
ಚೆನ್ನಮಲ್ಲಿಕಾರ್ಜುನನ ಅರಿದ ಬಳಿಕ
ಆ ಕಾಯವ ನಾಯಿ ತಿಂದರೇನು, ನೀರ ಕುಡಿದರೇನು?"[೧೨೯]

ಆದಿ, ಅಂತ್ಯ, ಅನುಪ್ರಾಸಗಳು ಮೊದಲ ಮೂರು ಸಾಲುಗಳಲ್ಲಿ ಒಂದನ್ನೊಂದು ಅನುಸರಿಸಿ ನಾಲ್ಕನೇ ಚರಣದಲ್ಲಿ ತಟ್ಟನೆ ನಿಲುಗಡೆ ಹೊಂದುತ್ತದೆ. ಮೇಲಿನ ಮೂರು ಚರಣಗಳ ಭಾವಮುಷ್ಟಿಗೆ ಸಾಕ್ಷಿಯಾಗಿ ನಿಂತ ಭಾವ ಮೂಡುತ್ತದೆ. ಕೊನೆಯ ಚರಣದಲ್ಲಿ ಮೇಲಿನ ಎಲ್ಲ ವಿಚಾರಗಳಿಗೆ ನಿರ್ದಿಷ್ಟತೆ ಪ್ರಾಪ್ತವಾಗುತ್ತದೆ. ಅಲ್ಲಿ ನಿರ್ಭರ ಭಾವವೊಂದು ತಕ್ಷಣ ಪ್ರಕಟಗೊಳ್ಳುತ್ತದೆ. ಅಕ್ಕನ ವಚನಗಳ ವೈಶಿಷ್ಟ್ಯವೇ ಅಂತಹದು. ನದಿಯೊಂದು ಹಳ್ಳಕೊಳ್ಳಗಳಲ್ಲಿ ಹರಿದು, ವಾರಿಧಿಯನ್ನು ಸೇರುವ ತವಕದಂತೆ ಸೇರಿ ಮೀರಿನಿಂತು ಒಂದಾಗಿ ಬೆರೆತಂತೆ. ಅಕ್ಕನ ವಚನಗಳಲ್ಲಿ ಭಾವಗಂಗೆ ತರತಮ ದೃಷ್ಟಾಂತಗಳಿಂದ ಅಲಂಕಾರಗಳಿಂದ ಆಕೃತಿ ಪಡೆದು ಚೆನ್ನಮಲ್ಲಿಕಾರ್ಜುನನ ಚರಣಗಳಲ್ಲಿ ಅಡಗಿ ಗಾಂಭೀರ್ಯತೆಯನ್ನು ಆವರಿಸಿಕೊಳ್ಳುವುದು. ಅಕ್ಕನ ವ್ಯಕ್ತಿತ್ವ ಮುಳುಗಿ ಮೀರಿ ನಿಂತ ಮೇರು ನಿಲುವು. ಅದು ಸತತ ಸಾಧನೆಯಿಂದ ಸಿದ್ಧಿಸಿದೆ.

ಕಷ್ಟಕಾರ್ಪಣ್ಯಗಳಿಂದ ಗಟ್ಟಿಗೊಂಡ ವ್ಯಕ್ತಿತ್ವ ದೃಢತೆಯನ್ನು ಕಾಯ್ದುಕೊಳ್ಳುತ್ತದೆ. ಅಂತಹ ಮನಸ್ಥಿತಿ ಶರಣರಿಗೆ, ಆಧ್ಯಾತ್ಮ ಪಥಿಕರಿಗೆ ಮಾತ್ರ ದೊರೆಯುವುದಲ್ಲದೆ, ಲೌಕಿಕ ಜನರ ನಿಂದೆ ಅಪವಾದಗಳಿಂದ ನಿಷ್ಠೆ ಸಡಿಲಗೊಳ್ಳದೆ ಮತ್ತಷ್ಟು ಬಲಗೊಳ್ಳುತ್ತದೆ ಎಂಬ ದೃಢ ಮನಸ್ಸು ಅಕ್ಕನದು.

"ಕಟಿಹಾದ ಬಿದಿರಿನಲ್ಲಿ ಮರಳಿ ಕಳಲೆ ಮೂಡಬಲ್ಲುದೆ?
ಸುಟ್ಟ ಮಡಕೆ ಮುನ್ನಿನಂತೆ ಮರಳಿ ಧರೆಯನಪ್ಪಬಲ್ಲುದೆ?
ತೊಟ್ಟು ಬಿಟ್ಟು ಬಿದ್ದ ಹಣ್ಣು ಮರಳಿ ತೊಟ್ಟನಪ್ಪಬಲ್ಲುದೆ?
ಕಷ್ಟಕರ್ಮಿ ಮನುಜರು ಕಾಣದೆ ಒಂದ ನುಡಿದರೆ
ನಿಷ್ಠೆಯುಳ್ಳ ಶರಣರು ಮರಳಿ ಮರ್ತ್ಯಕ್ಕೆ ಬಪ್ಪರೆ?
ಚೆನ್ನಮಲ್ಲಿಕಾರ್ಜುನ."[೧೩೦]

'ಟ'ಕಾರ ವರ್ಣವುಳ್ಳ ಪದ ಆದಿಯಲ್ಲಿ ಬರುವುದರಿಂದ ವಚನಕ್ಕೆ ಒಂದು ರೀತಿಯ ನಿಷ್ಠುರತೆ ಪ್ರಾಪ್ತವಾದಂತೆ ಕಾಣುತ್ತದೆ. ಲಿಂಗಾಯತ ಸೈದ್ಧಾಂತಿಕತತ್ವ ಷಟಸ್ಥಲಗಳಲ್ಲಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಸ್ಥಿತಿಗಳಲ್ಲಿ ಸಂಚರಿಸಿ ಶಿವಸಾಯುಜ್ಯವನ್ನು, ಲಿಂಗಾಂಗ ಸಮರಸವನ್ನು ಹೊಂದುವ ಭಾವಔನತ್ಯವನ್ನು ಅಕ್ಕ ತನ್ನ ವಚನಗಳಲ್ಲಿ ಪ್ರತಿಪಾದಿಸಿರುವಳು. ಶರಣಸ್ಥಲದಲ್ಲಿ ನಿಂದ ಭಕ್ತನ ಮನಸ್ಥಿತಿಯನ್ನು ನಿರೂಪಿಸಲು, ನಿಷ್ಠೆಯುಳ್ಳ ಪದಶಯ್ಯೆಯನ್ನೇ ಉಪಯೋಗಿಸಿ ಭಕ್ತ ಭವಚಕ್ರಕ್ಕೆ ಸಿಲುಕದ ಪರಿಯನ್ನು ವರ್ಣಿಸಲು ಆಯ್ಕೆ ಮಾಡಿಕೊಂಡ ಪದಗಳು ಅವಳ ದೃಢತೆಯ ಧ್ವನಿಯಾಗಿ ವಚನದಲ್ಲಿ 'ಕಟಿಹಾದ' ಸುಟ್ಟ, ತೊಟ್ಟು, ಕಷ್ಟ, ನಿಷ್ಠೆ, ರೂಪದಲ್ಲಿ ಸಂಯೋಜನೆಗೊಂಡಿವೆ. ಆದಿಪ್ರಾಸ ಅನುರಣನ ರೀತಿಯಲ್ಲಿ ಗೋಚರಿಸಿದರೆ ಮೊದಲ ಮೂರು ಚರಣಗಳಲ್ಲಿ ಅಂತ್ಯಪ್ರಾಸ ಬಲ್ಲುದೆ? ಎಂಬ ಪ್ರಶ್ನಾರ್ಥಕವಾಗಿ ನಂತರದ ಎರಡು ಚರಣಗಳಲ್ಲಿ ಒಂದೇ ರೀತಿಯಾಗಿರುವುದು.

ದೃಷ್ಟಾಂತಗಳ ಹಿನ್ನೆಲೆಯಲ್ಲಿ ರಚಿತವಾದ ವಚನದಲ್ಲಿ ಲೋಕವ್ಯವಹಾರವನ್ನು ಮೀರಿನಿಂತು ಮುಕ್ತಿಮಾರ್ಗದ ತುತ್ತತುದಿಗೆ ಏರಿನಿಂತ ಭಕ್ತನ, ಶರಣನ ನಿಲುವು ಲೋಕದ ಜನರಿಗೆ ಮರುಳಾಗಿ ತೋರಿದರೆ, ಲೋಕವ್ಯಾಪಾರ ಶರಣನಿಗೆ ಮರುಳಾಗಿ ಕಾಣುವುದಲ್ಲದೆ, ಸಾಮಾನ್ಯ ಜನರ ನಿಂದೆಗಳಿಗೆ, ನಿಷ್ಠುರ ನುಡಿಗಳಿಗೆ ನೋಯದ ಪ್ರತಿಕ್ರಿಯಿಸದ ಸ್ಥಿತಪ್ರಜ್ಞತೆ ಅವಳಟ್ಟ ಮನೋಭಾವವನ್ನು ಅಕ್ಕ ಪ್ರಾಸರೂಪದಲ್ಲಿ ನಿರೂಪಣೆ ಮಾಡಿದ ರೀತಿ ಮನೋಜ್ಞವಾಗಿದೆ. ಪ್ರಾಪಂಚಿಕ ಜಂಜಡಗಳನ್ನೆಲ್ಲ ಜಯಿಸಿ ನಿಂದ ನಿರಾಳ ಮನಸ್ಥಿತಿಯನ್ನು, ಸ್ತುತಿನಿಂದೆಗಳನ್ನು ಸಮಭಾವದಿಂದ ಸ್ವೀಕರಿಸುವ ಶರಣನ ಭಾವ ವೈಶಾಲ್ಯ, ಭೌತಿಕ ಬದಲಾವಣೆಗೊಳಗಾದ ಒಣಗಿದ ಬಿದಿರು ಸುಟ್ಟ ಮಡಕೆ, ತೊಟ್ಟು ಬಿಟ್ಟ ಹಣ್ಣು ಮೊದಲ ಸ್ಥಿತಿಗೆ ಮರಳಲಾರವು, ಲಿಂಗನಿಷ್ಠೆಯಿಂದ ಸಾಧನೆಯ ಸಿದ್ಧಿ

ಪಡೆದ ಶರಣನು ಭವಬಂಧನವನ್ನು ಮೀರಿ, ಭವಚಕ್ರವನ್ನು ದಾಟಿ, ಮೃರ್ತ್ಯದ ಮನೋವ್ಯಾಪಾರ ಗಳನ್ನು ಜಯಿಸಿ, ಮುಕ್ತಾತ್ಮರಾದ ಮಹಾಂತರು ಲೋಕದ ಮನುಜರಂತೆ ಸಾಮಾನ್ಯರಾಗಿ ತೋರಿದರೂ ಭವವನ್ನು ಗೆದ್ದು ಭವಹರನನ್ನು ಕೂಡಿದವರು ಅಂಥವರ ಕುರಿತು ತಿಳಿಯದ ಜನ ಏನ ನುಡಿದರೂ ನಿಷ್ಠೆಯ ಪರಾಕಾಷ್ಠೆ ಮುಟ್ಟಿದ ಶರಣರು ಮರ್ತ್ಯಕ್ಕೆ ಮರಳಲಾರರೆಂಬ ಸಂದೇಶ ಅಭಿವ್ಯಕ್ತಗೊಳಿಸುವ ಅಕ್ಕನ ವಚನ ಬಸವಣ್ಣನವರ ವಿಶಿಷ್ಟ ಶೈಲಿಯೊಂದನ್ನು ನೆನಪಿಸುತ್ತದೆ.

"ಕಡೆಗೆ ಮಾಡದ ಭಕ್ತಿ ದೃಢವಿಲ್ಲದಾಳುತನ!
ಮೃಡನೊಲಿಯ ಹೇಳಿದರೆ ಎಂತೊಲಿವನಯ್ಯ?!
ಮಾಡಲಾಗದಳಿಮನವ ಮಾಡಿದರೆ ಮನದೊಡೆಯ ಬಲ್ಲನೈಸೆ!
ವಿರಳವಿಲ್ಲದ ಮಣಿಯ ಪವಣಿಸಿಹೆನೆಂದಡೆ!
ದುರುಳ ಚೆನ್ನಮಲ್ಲಿಕಾರ್ಜುನಯ್ಯನೆಂತೊಲಿವನಯ್ಯ!"[೧೩೧]

ಮಹಾದೇವಿಯಕ್ಕನ ವಚನಗಳ ಮೇಲೆ ಸಮಕಾಲೀನ ಶರಣರ ವಚನಗಳ ಪ್ರಭಾವವೂ ಆಗಿರುವುದು ಸಹಜವೆನ್ನುವ ಹಾಗೆ ವಿಷಯವಸ್ತು ನಿರೂಪಣೆಯಲ್ಲಿ ಆ ಪ್ರಭಾವ ದಟ್ಟವಾಗಿ ತೋರುತ್ತದೆ. ಕಡೆಗೆ ಮಾಡದ, ದೃಢವಿಲ್ಲದ, ಮೃಡ, ಮಾಡಲಾಗದ, ಮನದೊಡೆಯ ಪದಗಳಲ್ಲಿ ಪ್ರಯೋಗವಾಗಿರುವ 'ಡ' ವರ್ಣವು ನಿಷ್ಠುರತೆಯನ್ನು ದಂಡನೆಯನ್ನು ಅಭಿವ್ಯಕ್ತಗೊಳಿಸಲು ಬಳಕೆಯಾಗಿದೆ.

ಸಾಂಗವಾಗಿ ನೆರವೇರಿಸದ, ಕೊನೆಯವರೆಗೂ ಶ್ರದ್ಧೆಯಿಂದ ಪೂರೈಸದ ಭಕ್ತಿ, ಚಂಚಲತೆಯಿಂದ ಹಿಡಿದು ಬಿಟ್ಟು, ಮಾಡುವ ಸೇವೆಗೆ ದೃಢನಿಷ್ಠೆಯಿಲ್ಲದ ಭೃತ್ಯನಿಗೆ ಮೃಡ ಹೇಗೆ ಒಲಿಯುವನು? ಹಾರದಲ್ಲಿ ಮುತ್ತುಗಳು, ಒಂದಕ್ಕೊಂದು ಜೊತೆಯಾಗಿದ್ದರೆ ಹಾರವೆನಿಸುವದು, ವಿರಳವಾದ ಮುತ್ತುಗಳಿಂದ ಹಾರ ದೊರೆಯದು, ಅದರಂತೆಯೇ ನಿರಂತರ ನಿಷ್ಠೆಗೆ ಬದಲಿಸದ ಭಕ್ತಿಗೆ ಭಗವಂತನ ಒಲುಮೆ ಸಾಧ್ಯ. ಅದಿಲ್ಲದ ಚಾಂಚಲ್ಯ ಪ್ರವೃತ್ತಿಯವರಿಗೆ ದೇವದರ್ಶನ ದೊರಕದು. ಆದಿಪ್ರಾಸದಲ್ಲಿ ಬಳಕೆಯಾದ 'ಡ' ಪರುಷ ವರ್ಣವು ಶಿಕ್ಷೆಯನ್ನು ಆದರ ನಿಷ್ಠುರತೆಯನ್ನು ವ್ಯಕ್ತಗೊಳಿಸುತ್ತದೆ. ವಚನದಲ್ಲಿ 'ದೃಢತೆಗೆ ಮೃಡನೊಲುಮೆ' ಭಾವ ಪ್ರಧಾನವಾಗಿದೆ. ಆದಿಪ್ರಾಸ ವಚನದ ನಡೆಗೆ ವಿಶಿಷ್ಟ ಗತಿಯನ್ನು ನೀಡಿರುವುದನ್ನು ಹಲವು ವಚನಗಳಲ್ಲಿ ಕಾಣುತ್ತೇವೆ.

"ಮನ ಬೀಸರವಾದೊಡೆ ಪ್ರಾಣ ಪಲ್ಲಟವಹುದವ್ವ,
ತನು ಕರಣಂಗಳು ಮೀಸಲಾಗಿ
ಮನ ಸಮರಸವಾಯಿತ್ತು ನೋಡಾ!

ಅನ್ಯವನರಿಯೆ, ಭಿನ್ನವನರಿಯೆ!
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನ
ಬಳಿಯವಳಾನು ಕೇಳಾ ತಾಯೇ!"[೧೨೧]

ತನು ಮನಗಳ, ಪ್ರಾಣ ಕರಣಂಗಳ, ಸಮರಸದಿಂದ ನಾದಮಾಧುರ್ಯ ಹೊರಹೊಮ್ಮಿಸುವ ವಚನದ ಭಾವ ಅನ್ಯವನರಿಯದೆ, ಭಿನ್ನ ಭಾವಿಸದಂತೆ ಸೆಳೆಯುತ್ತದೆ. 'ಅನ್ಯವನರಿಯೆ' ಭಿನ್ನವನರಿಯೇ ಪದಪ್ರಯೋಗ ಧ್ವನಿರಮ್ಯತೆಯನ್ನೊಳಗೊಂಡ ಸತ್ವಶಾಲಿಯಾದ ಕಾವ್ಯವನ್ನು ಕಟ್ಟಿಕೊಡುತ್ತದೆ. ಅಕ್ಕನ ಜೀವನ ವ್ಯಕ್ತಿತ್ವವೇ ವಚನದ ವಸ್ತು ವಿಷಯ, ನೋವು ನಲಿವಾಗಿ ವಚನ ರೂಪದಲ್ಲಿ ಪ್ರವಹಿಸಿದೆ. ನೋವು ದೈನ್ಯತೆಯ ದನಿಯಾಗದೆ ಧನ್ಯತೆಯ ದಾರಿಯನ್ನು ತೋರಿಸುತ್ತದೆ. ದೀನಭಾವ ಧನ್ಯಭಾವದಲ್ಲಿ ಸಮರಸಗೊಳ್ಳುವುದೇ ವಚನಾಂತರಂಗ, ಅದೊಂದು ದಿವ್ಯದರ್ಶನ! ಬದುಕು ಬರಹ ಒಂದಾಗಿ ಬೆರೆತ ನಿರ್ಭಿಡೆಯ ಭಕ್ತಿಯ, ಶಕ್ತಿಯ ಅಭಿವ್ಯಕ್ತಿಮಾರ್ಗ ಅಕ್ಕನದು. ಅಭಿವ್ಯಕ್ತಿಗೆ ಪದ, ಸ್ವರ, ಭಾವ ಪ್ರಾಸಗಳೆಲ್ಲ ಪರಿಕರಗಳು, ಅವುಗಳ ಹದವರಿತ ಪ್ರಯೋಗದಿಂದ ಕಲಾತ್ಮಕ ಪರಿಕಲ್ಪನೆಗಳ ಅನಾವರಣ! ಪರಿಭಾವಿಸಿದಷ್ಟು ಆಳ, ವಿಸ್ತಾರ ಅದು ಅಕ್ಕನ ವಚನ ಮಾರ್ಗ!

"ಮಾಟಕೂಟದಲ್ಲಿ ಬಸವಣ್ಣನಿಲ್ಲ!
ನೋಟಕೂಟದಲ್ಲಿ ಪ್ರಭುದೇವರಿಲ್ಲ.
ಭಾವಕೂಟದಲ್ಲಿ ಅಜಗಣ್ಣನಿಲ್ಲ!
ಸ್ನೇಹಕೂಟದಲ್ಲಿ ಬಾಚಿರಾಜನಿಲ್ಲ.
ಇವರೆಲ್ಲರ ಕೂಟದಲ್ಲಿ ಚೆನ್ನಬಸವಣ್ಣನಿಲ್ಲ!
ಎನಗಿನ್ನೇವೆನಯ್ಯ, ಚೆನ್ನಮಲ್ಲಿಕಾರ್ಜುನಯ್ಯ?"[೧೨೨]

"ಮಾಟಕೂಟ ಬಸವಣ್ಣಂಗಾಯಿತ್ತು!
ನೋಟಕೂಟ ಪ್ರಭುದೇವರಿಗಾಯಿತ್ತು!
ಭಾವಕೂಟ ಅಜಗಣ್ಣಂಗಾಯಿತ್ತು!
ಸ್ನೇಹಕೂಟ ಬಾಚಿರಾಜಂಗಾಯಿತ್ತು!
ಇವರೆಲ್ಲರ ಕೂಟ ಚನ್ನಬಸವಣ್ಣಂಗಾಯಿತ್ತು ,
ಎನಗೆ ನಿಮ್ಮಲ್ಲಿ ಅವಿರಳದ ಕೂಟ ಚೆನ್ನಮಲ್ಲಿಕಾರ್ಜುನಯ್ಯ!"[೧೨೪]

ಇವೆರಡು ವಚನಗಳಲ್ಲಿ 'ಕೂಟ' ಪದ ಪ್ರಯೋಗ ಉಳಿದೆಲ್ಲ ಪದಗಳ ಸಂಯೋಗಕ್ಕೆ ಪ್ರಧಾನವಾಗಿ ಅನೋನ್ಯ ಸಂಬಂಧವನ್ನುಂಟು ಮಾಡಿದೆ. ಮೊದಲಿನ ವಚನದಲ್ಲಿ ಆದಿ ಪ್ರಾಸದೊಂದಿಗೆ

ಸಂಯೋಗಗೊಂಡು ಅಂತ್ಯ ಪ್ರಾಸದಲ್ಲಿ ನಿಲುಗಡೆ ಹೊಂದುವ ವಚನದ ಪ್ರತಿ ಚರಣಗಳು ಅವರವರ ವ್ಯಕ್ತಿತ್ವವನ್ನು ಪ್ರತ್ಯಕ್ಷಗೊಳಿಸುತ್ತವೆ. ಮತ್ತೊಂದು ವಚನದಲ್ಲಿ ಅದೇ ಪದ ಅಂತ್ಯಪ್ರಾಸದಲ್ಲಿ ಕಾರ್ಯಪೂರ್ಣಗೊಂಡ ಸಾಧನೆಯ ಸಿದ್ಧಿಯನ್ನು ಸಾಕ್ಷೀಕರಿಸುತ್ತದೆ.

ಸಮಕಾಲೀನ ಶಿವಶರಣರ ವ್ಯಕ್ತಿತ್ವವನ್ನು ಬಣ್ಣಿಸಿ ಅವರೊಂದಿಗೆ ತನ್ನ ವ್ಯಕ್ತಿತ್ವವನ್ನು ವಿಮರ್ಶಿಸಿಕೊಳ್ಳುವ ಅಕ್ಕನ ವಚನಗಳಲ್ಲಿ ಆದಿ, ಅಂತ್ಯ, ಅನುಪ್ರಾಸಗಳು ಸಂಯೋಜನೆಗೊಂಡ ವಿಭಿನ್ನ ನೆಲೆಯ ಶೈಲಿ ರೂಪುಗೊಂಡಿದೆ. ಸಾಧಕನಾದವನಿಗೆ ಚಿಂತನೆ, ಆತ್ಮವಿಮರ್ಶೆ ಅವಶ್ಯಕ. ಅದು ಮುಂದಿನ ಸಾಧನಾ ಪಥದ ಮಾರ್ಗದರ್ಶಿಯಾಗಿ ಮುನ್ನಡೆಸುವುದು. ಚಿಂತನೆ, ಸ್ವವಿಮರ್ಶೆಯಿಂದ ವ್ಯಕ್ತಿತ್ವ ಪ್ರಕಾಶಿಸುತ್ತದೆ. ಪೂರ್ಣತೆಯ ಕಡೆಗಿನ ತುಡಿತ ಹೆಚ್ಚಾಗುತ್ತದೆ. ಸಾಧನೆಯ ತುಡಿತ ಭಾವವನ್ನು ಅಕ್ಕ ಸಮರ್ಥವಾಗಿ ಅಭಿವ್ಯಕ್ತಗೊಳಿಸಿರುವುದರಿಂದ ವಚನಕ್ಕೆ ಒಂದು ರೀತಿಯ ಧ್ವನಿರಮ್ಯತೆ ಪ್ರಾಪ್ತವಾಗಿದೆ. 'ಕೂಟ' ಪದ ಇತರ ಪದಗೊಳೊಂದಿಗೆ ಏಕತ್ರವಾಗಿ ಭಾವಸ್ಫುರಣವನ್ನು ಅರ್ಥದೀಪ್ತಿಯನ್ನು ಹೆಚ್ಚಿಸಿದೆ. ಮನೋಹರವಾದ ಕಾವ್ಯಮಯ ಅಭಿವ್ಯಕ್ತಿಯಿಂದ ರಚಿತವಾದ ವಚನಗಳಲ್ಲಿ ಪ್ರಾಸಗಳ ಸಂರಚನೆ, ಲಯವಿನ್ಯಾಸ ಗೇಯತೆಯಿಂದ ಕೂಡಿದ ವಚನವಿನ್ಯಾಸ ಭಾವಪುಷ್ಟಿಗೆ ಪೂರಕವಾಗಿವೆ. ನಾದಗುಣದಿಂದ ಹೃದಯಗಮ್ಯವಾಗಿವೆ.

"ತುಂಬಿದುದು ತುಳುಕದು ನೋಡಾ!
ನಂಬಿದುದು ಸಂದೇಹಿಸದು ನೋಡಾ!
ಒಲಿದುದು ಓಸರಿಸದು ನೋಡಾ!
ನೆರೆಯರಿದುದು ಮರೆಯದು ನೋಡಾ!
ಚೆನ್ನಮಲ್ಲಿಕಾರ್ಜುನಯ್ಯ, ನೀನೊಲಿದ ಶರಣಂಗೆ
ನಿಸ್ಸೀಮ ಸುಖ ನೋಡಯ್ಯ!"[೧೩೫]

ದೇವನೊಲುಮೆಯಾದ ಶರಣನ ನಿಸ್ಸೀಮ ಸುಖವನ್ನು ವರ್ಣಿಸುವಲ್ಲಿ ಮಹಾದೇವಿಯಕ್ಕ ಅನುಪ್ರಾಸ, ಪುನರುಕ್ತಿ ಬಳಸಿ ರಚಿಸಿದ ವಚನದ ಲಯವಿನ್ಯಾಸ ಚರಣಗಳಲ್ಲಿಯ ನಾದಮಾಧುರ್ಯ ಅನುರಣಿಸಿ ಕೊನೆಯಲ್ಲಿ ಅದನ್ನು ಸಾಕ್ಷೀಕರಿಸುವ 'ನೋಡಾ' ಪದಪ್ರಯೋಗ ಪರಿಣಾಮಕಾರಿಯಾದ ಅಭಿವ್ಯಕ್ತಿಯೆನಿಸಿದೆ. ತುಂಬಿದುದು, ತುಳುಕದು, ನಂಬಿದುದು ಸಂದೇಹಿಸದು, ಒಲಿದುದು, ಓಸರಿಸದು, ನೆರೆಯರಿದುದು, ಮರೆಯದು, ಶಬ್ದ ಸಂಯೋಜನೆ ಅಕ್ಕನ ಶಕ್ತಿಶಾಲಿಯಾದ ಅಭಿವ್ಯಕ್ತಿಗೆ ಪೋಷಕವೆನಿಸಿದೆ.

ಅಕ್ಕಮಹಾದೇವಿಯ ವಚನಗಳಲ್ಲಿ ಕಾವ್ಯಾಭಿವ್ಯಕ್ತಿಗೆ ಪೂರಕವಾಗಿ ಅಂತ್ಯಪ್ರಾಸ ಸಹಜವಾಗಿಯೇ ಮೂಡಿ ಬಂದಿರುವುದರಿಂದ ವಚನಗಳಿಗೆ ಆಕರ್ಷಣೆ, ಭಾವಪುಷ್ಟಿ ಸಶಕ್ತ ಅರ್ಥಹೊಳಹು

ಸಿದ್ಧಿಸಿದೆ. ಅಂತರಂಗದ ಅವ್ಯಕ್ತ ಭಾವನೆಗಳಿಗೆ ಮೂರ್ತರೂಪ ದೊರೆತು ಧ್ವನಿಪೂರ್ಣ ಶೈಲಿ ನಿರ್ಮಿತವಾಗಿದೆ. ಉದಾಹರಣೆಗೆ

"ಒಮ್ಮೆ ಕಾಮನ ಕಾಲ ಹಿಡಿವೆ,
ಒಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ!
ಸುಡು ವಿರಹವನು! ಆರಿಗೆ ಧೃತಿಗೆಡುವೆ?
ಚೆನ್ನಮಲ್ಲಿಕಾರ್ಜುನ ದೇವನೆನ್ನನೊಲ್ಲದ ಕಾರಣ
ಎಲ್ಲರಿಗೆ ಹಂಗುಗಿತ್ತಿಯಾದೆನವ್ವ!"[೧೩೬]

ಲಿಂಗಮೋಹಿಯಾಗಿ ಮಲ್ಲಿಕಾರ್ಜುನನ ಕೂಡಬೇಕೆನ್ನುವ ಮಹದಾಸೆಯಿಂದ ವಿರಹದುರಿಯನ್ನು ಅನುಭವಿಸಿದ ವಿರಹಿಣಿ ಅಕ್ಕ ಅಂತಹ ಮಧುರ ಯಾತನೆಯನ್ನು ನೀಗಿಸೆಂದು ಕಾಮನಲ್ಲಿ, ಚಂದ್ರನಲ್ಲಿ ನಿವೇದಿಸಿಕೊಳ್ಳುವ ನಾಟಕೀಕರಣದ ಭಾವಾಭಿನಯ ಸೌಂದರ್ಯಾಭಿವ್ಯಕ್ತಿಯನ್ನು ಪ್ರಕಟಿಸುತ್ತದೆ. ಕಾಲು ಹಿಡಿವೆ ಸೆರಗೊಡ್ಡಿ ಬೇಡುವೆ, ಧೃತಿಗೆಡುವೆ ಶಬ್ಧಣೇಯ್ಗೆ ವಚನಾಂತರಂಗದ ವಿಕಳಾವಸ್ಥೆಯ ಕನ್ನಡಿಯಂತಿದೆ.

ಶಿವಸ್ವರೂಪವನ್ನು ಅರಿಯದ ಮನುಷ್ಯ ಜೀವನದ ಬರಡುತನವನ್ನು ನಿರರ್ಥಕವಾದ ಜೀವನದ ಕುರಿತು ಪ್ರಾಸಬದ್ಧತೆ, ಲಯಬದ್ಧತೆ, ದೇಶಿ ಭಾಷೆಯ ಸೊಗಡು, ದೃಷ್ಟಾಂತಗಳ ನಿರೂಪಣೆಗೆ ಅಕ್ಕನ ಲೋಕಾನುಭವ, ಅದನ್ನು ತನ್ನ ಅಭಿವ್ಯಕ್ತಿಯ ಅನುಕೂಲಕ್ಕೆ ತಕ್ಕಂತೆ ಬಳಸಿದ ರೀತಿ ಕಾವ್ಯ ಪ್ರತಿಭಾಶಕ್ತಿಯ ದ್ಯೋತಕವಾಗಿದೆ.

"ಮರವಿದ್ದು ಫಲವೇನು? ನೆಳಲಿಲ್ಲದನ್ನಕ್ಕ!
ಧನವಿದ್ದು ಫಲವೇನು? ದಯವಿಲ್ಲದನ್ನಕ್ಕ?
ಹಸುವಿದ್ದು ಫಲವೇನು? ಹಯನವಿಲ್ಲದನ್ನಕ್ಕ?
ರೂಪಿದ್ದು ಫಲವೇನು? ಗುಣವಿಲ್ಲದನ್ನಕ್ಕ?
ಅಗಲಿದ್ದು ಫಲವೇನು? ಬಾನವಿಲ್ಲದನ್ನಕ್ಕ?
ನಾನಿದ್ದು ಫಲವೇನು? ನಿಮ್ಮ ಜ್ಞಾನವಿಲ್ಲದನ್ನಕ್ಕ?
ಚೆನ್ನಮಲ್ಲಿಕಾರ್ಜುನ!"[೧೩೭]

ಆಳವಾದ ಲೋಕಾನುಭವ ಅದನ್ನು ಅಂತ್ಯಪ್ರಾಸಗಳ ಪದಗಳ ಸಂಯೋಗದಿಂದ ಹರಳುಗಟ್ಟಿಸುವ ಪ್ರಯತ್ನವನ್ನಿಲ್ಲಿ ಗುರುತಿಸಬಹುದಾಗಿದೆ. ಲೌಕಿಕ ದೃಷ್ಟಾಂತಗಳ ಮೂಲಕ ಆತ್ಮಜ್ಞಾನದ ಅರಿವು ಇರದ ಜೀವನ ವ್ಯರ್ಥವೆಂಬ ಮುಖ್ಯ ಸಂದೇಶವೊಂದನ್ನು ನಿರೂಪಿಸಲು ಅಕ್ಕ ಸಂರಚಿಸಿದ ಅಭಿವ್ಯಕ್ತಿ ವಿಧಾನವಿದು.

ಅಕ್ಕಮಹಾದೇವಿಗೆ ಭಕ್ತಿ, ಬದುಕು ಬರಹ, ಎರಡೂ ಆಗಿ ತನ್ನ ಆರಾಧ್ಯ ದೇವನನ್ನು ಕೂಡುವ ಹಂಬಲ, ತೀವ್ರ ಅಪೇಕ್ಷೆ. ಆ ಅಪೇಕ್ಷೆಯ ಈಡೇರಿಕೆಗೆ ಅಡ್ಡಿಯಾದ 'ಮಾಯೆ' ಕಾಯ, ಜೀವ, ಜಗತ್ತಿನ ಜಂಜಡಗಳನ್ನೆ ಬಿಡಿಸಿಕೊಳ್ಳುವ ಅದಮ್ಯ ಹೋರಾಟ. ಅದಕ್ಕೆ ಪ್ರೇರಕ ಶಕ್ತಿಯಾಗಿ ತನ್ನಾಶ್ರಯಕ್ಕೆ ನಿಲ್ಲಬೇಕೆಂಬ ಆರ್ತಪ್ರಾರ್ಥನೆ. ಅದಕ್ಕಾಗಿ ಅಕ್ಕ ಬೇಡಿಕೊಂಡ ಪರಿಪರಿಯಾದ ಕಳಕಳಿಯ ಭಾವಗಳೆಲ್ಲ ಕರುಣಾರಸವಾಗಿ ಸತ್ವಯುತವಾಗಿ ಅಭಿವ್ಯಕ್ತಗೊಂಡಿವೆ.

"ಎನ್ನ ಮಾಯದ ಮದವ ಮುರಿಯಯ್ಯ!
ಎನ್ನ ಕಾಯದ ಕಳವಳವ ಕೆಡಿಸಯ್ಯ!
ಎನ್ನ ಜೀವದ ಜಂಜಡವ ಬಿಡಿಸಯ್ಯ!
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯ,
ಎನ್ನ ಸುತ್ತಿದ ಮಾಯಾಪ್ರಪಂಚವ ಬಿಡಿಸಾ ನಿಮ್ಮ ಧರ್ಮ![೧೩೮]

ವಚನದ ಮೊದಲ ಪದ ಸ್ಥಿರವಾಗಿದ್ದು ಅನುಪ್ರಾಸ, ಅಂತ್ಯಪ್ರಾಸಗಳ ಬಂಧದಿಂದ ಸ್ವಚ್ಛಂದವಾಗಿ ಪ್ರವಹಿಸಿದ ವಚನಗಳ ಚರಣಗಳು ಭಾವಸ್ಫುರಣವನ್ನು ಪ್ರತಿಧ್ವನಿಸುತ್ತವೆ. ವಚನ ಕೊನೆಯ ಚರಣದವರೆಗೂ ಕುತೂಹಲ ಮೂಡಿಸಿ ಒಮ್ಮೆಲೆ ನಿಲುಗಡೆ ಪಡೆದು ಮಾಯಾ ಪ್ರಪಂಚವನ್ನು ಬಿಡಿಸುವುದು ದೇವರ ಧರ್ಮ! ಎನ್ನುವಲ್ಲಿ ಮುಕ್ತಾಯಗೊಳ್ಳುತ್ತದೆ. ಮಾಯೆಯನ್ನು ಬಿಡಿಸಲು ತನ್ನಿಂದ ಸಾಧ್ಯವಿಲ್ಲ ಅದರ ಭಾರ, ಹೊಣೆಗಾರಿಕೆಯನ್ನು ದೇವರಿಗೆ ಹೊರಿಸುವ ಅಕ್ಕನ ಶರಣಾಗತಿಯ ಅಭಿವ್ಯಕ್ತಿ ಭಕ್ತನ ಉತ್ಕಟ ಭಾವವನ್ನು ಸೊಗಸಾಗಿ ನಿವೇದಿಸುತ್ತದೆ. ಅದೇ ಭಾವವನ್ನು ಪ್ರಕಟಿಸುವ ಮತ್ತೊಂದು ವಚನವನ್ನು ಉದಾಹರಿಸಬಹುದು.

"ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ!
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ!
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ!
ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ
ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ!
ಚೆನ್ನಮಲ್ಲಿಕಾರ್ಜುನ, ನೀನೊಡ್ಡಿದ ಮಾಯೆಯನಾರು ಗೆಲಬಾರದು!"[೧೩೯]

ಕಾವ್ಯದ ಆಯಾಮಗಳನ್ನೆಲ್ಲ ಸಮರ್ಥವಾಗಿ ಪ್ರಯೋಗಿಸಿದ ಮಹಾದೇವಿಯಕ್ಕ ಪ್ರತಿಭಾಪೂರ್ಣ ವಿನೂತನ ಶೈಲಿಯನ್ನು ಹುಟ್ಟುಹಾಕಿರುವಳು. ವಚನದ ಮೊದಲಭಾಗ ಪರಿವರ್ತನೆ ಪಡೆದಿದ್ದರೆ ಅನುಪ್ರಾಸ ಅನಾಯಾಸವಾಗಿ ಮೂಡಿನಿಂತಿದೆ. ವಚನದ ಕೊನೆಯಭಾಗ ಸ್ಥಿರವಾಗಿದೆ. ಐದನೇ

ಸಾಲು ಮೇಲಿನ ನಾಲ್ಕು ಸಾಲುಗಳಿಗೆ ಭಾಷ್ಯ ಬರೆದಂತೆ 'ಬೆಂಗೋಲ' ಪದದಲ್ಲಿ ವ್ಯಕ್ತಗೊಂಡಿದೆ. ಅಂತ್ಯದ ಸಾಲು ಇಡೀ ವಚನದ ಭಾವವನ್ನು ಅಕ್ಕನ ಮನದಾಳದ ನಿರ್ಧಾರವನ್ನು ಗಟ್ಟಿಯಾಗಿ ಅಭಿವ್ಯಕ್ತಗೊಳಿಸುತ್ತದೆ. ಮಾಯೆಯೊಡ್ಡಿದ ದೇವನೇ ಅದರ ಗೆಲುವಿನ ಸೂತ್ರದಾರನು. ಅಲ್ಲದೆ ಹರಿಅಜಸುರರಿಗೆಲ್ಲ ಸಾಧ್ಯವಾಗದು ಎಂಬುದು ನಿಷ್ಠೆ, ನಿರ್ಧಾರ, ದೃಢಭಕ್ತಿಯ ಉಕ್ತಿಯದು. 'ಮಾಯೆ' ಪದ ಅಕ್ಕನ ವಚನಗಳ ಆಧಾರವಾಗಿದೆಯಲ್ಲದೆ ಸಾಕಷ್ಟು ವಚನಗಳಲ್ಲಿ ಬೇರೆ ಬೇರೆ ಭಾವಗಳ ಅಭಿವ್ಯಕ್ತಿಗೂ ಬಳಕೆಯಾಗಿದೆ. 'ಮಾಯೆ' ವಚನಗಳ ಮೂಲ ಭಾವವಾಗಿ ಹಲವು ಮುಖಗಳಲ್ಲಿ ವ್ಯಕ್ತಗೊಂಡಿದೆ.

ಪರಮಾತ್ಮನ ಅವಿರ್ಭಾವವಾದ ಪ್ರಕೃತಿಯಲ್ಲಿ ಅಸಂಭಾವ್ಯಗಳೆಲ್ಲ ಕೆಲವೊಮ್ಮೆ ಸಂಭವಿಸುವುದುಂಟು. ಅಸಂಭವ ಕಾರ್ಯಗಳು ಘಟಿಸಿದ ಬಗೆಯನ್ನು ಬಣ್ಣಿಸಲು ಅಕ್ಕಮಹಾದೇವಿ ಅಂತ್ಯಪ್ರಾಸದಲ್ಲಿ ಸಂರಚಿಸಿದ ವಚನ ತತ್ವದ ಮೇರು ಶಿಖರವೆನಿಸಿದೆ.

"ಸತ್ತ ಹೆಣ ಕೂಗಿದುದುಂಟು!
ಬೈಚಿಟ್ಟ ಬಯಕೆ ಕರೆದುದುಂಟು!
ಹೆಪ್ಪಿಟ್ಟ ಹಾಲು ಗಟ್ಟಿಗೊಂಡು ಸಿಹಿಯಾದುದುಂಟು!
ಇದ ನಿಶ್ಚಯಿಸಿ ನೋಡಿ ಚೆನ್ನಮಲ್ಲಿಕಾರ್ಜುನದೇವನಲ್ಲಿ."[೧೪೦]

ಬೈಚಿಟ್ಟ ಬಯಕೆ, ಭಾವಗಳೆಲ್ಲ, ಹೆಪ್ಪಿಟ್ಟು ಹಾಲು ಸಿಹಿಯಾಗಿ ತುಪ್ಪವಾಗಿ ಅಮೃತಸುಧೆ ಸ್ಫುರಿಸುವಂತೆ ಅಕ್ಕನ ಆಧ್ಯಾತ್ಮಿಕ, ವೈಚಾರಿಕ ನಿಲುವುಗಳೆಲ್ಲ ವಚನಗಳಲ್ಲಿ ರಸಾನುಭವ ಗಟ್ಟಿಕೊಂಡು ಭಾವರಸದೌತಣ ನೀಡುವ, ಅದರಕ್ಕೂ, ಉದರಕ್ಕೂ, ಹೃದಯಕ್ಕೂ, ಸಿಹಿಯನ್ನು ಹಂಚುವ ಹೃದಯಗಮ್ಯ ಹಾಡುಗಳು. ಭಾವಗಳನ್ನು ಅನುಭಾವದೆತ್ತರಕ್ಕೆ ನಿಲ್ಲಿಸಿ ಭಾಷೆಯಲ್ಲಿ ಬಟ್ಟಿಯಿಳಿಸುವ ಅಪೂರ್ವಶೈಲಿ ಅಕ್ಕನಿಗೆ ಸಹಜವಾಗಿ ಒಲಿದಿರುವುದು. ಲಿಂಗನಿಷ್ಠೆಯ ಮಾಹೇಶ್ವರನು ಅಂತರಂಗ ಬಹಿರಂಗದ ವ್ಯಾಪಾರ ಕ್ರಿಯಾದಿಗಳನ್ನೆಲ್ಲ ಲಿಂಗಕ್ಕೆ ಸರ್ವಸಮರ್ಪಣೆ ಗೈದು, ಲಿಂಗಮುಖಿಯಾಗಿ ಬದುಕುವ ಭಕ್ತನ ಲಕ್ಷಣಗಳನ್ನು ಮಹಾದೇವಿಯಕ್ಕ ನಿರೂಪಿಸಲು ಆದಿ ಪ್ರಾಸವನ್ನು ಪ್ರಯೋಗಿಸಿದ ವಚನವೂ ಲಿಂಗಕ್ಕಾಗಿಯೇ ಸಮರ್ಪಿತವಾಗಿದೆ.

"ಉಡುವೆ ನಾನು ಲಿಂಗಕ್ಕೆಂದು!
ತೊಡುವೆ ನಾನು ಲಿಂಗಕ್ಕೆಂದು!
ಮಾಡುವೆ ನಾನು ಲಿಂಗಕ್ಕೆಂದು!
ನೋಡುವೆ ನಾನು ಲಿಂಗಕ್ಕೆಂದು!
ಎನ್ನಂತರಂಗ ಬಹಿರಂಗಗಳ

ಲಿಂಗಕ್ಕಾಗಿ ಮಾಡಿಯೂ ಮಾಡದಂತಿಪ್ಪೆ ನೋಡಾ!
ಆನೆನ್ನ ಚೆನ್ನಮಲ್ಲಿಕಾರ್ಜುನನೊಳಗಾಗಿ
ಹತ್ತರೊಳಗೆ ಹನ್ನೊಂದಾಗಿಪ್ಪುದನೇನ ಹೇಳುವೆನವ್ವ!"[೧೪೧]

ಸರ್ವಕ್ರಿಯೆಗಳೆಲ್ಲವೂ ಲಿಂಗಕ್ಕಾಗಿ ಅದನ್ನು ಕೇವಲ ನೆಪಕ್ಕಾಗಿ ಮಾತ್ರ ಮಾಡದೆ ಮನಮುಟ್ಟಿ ಮಾಡುವೆನೆಂಬ ದೃಢನಿಷ್ಠೆ ಅಭಿವ್ಯಕ್ತಗೊಳಿಸಲು ಅಕ್ಕ ಬಳಸಿದ 'ಹತ್ತರೊಳಗೆ ಹನ್ನೊಂದಾಗಿದ್ದುದ' ನುಡಿ ಇಡೀ ವಚನದ ಅರ್ಥ ಪ್ರಚರತೆ ಮತ್ತು ಧ್ವನಿಪ್ರಖರತೆಯನ್ನು ಒಳಗೊಂಡು ವಚನದಲ್ಲಿ 'ನಿಷ್ಠೆ' ಬಲಗೊಂಡಂತೆ ತೋರುತ್ತದೆ. ಅಕ್ಕನದು ನಿಷ್ಠುರ ಭಕ್ತಿ. ಅದರ ಅಭಿವ್ಯಕ್ತಿಗಾಗಿ ಆಯ್ದುಕೊಂಡ ಪದಗಳಲ್ಲಿಯೂ ಅಷ್ಟೇ ಶಕ್ತಿಯಿರುವುದು. ಆ ಮೂಲಕ ಸತ್ವಪೂರ್ಣಶೈಲಿ ಅನಾವರಣಗೊಂಡಿದೆ.

ಲೋಕದ ಹಂಗು ತೊರೆದು ಚೆನ್ನಮಲ್ಲಿಕಾರ್ಜುನನ ಹಂಬಲದಿಂದ ಹಗಲಿರುಳೆನ್ನದೆ ಪ್ರಾರ್ಥಿಸಿ, ಧ್ಯಾನಿಸಿ ದಣಿವರಿಯದ ಅಕ್ಕಮಹಾದೇವಿ ಸದಾ ಶಿವಸ್ಮರಣೆಯಲ್ಲಿಯೇ ತನ್ಮಯಳಾಗಿ ತನು-ಮನ-ಭಾವಗಳಲ್ಲಿ ಬೆರೆತು ಬೇರಾಗದ ದೇವಭಾವದಿಂದ ಅನ್ಯ ವಿಷಯಗಳನ್ನು ಅರಿತರೂ ಮರೆತಂತೆ ಜೀವಿಸಿದ ರೀತಿ ಬೆರಗಿನದು. ಆ ಭಾವ ಸಹಜವಾಗಿ ಅವಳ ಆಂತರ್ಯದಿಂದ ಹೊರಹೊಮ್ಮಿದೆ.

"ನಮಗೆ ನಮ್ಮ ಲಿಂಗದ ಚಿಂತೆ,
ನಮಗೆ ನಮ್ಮ ಭಕ್ತರ ಚಿಂತೆ,
ನಮಗೆ ನಮ್ಮ ಆದ್ಯರ ಚಿಂತೆ,
ನಮಗೆ ನಮ್ಮ ಚೆನ್ನಮಲ್ಲಿಕಾರ್ಜುನಯ್ಯನ ಚಿಂತೆಯಲ್ಲದೆ
ಲೋಕದ ಮಾತು ನಮಗೇಕಣ್ಣ"[೧೪೨]

ಮಹಾದೇವಿಯಕ್ಕನ ವೈಶಿಷ್ಟಪೂರ್ಣ ಶೈಲಿಯಲ್ಲಿ ಮೂಡಿಬಂದ ವಚನವಿದು. ಮೊದಲ ಭಾಗ ಅಂತ್ಯಭಾಗ ಸ್ಥಿರವಾಗಿದ್ದು ಮಧ್ಯಭಾಗದಲ್ಲಿ ಮಾತ್ರ ಪದಗಳ ಬದಲಾವಣೆ, ಅದರೊಡಗೂಡಿ ಅರ್ಥವೈವಿಧ್ಯವನ್ನುಂಟು ಮಾಡುತ್ತದೆ. ಅಂತ್ಯದಲ್ಲಿ 'ಚಿಂತೆ' ಶಬ್ದದ ಪುನರಾವರ್ತನೆ ನಾದಮಾಧುರ್ಯ ಅಲೆ ಅಲೆಯಂತೆ ತೇಲಿ ಬಂದಂತೆ ಅನುಭವ ವೇದ್ಯವಾಗುತ್ತದೆ. ನಾಲ್ಕನೇ ಚರಣ ಅಂಕಿತವನ್ನೊಳಗೊಂಡ ಮೇಲಿನ ಭಾವಗಳ ಕುತೂಹಲಕ್ಕೆ ತೆರೆ ಎಳೆದಂತೆ, ೫ನೇ ಚರಣದಲ್ಲಿ ನಿರ್ಧರಿತ ತಟಸ್ಥಭಾವ ಎದ್ದು ತೋರುತ್ತದೆ. ಮೇಲಿನ ಎಲ್ಲ ಚರಣಗಳಲ್ಲಿರುವ ಭಾವಲಹರಿ ಕೊನೆಯ ಸಾಲಿನಲ್ಲಿ ಶುಷ್ಕಗೊಂಡಂತೆನಿಸುತ್ತದೆ. ನಾದಕ್ಕೆ ತಡೆಯೊಡ್ಡಿದಂತೆ ತಟ್ಟನೆ ಭಾವ ತಟಸ್ಥಗೊಳ್ಳುತ್ತದೆ.

'ಚಿಂತೆ' ಪದವನ್ನೇ ಅಂತ್ಯ ಪ್ರಾಸ ರೂಪದಲ್ಲಿ ಪ್ರಯೋಗಿಸಿ ಸುಂದರವಾಗಿ ಸಂರಚನೆಗೊಂಡ ಬಸವಣ್ಣನವರ ವಚನ ಅಪೂರ್ವವಾದ ಕಾವ್ಯ ಸೌಂದರ್ಯ, ಭಾವತರಂಗಗಳನ್ನು ಮೇಳವಹಿಸಿ ಕೊಂಡಿದೆ.

"ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ.
ಅಂಬುಜಕೆ ಭಾನುವಿನ ಉದಯದ ಚಿಂತೆ.
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ.
ಎನಗೆ ನಮ್ಮ ಕೂಡಲಸಂಗಮದೇವರ ನೆನೆವುದೆ ಚಿಂತೆ"[೧೪೩]

ಅಂತ್ಯಪ್ರಾಸ 'ಚಿಂತೆ' ಪದರಚನೆಯಲ್ಲಿ ಸಂರಚನೆಗೊಂಡು ವಿಭಿನ್ನವಾದ ಭಾವ ದೀಪ್ತಿಯನ್ನು ಹೊರಹೊಮ್ಮಿಸುತ್ತದೆ. "ಮೇಲಿನ ವಚನದಲ್ಲಿ ಚಿಂತೆ ಎಂಬ ಪದ ತನ್ನ ಅನುರಣನಗುಣದಿಂದ ಜೀವ-ದೇವನ ಅಗಲಿಕೆಯ ಆರ್ತತೆಯನ್ನು ವಿಪ್ರಲಂಬದಲ್ಲಿ ಹಿಡಿದು ಕರುಣರಸದ ಉದ್ಧೀಪನಕ್ಕೆ ಕಾರಣವಾಗುತ್ತದೆ. ವಚನದಲ್ಲಿಯ ಪದಗುಂಪನ ನೆಯ್ಗೆಯ ಮೂರು ವಿನ್ಯಾಸಗಳಂತೆ ಹೊಂದಿಕೆಯಾಗಿರುವುದನ್ನು ಗಮನಿಸಬೇಕು. "ಚಕೋರಂಗೆ" "ಅಂಬುಜಕೆ", "ಭ್ರಮರಂಗೆ", "ಎನಗೆ" ಅಂತ್ಯಪ್ರಾಸದಲ್ಲಿ "ಬೆಳಗಿನ ಚಿಂತೆ", "ಉದಯದ ಚಿಂತೆ", "ಬಂಡುಂಬಚಿಂತೆ" ಅದರಂತೆ ಮಧ್ಯದ ವಿನ್ಯಾಸದಲ್ಲಿ "ಚಂದ್ರಮನ", "ಭಾನುವಿನ", "ಪರಿಮಳದ" ಎಂದು ಹೊಂದಿಕೆ ಯಾಗಿರುವುದನ್ನು ನೋಡಬೇಕು. ಅರ್ಥದ ದೃಷ್ಟಿಯಿಂದಲೂ ತ್ರಿವಳಿ ಪದಗಳ ಜೋಡಿ ಆಂತರಿಕವಾಗಿ ಆಕರ್ಷಣೆಗೆ ಒಳಗಾಗುವುದನ್ನು ಪರಿಶೀಲಿಸಬೇಕಾಗುತ್ತದೆ."[೧೪೪]

ಅಕ್ಕಮಹಾದೇವಿಯ ವಚನ ಬಸವಣ್ಣನವರ ವಚನಕ್ಕೆ ಹೋಲಿಕೆಯೆನಿಸಿದರೂ, ಶಬ್ಧ ಸಂರಚನೆ ಮತ್ತು ಅರ್ಥವ್ಯಾಪ್ತಿ, ಕಾವ್ಯ ಸೌಂದರ್ಯ, ಭಾವಸೌಂದರ್ಯ, ಧ್ವನಿಶಕ್ತಿಗಳಲ್ಲಿ ವ್ಯತ್ಯಾಸವಿದೆ. ಬಸವಣ್ಣನವರ ವಚನ ಅಕ್ಕನ ವಚನಕ್ಕಿಂತಲೂ ಪ್ರಾಸ, ಪದಗಳ ಜೋಡಣೆ, ಭಾವಾರ್ಥಗಳಲ್ಲಿ ಹೆಚ್ಚಿನ ಸಿಧ್ಧಿಯನ್ನು ಸಾಧಿಸಿದೆ.

ವಚನ ಚಳುವಳಿಯ ಕಾಲಘಟ್ಟದಲ್ಲಿ ಬಸವಾದಿ ಶರಣರ ಸಮಕಾಲೀನಳಾಗಿ ಅವರೆಲ್ಲರ ವ್ಯಕ್ತಿತ್ವದ ಪ್ರತ್ಯಕ್ಷ ದರ್ಶನ ಮಾಡಿಕೊಂಡ ಅಕ್ಕಮಹಾದೇವಿ ಶರಣರ ವ್ಯಕ್ತಿ ವಿಶೇಷತ್ವವನ್ನು ಬಣ್ಣಿಸಲು ಭಾಷೆಯನ್ನು ಬಳಸಿದ ವಿಶಿಷ್ಟ ರೀತಿಯಿಂದಾಗಿ ಸಾಹಿತ್ಯ ಸಹಜವಾಗಿ ಅನುಭಾವ ಗಮ್ಯತೆಯನ್ನು ಪಡೆದಿದೆ. ವಚನಕ್ರಾಂತಿಯ ಸಮಾನತೆಯ ಹರಿಕಾರ, ಸಕಲ ಜೀವಾತ್ಮರಿಗೆ ಲೇಸಬಯಸಿ, ಭಕ್ತಿಭಂಡಾರಿಯೆನಿಸಿದ ಬಸವಣ್ಣನವರ ವ್ಯಕ್ತಿತ್ವ ಅಕ್ಕನ ಜೀವನ ಮತ್ತು ಸಾಹಿತ್ಯದ ಮೇಲೆ ಗಾಢವಾಗಿ ಪ್ರಭಾವ ಬೀರಿರುವುದನ್ನು ವಚನಗಳಲ್ಲಿ ಕಾಣುತ್ತೇವೆ.

ತಾನರಸುವ ದೇವ ಸಾನಿಧ್ಯಕ್ಕಾಗಿ ಹಾತೊರೆದು ಶರಣರ ಸಂಗಬಯಸಿ ಬಂದ ಅಕ್ಕನನ್ನು ಪ್ರಭುದೇವರು ಅಗ್ನಿಪರೀಕ್ಷೆಗೆ ಗುರಿ ಮಾಡಿದರೆ, ಬಸವಣ್ಣನವರು ಮಾತ್ರ ಹೃದಯದ ಮಮತೆಯನ್ನು ತೋರಿ ಅಕ್ಕನ ಸಾಧನೆ ಸಿದ್ಧಿಯನ್ನು ಮನದುಂಬಿ ಪ್ರಶಂಶಿಸಿದರು. ಆ ಪ್ರೀತಿ ಮಮತೆಯನ್ನು ಹೃದಯಾರೆ ಅನುಭವಿಸಿದ ಅಕ್ಕ ಆದರ ಅಭಿಮಾನವನ್ನು ಅಭಿವ್ಯಕ್ತಗೊಳಿಸಲು ಉಪಯೋಗಿಸಿದ ಭಾಷೆ ನಿರೂಪಿಸುವ ಶೈಲಿಯೂ ಅವರ ವ್ಯಕ್ತಿತ್ವದಷ್ಟೇ ಎತ್ತರವನ್ನು ಹೊಂದಿದೆ.

"ತನುವಿಡಿದು ದಾಸೋಹವ ಮಾಡಿ ಗುರುಪ್ರಸಾದಿಯಾದ ಬಸವಣ್ಣ!
ಮನವಿಡಿದು ದಾಸೋಹವ ಮಾಡಿ ಲಿಂಗಪ್ರಸಾದಿಯಾದ ಬಸವಣ್ಣ!
ಧನವಿಡಿದು ದಾಸೋಹವ ಮಾಡಿ ಜಂಗಮ ಪ್ರಸಾದಿಯಾದ ಬಸವಣ್ಣ!
ಇಂತೀ ತ್ರಿವಿಧವಿಡಿದು ದಾಸೋಹವ ಮಾಡಿ,
ಸದ್ಗುರು ಚೆನ್ನಮಲ್ಲಿಕಾರ್ಜುನಯ್ಯ,
ನಿಮ್ಮ ಶರಣ ಬಸವಣ್ಣ ಸ್ವಯಪ್ರಸಾದಿಯಾದನಯ್ಯ."[೧೪೫]

ವಚನದಲ್ಲಿ ಬಸವಣ್ಣನವರ ಸಿದ್ಧಿಯನ್ನು ಸೂರೆಗೈದು ತನುವಿಡಿದು, ಮನವಿಡಿದು, ಧನವಿಡಿದು ತ್ರಿವಿಧ ಪದಾವಳಿಗಳು ತ್ರಿಕರಣದಿಂದ ತ್ರಿವಿಧ ದಾಸೋಹಮಾಡಿ ಸ್ವಯಂಪ್ರಸಾದಿಯಾದ ಬಗೆಯನ್ನು ಅಕ್ಕ ಸೊಗಸಾದ ಶೈಲಿಯಲ್ಲಿ ಆದಿಪ್ರಾಸದಲ್ಲಿ ಬಣ್ಣಿಸುತ್ತ ಮಧ್ಯದ 'ದಾಸೋಹವಮಾಡಿ' ಪುನರಾವರ್ತಿತವಾಗುತ್ತದಾದರೂ ಪ್ರತಿಚರಣದ ಅಂತ್ಯ ಪದದ ಗುರು, ಲಿಂಗ, ಜಂಗಮ ಪ್ರಸಾದಿಯಾದ ಬಸವಣ್ಣ ವಾಕ್ಯಕ್ಕೆ ಅನುರಣನ ಹೊಂದುತ್ತ ಅರ್ಥವೈವಿಧ್ಯವನ್ನು ಹೊಳಯಿಸುತ್ತ ಸಾಗುತ್ತದೆ. ನಾಲ್ಕನೇ ಚರಣದಲ್ಲಿಯೂ ತ್ರಿವಿಧ ದಾಸೋಹವ ಮಾಡಿ ವಾಕ್ಯಬಂಧದಿಂದ ಐದನೇ ಸಾಲಿನಲ್ಲಿ ವಾಕ್ಯ ಮುಕ್ತತೆಯನ್ನು ಹೊಂದಿ ಮೇಲಿನ ಎಲ್ಲ ಚರಣಗಳ ವ್ಯಾಖ್ಯಾನದಂತೆ ಅಂತ್ಯಗೊಂಡು ನಿರ್ಧರಿತ ನಿಲುವೊಂದನ್ನು ಪ್ರಕಟಿಸುತ್ತದೆ. ಅದರೊಡನೆ ಬಸವಣ್ಣನವರ ವ್ಯಕ್ತಿತ್ವ ಪ್ರಕಾಶಿಸುತ್ತದೆ.

ಅಕ್ಕನ ಶೈಲಿಯ ವಿಶಿಷ್ಟತೆಯೆಂದರೆ **ಸೃಜನಶೀಲತೆ(Creativity)** ತನ್ನಂತರಂಗದ ಅನ್ವೇಷಣೆಯಲ್ಲಿ ಎದುರಾದ ಸಂಗತಿಗಳೆಲ್ಲಾ ಸಾಹಿತ್ಯದ ಸೋಪಾನಗಳಾಗಿ, ಅವೆಲ್ಲವುಗಳ ಸುಸಂಬದ್ಧ ಸಂಯೋಜನೆಯಿಂದ ವಚನ ಕಾವ್ಯಕೃತಿ ನಿರ್ಮಾಣಗೊಂಡಿರುವುದು. ವಚನಗಳು ಕಾವ್ಯಬಂಧಗಳಿಂದ ಸಂರಚನೆಗೊಳ್ಳುತ್ತವಾದರೂ ಅಕ್ಕನ ಅನುಭಾವ ನಿರೂಪಣೆಯಲ್ಲಿ ಸ್ವಚ್ಛಂದವಾಗಿ ಹಾರುವ ಹಕ್ಕಿಯಂತೆ ಮೇಲೆರುತ್ತ ರಸಭಾವ ಗುಣಶಕ್ತಿಯಿಂದ ಆಕರ್ಷಿಸುತ್ತದೆ. ಮುಕ್ತಕಗಳಂತಿರುವ ಅಕ್ಕನ ವಚನಗಳಲ್ಲಿ ರಸ, ಭಾವ, ನಾದ, ಲಯ, ಗೇಯತೆ, ಭಾವುಕತೆ, ಬದ್ಧತೆ, ಸ್ವಚ್ಛಂದತೆ, ಬಂಧ, ಮುಕ್ತತೆಗಳೆಲ್ಲ ಮೇಳವಿಸಿ ಆಕರ್ಷಿತವಾದ ಆನಂದಮಯ ಕಾವ್ಯಮಾರ್ಗ ನಿರ್ಮಾಣವಾಗಿದೆ.

೩. ಪುನರಾವರ್ತನೆ

ಪ್ರಾಸದಂತೆಯೆ, ಪುನರಾವರ್ತನೆಗುಣ ಅಕ್ಕಮಹಾದೇವಿಯ ವಚನಗಳಲ್ಲಿ ಕಂಡುಬರುವ ಮತ್ತೊಂದು ಮಹತ್ವದ ಪೂರಕ ಅಂಶ. ಭಾವನಿವೇದನೆಗೆ ಪುನರಾವರ್ತನೆ ವಚನಗಳಲ್ಲಿ ಅನಾಯಾಸವಾಗಿ ತೋರಿದ, ಒಲಿದ ರೀತಿಯದು.

"ಗುರುವಿನ ಕರುಣದಿಂದ ಲಿಂಗ ಜಂಗಮವ ಕಂಡೆ.
ಗುರುವಿನ ಕರುಣದಿಂದ ಪಾದೋದಕ ಪ್ರಸಾದವ ಕಂಡೆ.
ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ಗೋಷ್ಠಿಯ ಕಂಡೆ.
ಚೆನ್ನಮಲ್ಲಿಕಾರ್ಜುನಯ್ಯ ನಾ ಹುಟ್ಟಲೊಡನೆ
ವಿಭೂತಿಯ ಪಟ್ಟವ ಕಟ್ಟಿ, ಸದ್ಗುರುಸ್ವಾಮಿ
ಲಿಂಗಸ್ವಾಯತವ ಮಾಡಿದನಾಗಿ ಧನ್ಯಳಾದೆನು."[೧೪೬]

"ವಚನದಲ್ಲಿ ಭಾಷೆ ಆಡುಮಾತಾಗಿ ಬಂದಾಗ ಅದರ ಅರ್ಥಾಭಿವ್ಯಕ್ತಿಯ ಸಾಮರ್ಥ್ಯ ಹೆಚ್ಚುತ್ತದೆ. ಅಕ್ಷರಗಳು, ಸ್ವರಗಳು ಪುನರಾವರ್ತನೆಗೊಂಡಾಗ ಭಾವ ಜೀಕುತ್ತದೆ. ಅರ್ಥಹೊಮ್ಮುತ್ತದೆ."[೧೪೭]

"ವಚನ ವಾಕ್ಯಗಳ ಅನುರೂಪತೆಯಿಂದ ಸಾಲುಗಳ ಒಂದು ಭಾಗ ಪುನರಾವೃತ್ತಿಯಾದರೆ, ಒಂದು ಭಾಗ ಸ್ಥಿರವಾಗಿರುತ್ತದೆ. ವಾಕ್ಯ ಭಾಗಗಳ ಪುನರಾವೃತ್ತಿಯ ಮೂಲಕ ವಚನ ಲಕ್ಷಣಗಳಲ್ಲಿ ಒಂದಾದ ಸಾವಕಾಶತೆ ಏರ್ಪಡುತ್ತದೆ."[೧೪೮]

ಪದ, ವಾಕ್ಯಗಳ ಪುನರಾವರ್ತನೆ ಬಹಳಷ್ಟು ವಚನಗಳಲ್ಲಿ ಅಭಿವ್ಯಕ್ತಿಗೆ ಮೆರುಗನ್ನು ಅರ್ಥವಿಸ್ತಾರ, ವೈವಿಧ್ಯತೆಯನ್ನು ನೀಡಿದೆ.

"ಹಡೆವುದರಿದು ನರಜನ್ಮವ!
ಹಡೆವುದರಿದು ಗುರು ಕಾರುಣ್ಯವ!
ಹಡೆವುದರಿದು ಲಿಂಗ ಜಂಗಮ ಸೇವೆಯ!
ಚೆನ್ನಮಲ್ಲಿಕಾರ್ಜುನಯ್ಯನ ಶರಣರ ಸಂಗದಲ್ಲಿ
ನಲಿದಾಡು ಕಂಡೆಯಾ ಎಲೆ ಮನವೆ!"[೧೪೯]

"ಪಡೆವುದರಿದು ನರಜನ್ಮವ,
ಪಡೆವುದರಿದು ಹರಭಕ್ತಿಯ; ಪಡೆವುದರಿದು ಗುರುಕಾರುಣ್ಯವ,
ಪಡೆವುದರಿದು ಸತ್ಯಶರಣರನುಭಾವವ!

ಇಂತಾಗಿ ಚೆನ್ನಮಲ್ಲಿಕಾರ್ಜುನಯ್ಯನ ಶರಣರ ಅನುಭಾವದಲ್ಲಿ
ನಲಿನಲಿದಾಡು ಕಂಡೆಯಾ ಎಲೆ ಮನವೆ!"[೧೫೦]

ಈ ಎರಡು ವಚನಗಳಲ್ಲಿ ಅಲ್ಪ ವ್ಯತ್ಯಾಸವಿದ್ದರೂ, ಭಾವವೊಂದೆ! ವಾಕ್ಯಗಳ ಪುನರಾವರ್ತನೆಯಿಂದ ಪರಿಣಾಮದಲ್ಲಿ ನಿಧಾನತೆ, ಸಾಧ್ಯವಾಗಿದೆ. ಒಂದೇ ರೀತಿಯ ವಾಕ್ಯಬಂಧಗಳ ಪುನರಾವರ್ತನೆಯಿಂದ ಅನುರಣಸಿ ನಾದ ತುಂಬಿಕೊಂಡು ಶರಣರ ಅನುಭಾವ ಸುಖದಲ್ಲಿ ನಲಿದಾಡಿದಂತಹ ಅವ್ಯಕ್ತ ಆನಂದವುಂಟಾಗುವುದು.

"ಶಿವಂಗೆ ತಪ್ಪಿದ ಕಾಲ ಭಸ್ಮವಾದುದನರಿಯಾ?
ಶಿವಂಗೆ ತಪ್ಪಿದ ಕಾಮನುರಿದುದನರಿಯಾ?
ಶಿವಂಗೆ ತಪ್ಪಿದ ಬ್ರಹ್ಮನ ಶಿರ ಹೋದುದನರಿಯಾ?
ಚೆನ್ನಮಲ್ಲಿಕಾರ್ಜುನನ ಪಾದಕ್ಕೆ ತಪ್ಪಿದಡೆ
ಭವಘೋರನರಕವೆಂದರಿಯಾ ಮರುಳೇ."[೧೫೧]

ವಚನದ ಮೊದಲ ಅಂತ್ಯ ಭಾಗ ಸ್ಥಿರವಾಗಿ ಮಧ್ಯಭಾಗದಲ್ಲಿ ಚಲನಶೀಲತೆ ಕಾಣುತ್ತದೆ. ಆ ಚಲನಶೀಲ ಗುಣ ವಚನದ ಅರ್ಥವಲಯವನ್ನು ವಿಸ್ತರಿಸುತ್ತ ಹೋಗುತ್ತದೆ. ಪುನರಾವರ್ತನೆ, ಪ್ರಾಸ ಕೇವಲ ಛಂದೊಬಂಧಕ್ಕೆ ಸೀಮಿತವಾಗದೆ ನದಿಯಂತೆ ಎರಡು ಬದಿಗಳನ್ನು ಸ್ಪರ್ಶಿಸುತ್ತ ಶಬ್ದಾರ್ಥಗಳ ಭಾವ ಭಾಷೆಗಳ ಸುಂದರ ಬಂಧುರತೆ ಅಕ್ಕನ ವಚನಗಳಲ್ಲಿ ವ್ಯಾಪಿಸಿಕೊಂಡಿದೆ. ಭಾವಕ್ಕೆ ಭಾಷೆಯನ್ನು ಒಗ್ಗಿಸಿಕೊಳ್ಳುವ ಅಕ್ಕನ ಪ್ರತಿಭಾಶಕ್ತಿ ಸುಲಭಕ್ಕೆ ಸಾಧ್ಯವಾಗದು. ಮನದಿಂಗಿತವನ್ನು ಅಭಿವ್ಯಕ್ತಗೊಳಿಸುವಲ್ಲಿ ಶಬ್ಧ, ಅರ್ಥ, ಪ್ರಾಸಾನುಪ್ರಾಸಗಳ ಮೋಹಕ್ಕೆ ಒಳಗಾಗದೆ, ಸಹಜವಾದ ನಿವೇದನೆಗೆ ಅವೆಲ್ಲ ತಾನಾಗಿಯೆ ವಚನದೊಳಗಾಗಿ ಒಲುಮೆಯ ಆತ್ಮೀಯ ಭಾವವನ್ನು ವ್ಯಕ್ತಗೊಳಿಸುತ್ತವೆ. ಪ್ರಾಸ ಪುನರಾವರ್ತನೆಯಂತೆಯೇ ದ್ವಿರುಕ್ತಿ(ಪುನರುಕ್ತಿ) ಅಕ್ಕಮಹಾದೇವಿಯ ಹಲವಾರು ವಚನಗಳಲ್ಲಿ ಕಂಡುಬರುವ ವಿಶೇಷ ಅಂಶ. ತನ್ನ ಭಾವನೆಗಳಿಗೆ ಹೆಚ್ಚು ತೀವ್ರತೆ, ಬದ್ಧತೆ, ನಿಷ್ಠುರತೆಗಳನ್ನು ತುಂಬಲು ಆ ಪದ ಪ್ರಯೋಗವನ್ನು ಮಾಡಿರುವಳು.

೪. ದ್ವಿರುಕ್ತಿ

"ಹಸಿವೆ ನೀನು ನಿಲ್ಲುನಿಲ್ಲು, ತೃಷೆಯೇ ನೀನು ನಿಲ್ಲುನಿಲ್ಲು.
ನಿದ್ರೆಯೇ ನೀನು ನಿಲ್ಲುನಿಲ್ಲು, ಕಾಮವೇ ನೀನು ನಿಲ್ಲುನಿಲ್ಲು.
ಕ್ರೋಧವೇ ನೀನು ನಿಲ್ಲುನಿಲ್ಲು, ಮೋಹವೇ ನೀನು ನಿಲ್ಲುನಿಲ್ಲು.
ಲೋಭವೇ ನೀನು ನಿಲ್ಲುನಿಲ್ಲು, ಮದವೆ ನೀನು ನಿಲ್ಲುನಿಲ್ಲು.

ಮಚ್ಚರವೇ ನೀನು ನಿಲ್ಲುನಿಲ್ಲು, ಸಚರಾಚರವೇ ನೀನು ನಿಲ್ಲುನಿಲ್ಲು.
ನಾನು ಚೆನ್ನಮಲ್ಲಿಕಾರ್ಜುನದೇವರ ಅವಸರದ
ಓಲೆಯನೊಯ್ಯುತ್ತಿದ್ದೇನೆ ಶರಣಾರ್ಥಿ!"[೧೫೨]

ವಚನದಲ್ಲಿ ನಾಟಕೀಯ ಅಭಿನಯವೊಂದು ಅಭಿವ್ಯಕ್ತಗೊಳ್ಳುತ್ತ ಹಸಿವು, ತೃಷೆ, ನಿದ್ರೆ, ಅರಿಷಡ್ವರ್ಗಗಳು ಅಕ್ಕನ ಬೆಂಬತ್ತಿದಂತೆ. ಅವೆಲ್ಲ ಅಕ್ಕನಿಗಿಂತ ನಾ ಮುಂದು, ತಾ ಮುಂದು ಎಂಬಂತೆ ಅವಸರದಲ್ಲಿ ಓಡುತ್ತಿರುವಂತೆ, ಅವುಗಳಿಗೆ 'ನಿಲ್ಲು,ನಿಲ್ಲು' ಎಂದು ಪ್ರಾರ್ಥಿಸುವ ಅಕ್ಕ ಅವುಗಳಿಗಿಂತ ಅವಸರದಲ್ಲಿ ಕೈಯಲ್ಲಿ ಏನನೋ ಹಿಡಿದುಕೊಂಡು, ತವಕದಿಂದ, ದಾಪುಗಾಲಿಟ್ಟು ಓಡುತ್ತಿರುವಂತೆ ವಚನದುದ್ದಕ್ಕೂ ಭಾಸವಾಗುತ್ತದೆ. ಕೊನೆಯ ಎರಡು ಚರಣಗಳಲ್ಲಿ ತನಿಮಿತ್ಯ ವೈರಿಗಳಾದ, ಹಸಿವು, ತೃಷೆ, ನಿದ್ರೆ, ಕಾಮಾದಿ ಅರಿಷಡ್ವರ್ಗಗಳಿಗೆ ತನ್ನ ದೇವರನ್ನು ಕಾಣಲು, ಕೂಡಲು ಅವಸರದ ಸಂದೇಶವೊಂದನ್ನು ಕೊಂಡೆಯ್ಯುವ ಒತ್ತಡದಲ್ಲಿದ್ದೇನೆ. ಅದಕ್ಕಾಗಿ ತಾವು ಹಿಂಬಾಲಿಸದೆ ಮುಂದೋಡದೆ, ಕಾಡದೆ, ಬೇಡದೆ, ಸಹಕರಿಸಬೇಕು ಎಂಬ ವಿನಮ್ರ ಬೇಡಿಕೆಯಿದೆ.

ಇಡೀ ಸಚರಾಚರವೇ ಬೆನ್ನಟ್ಟಿ ಅಕ್ಕನನ್ನು ಹಿಮ್ಮೆಟ್ಟಿಸುವ ಗತಿ ತೀವ್ರತೆ ಕಾಣುತ್ತದೆ. ಅದೆಲ್ಲಕ್ಕಿಂತ ಅವಸರದಿಂದ ಮುಂದೆ ಸಾಗಿ ಸಚರಾಚರವೇ ನಿಲ್ಲುನಿಲ್ಲು ಎಂಬ ದ್ವಿರುಕ್ತಿಯಲ್ಲಿ ವಚನದ ಸತ್ವ, ಧ್ವನಿಶಕ್ತಿ ಒಟ್ಟುಗೂಡಿದ ಅನುಭವವುಂಟಾಗುತ್ತದೆ. "ಅವಸರದ ಓಲೆಯನೊಯ್ಯುತ್ತಿದ್ದೇನೆ ಶರಣಾರ್ಥಿ!" ಎಂಬಲ್ಲಿ ವಚನದ ಓಡುವಿಕೆ, ಒಮ್ಮೆಲೆ ನಿಂತ ಅನುಭವ, ತೀವ್ರತೆಯಿಂದ ಸಾಗಿದ ವಚನ ತಕ್ಷಣ ತಲ್ಲಣ, ತವಕ ಆತಂಕಗಳಿಗೆಡೆಯಿಲ್ಲದಂತೆ ನಿಲುಗಡೆ ಹೊಂದುವ ಅಕ್ಕನ ಭಾವಾಭಿವ್ಯಕ್ತಿ ಅನಾದೃಶ್ಯವೆನಿಸುವುದು. ಇಷ್ಟಲಿಂಗಾನುಸಂಧಾನದ ಆನಂದವನ್ನು ವ್ಯಕ್ತಪಡಿಸುವ ಶೈಲಿ ಅಪ್ಯಾಯಮಾನವಾಗಿದೆ. ಪರಮಾನಂದವನ್ನು ಅನುಭವಿಸುತ್ತ ಸಾಧಿಸಿದ ತನ್ಮಯತೆ, ತಾದಾತ್ಮ್ಯತೆ ಅವಿರಳ! ದೇವನನ್ನು ಕೂಡಿದ ಸುಖವನ್ನು ಬಣ್ಣಿಸಲು ಬಳಸಿದ ಪದಗಳಲ್ಲಿಯೂ ಆ ತನ್ಮಯತೆ ತುಂಬಿಕೊಂಡಿದೆ.

"ಕಾಣುತ್ತ ಕಾಣುತ್ತ ಕಂಗಳ ಮುಚ್ಚಿದೆ ನೋಡವ್ವ
ಕೇಳುತ್ತ ಕೇಳುತ್ತ ಮೈಮರೆದೊರಗಿದೆ ನೋಡವ್ವ
ಹಾಸಿದ ಹಾಸಿಗೆಯ ಹಂಗಿಲ್ಲದೆ ಹೋಯಿತ್ತು ಕೇಳವ್ವ
ಚೆನ್ನಮಲ್ಲಿಕಾರ್ಜುನದೇವರ ದೇವನು
ಕೂಡುವ ಕೂಟವ ನಾನೇನೆಂದರಿಯದೆ
ಮರೆದೆ ಕಾಣವ್ವ!"[೧೫೩]

ಅನಿಮಿಷ ದೃಷ್ಟಿಯೋಗದಲ್ಲಿ ದೇವರ ದಿವ್ಯದರ್ಶನ ಪಡೆಯುತ್ತ ಹೊಂದಿದ ಆನಂದಾತಿಶಯ 'ಕಾಣುತ್ತ ಕಾಣುತ್ತ' ದ್ವಿರುಕ್ತಿಯಲ್ಲಿ ಅಭಿವ್ಯಕ್ತಗೊಂಡು ಕಂಗಳು ತೇಲಿಹೋದ ಅನುಭವವುಂಟಾಗುವುದು.

ದೇವನ ಗುಣಗಾನ ಕಿವಿಗಳಲ್ಲಿ ತುಂಬಿಕೊಂಡು 'ಕೇಳುತ್ತ ಕೇಳುತ್ತ' ಮೈಮರೆತು ಜಾಗ್ರದಿಂದ ಸುಷುಪ್ತಿಗೆ ಜಾರಿದ ಅನುಭವವನ್ನು, ದೇವನನ್ನು ಕೂಡಿದ ಕೂಟಸ್ಥ ಸಂತಸವನ್ನು, ಧ್ವನಿಪೂರ್ಣವಾಗಿ ವ್ಯಕ್ತಪಡಿಸಿದ ಅಕ್ಕ 'ಹಾಸಿದ ಹಾಸಿಗೆಯ ಹಂಗನ್ನು ತೊರೆದು' ನಾನು ನೀನೆಂಬ ಉಭಯವಳಿದು ಸಮರಸಗೊಂಡ ಪರಿಯನ್ನು ಸರಳವಾಗಿ ನಿರೂಪಿಸಿದ್ದಾಳೆ. ಅಕ್ಕನ ಶೈಲಿಯು ವಿಶಿಷ್ಟ ಅನನ್ಯವಾದದು. ತನ್ನ ಭಾವನೆಗಳನ್ನು ಅಮೂರ್ತ ಅನುಭಾವಗಳನ್ನು ಭಾಷೆಯಲ್ಲಿ ದಕ್ಕಿಸಿಕೊಂಡು ಅದಕ್ಕೊಂದು ರೂಪು ನೀಡಿ ಅಲೌಕಿಕ್ಕೆ ರಸಾನುಭವವನ್ನು ಹರಳುಗಟ್ಟಿಸುವುದು ಅರ್ಥವನ್ನು ಹೊಳಯಿಸುವುದು. ಇಲ್ಲೆಲ್ಲ ಉದ್ಧೇಶಪೂರ್ವಕವಾದ ಸಂಯೋಜನೆ, ರಚನೆಗಳ ನಿಷ್ಠುರತೆಯಿಲ್ಲ, ಸಹಜವಾಗಿ ಹರಿದ ಅನುಭಾವದ ರಸಗಂಗೆ ವಚನಗಳು. ದೇವರ ಸ್ವರೂಪ ವಿಸ್ತಾರವನ್ನು ನಿರೂಪಿಸಲು ಬಳಸಿದ ದ್ವಿರುಕ್ತಿ ಪದಗಳು ವಿಶ್ವವನ್ನೇ ಕೆಳಗೆ, ಮೇಲೆ ದಾಟಿ, ಅದಕ್ಕೂ ಮುಂದೆ, ಚಾಚಿಕೊಂಡು ಅನಂತವಾದ ಆಕಾರ ರಹಿತವಾದುದನ್ನು ಅಕ್ಷರ ರೂಪದಲ್ಲಿ ಕಟ್ಟಿಕೊಡುವ ಅಕ್ಕನ ಶೈಲಿಯೇ ವಿಭಿನ್ನ!

> "ಅಯ್ಯ ಪಾತಾಳವಿತ್ತಿತ್ತ, ಶ್ರೀಪಾದವತ್ತತ್ತ!
> ಬ್ರಹ್ಮಾಂಡವಿತ್ತಿತ್ತ, ಮಣಿಮುಕುಟವತ್ತತ್ತ!
> ಅಯ್ಯ, ದಶದಿಕ್ಕು ಇತ್ತಿತ್ತ, ದಶಭುಜಗಳತ್ತತ್ತ!
> ಚೆನ್ನಮಲ್ಲಿಕಾರ್ಜುನಯ್ಯ,
> ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ!"[೧೫೪]

ದ್ವಿರುಕ್ತಿಗಳಾದ ಅತ್ತತ್ತ, ಇತ್ತಿತ್ತ ಪದಶಯ್ಯೆಗಳು ಬ್ರಹ್ಮಾಂಡವ್ಯಾಪಿಯಾದ ಪರಬ್ರಹ್ಮವನ್ನು ಪದಗಳಲ್ಲಿ, ಕರಸ್ಥಲದಲ್ಲಿ ಚುಳುಕಾಗಿಸಿವೆ. ಭವಬಂಧನದಲ್ಲಿ ಸಿಲುಕಿ ಬಳಲಿದ ಬವಣೆಯನ್ನು ನಿವೇದಿಕೊಳ್ಳಲು ಬಳಸಿದ ದ್ವಿರುಕ್ತಿಗಳು, ಆ ದುಃಖವನ್ನು, ನೋವನ್ನು ಸಾಕ್ಷೀಕರಿಸುವಂತಿದೆ.

> "ಒಂದಲ್ಲ, ಎರಡಲ್ಲ, ಮೂರಲ್ಲ, ನಾಲ್ಕಲ್ಲ
> ಎಂತ್ತುನಾಲ್ಕು ಲಕ್ಷ ಯೋನಿಯೊಳಗೆ
> ಬಂದೆ ಬಂದೆ, ಬಾರದ ಭವಂಗಳಲ್ಲಿ ನುಂಡೆನುಂಡೆ ಸುಖಾಸುಖಂಗಳ!
> ಹಿಂದಣ ಜನ್ಮಂಗಳು ತಾನೇನಾದರಾಗಲಿ
> ಇಂದು ನೀ ಕರುಣಿಸು ಚೆನ್ನಮಲ್ಲಿಕಾರ್ಜುನ."[೧೫೫]

ವೇದ ಶಾಸ್ತ್ರ ಆಗಮ ಪುರಾಣ, ಸಂಗೀತ ವಿದೃತ್ತಿನವರಿಗೆ ವೇದಾಂತಿಗಳಿಗೆ, ಸನ್ಯಾಸಿಗಳಿಗೆ ದೇವನ ನಿಜದಿರುವು, ನಿಜದರಿವು ಆಗದು! ಅವರೆಲ್ಲ ತೋರಿಕೆಯ ಹೊರನೋಟಕ್ಕೆ ಹೋರಾಡಿ, ಹವಣಿಸಿ ಹಲ್ಲಣ, ತಲ್ಲಣಗೊಳಗಾಗಿರುವುದುನ್ನು ವಿಡಂಬನೆ ಮಾಡಲು ಬಳಸಿದ ಪದಗಳು ವಿಶಿಷ್ಟಾರ್ಥವನ್ನೇ ಹೊರಗೆಡುವುತ್ತವೆ.

“ಚಿಲಿಮಲಿ ಎಂದೋದುವ ಗಿಳಿಗಳಿರಾ!

ನೀವು ಕಾಣಿರೆ? ನೀವು ಕಾಣಿರೆ?

....”[೧೫೬]

‘ನೀವು ಕಾಣಿರೆ?’ ಪದದಲ್ಲಿಯೇ ಉತ್ತರವಿಟ್ಟು ಪ್ರಶ್ನಿಸುವ ಅಕ್ಕನ ಶ್ಲೇಷಾತ್ಮಕ ಅಭಿವ್ಯಕ್ತಿ ವಿಧಾನ ಅರಿತಷ್ಟೂ ಆಳ! ಅನಂತ! ಅಕ್ಕನ ಲೋಕಾನುಭವಕ್ಕೆ ಪಾರವೇ ಇಲ್ಲ. ಸೃಷ್ಟಿಯ ಸಚರಾಚರವೆಲ್ಲ ಸಾಹಿತ್ಯದ ಸರಕುಗಳಾಗಿವೆ. ಅಭಿವ್ಯಕ್ತಿಗೆ ಪದ, ಅರ್ಥಗಳ ಹಂಗೂ ಇಲ್ಲ! ದೇವರನ್ನು ಕಾಣುವ ಹಂಬಲದಿಂದ ತಲ್ಲಣಗೊಳಗಾದ ಪರಿ ಪರಿಣಾಮದಲ್ಲಿ ಅಗಾಧತೆಯಿದೆ. ಅದರ ಅರಿವನ್ನು ಮೂಡಿಸುವ ದ್ವಿರುಕ್ತಿ ನೋವನ್ನು ಪ್ರತಿಧ್ವನಿತಗೊಳಿಸುತ್ತವೆ.

“ಎರೆಯಂತೆ ಕರಕರಗಿ ಮಳಲಂತೆ ಜರಿಜರಿದು,

ಕನಸಿನಲಿ ಕಳವಳಿಸಿ ಆನು ಬೆರಗಾದೆ.

ಆವಿಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ”[೧೫೭]

ಲೌಕಿಕ ವ್ಯಾಮೋಹಕ್ಕೊಳಗಾಗಿ ಕೆಡದಿರು, ಶಿವನ ಸಾನಿಧ್ಯಕ್ಕಾಗಿ ಶ್ರಮಿಸಬೇಕೆಂಬುದು ಅಕ್ಕನ ಅಭಿಲಾಷೆ! ಅದನ್ನು ವ್ಯಕ್ತಗೊಳಿಸುವ ರೀತಿಯೂ ಚೆನ್ನ! ದ್ವಿರುಕ್ತಿಗಳು ಭಕ್ತನು ಹೊಂದಬೇಕಾದ ದೃಢ ನಿಲುವನ್ನು ಧನಾತ್ಮಕವಾಗಿಯೇ ಧ್ವನಿಸುತ್ತವೆ.

“ಕೆಡದಿರೆ, ಕೆಡದಿರೆ ಮೃಡನಡಿಯ ಹಿಡಿಯಿರೇ.

ದೃಢವಲ್ಲ ನೋಡಿರೆ ನಿಮ್ಮೊಡಲು.

ದೃಢವಲ್ಲ ನೋಡಿರೆ ಸಂಸಾರಸುಖವು.

ಚೆನ್ನಮಲ್ಲಿಕಾರ್ಜುನ ಬರೆದ ಅಕ್ಷರವು ತೊಡೆಯದ ಮುನ್ನ

ಬೇಗ ಬೇಗ ಶಿವಶರಣೆನ್ನಿ.”[೧೫೮]

ಸಂಸಾರ ಸುಖಕ್ಕೆ ಹಾತೊರೆದು ಹವಣಿಸುವ ಮನುಜರಿಗೆ, ಮನಸ್ಸಿಗೆ ಏಕಕಾಲಕ್ಕೆ ಎಚ್ಚರಿಕೆಯನ್ನು ನೀಡುತ್ತ ಕಳಕಳಿಯಿಂದ ‘ಕೆಡದಿರೆ ಕೆಡದಿರೆ’ ಎಂದು ಅಕ್ಕಮಹಾದೇವಿ ಕೇಳಿಕೊಳ್ಳುವಳು. ಬೇಗ ಬೇಗ ಶಿವಶರಣೆನ್ನಿ ಎನ್ನುವಾಗಲೂ ಅಭಿವ್ಯಕ್ತಿಯಲ್ಲಿ ಎಚ್ಚರ ಅವಸರಗಳನ್ನು ಪದಗಳಲ್ಲಿ ತುಂಬಿ ದಾಪುಗಾಲಿಡುತ್ತ ಓಡುತ್ತದೇನೋ! ಅಂತಹ ಭಾವಾಭಿವ್ಯಕ್ತಿ ಪ್ರಕಟಗೊಂಡಿದೆ. ‘ಶಿವಶರಣೆನ್ನಿ’ ಪದ ನಿರ್ಧರಿತ ನಿಲುಗಡೆ ಹೊಂದುತ್ತ ಮೃಡನಡಿಯೇ ಮುಕ್ತಿಗೆ ಮಾರ್ಗ ಆಶಯವನ್ನೊಳಗೊಂಡು ಜಗವೆಲ್ಲ ಜಾಗೃತಗೊಳ್ಳಲಿ ಎಂಬ ಭಾವವೈಶಾಲ್ಯವೂ ಸೇರಿದ ವಚನಾಂತರ್ಯವೆಲ್ಲ ಕರುಣೆಯಿಂದ ಕೂಡಿದಂತಹ ಭಾವವುಂಟಾಗುವುದು.

ಅಲಂಕಾರಗಳು

ಅಕ್ಕಮಹಾದೇವಿಯ ವಚನಗಳ ಒಳನೋಟವನ್ನು ಸಮರ್ಥವಾಗಿ ಗ್ರಹಿಸಲು, ಕಾವ್ಯ ಸೌಂದರ್ಯಾಭಿವ್ಯಕ್ತಿಯನ್ನು ನಿರೂಪಿಸಲು ಪೂರಕವಾದ ಕಾವ್ಯ ಲಕ್ಷಣಗಳಲ್ಲೊಂದಾದ ಅಲಂಕಾರಗಳು ಪ್ರಕೃತಿಯ ಸಹಜ ಸುಂದರತೆಯಷ್ಟೆ ಸಹಜವಾಗಿ ಮೂಡಿಬಂದಿವೆ. "ಕಾವ್ಯದಲ್ಲಿ ಮಾತು ಒಂದು ಆಕಾರವನ್ನು ಪಡೆಯುವ ಕ್ರಮವನ್ನೇ ಅಲಂಕಾರ ಅಥವಾ ಅಲಂಕರಿಸು ಎಂದರೆ ಕಾವ್ಯವನ್ನು ಹೊರಗಿನ ಸಲಕರಣೆಗಳಿಂದ ಬೇಕಾದಾಗ ಶೃಂಗರಿಸುವುದು. ಬೇಡವಾದಾಗ ತೆಗೆದುವಿಡುವುದು ಎಂದು ಅರ್ಥವಲ್ಲ. ಅಲಂಕಾರವೆಂಬುದು ಕಾವ್ಯಸೃಷ್ಟಿಯ ಮೂಲಕ್ಕೆ ಸಂಬಂಧಿಸಿರುವ ಗುಣವಾಗಿದೆ. ಒಂದು ಕಾವ್ಯ ಸೃಷ್ಟಿಯಾಗುವುದೆಂದರೆ ಅದು ಅಲಂಕಾರವಾಗಿ ಪ್ರಕಟವಾಗುವುದೆಂದೇ ಅರ್ಥ."[೧೫೯]

ಅಲಂಕಾರಗಳು ಕಾವ್ಯಕೃತಿಯ ಒಳನೇಯ್ಗೆಗಳು. ಅಭಿವ್ಯಕ್ತಿಗೆ ಹೊಳಪನ್ನು ನೀಡುವ ಕಲಾರೂಪಿಕೆಗಳು. ಉಪಮಾಲಂಕಾರ ಮತ್ತು ರೂಪಕಾಲಂಕಾರಗಳು ಕಾವ್ಯದ ಸೊಗಸನ್ನು ಸೌಂದರ್ಯವನ್ನು ಇಮ್ಮಡಿಗೊಳಿಸಿ ರಸಾನುಭವವನ್ನುಂಟು ಮಾಡುತ್ತವೆ. ಅದರೊಂದಿಗೆ ಕಾವ್ಯವೊಂದು ಆಕೃತಿಯನ್ನು ಪಡೆದುಕೊಂಡು ಅಂತರಂಗದ ಅಭಿವ್ಯಕ್ತಿಗೆ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಆಕೃತಿ ಮಾತಿನ ಮೂಲಕ ಒಂದು ಆಕಾರವನ್ನು ಪಡೆಯುವ ಕ್ರಮವನ್ನೆ ಕಾವ್ಯಮೀಮಾಂಸೆಯ ಪರಿಭಾಷೆಯಲ್ಲಿ ಅಲಂಕಾರವೆಂದು ಕರೆದಿರುವರು. ಆಕೃತಿ ಅಲಂಕಾರಗಳು ಸಾದೃಶ್ಯ, ಸಾದೃಶ್ಯ ಶ್ರೀಗಳಿಂದ ಉಪಮೆಯಾಗಿ, ರೂಪಕ ಪ್ರತಿಮೆಯಾಗಿ, ಅಭಿವ್ಯಕ್ತಿಗೆ ವಿಶಿಷ್ಟಾರ್ಥವನ್ನು ಧ್ವನಿ ಶಕ್ತಿಯನ್ನು, ನೀಡುವ ಒಳನೇಯ್ಗೆಗಳಾಗಿ ಸೇರಿಕೊಳ್ಳುತ್ತವೆ.

ಉಪಮಾಲಂಕಾರ(ಉಪಮೆ)

ಅಕ್ಕಮಹಾದೇವಿಯು ವಚನಗಳಲ್ಲಿ ಅಭಿವ್ಯಕ್ತಿಯ ಅರ್ಥ ಹೊಳಹು ಮತ್ತು ಆಶಯಕ್ಕಾಗಿ ತನ್ನ ಸುತ್ತಲಿನ ಪರಿಸರದ ಉಪಮೆಗಳನ್ನೇ ಬಳಸಿ ವಚನಕ್ಕೆ ಕಾವ್ಯಸೌಂದರ್ಯ, ಧ್ವನಿರಮ್ಯತೆ ಒಡಮೂಡುವಂತೆ ನಿರೂಪಿಸಿರುವಳು. ಅವು ವಚನಕ್ಕೆ ಹೊರೆಯಾಗದೆ ಹೊಳಪನ್ನು ತಂದಿರುವುದು ವೈಶಿಷ್ಯಪೂರ್ಣ. ಅಂತಹ ಹಲವು ಉಪಮೆಗಳುಳ್ಳ ವಚನಗಳನ್ನಿಲ್ಲಿ ಉದಾಹರಿಸಲಾಗಿದೆ.

"ಕೋಲ ತುದಿಯ ಕೋಡಗದಂತೆ.
ನೇಣತುದಿಯ ಬೊಂಬೆಯಂತೆ.
ಆಡಿದೆನಯ್ಯ ನೀನಾಡಿಸಿದಂತೆ!
ನಾ ನುಡಿದೆನಯ್ಯ ನೀ ನುಡಿಸಿದಂತೆ!
ನಾನಿದ್ದೆನಯ್ಯ ನೀನಿರಿಸಿದಂತೆ.
ಜಗದ ಯಂತ್ರವಾಹಕ ಚೆನ್ನಮಲ್ಲಿಕಾರ್ಜುನ ಸಾಕೆಂಬನ್ನಕ್ಕ."[೧೬೦]

ಸೃಷ್ಟಿಕರ್ತನಾದ ಪರಮಾತ್ಮನೇ ಅದರ ಸೂತ್ರದಾರನು. ಜಗವೆಲ್ಲ ಅವನಾಡಿಸಿದಂತೆ ಆಡುವುದು. ಶಿವನೇ ಸರ್ವ ಸ್ವತಂತ್ರ, ಸೃಷ್ಟಿಯ ಸಚರಾಚರವೆಲ್ಲ ಅವನಾಧೀನ! ಜಗವೊಂದು ರಂಗಮಂಟಪ. ಜೀವಿಗಳೆಲ್ಲ ಪಾತ್ರದಾರಿಗಳು. ಜಗನ್ನಿಯಾಮಕನಾದ ಜಗದೀಶ್ವರ ಸೂತ್ರದಾರನೆಂಬ ಅದಮ್ಯ ಶರಣಾಗತಿ ಭಾವವನ್ನು ಅಭಿವ್ಯಕ್ತಗೊಳಿಸಲು ಅಕ್ಕ ಕೋಡಗ, ಬೊಂಬೆ ಉಪಮೆಗಳನ್ನು ಬಳಸಿ ಭಾಷೆಗೆ ಚಲನಶೀಲತೆಯನ್ನು ತಂದಿತ್ತ ರೀತಿ ಸೊಗಸಿನದು. ಮಂಗವನ್ನಾಡಿಸುವವನು ಕೋಲಿನ ತುದಿಗೆ ಮಂಗನನ್ನು ಕಟ್ಟಿ ಕೋಲಿನಿಂದ ಮಂಗನನ್ನು ಕುಣಿಸುವನು. ಕೋಲು ಕೋಡಗನನ್ನು ಆಡಿಸುವ ಸಾಧನ. ಹಾಗೆಯೇ ಸೂತ್ರಕ್ಕೆ ಕಟ್ಟಿದ ಬೊಂಬೆ ಪರದೆಯ ಮೇಲೆ ಆಟವಾಡುವುದು. ಆದರೆ ಅದು ಸ್ವತಂತ್ರವಾಗಿ ಆಡದು. ಅದರ ಸೂತ್ರದಾರನ ಇಚ್ಛೆಯಂತೆ, ಅವನಿಚ್ಛೆಯಿರುವವರೆಗೆ ಮಾತ್ರ ಆಡುವುದು. ಮಹಾದೇವಿಯಕ್ಕ ಉಪಮೆಗಳನ್ನು ದೇಶಿ ಜಾನಪದ ಕ್ರೀಡೆಗಳಿಂದ ಆಯ್ದುಕೊಂಡು ಸರಳವಾಗಿ ಸಹಜವಾಗಿ ಅಭಿವ್ಯಕ್ತಗೊಳಿಸಿ ತನ್ನ ಪರಿಸರದ ಪರಿಕರಗಳನ್ನು ಜೀವಂತವಾಗಿರಿಸಿರುವಳು. ಭಕ್ತನು ಭಗವಂತನಾಧೀನ. ಅವನ ನಡೆ ನುಡಿಯೆಲ್ಲ ಅವನಿಚ್ಛೆಯಂತೆಯೇ ನೆರವೇರುವುದು. ಜಗತ್ತೆಂಬ ಬೃಹತ್ತಾದ ಯಂತ್ರವನ್ನು ನಡೆಸುವವನು ದೇವನು. ಅವನೇ ತನ್ನನ್ನು ನಿಯಂತ್ರಿಸುವನೆಂಬ ಶ್ರದ್ಧಾಪೂರ್ವಕ ಶರಣಾಗತಿ ಭಕ್ತಿಯ ನಿರೂಪಣೆಗೆ ಬಳಸಿದ ಉಪಮೆಗಳು ಧ್ವನಿಪೂರ್ಣವಾದ ಅರ್ಥವನ್ನು ಬಿತ್ತರಿಸುವವು.

ಭಕ್ತಿ ಪ್ರಧಾನವಾದ ಅಕ್ಕನ ವಚನಗಳು ದೇವನೊಲಿಸಲು ದಾರಿಯಾಗಿರುವಂತೆಯೇ ಸಾಧಕನ ಸಾಧನೆಗೆ ಪ್ರೇರಕವೂ ಆಗಿವೆ. ಭಕ್ತಿ ಸಂವಾದಕ್ಕೆ ದೇವನೊಂದಿಗಿನ ಸಂಭಾಷಣೆಗೂ ಮಾರ್ಗವಾಗಿದೆ. ಶಬ್ಧದ ಬೆಳಕು ಅರ್ಥ, ಅಮೂರ್ತ ಭಾವಗಳನ್ನು ಭಾಷೆಯಲ್ಲಿ ಭಟ್ಟಿಯಿಳಿಸಿ ಗಟ್ಟಿಗೊಳಿಸಿದ ಅಕ್ಕನ ವಚನಗಳ ಶಬ್ಧ ಸರಳ! ಅರ್ಥವಿಸ್ತಾರ!! ಅಕ್ಕ ವಚನ ವಿಜ್ಞಾನಿ. ಸಂಶೋಧನಾತ್ಮಕ ದೃಷ್ಟಿಕೋನ ವಚನಗಳಲ್ಲಿ ತುಂಬಿಕೊಂಡಿದೆ. ತನ್ಮೂಲಕ ಸಾಕ್ಷಾತ್ಕಾರದ ಅನುಭೂತಿ ದೊರೆಯುತ್ತದೆ. “ಉದಾತ್ತ ಭಾವವನ್ನು ಸುಸಂಸ್ಕೃತ ಭಾಷೆಯಲ್ಲಿ ಭಾವಗಮ್ಯಗೊಳಿಸುವ ಕಲೆ ಅಕ್ಕನದು. ಭಾವದ ಮರೆಯ ಬ್ರಹ್ಮವಾಗಿರುವ ನಿರಾಕಾರ ಶಿವಶಕ್ತಿಯನ್ನು ಅನುಭವಗಮ್ಯಗೊಳಿಸುವಲ್ಲಿ ಬಳಸಿದ ಉದಾಹರಣೆಗಳು ಅನುಪಮವಾದವುಗಳಾಗಿವೆ. ಆಕೆಯ ಕವನ ಪ್ರತಿಭೆಗೆ ಪ್ರತೀಕವಾಗಿವೆ.”[೧೬೧]

ದೇವನು ನಿರಾಕಾರ, ನಿರ್ಗುಣನು ಅಂತಹ ದೇವನನ್ನು ಭಕ್ತನಲ್ಲಿಯೇ ಅಡಗಿರುವ ಸುಪ್ತ ಚೈತನ್ಯವನ್ನು, ದೇವರ ನಿಲುವನ್ನು, ಅಮೂರ್ತ ಅನುಭಾವವನ್ನು ಜೀವಾತ್ಮ, ಪರಮಾತ್ಮರ ಅವಿನಾಭಾವ ಸಂಬಂಧವನ್ನು ಅಕ್ಕ ಪ್ರಕೃತಿಯಲ್ಲಿಯೆ ಅಡಗಿರುವ ಉಪಮೆಗಳನ್ನು ಉಪಯೋಗಿಸಿ ಅಭಿವ್ಯಕ್ತಗೊಳಿಸಿರುವಳು.

"ನೆಲದ ಮರೆಯ ನಿಧಾನದಂತೆ.
ಫಲದ ಮರೆಯ ರುಚಿಯಂತೆ.
ಶಿಲೆಯ ಮರೆಯ ಹೇಮದಂತೆ.
ತಿಲದ ಮರೆಯ ತೈಲದಂತೆ.
ಮರದ ಮರೆಯ ತೇಜದಂತೆ.
ಭಾವದ ಮರೆಯ ಬ್ರಹ್ಮವಾಗಿಪ್ಪ.
ಚೆನ್ನಮಲ್ಲಿಕಾರ್ಜುನನ ನಿಲವನಾರೂ ಅರಿಯಬಾರದು."[೧೮೨]

ಅನಂತ ವಿಶ್ವವ್ಯಾಪಿಯಾದ ಶಿವನು ಸದ್ಭಕ್ತನ ಅಂತರಂಗದಲ್ಲಿ ಅವಿತಿರುವುದನ್ನು ಅಕ್ಕಮಹಾದೇವಿ ಐದು ಉಪಮೆಗಳ ಮೂಲಕ ನಿರೂಪಿಸಿರುವ ಪರಿ ಬೆರಗಿನದು! ಬೆಳಕಿನದು!! ನೆಲದ ಮರೆಯ ನಿಧಾನ, ಫಲದ ಮರೆಯ ರಸರುಚಿ, ಶಿಲೆಯೊಳಡಗಿರುವ ಹೇಮ(ಚಿನ್ನ), ತಿಲದ ಮರೆಯ ತೈಲ, ಮರದಲ್ಲಿ ಅಡಗಿರುವ ಅಗ್ನಿ, 'ಮರದ ಮರೆಯ ತೇಜ'. ಪ್ರತಿಯೊಂದು ಮೂರ್ತವಾದ ವಸ್ತುವಿನಲ್ಲಿ ಅಮೂರ್ತವಾದ ಮತ್ತೊಂದು ಅಮೂಲ್ಯವಾದ ವಸ್ತು ಅವಿತಿರುವಂತೆ ಇದ್ದೂ ಇಲ್ಲದಂತಿರುವ ಅವಿನಾಭಾವ ಸಂಬಂಧವನ್ನು ಉಪಮೆಗಳು ಮೂರ್ತಗೊಳಿಸುವವು.

ಭಕ್ತನ ಭಾವದ ಮರೆಯಲ್ಲಿ ಇದ್ದರೂ ತೋರದಂತೆ ಅಂತರಂಗದಲ್ಲಿ ಮೂರ್ತಗೊಂಡಿರುವ ನಿರಾಕಾರ ನಿಷ್ಕಲ ಚೈತನ್ಯವನ್ನು, ಅಮೂರ್ತ ಅನುಭಾವವನ್ನು ಶಬ್ಧದಲ್ಲಿ ಸಂಗ್ರಹಿಸಿ, ಸಾರರೂಪದಲ್ಲಿ ನಿವೇದಿಸಿದ ಅಕ್ಕನ ಶೈಲಿ ಅತ್ಯಂತ ಪ್ರತಿಭಾಪೂರ್ಣ! ವಚನದಲ್ಲಿ ಬಳಕೆಯಾಗಿರುವ ಭೌತಿಕ ಉಪಮೆಗಳಿಂದಲೇ ಭಾವಗಮ್ಯವಾಗಿರುವ ಭಕ್ತನ ಹೃದಯದಲ್ಲಡಗಿರುವ ಭಗವಂತನ ಇರುವಿಕೆಯನ್ನು ಅಕ್ಕ ಸರಳವಾಗಿ ನಿರೂಪಿಸಿರುವಳು.

ವಚನದ ಗಮ್ಯತೆ ಗುರಿ ಶೂನ್ಯಸಂಪಾದನೆ(ಲಿಂಗಾಂಗ ಸಾಮರಸ್ಯ) ಅದರ ಅನುಭಾವ ಅನುಭೂತಿ ಪಡೆಯಲು ಸಾಧಕನಾದವನು ಸತತ ಸತ್ಕ್ರಿಯೆಗಳಿಂದ ಶ್ರಮಿಸುವನು. ಭಕ್ತನ ಭಕ್ತಿ ಶ್ರದ್ಧೆಯಿಂದ ನಿಷ್ಠೆಯಾಗಿ ಬಲಗೊಳ್ಳುವುದು. ಭಕ್ತನ ಬದುಕು ಹಣತೆ, ಭಕ್ತಿಯೇ ತೈಲ, ಆಚಾರವೇ ಬತ್ತಿ, ವಿಚಾರ ಜ್ಯೋತಿ, ಅರಿವು ದೀಪ್ತಿ! ಅರಿವು ಅಳವಟ್ಟ ಭಕ್ತನ ಕಾಯ ಪ್ರಸಾದ ಕಾಯ!! ಭಾವ ಬಯಲು ಅಂಥಹ ಬಯಲ ಸ್ಥಿತಿಯನ್ನು ಬಣ್ಣಿಸಲು ಮಹಾದೇವಿಯಕ್ಕ ಹಲವು ಉಪಮೆಗಳನ್ನೊಳಗೊಂಡು ರಚಿಸಿದ ವಚನ ಅಕ್ಕನ ಅನುಭಾವದೆತ್ತರವನ್ನು ಪ್ರತಿಪಾದಿಸುವುದು.

"ಕೆಂಡದ ಶವದಂತೆ,
ಸೂತ್ರ ತಪ್ಪಿದ ಬೊಂಬೆಯಂತೆ!

ಜಲವರತ ತಟಾಕದಂತೆ,
ಬೆಂದ ನುಲಿಯಂತೆ,
ಮತ್ತೆ ಹಿಂದಣಂಗ ಉಂಟೇ ಅಣ್ಣ
ಚೆನ್ನಮಲ್ಲಿಕಾರ್ಜುನನಂಗವೇ ಆಶ್ರಯವಾದವಳಿಗೆ?"[೧೬೩]

ವಚನ ವಿನ್ಯಾಸ ಸರಳ ಸೂಚ್ಯಾರ್ಥ ವಾಚ್ಯಾರ್ಥವನ್ನು ಬಿಂಬಿಸುವಂತೆಯೇ, ಗಮನಿಸುತ್ತ ಹೋದಂತೆ ಲಕ್ಷ್ಯಾರ್ಥವನ್ನು ಹರಡುತ್ತ ಏಕಕಾಲಕ್ಕೆ ಅನುಭಾವಿಕ, ಅಭಿವ್ಯಕ್ತಿ ನೆಲೆಗಳನ್ನು ದರ್ಶನ ಮಾಡಿಸುತ್ತದೆ. ವಚನವೆಂದರೆ ಮಾತು, ಅದರ ನಿರ್ವಚನ ಮೌನ. ಮಾತಿನಿಂದ ಮೌನದೆಡೆಗೆ ಸಾಗುವುದೇ ಅಕ್ಕನ ಶೈಲಿ. ಅಭಿವ್ಯಕ್ತಿಯ ರೀತಿ! ನಡೆ ನುಡಿ ಶುಚಿಯಾದ ಭಕ್ತನ ಬದುಕಿನ ಬಣ್ಣನೆಯೇ ಈ ವಚನದ ಅಭಿವ್ಯಕ್ತಿ. "ಶವ ಸುಟ್ಟು ಕೆಂಡವಾದ ಬಳಿಕ ಅವಯವಗಳು ತೋರಿಕೆಗೆ ಮಾತ್ರ ಕಾಣುತ್ತವೆಯಲ್ಲದೆ ನಿಜವಾದ ರೂಪವಿರುವುದಿಲ್ಲ. ಹಾಗೆ ಸೂತ್ರದ ಗೊಂಬೆ ದಾರ ತಪ್ಪಿದ ಬಳಿಕ ಕುಣಿಯುವುದಿಲ್ಲ. ಕೆರೆಯಲ್ಲಿ ನೀರು ಬತ್ತಿದ ಮೇಲೆ ಹೆಸರಿಗೆ ಮಾತ್ರ ಕೆರೆಯಾಗಿರುತ್ತದೆ. ಸುಟ್ಟ ಹಗ್ಗವೂ ಹೆಸರಿಗೆ ಮಾತ್ರ ಹಗ್ಗವಾಗಿ ಕಾಣುತ್ತದೆ. ಅದರಂತೆ ಚೆನ್ನಮಲ್ಲಿಕಾರ್ಜುನನೇ ಆಶ್ರಯವಾದ ಬಳಿಕ ನನ್ನದೆಂಬ ಅಂಗ ಯಾವೂದು ಇಲ್ಲ. ಬೇರೆ ವಾಸನೆಗೆ ಅವಕಾಶವಿಲ್ಲ. ಬಂಧನವೂ ಇಲ್ಲ."[೧೬೪]

ಬಂಧನಗಳಿಂದ ಮುಕ್ತವಾದ, ಸ್ವತಂತ್ರ ಸ್ವಚ್ಛಂದವಾದ ಬಯಲು ಬಯಲನ್ನೇ ಕೂಡಿದ ಭಕ್ತನ ನಿರ್ವಾಣ ಸ್ಥಿತಿಯನ್ನು ಅಕ್ಕಮಹಾದೇವಿ 'ಕೆಂಡದ ಶವ' 'ಸೂತ್ರ ತಪ್ಪಿದ ಬೊಂಬೆ' ಜಲವರತ ತಟಾಕ(ಕೆರೆ) 'ಬೆಂದ ನುಲಿ' ಉಪಮೆಗಳಲ್ಲಿ ಸೂತ್ರೀಕರಿಸಿ ಸತ್ವಶಾಲಿಯಾಗಿ ಅಭಿವ್ಯಕ್ತಗೊಳಿಸಿದ್ದಾಳೆ.

ಅಕ್ಕಮಹಾದೇವಿಯ ಲೋಕಾನುಭವ ವಚನದಲ್ಲಿ ಉಪಮಾಕೃತಿಗಳಾಗಿ ನುಡಿ ಪ್ರೇರಕಗಳಾಗಿ ಅಭಿವ್ಯಕ್ತಿಗೆ ವಿಶಿಷ್ಟ ಸ್ವರೂಪವನ್ನು ತಂದುಕೊಟ್ಟಿವೆ. ದೇವಸ್ಮರಣೆಯಿಲ್ಲದ ಮಾನವನ ಬದುಕು ಅರ್ಥಹೀನ! ವ್ಯರ್ಥವಾದುದೆಂಬುದನ್ನು ಉಪಮೆಗಳಲ್ಲಿ ನಿರೂಪಿಸಿದ ಅಕ್ಕನ ಸಹಜ ವೀಕ್ಷಣೆ, ಆ ಅನುಭವವನ್ನು ಸಾಹಿತ್ಯದ ಪರಿಕರ ಮಾಡಿಕೊಂಡು ಪರಿಣಾಮಕಾರಿಯಾಗಿ ಚಿತ್ರಿಸಿ, ಓದುಗರ ಚಿತ್ತಭಿತ್ತಿಯಲ್ಲಿ ಗಾಢವಾಗಿ ನೆಲೆಗೊಳ್ಳುವಂತೆ ಮಾಡುವ ಅಭಿವ್ಯಕ್ತಿಶಕ್ತಿ, ಪರಿಮಾಣ, ಪರಿಣಾಮ ಎರಡರಲ್ಲಿಯೂ ಪ್ರಭಾವಶಾಲಿಯಾಗಿದೆ.

"ಕಿಚ್ಚಿಲ್ಲದ ಮರನ ಕ್ರಿಮಿ ಇಂಬುಗೊಂಬಂತೆ,
ಒಡೆಯನಿಲ್ಲದ ಮನೆಯ ಶುನಕ ಸಂಚುಗೊಂಬಂತೆ,

ನೃಪತಿಯಿಲ್ಲದ ದೇಶವ ಮನ್ನೆಯರಿಂಬುಗೊಂಬಂತೆ,
ನಿಮ್ಮ ನೆನಹಿಲ್ಲದ ಶರೀರವ
ಭೂತ ಪ್ರೇತ ಪಿಶಾಚಿಗಳಿಂಬುಗೊಂಬಂತೆ
ಚೆನ್ನಮಲ್ಲಿಕಾರ್ಜುನಾ.[೧೬೫]

ದೇವರ ನೆನಹು ಅಪಮೃತ್ಯು, ಕಾಲ, ಕರ್ಮಗಳನ್ನು, ದೂರಮಾಡಬಲ್ಲುದು. ನೇತ್ಯಾತ್ಮಕವಾದ ವಿಚಾರಗಳಿಂದ, ದುರ್ವಿಚಾರಗಳಿಂದ ಮುಕ್ತವಾಗಿಸಿ ಸುಮನವನ್ನಾಗಿಸುವುದು ಎಂಬ ಪರಿಕಲ್ಪನೆಯನ್ನು ಅರಿತ ಅಕ್ಕಮಹಾದೇವಿ ಸೂಕ್ತ ಉಪಮೆಗಳಿಂದ ಸರಳ ಶಬ್ಧಶಯ್ಯೆಗಳಿಂದ ಭಾವ ಪರಿಪಾಕವನ್ನು ಸಿದ್ಧಪಡಿಸಿರುವಳು. 'ಕೆಚ್ಚಿಲ್ಲದ ಮರ' 'ಒಡೆಯನಿಲ್ಲದ ಮನೆ' ನೃಪತಿಯಿಲ್ಲದ (ರಾಜ) ದೇಶಗಳು ಹಾಳಾಗುವ ಬಗೆಯನ್ನು ನಿರೂಪಿಸುತ್ತ, ದೇವರ ಸ್ಮರಣೆಯಿಲ್ಲದ ಶರೀರವನ್ನು ಭೂತ ಪ್ರೇತ ಪಿಶಾಚಿಗಳಾವರಿಸುವವೆಂಬ ಮನೋವೈಜ್ಞಾನಿಕ ಸಂಗತಿಯನ್ನು ಸ್ಪಷ್ಟಪಡಿಸಿ ಇತ್ಯಾತ್ಮಕವಾದ ವಿಚಾರಗಳಿಂದ ನೇತ್ಯಾತ್ಮಕವಾದ ಮನೋಸ್ಥಿತಿಯನ್ನು ಬದಲಾಯಿಸಬಹುದಾಗಿದೆ. ಭಗವಂತನ ಭಕ್ತಿಯಿಂದ ಭೂತ ಪ್ರೇತ ಪಿಶಾಚಿಗಳೆಂಬ ಭಯಾನಕ ವಿಚಾರಗಳಿಂದ ಮುಕ್ತರಾಗಿ ಮಹಾದೇವನ ಅಡಿಗೆ ತೊಡಿಗೆಯಾಗಲು ಸಾಧ್ಯವಿದೆ ಎಂಬುದನ್ನು ಸರಳವಾಗಿ ಅಭಿವ್ಯಕ್ತಗೊಳಿಸಿದ್ದಾಳೆ ಮಹಾದೇವಿಯಕ್ಕ.

ಈ ವಚನದಲ್ಲಿ ಉಪಮೆಗಳಿಂದ ವಚನಾಕೃತಿಯನ್ನು ರೂಪಿಸುವುದರೊಂದಿಗೆ ಮನಸ್ಸಿನ ಸಾಮರ್ಥ್ಯವನ್ನು ಹೆಚ್ಚಿಸಿ ಬುದ್ಧಿಗೆ ಆಹಾರ ನೀಡಿ, ಸಮಸ್ಯೆಗಳಿಗೆ ಪರಿಹಾರವನ್ನು ಕೊಡುವ ಪರಿ, ಸಾಧಕನಿಗೆ ಮಾರ್ಗದರ್ಶನದೊಂದಿಗೆ ಸತ್ಯದರ್ಶನ ಮೂಡಿಸುವ ರೀತಿಯನ್ನು ಏಕಕಾಲಕ್ಕೆ ಕಟ್ಟಿಕೊಡುವ ರೀತಿ ಮಹತ್ವಪೂರ್ಣವಾಗಿದೆ. ಮಾನಸಿಕ ಬೌದ್ಧಿಕ ಎತ್ತರ ಈ ವಚನದಲ್ಲಡಗಿದೆ. ಮನಸ್ಸು ಶರೀರಗಳನ್ನು ಅನಗತ್ಯವಾದ ವಿಚಾರಗಳು ಆವರಿಸಿಕೊಳ್ಳುವ, ಅದರಿಂದುಂಟಾಗುವ ಘೋರ ಪರಿಣಾಮಗಳ ಬಗ್ಗೆ ಎಚ್ಚರಿಸುವ, ಅಂಥಹ ವಿಚಾರಗಳಿಂದ ವಿಮುಕ್ತಗೊಳ್ಳಲು ಪರಿಹಾರವನ್ನು ಸೂಚಿಸುವ, ಅಭಿವ್ಯಕ್ತಿ ನಿರ್ದಿಷ್ಟ ನಿರ್ದೇಶನಗಳೊಂದಿಗೆ ಸೂಕ್ತ ಮಾರ್ಗದರ್ಶನವನ್ನು, ಬಿಡುಗಡೆಯ ಬಗೆಯನ್ನು ಸಶಕ್ತ ಉಪಮೆಗಳಿಂದ ನೀಡಲು ಸಾಧ್ಯವಾಗಿದೆ.

ಒಂದು ವಚನಾಕೃತಿ ಪೂರ್ಣೋಪಮೆಗಳಿಂದ ಕೂಡಿಕೊಂಡು ಅರ್ಥ, ಅಭಿವ್ಯಕ್ತಿ ಸಾಮರ್ಥ್ಯ, ಸಾಧ್ಯತೆಗಳನ್ನು ಹೆಚ್ಚಿಸಿರುವಂತೆ ಹಲವು ವಚನಗಳಲ್ಲಿ ಅಭಿವ್ಯಕ್ತಿಗೆ ಹೆಚ್ಚಿನ ಪುಷ್ಟಿ ನೀಡಲು ಉಪಮೆಗಳನ್ನು ಅಕ್ಕಮಹಾದೇವಿ ಬಳಸಿರುವಳು. ಅವೆಲ್ಲ ವಚನಕ್ಕೆ ಪೂರಕವಾಗಿ ಅರ್ಥವ್ಯಾಪ್ತಿಯನ್ನು ಹೆಚ್ಚಿಸಲು ಬಳಕೆಯಾಗಿವೆ. ಅಕ್ಕನ ವಚನಗಳಲ್ಲಿರುವ ಉಪಮೆಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

"ನೀರಕ್ಷೀರದಂತೆ"(೧೧)

"ತನ್ನ ನೂಲು ತನ್ನನ್ನೆ ಸುತ್ತಿ ಸಾವ ತೆರನಂತೆ."(೧೭)

"ಊರ ಸೀರೆಗೆ ಅಗಸ ತಡಬಡಗೊಂಬಂತೆ."(೩೧)

"ಅರಲುಗೊಂಡ ಕೆರೆಗೆ ತೊರೆ ಬಂದು ಹಾಯ್ದಂತೆ."(೪೫)

"ಲೋಕದ ಚೇಷ್ಟೆಗೆ ರವಿ ಬೀಜವಾದಂತೆ."(೪೬)

"ಚಿನ್ನದೊಳಗಣ ಬಣ್ಣದಂತೆ."(೫೦)

"ಮುಗಿಲ ಮರೆಯ ಬಣ್ಣದ ಬೊಂಬೆಯಂತೆ."(೯೧)

"ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ."(೧೧೮)

"ಬೊಬ್ಬುಲಿಯನೇರಿದ ಮರ್ಕಟನಂತೆ."(೧೨೩)

"ಸರ್ಪನ ಬಾಯ ಕಪ್ಪೆ ನೊಣಕ್ಕೆ ಹಾರುವಂತೆ."(೧೩೮)

"ಹೊಳ್ಳ ಬಿತ್ತಿ ಫಲವನರಸುವಂತೆ."(೧೪೦)

"ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ."(೧೭೦)

"ಕರ್ಪೂರಗಿರಿಯ ಉರಿಯು ಕೊಂಡಂತೆ."(೧೭೦)

"ಕರುವಿನ ರೂಹು ಅರಗಿಳಿಯನೋದಿಸುವಂತೆ."(೨೪೪)

"ಬಂಧನಕ್ಕೆ ಬಂದಗಿಳಿ ತನ್ನ ಬಂಧುವ ನೆನೆವಂತೆ."(೩೧೩)

"ತುಂಬಿ ಪರಿಮಳವನೆ ಕೊಂಡು ಲಂಬಿಸುವ ತೆರನಂತೆ."(೩೧೬)

"ಎಚ್ಚರೆ ಗರಿದೋರದಂತೆ, ಬೆಚ್ಚರೆ ಬೆಸುಗೆಯರಿದಂತೆ."(೩೩೬)"[೧೬೬]

"ಚಂದ್ರಕಾಂತದ ಶಿಲೆಗೆ ಒಂದು ಗಜ ಹೋರುವಂತೆ."(ಶಿ.ವ.ಸಂ. ೨೦೭)

"ತುಂಬಿದ ತೊರೆಯ ನಡುವೆ ಮಾಮರ ಕಾತಂತೆ."(ಶಿ.ವ.ಸಂ. ೨೪೫)

"ತಾಯಿ ನೊಂದಡೆ ಒಡಲಶಿಶು ನೋವ ತೆರನಂತೆ."(ಶಿ.ವ.ಸಂ. ೩೭೭)

"ಕಬ್ಬಿನ ತನಿರಸವ ಕೊಂಡು ಸಿಪ್ಪೆಯ ಬಿಡುವಂತೆ."(ಶಿ.ವ.ಸಂ. ೩೭೯)

"ಸಾವಿರ ಹೊನ್ನಿಂಗೆ ಸಾದಕೊಂಡು ಸುಣ್ಣವ ಬೆರಸಿದಂತೆ."(ಶಿ.ವ.ಸಂ. ೩೯೭)

"ಮೂರು ಲಕ್ಷದ ಬೆಲೆಗೆ ರತ್ನವ ಕೊಂಡು ಮಡುವಿನಲ್ಲಿ ಇಟ್ಟಂತೆ."(ಶಿ.ವ.ಸಂ. ೩೯೭)"[೧೬೭]

ದೃಷ್ಟಾಲಂಕಾರ(ದೃಷ್ಟಾಂತ)

ಅಲಂಕಾರಗಳು ಕಾವ್ಯದ ಒಟ್ಟಂದವನ್ನು ಹೆಚ್ಚಿಸುವಂತೆಯೇ ಅರ್ಥಾಭಿವ್ಯಕ್ತಿಯನ್ನು ವಿಸ್ತಾರಗೊಳಿಸುತ್ತವೆ. "ಎರಡು ಬೇರೆ ಬೇರೆ ವಾಕ್ಯಗಳು ಪರಸ್ಪರ ಅರ್ಥಸಾದೃಶ್ಯದಿಂದ ಒಂದರ ಪ್ರತಿಬಿಂಬ ಮತ್ತೊಂದು ಎಂದು ತೋರುವಂತಿದ್ದರೆ ದೃಷ್ಟಾಲಂಕಾರ ಎನಿಸಿಕೊಳ್ಳುತ್ತದೆ. ಉಪಮಾನೋಪ

ಮೇಯಗಳು ಭಿನ್ನ ವಾಕ್ಯಗಳಲ್ಲಿದ್ದು ಎರಡಕ್ಕೂ ಬಿಂಬ ಪ್ರತಿಬಿಂಬಗಳಂತೆ ಸ್ಪಷ್ಟ ಹೋಲಿಕೆ ಕಂಗೊಳಿಸುತ್ತಿದ್ದರೆ, ದೃಷ್ಟಾಂತಲಂಕಾರವೆನ್ನಿಸಿಕೊಳ್ಳುತ್ತದೆ."[೧೭೮]

"ದೃಷ್ಟಾಂತವು ಉಪಮಾಲಂಕಾರದ ಮುಂದುವರಿಕೆಯೇ ಆಗಿರುವುದು ಕಂಡುಬರುವುದಲ್ಲದೆ ಅವು ಒಂದರ ಬಿಂಬ ಪ್ರತಿಬಿಂಬಗಳಂತಿರುತ್ತವೆ. ಒಂದೊಂದು ಪ್ರತ್ಯೇಕ ವಾಕ್ಯಗಳಂತಿದ್ದು, ಒಟ್ಟು ಅರ್ಥದ ಸ್ಪಷ್ಟತೆಗೆ ಸಹಾಯಕವಾಗುತ್ತವೆ. ದೃಷ್ಟಾಂತ ನಿದರ್ಶನಗಳನ್ನು ಮುಖ್ಯವಾಗಿ ನೀತಿ, ಧರ್ಮ, ತತ್ವಗಳ ಸ್ಪಷ್ಟೀಕರಣಕ್ಕಾಗಿ ಉಪಯೋಗಿಸುವುದು ಕಂಡುಬರುತ್ತದೆ."[೧೭೯]

ಅಕ್ಕಮಹಾದೇವಿಯ ವಚನಗಳಲ್ಲಿ ದೃಷ್ಟಾಂತಗಳು ನಿರೂಪಿತಗೊಂಡಿರುವ ಬಗೆ ವಚನದಲ್ಲಿ ಮೂಡಿರುವ ಕಲಾತ್ಮಕತೆಯಿಂದ ಅಭಿವ್ಯಕ್ತಿಗೆ ದೊರೆತಿರುವ ಪುಷ್ಟಿದಾಯಕ ಅಂಶಗಳನ್ನು ಪರಿಶೀಲಿಸುವುದು. ದೃಷ್ಟಾಂತಗಳಿಂದ ವಚನಾಕೃತಿ ಅಭಿವ್ಯಕ್ತಿಯ ಸ್ಪಷ್ಟತೆಯನ್ನು ಪಡೆದಿರುವುದನ್ನು ತಿಳಿಯಲು ಉದಾಹರಣೆಗಾಗಿ ಕೆಲವು ವಚನಗಳನ್ನು ಗಮನಿಸುವುದಗತ್ಯವಾಗಿದೆ.

"ಹಾಲು ತುಪ್ಪವ ನುಂಗಿ ಬೇರಾಗಬಲ್ಲುದೆ?
ಸೂರ್ಯಕಾಂತದಗ್ನಿಯನಾರು ಭೇದಿಸಬಲ್ಲರು?
ಅಪಾರಮಹಿಮ ಚೆನ್ನಮಲ್ಲಿಕಾರ್ಜುನನೆನ್ನೊಳಡಗಿಪ್ಪ ಪರಿಯ
ಬೇರಿಲ್ಲದೆ ಕಂಡು ಕಣ್ದೆರೆದೆನು"[೧೮೦]

ಮಾನವನ ಆಂತರ್ಯದಲ್ಲಿ ಹುದುಗಿರುವ ಪರಮಸತ್ಯವನ್ನು ಅಕ್ಕಮಹಾದೇವಿ ದೃಷ್ಟಾಂತಗಳ ಮೂಲಕ ದೃಢೀಕರಿಸುವ ವಿಶಿಷ್ಟ ಅಭಿವ್ಯಕ್ತಿಯಿದು. ದೇಹದಲ್ಲಿ ದೇವನ ಇರುವಿಕೆ ಆಸ್ತಿತ್ವವಿದ್ದರೂ ಸಾಧನೆಯಿಲ್ಲದೆ ತೋರದ ಪರಿಯನ್ನು ಕಂಡು ಬೆರಗಾಗಿ ಬಣ್ಣಿಸಿದ್ದಾಳೆ. 'ಹಾಲಿನಲ್ಲಿ ತುಪ್ಪ' 'ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿ' ದೃಷ್ಟಾಂತಗಳ ಮೂಲಕ ಸ್ಪಷ್ಟಗೊಳಿಸುವ ಶೈಲಿ ಆಕರ್ಷಿತ ವಾಗಿದೆ. ಹಾಲಿನಲ್ಲಿ ತುಪ್ಪ ಅಡಗಿದ್ದರೂ ಸಂಸ್ಕಾರ ನೀಡದೆ ಹೊರಬರದು, ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿಯಿದ್ದರೂ ಸೂರ್ಯನ ಶಾಖಕ್ಕೆ ಹಿಡಿಯದೇ ತೋರದು. ಇದೆಲ್ಲ ಶಿವನ ಲೀಲಾವಿನೋದ! ಅಪಾರ ಮಹಿಮನಾದ ಚೆನ್ನಮಲ್ಲಿಕಾರ್ಜುನನು ಸೃಷ್ಟಿಯ ಸಚರಾಚರದಲ್ಲಿ ತುಂಬಿಕೊಂಡು ತೋರದಂತೆ ಇದ್ದು, ಭಕ್ತನ ದೇಹದಲ್ಲಿ ಮೂರ್ತಮಾಡಿರುವುದನ್ನು ಜ್ಞಾನದಿಂದ ಅರಿತು ಆನಂದಿತಳಾದ ಅಕ್ಕಮಹಾದೇವಿ ಆ ಅಮೂರ್ತ ಆನಂದಾತಿಶಯದ ಅನುಭಾವವನ್ನು ದೃಷ್ಟಾಂತಗಳಿಂದ ದೃಕ್ಗೋಚರಗೊಳಿಸಿರುವಳು.

ಅಂತರಂಗದಲ್ಲಿ ಅವಗುಣಗಳನ್ನಿಟ್ಟುಕೊಂಡು ಬಹಿರಂಗದಲ್ಲಿ ಬುದ್ಧಿಬಲ, ಪಾಂಡಿತ್ಯ ಪ್ರದರ್ಶಿಸಿದರೂ, ಪ್ರಯೋಜನವಿಲ್ಲದ ಪರಿಯನ್ನು ದೃಷ್ಟಾಂತಾಕೃತಿಯಲ್ಲಿ ನಿರ್ಮಿಸಿದ ವಚನ ವಿನ್ಯಾಸ ಸಶಕ್ತ ಅಭಿವ್ಯಕ್ತಿಗೆ ಸಾಕ್ಷಿಯಾಗಿದೆ.

"ಕೊಳಲದನಿಗೆ ಸರ್ಪ ತಲೆದೂಗಿದಡೇನು,
ಒಳಗಣ ವಿಷದ ಬಯಕೆ ಬಿಡದನ್ನಕ್ಕ?
ಹಾಡಿದಡೇನು, ಕೇಳಿದಡೇನು,
ತನ್ನಲ್ಲುಳ್ಳ ಅವಗುಣ ಬಿಡದನ್ನಕ್ಕ?
ಒಳಗನರಿದು ಹೊರಗೆ ಮರೆದವರ
ನೀ ಎನಗೆ ತೋರಯ್ಯಾ ಚೆನ್ನಮಲ್ಲಿಕಾರ್ಜುನಾ."[೧೭೧]

ಲೋಕಾನುಭವದ ರೂಪಕಾಕೃತಿಯ ಸನ್ನವೇಶವೊಂದನ್ನು ದೃಷ್ಟಾಂತದ ಮೂಲಕ ನಿರೂಪಿಸಿದ ಅಕ್ಕಮಹಾದೇವಿ ಕೊಳಲಿನ ದನಿಗೆ ಹಾವು ಹೆಡೆಯೆತ್ತಿ ತಲೆದೂಗುತ್ತ ಜನರನ್ನು ರಂಜಿಸುತ್ತದೆ. ಹಾವನ್ನು ಆಡಿಸುವಾತನ ಹೊಟ್ಟೆಯನ್ನು ಹೊರೆಯುತ್ತದೆ. ಆದರೆ ಒಳಗಿನ ವಿಷದ ಗುಣ ಅಳಿಯದು. ಹೊರ ಪ್ರಪಂಚದಲ್ಲಿ ಹಾಡಿ, ರಂಜಿಸಿ ಹೊಗಳಿಸಿಕೊಳ್ಳಬಹುದು. ಶಾಸ್ತ್ರ ಪುರಾಣ, ಕೇಳಿ ಜ್ಞಾನಿಗಳಾದೆವೆಂಬ ಭ್ರಮೆ ಹೊಂದಿದ್ದರೂ ಅವಗುಣಗಳನ್ನು ಬಿಡದೆ ಅಂತರಂಗ ಶುದ್ಧಿಯಾಗದೆ ನಿಜದರಿವು ಸಾಧಿಸದು. ಬಹಿರಂಗದ ತೋರಿಕೆಯ ಬುದ್ಧಿಬಲ, ಪಾಂಡಿತ್ಯ ಪ್ರದರ್ಶನ, ಗಾನ-ಶ್ರವಣಗಳಿಂದ ದೇವನೊಲುಮೆ ಸಾಧ್ಯವಾಗದು. ಅಂತರಂಗ ಶುದ್ಧಿಯಿಂದ ಬಹಿರಂಗ ವಿಷಯಾದಿಗಳನ್ನು ಬಿಡಿಸಿಕೊಂಡ ನಿಜಭಕ್ತರ ನಿಲುವು, ನಿಜದರಿವಿನ ನಡೆ ಎಂಬುದನ್ನು ಕೊಳಲದನಿಗೆ ಸರ್ಪ ತಲೆದೂಗುವ ದೃಷ್ಟಾಂತದ ಮುಖೇನ ತಿಳಿಸುವ ಅಕ್ಕಮಹಾದೇವಿ ಲೋಕ ದೃಷ್ಟಾಂತಗಳಿಂದ ವಚನದ ಭಾವವನ್ನು ವಿಭಿನ್ನವಾಗಿ ವ್ಯಕ್ತಗೊಳಿಸಿದ್ದಾಳೆ.

ವಚನಗಳಲ್ಲಿ ಹೋಲಿಕೆಗಳು ಚಲನಶೀಲವಾದವುಗಳು. ದೃಷ್ಟಾಂತಗಳು ತಟ್ಟನೇ ಚಿತ್ರಣವೊಂದನ್ನು ಕಣ್ಮುಂದೆ ತಂದು ನಿಲ್ಲಿಸಿ ಅರ್ಥವನ್ನು ಹೊಳೆಯಿಸುವ ಅನನ್ಯ ಅಭಿವ್ಯಕ್ತಿ ಎದ್ದುಕಾಣುತ್ತದೆ. ದೇವನೊಲಿಸಲು ದೃಢಮನಸ್ಸು ಮುಖ್ಯವೆಂಬುದನ್ನು ಇನ್ನೊಂದು ವಚನದಲ್ಲಿ ಕೆಲವು ದೃಷ್ಟಾಂತ ಗಳಿಂದ ಸೂಚಿಸುವಳು. ಕಾವ್ಯಕಟ್ಟುವ ಕಲೆಯಲ್ಲಿ ಅಕ್ಕನ ಅಭಿವ್ಯಕ್ತಿ, ಶೈಲಿ ಕಾವ್ಯ ಮಾಧುರ್ಯದಿಂದ ಕಂಗೊಳಿಸುವಂತೆ ಮಾಡುವ ಸಿದ್ಧಿತ್ವ ವಚನಗಳಲ್ಲಿ ತುಂಬಿದ ಅನುಭವವಾಗುತ್ತದೆ.

"ಕಲ್ಲ ಹೊತ್ತು ಕಡಲೊಳಗೆ ಮುಳುಗಿದೊಡೆ
ಎಡರಿಂಗೆ ಕಡೆಯುಂಟೇ ಅವ್ವ?
ಉಂಡು ಹಸಿವಾಯಿತ್ತೆಂದೊಡೆ ಭಂಗವೆಂಬೆ!
ಕಂಡ ಕಂಡ ಠಾವಿನಲ್ಲಿ ಮನ ಬೆಂದೊಡೆ
ಗಂಡ ಚೆನ್ನಮಲ್ಲಿಕಾರ್ಜುನಯ್ಯನೆಂತೊಲಿವನಯ್ಯ?"[೧೭೨]

ಕಲ್ಲು ಹೊತ್ತು ಸಮುದ್ರದಲ್ಲಿ ಮುಳುಗಿದರೆ ತೊಂದರೆಯಾಗದೆ ಇರುವುದೆ? ಊಟಮಾಡಿಯೂ ಹಸಿವು ಹಿಂಗದಿದ್ದರೆ? ಭಂಗವಲ್ಲವೆ! ಅದರಿಂದ ಪ್ರಯೋಜನವಾಗದು, ಅದು ವ್ಯರ್ಥ ಕಸರತ್ತು, ವೃಥಾ ತೊಂದರೆ, ಈ ಎರಡು ದೃಷ್ಟಾಂತಗಳು ಲೋಕ ವ್ಯವಹಾರದಲ್ಲಿ ಅಭಾಸವೆನಿಸಿ ಅಪಹಾಸ್ಯಕ್ಕೀಡುಮಾಡಿ ಅಪಮಾನಿತಗೊಳಿಸುವವು.

ಆಧ್ಯಾತ್ಮ ಪಥಿಕನಾದ ಸಾಧಕನು ಏಕ ನಿಷ್ಠಾಪರನಾಗಿರಬೇಕಲ್ಲದೆ. ಸಿದ್ಧಿಯೆಡೆಗೆ ಸಾಗಲು ದೃಢಮನಸ್ಸು ಹೊಂದಿರಬೇಕು. ಚಂಚಲ ಪ್ರವೃತ್ತಿಯಿಂದ ಗುರಿ ತಲುಪಲು ಸಾಧ್ಯವಿಲ್ಲವೆಂಬುದನ್ನು ಸರಳಮಾತು, ವ್ಯವಹಾರಿಕ ದೃಷ್ಟಾಂತಗಳಿಂದ ಮನಮುಟ್ಟುವಂತೆ ಅಭಿವ್ಯಕ್ತಗೊಳಿಸಿದ್ದಾಳೆ.

ಅಕ್ಕನ ವಚನಶೈಲಿ ಮಧುರಭಕ್ತಿ, ಬಂಡಾಯ ಮನೋವೃತ್ತಿಗಳೆರಡನ್ನು ಒಳಗೊಂಡು ವಿವಿಧ ಸಾಂಧರ್ಭಿಕ ನೆಲೆಯಲ್ಲಿ ರಚಿತವಾದ ವಚನಗಳ ವಸ್ತು ವಿಷಯವೂ ವೈವಿಧ್ಯಮಯ. ಕಾವ್ಯಕ್ಕೆ ಲೇಪ ನೀಡಲು ವಂಧೋಬಂಧಗಳನ್ನು ಅಳವಡಿಸಿ ರಚಿಸಿದ ಮಾರ್ಗ ಕಾವ್ಯ ಶೈಲಿಗೂ, ಸ್ವಚ್ಛಂದವಾದ ಭಾವಲಹರಿಗಳನ್ನು ಪ್ರವಹಿಸಿ ದೇಶಿ ಭಾಷೆಯ ಸೊಗಡನ್ನು ಹೊಂದಿ ರಚಿತವಾದ ಅಕ್ಕನ ವಚನಗಳಲ್ಲಿ ಭಿನ್ನತೆ ಇದೆ. ಆದರೂ ಭಾವಾಭಿವ್ಯಕ್ತಿಗೆ ಭಾಷೆಯ ಎಲ್ಲ ಆಯಾಮಗಳು ಛಂದಸ್ಸಿನ ಬಂಧಗಳು ತಾನಾಗಿಯೆ ಅಕ್ಕನ ವಚನಗಳಲ್ಲಿ ಮೈಗೂಡಿವೆ. ಭಾವಕ್ಕೆ ಹೆಚ್ಚಿನ ಜೀವಂತಿಕೆಯನ್ನು ಅರ್ಥಸ್ವಾರಸ್ಯವನ್ನು ನೀಡಿವೆ. ಅಂತಹ ದೃಷ್ಟಾಂತಗಳ ವಚನಗಳು ಸುಲಭವಾಗಿ ಅರ್ಥಗ್ರಹಿಕೆಗೆ ನೆರವಾಗುತ್ತವೆ.

"ಬಂಜೆ ಬೇನೆಯನರಿವಳೆ?
ಬಲದಾಯಿ ಮುದ್ದ ಬಲ್ಲಳೆ?
ನೊಂದ ನೋವ ನೋಯದವರೆತ್ತ ಬಲ್ಲರು?
ಚೆನ್ನಮಲ್ಲಿಕಾರ್ಜುನನಿರಿದಲಗು ಒಡಲಲ್ಲಿ ಮುರಿದು
ಹೊರಳುವೆನ್ನಳಲನು ನೀವೆತ್ತ ಬಲ್ಲಿರೇ, ಎಲೆ ತಾಯಿಗಳಿರಾ!"[೧೮೩]

ಜನಪದೀಯ ಭಾಷೆ, ಸಂಸ್ಕೃತಿಯ ನೆಲೆಯಲ್ಲಿ ರಚಿತವಾದ ವಚನಗಳು ದೇಶಿ ಸೊಗಡನ್ನು ಪ್ರತಿಧ್ವನಿಸುತ್ತವೆ. ತನ್ಮೂಲಕ ಸಾಂಸ್ಕೃತಿಕ ಪರಂಪರೆಯನ್ನು ಸೃಷ್ಟಿಸುತ್ತವೆ. ನೋವನ್ನು ಅನುಭವಿಸಿದವರಿಗೆ ಮಾತ್ರ ಅದರ ಅನುಭವವೇ ಹೊರತು, ನೋಡುವವರಿಗೆ, ಕೇಳಿದವರಿಗೆ ಅರಿವಾಗದು. ತಾಯಿಯು ಮಾತ್ರ ಪ್ರೀತಿ ವಾತ್ಸಲ್ಯವನ್ನು ಹೃದಯಾರೆ ತನ್ನ ಮಗುವಿಗೆ ಧಾರೆಯೆರೆಯಬಲ್ಲಳು! ಈ ಎರಡು ದೃಷ್ಟಾಂತಗಳು ಅಕ್ಕನ ಆಧ್ಯಾತ್ಮಿಕ ವ್ಯಥೆಯನ್ನು ಸಮರ್ಥವಾಗಿ ಅಭಿವ್ಯಕ್ತಗೊಳಿಸಲು ಬಳಕೆಯಾಗಿವೆ. ಬಂಜೆ, 'ಮಲತಾಯಿ' ದೃಷ್ಟಾಂತಗಳು ವಚನದ ಧ್ವನಿಶಕ್ತಿಯಾಗಿ ಅತೀವ ನೋವಿನ ಭಾವವೊಂದು ಪ್ರತಿಧ್ವನಿತವಾಗಿದೆ.

ಅಂಗನಲ್ಲಿ ಆತ್ಮ ಆವರಿಸಿದ ಪರಿಯನ್ನು ನಿರೂಪಿಸಲು ಬಳಕೆಯಾದ ದೃಷ್ಟಾಂತ ಪರಿಕಲ್ಪನೆಗಳು ಅವುಗಳ ವ್ಯಾವಹಾರಿಕ ಸ್ವರೂಪ ವಚನದಲ್ಲಿ ದೀಪ ದೀಪ್ತಿಯ ಭಾವವನ್ನು ವ್ಯಕ್ತಗೊಳಿಸುತ್ತವೆ.

"ಗಟ್ಟಿದುಪ್ಪಕ್ಕೆ ತಿಳಿದುಪ್ಪಕ್ಕೆ ಭೇದವುಂಟೇ ಅಯ್ಯ?
ದೀಪಕ್ಕೆ ದೀಪ್ತಿಗೆ ಭೇದವುಂಟೇ ಅಯ್ಯ?
ಆತ್ಮಕ್ಕೆ ಅಂಗಕ್ಕೆ ಭೇದವುಂಟೇ ಅಯ್ಯ
ಎನ್ನಂಗವನು ಶ್ರೀಗುರು ಮಂತ್ರವ ಮಾಡಿ ತೋರಿದನಾಗಿ
ಸಾವಯವಕ್ಕೆ ನಿರವಯಕ್ಕೆ ಭಿನ್ನವಿಲ್ಲವಯ್ಯ!
ಚೆನ್ನಮಲ್ಲಿಕಾರ್ಜುನ ದೇವರ ಬೆರಸಿ ಮತಿಗೆಟ್ಟವಳ
ಏನ ನುಡಿಸುವಿರಯ್ಯ?!"೧೭೪

ಸಾವಯವ, ನಿರವಯ ಸಮನ್ವಯವನ್ನು 'ಗಟ್ಟಿದುಪ್ಪ, ತಿಳಿದುಪ್ಪ' ದೀಪ ದೀಪ್ತಿ, ಅಂಗ ಆತ್ಮ ದೃಷಾಂತಗಳ ಮೂಲಕ ಕಟ್ಟಿಕೊಡುವ ಅಕ್ಕನ ಅಭಿವ್ಯಕ್ತಿ ಸಾಮರ್ಥ್ಯ ವಿಶಿಷ್ಟಗುಣವುಳ್ಳದು. ದೀಪ ದೀಪ್ತಿಯ ಅಭೇದದಂತೆಯೇ, ಭಾವ ಭಾಷೆ, ಅಭಿವ್ಯಕ್ತಿ ಶೈಲಿ ಒಂದು ಇನ್ನೊಂದರ ಮುಂದುವರಿದ ಭಾಗವೇ ಆಗಿ ಅಭೇದದ ಅನನ್ಯತೆ ಪ್ರಾಪ್ತವಾಗುತ್ತದೆ.

ದೇವನನ್ನು ಕಾಣಲು, ಭವಸಾಗರ ದಾಂಟಲು ತನು ಮನಗಳು ಪೂರಕವಾಗಿ ಚಲಿಸಬೇಕೆಂಬುದನ್ನು ಕಥನ ರೂಪದಲ್ಲಿ ನಿರೂಪಿಸಿ ಅಭಿವ್ಯಕ್ತಿಗೆ ಗತಿಶೀಲತೆಯನ್ನು ತಂದುಕೊಡಲು ಅಕ್ಕ ಪ್ರಯತ್ನಿಸಿರುವುದು. ಆ ಮೂಲಕ ದೃಷಾಂತ ಆಕೃತಿಯಾಗಿ ವಚನ ಹೊರಹೊಮ್ಮಿದೆ. ದೇಶಿ ವೃತ್ತಿಯನ್ನು ಅನುಭಾವದೆತ್ತರವನ್ನು ನಿರೂಪಿಸಲು ಬಳಸಿದ ಮಹಾದೇವಿಯಕ್ಕ ವಚನ ಸಂಕಥನವನ್ನು ಕಟ್ಟುವಲ್ಲಿ ನೈಪುಣ್ಯತೆಯನ್ನು ಸಾಧಿಸಿದ್ದಾಳೆ.

"ತನುವೆಂಬ ಸಾಗರ ತುಂಬಲು,
ಮನವೆಂಬುದು ಹರುಗೋಲಾಯಿತ್ತು ಅಂಬಿಗಾ.
ಎನ್ನ ಗಮ್ಮನೆ ತೆಗೆಯೋ ಅಂಬಿಗಾ.
ತೊರೆದು ದಾಂಟಿಹೆನೆಂಬ ಭರವಸ ಕರಘನ,
ಗಮ್ಮನೆ ತೆಗೆಯೋ ಅಂಬಿಗಾ.
ಸಿರಿಶೈಲ ಚೆನ್ನಮಲ್ಲಿಕಾರ್ಜುನಾ
ನಿನ್ನ ಕಾಣಲು ಬಂದಿಹೆ ಅಂಬಿಗಾ."೧೭೫

ಇಲ್ಲಿ ತನುವೇ ಸಾಗರ, ತುಂಬಿದ ಒಡಲು, ಒಡಲೆಂಬ ದೋಣಿ. ಅದಕ್ಕೆ ಮನವೆ ಹುಟ್ಟು (ಹರುಗೋಲು) ದೇವನೇ ಭವಸಾಗರ ದಾಟಿಸಿ ಮುಕ್ತಿ ಮಂಟಪಕ್ಕೆ ಕರೆದೊಯ್ಯುವ ಅಂಬಿಗ

ಮೂರು ದೃಷ್ಟಾಂತಗಳ ಸಾಮರಸ್ಯ, ವಸ್ತು ವಿಷಯವನ್ನು ಕಲಾತ್ಮಕವಾಗಿ ಹೆಣೆದು ಭಾಷೆಯಲ್ಲಿ ಸಮರ್ಪಕವಾಗಿ ಅಭಿವ್ಯಕ್ತಗೊಳಿಸಿ ಓದುಗನ ಹೃದಯ ಸ್ಪರ್ಷಿಸುವ ಆತ್ಮೀಯ ಕಾವ್ಯಮಯ ಶೈಲಿ ಅಕ್ಕನಿಗೆ ಒಲಿದಿದೆ, ಓದುಗರನ್ನು ಒಲಿಸುತ್ತದೆ. ಇದೇ ಭಾವವುಳ್ಳ ಅಕ್ಕನ ಸ್ವರವಚನ ವಿಸ್ತೃತವಾಗಿ ಕೀರ್ತನ ಶೈಲಿ, ಜನಪದ ನಾದ ಗುಣವನ್ನು ಮೇಳವಿಸಿಕೊಂಡು ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ವ್ಯಕ್ತವಾಗಿದೆ.

"ನಂಬಿದೆ ಗುರುವೆ ನಂಬಿದೆ, ನಂಬಿದೆ ಸ್ವಾಮಿ
ನಂಬಿದೆ, ಅಂಬಿಕಾರಮಣ, ನೀನಂಬಿಗ!
....
"ತುಂಬಿದ ಹರಿಗೋಲಂಬಿಗ । ಅದ
ಕೊಂಬತ್ತು ಛಿದ್ರ ನೋಡಂಬಿಗ!
ಸಂಭ್ರಮವನು ನೋಡಂಬಿಗ । ಇದ
ರಿಂಬನರಿದು ತೆಗೆಯಂಬಿಗ !
....[೨೭೬]

ವಚನದಲ್ಲಿ ಭಾಷೆಯ ಮಿತಿ ಸಂಕ್ಷಿಪ್ತವಾಗಿದ್ದು ಭಾವ ವಿಸ್ತೃತವಾಗಿದೆ. ಸ್ವರ ವಚನದಲ್ಲಿ ಪಲ್ಲವಿ, ನುಡಿಗಳಲ್ಲಿ ಭಾವಲಹರಿ ಹರಹುತ್ತ ಸಂದೇಶ ಕೊನೆಯಲ್ಲಿ ವ್ಯಕ್ತವಾಗಿ ಉದ್ದೇಶಿತ ಅರ್ಥವನ್ನು ಹೊರಡಿಸುತ್ತದೆ.

ರೂಪಕಾಲಂಕಾರ(ರೂಪಕ)

ಅಕ್ಕಮಹಾದೇವಿಯು ಉಪಮೆ, ದೃಷ್ಟಾಂತ, ಪ್ರತಿಮಾಕೃತಿಗಳನ್ನು ವಚನಗಳಲ್ಲಿ ಬಳಸುತ್ತ ಅರ್ಥಾಭಿವ್ಯಕ್ತಿಗೆ ಹೆಚ್ಚು ಪುಷ್ಟಿ ನೀಡಲು ಪ್ರಯತ್ನಿಸಿರುವಂತೆಯೇ, ರೂಪಕಗಳು ಅವುಗಳ ಮುಂದುವರಿಕೆಯಾಗಿ ಭಾವದೀಪ್ತಿಗೆ ಮತ್ತಷ್ಟು ಮೆರುಗನ್ನು ಮಹತ್ತತೆಯನ್ನು ನೀಡಿವೆ. ರೂಪಕಗಳು ಅಭಿವ್ಯಕ್ತಿಯ ಸಾಧ್ಯತೆಯನ್ನು ಸಮರ್ಥವಾಗಿ ಪ್ರತಿನಿಧಿಸಿವೆ. ರೂಪಕಾಕೃತಿಗಳು ವಚನಗಳಲ್ಲಿ ಚಿನ್ನಬಣ್ಣದಂತೆ ಭಾಷೆ ಮತ್ತು ಶೈಲಿ, ಅಭಿವ್ಯಕ್ತಿಗೆ ಪೂರಕವಾಗಿ ಅನಾವರಣಗೊಂಡಿವೆ. ಆಧ್ಯಾತ್ಮಿಕ ಮಾರ್ಗದಲ್ಲಿ ಮುನ್ನಡೆದಿರುವ ಮಹಾದೇವಿಯಕ್ಕನಿಗೆ ಭವಬಂಧನ ಅತಿಯಾದ ಸಂಕಷ್ಟಕ್ಕೆ ಸಿಲುಕಿಸಿದ ರೀತಿ, ಅದರ ನಿವಾರಣೆಗೆ ನಿವೇದಿಸಿಕೊಳ್ಳುವಲ್ಲಿ ದೇಶೀ ರೂಪಕ ನಿರ್ಮಾಣಗೊಂಡು ಅಭಿವ್ಯಕ್ತಿಗೆ ಚಲನಶೀಲತೆ ಪ್ರಾಪ್ತವಾಗಿದೆ.

"ಹಿಂದಣ ಹಳ್ಳ, ಮುಂದಣ ತೊರೆ,
ಸಲ್ಲುವ ಪರಿಯೆಂತು ಹೇಳಾ!

ಹಿಂದಣ ಕೆರೆ, ಮುಂದಣ ಬಲೆ
ಹದುಳವಿನೆಲ್ಲಿಯದು ಹೇಳಾ!
ನೀನಿಕ್ಕಿದ ಮಾಯೆ ಕೊಲುತಿಪ್ಪುದು
ಕಾಯಯ್ಯ ಕಾಯಯ್ಯ ಚೆನ್ನಮಲ್ಲಿಕಾರ್ಜುನ."[೧೭೭]

ಸಾಧಕನ ಹೊಯ್ದಾಟ, ತಲ್ಲಣಗಳ ಮನಸ್ಥಿತಿಯನ್ನು ಪ್ರತಿನಿಧಿಸುತ್ತ ದಯಾಪರನಾದ ದೇವರಿಗೆ ಮೊರೆಯಿಡುವ ಚಿತ್ರಣವಿರುವ ಅಪೂರ್ವ ರೂಪಕಾಕೃತಿ ಇದಾಗಿದೆ. ಹಿಂದಣ ಹಳ್ಳ, ಮುಂದಣ ತೊರೆ, ಹಿಂದಣ ಕೆರೆ, ಮುಂದಣ ಬಲೆ ರೂಪಕಗಳು ಬಲೆಯಲ್ಲಿ ಸಿಲುಕಿದ ಜೀವಿ, ಬಂಧನದ ಇಕ್ಕಟ್ಟಿನಲ್ಲಿ ಸಿಕ್ಕಿ ಹಾಕಿಕೊಂಡಿರುವ ಸಾಧಕನ ತ್ರಿಶಂಕುಸ್ಥಿತಿ ಮನೋಜ್ಞವಾಗಿ ಅಭಿವ್ಯಕ್ತಗೊಂಡಿದೆ. ಎತ್ತ ಸಾಗಿದರೂ ಅಪಾಯದಲ್ಲಿ ಸಿಲುಕಿಕೊಳ್ಳುವ ಸಂಕಷ್ಟದ ಸ್ಥಿತಿಯನ್ನು ಅಕ್ಕ ಅನುಭವಿಸಿದ ರೀತಿ ಸಶಕ್ತವಾಗಿ ಭಾಷೆಯಲ್ಲಿ ರೂಪುಗೊಂಡು ಅತ್ಯಂತ ಧ್ವನಿಪೂರ್ಣವಾಗಿ ಮನದಾಳದಲ್ಲಿ ನೆಲೆಯೂರುತ್ತದೆ. ಅಕ್ಕಮಹಾದೇವಿ ಲೋಕ ವಿಮುಖಳಾದವಳಲ್ಲವಾದರೂ ತನ್ನ ಮನೋಭಿಲಾಶೆಗೆ ಅಡ್ಡಿಯಾದವುಗಳ ಬಗೆಗಿನ ತಿರಸ್ಕಾರವೂ ಬಂಡಾಯ ಧೋರಣೆಯು ವಚನಗಳಲ್ಲಿ ಸರಳವಾಗಿ ವ್ಯಕ್ತಗೊಂಡರೂ, ತನ್ನಿಂದತಾನೇ ರೂಪಕಗಳು ನಿರ್ಮಾಣಗೊಂಡು ಭಾವಕ್ಕೆ ಭಾಷೆಗೆ ನಿಲುಕುವ ಪರಿಯೇ ವಿಶಿಷ್ಟವಾದದ್ದು. ಶರೀರ ಅದರ ಆಂತರಿಕ ಸ್ವರೂಪವನ್ನು ಬಿಚ್ಚಿಡುವ ರೀತಿ ಅದರ ನಿಲುವನ್ನು ನಿರೂಪಿಸುವ ರೂಪಕಾಕೃತಿಗೆ ಉದಾಹರಣೆಯಾಗಿದೆ.

"ಅಮೇಧ್ಯದ ಮಡಕೆ, ಮೂತ್ರದ ಕುಡಿಕೆ;
ಎಲುವಿನ ತಡಿಕೆ, ಕೀವಿನ ಹಡಿಕೆ!
ಸುಡಲೀ ದೇಹವ!
ಒಡಲುವಿಡಿದು ಕೆಡದಿರು
ಚೆನ್ನಮಲ್ಲಿಕಾರ್ಜುನನರಿ ಮರುಳೆ!"[೧೭೮]

ಅಕ್ಕನ ಅಭಿವ್ಯಕ್ತಿಯಲ್ಲಿ ಪದ, ಅರ್ಥಗಳ ಸಂಕೋಚ ಬಿಗುಮಾನ ಸುಳಿಯುವುದಿಲ್ಲ. ಶರೀರದ ಬಾಹ್ಯ ನೋಟಕ್ಕೆ ಮರುಳಾಗಿ ಮೋಹಕ್ಕೆ ಒಳಗಾಗಿ ಭವಚಕ್ರದಲ್ಲಿ ಬಂಧಿಯಾಗುವ ಜೀವಿಗಳಿಗೆ ದೇಹ ಮತ್ತದರ ಒಳನೋಟವನ್ನು ಅರಿಯುವಂತೆ ಮಾಡಿದ ಧಾಟಿ ಏಟು ನೀಡಿದ ವಚನದಲ್ಲಿ ದೇಹವೇ ರೂಪಕಾಕೃತಿಯಾಗಿ ತನ್ನ ಸ್ವರೂಪವನ್ನು ಎಳೆಎಳೆಯಾಗಿ ಬಿಚ್ಚಿಕೊಳ್ಳುತ್ತ, ನಶ್ವರತೆಯನ್ನು ಪ್ರತಿನಿಧಿಸುತ್ತ, ಶಾಶ್ವತ ಸತ್ಯದರ್ಶನಕ್ಕಾಗಿ ಅದರ ಸದ್ವಿನಿಯೋಗವಾಗಬೇಕೆಂಬುದನ್ನು ಪ್ರತಿಪಾದಿಸುತ್ತದೆ. ಮಲಮೂತ್ರದ ಕಲ್ಮಶ ಪಾತ್ರೆಯಂತಿರುವ ದೇಹ ಎಲುವಿನ ಹಂದರ ದುರ್ಗಂಧದ ಬಂಧ! ಚರ್ಮದ ಹೊದಿಕೆ ಹೊಲಸನ್ನು ಮರೆಮಾಚಿದೆ ಆದರೂ ವಿಚಾರಿಸದೆ ಬಾಹ್ಯ ಸೌಂದರ್ಯಕ್ಕೆ

ಸೋತು ಸುಣ್ಣಾಗದೆ ಸತ್ಯ ಸಾಕ್ಷಾತ್ಕಾರಕ್ಕಾಗಿ ಶರೀರವನ್ನು ಸಾಧನ ಮಾಡಿಕೊಳ್ಳಬೇಕೆಂಬ ಬಯಕೆಯು ರೂಪಕದ ಆಂತರ್ಯದಲ್ಲಿ ಅಡಕವಾಗಿದೆ.

ದೇಹ ಮತ್ತು ಅದರ ಒಳಗಿನ ನೋಟವನ್ನು ಬಿತ್ತರಿಸಿ ಭ್ರಮೆಯನ್ನು ಬಯಲು ಮಾಡುತ್ತ ಆಂತರಿಕ ಅರಿವಿನ ಕಣ್ಣನ್ನು ತೆರೆಸುವ ಬಹುಮುಖಿ ಚಿಂತನೆಯನ್ನು ಏಕಕಾಲಕ್ಕೆ ರೂಪಕದ ಮೂಲಕ ಸಾಧಿಸಿದ್ದಾಳೆ ಅಕ್ಕಮಹಾದೇವಿ. ಸಾರ್ವಕಾಲಿಕ ಸತ್ಯದರ್ಶನವನ್ನು ಮೂಡಿಸುವ ರೂಪಕವು ಮಹಾದೇವಿಯಕ್ಕನ ಆಧ್ಯಾತ್ಮಿಕ ಪ್ರಖರತೆಗೆ ಸಾಕ್ಷಿಯಾಗಿದೆ. "ಒಡಲವಿಡಿದು ಕೆಡದಿರು" ವಾಕ್ಯ ರೂಪಕಾಕೃತಿಯ ಆಂತರಿಕ ಧ್ವನಿಯಂತೆ ಪ್ರತಿಧ್ವನಿಸಿ ಜಾಗೃತಿಯ ಮನೋವೃತ್ತಿಯನ್ನು ಅಭಿವ್ಯಕ್ತಗೊಳಿಸುತ್ತದೆ. ವೈವಿಧ್ಯಪೂರ್ಣವಾದ ರೂಪಕಗಳು ಅಕ್ಕನ ವಚನಗಳಲ್ಲಿ ಒಳಗೊಂಡು ವಚನಾಕೃತಿಯ ಒಳಹೊರ ಚೆಲುವನ್ನು ಅರ್ಥಸ್ವಾರಸ್ಯವನ್ನು ಇಮ್ಮಡಿಗೊಳಿಸಿವೆ. ಶರಣರದು ಸಂಸಾರವನ್ನು ಪುರಸ್ಕರಿಸಿದ ಇಹಪರ ಬದುಕನ್ನು ಸಹ್ಯಗೊಳಿಸಿದ ಸರಳ ಮಾರ್ಗ. ಅಂಥಹ ಸಂಸಾರ ರೂಪಕವನ್ನು ಸರ್ಪನೊಂದಿಗೆ ಹೋಲಿಸಲಾಗಿರುವ ಅಕ್ಕನ ವಚನ, ಬದುಕನ್ನು ವಿಭಿನ್ನ ದೃಷ್ಟಿಕೋನದಿಂದ ನೋಡಿದ ಶರಣರ ಧ್ಯೇಯದೃಷ್ಟಿಯನ್ನು ಹೊಂದಿರುವಂತಹದು.

> "ಹಾವಿನ ಬಾಯ ಹಲ್ಲ ಕಳೆದು
> ಹಾವನಾಡಿಸಬಲ್ಲಡೆ
> ಹಾವಿನ ಸಂಗವೇ ಲೇಸು ಕಂಡಯ್ಯ!
> ಕಾಯದ ಸಂಗವ ವಿವರಿಸಬಲ್ಲಡೆ
> ಕಾಯದ ಸಂಗವೇ ಲೇಸು ಕಂಡಯ್ಯ!
> ತಾಯಿ ರಕ್ಕಸಿಯಾದಂತೆ ಕಾಯವಿಕಾರವು
> ಚೆನ್ನಮಲ್ಲಿಕಾರ್ಜುನಯ್ಯ,
> ನೀನೊಲಿದವರು ಕಾಯಗೊಂಡಿದ್ದರೆನಬೇಡ!"[೧೭೯]

ಇಲ್ಲಿ ಅಕ್ಕ ನಿರೂಪಿಸಿರುವ ಹಾವು ಇದರರ್ಥ ಕಾಯ, ಮತ್ತೊಂದರ್ಥದಲ್ಲಿ ಸಂಸಾರ. ಅವೆರಡನ್ನೂ ಸರ್ಪಕ್ಕೆ ಹೋಲಿಸಲಾಗಿದೆ. ಅರಿಷಡ್ವರ್ಗಗಳೇ ಅದರ ವಿಷದ ಹಲ್ಲುಗಳು, ಅವುಗಳ ಚಾಂಚಲ್ಯದಿಂದ ಕಾಯವು ವಿಕಾರಗೊಂಡು ರಕ್ಕಸಿಯ ರೂಪ ತಾಳಿ ತನ್ನಿರುವನ್ನೇ ಮರೆಸಿ ಭವಬಂಧನದಲ್ಲಿ ತೊಳಲುವಂತೆ ಮಾಡುವುದು. ಅದಕ್ಕಾಗಿ ಕಾಯದ ಕಳವಳವನ್ನು ಹೆಚ್ಚಿಸುವ ಹಾವಿನ ಹಲ್ಲುಗಳನ್ನು ಕಳೆದರೆ ಹಾವಿನ ಒಡನಾಟವೂ ಸಹ್ಯವು. ಕಾಮಕ್ರೋಧಾದಿ ವಿಷದ ಹಲ್ಲುಗಳನ್ನು ಕಳೆದೊಗೆದು ಕಾಯವನ್ನು ದೇವಾಲಯ ಮಾಡಿಕೊಂಡ ಶರಣರು, ಮಹಾಂತರು, ಸಂಸಾರ ಭಾದೆಗೆ ಒಳಗಾದವರಲ್ಲ; ದೇಹನೊಡನಿದ್ದು ದೇವನ ಇರುವನ್ನು ಅರಿತವರು ಭೌತಿಕ

ಕಾಯ ಹೊಂದಿದ್ದರೂ ಅದರ ವಿವರವನ್ನು ಅರಿತು ಕಾಯದ ಕಳವಳ ಕಳೆದು ಮನದ ಚಂಚಲತೆ ಅಳಿದು ಮಹಾದೇವನ ಬಳಿವಿಡಿದು ಶಿವಸ್ವರೂಪಿಗಳಾದವರು. ಅಂಥವರು ಸಂಸಾರ ಸಾಗರದಲ್ಲಿದ್ದು ಸತ್ಪಥದಿಂದ ದಾಟಿ ಸದ್ಗತಿಯನ್ನು ಹೊಂದಿ ಮುಕ್ತಿಮಾರ್ಗದ ಗುರಿ ತಲುಪಿ ಪರಮಾನಂದ ಪಡೆದ ಪುಣ್ಯಾತ್ಮರು, ಸಂತರು, ಶರಣರೆಂಬ ಭಾವವನ್ನು ಹಾವು ರೂಪಕ ಪ್ರತಿನಿಧಿಸಿದೆ. ಅಕ್ಕನ ವಚನ ರೂಪಕದಂತೆಯೇ ಬಸವಣ್ಣನವರು ಸಂಸಾರ ಸರ್ಪನ ರೂಪಕವನ್ನು ವಚನಗಳಲ್ಲಿ ನಿರೂಪಿಸಿರುವುದು ಅವರ ಅಭಿವ್ಯಕ್ತಿ ಸ್ವರೂಪವನ್ನು ಸಾಕ್ಷೀಕರಿಸುತ್ತದೆ.

"ಸಂಸಾರ ಸರ್ಪನ ಹೇಳಿಗೆಯ ಬಿಡಿಸಲು ಬಾರದು,
ಬಿಟ್ಟಡೆ ಕಟ್ಟಲು ಬಾರದು ನೋಡಾ.
ಬಿಡಿಸುವ ಬೆಡಗಿನ್ನೆಂತೊ?
ಕಾಮಕ್ರೋಧ ಲೋಭ ಮೋಹಮದಮತ್ಸರವೆಂಬ
ವಿಷದ ಹಲ್ಲಿಂಗಾವುದು ಗಾರುಡವಯ್ಯಾ,
ಮಹಾದಾನಿ ಕೂಡಲ ಸಂಗಮದೇವಾ?"[೧೮೦]

ಶರಣರ ಸಂಸಾರ ಕುರಿತಾದ ಚಿಂತನೆಗಳಲ್ಲಿ ಸಾಮಾನ್ಯವಾದ ಸಾಮ್ಯತೆ ಸಮಾನ ಅಂಶಗಳು ಕಾಣಿಸಿಕೊಳ್ಳುತ್ತವೆ. ಬಸವಣ್ಣನವರು ಸಂಸಾರ ಸರ್ಪನ ರೂಪಕವನ್ನು ಬಹು ಅರ್ಥವತ್ತಾಗಿ ಚಿತ್ರಿಸಿದ್ದಾರೆ. "ಈ ರೂಪಕದಲ್ಲಿ ಸರ್ಪವು ಸಂಸಾರಕ್ಕೊಂದು ರೂಪಕವಾಗಿದ್ದು ಅರಿಷಡ್ವರ್ಗಗಳನ್ನು ಸರ್ಪದ ಹಲ್ಲುಗಳಿಗೆ ಹೋಲಿಸಲಾಗಿದೆ. ಈ ಭಯಂಕರವಾದ ಸರ್ಪ ಬುಟ್ಟಿಯಲ್ಲಿ ಮಲಗಿದೆ. ಅಲ್ಲಿಂದ ಅದನ್ನು ಬಿಡಿಸುವುದು ಹೇಗೆ? ಎಂದು ಪ್ರಶ್ನಿಸುತ್ತ ಅದರ ವಿಷದ ಹಲ್ಲಿಗೆ ಗರುಡ ಮಂತ್ರ ಯಾವುದು ಇರಲಿಕ್ಕಿಲ್ಲವೆ ಎಂದು ಚಿಂತಿಸುತ್ತಾರೆ. ಇಂಥ ಸರ್ಪಕ್ಕೆ ಗರುಡ ಮಂತ್ರವನ್ನು ಹಾಕಿ ಅಪಾಯವಾಗದಂತೆ ಅದನ್ನು ಬುಟ್ಟಿಯಿಂದ ಎಬ್ಬಿಸಿ ದಾಟಿಸುವ ರಹಸ್ಯವನ್ನು ಯಾರು ತಿಳಿದಿದ್ದಾರೆ? ಎಂದು ಪ್ರಶ್ನಿಸುವುದರ ಮೂಲಕ ಸಾಧಕನಿಗೆ ಸರ್ಪ ಒಡ್ಡಿದ ಮೃತ್ಯು ಭೀಕರತೆಯ ಕಲ್ಪನೆಯನ್ನು ಈ ರೂಪಕದಲ್ಲಿ ತಂದುಕೊಡಲು ಪ್ರಯತ್ನಿಸಿದ್ದಾರೆ."[೧೮೧]

ಅಕ್ಕನ ವಚನ ರೂಪಕಕ್ಕೆ ಹತ್ತಿರವಾದ ಬಸವಣ್ಣನವರ ವಚನವೊಂದರಲ್ಲಿ ಹಾವು ರೂಪಕ ಮೂರ್ತ ಆಕೃತಿಯಾಗಿದೆ.

"ಮನವೇ ಸರ್ಪ ತನುವೆ ಹೇಳಿಗೆ;
ಹಾವಿನೊಡತಣ ಹುದುವಾಳಿಗೆ,
ಇನ್ನಾವಾಗ ಕೊಂದಹುದೆಂದರಿಯೆ,
ಇನ್ನಾವಾಗ ತಿಂದಹುದೆಂದರಿಯೆ,

ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲಡೆ,
ಅದೆ ಗಾರುಡ, ಕೂಡಲಸಂಗಮದೇವಾ."[೧೮೨]

ಮಹಾದೇವಿಯಕ್ಕನ ವಚನದಲ್ಲಿರುವ ರೂಪಕ, ಬಸವಣ್ಣನವರ ಈ ವಚನಾಕೃತಿಯನ್ನು ಹೋಲಿಸಿದರೆ ಅವೆರಡರ ಒಳಾರ್ಥ ಸಂಸಾರ ಸರ್ಪದ ಸಂಗವನ್ನು ಸಹ್ಯಮಾಡಿಕೊಳ್ಳುವ ರೀತಿ ಅಭಿವ್ಯಕ್ತವಾಗಿದೆ. "ಇಲ್ಲಿ ಅಕ್ಕನು ಹೇಳುವ ಹಾವು ಬಸವಣ್ಣನವರು ಹೇಳುವ ಸಂಸಾರವೆಂಬ ಸರ್ಪ, ಅದು ಅರಿಷಡ್ವರ್ಗಗಳೆಂಬ ವಿಷದ ಹಲ್ಲುಗಳನ್ನು ಹೊಂದಿದೆ. ಆದರೆ ಸಮಸ್ಯೆ ಎಂದರೆ ಆ ವಿಷದ ಹಲ್ಲುಗಳನ್ನು ಕಳೆದು ಅರಿಷಡ್ವರ್ಗಗಳ ಬಾಧೆಯಿಂದ ಪಾರಾಗುವುದು. ಈ ಹಲ್ಲುಗಳನ್ನು ಕಳೆದ ಮೇಲೆ ಸರ್ಪದ ಭಯವಿಲ್ಲ. ಅಂಥ ಸರ್ಪವನ್ನು ಆಡಿಸುವ ರಹಸ್ಯವನ್ನು ತಿಳಿದರೆ ಅಕ್ಕ ಹೇಳುವಂತೆ ಅದರ ಸಂಗವೂ ಸಹ್ಯವಾದೀತು. ಈ ರೂಪಕದಲ್ಲಿ ಶರಣರು ಸಂಸಾರದ ಬಗ್ಗೆ ತಾಳಿದ ನಿಲುವು ಅತ್ಯಂತ ಪರಿಣಾಮಕಾರಿಯಾಗಿ ವ್ಯಕ್ತವಾಗಿದೆ. ಏಕೆಂದರೆ ಉಳಿದ ಸಾಧಕರಂತೆ ಶರಣರು ಸಂಸಾರಕ್ಕೆ ಅಂಜಿ ಅದು ತ್ಯಾಜ್ಯವೆಂದು ದೂರ ಓಡಿದವರಲ್ಲ. ಆದ್ದರಿಂದ ಮಹಾದೇವಿಯಕ್ಕನ ನಿಲುವಿನಲ್ಲಿ ಬೆಡಗನ್ನು ತಿಳಿದ ನಿಲುಗಡೆಯ ಅನುಭವವಿದ್ದರೆ, ಬಸವಣ್ಣನವರ ವಚನಗಳಲ್ಲಿ ಸಾಧಕನ ಶೋಧನೆಯ ತಡಕಾಟ, ತಲ್ಲಣಗಳು ಕಂಡುಬರುತ್ತವೆ."[೧೮೩]

ಅಕ್ಕನ ಅಭಿವ್ಯಕ್ತಿಯಲ್ಲಿ 'ಮದುವೆ' ಒಂದು ವಿಶಿಷ್ಟ ರೂಪಕಾಕೃತಿಯಾಗಿರುವ ವಚನವು ಬೆಡಗಿನ ಪದ ಅರ್ಥಗಳ ಸುಮಧುರ ಬಂಧವೆನಿಸಿದೆ.

"ಪಚ್ಚೆಯ ನೆಲೆಗಟ್ಟು, ಕನಕದ ತೋರಣ, ವಜ್ರದ ಕಂಭ,
ಪವಳದ ಚಪ್ಪರವಿಕ್ಕಿ ಮದುವೆಯ ಮಾಡಿದರು
ನಮ್ಮವರೆನ್ನ ಮದುವೆಯ ಮಾಡಿದರು.
ಕಂಕಣ ಕೈದಾರಗಟ್ಟಿ, ಸ್ಥಿರಸೇಸೆಯನಿಟ್ಟು
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು."[೧೮೪]

ಮದುವೆಯ ಶುಭ ಮಹೋತ್ಸವದಲ್ಲಿ ಲೌಕಿಕದಲ್ಲಿ ಹಂದರ ಹಾಕಿ ಶೃಂಗರಿಸುವುದು ರೂಢಿ. ಸಂಪ್ರದಾಯ ಸಂಸ್ಕೃತಿ. ಅಕ್ಕಮಹಾದೇವಿ ಅಭಿವ್ಯಕ್ತಿಗೊಳಿಸಿದ ಮದುವೆಯ ಚಿತ್ರಣ ಲೌಕಿಕ ಮದುವೆಯಂತೆ ಸಾಮಾನ್ಯ ವಸ್ತುಗಳನ್ನೊಳಗೊಂಡು ಶೃಂಗರಿಸಿದ ಹಂದರವಲ್ಲ. ಹೃದಯ ಹಂದರದಲ್ಲಿ ಹರನೆಂಬ ವರನೊಂದಿಗೆ ಭಕ್ತನ ಮದುವೆ. 'ಶರಣಸತಿ–ಲಿಂಗಪತಿ'ಯನ್ನು ವರಿಸಿದ ಆಧ್ಯಾತ್ಮಿಕ ಅಲೌಕಿಕ ಮದುವೆ. ಸಾವಿಲ್ಲದ, ಕೇಡಿಲ್ಲದ, ಚೆಲುವ ಚೆನ್ನಮಲ್ಲಿಕಾರ್ಜುನನೊಂದಿಗಿನ ವಿವಾಹ ಆ ಮದುವೆಯ ಹಂದರದ ವಸ್ತುಗಳು ಅವನಂತೆ ಮೌಲಿಕ. ಹಸಿರು ರತ್ನಗಳಿಂದ ಹಾಸಿದ ಹೊಳೆಯುವ ನೆಲಗಟ್ಟು ಕನಕದ ತೋರಣ, ವಜ್ರದ ಕಂಬಗಳು, ಹವಳ ಮಣಿಗಳ,

ಮಾಣಿಕ್ಯದ ಚಪ್ಪರ ಮುತ್ತು ಮಾಣಿಕ್ಯಗಳಿಂದ ಮೇಲುಕಟ್ಟುಗಳನ್ನು ಕಟ್ಟಿದ ಅಪೂರ್ವ, ಅನುಪಮ ಹಂದರ ಶಿವಶರಣ ಬಂಧುಗಳು ನೆರೆದು ಶಿವಭಕ್ತಿಯ ಕಂಕಣಕಟ್ಟಿ ಶುಭಾಶಿರ್ವಾದದ ಸ್ಥಿರ ಸೇಸೆಯನ್ನಿಟ್ಟು ಮಾಡಿದ ಮದುವೆ ಅಸಾಮಾನ್ಯ! ಅಸದಳ!

ಅಕ್ಕನ ಮದುವೆಯ ಈ ವಚನವೇ ಒಂದು ಅದ್ಭುತ ರೂಪಕ ಒಂದೊಂದು ಪದ, ವಾಕ್ಯ ಅರ್ಥವಲಯವನ್ನು ವಿಸ್ತರಿಸುತ್ತ ಹೊಳೆಯುತ್ತ, ಅದು ಬೆಳಕಿನ ಕಿರಣಗಳೆಲ್ಲ ಒಂದೊಂದಾಗಿ ಸೇರಿ ಬೆಳಕಿನ ಪುಂಜವಾಗಿ ಜಗ್ಗನೆ ಹೊಳೆಯುವ ರೀತಿ ಅಕ್ಕನ ರೂಪಕಗಳು, ಅನನ್ಯ ಕಲಾಶ್ರೀಮಂತಿಕೆಯನ್ನು ಮೈಗೂಡಿಸಿಕೊಂಡು ಬೆಡಗಿನ ಬೆಳಕನ್ನು ಮಿನುಗಿಸುತ್ತ, ವಿಸ್ತಾರಗೊಳ್ಳುತ್ತ ತನು-ಮನ-ಭಾವಗಳನ್ನು ಆವರಿಸಿಕೊಳ್ಳುತ್ತದೆ. ವಚನದ ಕಳಶವೆನ್ನುವಂತೆ 'ಸ್ಥಿರ ಸೇಸೆಯನ್ನಿಟ್ಟು' ಪದ ಪ್ರಯೋಗ ಅಭಿವ್ಯಕ್ತಿಗೆ ಧ್ವನಿರಮ್ಯತೆಯನ್ನು ನೀಡಿದೆ. ಮದುವೆಯಲ್ಲಿ ಹಾಕುವ ಸೇಸೆ(ಅಕ್ಷತೆ) ನಾಶವಾಗುವಂತಹದು, ಕೇವಲ ಸಾಂಕೇತಿಕ. ಆದರೆ ಅಕ್ಕನ ವಿವಾಹದಲ್ಲಿ ಹಾಕಿದ ಸೇಸೆ ಸಾಮಾನ್ಯವಲ್ಲ ಅವಿನಾಶಿ, ಸಾವಿಲ್ಲದ ಸ್ಥಿರ ಸೇಸೆ. 'ಸ್ಥಿರ' ಪದ ಅಸ್ಥಿರತೆಯ ವಿರುದ್ಧವಾದ ಶರಣರ ಅನುಭಾವಿಕ ಆಶಿರ್ವಾದದ ಶುಭಚಿಂತನೆಯ ಭವಹಾರಿಯಾದ ಅಕ್ಷತೆ.

ಅಕ್ಕನ ಇಡೀ ವಚನವು ಲೌಕಿಕ ಜಗತ್ತಿನ ಹಂದರ ಸಂಪ್ರದಾಯ, ಮದುವೆಯ ವರ್ಣನೆ, ಗಂಡ ಮೊದಲಾದವುಗಳೊಡನೆ ಹೋಲಿಸಲ್ಪಟ್ಟಿದ್ದರೂ, ಸಾಮಾನ್ಯವಾದ ಭೌತಿಕ ವಸ್ತುಗಳೊಂದಿಗೆ ವರ್ಣಿಸಲಾಗಿದ್ದರೂ, ಲೌಕಿಕದಲ್ಲಿ ಅಂತಹ ಹಂದರದ ವೈಭವವಿರದು. ಸಂಭ್ರಮವಿದ್ದರೂ ಶಾಶ್ವತತೆಯಿರದು. ಅಕ್ಕನ ಮದುವೆ ಮಂಟಪದ ವೈಭವ, ಶರಣಸಂಸ್ಕೃತಿ ಅನುಭಾವದ ಆಶಿರ್ವಾದ, ನಿರಾಕಾರ, ನಿರ್ಗುಣ, ನಿರುಪಮ ಚೆಲುವನೊಂದಿಗೆ ಆಧ್ಯಾತ್ಮಿಕ ಸಂಬಂಧದ ವಿವಾಹ, ಕೂಡಿ ಅಗಲುವ ಪರಿಯಂತಲ್ಲ, ಮುಳುಗಿ ಮೀರುವ ಮಹೋನ್ನತ ಮದುವೆಯದು!

ಅಕ್ಕನ ಜೀವನದಲ್ಲಿ ಎದುರಾದ ಸಣ್ಣ ಸಣ್ಣ ಸಂಗತಿಗಳು, ಅನುಭವಗಳು ಸಾಹಿತ್ಯದ ಸರಕುಗಳಾಗಿವೆ. ಸಾಮಾನ್ಯ ವಿಷಯಗಳು ಕಾವ್ಯದಲ್ಲಿ ಕಲಾಕೃತಿಯಾಗಿ ರೂಪು ತಳೆದಿವೆ. ಅಕ್ಕನ ಪ್ರತಿಭಾಶಕ್ತಿ ನಿರೂಪಣಾ ತಂತ್ರ, ಅಭಿವ್ಯಕ್ತಿ ವಿಧಾನ ವಿಶಿಷ್ಟ, ಅನನ್ಯ. ಸಾಹಿತ್ಯಾತ್ಮಕ ಅಂಶಗಳು ಸಹಜವಾಗಿ ವಚನಗಳಲ್ಲಿ ಒಳಗೊಂಡು ಜೀವಚೈತನ್ಯ, ಚಲನಶೀಲತೆಯನ್ನು ತಂದುಕೊಟ್ಟಿವೆ. ಅಲಂಕಾರ, ಪ್ರತಿಮೆಗಳು ವಚನಗಳಲ್ಲಿ ಮೂಡಿಬಂದಿರುವಂತೆಯೇ ಅನುಕರಣ ವಾಚಕಗಳು ಅಕ್ಕನ ವಚನಗಳಲ್ಲಿ ಸನ್ನಿವೇಶಕ್ಕೆ ತಕ್ಕಂತೆ, ಬಳಕೆಯಾಗಿವೆ. ಸಂದೇಶ ಪ್ರಶ್ನಾವಾಚಕಗಳಲ್ಲಿ ವಿವಿಧಾರ್ಥಗಳನ್ನು ಹೊರ ಹೊಮ್ಮಿಸುತ್ತವೆ. ವಚನಗಳಿಗೆ ವಿಶಿಷ್ಟ ಭಾವಮುಷ್ಟಿಯನ್ನು ನೀಡುತ್ತವೆ.

"ಚಿಲಿಪಿಲಿ ಎಂದೋದುವ ಗಿಳಿಗಳಿರಾ!

ನೀವು ಕಾಣಿರೆ? ನೀವು ಕಾಣಿರೆ?

ಸರವರದೊಳಗಾಡುವ ಹಂಸೆಗಳಿರಾ!
ನೀವು ಕಾಣಿರೆ? ನೀವು ಕಾಣಿರೆ?
ಸರವೆತ್ತಿ ಪಾಡುವ ಕೋಗಿಲೆಗಳಿರಾ!
ನೀವು ಕಾಣಿರೆ? ನೀವು ಕಾಣಿರೆ?
ಎರಗಿ ಬಂದಾಡುವ ತುಂಬಿಗಳಿರಾ!
ನೀವು ಕಾಣಿರೆ? ನೀವು ಕಾಣಿರೆ?
ಗಿರಿಗಹ್ವದೊಳಗಾಡುವ ನವಿಲುಗಳಿರಾ!
ನೀವು ಕಾಣಿರೆ? ನೀವು ಕಾಣಿರೆ?
ಚೆನ್ನಮಲ್ಲಿಕಾರ್ಜುನ ದೇವನೆಲ್ಲಿದ್ದಾನೆಂದು ಬಲ್ಲಡೆ
ನೀವು ಹೇಳಿರೆ!"[೧೮೫]

ಅಕ್ಕನ ವಚನದಲ್ಲಿಯ ವಾಚಾರ್ಥ್ಯ ಅಂತರಾರ್ಥ ವಿಭಿನ್ನವಾಗಿ ವಚನದಲ್ಲಿ ಸನ್ನಿವೇಶವೊಂದರ ಚಿತ್ರಣ ನೀಡುತ್ತ, ಅಭಿವ್ಯಕ್ತಗೊಳಿಸಿದ ರೀತಿ ಹಲವು ಭಾವಗಳನ್ನು ಒಳಗೊಂಡಿವೆ. "ನೀವು ಕಾಣಿರೆ?" ಪದ ಪ್ರಯೋಗ ಪ್ರಶ್ನಾರ್ಥಕವಾಗಿದ್ದಂತೆಯೆ ಅದರೊಳಗೆ ಉತ್ತರವು ಅಡಕವಾಗಿದೆ. ಅನುಭಾವವನ್ನು ಹರಳುಗಟ್ಟಿಸುವ ಅಕ್ಕನ ಅಭಿವ್ಯಕ್ತಿ ಪ್ರತಿಭಾಪೂರ್ಣ ಮತ್ತು ಪರಿಣಾಮಕಾರಿ. ಭಾಷೆಯನ್ನು ತನ್ನ ಭಾವನೆಗೆ ತಕ್ಕಂತೆ ಬಳಸುವ ಅಕ್ಕಮಹಾದೇವಿ ವಚನಾಭಿವ್ಯಕ್ತಿಗೆ ಅನನ್ಯ ಕಲಾತ್ಮಕತೆಯನ್ನು ಮೆರುಗನ್ನು ನೀಡಿ ಕಾವ್ಯಸೌಂದರ್ಯ ಇಮ್ಮಡಿಗೊಳಿಸುವಂತೆ ಸೃಜನಾತ್ಮಕವಾಗಿ ವಚನ ರಚನೆ ಗೈದಿರುವಳು. ಅಕ್ಕಮಹಾದೇವಿಯ ವಚನಾಭಿವ್ಯಕ್ತಿಯಲ್ಲಿ ಬೌದ್ಧಿಕ ಕಸರತ್ತಿಲ್ಲ, ಭಾವನಾತ್ಮಕ ರಸವತ್ತತೆಯಿದೆ. ಮಧುರಭಕ್ತಿ, ಬಂಡಾಯ ಮನೋಶಕ್ತಿ, ನೋವು, ನಲಿವು ಅನುಭವ-ಅನುಭಾವ, ವೇದನೆ-ನಿವೇದನೆಗಳು ವಚನಗಳ ವಿಷಯ ವಸ್ತುಗಳು ವೈವಿಧ್ಯ. ಶೈಲಿಯಲ್ಲಿಯೇ ವಚನಾರ್ಥ ಗೋಚರಿಸುವುದು ಅಕ್ಕನ ಅಭಿವ್ಯಕ್ತಿಯ ಅನನ್ಯತೆಯಾಗಿದೆ. ವಚನಗಳ ಶಬ್ದಸರಳ, ಅರ್ಥವ್ಯಾಪ್ತಿ ವಿಸ್ತಾರ! ಹೃದಯಸ್ಪರ್ಶಿಯಾದ ಭಾವ, ನಾದ, ಲಯಗಳು ಅಭಿವ್ಯಕ್ತಿಯಲ್ಲಿ ಮೇಳೈಸಿವೆ. ಸಮುದಾಯ ಸಂಸ್ಕೃತಿ, ದೇಶಿಭಾಷೆ, ಬದುಕು ಬರಹದ ನೇರ ಸಂಬಂಧವುಳ್ಳ, ಮಧುರಭಕ್ತಿಯ ನಿರ್ಭಿಡೆಯ ಸ್ವತಂತ್ರ ಅಭಿವ್ಯಕ್ತಿ ವಿಧಾನ ಅಕ್ಕನದು.

"ಅರಿದೆನೆಂದಡೆ ಅರಿಯಬಾರದು ನೋಡಾ
ಘನಕ್ಕೆ ಘನ ತಾನೆ ನೋಡಾ
ಚೆನ್ನಮಲ್ಲಿಕಾರ್ಜುನನ ನಿರ್ಣಯವಿಲ್ಲದೆ ಸೋತೆನು."[೧೮೬]

ಘನಕ್ಕೆ ಘನವಾದ ಪರತತ್ವವನ್ನು ಅರಿಯಬೇಕೆಂದರೂ ಮನ ಬುದ್ಧಿಗಳಿಂದ ಅರಿಯಲಿಕ್ಕಾಗದು. ನಿರಾಕಾರ ನಿರ್ಗುಣ, ನಿರ್ವಯಲ ಲಿಂಗತತ್ವವನ್ನು ನಿರ್ಣಯಿಸಲಾಗದೆ ಸೋತೆನೆಂಬ ನಿಲುವಿನ ಅಕ್ಕಮಹಾದೇವಿಯ ಅಭಿವ್ಯಕ್ತಿ, ಅರಿಯುವ ಪಥದಲ್ಲಿ ನಿಲ್ಲದೆ ನಿರಂತರವಾಗಿ ನಡೆದದ್ದು ಮಾತ್ರ ಸತ್ಯ. ಘನಕ್ಕೆ ಮನವನಿಂಬುಗೊಂಡು ಮಹಾದೇವಿಯಕ್ಕ ಮುನ್ನಡೆದ ದಾರಿಯಲ್ಲಿ ಹೊಳೆಯಿಸಿದ ಭಾವಗಳು ಚಿರಂತನ ಮೌಲ್ಯಗಳಿಂದ ಚಿರನೂತನ ನವ ಚೇತನ ಶಕ್ತಿಯನ್ನು ಧಾರಣ ಮಾಡಿ ಕೊಂಡಿರುವುದರಿಂದ ಅವು ಅನ್ವೇಷಣೆಗೆ ತೆರೆದುಕೊಳ್ಳುತ್ತಲಿವೆ. ಪರಿಭಾವಿಸಿದಷ್ಟು ಹೊಸ ಸಾಧ್ಯತೆಗಳನ್ನು ಬಿಚ್ಚಿಕೊಳ್ಳುತ್ತ ಬೆಳಕಿನ ನವ ಪ್ರಜ್ಞೆಗೆ ಸಾಕ್ಷಿಯಾಗುತ್ತಲಿವೆ.

ವ್ಯಕ್ತಿ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಸಿದ್ಧ ಸಮಾಜದ, ಸಾಹಿತ್ಯದ ಸ್ಥಾಪಿತ ಮೌಲ್ಯಗಳನ್ನು ತಿರಸ್ಕರಿಸಿ ಸ್ವಯಂನಿರ್ಮಿತ ಬಟ್ಟೆಯಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟ ಅಕ್ಕಮಹಾದೇವಿಯ ಅಭಿವ್ಯಕ್ತಿ ಅಸಮಾನ ನೆಲೆಗಳ ವಿರುದ್ಧ ತೀವ್ರ ಪ್ರತಿರೋಧವನ್ನು ಒಡ್ಡುತ್ತ, ಪರಂಪರಾಗತ ರೂಢಿಗಳನ್ನು ಮೀರಿ ಮಾನವೀಯ ಸಂಬಂಧದ ಸಮಾನ ಸ್ಥಾನಮಾನಗಳನ್ನು ಪ್ರತಿನಿಧಿಸುತ್ತದೆ. ಮಹಾದೇವಿಯಕ್ಕನ ಅಭಿವ್ಯಕ್ತಿ ಸ್ವರೂಪ ಅಸಮಾನವಾದುದನ್ನು ಮೀರುತ್ತ, ಸಮಾನ ನೆಲೆಗಳ ಮರುಸೃಷ್ಟಿಸುವತ್ತಲೇ ತುಡಿತವುಳ್ಳದ್ದು. ಸಿದ್ಧಸಮಾಜದ ಸ್ಥಾಪಿತ ವ್ಯವಸ್ಥೆಯಲ್ಲಿದ್ದು ಸಮಾನತೆ, ಸ್ವಾತಂತ್ರ್ಯಕ್ಕಾಗಿ ಆಶಿಸಿದ್ದು, ಪುರೋಗಾಮಿ ತಂತ್ರದಲ್ಲಿದ್ದು, ಪ್ರಗತಿಯೆಡೆಗಿನ ತೀವ್ರ ಪ್ರಯತ್ನಗೈದ ಅದಮ್ಯ ಜೀವಚೈತನ್ಯವೊಂದು ನಿರಂತರವಾದ ಬದಲಾವಣೆಗೆ ಮುಖಮಾಡಿ ಮಹೋನ್ನತವಾದುದನ್ನು ಸಿದ್ಧಿಸಿದ್ದು, ಆ ಎಲ್ಲ ಸಂವೇದನೆಗಳನ್ನು ಸಾಕಾರ ಶಬ್ದಗಳಿಂದ ನಿರಾಕಾರ ನಿರ್ಭಯ ನಿಲುವಿನ ಅರ್ಥವನ್ನು ನಿರ್ಮಿಸಿರುವು ದರಿಂದ ಅಭಿವ್ಯಕ್ತಿಯಲ್ಲಿ ಭಾವುಕತೆ, ಗೇಯತೆ, ನಾವಿನ್ಯತೆ ಮೇಳೈಸಿವೆ. ಆ ಭಾವವೈವಿಧ್ಯಗಳಿಗೆಲ್ಲ ಭಾಷೆ ಬೀಸರವೋಗದೆ ಭಾವ ಗಮ್ಯತೆಯನ್ನು ಪಡೆದುಕೊಂಡಿದೆ. ಅಕ್ಕಮಹಾದೇವಿ ಸಾಮಾನ್ಯತೆಯ ತಳಹದಿಯಿಂದ ಅಸಾಮಾನ್ಯತೆಯನ್ನು ಸಾಧಿಸಿದವಳು.

"ಲೋಕವ ಹಿಡಿದು ಲೋಕದ ಸಂಗದಂತಿಪ್ಪೆ.
ಆಕಾರವಿಡಿದು ಸಾಕಾರಸಹಿತ ನಡೆವೆ.
ಹೊರಗೆ ಬಳಸಿ ಒಳಗೆ ಮರೆದಿಪ್ಪೆ.
ಬೆಂದೆನುಲಿಯಂತೆ ಹುರಿಗುಂದದಿಪ್ಪೆ.
ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯಾ,
ಹತ್ತರೊಳಗೆ ಹನ್ನೊಂದಾಗಿ ನೀರತಾವರೆಯಂತಿಪ್ಪೆ."[೧೮೭]

ಲೋಕದೊಳಗಿದ್ದು ಪ್ರಪಂಚದ ವ್ಯವಹಾರಗಳನ್ನರಿತು ಅತೀತವಾದ ಅಲೌಕಿಕ ಅನುಭಾವಿಕ ನಿಲುವನ್ನು ಹೊಂದಿದ, ಆಕಾರವಿಡಿದು ನಿರಾಕಾರದೆಡೆಗೆ ನಡೆದು, ಜೀವಭಾವವಳಿದು ಶಿವಭಾವ

ಪಡೆದು, ಬೆಂದನುಲಿಯಂತೆ ನಿರ್ಲಿಪ್ತತೆಯನ್ನು ಸಾಧಿಸಿದ ಅಕ್ಕಮಹಾದೇವಿ ನೀರತಾವರೆ. ನೀರೊಳಗಿದ್ದು ನೀರನ್ನು ಕೂಡದೆ ಭಿನ್ನತೆಯಿಂದ ಭವಬಂಧನಗಳನ್ನು ಬಿಡಿಸಿಕೊಂಡು ಬೆಳಗನುಟ್ಟುಕೊಂಡವಳು. 'ಹತ್ತರೊಳಗೆ ಹನ್ನೊಂದಾಗಿ ನೀರತಾವರೆಯಂತಿಪ್ಪೆ' ಅಭಿವ್ಯಕ್ತಿಯೇ ಸೂಚಿಸುವಂತೆ ಹತ್ತು ಜನರೊಳಗೆ ಪ್ರಪಂಚದಲ್ಲಿ ಹನ್ನೊಂದನೆಯವನೂ ಸಾಮಾನ್ಯನಾಗಿರುವನು. ಆದರೆ ಹತ್ತರೊಳಗೆ ಹನ್ನೊಂದಾಗಿ ನೀರತಾವರೆಯಂತಿದ್ದ ಅಕ್ಕಮಹಾದೇವಿ ಸಾಮಾನ್ಯರಂತಿದ್ದು ಅಸಾಮಾನ್ಯವಾದವಳು. ಅಸಾಧ್ಯವಾದುದನ್ನು ಸಾಧಿಸಿದ ತಾನು ಸಾಮಾನ್ಯನಂತಲ್ಲವೆಂಬ ಧ್ವನಿಯು ಅವಳ ಅಭಿವ್ಯಕ್ತಿಯಲ್ಲಿ ಪ್ರತಿಧ್ವನಿತಗೊಂಡಿವೆ. ಅಕ್ಕನ ವ್ಯಕ್ತಿತ್ವದಂತೆ ಅವಳ ವಚನಗಳ ಧೋರಣೆಯೂ ವಿಭಿನ್ನತೆಯುಳ್ಳದ್ದು, ವಿಶಿಷ್ಟತೆಯನ್ನು ಮೈಗೂಡಿಸಿಕೊಂಡಿರುವದು. ಆ ವೈಶಿಷ್ಟಪೂರ್ಣವಾದ ಅಭಿವ್ಯಕ್ತಿ ಸ್ವರೂಪವನ್ನು ವ್ಯಾಖ್ಯಾನಿಸಿದ ಅಕ್ಕಮಹಾದೇವಿಯ ಸಮಕಾಲೀನ ವಚನಕಾರರಾದ ಚೆನ್ನಬಸವಣ್ಣನವರು ಅದರ ಮೇರುಗುಣವನ್ನು ಸಮರ್ಥಿಸಿದ್ದಾರೆ.

"ಆದ್ಯರ ಅರವತ್ತು ವಚನಕ್ಕೆ
ದಣ್ಣಾಯಕರ ಇಪ್ಪತ್ತು ವಚನ!
ದಣ್ಣಾಯಕರ ಇಪ್ಪತ್ತು ವಚನಕ್ಕೆ
ಪ್ರಭುದೇವರ ಹತ್ತುವಚನ!
ಪ್ರಭುದೇವರ ಹತ್ತು ವಚನಕ್ಕೆ
ಅಜಗಣ್ಣನ ಐದು ವಚನ!
ಅಜಗಣ್ಣನ ಐದು ವಚನಕ್ಕೆ
ಕೂಡಲ ಚೆನ್ನಸಂಗಯ್ಯನಲ್ಲಿ
ಮಹಾದೇವಿಯಕ್ಕನ ಒಂದು ವಚನ ನಿರ್ವಚನ
ಕಾಣಾ ಸಿದ್ಧರಾಮಯ್ಯಾ"[೧೮೮]

ಅಕ್ಕಮಹಾದೇವಿಯ ಅಭಿವ್ಯಕ್ತಿ ಕುರಿತಾದ ನಿರ್ಣಾಯಕ ಸಂಗತಿಯಿದು. ಸಮಕಾಲೀನ ವಚನಕಾರರ ಅಭಿವ್ಯಕ್ತಿಗಿಂತಲೂ ವಿಭಿನ್ನವಾದ ಅಭಿವ್ಯಕ್ತಿ ಅಕ್ಕನದು. ಅದು 'ನಿರ್ವಚನ' ಪದದಲ್ಲಿಯೇ ಅಪಾರವಾದುದನ್ನು ಅಂತರ್ಗತಗೊಳಿಸಿಕೊಂಡ ಅನನ್ಯತೆಯುಳ್ಳದ್ದು ಅನಂತ ಹರವು ಹೊಂದಿ ಹೊಳೆಯುತ್ತಿರುವುದೆಂಬ ಭಾವವನ್ನು ಪ್ರಕಟಿಸುತ್ತದೆ. ನಿರ್ವಚನ ಎರಡು ಅರ್ಥವಲಯವನ್ನು ಹೊಂದಿರುವ ನುಡಿ. ಒಂದರ್ಥದಲ್ಲಿ ಸಾರಸಂಗ್ರಹ, ಮತ್ತೊಂದರ್ಥದಲ್ಲಿ ಮೌನ, ಎರಡೂ ಅರ್ಥವ್ಯಾಪ್ತಿಯನ್ನು ಆವರಿಸಿಕೊಂಡ ಅಕ್ಕಮಹಾದೇವಿಯ ಅಭಿವ್ಯಕ್ತಿ ಮಾತಿನಿಂದ ಮೌನದೆಡೆಗೆ ಸಾಗಿ ಲಿಂಗತತ್ವದಲ್ಲಿ ಲೀನವಾಗಿ ನಿಶ್ಶಬ್ಧತೆಯನ್ನು ಹೊಂದುತ್ತ ನಾದಮಾಧುರ್ಯವನ್ನು ಅನುರಣಿಸುವ ಅನುಪಮ ಅಭಿವ್ಯಕ್ತಿಯದು.

ಈ. ಛಂದಸ್ಸು

ಛಂದಸ್ಸು ಕಾವ್ಯದ ಸಹಜ ಸ್ವರಾಂದೋಲನ, ಆದರಿಂದಲೇ ಕಾವ್ಯಕ್ಕೆ ಚಲನಶೀಲತೆ ಉಂಟಾಗುತ್ತದೆ. ಅದನ್ನು ಕವಿ ಸ್ಫೂರ್ತಿಯಿಂದಲೇ ಇಲ್ಲವೆ ಬುದ್ಧಿಪೂರ್ವಕವಾಗಿಯೋ ನಿಯತಲಯ, ವಿನ್ಯಾಸಗಳಿರುವ ಪದ್ಯ ಪಾದಗಳನ್ನು ಕವಿ ನಿರ್ಮಿಸುತ್ತಾನೆ. ಈ ಪದ್ಯಲಯಗಳನ್ನು ಅಳತೆ ಮಾಡುವ ಮಾನದಂಡವೇ ಛಂದಸ್ಸು. ಛಂದಸ್ಸಿನ ಅಧ್ಯಯನದಲ್ಲಿ ಲಯದ ಪಾತ್ರ ಮುಖ್ಯ. ಒಂದರ್ಥದಲ್ಲಿ ಲಯವೇ ಛಂದಸ್ಸಿನ ಜೀವಾಳ. ಮನುಷ್ಯನ ಮೂಲಭೂತ ಪ್ರವೃತ್ತಿಯಲ್ಲಿ ನಿಯಮ ಬದ್ಧವಾದ ಲಯದ ರಚನೆಯೂ ಒಂದೆನ್ನಬಹುದು. ನಿಸರ್ಗ ನಿಯಮಗಳಲ್ಲಿ ಕೂಡ ಸಮುದ್ರದ ಅಲೆಗಳು ಒಂದು ವ್ಯವಸ್ಥಿತ ರೀತಿಯಿಂದ ಏಳುತ್ತವೆ, ಬೀಳುತ್ತವೆ. ಗಾಳಿ ಮತ್ತು ಶಬ್ದಗಳು ನಿಯತವಾದ ಗತಿಯಿಂದ ಚಲಿಸುತ್ತವೆ. ಮನುಷ್ಯನ ಹೃದಯ ಹಾಗೂ ನಾಡಿಗಳು ನಿಯತ ಕ್ರಮದಿಂದ ಮಿಡಿಯುತ್ತಿರುತ್ತವೆ. ಆಡುಮಾತಿನಲ್ಲಿಲ್ಲದ ಒಂದು ಹೆಚ್ಚಿನ ತೀವ್ರತೆ ಪರಿಣಾಮಕಾರತ್ವವು ಈ ಛಂದೋನಿಯಮಗಳಿಂದ ಬದ್ಧವಾದ ಕವಿವಾಣಿಯಲ್ಲಿ ಎದ್ದು ಕಾಣುತ್ತದೆ.

ನಿಯತಾಕ್ಷರ ಸಂಖ್ಯೆಯ(**Iso-syllabic**) ಪದ್ಯದ ಸಾಲುಗಳ ಇಲ್ಲವೆ ನಿಯತ ಗುರು ಲಘುಗಳ ವಿನ್ಯಾಸಗಳು ಇಲ್ಲವೆ ಸ್ವರಾಘಾತವಿರುವ ಶಬ್ದಾಂಶ ಗಣಗಳಿಂದಾದ(**Accentual**) ಸಾಲುಗಳ ಇಲ್ಲವೆ ನಿಯತ ಮಾತ್ರಾಕಾಲವಿರುವ ಗಣಗಳಿಂದಾದ ಸಾಲುಗಳ ಸಂಯೋಜನೆಯಷ್ಟೇ ಛಂದಸ್ಸೆಂದು ತಿಳಿಯಬಾರದು. ಪ್ರತಿ ಪದ್ಯದ ಸಾಲಿನಲ್ಲಿಯೂ ನಿಯತ ಸ್ಥಾನದಲ್ಲಿ ಬರಬೇಕಾದ ಯತಿ, ಆದಿ ಪ್ರಾಸ ಹಾಗೂ ಅಂತ್ಯ ಪ್ರಾಸಗಳ ರಚನಾವ್ಯವಸ್ಥೆಯೂ ಛಂದಸ್ಸಿನ ಅವಿಭಾಜ್ಯ ಅಂಗವೆಂದೇ ತಿಳಿಯುವುದು ಯುಕ್ತ. ಅಕ್ಷರ ಗುರು-ಲಘುಗಳ ಸ್ಥಾನಗಳ ನಿಯಮಗಳಲ್ಲದೇ ಯತಿಯೂ(ವಿರಾಮ) ಛಂದಸ್ಸಿನ ಮೂಲಭೂತ ಲಕ್ಷಣದಲ್ಲಿಯೇ ಅಂತರ್ಗತವಾಗುತ್ತದೆ ಇದನ್ನು ಕಾವ್ಯದ ಸಂದರ್ಭದಲ್ಲಿ ಅನ್ವಯಿಸಿ ಹೇಳುವುದಾದರೆ ಕವಿಯ-ಭಾವ ಲಯದ ಚೌಕಟ್ಟಿನಲ್ಲಿ ಹರಳುಗೊಂಡಾಗ ಅರ್ಥಪುಷ್ಟಿ ಪಡೆಯುತ್ತದೆ. ಕವಿಯ ಭಾವನೆಗಳನ್ನು ಘನೀಭವಿಸಿ ನಿಲ್ಲುವಲ್ಲಿ ಛಂದಸ್ಸು ಪ್ರಮುಖ ಪಾತ್ರ ವಹಿಸುತ್ತದೆ. ಭಾವ, ಭಾಷೆ, ಕಾವ್ಯಬಂಧ ಅವಿನಾಭಾವವಾಗಿ ಒಂದು ಇನ್ನೊಂದಕ್ಕೆ ಪೂರಕವಾಗಿವೆ. ಕಾವ್ಯದಲ್ಲಿ ಭಾಷೆ, ಶೈಲಿ, ಅಲಂಕಾರಗಳಂತೆ ಛಂದಸ್ಸು ಕಾವ್ಯದ ಒಳಗಿನ ಅಂಗ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಹನ್ನೆರಡನೆಯ ಶತಮಾನದ ಸಾಮಾಜಿಕ ಕ್ರಾಂತಿಯು ಧರ್ಮದಿಂದ ಸಾಹಿತ್ಯಕ್ಕೆ, ಸಾಹಿತ್ಯದ ಅಂಗವಾಗಿ ಛಂದಸ್ಸಿಗೆ ಆ ಕ್ರಾಂತಿಯ ಕಾವು ಹಬ್ಬಿತು. ಲಿಂಗಾಯತ ಧರ್ಮದ ಪ್ರಭೆಯಿಂದಾಗಿ ಕನ್ನಡ ಸಾಹಿತ್ಯದಲ್ಲಿ ಒಂದು ಮಹತ್ವದ ಬದಲಾವಣೆ ತಲೆದೋರಿತು. ಆ ಬದಲಾವಣೆ ಕನ್ನಡ ಭಾಷೆ ಛಂದಸ್ಸುಗಳೆರಡಕ್ಕೂ ಸಂಬಂಧಿಸಿದೆ. ಆ ಕಾಲದಲ್ಲಿ ನಡೆದ ಛಂದಃ ಪ್ರಯೋಗಗಳಲ್ಲಿ

ಒಂದು ಅಂಶ ಎದ್ದು ಕಾಣುತ್ತದೆ. ಹಿಂದಿನ ಮೂರು ಶತಮಾನಗಳಲ್ಲಿ ಆನೂಚಾನವಾಗಿ ಬಂದ ಚಂಪೂ ಪದ್ಧತಿಯನ್ನು ಬಿಟ್ಟು ಕನ್ನಡಕ್ಕೆ ವಿಶಿಷ್ಟ ಮಟ್ಟುಗಳಲ್ಲಿ ಸಾಹಿತ್ಯ ರಚನೆ ಮಾಡುವ ಸಂಪ್ರದಾಯ ಆರಂಭವಾಯಿತು.

ಮುಕ್ತ ಛಂದಃ ಪ್ರಯೋಗವು ಹನ್ನೆರಡನೆಯ ಶತಮಾನದಲ್ಲಿ ಭಕ್ತಿಯ ಹಿನ್ನೆಲೆಯಲ್ಲಿ ನಡೆಯಿತು. ವಚನಗಳಲ್ಲಿ ನಿರ್ದಿಷ್ಟವಾದ ಯಾವ ಛಂದೋಬಂಧಗಳು ಅಡಕವಾಗದಿದ್ದರೂ ಅವುಗಳಲ್ಲಿ ಸ್ವಚ್ಛಂದದ ನಾಡಿಯು ಸ್ಪಂದಿಸಿದೆಯೆಂಬುದನ್ನು ಗಮನಿಸಬೇಕು. ಈ ಅಧ್ಯಾಯದಲ್ಲಿ ಅಕ್ಕಮಹಾದೇವಿಯ ವಚನಗಳಲ್ಲಿ ಕಂಡು ಬರುವ ಛಂದೋಲಯಗಳನ್ನು ಕುರಿತು ವಿವೇಚಿಸಲಾಗಿದೆ. ಮಾತ್ರಾಗಣ ಬಂಧಗಳು ಹೇರಳವಾಗಿವೆ.

ತ್ರಿಮಾತ್ರಾಗಣಗಳ ಬಂಧ

ಅಂಗದಲ್ಲಿ ಲಿಂಗ ಸಂಗ	೩ ೩ ೩ ೩
ಲಿಂಗದಲ್ಲಿ ಅಂಗಸಂಗ ಮಾಡಿದನೆಂದರೆ	೩ ೩ ೩ ೩ ೩ ೩
ಎನಗಾವ ಜಂಜಡವಿಲ್ಲ	೩ ೩ ೩ ೩
ಚೆನ್ನಮಲ್ಲಿಕಾರ್ಜುನನ ಸ್ನೇಹದಲ್ಲಿ	೩ ೩ ೩ ೩ ೩ ೩
ನಿನ್ನ ಕರುಣದ ಶಿಶು ನಾನು ಕಾಣಾ	೩ ೩ ೩ ೩ ೩
ಸಂಗನ ಬಸವಣ್ಣ	೩ ೩ ೩
ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವ	೩ ೩ ೩ ೩ ೩ ೩
ಏರಿಲ್ಲದ ಗಾಯದಲ್ಲಿ ನೊಂದೆನವ್ವ	೩ ೩ ೩ ೩ ೩ ೩
ಸುಖವಿಲ್ಲದ ಧಾವತಿಗೊಂಡೆನವ್ವ	೩ ೩ ೩ ೩ ೩ ೩
ಚೆನ್ನಮಲ್ಲಿಕಾರ್ಜುನದೇವಂಗೊಲಿದು	೩ ೩ ೩ ೩ ೩ ೩
ಬಾರದ ಭವಂಗಳಲ್ಲಿ ಬಂದೆನವ್ವ	೩ ೩ ೩ ೩ ೩ ೩

ಉತ್ಸಾಹ ಲಯದ ಜಾಡು ಹಿಡಿದು ಮೂರು ಮಾತ್ರೆಗಳು ಸೇರಿದ ಗಣಗಳು ಒಂದರ ನಂತರ ಬರುತ್ತವೆ. ಮಹಾದೇವಿ ತನ್ನ ಭಾವನೆಗಳ ಅಭಿವ್ಯಕ್ತಿಗೆ ಈ ಲಯವನ್ನು ಬಳಸಿದಳು. ಅದರ ಲಯ ನಿಜವಾಗಿಯೂ ಉತ್ಸಾಹಪೂರ್ಣವಾದುದು. ಅದರಂತೆ ಉತ್ಸಾಹ ಚೌಪದಿ, ಪಂಚಪದಿ, ಷಟ್ಪದಿ, ಸಪ್ತಪದಿ, ಅಷ್ಟಪದಿಗಳನ್ನು ಅಕ್ಕಮಹಾದೇವಿಯ ವಚನಗಳಲ್ಲಿ ಕಾಣಬಹುದು.

ನಾಲ್ಕು ಮಾತ್ರೆಯ ಬಂಧಗಳು

ಚತುರ್ಮಾತ್ರಾ ವಿನ್ಯಾಸದ ಬಂಧಗಳಲ್ಲಿ ನಾಲ್ಕು ಮತ್ತು ಐದನೆಯ ಮಾತ್ರಾ ಸ್ಥಾನವನ್ನು ಒಂದು ಗುರು ಅಕ್ಷರ ವ್ಯಾಪಿಸಿದಾಗ ಛಂದ: ಖಂಡಗಳು ೪+೪ ಎಂದು ವಿಭಕ್ತವಾದರೆ ೩+೫ ಎಂದೋ ೫+೩ ಎಂದೋ ವಿಭಕ್ತವಾಗುತ್ತದೆ.

ಸಂಗನ ಬಸವಣ್ಣನ ಪಾದ ಕಂಡೆನಾಗಿ	೪ ೪ ೪ ೪ ೪
ಎನ್ನಂಗನಾಸ್ತಿಯಾಯಿತು.	೪ ೪ ೪ ೪
ಚೆನ್ನಬಸವಣ್ಣನ ಪಾದವ ಕಂಡೆನಾಗಿ	೪ ೪ ೪ ೪
ಎನ್ನ ಪ್ರಾಣನಾಸ್ತಿಯಾಯಿತ್ತು	೪ ೪ ೪ ೪
ಚೆನ್ನಮಲ್ಲಿಕಾರ್ಜುನಯ್ಯ	೪ ೪ ೪ ೪
ನಿಮ್ಮ ಶರಣರ ಕರುಣ ಪಡೆದನಾಗಿ	೩ ೪ ೩ ೪ ಗುರು
ಎನಗಾವ ಜಂಜಡವಿಲ್ಲವಯ್ಯ ಪ್ರಭುವೇ	೪ ೪ ೪ ೪ ೪

ಪಾದದ ಮಧ್ಯದಲ್ಲಿ ೩ ಮಾತ್ರಾ ಗಣವು ಬಂದಿದೆ. ಭಾವಾಭಿವ್ಯಕ್ತಿಗೆ ಅದು ಅನಿವಾರ್ಯವಾಗಿದೆ.

ಎಲ್ಲರ ಗಂಡರ ಶೃಂಗಾರ ಪರಿಯಲ್ಲ	೪ ೪ ೪ ೪ ಗುರು
ಎನ್ನ ನಲ್ಲನ ಶೃಂಗಾರದ ಪರಿಬೇರೆ	೪ ೪ ೪ ೪ ೪
ಕರದಲ್ಲಿ ಕಂಕಣ ಉರದ ಮೇಲಂದುಗೆ	೪ ೪ ೪ ೪ ೪
ಕಿವಿಯಲ್ಲಿ ಹಾವುಗೆ ಉಭಯ ಸಿರಿವಂತನ	೪ ೪ ೪ ೪ ೪
ಮೊಣಕಾಲಲ್ಲಿ ಝುಳಪಟ್ಟಿಗೆ	೪ ೪ ೪
ಉಂಗುಷ್ಠದಲ್ಲಿ ಮೂಕುತಿ	೪ ೪ ೪
ಅದು ಜಾಣರಿಗೆ ಜಕುಳಿಕೆ	೪ ೪ ೪
ಚೆನ್ನಮಲ್ಲಿಕಾರ್ಜುನಯ್ಯನ ಶೃಂಗಾರದ ಪರಿಬೇರೆ	೪ ೪ ೪ ೪ ೪ ೪

ಮಂದಾನಿಲ ಲಯದ ನಾಲ್ಕು ಮಾತ್ರೆಗಳ ಚರಣಗಳ ನಿಯತ ಸ್ವರೂಪ ವಚನಕಾರರ ಕೈಯಲ್ಲಿ ತನ್ನ ನಿರರ್ಗಳವಾದ ಓಟವನ್ನು ಪಡೆಯಿತು. ಭಕ್ತಿಯ ಸ್ವರೂಪ ಮತ್ತು ಸಮರ್ಪಣ ಭಾವವನ್ನು ವ್ಯಕ್ತಪಡಿಸಲು ಮಂದಾನಿಲ ಲಯವು ಅತ್ಯಂತ ಸಮರ್ಪಕವಾದುದುದು. ಅನನ್ಯ ಶರಣಾಗತಿಯ ಭಕ್ತಿಯ ನಿವೇದನೆಯ ಅಕ್ಕಮಹಾದೇವಿಯ ವಚನಗಳಲ್ಲಿ ಮಂದಾನಿಲ ಲಯವು ಸಮರ್ಥವಾಗಿ ಪ್ರಯೋಗಗೊಂಡಿದೆ.

ಐದು ಮಾತ್ರೆಯ ಬಂಧಗಳು

ಅಕ್ಕನ ವಚನಗಳಲ್ಲಿ ಇಡೀ ವಚನವು ಪಂಚಮಾತ್ರಾ ಲಯಬದ್ಧವಾಗಿರುವುದು, ವಿರಳವಾದರೂ ಒಂದೆರಡು ವಚನಗಳು ಹಾಗಿರುವುದೂ ಉಂಟು.

ಮಾಟಕೂಟ ಬಸವಣ್ಣಂಗಾಯಿತ್ತು	೫ ೫ ೫
ನೋಟ ಕೂಟ ಪ್ರಭುದೇವರಿಗಾಯಿತ್ತು	೫ ೫ ೫
ಭಾವ ಕೂಟ ಅಜಗಣ್ಣಂಗಾಯಿತ್ತು	೫ ೫ ೫
ಸ್ನೇಹಕೂಟ ಬಾಚಿರಾಜಂಗಾಯಿತ್ತು	೫ ೫ ೫
ಚೆನ್ನಮಲ್ಲಿಕಾರ್ಜುನಯ್ಯ	

ಅಂಗದಲ್ಲಿ ಆಚಾರವ ತೋರಿದ	೫ ೫ ೫
ಆ ಆಚಾರವೇ ಲಿಂಗವೆಂದರುಹಿದ	೫ ೫ ೫
ಪ್ರಾಣದಲ್ಲಿ ಅರಿವು ನೆಲೆಗೊಳಿಸಿದ	೫ ೫ ೫
ಅರಿವೆ ಜಂಗಮವೆಂದು ತೋರಿದ	೫ ೫ ೫ ಮುಡಿ
ಚೆನ್ನಮಲ್ಲಿಕಾರ್ಜುನನ ಹೆತ್ತ ತಂದೆ	

ತನುವೆಂಬ ಮನೆಯೊಳಗೆ ನೆಲಸಿರ್ಪ ಪರಮಾತ್ಮ	೫ ೫ ೫ ೫
ಮನೆಯ ದೇವರ ಹಬ್ಬ ಆ ಹಬ್ಬಕ್ಕಿಂದು	೫ ೫ ೫ ಮುಡಿ
ನೆನೆಯದೇ ಮಿಂದು ನಡೆಯದೆ ಹೋಗಿ ಬಲಗೊಂಡು	೫ ೫ ೫ ೫
ನೆನಹಿನಮೃತಾನ್ನದುಪಹಾರವಿಡಬೇಕು	೫ ೫ ೫ ಮುಡಿ

ಮುತ್ತು ನೀರಲಾಯಿತ್ತು	೫ ೫ ಮುಡಿ
ವಾರಿಕಲ್ಲು ನೀರಲಾಯಿತ್ತು	೫ ೫ ಮುಡಿ
ಉಪ್ಪು ನೀರಲಾಯಿತ್ತು	೫ ೫

ಅಕ್ಕಮಹಾದೇವಿ ಲಲಿತ ಲಯವನ್ನು ಸಮರ್ಥವಾಗಿ ಬಳಸಿದ್ದಾಳೆ. ಅದರ ಗತಿಯಲ್ಲಿಯೇ ಒಂದು ಲಾಲಿತ್ಯ ಉಂಟು. ಲಲಿತ ರಗಳೆಯ ಗತಿಯೇ ನಿಧಾನವಾದುದು. ಭಾವ ಮತ್ತು ನಾದತುಂಬಿ ಗಂಭೀರವಾಗಿ ಸಮ ಪ್ರವಾಹದಲ್ಲಿ ಹರಿಯುವುದಕ್ಕೆ ಲಲಿತದಷ್ಟು ಅನುಕೂಲವಾದ ಛಂದೋಬಂಧ ಬೇರೊಂದಿಲ್ಲ. ಆದ್ದರಿಂದ ಅಕ್ಕಮಹಾದೇವಿಯ ಭಾವಾಭಿವ್ಯಕ್ತಿಗೆ ಅದು ತುಂಬ ನೆರವಾಯಿತು.

ಮಿಶ್ರಲಯ ಮತ್ತು ಅನಿಯಮಿತ ಲಯ

ಅಕ್ಕಮಹಾದೇವಿಯ ವಚನಗಳಲ್ಲಿ ಬೇರೆ ಬೇರೆ ಗಣಗಳ ಬೆರಕೆಯಿಂದ ಉಂಟಾದ ಮಿಶ್ರಲಯವೂ ಮತ್ತು ಅನಿಯಮಿತ ಲಯವೂ ತುಂಬ ಗೋಚರವಾಗುತ್ತದೆ. ಅದು ವಚನ ಛಂದಸ್ಸಿನ ಲಕ್ಷಣವಾಗಿದೆ. ಅಕ್ಕನ ಛಂದಸ್ಸಿನ ವೈಶಿಷ್ಟ್ಯವಿರುವುದು ಅಲ್ಲಿಯೇ.

ನಿನ್ನರಿಕೆಯ ನರಕವೇ ಮೋಕ್ಷ ನೋಡಯ್ಯ	೩ ೪ ೩ ೪ ೫
ನಿನ್ನರಿಯದ ಮುಕ್ತಿಯೇ ನರಕ ಕಂಡಯ್ಯ	೩ ೪ ೩ ೪ ೫
ನೀನೊಲ್ಲದ ಸುಖವೇ ದುಃಖ ಕಂಡಯ್ಯ	೩ ೪ ೩ ೪ ೫
ನೀ ಕಟ್ಟಿ ಕೆಡಹಿದ ಬಂಧನವೇ ನಿರ್ಬಂಧನವೆಂದಿಪ್ಪೆನು	೪ ೪ ೪ ೩ ೪ ೫
ಚೆನ್ನಮಲ್ಲಿಕಾರ್ಜುನಯ್ಯ	

ಹಾಲು ತುಪ್ಪವ ನುಂಗಿ ಬೇರಾಗಬಲ್ಲುದೆ	೩ ೪ ೩ ೪ ೩
ಸೂರ್ಯಕಾಂತದಗ್ನಿಯನಾರು ಭೇದಿಸಬಲ್ಲರು	೩ ೪ ೩ ೪ ೪ ೩
ಅಪಾರ ಮಹಿಮ ಚೆನ್ನಮಲ್ಲಿಕಾರ್ಜುನನೆನ್ನೊಳಡಗಿಪ್ಪ ಪರಿಯ	೩ ೪ ೩ ೪ ೪ ೩
ಬೇರಿಲ್ಲದೆ ಕಂಡು ಕಣ್ಣೆರೆದೆನು	೩ ೩ ೩ ೪

ಘನವ ಕಂಡೆ, ಅನುವ ಕಂಡೆ	೩ ೩ ೩ ೩
ಆಯತ ಸ್ವಾಯತ ಸನ್ನಿಹಿತ ಸುಖವ ಕಂಡೆ	೪ ೪ ೫ ೩ ೩
ಅರಿವನರಿದು ಮರಹ ಮರೆದ	೩ ೩ ೩ ೪ ೩
ಕುರುಹಿನ ಮೋಹದ ಮರವೆಯ ನೀಡಾಡಿದೆ	೩ ೪ ೩ ೪ ೩ ೪
ಚೆನ್ನಮಲ್ಲಿಕಾರ್ಜುನ ನಿಮ್ಮನರಿದು ಸೀಮೆಗೆಟ್ಟೆನು	

ಅಕ್ಕಮಹಾದೇವಿ ಭಾಮಿನಿಲಯವನ್ನು ತನ್ನ ಅಭಿವ್ಯಕ್ತಿಗೆ ಸಮರ್ಥವಾಗಿ ಬಳಸಿದ್ದಾಳೆ. ಇಳಿಲಯದ (೫ ೪ ೩) ಘಟಕಗಳ ಬಳಕೆಯನ್ನು ಕೂಡ ಅಕ್ಕನ ವಚನಗಳಲ್ಲಿ ಅಲ್ಲಲ್ಲಿ ನೋಡಬಹುದು.

ಹಸಿವೇ ನೀನು ನಿಲ್ಲು ನಿಲ್ಲು	೪ ೩ ೩ ೩
ತೃಷೆಯೇ ನೀನು ನಿಲ್ಲು ನಿಲ್ಲು	೪ ೩ ೩ ೩
ನಿದ್ರೆಯೇ ನೀನು ನಿಲ್ಲು ನಿಲ್ಲು	೪ ೩ ೩ ೩
ಕಾಮವೇ ನೀನು ನಿಲ್ಲು ನಿಲ್ಲು	೫ ೩ ೩ ೩
ಕ್ರೋಧವೇ ನೀನು ನಿಲ್ಲು ನಿಲ್ಲು	೫ ೩ ೩ ೩
ಮೋಹವೇ ನೀನು ನಿಲ್ಲು ನಿಲ್ಲು	೫ ೩ ೩ ೩

ಲೋಭವೇ ನೀನು ನಿಲ್ಲು ನಿಲ್ಲು	೫ ೩ ೩ ೩
ಮದವೇ ನೀನು ನಿಲ್ಲು ನಿಲ್ಲು	೪ ೩ ೩ ೩
ಮಚ್ಚರವೇ ನೀನು ನಿಲ್ಲು ನಿಲ್ಲು	೫ ೩ ೩ ೩
ಸಚರಾಚರವೇ ನೀನು ನಿಲ್ಲು ನಿಲ್ಲು	೪ ೪ ೩ ೩ ೩
ನಾನು ಚೆನ್ನಮಲ್ಲಿಕಾರ್ಜುನದೇವರ	೩ ೪ ೩ ೪ ೩ ೪
ಅವಸರದ ಓಲೆಯನೊಯ್ವುತ್ತದೇನೆ	೩ ೪ ೩ ೪ ೩ ೪
ಶರಣಾರ್ಥಿ	
ಎರೆಯಂತೆ ಕರಕರಗಿ ಮಳಲಂತೆ	೫ ೫ ೫
ಜರಿಜರಿದು ಕನಸಿನಲಿ ಕಳವಳಿಸಿ	೫ ೫ ೫
ಆನು ಬೆರಗಾದೆ, ಅವಿಗೆಯ ಕಿಚ್ಚಿನಂತೆ	೩ ೫ ೫ ೫
ಸುಳಿ ಸುಳಿದು ಬೆಂದೆ	೫ ೩
ಆಪತ್ತಿಗೆ ಸಖಿಯರ ನಾನಾರುವನು ಕಾಣೆ	೫ ೫ ೪ ೪ ೩
ಅರಸಿ ಕಾಣದ ತನುವ	೩ ೪ ೩
ಬೆರಸಿ ಕೂಡದ ಸುಖವ	೩ ೪ ೩
ಎನಗೆ ನೀ ಕರುಣಿಸು ಚೆನ್ನಮಲ್ಲಿಕಾರ್ಜುನ	೪ ೩ ೩ ೫
ಕಲ್ಲ ಹೊಕ್ಕರೆ ಕಲ್ಲ ಬಿರಿಸಿದೆ	೩ ೪ ೩ ೪
ಗಿರಿಯ ಹೊಕ್ಕರೆ ಗಿರಿಯ ಬಿರಿಸಿದೆ	೩ ೪ ೩ ೪
ಬಾಪು ಸಂಸಾರವೇ ಬೆನ್ನಿಂದ	೩ ೫ ಗು ೫
ಬೆನ್ನ ಹತ್ತಿ ಬಂದೆ	೩ ೩ ೩
ಚೆನ್ನಮಲ್ಲಿಕಾರ್ಜುನಯ್ಯ	೩ ೩ ೩ ೪
ಇನ್ನೇವೆನ್ನಿನ್ನೇವೆ	೫ ೫
ಹೆದರದಿರು ಮನವೇ ಬೆದರದಿರು ತನುವೇ	೫ ೪ ೫ ೪
ನಿಜವನರಿತು ನಿಶ್ಚಿಂತವಾಗಿರು	೩ ೩ ೪ ೩
ಫಲವಾದ ಮರನ ಇಡುವುದೊಂದು ಕೋಟಿ	೪ ೩ ೪ ೩ ೩
ಎಲವದ ಮರನ ಇಡುವರೊಬ್ಬರ ಕಾಣೆ	೩ ೪ ೩ ೪ ೩
ಭಕ್ತಿಯುಳ್ಳವರ ಬೈವರೊಂದು ಕೋಟಿ	೩ ೪ ೩ ೪ ೩

ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ	೩ ೪ ೩ ೪ ೩
ನಿಮ್ಮ ಶರಣರ ನುಡಿಯೆ ಎನಗೆ ಗತಿ ಸೋಪಾನ	೩ ೪ ೩ ೩ ೪ ೩ ೩ ೩
ಚೆನ್ನಮಲ್ಲಿಕಾರ್ಜುನ	

ಅಕ್ಕಮಹಾದೇವಿಯ ವಚನಗಳಲ್ಲಿ ಮಾತ್ರಾ ಲಯದಂತೆ ಅಂಶ ಲಯವೂ ಹೇರಳವಾಗಿ ಬಳಕೆಯಾಗಿದೆ. ವಚನಗಳನ್ನು ಹಾಡುವಾಗ ಲಯದ ಏರಿಳಿತ ಕಂಡು ಬರುತ್ತದೆ. ಅಂಶಗಣದ ರಚನೆಯ ವಿನ್ಯಾಸ ಹೀಗಿದೆ.

ಕಲ್ಲ ಹೊಕ್ಕರೆ ಕಲ್ಲ ಬಿರಿಸಿದೆ	ಬ್ರ ವಿ ಬ್ರ ವಿ
ಗಿರಿಯ ಹೊಕ್ಕರೆ ಗಿರಿಯ ಬಿರಿಸಿದೆ	ಬ್ರ ವಿ ಬ್ರ ವಿ
ಬಾಪು ಸಂಸಾರವೇ ಬೆನ್ನಿಂದ ಹತ್ತಿ ಬಂದೆ	ಬ್ರ ವಿ ವಿ ಬ್ರ ಬ್ರ
ಚೆನ್ನಮಲ್ಲಿಕಾರ್ಜುನಯ್ಯ ಇನ್ನೇವೆನಿನ್ನೇವೆ	ವಿ ವಿ ವಿ ಬ್ರ
ಹಸಿವಾದರೆ ಊರೊಳಗೆ ಭಿಕ್ಷಾನ್ನಗಳುಂಟು	ವಿ ವಿ ವಿ ವಿ
ತೃಷೆಯಾದರೆ ಕೆರೆ–ಬಾವಿ–ಹಳ್ಳಗಳುಂಟು	ವಿ ವಿ ವಿ ಬ್ರ
ಶಯನಕ್ಕೆ ಹಾಳು ದೇಗುಲವುಂಟು	ವಿ ವಿ ವಿ
ಚನ್ನಮಲ್ಲಿಕಾರ್ಜುನಯ್ಯ	ವಿ ವಿ ವಿ
ಆತ್ಮ ಸಂಗಾತಕ್ಕೆ ನೀನೆನಗುಂಟು	ವಿ ವಿ ವಿ ಬ್ರ

ಬಿಟ್ಟೆನೆಂದರೆ ಬಿಡದೀ ಮಾಯೆ	ಬ್ರ ವಿ ಬ್ರ ಬ್ರ
ಬಿಡದಿದ್ದರೆ ಬೆಂಬತ್ತಿತ್ತು ಮಾಯೆ	ಬ್ರ ಬ್ರ ವಿ ಬ್ರ
ಯೋಗಿಗೆ ಯೋಗಿಣಿಯಾಯಿತ್ತು ಮಾಯೆ	ವಿ ವಿ ವಿ ಬ್ರ
ಸವಣಗೆ ಸವಣಿಯಾಯಿತ್ತು ಮಾಯೆ	ವಿ ಬ್ರ ವಿ ಬ್ರ
ಯತಿಗೆ ಪರಾಕಿಯಾಯಿತ್ತು ಮಾಯೆ	ವಿ ಬ್ರ ವಿ ಬ್ರ
ನಿನ್ನ ಮಾಯೆಗೆ ನಾನಂಜುವಳಲ್ಲ	ವಿ ಬ್ರ ವಿ ಬ್ರ
ಚೆನ್ನಮಲ್ಲಿಕಾರ್ಜುನ ದೇವನಿಮ್ಮಾಣೆ	ರು ವಿ ವಿ ಬ್ರ

ಅಕ್ಕನ ಹಲವು ವಚನಗಳಲ್ಲಿ ಮೇಲಿನಂತೆ ದೇಶೀ ಮೂಲದ ಅಂಶಗಣವು ಸ್ವರಗಳನ್ನು ಹಿಗ್ಗಿಸಿಯೋ ತೇಲಿಸಿಯೋ ರಾಗಿಸುವ ಕ್ರಮ ಕಂಡುಬರುತ್ತದೆ. ಅಲ್ಲಿ ಗೇಯತೆ ಮುಖ್ಯ. ಅಕ್ಕಮಹಾದೇವಿಯ ವಚನಗಳಲ್ಲಿ ಮುಕ್ತ ಛಂದಸ್ಸು ಹಲವು ವಚನಗಳಲ್ಲಿ ಕಂಡು ಬರುತ್ತದೆ. ಸಾಮಾನ್ಯವಾಗಿ ಮುಕ್ತ ಛಂದಸ್ಸು ಎಂದರೆ ನಿಯತ ಪಾದಸಂಖ್ಯೆ ನಿಯತ ಪಾದರಚನೆ, ನಿಯತಲಯ,

ನಿಯತಪ್ರಾಸ ಇವು ಇಲ್ಲದ ಆದರೆ ಗದ್ಯಕ್ಕಿಂತ ಭಿನ್ನವಾದ ಛಂದಸ್ಸನ್ನು ಮುಕ್ತ ಛಂದಸ್ಸೆಂದು ಕರೆಯಲಾಗುತ್ತದೆ. ಅಕ್ಕನ ವಚನಗಳು ಈ ರೀತಿಯಲ್ಲಿವೆ.

ಮುಡಿಬಿಟ್ಟು, ಮೊಗಬಾಡಿ, ತನು ಕರಗಿದವಳ
ಎನ್ನನೇಕೆ ನುಡಿಸುವಿರಿ, ಎಲೆ ಅಣ್ಣಗಳಿರಾ
ಎನ್ನನೇಕೆ ಕಾಡುವಿರಿ ಎಲೆ ತಂದೆಗಳಿರಾ
ಬಲುಹಳಿದು, ಭವಗೆಟ್ಟು, ಛಲವಳಿದು
ಭಕ್ತೆಯಾಗಿ ಚೆನ್ನಮಲ್ಲಿಕಾರ್ಜುನನ
ಕೂಡಿ ಕುಲವಳಿದವಳ.

ವಿರಾಮಗಳು ಪದ್ಯದ ಲಯವನ್ನು ನಿರೂಪಿಸುತ್ತವೆ. ಪದ ಅಥವಾ ಪದಪುಂಜವೇ ಛಂದಸ್ಸಿನ ಮೂಲಮಾನ. ಪೂರ್ಣವಾಕ್ಯವೇ ಒಂದು ನುಡಿ, ಪ್ರಾಸ ಐಚ್ಛಿಕ. ಅವು ವಚನಗಳಲ್ಲಿ ಯಾವ ಬಂಧವನ್ನು ಹಿಡಿಯದೆ ಶಿಥಿಲವಾಗಿ ಹೊರಡುತ್ತದೆ. ಕೆಲವೊಮ್ಮೆ ಇದರಲ್ಲಿ ಪರಿಚಿತ ರೀತಿಯ ಗಣಸರಣಿ ತಲೆಹಾಕುವುದುಂಟು. ಮಾದರಿಗೆ ಇವನ್ನು ನೋಡಬಹುದು.

ಅಂಗದಲ್ಲಿ ಲಿಂಗ ಸಂಗ	೩ ೩ ೩ ೩
ಲಿಂಗದಲ್ಲಿ ಅಂಗ ಸಂಗ	೩ ೩ ೩ ೩
ಮಾಡಿದನೆಂದರೆ	೪ ೪
ಎನಗಾವ ಜಂಜಡವಿಲ್ಲ	೪ ೩ ೪
ಚೆನ್ನಮಲ್ಲಿಕಾರ್ಜುನನ ಸ್ನೇಹದಲ್ಲಿ	೪ ೪ ೪ ೪ ೩
ನಿನ್ನ ಕರುಣದ ಶಿಶು	೩ ೪ ೩
ನಾನು ಕಾಣ ಸಂಗನಬಸವಣ್ಣ	೩ ೩ ೪ ೫
ಎರೆಯಂತೆ ಕರಕರಗಿ	೫ ೫
ಮಳಲಂತೆ ಜರಿಜರಿದು	೫ ೫
ಕನಸಿನಲಿ ಕಳವಳಿಸಿ	೫ ೫
ಆನು ಬೆರಗಾರೆ ಆವಿಗೆಯ	೩ ೫ ೫
ಕಿಚ್ಚಿನಂತೆ ಸುಳಿಸುಳಿದು ಬೆಂದೆ	೩ ೫ ೩
ಚೆನ್ನಮಲ್ಲಿಕಾರ್ಜುನಾ	

ಈ ಉದಾರಣೆಗಳಲ್ಲಿ ಭಾಮಿನಿ ಲಯದ ಸುಳಿವು ಸಿಕ್ಕುತ್ತದೆ. ಆದರೆ ಘಟಕ ರಚನೆಯು ಸಾಂಪ್ರದಾಯಿಕ ೩+೪+೫ ಮಾತ್ರಾಲಯದ ಧಾಟಿಯನ್ನು ಮುರಿಯುತ್ತದೆ. ಕೆಲವು ವಚನಗಳಲ್ಲಿ ಅನಿರ್ಬಂಧ ಛಂದಸ್ಸಿನ ಪ್ರಯೋಗ ಕಾಣಬಹುದು. ಅಕ್ಕನ ವಚನಗಳಲ್ಲಿ ಇಂಥಹ ಪ್ರಯೋಗವಿದೆ.

ಗಿರಿಯಲ್ಲಲ್ಲದೆ : ಹುಲ್ಲುಮೊರಡಿ : ಯಲ್ಲಾಡುವುದೇ : ನವಿಲು
ಕೊಳನಲ್ಲದೆ : ಕಿರುವಳ್ಳ : ಕ್ಕೆಳಸುವುದೇ : ಹಂಸೆ
ಮಾಮರ : ತಳಿತಲ್ಲದೆ : ಸ್ವರಗೈವುದೆ : ಕೋಗಿಲೆ
ಪರಿಮಳವಿ : ಲ್ಲದಪುಷ್ಪ : ಕ್ಕೆಳಸುವುದೇ : ಭ್ರಮರ
ಎನ್ನದೇವ : ಚೆನ್ನಮಲ್ಲಿ : ಕಾರ್ಜುನ : ಗಲ್ಲದೆ
ಅನ್ಯಕ್ಕೆಳ : ಸುವುದೇ : ಎನ್ನಮನ : ಕೇಳಿರೆ ಕೆಳದಿಯದಿರಾ

ಈ ವಚನದಲ್ಲಿ ಮದನವತಿಗೆ ಸಮೀಪವಾದ ಸಹಜ ಸ್ವಚ್ಛಂಧ ಸುಂದರ ಗತಿಯೊಂದು ತನ್ನ ಸುಳುಹುದೋರಿದೆ. ಅಂಶ ಗಣಗಳ ಹೆಣಿಕೆಯಲ್ಲಿ ಈ ಪದಗಳ ಸ್ವಾರಸ್ಯ ಅಡಕವಾಗಿದೆ. ಶೈಲಿ ಒಂದಿಷ್ಟು ಅನೌಪಚಾರಿಕತೆಯಾದರೂ ಚಿಂತೆಯಿಲ್ಲ ಛಂದ್ಕಕೆ ಅನುಕೂಲವಾಗುವಂತೆ ಭಾಷೆಯನ್ನು ಅಳವಡಿಸಿಕೊಳ್ಳುವ ಪ್ರವೃತ್ತಿ ಇಂಥಹ ವಚನಗಳಲ್ಲಿ ಎದ್ದು ಕಾಣುತ್ತದೆ. ಅದಕ್ಕೆ ಕಾರಣ ಅಕ್ಕಮಹಾದೇವಿ ವಚನಗಳಲ್ಲಿ ಸುಪ್ತವಾಗಿದ್ದ ಗೇಯತೆಯನ್ನು ಸಂದರ್ಭಕ್ಕೆ ತಕ್ಕಂತೆ ವಚನಗಳಿಗೆ ಮಾಡಿಕೊಂಡಿರಬೇಕು. ಅವುಗಳ ಆಳದಲ್ಲಿ ಆಡುಮಾತಿನ ಲಯಗಳು ಮತ್ತು ಸೊಗಡು ಇರುವುದನ್ನು ಕಾಣಬಹುದು.

ಈ ವರೆಗಿನ ವಿವೇಚನೆಯನ್ನಾಧರಿಸಿ ಅಕ್ಕನ ವಚನಗಳ ಛಂದಸ್ಸಿನ ಲಕ್ಷಣಗಳನ್ನು ಹೀಗೆ ಸಂಗ್ರಹಿಸಬಹುದು.

೧. ಅಧ್ಯಯನಕಾರರಿಗೆ ಪರಿಚಿತವಾದ ಹೆಚ್ಚು ಕಡಿಮೆ ಎಲ್ಲ ಮಾತ್ರಾ ಅಂಶ ಮತ್ತು ಮುಕ್ತ ಛಂದಸ್ಸಿನ ಲಕ್ಷಣಗಳು ಅವರ ವಚನಗಳಲ್ಲಿ ಕಂಡು ಬರುತ್ತವೆ. ಅವುಗಳನ್ನು ಅಕ್ಕಮಹಾದೇವಿ ಉದ್ದೇಶಪೂರ್ವಕವಾಗಿ ಬಳಸಿಲ್ಲ. ಅವು ಸಹಜವಾಗಿಯೇ ಕಾಣಿಸಿಕೊಂಡಿವೆ.

೨. ಅಕ್ಕನ ವಚನಗಳಲ್ಲಿ ನಿಯಮಿತಲಯವಿಲ್ಲ. ಲಯ ಅನಿಯಮಿತವಾಗಿರುತ್ತದೆ. ಕೆಲವು ಸಾರಿ ಲಯಗಳ ಮಿಶ್ರಣ ಕಂಡುಬರುತ್ತದೆ.

೩. ಅಕ್ಕನ ವಚನಗಳು ನಾದಾತ್ಮಕವಾಗಿದ್ದು ಗೇಯಗುಣಗಳಿಂದ ಕೂಡಿದವುಗಳಾಗಿದೆ. ಅಕ್ಷರ ಆವೃತ್ತಿ, ಪದ ಪದಪುಂಜ ಕೆಲವು ಸಾರಿ ವಾಕ್ಯಗಳ ಪುನರಾವರ್ತನೆ ಕೂಡ ವಚನಗಳಲ್ಲಿ ಕಂಡುಬರುತ್ತದೆ. ಅವೆಲ್ಲ ಸಂದರ್ಭಕ್ಕೆ ತಕ್ಕಂತೆ ಬಳಕೆಯಾಗಿವೆ ಹೀಗೆ ವಚನಗಳ ಛಂದೋಲಯಗಳು ವೈವಿಧ್ಯಮಯವಾಗಿವೆ.

ಅಡಿಟಿಪ್ಪಣಿಗಳು

೧. ಪುರಂದರದಾಸರ ಪ್ರತಿಮಾಲೋಕ: ಡಾ. ಸುಪ್ರಿಯಾ ನಾಗರಹಳ್ಳಿ, ಅಪ್ರಕಟಿತ ಸಂಶೋಧನಾ ಪ್ರಬಂಧ, ೨೦೧೦, ಪು. ೬

೨. ವಚನ ಸಾಹಿತ್ಯ ಭಾಷೆ, ೨೦೦೭, ಡಾ. ಎಸ್.ಎಸ್.ಅಂಗಡಿ, ಪು. ೧೫

೩. ಕಾವ್ಯಾರ್ಥ ಚಿಂತನ, ೨೦೦೫, ಡಾ. ಜಿ.ಎಸ್.ಶಿವರುದ್ರಪ್ಪ, ಪು. ೧೦೬

೪. ಅದೇ, ವ.ಸಂ. ಪು. ೧೧೩

೫. ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೨೩೮

೬ ಭಕ್ತಿಭಂಡಾರಿ ಬಸವಣ್ಣನವರ ವಚನಗಳು, ೧೯೬೮, (ಸಂ) ಆರ್.ಸಿ.ಹಿರೇಮಠ, ವ.ಸಂ. ೯೬೩

೭ ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ, ವೀರಣ್ಣ ರಾಜೂರ, ವ.ಸಂ. ೨೭೪

೮. ಅದೇ, ವ.ಸಂ. ೧೭೪

೯. ಅದೇ, ವ.ಸಂ. ೧೦೮

೧೦. ಅದೇ, ವ.ಸಂ. ೩೯೫

೧೧. ಅದೇ, ವ.ಸಂ. ೪೧೯

೧೨. ಅದೇ, ವ.ಸಂ. ೧೮೭

೧೩. ಅದೇ, ವ.ಸಂ. ೧೮೮

೧೪. ಅದೇ, ವ.ಸಂ. ೨೩೧

೧೫. ಅದೇ, ವ.ಸಂ. ೩೬೬

೧೬ ಅದೇ, ವ.ಸಂ. ೨೦೭

೧೭ ಅದೇ, ವ.ಸಂ. ೪೦೫

೧೮. ಅದೇ, ವ.ಸಂ. ೪೨೦

೧೯. ಅದೇ, ವ.ಸಂ. ೨೪೫

೨೦. ಬಸವಣ್ಣನವರ ವಚನ ಸಂಪುಟ-೧, ೧೯೯೩, (ಸಂ) ಡಾ. ಎಂ.ಎ.ಕಲಬುರ್ಗಿ, ವ.ಸಂ. ೫೪

೨೧. ಶಿವಶರಣೆಯರ ವಚನಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ. ಸಂ. ೩೭೧

೨೨. ಅದೇ, ವ.ಸಂ. ೨೧೧

೨೩ ಅದೇ, ವ.ಸಂ. ೫೨

೨೪. ಅದೇ, ವ.ಸಂ. ೧೯೬

೨೫. ಅದೇ, ವ.ಸಂ. ೧೬೪

೨೬. ಅದೇ, ವ.ಸಂ. ೨೯೧

೨೭. ಅಕ್ಕಮಹಾದೇವಿಯ ವಚನಗಳು ಸಾಂಸ್ಕೃತಿಕ ಮುಖಾಮುಖಿ, (ಸಂ) ರಹಮತ್ ತರೀಕೆರೆ, ಪು. ೬೮

೨೮. ಶಿವಶರಣೆಯರ ವಚನಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೧೪೬

೨೯. ಅದೇ, ವ.ಸಂ. ೧೯೪

೩೦. ಅದೇ, ವ.ಸಂ. ೨೦೪

೩೧. ಅದೇ, ವ.ಸಂ. ೭೮

೩೨. ಅದೇ, ವ.ಸಂ. ೨೦೬

೩೩. ಅದೇ, ವ.ಸಂ. ೩೬೩

೩೪. ಅದೇ, ವ.ಸಂ. ೩೬೪

೩೫. ಅದೇ, ವ.ಸಂ. ೩೬೫

೩೬. ಅದೇ, ವ.ಸಂ. ೧೪೩

೩೭ ಬಸವಣ್ಣನವರ ವಚನ ಸಂಪುಟ-೧, ೧೯೯೩, (ಸಂ) ಡಾ. ಎಂ.ಎ.ಕಲಬುರ್ಗಿ, ವ.ಸಂ. ೫೨೨

೩೮. ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ, ೧೯೯೬, ಡಾ. ಸಿ.ವ್ಹಿ.ಪ್ರಭುಸ್ವಾಮಿಮಠ, ವ.ಸಂ. ೭೪

೩೯. ರಸೋವೈಸಃ, ಕುವೆಂಪು, ೨೦೦೯, ಪು. ೪೫

೪೦. ಶಿವಶರಣೆಯರ ವಚನ ಸಂಪುಟ-೫, ೨೦೦೧. (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೧೨

೪೧. ಅದೇ, ವ.ಸಂ. ೧೧

೪೨. ಅದೇ, ವ.ಸಂ. ೭೨

೪೩. ಅಕ್ಕಮಹಾದೇವಿಯ ವಚನಗಳು ಸಾಂಸ್ಕೃತಿಕ ಮುಖಾಮುಖಿ, ೨೦೦೫, (ಸಂ) ರಹಮತ್ ತರೀಕೆರೆ, ಪು. ೧೧೯

೪೪. ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೨೯೦

೪೫. ಅದೇ, ವ.ಸಂ. ೩೨೦

೪೬ ಅದೇ, ವ.ಸಂ. ೧೭೭

೪೭ ಅದೇ, ವ.ಸಂ. ೧೯೨.

೪೮. ಅದೇ, ವ.ಸಂ. ೪೨೧

೪೯. ಅದೇ, ವ.ಸಂ. ೨೦೨

೫೦. ಅದೇ, ವ.ಸಂ. ೩೯

೫೧. ಅದೇ, ವ.ಸಂ. ೩೦೭

೫೨. ವಚನ ಸಾಹಿತ್ಯ ಭಾಷೆ, ೨೦೦೭, ಡಾ. ಎಸ್.ಎಸ್.ಅಂಗಡಿ, ಪು. ೨೦

೫೩. ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೧೪

೫೪. ಅದೇ, ವ.ಸಂ. ೪೦೭

೫೫. ಅದೇ, ವ.ಸಂ. ೪೬

೫೬. ಅದೇ, ವ.ಸಂ. ೪೩

೫೭. ಅದೇ, ವ.ಸಂ. ೮೭

೫೮. ಕಾವ್ಯಾರ್ಥ ಚಿಂತನ, ೨೦೦೫, ಡಾ. ಜಿ.ಎಸ್.ಶಿವರುದ್ರಪ್ಪ, ಪು. ೧೧೫

೫೯. ಅಕ್ಕಮಹಾದೇವಿಯ ವಚನಗಳು ಸಾಂಸ್ಕೃತಿಕ ಮುಖಾಮುಖಿ, ೨೦೦೫, (ಸಂ) ರಹಮತ್ ತರೀಕೆರೆ, ಪು. ೧೨೫

೬೦. ವಚನ ಸಾಹಿತ್ಯ ಭಾಷೆ, ೨೦೦೭ ಡಾ. ಎಸ್.ಎಸ್.ಅಂಗಡಿ, ಪು. ೧.

೬೧. ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ, ೧೯೯೬, ಡಾ. ಸಿ.ವ್ಹಿ.ಪ್ರಭುಸ್ವಾಮಿಮಠ, ಪು. ೧೨೯.

೬೨. ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ, ೧೯೯೬, ಡಾ. ಸಿ.ವ್ಹಿ.ಪ್ರಭುಸ್ವಾಮಿಮಠ, ಪು. ೧೨೯.

೬೩. ವಚನ ಸಾಹಿತ್ಯ ಭಾಷೆ, ೨೦೦೭, ಡಾ. ಎಸ್.ಎಸ್.ಅಂಗಡಿ, ಪು. ೬.

೬೪. ಅದೇ, ಪು. ೧.

೬೫. ವಚನ ಸಾಹಿತ್ಯ ಭಾಷೆ, ೨೦೦೭, ಡಾ. ಎಸ್.ಎಸ್.ಅಂಗಡಿ, ಪು. ೪೯.

೬೬. ಹರಿಹರನ ರಗಳೆಗಳ ಸಾಹಿತ್ಯಿಕ ಅಧ್ಯಯನ, ೧೯೯೯, ಡಾ. ಕೆ.ಪಿ.ಮಹದೇವಯ್ಯ, ಪು. ೨೩೫.

೬೭ ಶಿವಶರಣೆಯರ ವಚನ ಸಂಪುಟ-೫, ೨೦೦೧,(ಸಂ) ಡಾ. ವೀರಣ್ಣ ರಾಜೂರ, ವ.ಸಂ. ೧೧೦.

೬೮. ಅದೇ, ವ.ಸಂ. ೧೬೨.

೬೯. ಅಕ್ಕಮಹಾದೇವಿ ವಚನಗಳು ಸಾಂಸ್ಕೃತಿಕ ಮುಖಾಮುಖಿ, ೨೦೦೫, ರಹಮತ್ ತರೀಕೆರೆ, ಪು. ೩೨.

೭೦. ಅಕ್ಕಮಹಾದೇವಿ ವಚನಗಳು, ೨೦೦೮, (ಸಂ) ಡಾ. ಎಲ್.ಬಸವರಾಜು, ವ.ಸಂ. ೭೩.

೭೧. ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೧೫೫.

೭೨. ಅಕ್ಕಮಹಾದೇವಿ ವಚನಗಳು ಸಾಂಸ್ಕೃತಿಕ ಮುಖಾಮುಖಿ, ೨೦೦೫, (ಸಂ) ಡಾ. ರಹಮತ್ ತರೀಕೆರೆ, ಪು. ೨೫.

೭೩. ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೯೬.

೭೪. ಅದೇ, ವ.ಸಂ. ೮೯.

೭೫. ಅದೇ, ವ.ಸಂ. ೪೭

೭೬. ಅದೇ, ವ.ಸಂ. ೭೧.

೭೭. ಅದೇ, ವ.ಸಂ. ೩೩೭.

೭೮. ಅಕ್ಕಮಹಾದೇವಿ ವಚನಗಳು ಸಾಂಸ್ಕೃತಿಕ ಮುಖಾಮುಖಿ, ೨೦೦೫, (ಸಂ) ಡಾ. ರಹಮತ್ ತರೀಕೆರೆ, ಪು. ೩೭.

೭೯. ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೩೩.

೮೦. ಅದೇ, ವ.ಸಂ. ೨೭೨.

೮೧. ಅದೇ, ವ.ಸಂ. ೩೯೮.

೮೨. ಅದೇ, ವ.ಸಂ. ೩೦೫.

೮೩. ಅದೇ, ವ.ಸಂ. ೧೬೩.

೮೪. ಅದೇ, ವ.ಸಂ. ೩೬೫.

೮೫. ಅಕ್ಕಮಹಾದೇವಿ ವಚನಗಳು ಸಾಂಸ್ಕೃತಿಕ ಮುಖಾಮುಖಿ, ೨೦೦೫, (ಸಂ) ಡಾ. ರಹಮತ್ ತರೀಕೆರೆ ಪು. ೬೮.

೮೬. ಶಿವಶರಣೆಯರ ವಚನ ಸಂಪುಟ-೫, ೨೦೦೧. (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೧೦೬.

೮೭. ಅಕ್ಕನ ವಚನಗಳು-೨೦೦೮, (ಸಂ) ಡಾ. ಎಲ್.ಬಸವರಾಜು, ವ.ಸಂ. ೩೫.

೮೮. ಶಿವಶರಣೆಯರ ವಚನ ಸಂಪುಟ-೫, ೨೦೦೧,(ಸಂ) ಡಾ. ವೀರಣ್ಣ ರಾಜೂರ, ವ.ಸಂ. ೧೭೧.

೮೯. ಅದೇ, ವ.ಸಂ. ೪೫.

೯೦. ಅದೇ, ವ.ಸಂ. ೪೧೧.

೯೧. ಅದೇ, ವ.ಸಂ. ೨೯೧.

೯೨. ವಚನ ಸಾಹಿತ್ಯ ಭಾಷೆ, ೨೦೦೭, ಡಾ. ಎಸ್.ಎಸ್.ಅಂಗಡಿ, ಪು. ೫೩.

೯೩. ಈ ಗಾದೆಗಳು, ವಚನ ನುಡಿಗಟ್ಟುಗಳನ್ನು ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ. ಕೃತಿಯಿಂದ ಆಯ್ದುಕೊಳ್ಳಲಾಗಿದೆ.

೯೪. ಬೈಗಳಗಳ ನುಡಿರಚನೆಗಳನ್ನು ಡಾ. ವೀರಣ್ಣ ರಾಜೂರ ಅವರು ಸಂಪಾದಿಸಿದ ಶಿವಶರಣೆಯರ ವಚನ ಸಂಪುಟ-೫, ೨೦೦೧ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

೯೫. ಅಕ್ಕಮಹಾದೇವಿ ವಚನಗಳು ಸಾಂಸ್ಕೃತಿಕ ಮುಖಾಮುಖಿ, ೨೦೦೫, (ಸಂ) ಡಾ. ರಹಮತ್ ತರೀಕೆರೆ, ಪು. ೪೫-೪೬

೯೬. ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೧೦.

೯೭. ಅದೇ, ವ.ಸಂ. ೨೨.

೯೮. ಅದೇ, ವ.ಸಂ. ೧೪೮.

೯೯. ಅದೇ, ವ.ಸಂ. ೩೪.

೧೦೦. ಅದೇ, ವ.ಸಂ. ೨೬೫.

೧೦೧. ಅದೇ, ವ.ಸಂ. ೨೧೧.

೧೦೨. ಅದೇ, ವ.ಸಂ. ೫೨.

೧೦೩. ಅದೇ, ವ.ಸಂ. ೧೧.

೧೦೪. ಅದೇ, ವ.ಸಂ. ೧೨.

೧೦೫. ಅದೇ, ವ.ಸಂ. ೧೧೯.

೧೦೬. ಅದೇ, ವ.ಸಂ. ೧೮೪.

೧೦೭. ವಚನಕಾರರ ಶಬ್ದ ಮತ್ತು ಅರ್ಥಮೀಮಾಂಸೆ, ಅಪ್ರಕಟಿತ ಸಂಶೋಧನಾ ಪ್ರಬಂಧ ೨೦೦೩, ಡಾ. ಕೆ.ನಾಗಭೂಷಣ, ಪು. ೧೫೭.

೧೦೮. ಕಾವ್ಯಾರ್ಥ ಚಿಂತನ, ೨೦೦೫, ಡಾ. ಜಿ.ಎಸ್.ಶಿವರುದ್ರಪ್ಪ, ಪು. ೧೪೫.

೧೦೯. ವಚನಸಾಹಿತ್ಯ ಭಾಷೆ, ೨೦೦೭, ಡಾ. ಎಸ್.ಎಸ್.ಅಂಗಡಿ, ಪು. ೯೯.

೧೧೦. ಕಾವ್ಯಾರ್ಥ ಚಿಂತನ, ೨೦೦೫, ಡಾ. ಜಿ.ಎಸ್.ಶಿವರುದ್ರಪ್ಪ, ಪು. ೧೩೮–೧೩೯.

೧೧೧. ವಚನ ಸಾಹಿತ್ಯ ಭಾಷೆ, ೨೦೦೭. ಡಾ. ಎಸ್.ಎಸ್.ಅಂಗಡಿ, ಪು.ಸಂ.೧೦೪.

೧೧೨. ಅಕ್ಕನ ವಚನಗಳು, ೨೦೦೮, ಡಾ. ಎಲ್.ಬಸವರಾಜು, ವ.ಸಂ. ೬೨.

೧೧೩. ಅದೇ, ವ.ಸಂ. ೩೪.

೧೧೪. ಅದೇ, ವ.ಸಂ. ೧೩೧.

೧೧೫. ಅದೇ, ವ.ಸಂ. ೨೪೦.

೧೧೬ ಅದೇ, ವ.ಸಂ. ೧೮೫.

೧೧೭. ಅದೇ, ವ.ಸಂ. ೩೧೦.

೧೧೮. ಅದೇ, ವ.ಸಂ. ೮೭

೧೧೯. ಅದೇ, ವ.ಸಂ. ೯೦

೧೨೦. ಅದೇ, ವ.ಸಂ. ೯೧.

೧೨೧. ಅದೇ, ವ.ಸಂ. ೫೬.

೧೨೨. ಅದೇ, ವ.ಸಂ. ೮೮.

೧೨೩. ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ, ೧೯೯೬, ಡಾ. ಸಿ.ವ್ಹಿ.ಪ್ರಭುಸ್ವಾಮಿಮಠ, ಪು. ೧೧೭.

೧೨೪. ಅದೇ, ಪು. ೧೨೩.

೧೨೫. ಅಕ್ಕನ ವಚನಗಳು, ೨೦೦೮, ಡಾ, ಎಲ್. ಬಸವರಾಜು, ವ.ಸಂ. ೮೦.

೧೨೬. ಅದೇ, ವ.ಸಂ. ೫೮.

೧೨೭. ಅಕ್ಕಮಹಾದೇವಿ, ೨೦೦೧, ಡಾ. ಶಾಂತಾ ಇಮ್ರಾಪೂರ, ಪು. ೨೮೪-೨೮೫.

೧೨೮. ಅಕ್ಕನ ವಚನಗಳು-೨೦೦೮. ಡಾ. ಎಲ್. ಬಸವರಾಜು. ವ.ಸಂ. ೩೨೧.

೧೨೯. ಅದೇ, ವ.ಸಂ. ೧೧೭.

೧೩೦. ಅದೇ, ವ.ಸಂ. ೧೨೬.

೧೩೧. ಅದೇ, ವ.ಸಂ. ೧೦೫.

೧೩೨. ಅದೇ, ವ.ಸಂ. ೯೮.

೧೩೩. ಅದೇ, ವ.ಸಂ. ೧೯೪.

೧೩೪. ಅದೇ, ವ.ಸಂ. ೧೯೩.

೧೩೫. ಅದೇ, ವ.ಸಂ. ೧೫೯.

೧೩೬. ಅದೇ, ವ.ಸಂ. ೭೨.

೧೩೭. ಅದೇ, ವ.ಸಂ. ೧೨೫.

೧೩೮. ಅದೇ, ವ.ಸಂ. ೨೯

೧೩೯. ಅದೇ, ವ.ಸಂ. ೨೬.

೧೪೦. ಅದೇ, ವ.ಸಂ. ೨೪೯.

೧೪೧. ಅದೇ, ವ.ಸಂ. ೨೮೨.

೧೪೨. ಅದೇ, ವ.ಸಂ. ೧೬೩.

೧೪೩. ಬಸವಣ್ಣನವರ ವಚನಗಳು, ೧೯೯೩, ಡಾ. ಎಂ.ಎಂ.ಕಲಬುರ್ಗಿ, ವ.ಸಂ. ೩೬೫.

೧೪೪. ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ, ೧೯೯೬, ಡಾ. ಸಿ.ವ್ಹಿ.ಪ್ರಭುಸ್ವಾಮಿಮಠ, ಪು.ಸಂ. ೧೨೨.

೧೪೫. ಅಕ್ಕನ ವಚನಗಳು, ೨೦೦೮, ಡಾ. ಎಲ್.ಬಸವರಾಜು, ವ.ಸಂ. ೧೨೯.

೧೪೬. ಅದೇ, ವ.ಸಂ. ೩೮.

೧೪೭. ವಚನ ಸಾಹಿತ್ಯ ಭಾಷೆ, ೨೦೦೭, ಡಾ. ಎಸ್.ಎಸ್.ಅಂಗಡಿ, ಪು. ೯೯.

೧೪೮. ಅದೇ, ಪು. ೯೯.

೧೪೯. ಅಕ್ಕನ ವಚನಗಳು, ೨೦೦೮, ಡಾ. ಎಲ್.ಬಸವರಾಜು, ವ.ಸಂ. ೧೯೨.

೧೫೦. ಅದೇ, ವ.ಸಂ. ೨೭೩.

೧೫೧. ಅದೇ, ವ.ಸಂ. ವ.ಸಂ. ೫.

೧೫೨. ಅದೇ, ವ.ಸಂ. ೧೨೧.

೧೫೩. ಅದೇ, ವ.ಸಂ. ೮೪.

೧೫೪. ಅದೇ, ವ.ಸಂ. ೭.

೧೫೫. ಅದೇ, ವ.ಸಂ. ೧೮.

೧೫೬. ಅದೇ, ವ.ಸಂ. ೭೩.

೧೫೭. ಅದೇ, ವ.ಸಂ. ೩೨೬.

೧೫೮. ಶಿವಶರಣೆಯರ ವಚನಸಂಪುಟ–೫, ೨೦೦೧, (ಸಂ) ಡಾ, ವೀರಣ್ಣ ರಾಜೂರ, ವ.ಸಂ. ೧೮೦.

೧೫೯. ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ, ೧೯೯೬, ಡಾ. ಸಿ.ವ್ಹಿ.ಪ್ರಭುಸ್ವಾಮಿಮಠ, ಪು.ಸಂ. ೪೪.

೧೬೦. ಅಕ್ಕನ ವಚನಗಳು, ೨೦೦೮, ಡಾ, ಎಲ್.ಬಸವರಾಜು, ವ.ಸಂ. ೨೦.

೧೬೧. ಅಕ್ಕಮಹಾದೇವಿ, ೨೦೦೧, ಡಾ. ಶಾಂತಾ ಇಮ್ರಾಪೂರ, ಪು. ೨೮೬.

೧೬೨. ಅಕ್ಕನ ವಚನಗಳು, ೨೦೦೮, ಡಾ, ಎಲ್. ಬಸವರಾಜು, ವ.ಸಂ. ೨.

೧೬೩. ಅದೇ, ವ.ಸಂ. ೧೮೨.

೧೬೪. ಮಹಾದೇವಿಯಕ್ಕನ ವಚನ–ಚಿಂತನ, ೨೦೦೧, ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು, ಪು. ೯೮.

೧೬೫. ಶಿವಶರಣೆಯರ ವಚನ ಸಂಪುಟ–೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೧೭೯.

೧೬೬. ಅಕ್ಕನ ವಚನಗಳು, ೨೦೦೮, ಡಾ. ಎಲ್.ಬಸವರಾಜು, ವ.ಸಂ. ೧೧, ೧೭, ೩೧, ೪೫, ೪೬, ೫೦, ೯೧, ೧೧೮, ೧೨೩, ೧೩೮, ೧೪೦, ೧೭೦, ೨೪೪, ೩೧೩, ೩೧೬, ೩೩೬.

೧೬೭. ಶಿವಶರಣೆಯರ ವಚನ ಸಂಪುಟ–೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೧೭೯.

೧೬೮. ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ, ೧೯೯೬, ಡಾ. ಸಿ.ವ್ಹಿ.ಪ್ರಭುಸ್ವಾಮಿಮಠ, ವ.ಸಂ. ೪೮.

೧೬೯. ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ, ೧೯೯೬, ಡಾ. ಸಿ.ವ್ಹಿ.ಪ್ರಭುಸ್ವಾಮಿಮಠ, ವ.ಸಂ. ೪೮.

೧೭೦. ಅಕ್ಕನ ವಚನಗಳು, ೨೦೦೮, ಡಾ. ಎಲ್.ಬಸವರಾಜು, ವ.ಸಂ. ೫೩.

೧೭೧. ಶಿವಶರಣೆಯರ ವಚನ ಸಂಪುಟ–೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೧೮೭.

೧೭೨. ಅಕ್ಕನ ವಚನಗಳು, ೨೦೦೮, ಡಾ. ಎಲ್.ಬಸವರಾಜು, ವ.ಸಂ. ೨೮೧.

೧೭೩. ಅದೇ, ವ.ಸಂ. ೩೧೯.

೧೭೪. ಅದೇ, ವ.ಸಂ. ೧೮೧.

೧೭೫. ಶಿವಶರಣೆಯರ ವಚನ ಸಂಪುಟ–೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೨೨೮.

೧೭೬. ಅಕ್ಕನ ವಚನಗಳು, ೨೦೦೮, ಡಾ. ಎಲ್.ಬಸವರಾಜು, ವ.ಸಂ. ೩೫೯.

೧೭೭ ಅದೇ, ವ.ಸಂ. ೨೩.

೧೭೮. ಅದೇ, ವ.ಸಂ. ೧೦೮.

೧೭೯. ಅದೇ, ವ.ಸಂ. ೧೫೭.

೧೮೦. ಬಸವಣ್ಣನವರ ವಚನಗಳು, ೧೯೯೩, (ಸಂ) ಡಾ॥ ಎಂ.ಎಂ.ಕಲಬುರ್ಗಿ, ವ.ಸಂ. ೧೩೮೨.

೧೮೧. ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ, ೧೯೯೬, ಡಾ. ಸಿ.ವ್ಹಿ.ಪ್ರಭುಸ್ವಾಮಿಮಠ, ವ.ಸಂ. ೬೩.

೧೮೨. ಬಸವಣ್ಣನವರ ವಚನಗಳು, ೧೯೯೩, (ಸಂ) ಡಾ. ಎಂ.ಎಂ.ಕಲಬುರ್ಗಿ, ವ.ಸಂ. ೧೬೦.

೧೮೩. ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ, ೧೯೯೬, ಡಾ. ಸಿ.ವ್ಹಿ.ಪ್ರಭುಸ್ವಾಮಿಮಠ, ವ.ಸಂ. ೬೪.

೧೮೪. ಅಕ್ಕನ ವಚನಗಳು, ೨೦೦೮, ಡಾ, ಎಲ್.ಬಸವರಾಜು, ವ.ಸಂ. ೭೬.

೧೮೫. ಅದೇ, ವ.ಸಂ. ೭೩.

೧೮೬. ಶಿವಶರಣೆಯರ ವಚನ ಸಂಪುಟ–೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೪೨.

೧೮೭ ಅದೇ, ವ.ಸಂ. ೩೬೨.

೧೮೮. ಅಕ್ಕನ ವಚನಗಳು, ಪೀಠಿಕೆ, ೨೦೦೮, ಡಾ. ಎಲ್.ಬಸವರಾಜು. ವ.ಸಂ. ೨. ಪು. ೩೯.

–ಛಂದಸ್ಸು ಭಾಗದಲ್ಲಿ ಬರುವ ವಚನಗಳನ್ನು ಡಾ. ಎಲ್. ಬಸವರಾಜು ಅವರು ಸಂಪಾದಿಸಿದ ಅಕ್ಕನ ವಚನಗಳು ಎಂಬ ಕೃತಿಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

ಅಧ್ಯಾಯ ಐದು

ಸ್ತ್ರೀವಾದಿ ನೆಲೆಯಲ್ಲಿ ಅಕ್ಕಮಹಾದೇವಿಯ ವಚನಗಳು

ಅಧ್ಯಾಯ ಐದು

ಸ್ತ್ರೀವಾದಿ ನೆಲೆಯಲ್ಲಿ ಅಕ್ಕಮಹಾದೇವಿಯ ವಚನಗಳು

ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಬಹುಕಾಲದಿಂದಲೂ ದಲಿತ ಮತ್ತು ಸ್ತ್ರೀ ಸಮುದಾಯಗಳು ಸಮಾನ ನೆಲೆಯಲ್ಲೇ ಅವಗಣನೆ ಅವಮಾನ, ಅನಾದರಗಳಿಗೆ ಒಳಗಾಗಿ ಸಮಾನತೆ, ಸ್ವಾತಂತ್ರ್ಯ, ಮಾನವೀಯ ಸಹಜ ಅವಕಾಶಗಳಿಂತ ವಂಚಿತವಾಗಿವೆ. ಮುಕ್ತ ಅಭಿವ್ಯಕ್ತಿಯಿಂದ ದೂರ ಸರಿದು ಮೌನದಲ್ಲೇ ನೋವು ನುಂಗಿ ತಮ್ಮ ಅಸ್ಮಿತತೆಯನ್ನು ಅಸ್ಥಿತ್ವಗೊಳಿಸಿಕೊಳ್ಳಲಾಗದೆ ಅಸಹಾಯಕತೆ ಯಿಂದ ಪರಿಸ್ಥಿತಿಯನ್ನು ನೋಡುತ್ತ ದಯನೀಯ ಬದುಕನ್ನು ದೂಡಿ ತಮ್ಮ ಧ್ವನಿಯನ್ನು ಹೊರಗೆಡುಹುವಲ್ಲಿ ಹತ್ತಿಕಲ್ಪಟ್ಟಿದ್ದು ಸರ್ವವಿಧಿತ. ಭಾರತೀಯ ಸ್ತ್ರೀಯರ ಜೀವನ ಅನಾದಿ ಕಾಲದಿಂದ ಅರಮನೆ, ಅಡುಗೆಮನೆ, ಹೆರಿಗೆ ಮನೆಗಳಿಗೆ ಸೀಮಿತವಾಗಿ ಅಕ್ಷರ ಅರಿವಿನ ಪ್ರಪಂಚದಿಂದ ವಂಚಿತಳಾಗಿ ಅಸಹನೀಯ ಬದುಕನ್ನು ಸಹ್ಯವಾಗಿಸಿಕೊಳ್ಳುವ ಒತ್ತಡದಲ್ಲಿ ತಮ್ಮತನವನ್ನು ಕಂಡುಕೊಳ್ಳಲಾಗದ ಸಹಜತೆಯನ್ನು ಅನುಭವಿಸಲಾಗದ ದಯನೀಯ ಸ್ಥಿತಿಗೆ ತಳ್ಳಲ್ಪಟ್ಟಿದ್ದು ಚರಿತ್ರೆಯುದ್ಧಕ್ಕೂ ಸಾಗಿ ಬಂದಿದೆ.

ಪುರುಷಶಾಹಿ, ಪ್ರಭುತ್ವಶಾಹಿ, ಪುರೋಹಿತಶಾಹಿಗಳ ದಮನಕಾರಿ ತಂತ್ರಗಳಿಂದ ಸ್ಥಾಪಿತ ಮೌಲ್ಯಗಳ ಸಾಂಪ್ರದಾಯಿಕ ವ್ಯವಸ್ಥೆಯ ಉರುಳಿಗೆ ಕೊರಳನ್ನೊಡ್ಡಿ ತಮ್ಮ ಧ್ವನಿಯನ್ನು ದಮನ ಮಾಡಿಕೊಂಡ ದಯನೀಯ ಸ್ಥಿತಿ ಒಂದೆಡೆಯಾದರೆ, ಲಿಂಗೀಯ ದೃಷ್ಟಿಯಿಂದ ಸ್ಥಾಪಿತ ವ್ಯವಸ್ಥೆಯಲ್ಲಿ ಸ್ತ್ರೀ ಪುರುಷನಿಗಿಂತ ಕೀಳೆಂಬ ಭಾವನೆಯಿಂದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ರಾಜನೈತಿಕ, ಆಧ್ಯಾತ್ಮಿಕ ಅವಕಾಶಗಳಿಂದ ವಂಚಿತಳಾಗುತ್ತ, ಎರಡನೇ ದರ್ಜೆಯ ಪ್ರಜೆಯಾಗಿಯೇ ಬದುಕಿದ ರೀತಿ, ಅದರ ಕರಾಳ ಮುಖಗಳು, ಬಾಲ್ಯವಿವಾಹ, ಬಹುಪತ್ನಿತ್ವ, ಪರದಾಪದ್ಧತಿ, ಸತಿಪದ್ಧತಿ, ಮುಂತಾದ ನೆಲೆಗಳಿಂದ ಸ್ತ್ರೀಯರ ಶೋಷಣೆ ಅವ್ಯಾಹತವಾಗಿ ಆಯಾ ಕಾಲಮಾನ, ಪ್ರದೇಶ, ಜನಾಂಗಗಳು, ವರ್ಗಗಳಲ್ಲಿ ವಿವಿಧ ರೀತಿಯಾಗಿ ನಡೆದುಕೊಂಡು ಬಂದಿರುವುದರಿಂದ,

ಸ್ತ್ರೀಪರವಾದ ಸುಧಾರಣೆ, ಚಳುವಳಿಗಳು ಅಲ್ಲಲ್ಲಿ ನಡೆದಿದ್ದರೂ, ಇದುವರೆಗೂ ಪೂರ್ಣಪ್ರಮಾಣದಲ್ಲಿ ಸ್ತ್ರೀ ಬದುಕು ಸಂತಸಕಾರಕ ರೀತಿಯಲ್ಲಿಲ್ಲವೆಂಬುದು ವಾಸ್ತವಗ್ರಹಿತ ಸತ್ಯವಾಗಿದೆ.

ಆಧುನಿಕ ಕಾಲದ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾನಂತರದ ಸಮಕಾಲೀನ ಸಂದರ್ಭಗಳಲ್ಲಿ ಸ್ತ್ರೀಪರವಾದ ನಿಲುವುಗಳು, ಕಾನೂನುಗಳು ರೂಪಿತಗೊಂಡು ಕಾರ್ಯಪ್ರವೃತ್ತವಾಗಿದ್ದರೂ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ನಮ್ಮ ಭಾರತ ದೇಶದಲ್ಲಿ ಸಂವಿಧಾನಾತ್ಮಕ ಮೂಲಭೂತ ಹಕ್ಕುಗಳು ಲಿಂಗಭೇದವನ್ನು ನಿರಶನಗೊಳಿಸಿ ಕಾನೂನಿಕ ದೃಷ್ಟಿಯಲ್ಲಿ ಸರ್ವಸಮಾನತೆಯನ್ನು ಘೋಷಿಸಿದ್ದರೂ, ಭಾರತೀಯ ಸ್ತ್ರೀಯರ ಬದುಕಿನಲ್ಲಿ ಬೆಳಕಿನ ದಾರಿಯಾಗದೇ ಕತ್ತಲಮಯವಾಗಿಯೇ ಇದೆ. ಅಲ್ಲಲ್ಲಿ ಬೆಳಕು ಗೋಚರಿಸಿದರೂ ಅಸ್ಪಷ್ಟತೆ, ಅಸಂಗತೆಗಳಿಂದ ಕೂಡಿದ ಕವಲು ದಾರಿಯಲ್ಲಿರುವ ಸ್ತ್ರೀಯರ ಬದುಕು ಸಂಕೀರ್ಣ ಮತ್ತು ಸಂದಿಗ್ಧತೆಯಿಂದ ಹೊರತಾಗಿಲ್ಲ. ಸಾಂಪ್ರದಾಯಿಕ ಸ್ತ್ರೀ ನಿರ್ಬಂಧಿತ ಕಟ್ಟಳೆಗಳ ಪರಿವರ್ತಿತ ರೂಪಗಳೆಂಬಂತೆ, ಭ್ರೂಣಹತ್ಯೆ, ವರದಕ್ಷಿಣೆ, ಲಿಂಗತಾರತಮ್ಯ, ಅತ್ಯಾಚಾರ, ಕೌಟುಂಬಿಕ ದೌರ್ಜನ್ಯ, ವೈವಾಹಿಕ ಸಮಸ್ಯೆಗಳು, ಉದ್ಯೋಗ ಸ್ಥಳದಲ್ಲಿನ ಕ್ರೌರ್ಯ, ಹಿಂಸೆಗಳು ಹಾಡು ಹಗಲಲ್ಲೇ ದಿನನಿತ್ಯದಲ್ಲಿ ನಡೆಯುತ್ತಿರುವುದನ್ನು ಗಮನಿಸಿದಾಗ ಮಾನವೀಯ ಪ್ರಪಂಚದಲ್ಲಿ ಅಮಾನವೀಯ ಪ್ರವೃತ್ತಿಗಳ ನೆಲೆಗಳು ವಿಜೃಂಭಿಸಿ ಅಟ್ಟಹಾಸ ಗೈಯ್ಯುತ್ತಿರುವುದು ಸರ್ವೇಸಾಮಾನ್ಯವಾದ ಸಂಗತಿಗಳಾಗಿರುವುದು ಅತ್ಯಂತ ಶೋಚನೀಯವಾಗಿದೆ.

ಆಧುನಿಕ ಜಗತ್ತಿನಲ್ಲಿ ಭಾರತವಷ್ಟೇ ಅಲ್ಲದೆ ವಿಶ್ವದಾದ್ಯಂತ ಮಹಿಳೆಯರ ಮಾನ, ಪ್ರಾಣಗಳನ್ನು ಹಾನಿಗೊಳಿಸುವ ಪ್ರತ್ಯಕ್ಷ, ಪರೋಕ್ಷ ತಂತ್ರಗಳು ವಿಭಿನ್ನ ಸ್ವರೂಪದಿಂದ ಅವಳ ಅಸ್ತಿತ್ವ ಮತ್ತು ಪ್ರಗತಿಗೆ ಆತಂಕಕಾರಿಯಾಗಿ ಅಡೆತಡೆಗಳನ್ನೊಡ್ಡುತ್ತಿದ್ದು, ಸ್ತ್ರೀ ಸಮುದಾಯ ಮತ್ತೊಂದು ರೀತಿಯ ಸವಾಲು, ಸಂಘರ್ಷಗಳನ್ನು ಎದುರಿಸುವಂತಾಗುತ್ತಿರುವುದು ದುರ್ದೈವದ ಸಂಗತಿಯಾಗಿದೆ. ಪಾರಂಪರಿಕ ಮತ್ತು ಆಧುನಿಕ ಕಾಲಘಟ್ಟಗಳೆರಡರಲ್ಲಿಯೂ ಮಹಿಳೆ ತನ್ನೆಲ್ಲ ನೋವು, ತಲ್ಲಣ, ತುಡಿತಗಳನ್ನು ತನ್ನಲ್ಲೇ ತಹಬಂಧಿಸಿಕೊಂಡು ಮೌನವಾಗಿ, ಅಸಹಾಯಕಳಾಗಿ ಸಹಿಸುತ್ತ ಬಂದಿರುವಳು. ಪುರುಷಕೇಂದ್ರಿತ ಸ್ವಾರ್ಥ ದೃಷ್ಟಿಗೆ ಅವಳು ದಯನೀಯವಾಗಿ ದಮನಿಸಲ್ಪಟ್ಟು ತನ್ನ ದೇಹ, ಮನಸ್ಸು ಭಾವನೆಗಳೆಲ್ಲವನ್ನು ಪರಾಧೀನಗೊಳಿಸುವುದರಲ್ಲೇ ಪರಮ ತೃಪ್ತಿಯನ್ನು ಕಂಡುಕೊಳ್ಳುವಂತೆ ವ್ಯವಸ್ಥಿತ ತಂತ್ರಗಳನ್ನು ಹೆಣೆದು ಬಂಧಿಸಲಾಗಿದೆ. ಜೈವಿಕ ಕಾರಣಗಳಿಂದ ಕೀಳರಿಮೆ ಸೃಷ್ಟಿಸಿ ಸ್ತ್ರೀ ಅಬಲಳು, ಅಶಕ್ತಳು, ಪುರುಷನ ಅಧೀನಳೆಂಬಂತೆ ನಂಬಿಸಿ ನಡೆಸಿಕೊಂಡು ಬರಲಾಗಿದೆ. ತಾಯ್ತನದ ಹಿರಿತನವನ್ನು ವೈಭವೀಕರಿಸಿ ಸ್ತ್ರೀಯರ ಅಂತಃಸತ್ವವನ್ನು ಮರೆಮಾಚಲಾಗಿದೆ. 'ಪತಿಯೇ ಪರದೈವ' ಪತಿಯ ಸೇವೆಯಲ್ಲೇ ದೈವತ್ವವನ್ನು ಕಾಣುವಂತೆ ನಂಬಿಸಲಾಗಿದೆ.

ಪತಿವೃತೆ, ಶೀಲವಂತೆ ಎಂಬ ಕಾರಣಗಳನ್ನು, ಗುಣಗಳನ್ನು ಆರೋಪಿಸಿಯೂ ನೋವನ್ನು ನುಂಗಿಕೊಂಡು, ಸಹನೆಯಿಂದ ಬದುಕನ್ನು ದೂಡುವಂತೆ ಒತ್ತಾಯಿಸಲಾಗಿದೆ. ಸಹನೆ, ಸಹಿಷ್ಣುತೆ, ಸೇವಾ ಮನೋಪ್ರವೃತ್ತಿಗಳು ಸ್ತ್ರೀಯರ ಗುಣಗಳೆಂದು ಹೊಗಳಿಕೆಯ ಹೊನ್ನಶೂಲಕ್ಕೇರಿಸಿಯೂ ಹೆಣ್ಣನ್ನು ಹೀನಾಯವಾಗಿ ವಿವಿಧ ಕುತಂತ್ರಗಳಿಂದ ಕತ್ತಲೆಗೆ ದೂಡಲಾಗಿದೆ. "ಒಂದು ಕಡೆ ದಾಸಿಯ, ಇನ್ನೊಂದು ಕಡೆ ಮಾತೆಯ, ಮತ್ತೊಂಗು ಕಡೆ ಮಹಾದೇವತೆಯ ವಿಭಿನ್ನ ಸ್ತರಗಳನ್ನು ಆಕೆಯ ಜೀವನದಲ್ಲಿ ಸೃಷ್ಟಿಸಿ ಅಜ್ಞಾನದ ನರಕದಲ್ಲಿ ಆಕೆಯನ್ನು ದೂಡಲಾಗಿದೆ. ಗಂಡು ಆಕೆಯ ಬಗ್ಗೆ ತೋರುವ ಕರುಣೆ, ಪ್ರೀತಿ ಪ್ರೇಮಗಳೆಲ್ಲ ಗಂಡಿನ ಸ್ವಾರ್ಥದ, ಸಂಚಿನ ರೇಷ್ಮೆ ರೂಪಗಳಾಗಿ ಕಾಣಿಸಿಕೊಳ್ಳುತ್ತಾ ಬಂದಿವೆ. ಹೀಗಾಗಿ ಅಲ್ಲಲ್ಲಿ ಬೆರಳೆಣಿಕೆಯ ಅಪವಾದಗಳನ್ನು ಹೊರತು ಪಡಿಸಿದರೆ ವಿಶ್ವದ ಇತಿಹಾಸದುದ್ದಕ್ಕೂ ಗಂಡಿನಂತೆ ಬೆಳಕು ಮುಖವಾಗದೆ, ಅಂಧಮುಖವಾಗಿಯೇ ಮಹಿಳೆ ಉಳಿದು ಬಂದು ಗುಪ್ತಗಾಮಿನಿಯಾಗಿ ಬಿಟ್ಟಿದ್ದಾಳೆ. ಆಕೆಯ ಅಪರಿಮಿತ ಅಂತಸತ್ವ, ಬುದ್ಧಿಶೀಲತೆ, ಸೂಕ್ಷ್ಮ ಅನುಭವ ಮತ್ತು ಭಾವನಾಶೀಲತೆ, ಕ್ರಿಯಾಶೀಲತೆಗಳು ಬೇಸಗೆಯ ತೊರೆಯಾಗಿ ಬಿಟ್ಟಿವೆ. ಹೀಗೆ ಹತ್ತು ಹಲವು ಕಾರಣಗಳಿಗಾಗಿ ಇತಿಹಾಸದ ತುಂಬ ಗಂಡು ವಿಜೃಂಭಿಸುವಂತೆ ಹೆಣ್ಣು ವಿಜೃಂಭಿಸಿಲ್ಲ."[1]

ಮಹಿಳೆಯರ ಸ್ಥಿತಿಗತಿಗಳು ನಿರ್ಧರಿತವಾಗುವುದು ಕುಟುಂಬದ ಪರಿಧಿಯಲ್ಲಿಯೇ. ಆನಂತರ ಸಮಾಜ, ಧರ್ಮ ಇನ್ನಿತರ ವ್ಯವಸ್ಥೆಗಳ ಹಿಡಿತ ಗಟ್ಟಿಗೊಳ್ಳುತ್ತ ಹೋಗುತ್ತವೆ. ಸ್ತ್ರೀಯರಿಗೆ ಸಂದರ್ಭಗಳು ಮಾತ್ರ ಒದಗುತ್ತವೆ. ಬಹುಮಟ್ಟಿಗೆ ಆಯ್ಕೆ ಸ್ತ್ರೀಯರಿಗೆ ದೊರೆಯದೇ ಅವರ ವರ್ತನೆ, ಅಭಿಪ್ರಾಯ, ಅಭಿವ್ಯಕ್ತಿಗಳಿಗೆ ಮನ್ನಣೆ ದೊರೆಯದೇ ಮಾತಿಗಿಂತ ಮೌನಕ್ಕೆ ಶರಣಾಗುತ್ತಾರೆ. ಅವರ ಸಂದರ್ಭದ ಅಸಹಾಯಕತೆಯನ್ನೇ ಬಂಡವಾಳ ಮಾಡಿಕೊಂಡ ಪುರುಷವರ್ಗ ಮಹಿಳೆಯನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಹವಣಿಸುತ್ತದೆ. ಆ ಅಪೇಕ್ಷೆಗೆ ಪ್ರತಿರೋಧ ಉಂಟಾಗುವುದನ್ನು ಸಹಿಸಿ ಕೊಳ್ಳಲಾರದು.

ಒಂದು ವೇಳೆ ಸ್ತ್ರೀ ತನ್ನೆಲ್ಲ ಆತ್ಮಬಲವನ್ನು ಒಗ್ಗೂಡಿಸಿ ಪ್ರತಿಭಟನಾ ಧ್ವನಿಯನ್ನೆತ್ತಿದರೆ ಅದನ್ನು ವ್ಯವಸ್ಥಿತವಾಗಿ ದಮನಕಾರಿ ತಂತ್ರಗಳಿಂದ ಹತ್ತಿಕ್ಕಲು ಪ್ರಯತ್ನಿಸುತ್ತದೆ. ತೀರ ಕ್ರೌರ್ಯ, ದೌರ್ಜನ್ಯದಿಂದಾದರೂ ಆ ಪ್ರತಿರೋಧದ ಧ್ವನಿ ಹೊರಬರದಂತೆ ತಡೆವೊಡ್ಡುವುದರ ಮೂಲಕ ಸ್ತ್ರೀಶೋಷಣೆಗೆ ಮುಂದಾಗುತ್ತದೆ. ಸಮಾಜದ ಚಿಕ್ಕ ಘಟಕವಾದ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣಿನ ಸ್ಥಾನಮಾನ ಪುರುಷನಿಗಿಂತ ಕಡಿಮೆ ಮಟ್ಟದ್ದು. ಪುರುಷ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಮನೆಯ ಯಜಮಾನನ ಸ್ಥಾನಮಾನವೇನಿದ್ದರೂ ಅದು ಪುರುಷನದೆ. ಹೆಣ್ಣು ಅವನ ಅಧೀನದಲ್ಲಿ ಅನುಸರಿಸಿಕೊಂಡು ಹೋಗುವದಷ್ಟೇ ಅವಳ ಪಾಲಿನ ನಿಯಮ. ಪತಿ, ಕುಟುಂಬ ಸದಸ್ಯರಿಗೆ

ಆಹಾರ ತಯಾರಿಸುವುದು, ಅವರ ಯೋಗಕ್ಷೇಮ ನೋಡಿಕೊಳ್ಳುವುದು, ಪತಿಯ ಸಂತಾನವನ್ನು ಹೊರುವುದು, ಹೆರುವುದು, ರಕ್ಷಿಸುವುದು ಅದೇ ಅವಳ ಹೆಗ್ಗಳಿಕೆ ಎಂಬಂತೆ ಬಿಂಬಿಸಲಾಗಿದೆ. ಅನುತ್ಪಾದಕ, ಅವಶ್ಯಕ ಕೌಟುಂಬಿಕ ಕೆಲಸಕಾರ್ಯ, ಕರ್ತವ್ಯಗಳೆಲ್ಲ ಸ್ತ್ರೀಯರಿಗೆ ನಿರ್ವಹಿಸಲು ನಿಬಂಧಿಸಲಾಗಿದೆ. ಮಹಿಳೆಗೆ ಹಕ್ಕುಗಳಿಗಿಂತ ಕರ್ತವ್ಯಗಳ ಭಾರದ ಹೊರೆಯನ್ನು ಹೊರಿಸಿದ ಕೌಟುಂಬಿಕ, ಸಾಮಾಜಿಕ ವ್ಯವಸ್ಥೆಯು ಪುರುಷನಿಗೆ ಹಕ್ಕುಗಳ ಪ್ರಯೋಜನ ಮಾತ್ರವಿದ್ದು ಕರ್ತವ್ಯಗಳಿಂದ ವಿಮುಕ್ತಿಯನ್ನು ನೀಡಿರುವುದರಿಂದ ತಲೆತಲಾಂತರದಿಂದ ಕರ್ತವ್ಯಗಳ ನಿರ್ಬಂಧನೆಯಲ್ಲಿ ಮಹಿಳೆಯ ಪ್ರತಿಭೆ ಬೆಳಕಿಗೆ ಬಾರದೆ ಬಾಡಿಹೋಗಿದೆ.

ಮಹಿಳೆ ತನ್ನೆಲ್ಲ ಶಕ್ತಿ ಸಾಮರ್ಥ್ಯ, ಸಮಯವನ್ನು ಗಂಡನ ಸುಖಭೋಗಾಪೇಕ್ಷೆಯನ್ನು ತಣಿಸುವಲ್ಲಿ, ಆತನ ಸಂತಾನವನ್ನು ಹೊತ್ತು, ಹೆತ್ತು, ಸಲಹುವುದರಲ್ಲಿ ಕೌಟುಂಬಿಕ ಕರ್ತವ್ಯಗಳಲ್ಲಿ ಮೀಸಲಾಗಿರಿಸಿ ರುವುದರಿಂದ ಸಹಜವಾಗಿಯೇ ಸ್ತ್ರೀ ಸಮುದಾಯ ಸ್ವಸಾಮರ್ಥ್ಯದಿಂದ ಮುನ್ನಡೆಯುವಲ್ಲಿ ಹಿಂದೆ ಬಿದ್ದಿರುವುದು ಢಾಳಾಗಿ ಗೋಚರಿಸುತ್ತದೆ. ಗೃಹಿಣಿಯ ಬದುಕು ಗೃಹಕ್ಕೆ ಮಾತ್ರ ತಳುಕುಹಾಕಿ ಕೊಂಡಿದ್ದರಿಂದ ಅವಳ ಬದುಕೆಂದರೆ ಕೌಟುಂಬಿಕ ಬದುಕಿನ ಏರಿಳಿತಗಳಲ್ಲೇ ಕಳೆದುಹೋದ ಬದುಕಾಗಿದೆ. ಹೆಣ್ಣನ್ನು ಬಾಲ್ಯದಿಂದಲೇ ವಿವಾಹ ಸಂಬಂಧಿ ವಿಚಾರಗಳಿಂದಲೇ ಬೆಳೆಸುವ ಆಕೆಯ ಸಂಬಂಧಿ ಪೋಷಕರು, ಅಂತಹ ಕರ್ತವ್ಯಗಳನ್ನು ರೂಢಿಸುವಲ್ಲಿಂದಲೇ ಲಿಂಗತಾರತಮ್ಯದ ಬುನಾದಿ ಭದ್ರಗೊಳ್ಳುತ್ತ ಸಾಗುತ್ತದೆ. ಚಲನಶೀಲ ವ್ಯಕ್ತಿತ್ವವಾಗಿ ರೂಪುಗೊಳ್ಳಬೇಕಾದ ವ್ಯಕ್ತಿತ್ವ ಸ್ಥಾಪಿತ ಮೌಲ್ಯಗಳಲ್ಲಿ ಉಸಿರುಗಟ್ಟಿ ತನ್ನತನವನ್ನು ಕಳೆದುಕೊಳ್ಳುತ್ತ ಜಡಗೊಳ್ಳುತ್ತ ಜೀವಂತ ಶವವಾಗಿಯೇ ಕಾಲ ದೂಡುವುದರಲ್ಲಿ ಕಮರುತ್ತದೆ.

ಹೆಣ್ಣನ್ನು ಹೊನ್ನು ಮಣ್ಣುಗಳಂತೆ ಭೋಗದ ಭೌತಿಕ ವಸ್ತುವಿನಂತೆಯೇ ಪರಿಗಣಿಸಿ ಅನುಭವಿಸುತ್ತ ಬಂದಿರುವ ಪುರುಷವರ್ಗ ಸ್ತ್ರೀಯನ್ನು ತನ್ನ ಆತ್ಮಸಂಗಾತಿಯಾಗಿ ಕಾಣುವಲ್ಲಿ ಅವನ ಅಹಮಿಕೆ ತಡೆಯುತ್ತದೆ. ಆದ್ದರಿಂದ ಹುಟ್ಟಿದ ಮನೆಯಿಂದ ಕೊಟ್ಟ ಮನೆಯವರೆಗೂ ಅವಳ ವ್ಯಕ್ತಿತ್ವ ಅರಳುವ ಮುನ್ನವೇ ದಾಸ್ಯಕ್ಕೆ, ದೌರ್ಜನ್ಯಕ್ಕೆ, ಕರ್ತವ್ಯಗಳ ಕಟಿಬದ್ಧತೆಗಳಲ್ಲಿ ಕಮರಿ ಹೋಗುತ್ತದೆ. "ಶ್ರೇಣೀಕೃತ ವಾದ ನಮ್ಮ ಸಾಮಾಜಿಕ ಸಂರಚನೆಯಲ್ಲಿ ಜಾತಿ, ವರ್ಗ, ಮತಗಳ ಆಧಾರದ ಮೇಲೆ ಒಡಕು ಉಂಟಾಗಿರುವಂತೆ ಲಿಂಗಾಧಾರಿತವಾಗಿ ಇನ್ನೂ ಹೆಚ್ಚು ತಾರತಮ್ಯ, ವ್ಯತ್ಯಾಸಗಳನ್ನು ಕಾಣಬಹುದು. ಲಿಂಗವ್ಯವಸ್ಥೆಯ ನಿರ್ಮಾಪಕನೂ ಆಗಿರುವ ಪುರುಷ ವರ್ಗವು ತನ್ನ ಆಶಯಕ್ಕೆ ತಕ್ಕಂತೆ ಮಹಿಳಾ ವರ್ಗವನ್ನು ನಿರ್ಮಿಸಿಕೊಂಡಿದೆ. ಸಾಮಾಜಿಕ, ರಾಜಕೀಯ, ಆರ್ಥಿಕ ನಿಯಂತ್ರಣ ಹೊಂದಿರುವ ಪುರುಷವರ್ಗ ತಾನು ಸೂಚಿಸಿದ ಮೌಲ್ಯಗಳನ್ನೇ ಸಾಮಾಜಿಕ ಸಾಂಸ್ಕೃತಿಕ ಪರಮ ಮೌಲ್ಯಗಳೆಂದು ಅರ್ಥೈಸಿದೆ. ಹಾಗೂ ಹೆಣ್ಣನ್ನು ಅದರಂತೆಯೇ ಒಪ್ಪಿಸಿಕೊಂಡಿದೆ. ಸ್ತ್ರೀಪುರುಷರು ಬದುಕಬೇಕಾದ

ರೀತಿ ನೀತಿಗಳನ್ನು ತಿಳಿಯುವ ಹಾಗೂ ನಿರ್ದೇಶಿಸುವ ಆಲೋಚನೆಗಳು ಪುರುಷಕೇಂದ್ರಿತವಾಗಿದ್ದು ಅದೇ ಪ್ರಧಾನವಾಹಿನಿಯ ಮೂಲವಾಗಿದೆ. ಆದ್ದರಿಂದ ಹೆಣ್ಣು ಗಂಡಿನಿಂದ ನಿರ್ಮಿತಳಾದ ವ್ಯಕ್ತಿ ಎನಿಸಿಕೊಂಡಿದ್ದಾಳೆ."[೨]

ಕೌಟುಂಬಿಕ ಮತ್ತು ಸಾಮಾಜಿಕ ವ್ಯವಸ್ಥೆಗಳಂತೆಯೇ ಧಾರ್ಮಿಕ ವಿಚಾರದಲ್ಲಿಯೂ ಸ್ತ್ರೀಯು ವಿರೋಧಿ ನೆಲೆಯಲ್ಲಿ ನಕಾರಾತ್ಮಕವಾಗಿಯೇ ಗ್ರಹಿತವಾಗಿದ್ದಾಳೆ. ಭಾರತೀಯ ಧಾರ್ಮಿಕ ಮತ್ತು ಆಧ್ಯಾತ್ಮಿಕ ಹಿನ್ನೆಲೆಯನ್ನು ಗಮನಿಸಿದಾಗ ಬಹಳ ಸ್ಪಷ್ಟವಾಗಿ ಮಹಿಳೆ ಶೂದ್ರತ್ವದ ನೆಲೆಯಲ್ಲಿ ಹಿನ್ನಡೆಗೆ ತಳ್ಳಲ್ಪಟ್ಟಿದ್ದಾಳೆ. ಪ್ರಾಕೃತಿಕ ಕ್ರಿಯೆಗಳಿಂದ ಹೆಣ್ಣನ್ನು ಅಪವಿತ್ರವೆಂದೇ ಪರಿಗಣಿಸಲಾಗಿದೆ. ಆರಂಭದ ವೇದಕಾಲ ಘಟ್ಟದ ಅಲ್ಪ ಸಕಾರಾತ್ಮಕ ನಿಲುವುಗಳನ್ನು ಹೊರತುಪಡಿಸಿದರೆ ಬಹುಕಾಲದ ವರೆಗೆ ಹೆಣ್ಣನ್ನು ನಕಾರಾತ್ಮವಾಗಿ, ಧಾರ್ಮಿಕ ಚೌಕಟ್ಟುಗಳಾಚೆ ನಿರ್ಬಂಧಿಸಲಾಗಿರುವುದು ಸ್ಪಷ್ಟವಾಗಿದೆ. ಹಿಂದೂಧರ್ಮ ಮನುಸ್ಮೃತಿ ಆಧಾರಿತ ಚಿಂತನೆಗಳು ಸ್ತ್ರೀಪರವಾಗಿರದೆ ವಿರೋಧಾತ್ಮಕವಾಗಿವೆ.

ವೈದಿಕ ಧರ್ಮದ ಕರ್ಮಕಾಂಡಗಳನ್ನು ಖಂಡಿಸಿ ಪ್ರಗತಿಪರ ವಿಚಾರಗಳನ್ನೊಳಗೊಂಡ ಹೊಸಮತಗಳ ಉದಯ ಕಾಲದ ಜೈನಧರ್ಮ, ಮತ್ತು ಬೌದ್ಧ ಧರ್ಮಗಳು ಹೆಣ್ಣಿಗೆ ತನ್ನ ಧಾರ್ಮಿಕ ಚಹರೆಯಲ್ಲಿ, ಕ್ರಿಯಾತ್ಮಕವಾದ ಅವಕಾಶಗಳನ್ನು ಸೃಷ್ಟಿಸದೆ ಮಹಿಳೆಯನ್ನು 'ಮಾಯೆ' ಎಂಬ ಮೂಲಭೂತ ದೃಷ್ಟಿಕೋನದಿಂದಲೇ ಪರಿಗಣಿಸಿ ಪ್ರವೇಶವನ್ನು ನಿರಾಕರಿಸಲಾಯಿತು. ಜೈನಧರ್ಮದ ಕಾಠಿಣ್ಯತೆ, ಬೌದ್ಧ ಧರ್ಮದ ಪ್ರತ್ಯೇಕತೆಗಳು, ಪುರುಷಕೇಂದ್ರಿತ ವ್ಯವಸ್ಥೆಗೆ ಪೂರಕವಾದವುಗಳೇ ಹೊರತು ಸಂಪೂರ್ಣವಾಗಿ ಸ್ತ್ರೀಸಮುದಾಯದ ಸ್ಪಂದನೆಗಳನ್ನು ಅರಿಯಲಿಲ್ಲ. ಕ್ರೈಸ್ತ, ತಾವೋ, ಕನಪ್ಯೂಶಿಯಸ್, ಶಿಖ್ ಜಗತ್ತಿನ ವಿವಿಧ ಮತ ಪಂಥಗಳಲ್ಲಿಯೂ ಗುರುತಿಸ ಬಹುದಾದ ಸ್ತ್ರೀ ಬಗೆಗಿನ ಇತ್ಯಾತ್ಮಕ ಸಂಗತಿಗಳು ವಿರಳವೆಂದೇ ಹೇಳಬೇಕಾಗುತ್ತದೆ. ಸ್ತ್ರೀ ಪುರುಷ ಸಮನ್ವಯ ಸಿದ್ಧಾಂತಗಳ ಸಂರಚನೆ ಹೊಂದಿದ ಧಾರ್ಮಿಕ ವ್ಯವಸ್ಥೆ ಪ್ರತಿಪಾದಿತಗೊಳ್ಳದಿರುವುದು ಸ್ತ್ರೀಯಾತ್ಮಕತೆಯ ಮಟ್ಟಿಗೆ ಅತೀ ಕೊರತೆ ಮತ್ತು ನಿರಾಕರಣೆಯ ನೆಲೆಯಾಗಿಯೇ ಗ್ರಹಿಸಬಹುದಾಗಿದೆ.

ಸ್ಥಾಪಿತ ಸಮಾಜದ ಮೌಲ್ಯಗಳು ಧರ್ಮದ ತಾತ್ವಿಕ ನೈತಿಕ ಪ್ರಣೀತ ಮೌಲ್ಯಗಳ ಹಿನ್ನೆಲೆಯಲ್ಲಿಯೇ ಸಂಲಗ್ನಗೊಂಡಿರುವುದರಿಂದ ಧಾರ್ಮಿಕ ಕ್ಷೇತ್ರದಿಂದ ಸ್ತ್ರೀಯು ದೂರವಾಗಿ ಇಡಲ್ಪಟ್ಟಿರುವುದರಿಂದ ಸಮಾಜದ ಸ್ತರಗಳಲ್ಲಿಯೂ ಆಕೆ ಪುರುಷನಿಗಿಂತ ವಿಭಿನ್ನ ರೀತಿಯಲ್ಲಿಯೇ ತರತಮವಾಗಿಯೇ ಪರಿಗಣಿತವಾಗಿದ್ದಾಳೆ. ಸಾಮಾನ್ಯವಾಗಿ ಸ್ಥಾಪಿತ ಧರ್ಮಗಳಿಗಿಂತ ಭಿನ್ನವಾಗಿ ಗುರುತಿಸಲ್ಪಡುವ ಭಾರತದಲ್ಲಿನ ಭಕ್ತಿಪಂಥ, ಭಕ್ತಿಚಳುವಳಿಗಳಲ್ಲಿ ಮಹಿಳಾ ಅಭಿವ್ಯಕ್ತಿಗೆ ಅವಕಾಶ ದೊರೆತಿರುವುದು ಮಹಿಳೆ ಬಗೆಗಿನ ಉದಾರ ದೃಷ್ಟಿಕೋನದ ಫಲವೆಂದೇ ಭಾವಿಸಲಾಗುತ್ತದೆ. "ಭಕ್ತಿ ಚಳುವಳಿಯಲ್ಲಿನ ಮಹಿಳಾ ಪ್ರವೇಶವು ಚಾರಿತ್ರಿಕ ಕಾರಣಗಳಿಂದಾಗಿ ಅರ್ಥವತ್ತಾಗಿರುವುದರಿಂದ ಅವಳ ಪಾಲ್ಗೊಳ್ಳುವಿಕೆ

ಹಾಗೂ ಅವಳ ಅಭಿವ್ಯಕ್ತಿಯ ಸ್ವರೂಪವನ್ನು ಸ್ತ್ರೀವಾದಿ ಸಂಕಥನವಾಗಿ ಗುರುತಿಸಲ್ಪಡಬೇಕಾಗುತ್ತದೆ. ಭಾರತೀಯ ಸಂದರ್ಭದಲ್ಲಿ ನಮಗೆ ದೊರೆಯುವ ಮಹಿಳಾ ಅಭಿವ್ಯಕ್ತಿಯ ರೂಪಗಳು ಪ್ರಾಚೀನವಾಗಿ ನಮಗೆ ದೊರೆಯುವುದು ಈ ಭಕ್ತಿ ಚಳುವಳಿಗಳಲ್ಲಿ. ಹಾಗಾಗಿ ಮಹಿಳೆಯರ ಈ ಅಭಿವ್ಯಕ್ತಿಯು ಸಾರ್ವಜನಿಕ ಪ್ರವೇಶದ ಅನುಭವ ಹಾಗೂ ಸಾಮುದಾಯಿಕ ಕಾಣ್ಕೆಗಳ ಫಲವಾಗಿ ಮೂಡಿ ಬಂದಿರುವುದರಿಂದ ಇವುಗಳನ್ನು ಆಧುನಿಕ ಸ್ತ್ರೀವಾದಿ ಪರಿಭಾಷೆಯಲ್ಲಿ ಸ್ತ್ರೀವಾದಿ ಸಂಕಥನಗಳೆಂದು (Feminist Discourse) ವ್ಯಾಖ್ಯಾನಿಸಬೇಕಾಗುತ್ತದೆ.”[೩]

ಸ್ಥಾಪಿತ ಧರ್ಮವ್ಯವಸ್ಥೆಯಲ್ಲಿ ನೇತ್ಯಾತ್ಮಕವಾಗಿ ನಿರೂಪಿಸಲ್ಪಟ್ಟ ಮಹಿಳೆಯ ಅಸ್ಮಿತೆ ಭಕ್ತಿಪಂಥದಲ್ಲಿ ಇತ್ಯಾತ್ಮಕವಾಗಿ ಗ್ರಹಿಸಲ್ಪಟ್ಟಿದೆ. ಅಭಿವ್ಯಕ್ತಿಯ ಅನನ್ಯ ಅವಕಾಶವನ್ನಿತ್ತ ಪ್ರಗತಿಪರವಾದ ಆಶಯಗಳ ಉದಾರ ದೃಷ್ಟಿಕೋನದಿಂದ ಗಮನ ಸೆಳೆಯುವ ಭಕ್ತಿ ಪಂಥ ಚಳುವಳಿಗಳು ಸ್ತ್ರೀ, ಸಾಮಾನ್ಯರ ಶೂದ್ರ, ಅಸ್ಪೃಶ್ಯರ ಧ್ವನಿಗಳಿಗೆ ಚೈತನ್ಯವನ್ನು ನೀಡಿ ಭಾಷಿಕ ಸ್ವರೂಪದಲ್ಲಿಯೂ ಕ್ರಾಂತಿಕಾರಕ ಹೆಜ್ಜೆಗಳನ್ನಿಟ್ಟವು. ಸ್ಥಾಪಿತ ಸನಾತನ ಧಾರ್ಮಿಕ ವ್ಯವಸ್ಥೆಯಲ್ಲಿನ ಅಸಮಾನತೆ, ಅಮಾನವೀಯತೆ, ಅಸ್ಪೃಶ್ಯತೆ, ಅಜ್ಞಾನಗಳಿಗೆ ಬದಲಾಗಿ ಲಿಂಗಭೇದರಹಿತ ಸಮಾನತೆ, ಜ್ಞಾನ ಕ್ರಿಯೆಗಳ ಸಮನ್ವಯತೆ, ವರ್ಗ ವರ್ಣ ಜಾತಿಗಳನ್ನು ಮೀರಿದ ಸಮಾನ ಅವಕಾಶಗಳು ಮಾನವೀಯ ಸಂಬಂಧಗಳಿಗೆ ಗೌರವ, ಮನ್ನಣೆ ನೀಡುವುದು. ಮಾನವೀಯತೆಯನ್ನು ದೈವತ್ವದೊಂದಿಗೆ ಮುಖಾಮುಖಿಗೊಳಿಸಿ ಸಮರಸದ ಆನಂದವನ್ನು ಹೊಂದುವ, ಮುಕ್ತ ಅಭಿವ್ಯಕ್ತಿಗೆ ಮಾನ್ಯತೆ ನೀಡಿದ ಭಕ್ತಿ ಚಳುವಳಿಗಳು ಜನಪ್ರೀಯವಾದ ಸಾಮಾನ್ಯರ ಬದುಕಿಗೂ ಭರವಸೆ ನೀಡಿದ ವಿಶಿಷ್ಟ ಸ್ವರೂಪದ ಭಕ್ತಿ ಮಾರ್ಗವನ್ನು ತೋರಿದವು.

ಭಕ್ತಿಯ ಮೂಲ ಭಯವನ್ನೇ ಕೇಂದ್ರೀಕರಿಸಿ ಮಾನವ ಮತ್ತು ದೈವತ್ವದ ನಡುವೆ ಕಂದಕ ನಿರ್ಮಿಸಿ ಧರ್ಮ, ಭಕ್ತಿಯನ್ನು ಶೋಷಿತ ಮಾರ್ಗವಾಗಿಸಿಕೊಂಡ ಮೂಲಭೂತವಾದಿಗಳ ತಂತ್ರವನ್ನು ಭೇದಿಸಿದ ಭಕ್ತಿ ಚಳುವಳಿ ದೇವ ತತ್ವದೊಂದಿಗೆ ಭಕ್ತನ ಪ್ರೀತಿಯ, ಸಖ್ಯದ ಭಾವ ಬೆಸುಗೆಯನ್ನು ಗೈದು ವ್ಯವಸ್ಥೆಯಲ್ಲಿನ ತಾರತಮ್ಯ ನಡೆಯನ್ನು ಖಂಡಿಸಿ, ವಿಡಂಬಿಸಿ ನೈಜ ದೈವತ್ವದ ನೆಲೆಯನ್ನು ಭಕ್ತನ ಹೃದಯದಲ್ಲಿ ಪ್ರತಿಷ್ಠಾಪಿಸಿತು. ಶಾಂತಿ, ಪ್ರೀತಿ, ಅಂಹಿಸೆ ಮಾನವೀಯ ಸಂಬಂಧಗಳನ್ನು ದೈವತ್ವದಲ್ಲಿ ಸಮೀಕರಿಸಿದ ಭಕ್ತಿ ಚಳುವಳಿ ಭಕ್ತ ಮತ್ತು ದೇವನ ನಡುವೆ ಅವಿನಾಭಾವ ಸಂಬಂಧವನ್ನು ನೆಲೆಗೊಳಿಸಿದ್ದರಿಂದ ಸ್ತ್ರೀ ಪುರುಷ, ಉತ್ಕೃಷ್ಟ, ನಿಕೃಷ್ಟ ಭಾವಗಳ ತರತಮಗಳನ್ನು ತೊಡೆದುಹಾಕಿ ಭಕ್ತಿಯ ಮುಕ್ತದ್ವಾರವನ್ನು ಅನಾವರಣಗೊಳಿಸಿತು.

ಭಾರತದಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಬೆಳೆದು ಬಂದ ಭಕ್ತಿಪಂಥಗಳು ಉತ್ತರಭಾರತ ಮತ್ತು ದಕ್ಷಿಣ ಭಾರತಗಳಲ್ಲಿ ಶೈವ, ವೈಷ್ಣವ, ಸೂಫೀ ಪಂಥ, ಗುರುನಾನಕ ಪಂಥಗಳು ಕರ್ನಾಟಕದಲ್ಲಿ

ಲಿಂಗಾಯತ ವಚನ ಚಳುವಳಿಗಳಲ್ಲಿ ಮಹಿಳಾ ಪಾಲ್ಗೊಳ್ಳುವಿಕೆ ಮತ್ತು ಅಭಿವ್ಯಕ್ತಿ ಸಾಧ್ಯತೆಗಳು ಸ್ಥಾಪಿತ ಧರ್ಮಗಳ ಮೌಲ್ಯಗಳ ನಿರಾಕರಣೆಗಳಿಂದ ಆಂದೋಲನದ ಸ್ವರೂಪವನ್ನು ಪಡೆದುಕೊಂಡು ಸರ್ವವ್ಯಾಪಕವಾದವು. ಮಾನವಿಕ, ಸಾಮಾಜಿಕ ನೆಲೆಯಲ್ಲಿ ದೈವಿಕ ಸಂಬಂಧವನ್ನು ಕಂಡು ಕೊಳ್ಳುವುದು, ಇಹದ ಬದುಕನ್ನು ಸಹ್ಯವಾಗಿಸಿದ ಸಾಧಕ ಸಾಧಕಿಯರು, ದೈವತ್ವವನ್ನು ಆದರ್ಶ ಪ್ರಿಯಕರ, ಪ್ರೇಮಸಖ, ಪತಿ, ಗುರು, ಒಡೆಯ ರಕ್ಷಕ ಸಂಬಂಧದ ವೈವಿಧ್ಯಮಯವಾದ ಸ್ತರಗಳಲ್ಲಿ, ಭಾವಗಳಲ್ಲಿ ಅನಾವರಣಗೊಳಿಸಿಕೊಂಡು ಆಪ್ತತೆಯನ್ನು ಅನುಭವಿಸಿದರು, "ಅನುಭಾವ ಪ್ರಪಂಚದಲ್ಲಿ ಆಶಿಸುವ ದೈವವು ಇವರು ಸೃಷ್ಟಿಸಿದ ಆದರ್ಶೀಕೃತ ಆಶಯವೇ ಆಗಿರುವುದರಿಂದ ಆತ ಪುರುಷವಾಚಿಯಾಗಿಯೇ ವರ್ಣನೆಗೊಳ್ಳುವ ದೈವವು ಸ್ಥಾಪಿತ ಧರ್ಮಗಳಲ್ಲಿಯಂತೆ ದೇವಾಲಯಾದಿ ಭೌತಿಕ ಚಹರೆಗಳಲ್ಲಿ ಸ್ಥಾಪಿತಗೊಳ್ಳುವುದಕ್ಕಿಂತ ಅವರ ಮನೋವಲಯದಲ್ಲಿಯೇ ಸ್ಥಾಪಿತನಾಗುತ್ತಾನೆ. ಒಮ್ಮೊಮ್ಮೆ ನಿರ್ದಿಷ್ಟ ಆಕಾರಗಳಲ್ಲಿ ಅಮೂರ್ತವಾಗಿ ರೂಪಿತವಾದರೂ ಭಕ್ತನನ್ನು ರಕ್ಷಿಸಿ, ಭಾವ ಸಂಪ್ರೀತಗೊಳಿಸುತ್ತಾನೆ. ಪ್ರೀತಿಸುತ್ತಾನೆ. ಮನಸ್ಸಿಗೆ ಆಹ್ಲಾದವನ್ನುಂಟು ಮಾಡುತ್ತಾನೆ. ಈ ಜಗತ್ತಿನ ಸೃಷ್ಟಿಕರ್ತನೂ, ವಿನಾಶಕನೂ ಆಗಿರುವ ಆತ ಅಂತಿಮವಾಗಿ ಮಾನವಾಂತಃಕರಣವನ್ನು ಹೊಂದಿರುವು ದರಿಂದ ಭಕ್ತರನ್ನು ಅಂತಿಮವಾಗಿ ತನ್ನಲ್ಲೇ ಅನುಭಾವಿಕ ನೆಲೆಯಲ್ಲಿ ಒಂದಾಗಿಸಿಕೊಳ್ಳುತ್ತಾನೆ."[೪]

ಅನುಭಾವಿಕ ಅನುಭೂತಿಯನ್ನು ಪಡೆಯುವಲ್ಲಿ ಅದನ್ನು ಅಭಿವ್ಯಕ್ತಗೊಳಿಸುವಲ್ಲಿ ಮುಕ್ತ ಅವಕಾಶ ಪಡೆದ ಸ್ತ್ರೀಸಮುದಾಯ ಚೈತನ್ಯಶೀಲವಾಗಿಯೇ ರೂಪುಗೊಂಡು ತಮ್ಮ ಅಸ್ತಿತ್ವವನ್ನು ಸಕಾರಾತ್ಮಕ ವಾಗಿಯೇ ನೆಲೆಗೊಳಿಸಿತು. ಹೆಣ್ಣೆಂಬ ಹೀನ ಭಾವವಳಿದು ಹೆಮ್ಮೆ ಪಡುವಂತಹ ಸಾಧನೆ ಗೈದು ಸ್ತ್ರೀತನದ ಅನನ್ಯತೆಯನ್ನು ಸಾಕ್ಷೀಕರಿಸಿತು. ಆಳ್ವಾರ ಭಕ್ತಿ ಪಂಥದ ಅಂಡಾಳ್ ನಾಯನ್ಮಾರ ಪಂಥದ ಕಾರಿಕಾಲಮ್ಮೆ, ವಚನ ಚಳುವಳಿಯಲ್ಲಿನ ಅಕ್ಕಮಹಾದೇವಿ, ವೈಷ್ಣವ ಪಂಥದ ಮೀರಾಬಾಯಿ ಮೊದಲಾದವರ ಅಭಿವ್ಯಕ್ತಿ, ಭಗವತ್ ಪ್ರೇಮವನ್ನು ಭಾಷೆಯಲ್ಲಿ ಎರಕಹೊಯ್ದು ಸಾಧನೆಗೆ ಸ್ತ್ರೀತ್ವ ತೊಡಕಾಗದು ಎಂಬ ಸತ್ಯವನ್ನು ಸಾಕ್ಷೀಕರಿಸಿದರು. ನಂತರದ ಕಾಲಘಟ್ಟಗಳಲ್ಲಿ ಮಹಿಳೆ ಮತ್ತೆ ಮಸುಕಾಗುತ್ತ ಸಂಪ್ರದಾಯದ ಸಂಕೋಲೆಗಳಿಗೆ ಬಂಧಿಯಾಗುತ್ತ ಪುರುಷಕೇಂದ್ರಿತ ಪಿತೃಪ್ರಧಾನ ವ್ಯವಸ್ಥೆಗೆ ಸಿಲುಕಿ ಅಧೀನತೆಯಿಂದ ಅವಗಣನೆಗೆ ಒಳಗಾಗಿ ಆಧುನಿಕ ಕಾಲದ ಸಮಕಾಲೀನ ಸಂದರ್ಭಗಳಲ್ಲಿಯೂ ಹಲವು ಸಂಕಷ್ಟಗಳಿಂದ ಬಿಡಿಸಿಕೊಳ್ಳಲಾಗದ, ಅನುಭವಿಸಲಾಗದ ಸಂದಿಗ್ಧತೆಗೆ, ಸಂಕೀರ್ಣತೆಗಳ ಸುಳಿವಿನಲ್ಲಿ ಸೇರಿಹೋಗಿ ತಮ್ಮ ಅಸ್ತಿತ್ವವನ್ನು ಪ್ರತಿಪಾದಿಸಲು ಹೆಣಗಬೇಕಾಗಿರುವುದು ವಾಸ್ತವ ಸತ್ಯವಾಗಿ ನಮ್ಮ ಮುಂದೆ ಸವಾಲಿನ ರೂಪದಲ್ಲಿ ನಿಂತುಕೊಂಡಿದೆ.

ಆಧುನಿಕ ಮಹಿಳಾ ಸಂದರ್ಭದಲ್ಲಿ 'ಮಹಿಳೆ' ಕುರಿತಾದ ಚಿಂತನೆಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿರುವುದರಿಂದ ಆಧುನಿಕ ಸ್ತ್ರೀವಾದ ಶಿಸ್ತಿನ ಅಧ್ಯಯನ ಸ್ವರೂಪವಾಗಿ ಗುರುತಿಸಿಕೊಂಡಿದೆ.

ಹದಿನೇಳನೆ ಶತಮಾನದಿಂದಲೇ ಆರಂಭಗೊಂಡ 'ಸ್ತ್ರೀ'ವಾದದ ಪರಿಕಲ್ಪನೆ ಹಲವು ರೀತಿಯಲ್ಲಿ ವ್ಯಾಖ್ಯಾನಗೊಳ್ಳುತ್ತ, ಸ್ತ್ರೀವಾದಿ ಚಳುವಳಿ, ಮಹಿಳಾ ಹೋರಾಟಗಳು ಸ್ತ್ರೀ ವಿಮೋಚನಾ ಆಂದೋಲನ ವಾಗಿಯೂ ಬೆಳವಣಿಗೆ ಹೊಂದುತ್ತ ಮುನ್ನಡೆಯುತ್ತಿದೆ. ಆಧುನಿಕ ಸ್ತ್ರೀವಾದದ ಚಿಂತನೆ ಪಾಶ್ಚಾತ್ಯ ದೇಶಗಳಲ್ಲಿ ಆರಂಭಗೊಂಡು ಹಲವು ಸ್ಥಿತ್ಯಂತರಗಳಿಂದ ಭಾರತದಲ್ಲಿಯೂ ಅದು ಇಲ್ಲಿನ ಹಿನ್ನೆಲೆಯಲ್ಲಿ ತನ್ನ ನೆಲೆಯನ್ನು ಕಂಡುಕೊಂಡಿದೆ. ಸಮತಾವಾದ, ಮಾನವತಾ ವಾದದ ಪ್ರೇರಣೆಯಿಂದ ಹುಟ್ಟಿಕೊಂಡಿರುವ ಸ್ತ್ರೀವಾದವು ಮಹಿಳಾ ಶಕ್ತಿಯನ್ನು ಗುರುತಿಸಿ, ಮುನ್ನಡೆಯನ್ನು ನಿರ್ದೇಶಿಸುವ ನಿಟ್ಟಿನಲ್ಲಿ ಆಲೋಚಿಸುತ್ತದೆ.

ಮಾನವ ಜಗತ್ತಿನಲ್ಲಿ ಸ್ತ್ರೀ ಪುರುಷರ ನಡುವಿನ ತಾರತಮ್ಯ ಧೋರಣೆಗಳಿಂದ ಪುರುಷ ಶ್ರೇಷ್ಠ, ಸ್ತ್ರೀ ಕನಿಷ್ಠ, ಪ್ರಧಾನ ಅಧೀನತೆಗಳ ನಿರ್ಮಿತಿಯಿಂದ ಸ್ತ್ರೀ, ಪುರುಷನ ಅಧೀನಳಾಗಿ ಕ್ರೌರ್ಯ, ಹಿಂಸೆ, ಶೋಷಣೆ, ಅನ್ಯಾಯ ಅವಗಣನೆ ಅವಹೇಳನಕ್ಕೆ ಗುರಿಯಾಗಿ ತನ್ನ ಬೌದ್ಧಿಕತೆ, ಕ್ರೀಯಾಶೀಲತೆ, ವಿಚಾರಶೀಲತೆ, ಪ್ರಯೋಗಾತ್ಮಕ ಪ್ರಕ್ರಿಯೆಗಳಿಗೆ ಅವಕಾಶವಿಲ್ಲದಂತಾಯಿತು. ಸ್ತ್ರೀ ವ್ಯಕ್ತಿತ್ವ ಪುರುಷನಿರ್ಮಿತ ನಕಾರಾತ್ಮಕ ನೆಲೆಯಲ್ಲಿ ನಿರೂಪಿಸಲ್ಪಟ್ಟಿತು. ಈ ಎಲ್ಲ ನಕಾರಾತ್ಮಕ ಚಿಂತನೆಗಳಿಂದ ದಮನತ್ವದಿಂದ, ದಯನೀಯತೆಯಿಂದ ಮಹಿಳೆಯನ್ನು ವಿಮೋಚನೆಗೊಳಿಸಿ ಸ್ವತಂತ್ರ ಆಲೋಚನೆ, ಸಮಾನತೆ, ಸ್ವಾತಂತ್ರ್ಯ, ಭೌತಿಕ ಮತ್ತು ಬೌದ್ಧಿಕ ಪ್ರಪಂಚದಲ್ಲಿ ತನ್ನತನವನ್ನು ಅಭಿವ್ಯಕ್ತಿಸಿಕೊಳ್ಳುವ ಅವಕಾಶವನ್ನು ನೀಡಲು, ಪಡೆದುಕೊಳ್ಳಲು ಸ್ತ್ರೀವಾದ ಆಶಿಸುತ್ತದೆ. "ಸಮಾಜದಲ್ಲಿ ಪ್ರಚಲಿತವಿರುವ ಲೈಂಗಿಕ ತಾರತಮ್ಯದ ವಿರುದ್ಧ ಈ ಲೈಂಗಿಕ ತಾರತಮ್ಯದಿಂದಲೇ ಹೆಣ್ಣೊಬ್ಬಳು ಅನುಭವಿಸುವ ಶೋಷಣೆ, ಅಪಮಾನ, ಹಿಂಸೆಗಳನ್ನು ಸ್ತ್ರೀವಾದಿಗಳು ಕಟುವಾಗಿ ವಿರೋಧಿಸುತ್ತಾರೆ. ಪುರುಷನ ಬುದ್ಧಿವಂತಿಕೆ, ಕ್ರಿಯಾಶೀಲತೆ, ಸಾಮರ್ಥ್ಯ, ಸಾಧ್ಯತೆಗಳು ಮಾತ್ರ ಪರಿಗಣಿತವಾಗಿ ಹೆಣ್ಣಿನ ಎಲ್ಲಾ ಶಕ್ತಿಗಳು ನಗಣ್ಯವಾಗುವುದು ಇವರಿಗೆ ಸಿಟ್ಟನ್ನು ತರಿಸುತ್ತದೆ. ಯಾವ ಸಮಾಜದಲ್ಲಿ ಹೆಣ್ಣಿಗೆ ತನ್ನ ಶಕ್ತಿ, ಸಾಮರ್ಥ್ಯ, ಬೌದ್ಧಿಕ ಕ್ರೀಯಾಶೀಲತೆ, ಸೃಜನಶೀಲತೆಗಳನ್ನು ದಾಖಲಿಸಲು ಸಾಧ್ಯವಾಗುವುದಿಲ್ಲವೊ, ಎಲ್ಲಿ ಹೆಣ್ಣನ್ನು ಗೌರವಿಸಿ, ಗುರುತಿಸಲಾರದೋ ಆ ನೆಲದಲ್ಲಿ ಸ್ತ್ರೀವಾದಿ ಚಿಂತನೆಗಳು ಕುಡಿಯಿಟ್ಟು ಚಿಗುರು ಒಡೆಯಲು ಸಾದ್ಯವಾಗುತ್ತದೆ. ಸ್ತ್ರೀವಾದದ ಹೋರಾಟವಿರುವುದು ಈವರೆಗೆ ಹೆಣ್ಣಿಗೆ ದಕ್ಕದಿರುವ ಅವಕಾಶಗಳನ್ನು ದಕ್ಕಿಸಿಕೊಳ್ಳುವ ಪ್ರಯತ್ನದಲ್ಲಿ."[೫]

ಸ್ಥಾಪಿತ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಹೆಣ್ಣಿನ ಬಗೆಗಿನ ನಿರಾಕರಣೆಯನ್ನು ಧನಾತ್ಮಕ ನೆಲೆಯಲ್ಲಿ ಸಕ್ರಮಗೊಳಿಸುವುದು ಮತ್ತು ವರ್ತಮಾನದಲ್ಲಿ ಸಮಾನ ಅವಕಾಶಗಳನ್ನು ಹೊಂದುತ್ತ ಭವಿತವ್ಯದ ರೂಪುರೇಷೆಗಳನ್ನು ಸ್ತ್ರೀ ಸ್ವಯಂ ನಿರ್ಮಿಸಿಕೊಂಡು ಸ್ವಾವಲಂಬಿ, ಸ್ವಯಂಪೂರ್ಣ ಜೀವನವನ್ನು ಕಟ್ಟಿಕೊಳ್ಳಲು ಸಮರ್ಥರಾಗುವುದು. ಈ ಎಲ್ಲ ಸಾಮರ್ಥ್ಯಗಳ

ಬೆಳವಣಿಗೆಗೆ ಪೂರಕ ಪರಿಸರವನ್ನು ಎಲ್ಲ ದೃಷ್ಟಿಯಿಂದಲೂ ನಿರ್ಮಿಸಬೇಕೆಂಬ ಒತ್ತಾಶೆ ಸ್ತ್ರೀವಾದದ ಚಿಂತನೆಗಳಲ್ಲಿದೆ. "ಪ್ರಸ್ತುತ ಸ್ತ್ರೀವಾದ ಮಹಿಳೆಯರನ್ನು ಒಂದು ಪ್ರಜ್ಞಾವಂತಿಕೆಯ ಪ್ರಕ್ರಿಯೆಯಾಗಿ ಹೊಸದಾಗಿ ಚಿತ್ರಿಸಬೇಕೆಂದು ಒತ್ತಾಯಿಸುತ್ತದೆ. ಹೆಣ್ತನವನ್ನು ಕುರಿತ ಪಾರಂಪರಿಕ ಚಿತ್ರಣ, ನಂಬಿಕೆಗಳನ್ನು ತಿರಸ್ಕರಿಸಿ ಹೊಸ ಬದುಕಿನ ಸಂದರ್ಭದಲ್ಲಿ ಅವಳನ್ನು ಕುರಿತ ಹೊಸ ವ್ಯಾಖ್ಯಾನ ದೃಷ್ಟಿಕೋನಗಳು ಅಗತ್ಯವೆಂಬುದು ಆಧುನಿಕ ಸ್ತ್ರೀವಾದಿಗಳ ಅಭಿಮತ."[೬]

ಆಧುನಿಕ ಸ್ರೀವಾದಿ, ಚಿಂತನೆಯನ್ನು ಪಾಶ್ಚಾತ್ಯ ಸ್ತ್ರೀವಾದಿ ಚಿಂತಕಿ **ಮೇರಿವುಲ್‌ಕ್ರಾಫ್ಟ್ ಮಾನವ ಹಕ್ಕುಗಳು** ಹಿನ್ನೆಲೆಯಲ್ಲಿ ಸ್ತ್ರೀ ಪುರುಷರೆನ್ನದೇ ಈರ್ವರಿಗೂ ಸಮಾನ ಹಕ್ಕುಗಳಿರಬೇಕೆಂಬುದನ್ನು ಪ್ರತಿಪಾದಿಸುತ್ತ ಹೆಣ್ಣಿನ ಸಿದ್ಧ ಪಾತ್ರಗಳ ಕುರಿತು ಪುನರ್‌ವ್ಯಾಖ್ಯಾನ ನೀಡಿ ಹೆಣ್ತನ, ತಾಯ್ತನಗಳು ಸ್ತ್ರೀಗೆ ತೊಡಕಾಗಬಾರದು. ಅವಳ ಸಾಮರ್ಥ್ಯವನ್ನು ಗುರುತಿಸುವ ಅಗತ್ಯ ಮತ್ತು ಅನಿವಾರ್ಯತೆ ಯನ್ನು ಪ್ರತಿಪಾದಿಸಿದರು. **ಶೊಲಾ ಮಿತ್ ಫೈರ್‌ಸ್ಟೋನ** ಮಹಿಳೆಗಂಟಿಸಿರುವ ಸಿದ್ಧ ಮಾದರಿ ಪಾತ್ರಗಳನ್ನು ಖಂಡಿಸಿ ಸ್ತ್ರೀತ್ವ ತನ್ನದೇ ಅಸ್ತಿತ್ವ ಮತ್ತು ಘನತೆವುಳ್ಳದ್ದೆಂದು ಪರಿಭಾವಿಸಿದಳು. ಫ್ರಾನ್ಸ ದೇಶದ ಸ್ತ್ರೀವಾದಿ ಚಿಂತಕಿ **ಸಿಮನ್-ದಿ-ಬೊವಾ** ತನ್ನ **'ಸೆಕೆಂಡ ಸೆಕ್ಸ್'** ಗ್ರಂಥದಲ್ಲಿ ಮಹಿಳೆಯನ್ನು ಪುರುಷ ವ್ಯವಸ್ಥೆ ಎರಡನೆ ದರ್ಜೆಯ ಪ್ರಜೆಯಾಗಿ ನಿರ್ಮಿಸಿ ನಡೆಸಿಕೊಂಡು ಬಂದಿದೆ ಎಂಬುದನ್ನು ಸವಿಸ್ತಾರಗೊಳಿಸಿ ಸ್ತ್ರೀ ಹೊಂದಬೇಕಾದ ನೆಲೆ ಕುರಿತು ಚಿಂತನೆ ಗೈದಿರುವಳು. ಸ್ತ್ರೀ ಸಮಾಜ ಸಂರಚನೆಯುಲ್ಲಿ ಅನ್ಯತೆಯಿಂದ ಪರಿಗಣಿತಳಾಗಿ ವ್ಯವಸ್ಥಿತವಾಗಿ ಅವಕಾಶಗಳಿಂದ ನಿರಾಕರಿಸಲ್ಪಟ್ಟಿರುವುದನ್ನು ಸಿಮನ್-ದಿ-ಬೊವಾ ದೃಢೀಕರಿಸುತ್ತ "ಪುರುಷ ಜಗತ್ತಿನಲ್ಲಿ ಹೆಣ್ಣಿನ ಸ್ಥಾನ 'ಎರಡನೆಯ ದರ್ಜೆಯದು' ಎಂಬ ಸ್ಥಿರ ಮಾದರಿಯನ್ನು ಒಡೆಯುವ ಪ್ರಯತ್ನ ಮಾಡುತ್ತಾಳೆ. ಆಕೆ ಹೆಣ್ಣು ಒಂದು ಜೈವಿಕ ಘಟಕವೇ ಹೊರತು ಚಾರಿತ್ರಿಕ ಘಟಕವಲ್ಲ. ಅವಳಿಗೆ ತನ್ನದೇ ಆದ ಗತವಿಲ್ಲ. ವರ್ತಮಾನವಾಗಲಿ ಭವಿಷ್ಯವಾಗಲಿ ಇಲ್ಲ. ಅವಳಿಗೆ ಸ್ವಂತ ವ್ಯಕ್ತಿತ್ವ ಇಲ್ಲದ ಕಾರಣ ಅವಳಿಗೆ ತನ್ನದೇ ಆದ ಧರ್ಮ, ಸಂಘಟನೆ ಭಾಷೆ ಯಾವುದೂ ಇಲ್ಲ. ಹೀಗಾಗಿ ಅವಳು ಗಂಡಿಗೆ ಅಧೀನಳಾಗಿದ್ದಾಳೆ ಎಂದು ಹೇಳುತ್ತಾಳೆ."[೭]

ಮಹಿಳೆಯರ ಬಗೆಗಿನ ಅಸಮಾನತೆಯ ಮೂಲ ನೆಲೆಗಳನ್ನು ಶೋಧಿಸಿದ ಸ್ತ್ರೀವಾದಿ ಚಿಂತಕರು ಸ್ತ್ರೀ ಸಮುದಾಯ ಆಧುನಿಕ ಸಂದರ್ಭದಲ್ಲಿ ಎದುರಿಸುತ್ತಿರುವ ಪ್ರಸ್ತುತ ಸಂಘರ್ಷ ಮತ್ತು ಸವಾಲುಗಳನ್ನು ವಿಶ್ಲೇಷಿಸಿ ಸೂಕ್ತವಾದ ಪರಿಹಾರಗಳನ್ನು ಹುಡುಕುವ ಪ್ರಯತ್ನಗಳು ಹಲವು ರೀತಿಯಲ್ಲಿ ನಿರಂತರ ಪ್ರಕ್ರಿಯೆಯಾಗಿ ಆರಂಭವಾಗಿರುವುದು ಸ್ತ್ರೀ ಚಿಂತನೆಗೆ ಆಶಾದಾಯಕ ಬೆಳವಣಿಗೆಯಾಗಿದೆ. ಭಾರತೀಯ ಬದಲಾದ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಶಿಕ್ಷಣದ ಕುರಿತಾದ ಬೆಳವಣಿಗೆಗಳು ಒಂದಿಷ್ಟು ಜಾಗೃತಿಯನ್ನು ಮೂಡಿಸಿದ್ದರೂ ಹೆಣ್ಣಿನ ಸಮಸ್ಯೆಗಳ ಸಂಕೀರ್ಣತೆ,

ಶೋಷಣೆಯ ವೈವಿಧ್ಯಮಯ ಮುಖಗಳು ಸ್ತ್ರೀ ಪರವಾದ ಪ್ರಗತಿಯನ್ನು ಛಿದ್ರಗೊಳಿಸುತ್ತಿವೆ. "ಸಮಾಜದಲ್ಲಿ ಮಹಿಳೆ ಅನೇಕ ಹಂತಗಳಲ್ಲಿ ವಿವಿಧ ರೀತಿಯ ಅಸಮಾನತೆಗಳು, ನೋವು, ಹಿಂಸೆಗಳನ್ನು ಅನುಭವಿಸುತ್ತಾಳೆ. ಹೆಣ್ಣಿಗೆ ಶಿಕ್ಷಣ, ಉದ್ಯೋಗ, ಆರ್ಥಿಕ ಸ್ವಾತಂತ್ರ್ಯ ಲಭ್ಯವಾದರೂ ಅವಳ ಸಮಸ್ಯೆಗಳು ಮೇಲ್ನೋಟಕ್ಕೆ ಪರಿಹಾರಗೊಂಡಂತೆ ಕಂಡರೂ, ಆಳದಲ್ಲಿ ಅವು ಮತ್ತಷ್ಟೂ ಸೂಕ್ಷ್ಮಗೊಳ್ಳುತ್ತವೆ. ಹೆಣ್ಣಿನ ಶೋಷಣೆಯ ಸ್ವರೂಪದ ತಳಸ್ಪರ್ಶಿಯಾದ ವಿಮೋಚನೆ ಕಷ್ಟಸಾಧ್ಯವಾದುದೇ ಆಗಿದೆ. ಹೆಣ್ಣು ತಾನು ಹೆಣ್ಣಾದ ಕಾರಣದಿಂದಲೇ ಪುರುಷ ಪ್ರಧಾನ ಮೌಲ್ಯ ವ್ಯವಸ್ಥೆಯಲ್ಲಿ ಅನುಭವಿಸುವ ನೋವುಗಳಿಂದ ಮುಕ್ತಿ ಪಡೆಯಲು ಸಾಧ್ಯವಾಗಿಲ್ಲ. ಅಷ್ಟೇ ಅಲ್ಲ ಸಾಮಾಜಿಕ ಸುಧಾರಣೆ, ಬದಲಾವಣೆಗಳಿಂದಾಗಿ ನಡೆದ ಹೋರಾಟ ಕ್ರಾಂತಿಗಳಲ್ಲೂ ಹೆಣ್ಣಿನ ಅತಿಮುಖ್ಯ ಸಮಸ್ಯೆಗಳಾದ ವಿವಾಹ ಲೈಂಗಿಕತೆ, ತಾಯ್ತನ ಮುಂತಾದ ಖಾಸಗೀ ಸಮಸ್ಯೆಗಳ ಬಗೆಗೆ ಯಾವುದೇ ತೀವ್ರವಾದ ಪ್ರತಿಕ್ರಿಯೆಗಳು ಮೂಡಿಲ್ಲ."[೮]

ಮಹಿಳೆ ದೈಹಿಕ, ಮಾನಸಿಕ, ಭಾವನಾತ್ಮಕ ಸಾಮಾಜಿಕ ತರತಮಗಳಿಂದ ಅನುಭವಿಸುತ್ತಿರುವ ನೋವನ್ನು ತೀವ್ರತರವಾಗಿ ಅಭಿವ್ಯಕ್ತಗೊಳಿಸಲು ಅವಳಿಗೆ ತನ್ನದೇ ಭಾಷಾ ಬಳಕೆಯ ಸಾಧ್ಯತೆಗಳ ಅವಶ್ಯಕತೆಯಿದೆ. ಸ್ತ್ರಿ ಸಮುದಾಯದ ಆಂತರಿಕ ನೋವು ತಲ್ಲಣ, ತವಕಗಳನ್ನು ಪುರುಷ ಕೇಂದ್ರಿತ ವ್ಯವಸ್ಥೆಯ ಭಾಷೆಗೆ ಸಮರ್ಪಕವಾಗಿ ಪ್ರತಿನಿಧಿಸಲು ವ್ಯಕ್ತಗೊಳಿಸಲು ಸಾಧ್ಯವಾಗದು. ಹೆಣ್ಣಿನ ಅಸ್ತಿತ್ವವನ್ನು ಹಿರಿಮೆಯನ್ನು ಪುರಾಣ ಕಾವ್ಯಗಳು, ಚರಿತ್ರೆಗಳ ಹಿನ್ನೆಲೆಯಲ್ಲಿ ವೈಭವೀಕರಿಸುವ ಪುರುಷ ಪ್ರಯತ್ನಗಳನ್ನು ಅಲ್ಲಗಳೆಯುವ ಸ್ತ್ರೀವಾದಿಗಳು, ಅದೇ ಹಿನ್ನೆಲೆಯಲ್ಲಿ ಸ್ತ್ರೀಯರ ಸಾಂಸ್ಕೃತಿಕ ಸಾಮಾಜಿಕ ಬದುಕಿನ ಆಯಾಮಗಳನ್ನು ಸ್ತ್ರೀ ಪರಿಭಾಷೆಯಲ್ಲಿ ಅಭಿವ್ಯಕ್ತಗೊಂಡಿರುವ ಸಾಹಿತ್ಯ, ಚರಿತ್ರೆ, ಕಾವ್ಯ, ಕಾದಂಬರಿಗಳಲ್ಲಿ ಹುಡುಕುವ ಯತ್ನವನ್ನು ಮಾಡುತ್ತಿವೆ. ಪುರುಷ ದೃಷ್ಟಿಕೋನವನ್ನು ಬದಿಗಿರಿಸಿ ಸ್ತ್ರೀಯೋರ್ವಳ ಅಭಿವ್ಯಕ್ತಿಯನ್ನು ಚಾರಿತ್ರಿಕ ಪುರಾಣ, ಕಾವ್ಯ, ಸಾಹಿತ್ಯಗಳಲ್ಲಿ ಶೋಧಿಸಿ ಸ್ತ್ರೀವಾದಿ ನೆಲೆಯಲ್ಲಿ ಅರ್ಥೈಸುವ ಪ್ರಕ್ರಿಯೆಗಳು ಆಧುನಿಕ ಮಹಿಳಾ ಸಂದರ್ಭದಲ್ಲಿ ಮುಂದಡಿಯಿಡುತ್ತಿವೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆಯ ಚಾರಿತ್ರಿಕ ಆಯಾಮಗಳಲ್ಲಿ ಸ್ತ್ರೀತ್ವದ ಮಾದರಿಗಳನ್ನು ಅವರ ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ ಅರಿತು ಅರ್ಥೈಸಿ ಅನುಸರಿಸುವ ಬಹುಮುಖಿ ಯಾದ ಪ್ರಯತ್ನಗಳು ಒಂದಿಲ್ಲೊಂದು ರೀತಿಯಲ್ಲಿ ಜರುಗುತ್ತಿವೆ.

ಸ್ತ್ರೀವಾದದ ಆಯಾಮಗಳ ಹರವು ವಿಸ್ತೃತಗೊಳ್ಳುತ್ತಿರುವ ಇಂದಿನ ಆಧುನಿಕ ಸಮಕಾಲೀನ ಸಂದರ್ಭದಲ್ಲಿ ಕರ್ನಾಟಕದಲ್ಲಿ ಹನ್ನೆರಡನೇ ಶತಮಾನದಲ್ಲಿ ಜರುಗಿದ ವಚನ ಚಳುವಳಿಯ ಹಿನ್ನೆಲೆ ಅದರೊಳಗಿನ ಇತಿಮಿತಿಗಳು, ಆಂತರಿಕ ವೈರುಧ್ಯಗಳು, ವಚನಸಾಹಿತ್ಯ ಮತ್ತು ವಚನಕಾರರ ಕುರಿತಾದ ಚರ್ಚೆ, ವಿಮರ್ಶೆಗಳು, ಚಿಂತನೆಗಳು, ಆಧುನಿಕ ಸಂದರ್ಭಕ್ಕೆ ಹೋಲಿಸುವ, ತುಲನಾತ್ಮಕ

ಸಂಶೋಧನೆಗಳು ವಚನ ಸಾಹಿತ್ಯದ ಬಹುಮುಖ ಆಯಾಮಗಳ ಬಗೆಗಿನ ನಿರಂತರ ವಿಮರ್ಶೆ ವಿವರಣೆ, ವಿಸ್ತರಣೆ ಪ್ರಕ್ರಿಯೆಗಳು ಸಮಕಾಲೀನ ಸಂದರ್ಭಗಳಲ್ಲಿ ಹೊಸ ಚಿಂತನೆ ಸಾಧ್ಯತೆಗಳನ್ನು ಹುಟ್ಟುಹಾಕುತ್ತಿವೆ.

ಇತ್ತೀಚೆಗೆ ಪ್ರಜಾವಾಣಿ ದಿನ ಪತ್ರಿಕೆಯು ವಚನ ಚಳುವಳಿ, ಸಾಹಿತ್ಯಾಭಿವ್ಯಕ್ತಿ, ಅದರೊಳಗಿನ ಚಿಂತನಾತ್ಮಕ ಗ್ರಹಿಕೆಗಳ ಬಗ್ಗೆ ಚರ್ಚೆಯೊಂದನ್ನು ಪ್ರಾರಂಭಿಸಿ ನಾಡಿನ ವಿದ್ವಾಂಸರು, ವಿಮರ್ಶಕರು, ಸಮಾಜ ಸುಧಾರಣಾ ಚಳುವಳಿಗಳ ಹೋರಾಟಗಾರರು, ಧಾರ್ಮಿಕ ಹಿನ್ನೆಲೆಯಲ್ಲಿ ಕಾರ್ಯಪ್ರವೃತ್ತ ವಾಗಿರುವ ಮಠಾಧೀಶರು, ಚಿಂತಕರನ್ನು ಆ ವೇದಿಕೆಯಲ್ಲಿ ಮುಖಾಮುಖಿಗೊಳಿಸಿತು. ವಚನ ಸಾಹಿತ್ಯ ಕೇವಲ ಧಾರ್ಮಿಕ ವಿಚಾರ ಪ್ರನಾಳಿಕೆಯನ್ನಷ್ಟೇ ಹೊಂದಿದ ಮತೀಯ ಹಿನ್ನೆಲೆಯಲ್ಲಿ ರಚಿತವಾದ ಸಾಹಿತ್ಯವೇ ಹೊರತು, ಅದರಲ್ಲಿ ಸಾಮಾಜಿಕ ಚಿಂತನೆಗಳ ಹರವುಗಳು, ಆಯಾಮಗಳು ವಿರಳವೆನ್ನುವ ಪ್ರಶ್ನೆಯನ್ನೆತ್ತಿಕೊಂಡು ಚರ್ಚಾವೇದಿಕೆಯಲ್ಲಿ ಚಿಂತನೆಗಳನ್ನು ಅಭಿವ್ಯಕ್ತಗೊಳಿಸುವ ವೇದಿಕೆಯನ್ನು ನಿರ್ಮಿಸಿತು. ವಿವಿಧ ದೃಷ್ಟಿಕೋನಗಳಿಂದ ಚರ್ಚಿತವಾದ ವಚನ ಚಳುವಳಿ ಸಮಾಜೋಧಾರ್ಮಿಕ ಹಿನ್ನೆಲೆಯ ಸಮಾಜೋಭಾಷಿಕ ಅಂದೋಲನವೆಂಬ ಬಹುಸಂಖ್ಯಾತರ ಅಭಿಪ್ರಾಯಗಳು ವ್ಯಕ್ತವಾಗಿವೆ. ವಚನ ಸಾಹಿತ್ಯ ಮತ್ತು ಆಧುನಿಕ ಕಾಲಘಟ್ಟದಲ್ಲಿ ಅದರ ಪ್ರಸ್ತುತತೆ ಕುರಿತು ಚಿಂತನೆಗಳು, ನಿರಂತರವಾಗಿ ನಡೆಯುತ್ತಿವೆ. ವಚನ ಚಳುವಳಿ ಧಾರ್ಮಿಕ ನೆಲೆಯಲ್ಲಿ ಸಮಾಜ ಪರಿವರ್ತನೆಯ ಆಯಾಮಗಳನ್ನು ಹೊಂದಿದ ಸಮಾಜೋಭಾಷಿಕ ದೃಷ್ಟಿಯಿಂದಲೂ ಮಹತ್ವಪೂರ್ಣವಾದ ಬದಲಾವಣೆಯನ್ನು ತರಲೆತ್ನಿಸಿದ ಕಾಲಘಟ್ಟವದು.

ಸ್ಥಾಪಿತ ಸಮಾಜದ ಸಾಂಪ್ರದಾಯಿಕ ಮೌಲ್ಯಗಳನ್ನು ವಿಮರ್ಶೆಗೊಳಪಡಿಸಿ ಹೊಸ ಚಿಂತನಾಕ್ರಮವನ್ನು ಹುಟ್ಟುಹಾಕಿದ ವಚನಕಾರರು, ಸ್ತ್ರೀವಿಮೋಚನೆಯ, ಸ್ತ್ರೀಸ್ವಾತಂತ್ರ್ಯವನ್ನು ಪ್ರತಿಪಾದಿಸಿ ಅಂದಿನ ಪರಿಸರದ ಪರಿಮಿತಿಯೊಳಗೂ ಲಿಂಗಭೇದವನ್ನು ತೊಡೆದು, ಸ್ತ್ರೀ ಸಮಾನತೆ, ಸ್ವಾತಂತ್ರ್ಯ, ಮುಕ್ತ ಅಭಿವ್ಯಕ್ತಿಗೆ ಅವಕಾಶ ನೀಡಿದ್ದರಿಂದಲೇ ಆ ಕಾಲದಲ್ಲಿ ಸಮಾಜದ ವಿವಿಧ ಸ್ತರದ ಸ್ತ್ರೀ ಸಮುದಾಯ ಸಾಮಾಜಿಕ ಪರಿವರ್ತನೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಎರಡೂ ನೆಲೆಗಳಿಂದಲೂ ಗಮನ ಸೆಳೆಯುತ್ತದೆ. ಸ್ತ್ರೀವಾದಿ ಚಿಂತನೆಯನ್ನು ಹನ್ನೆರಡನೆಯ ಶತಮಾನದ ವಚನ ಸಾಹಿತ್ಯದಲ್ಲಿ ಶೋಧಿಸುವ ಪ್ರಯತ್ನಗಳು ಜರುಗುತ್ತಲಿವೆ. ದೊರೆತ ಅವಕಾಶದಲ್ಲಿ ಸಮರ್ಥವಾಗಿ ತಮ್ಮನ್ನು ಗುರುತಿಸಿಕೊಂಡ ಶಿವಶರಣೆಯರಲ್ಲಿ ಎರಡು ಮಾದರಿಗಳನ್ನು ಕಾಣಲಾಗುತ್ತಿದೆ. ದಾಂಪತ್ಯ ಜೀವನವನ್ನೊಪ್ಪಿಕೊಂಡು ಮುಕ್ತವಾಗಿ ಭಾವನೆಗಳನ್ನು ವ್ಯಕ್ತಗೊಳಿಸಿದ ಸ್ತ್ರೀ ಮಾದರಿ. ಲೋಕದ ಗಂಡನನ್ನು ತಿರಸ್ಕರಿಸಿ ಅಲೌಕಿಕ ಪತಿಯನ್ನು ಹೊಂದಿದ ವಿರಾಗಿಣಿ ಸ್ತ್ರೀಯ ಭಿನ್ನ ಮಾದರಿ ಅಕ್ಕಮಹಾದೇವಿ.

ಇತರ ಶಿವಶರಣೆಯರ ಜೀವನ ಮತ್ತು ಅಭಿವ್ಯಕ್ತಿಗಳ ಕ್ರಮಕ್ಕಿಂತ ಅಕ್ಕಮಹಾದೇವಿಯ ಜೀವನ ನಿಲುವುಗಳು ಭಿನ್ನವಾಗಿವೆ. ಅಕ್ಕಮಹಾದೇವಿ ತೀವ್ರವಾದಿ ಸ್ತ್ರೀ ಚಿಂತಕಿಯಾಗಿಯೇ ಗುರುತಿಸಲ್ಪಡುತ್ತಾಳೆ. "ಅಕ್ಕಮಹಾದೇವಿ ಕನ್ನಡ ಸಾಂಸ್ಕೃತಿಕ ಲೋಕದ ಅಪರೂಪದ ಮಹಿಳೆ. ಅವಳ ವ್ಯಕ್ತಿತ್ವ ಹಾಗೂ ಕ್ರಾಂತಿಕಾರಿ ನಡೆಗಳಿಂದಾಗಿ ಹೆಸರಾದ ಅಕ್ಕ ಅನೇಕ ಕಾರಣಗಳಿಗಾಗಿ ಭಾಷಿಕ ಅಭಿವ್ಯಕ್ತಿಗೆ ಸಿಲುಕದೆ ಸವಾಲಾಗಿ ಉಳಿಯುವಂತಾಗಿದ್ದಾಳೆ. ಮಹಿಳಾ ಅಸ್ತಿತ್ವ ಹಾಗೂ ಹುಡುಕಾಟದ ವಿಶ್ವಾತ್ಮಕ ಪರಂಪರೆಯಲ್ಲಿ ಅವಳ ನಡೆ ಬೆರಗು ಹುಟ್ಟಿಸುವಷ್ಟು ಅನನ್ಯವಾದುದು ಆಗಿದೆ. ಸ್ತ್ರೀವಾದಿಗಳ ಪರಂಪರೆಯನ್ನು ಹುಡುಕಲು ಹೊರಟಾಗ ಪಾಶ್ಚಾತ್ಯ ಸ್ತ್ರೀವಾದಿಗಳ ಪ್ರವೇಶಕ್ಕಿಂತ ಮೊದಲೇ ಬರುವ ಅಕ್ಕ ಸಮಾಜ ವ್ಯವಸ್ಥೆಯಲ್ಲಿನ ಸ್ತ್ರೀ ಪುರುಷ ಸಂಬಂಧಗಳನ್ನು ತನ್ನದೇ ಆದ ಭಕ್ತಿ ಸ್ವರೂಪದ ಸಂಕಥನದ ಮೂಲಕ ಮಂಡಿಸಿದ ಮೊದಲ ಸ್ತ್ರೀವಾದಿ ಎನಿಸಿಕೊಳ್ಳುತ್ತಾಳೆ. ತನ್ನ ಸಂದರ್ಭದ ಲೋಕಜ್ಞಾನದಲ್ಲಿ ಇರುವ ಸಾಮಾಜಿಕ ಸಂಬಂಧಗಳ ಸ್ತ್ರೀ ಪುರುಷ ವೈರುಧ್ಯಗಳಿಗೆ, ಅಸಮಾನತೆಯ ನೆಲೆಗಳಿಗೆ ವಿರೋಧವನ್ನು ವ್ಯಕ್ತಪಡಿಸಿ ಸ್ತ್ರೀವಾದಿ ಭಕ್ತಿ ಸಂಕಥನವನ್ನು ಮಂಡಿಸಿದ್ದಾಳೆ."[೯]

ಅಕ್ಕಮಹಾದೇವಿಯ ವಚನಗಳಲ್ಲಿ ಅಭಿವ್ಯಕ್ತಗೊಂಡಿರುವ ಸ್ತ್ರೀವಾದಿ ಚಿಂತನೆಗಳು ಆಧುನಿಕೋತ್ತರ ಸ್ತ್ರೀವಾದಿ ಚಿಂತನೆಗೆ ಬಹುಮುಖ ನೆಲೆಯನ್ನು ಒದಗಿಸುತ್ತವೆ. ದೇಹ ಮತ್ತು ಮನಸ್ಸುಗಳ ಅಸ್ಮಿತತೆ ಕುರಿತಾದ ನಿರ್ವಚನ ಅಕ್ಕಮಹಾದೇವಿಯ ವಚನಗಳಲ್ಲಿ ಪುರುಷ ಕೇಂದ್ರಿತ ಕಾಮದೃಷ್ಟಿಯನ್ನು ಸ್ತ್ರೀ ದೇಹದ ಸಂಬಂಧದ ನೆಲೆಯಲ್ಲಿ ವಿಡಂಬಿಸುತ್ತಾಳೆ. ಲೈಂಗಿಕತೆ ದೃಷ್ಟಿಯಿಂದ ಮಹಿಳೆಯ ದೇಹವನ್ನು ಬಳಸಿಕೊಳ್ಳುವ ಭೋಗದ ವಿಚಾರಕ್ಕೆ ಅಕ್ಕಮಹಾದೇವಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾಳೆ. ಅವಳ ಪ್ರತಿರೋಧಾತ್ಮಕ ಧ್ವನಿ ಸ್ತ್ರೀ ಸಮುದಾಯವನ್ನು ಐಹಿಕ ಭೋಗಕ್ಕೆ ಬಳಸಿಕೊಳ್ಳುವ ಪುರುಷ ಪ್ರಾಬಲ್ಯಕ್ಕೆ ಪ್ರತಿಯಾಗಿ ತೋರಿದ ಪ್ರತಿರೋಧವೂ ಆಗಿದೆ.

"ಬಟ್ಟಹ ಮೊಲೆಯ ಭರದ ಜವ್ವನದ ಚಲುವ ಕಂಡು ಬಂದಿರಣ್ಣಾ.
ಅಣ್ಣಾ ನಾನು ಹೆಂಗೂಸಲ್ಲ; ಅಣ್ಣಾ, ನಾನು ಸೂಳೆಯಲ್ಲ.
ಅಣ್ಣಾ, ಮತ್ತೆ ನನ್ನ ಕಂಡು ಕಂಡು ಆರೆಂದು ಬಂದಿರಣ್ಣಾ?
ಚೆನ್ನಮಲ್ಲಿಕಾರ್ಜುನನಲ್ಲದ ಮಿಕ್ಕಿನ ಪರಪುರುಷನು
ನಮಗಾಗದ ಮೋರೆ ನೋಡಣ್ಣಾ!"[೧೦]

ಪುರುಷ ವ್ಯವಸ್ಥೆ ದೈಹಿಕ ನೆಲೆಯಿಂದ ಸ್ತ್ರೀಯನ್ನು ಗುರುತಿಸುವ ಮತ್ತು ಬಳಸಿಕೊಳ್ಳುವ ಸ್ವಾರ್ಥದೃಷ್ಟಿಯನ್ನು ಅಕ್ಕ ವಿರೋಧಿಸುತ್ತಾಳೆ. 'ತನ್ನ ದೇಹ ತನ್ನ ಆಸ್ತಿ' ಎನ್ನುವ ಆಧುನಿಕ ತೀವ್ರವಾದಿ ಸ್ತ್ರೀ ಚಿಂತನೆಯನ್ನು ಅಕ್ಕಮಹಾದೇವಿ ತನ್ನ ಸ್ತ್ರೀ ದೇಹದ ಅಸ್ತಿತ್ವದಿಂದಲೇ ಪುರಸ್ಕರಿಸಿ

ವಿರೋಧಿ ನೆಲೆಗಳನ್ನು ಪ್ರತಿಭಟಿಸಿದ್ದಾಳೆ. ಸ್ತ್ರೀಯರನ್ನು ಲೈಂಗಿಕತೆ ನೆಲೆಯಿಂದ ಗ್ರಹಿಸುವ ಸಮಾಜ ವ್ಯವಸ್ಥೆಯ ಸ್ವಾರ್ಥದೃಷ್ಟಿಗೆ ಸ್ತ್ರೀತನದ ನೆಲೆಯಿಂದಲೇ ಸ್ಪಂದಿಸಿದ, ತಿರಸ್ಕರಿಸುವ ಬಂಡಾಯದ ಧ್ವನಿ ಸಮಕಾಲೀನ ಸಂದರ್ಭಕ್ಕೂ ಅನ್ವಯಿತವಾಗುತ್ತಿದೆ. ಮಹಿಳೆಯ ಮೇಲಿನ ಅತ್ಯಾಚಾರ, ಅಕ್ರಮಗಳು ದೈಹಿಕ ದೃಷ್ಟಿಕೋನವನ್ನಾಧರಿಸಿಯೇ ಅಮಾನವೀಯ ನೆಲೆಯಲ್ಲಿ ನಡೆಯುತ್ತಿರುವ ಸ್ತ್ರೀ ಶೋಷಣೆಗಳು, ಹಿಂಸೆ, ಕ್ರೌರ್ಯಗಳಿಗೆ ಪ್ರತಿಭಟನೆಯ ಸ್ವರೂಪದಲ್ಲಿ ಅಕ್ಕಮಹಾದೇವಿಯ ಸ್ತ್ರೀ ದೃಷ್ಟಿಕೋನವನ್ನು ಗ್ರಹಿಸಬಹುದಾಗಿದೆ.

ಆಧುನಿಕ ಸಮಕಾಲೀನ ಸಂದರ್ಭದಲ್ಲಿ ಅಪ್ರಾಪ್ತ ಬಾಲಕಿ, ತರುಣಿಯರು, ವಿವಾಹಿತ ಸ್ತ್ರೀಯರ ದೇಹವನ್ನೇ ದಾಳವಾಗಿಸಿಕೊಂಡು ನಡೆಯುತ್ತಿರುವ ಲೈಂಗಿಕ ಕಿರುಕುಳ, ಸಾಮೂಹಿಕ ಅತ್ಯಾಚಾರ, ಮಹಿಳೆಯರ ಮೇಲೆ ಎರಗುತ್ತಿರುವ ಲೈಂಗಿಕ ದೌರ್ಜನ್ಯಗಳು ಮಾನವೀಯ ಸಮಾಜವನ್ನು ತಲೆತಗ್ಗಿಸುವಂತೆ ಅವ್ಯಾಹತವಾಗಿ ಜರುಗುತ್ತಿರುವ ರೀತಿಯನ್ನು ಗಮನಿಸಿದರೆ, ಪ್ರಜಾಪ್ರಭುತ್ವದ ಕಾನೂನಾತ್ಮಕ ರಕ್ಷಣೆಯ ಹಿನ್ನೆಲೆಯಲ್ಲಿಯೂ ಸ್ತ್ರೀ ಶೋಷಣೆಯ ರೀತಿ, ಅದರ ಹಿಂಸಾತ್ಮಕ ರೂಪ ಬಲು ಕ್ರೂರವಾಗಿದೆ. ಸಂವಿಧಾನಾತ್ಮಕ ಸಮಾನತೆಯ ಸಂರಕ್ಷಣೆಯ ಸಮಕಾಲೀನ ಸಂದರ್ಭದಲ್ಲಿ ಸ್ರೀಯರ ಮೇಲಿನ ದೌರ್ಜನ್ಯಗಳನ್ನು ತಡೆಯುವುದು ಕಷ್ಟಕರವಾದ ಪರಿಸ್ಥಿತಿಯನ್ನು ಗಮನಿಸಿದರೆ, ಪ್ರಭುತ್ವಶಾಹಿ, ಪುರುಷಕೇಂದ್ರಿತ ಸಾಮಾಜಿಕ ವ್ಯವಸ್ಥೆಯಲ್ಲಿ ಅಕ್ಕಮಹಾದೇವಿಯ ದೇಹ ಮನಸ್ಸುಗಳನ್ನು ಛಿದ್ರಿಸುವ ಸಂದರ್ಭಗಳು ಅವಳನ್ನು ತೀವ್ರವಾಗಿ ಘಾಸಿಗೊಳಿಸಿವೆ. ಅದಕ್ಕಾಗಿಯೇ ಅವಳ ವಚನಗಳಲ್ಲಿ ಪ್ರತಿರೋಧದ ಧ್ವನಿ ಅವಳ ಅಂತರಂಗದ ಉದ್ವಿಗ್ನತೆಯನ್ನು ಸ್ಫೋಟಿಸುತ್ತವೆ.

ವಿವಾಹ ಸಂಬಂಧಿ ವಿಚಾರದವರೆಗಿನ ಅಕ್ಕನ ಜೀವನ ಪ್ರಶಾಂತ ಸರೋವರವಾಗಿದ್ದು, ತದನಂತರದ ಅವಳ ಬದುಕು ಭರವಸೆಗಳು ಭಗ್ನಗೊಂಡು ಅಕ್ಕನನ್ನು ಸಂಘರ್ಷದ ನೆಲೆಯಲ್ಲಿ ಸಿಲುಕಿಸಿವೆ. ಏಕಾಂಗಿಯಾಗಿಯೇ ವ್ಯವಸ್ಥೆಯ ತಂತ್ರಗಳನ್ನು ವಿರೋಧಿಸಿದ ಅವಳ ಆತ್ಮಬಲ ಸಾಮಾನ್ಯ ಸ್ತ್ರೀಯರಿಗಿಂತಲೂ ವಿಭಿನ್ನವಾಗಿದೆ. ತನ್ನ ದೇಹ, ಮನಸ್ಸುಗಳ ಮೇಲೆರಗಿದ ಭೋಗದ ಸ್ವಾರ್ಥದ ಪುರುಷ, ಪ್ರಭುತ್ವ, ಸಮಾಜ ವ್ಯವಸ್ಥೆಯನ್ನು ಏಕಕಾಲಕ್ಕೆ ಎದುರಿಸಿದ ಅಕ್ಕಮಹಾದೇವಿ ತನ್ನೆಲ್ಲ ಶಕ್ತಿಯನ್ನು ಒಗ್ಗೂಡಿಸಿ ಹೋರಾಟಕ್ಕಿಳಿದು ಶೋಷಣೆಯ ನೆಲೆಯನ್ನು ಸ್ತ್ರೀ ದೇಹವನ್ನು ಮುಂದಿಟ್ಟುಕೊಂಡು ಪ್ರತಿರೋಧಿಸಿ ಗೆಲುವಿನ ಮುನ್ನಡೆ ಹೊಂದಿದವಳಾಗಿಯೇ ವ್ಯಕ್ತಗೊಳ್ಳುತ್ತಾಳೆ.

ಅಕ್ಕಮಹಾದೇವಿ ಅಸಾಮಾನ್ಯ ಮಹಿಳೆಯಾಗಿದ್ದರೂ ಅಂದಿನ ಸಮಾಜದ ಸ್ವಾರ್ಥಕೇಂದ್ರಿತ ಪುರುಷ ದೃಷ್ಟಿಗೆ, ದೌರ್ಜನ್ಯಕ್ಕೆ ಒಳಗಾಗುವ ಲೌಕಿಕ ಒತ್ತಡಗಳು ಅವಳ ತನು ಮನ ಭಾವಗಳಿಗೆ ನೋವು ತಂದಿರುವ ಸಾಧ್ಯತೆಗಳಲ್ಲಿ ಶಾಂತಳಾಗಿ, ಮಾತನಾಡುವ ಅವಳು ತನ್ನ ಮನದಿಚ್ಛೆಗೆ

ವಿರುದ್ಧವಾದಲ್ಲಿ ಉಗ್ರವಾಗಿಯೇ ಪ್ರತಿಭಟಿಸಿದ್ದಾಳೆ. ಅಂಗನೆಯ ಅಂಗಗಳಿಗೆ ಒಲಿದು ಅವಿವೇಕ ತನದಿಂದ ವರ್ತಿಸುವ ವ್ಯವಸ್ಥೆಯ ನಿಲುವಿಗೆ ಆಕ್ರೋಶಗೊಂಡು ಅಕ್ಕ ದೇಹ ಸಂಬಂಧಿ ನೆಲೆಯ ಹಿನ್ನೆಲೆಯನ್ನು ಬಿಚ್ಚಿಡುತ್ತಲೇ ದೇಹವನ್ನು ನಿರಾಕರಿಸುತ್ತಾಳೆ.

"ನೋಡುವ ಕಂಗಳಿಗೆ ರೂಪಿಂಬಾಗಿರಲು
ನೀವು ಮನನಾಚದೆ ಬಂದಿರಣ್ಣಾ.
ಕೇಳಿದ ಶ್ರೋತ್ರಸೊಗಸಿಗೆ ನೀವು ಮರುಳಾಗಿ ಬಂದಿರಣ್ಣಾ.
ನಾರಿಯೆಂಬ ರೂಪಿಂಗೆ ನೀವು ಒಲಿದು ಬಂದಿರಣ್ಣಾ.
ಮೂತ್ರವು ಬಿಂದು ಒಸರುವ ನಾಳವೆಂದು
ಕಂಗಾಣದೆ ಮುಂದುಗೆಟ್ಟು ಬಂದಿರಣ್ಣಾ.
ಬುದ್ಧಿಗೇಡಿತನದಿಂದ ಪರಮಾರ್ಥದ ಸುಖವ ಹೋಗಲಾಡಿಸಿಕೊಂಡು
ಇದಾವ ಕಾರಣವೆಂದರಿಯದೆ,
ನೀವು ನರಕಹೇತುವೆಂದರಿತು ಮನ ಹೇಸದೆ ಬಂದಿರಣ್ಣಾ.
ಚೆನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿಹ ಪುರುಷರೆನಗೆ ಸಹೋದರರು.
ಛೀ, ಹೋಗಾ ಮರುಳೆ."[೧೧]

ವಿಕೃತ ಕಾಮ ಬಯಕೆಯನ್ನು, ಅದರ ಕ್ರೌರ್ಯವನ್ನು ವಿರೋಧಿಸಿದವಳು ಅಕ್ಕಮಹಾದೇವಿ. ಅಂಥಹ ಬಯಕೆಗೆ ಕಾರಣವಾದ ದೇಹ, ಮನಸ್ಸುಗಳ ಅಸ್ತಿತ್ವವನ್ನು ಅಲ್ಲಗಳೆಯುತ್ತ, ತನ್ನ ದೇಹ ಮನಸ್ಸಿನ ಮೇಲರಗಿದ ಅಮಾನವೀಯ ಹಿಂಸೆಯನ್ನು ಎದುರಿಸುವ ಅಸ್ತ್ರವಾಗಿ ಸ್ತ್ರೀ ದೇಹವನ್ನೇ ದಾರಿಯಾಗಿಸಿಕೊಂಡ ಅಕ್ಕಮಹಾದೇವಿ, ಆಧುನಿಕ ಸಮಕಾಲೀನ ಸಂದರ್ಭದ ಸ್ತ್ರೀ ದೌರ್ಜನ್ಯದ ಸಂದರ್ಭದ ಪ್ರತಿರೋಧಾತ್ಮಕ ಸಾಮಾನ್ಯ ಮಹಿಳೆಯ ದೃಷ್ಟಿಕೋನವನ್ನೇ ಪ್ರತಿನಿಧಿಸುತ್ತಾಳೆ. ಮಹಾದೇವಿಯಕ್ಕನ ಮನೋಬಲದಲ್ಲಿ ವ್ಯಕ್ತವಾಗಿರುವ ಮಲ್ಲಿಕಾರ್ಜುನ ಅವಳ ಆತ್ಮರಕ್ಷಣೆಯ ಪ್ರತಿರೋಧಾತ್ಮಕ ಅಸ್ತ್ರವಾಗಿಯೂ ಪ್ರಾಮುಖ್ಯತೆ ಪಡೆದುಕೊಂಡಿದ್ದು, ತನ್ನ ವಿರುದ್ಧದ ಪುರುಷ ಚಿಂತನೆಗೆ ಅದನ್ನೇ ಮುಖಾಮುಖಿಗೊಳಿಸಿದ ಮಹಾದೇವಿಯಕ್ಕ ಇಂದಿನ ಮಹಿಳಾ ಸಂದರ್ಭದಲ್ಲೂ ಅನ್ವಯಗೊಳ್ಳುವಳು.

ಹೆಣ್ಣಿನ ಬಗೆಗಿನ ಪುರುಷ ಗ್ರಹಿಕೆಯ ನೆಲೆಗಳನ್ನು ಛಿದ್ರಗೊಳಿಸಲು ತನ್ನೊಲವಿನ ಚೆನ್ನಮಲ್ಲಿಕಾರ್ಜುನ ಪತಿ ಪ್ರತಿಮೆಯನ್ನು ಪ್ರತಿರೋಧವಾಗಿ ಬಳಸಿರುವಳು. ಅವಳ 'ಪತಿ' ಪ್ರತಿಮೆಯನ್ನು ಕೆಲವರು ಪುರುಷವಾಚಿಯಾಗಿ ಗ್ರಹಿಸಿ ಅಕ್ಕ ಪಿತೃಪ್ರಧಾನ ಮೌಲ್ಯಗಳನ್ನೇ ಪ್ರತಿನಿಧಿಸುವಳೆಂಬ ವಾದವನ್ನು ಮಂಡಿಸುವರು. ಆದರೆ 'ಮಲ್ಲಿಕಾರ್ಜುನ' ಮಹಾದೇವಿಯಕ್ಕನ

ಮನೋಬಲದ ಚೈತನ್ಯಾತ್ಮಕ ಶಕ್ತಿಯೇ ಹೊರತು ಪುರುಷ ನೆಲೆಯಲ್ಲ. ಪತಿ ಪ್ರತಿಮೆ ಪುರುಷ ಕೇಂದ್ರಿತ ತಂತ್ರಗಳನ್ನು ಮೀರುವ ಆತ್ಮರಕ್ಷಣೆಯ ಅಸ್ತ್ರ. ಅಕ್ಕಮಹಾದೇವಿಯು ಅನುಭಾವಿಕ ಹಿನ್ನೆಲೆಯಲ್ಲಿ ಸೃಷ್ಟಿಸಿಕೊಂಡ ಚೆನ್ನಮಲ್ಲಿಕಾರ್ಜುನ ಅವಳ ತನು ಮನಗಳನ್ನಾವರಿಸಿದ ಆತ್ಮಬಲ. ಸಾಮಾನ್ಯ ಮಹಿಳೆಯ ಸಮಸ್ಯೆ ಸಂದರ್ಭಗಳನ್ನು ಸಮರ್ಥವಾಗಿ ಎದುರಿಸಿ ಮುನ್ನಡೆದ ಮಹಾದೇವಿಯಕ್ಕ ಸಮಕಾಲೀನ ಮಹಿಳೆಗೆ ಮಾರ್ಗದರ್ಶಿಯೇ ಆಗಿರುವಳು.

ಸಮಕಾಲೀನ ಆಧುನಿಕ ಕಾಲದ ಮಹಿಳೆಯರು ಸ್ತ್ರೀಸಮುದಾಯ ಎದುರಿಸುತ್ತಿರುವ, ಅನುಭವಿಸುತ್ತಿರುವ ಹೆಣ್ಣು ಭ್ರೂಣಹತ್ಯೆ, ಶಿಶುಹತ್ಯೆ, ಹೆಣ್ಣೆಂಬ ಕೀಳುಭಾವನೆ, ಅಪಹರಣ, ಅತ್ಯಾಚಾರ, ಮಾರಾಟ, ವೇಶ್ಯಾವಾಟಿಕೆ, ಬಾಲ್ಯ ವಿವಾಹ, ವರದಕ್ಷಿಣೆ, ವಧು ದಹನ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ, ವಿವಾಹ ಸಂಬಂಧಿ ದೈಹಿಕ ದಂಡನೆ, ಕ್ರೌರ್ಯ, ದೈಹಿಕ, ಮಾನಸಿಕ ಹಿಂಸೆಗಳು, ದೇವದಾಸಿ ಪದ್ಧತಿ ಬಂಡವಾಳ ಶಾಹಿಗಳು ಹೆಣ್ಣನ್ನು ದುರ್ಬಳಕೆ ಮಾಡುತ್ತಿರುವ ವೈವಿಧ್ಯಮಯ ಸಮಸ್ಯೆಗಳು, ಶೋಷಣೆಗಳು ಪ್ರಮುಖವಾಗಿ ಮಹಿಳೆಯ ದೇಹವನ್ನೇ ಕೇಂದ್ರೀಕರಿಸಿ ಕೊಂಡು ಅವಳ ಅಸ್ತಿತ್ವವನ್ನು ಮೊಟಕುಗೊಳಿಸುತ್ತಿವೆ. ಆಧುನಿಕ ಮಹಿಳಾ ಸಂದರ್ಭ ಸನ್ನಿವೇಶಗಳು ಸಂಕೀರ್ಣವಾಗಿವೆ. "ಮಹಿಳೆಯ ಬದುಕು ಸರಳ ರೇಖೆಯಂತೆ ಸುಲಭವಾಗಿಲ್ಲ. ಅದು ಹಲವು ಮುಖ, ಮಜಲು, ಗೋಜಲುಗಳಿಂದ ಇನ್ನಷ್ಟು ಸಂಕೀರ್ಣವಾಗಿದೆ. ಸ್ತ್ರೀಯರು ಸಮಾಜದ ಪರುಷಕೇಂದ್ರಿತ ಚಿಂತನೆಗಳಿಂದಾಗಿ ಸಾಮಾಜಿಕ ಕಟ್ಟುಪಾಡು ತುಳಿತ ಆಗ್ರಹ ನಿಗ್ರಹ, ಅಲ್ಪಸ್ವಲ್ಪ ಅನುಗ್ರಹ, ನಿಂದನೆ, ಉತ್ಪ್ರೇಕ್ಷೆ, ಉಪೇಕ್ಷೆಗಳಿಂದ ಕಷ್ಟಸುಖಗಳನ್ನು ಅನುಭವಿಸುತ್ತ ಏಳುತ್ತ ಹೆಚ್ಚು ಬಾರಿ ಬೀಳುತ್ತ ಬದುಕುತ್ತಿದ್ದಾರೆ."[೨]

ಹೆಣ್ಣಿನ ಅಸ್ತಿತ್ವವನ್ನು ನಾಶಗೊಳಿಸುವ ಮೊದಲ ವಸ್ತುವಾಗಿ ಗುರಿಯಾಗುವುದು ಅವಳ ದೇಹ. ಅದರ ನೆಲೆಯನ್ನು ವಿಕೃತಗೊಳಿಸುವ ಯತ್ನಗಳು ಅಕ್ಕನಿಗೂ ಅಂದು ಎದುರಾದಂತೆಯೇ ಇಂದಿನ ಮಹಿಳಾ ಸಮೂಹವನ್ನು ನಿರಂತರವಾಗಿ ಬೆಂಬಿಡದೇ ಕಾಡುತ್ತಿರುವ ವಾಸ್ತವ ಕಟುಸತ್ಯವಾಗಿದೆ. ಅಕ್ಕಮಹಾದೇವಿ ಬದುಕಿದ್ದ ಕಾಲದಲ್ಲಿ ಸಂಚಾರ ಸೌಕರ್ಯಗಳಿಲ್ಲದ, ಕೌಟುಂಬಿಕ, ಕಾನೂನಾತ್ಮಕ ರಕ್ಷಣೆಗಳಿಲ್ಲದೆ ಏರುಜವ್ವನದ ಚೆಲುವಿನ ಯುವತಿಯೋರ್ವಳು ಏಕಾಂಗಿಯಾಗಿ ನಡೆದುಕೊಂಡೇ ಉಡುತಡಿಯಿಂದ ಕಲ್ಯಾಣಕ್ಕೆ ಬಂದ ಸಂದರ್ಭದಲ್ಲಿ ಅವಳು ಎದುರಿಸಿದ ಅಡೆತಡೆಗಳು ಹಲವಾರು. ಅವುಗಳಿಗೆಲ್ಲ ಹೆದರದೇ ತನ್ನತನದ ಪ್ರಜ್ಞೆಯಲ್ಲಿಯೇ ಸಾಂತ್ವನಗೊಳಿಸಿ ಕೊಂಡ ಅಭಿವ್ಯಕ್ತಿಗಳು ತೀವ್ರ ತರವಾದ ಸ್ತ್ರೀಪರನೆಲೆಯಲ್ಲಿಯೇ ಗ್ರಹಿತವಾಗುತ್ತವೆ.

"ಹೆದರದಿರು ಮನವೆ, ಬೆದರದಿರು ತನುವೆ,
ನಿಜವನರಿತು ನಿಶ್ಚಿಂತನಾಗಿರು.

ಫಲವಾದ ಮರನ ಕಲ್ಲಲ್ಲಿ ಇಡುವುದೊಂದು ಕೋಟಿ,
ಎಲವದಮರನ ಇಡುವರೊಬ್ಬರ ಕಾಣೆ.
ಭಕ್ತಿಯುಳ್ಳವರ ಬೈವರೊಂದು ಕೋಟಿ,
ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ.
ನಿಮ್ಮ ಶರಣರ ನುಡಿಯೆ ಎನಗೆ ಗತಿ, ಸೋಪಾನ,
ಚೆನ್ನಮಲ್ಲಿಕಾರ್ಜುನಾ."[೧೩]

ಇಂದಿನ ಆಧುನಿಕ ಸಂದರ್ಭದಲ್ಲಿ ಸಾರಿಗೆ, ಸಂಚಾರ, ಸಂಪರ್ಕ ವಸತಿ ಇನ್ನಿತರ ಅನುಕೂಲ ಸೌಲಭ್ಯಗಳಿರುವ ಕಾಲದಲ್ಲಿಯೂ ಮಹಿಳೆ, ಯುವತಿಯರು ಏಕಾಂಗಿಯಾಗಿ ಸಂಚರಿಸಲು ಆತಂಕ ಪಡುವ ದಯನೀಯ ಪರಿಸ್ಥಿತಿಯಿದೆ. ದುಗುಡದಿಂದಲೇ ಸಂಚರಿಸುವ ಸಂದರ್ಭದಲ್ಲಿರುವ ಹೆಣ್ಣುಮಕ್ಕಳು ಸಂವಿಧಾನಬದ್ಧ ಸ್ವತಂತ್ರ, ಮುಕ್ತ ಸಂಚಾರವನ್ನು ಅನುಭವಿಸುವ ಸ್ಥಿತಿಯಿಲ್ಲ. ಒಂದು ವೇಳೆ ಏಕಾಂಗಿಯಾಗಿ ಪ್ರಯಾಣಿಸುವ ತಂಗುವ ಸಂದರ್ಭಗಳು ಎದುರಾದರೆ ಆತಂಕಗೊಳ್ಳುವ ಸ್ತ್ರೀಯರಿಗೆ, ಹೆಣ್ಣುಮಕ್ಕಳಿಗೆ ಸುರಕ್ಷತೆ ಭಯ ಕಾಡುತ್ತದೆ. ಇವೆಲ್ಲ ಅನುಕೂಲಗಳಿರದ ಕಷ್ಟಕರ ಸನ್ನಿವೇಶವನ್ನು ಎದುರುಗೊಂಡ ಅಕ್ಕಮಹಾದೇವಿ ತನ್ನ ಅನುಭಾವಿಕ ಗಮ್ಯತೆ ಗುರಿಯನ್ನು ಕಾಣಲು ಏಕಾಂಗಿಯಾಗಿ ನಡೆಯುವಳು.

ಅನಿವಾರ್ಯವಾದ ಒತ್ತಡಗಳನ್ನು ನಿಭಾಯಿಸುವ ಸನ್ನಿವೇಶದಲ್ಲಿ ತನ್ನ ಮೇಲೆ ಜರುಗುವ ಆಕ್ರಮಣಗಳನ್ನು ಮೊದಲೇ ಗ್ರಹಿಸಿ, ಸಂಯಮದಿಂದಲೇ ಪ್ರತಿಕ್ರಿಯಿಸುವ ಅವಳ ಮನೋಬಲ ಇಂದಿನ ಮಹಿಳೆಯರಿಗೆ ಸ್ಫೂರ್ತಿಯಾಗಬೇಕಿದೆ. 'ಮರಪ್ರತಿಮೆ' ಸಾಮಾಜಿಕ ದುರವಸ್ಥೆಯ ಚಿತ್ರಣವನ್ನೇ ಪ್ರತಿನಿಧಿಸಿ, ಮಹಿಳೆಯ ಸ್ಥಿತಿಯ ದಾರುಣ ಸ್ಥಿತಿಯನ್ನು ಕಟ್ಟಿಕೊಡುವ ಅಕ್ಕಮಹಾದೇವಿ ಭರವಸೆ ಉಳಿಸಿಕೊಳ್ಳುವ ಸ್ತ್ರೀಸಂವೇದನೆಯನ್ನೇ ವ್ಯಕ್ತಗೊಳಿಸಿದ್ದಾಳೆ. ಸಾಮಾಜಿಕ ವಿಷಮ ಸಂದರ್ಭಗಳಿಗೆ ಮುಖಾಮುಖಿಯಾಗುತ್ತಲೇ ಪ್ರೀತಿ, ಭರವಸೆ, ಆತ್ಮಸ್ಥೈರ್ಯಗಳನ್ನು ಉಳಿಸಿಕೊಳ್ಳುವ ಮನೋಸ್ಥೈರ್ಯವುಳ್ಳ ಮಹಿಳೆಯಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಾಮಾನ್ಯ ಮಹಿಳೆಯ ಮನಸ್ಥಿತಿಯ ಪ್ರತೀಕವಾಗಿ ಸಾಕ್ಷೀಕರಿಸಿಕೊಳ್ಳುತ್ತಾಳೆ. ಮುಂದುಗಾಣದ ಅಸಹಾಯಕ, ವಿಷಮ ಪರಿಸ್ಥಿತಿಗಳನ್ನು ಎದುರಿಸುವ ಮನೋಬಲದ ಅವಶ್ಯಕತೆಯನ್ನು ಅಕ್ಕ ಮನಗಂಡಿದ್ದಾಳೆ. ತನ್ನ ಅಸ್ಮಿತತೆಯ ಕುರಿತಾದ ಸಂದಿಗ್ಧತೆಯನ್ನು ಎದುರುಗೊಂಡಿದ್ದಾಳೆ. ಅಲ್ಲೆಲ್ಲ ಮಹಿಳಾ ಸಂವೇದನೆಗಳು ತೀವ್ರವಾಗಿ ಅಭಿವ್ಯಕ್ತಗೊಂಡಿದೆ.

"ಹಿಂದಣ ಹಳ್ಳ, ಮುಂದಣ ತೊರೆ,
ಸಲ್ಲುವ ಪರಿಯೆಂತು ಹೇಳಾ!

ಹಿಂದಣ ಕೆರೆ, ಮುಂದಣ ಬಲೆ,
ಹದುಳವಿನ್ನೆಲ್ಲಿಯದು ಹೇಳಾ!
ನೀನಿಕ್ಕಿದ ಮಾಯೆ ಕೊಲುತಿಪ್ಪುದು
ಕಾಯಯ್ಯಾ, ಕಾಯಯ್ಯಾ ಚೆನ್ನಮಲ್ಲಿಕಾಜುನಾ."[೧೪]

ಅಂತರಂಗ ಬಹಿರಂಗ ವ್ಯವಸ್ಥೆಗಳ ಸಂಘರ್ಷದಲ್ಲಿ ಸ್ತ್ರೀ ತನ್ನನ್ನು ಸಂರಕ್ಷಿಸಿಕೊಳ್ಳುವಲ್ಲಿ ಆವರಿಸುವ ಅಡ್ಡಿ ಆತಂಕಗಳನ್ನು ಅನುಭವಿಸಿದ ಅಕ್ಕಮಹಾದೇವಿ ಅಗೋಚರ ಶಕ್ತಿಯ ರಕ್ಷಣಾತ್ಮಕ ಯುಕ್ತಿಯನ್ನು ಕಂಡುಕೊಳ್ಳುವಳು. ಪರಿಸ್ಥಿತಿಯನ್ನು ಎದುರಿಸಲಾಗದ, ಅನುಭವಿಸಲಾಗದ ಸಂಧಿಗ್ಧತೆ ಸ್ತ್ರೀಯರಿಗೆ ಹೆಜ್ಜೆಹೆಜ್ಜೆಗೂ ಕಾಡುತ್ತದೆ. ಕಷ್ಟಕೋಟಲೆಗಳಿಗೆ ಉರುಳಿಗೆ ಕೊರಳನ್ನೀಯುವ ಆತಂಕ ಸೃಷ್ಟಿಯಾಗುತ್ತದೆ. ಹೊಯ್ದಾಟದ ಹೆಣ್ಣಿನ ಮನಸ್ಥಿತಿಯ ನೋವು, ಒಳಹೊರಗನ್ನು ದಹಿಸುವಂತಹದು. ಸಮಸ್ಯಾತ್ಮಕ ನೆಲೆಯಿಂದ ಬಿಡಿಸಿಕೊಳ್ಳುವ ದಾರಿಯ ಬೆಳಕು ಗೋಚರಿಸದೇ ಕತ್ತಲೆ ಆವರಿಸಿ ಆತಂಕಕ್ಕೊಳಗಾಗುವ ಮಹಿಳೆಯ ಮನಸ್ಥಿತಿಯನ್ನು ಮಹಾದೇವಿಯಕ್ಕ ಮಹಿಳೆಯಾಗಿಯೇ ಅನುಭವಿಸಿ ಆತಂಕಿತಳಾಗಿ ಅಗೋಚರ ಶಕ್ತಿಯ ಮೊರೆ ಹೊಕ್ಕಿರುವಳು. ಇಂಥಹ ಅಭಿವ್ಯಕ್ತಿಗಳಲ್ಲಿ ಅವಳ ಅಂತರಂಗ ಓರ್ವ ಸ್ತ್ರೀ ಅನುಭವಿಸುವ ತಲ್ಲಣದ ಸಾಂದರ್ಭಿಕತೆಯೇ ಆಗಿದೆ. ವಾಸ್ತವ ಪ್ರಪಂಚದಲ್ಲಿ ತನ್ನ ಉಳುವಿಗಾಗಿ ಹೋರಾಡುವ ಹೆಣ್ಣಿನ ಪ್ರತಿನಿಧಿಯಾಗಿದ್ದಾಳೆ ಅಕ್ಕಮಹಾದೇವಿ. ಸ್ವಯಂಪ್ರೇರಣೆಯನ್ನು ತನ್ನೊಳಗಿಂದಲೇ ಪಡೆದುಕೊಂಡು ಪ್ರತಿರೋಧದ ಚೈತನ್ಯಶಕ್ತಿಯನ್ನು ತನ್ನೊಳು ಆಹ್ವಾನಿಸಿಕೊಳ್ಳುವ ರೀತಿ ಸಕಾರಾತ್ಮಕ ನೆಲೆಯುಳ್ಳದ್ದು.

"ಹಸಿವಾದಡೆ ಊರೊಳಗೆ ಭಿಕ್ಷಾನ್ನಗಳುಂಟು.
ತೃಷೆಯಾದಡೆ ಕೆರೆ ಹಳ್ಳ ಬಾವಿಗಳುಂಟು.
ಅಂಗಶೀತಕ್ಕೆ ಬೀಸಾಟ ಅರಿವೆಗಳುಂಟು.
ಶಯನಕ್ಕೆ ಹಾಳು ದೇಗುಲಗಳುಂಟು.
ಚೆನ್ನಮಲ್ಲಿಕಾರ್ಜುನಯ್ಯಾ,
ಆತ್ಮಸಂಗಾತಕ್ಕೆ ನೀನೆನಗುಂಟು."[೧೫]

ಮಹಿಳಾ ಸಶಕ್ತೀಕರಣವನ್ನು ಪ್ರತಿಪಾದಿಸುವ ಆಧುನಿಕ ಸಂದರ್ಭದ ಸ್ತ್ರೀವಾದ ಆತ್ಮವಿಶ್ವಾಸಕ್ಕೆ ಪ್ರಾಮುಖ್ಯತೆಯನ್ನು ನೀಡುತ್ತದೆ. ಸ್ತ್ರೀ ಸಶಕ್ತಗೊಳ್ಳಲು ಸ್ಥೈರ್ಯದ ಪರಿಶ್ರಮವನ್ನು ಪ್ರಗತಿಗೆ ಪೂರಕವಾಗಿ ಪರಿಗಣಿಸಿದ ಆಧುನಿಕ ಸ್ತ್ರೀವಾದದ ಚಿಂತನಾಕ್ರಮಕ್ಕೆ ಅಕ್ಕನ ಆತ್ಮಸ್ಥೈರ್ಯದ ಮನಸ್ಥಿತಿ ನಡವಳಿಕೆಗಳು ಪುಷ್ಟಿಯನ್ನೊದಗಿಸುತ್ತವೆ. ಪುರುಷ ಪ್ರಧಾನ ಸಾಮಾಜಿಕ ಸಂರಚನೆಯಲ್ಲಿ ಸ್ತ್ರೀಯರ ಸ್ಥೈರ್ಯದ ಮನಸ್ಥಿತಿ ಮೇಲ್ಪಂಕ್ತಿಯಲ್ಲಿ ಪ್ರಚುರಪಡಿಸಿಕೊಳ್ಳಲು ಪರಿಣಾಮಕಾರಿಯಾದ

ತಂತ್ರವೆನಿಸಿದೆ. ಮಹಾದೇವಿಯಕ್ಕ ಅಂಥಹ ಮನಸ್ಥಿತಿಯನ್ನು ನಿರ್ಮಿಸಿಕೊಳ್ಳುತ್ತಲೇ ತನ್ನನ್ನು ಆವರಿಸಿದ ಆಕ್ರಮಣಗಳನ್ನು ನಿರ್ನಾಮಗೊಳಿಸಿಕೊಳ್ಳಲು ಯತ್ನಿಸಿರುವಳು. "ಕಾಯದ ಹಸಿವು, ತೃಷೆ, ನಿದ್ರೆಗಳು ಸಿದ್ಧ ಸಮಾಜದ ನಿಯಮ ಮತ್ತು ನಿಯಂತ್ರಣಗಳಿಗೆ ಅನುಗುಣವಾಗಿ ಜರುಗುತ್ತವೆ. ಈ ಸಿದ್ಧ ಸಮಾಜ ಎಂಬ ಕಲ್ಪನೆಯ ಹಿಂದೆ ಆಕ್ರಮಣ ಶಕ್ತಿಗಳು ಅಡಗಿರುತ್ತವೆ. ಕಾಯವನ್ನು ನಿಷ್ಕ್ರೀಯಗೊಳಿಸಿ ತನ್ನ ಗುಲಾಮನನ್ನಾಗಿಸಿಕೊಳ್ಳುವ ಕೆಲಸವೂ ಇಂಥ ಶಕ್ತಿಗಳ ಹಿಂದೆ ಸುಪ್ತವಾಗಿರುತ್ತದೆ. ಅಸಂಖ್ಯಾತ ಕಾಯಗಳು ಈ ಬಗೆಯ ಶಕ್ತಿಯ ಉರಿಯಲ್ಲಿ ಅವಸಾನ ಹೊಂದುವುದು ಸಹಜ. ಇಂಥ ಶಕ್ತಿಗಳು ರೂಪಿಸಿದ ಜೀವನ ಕ್ರಮವನ್ನು ಆತ್ಮಸಂಗಾತಿಯನ್ನಾಗಿಸಿಕೊಳ್ಳದೆ, ತನ್ನ ಅರಿವಿನ ವಿಕಾಸದ ಗುರುವಾದ ಚೆನ್ನಮಲ್ಲಿಕಾರ್ಜುನನಲ್ಲಿ ತನ್ನನ್ನು ತಾನು ಲೀನಗೊಳಿಸಿಕೊಳ್ಳುವ ಅಕ್ಕ ಅಕ್ರಮಸಂಗಾತವನ್ನು ಆರಿಸಿಕೊಂಡಿದ್ದಾಳೆ. ಈ ಆಯ್ಕೆಯಲ್ಲಿ ಏಕಕಾಲಕ್ಕೆ ಸಾಂಪ್ರದಾಯಿಕ ಹಾಗೂ ಮಾನವನಿರ್ಮಿತ ಕೃತಕ ಜೀವನ ವಲಯವನ್ನು ನಾಶಗೊಳಿಸಿಕೊಳ್ಳುವ ಚಳುವಳಿ ಅಡಗಿದೆ."[೧೬]

ಸ್ಥಾಪಿತ ಮೌಲ್ಯಗಳ ವಿರುದ್ಧ ಹೋರಾಟ ನಡೆಸಿದ ಅಕ್ಕಮಹಾದೇವಿ ತೀವ್ರ ಬಂಡಾಯವಾದಿಯಾಗಿಯೇ ಗ್ರಹಿತವಾಗುವಳು. ಸಾಮಾಜಿಕ, ಧಾರ್ಮಿಕ ಸಂರಚನೆಯಲ್ಲಿ ಪರಿಗಣಿತವಾದ ಸಿದ್ಧ ಮಾದರಿಯ ಸ್ತ್ರಿ ಪಾತ್ರಗಳನ್ನು ನಿರಾಕರಿಸುವ ಮತ್ತು ಸ್ವತಂತ್ರ ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳುವ ಅಕ್ಕನ ಮಾದರಿ ಶುದ್ಧ ಸ್ತ್ರೀವಾದಿ ನೆಲೆಯಲ್ಲಿಯೇ ಗೋಚರಿಸುತ್ತದೆ. ಪುರುಷ ಕೇಂದ್ರಿತ ಆಲೋಚನಾಕ್ರಮದ ಸ್ತ್ರೀಯ ಸಿದ್ಧ ಮಾದರಿ ವ್ಯಕ್ತಿತ್ವವನ್ನು ಭಗ್ನಗೊಳಿಸಿ ಸ್ವಂತ ಆಲೋಚನಾ ಕ್ರಮದ ಸ್ವಯಂ ಮಾದರಿಯ ಸ್ತ್ರೀತನವನ್ನು ಕಟ್ಟಿಕೊಳ್ಳ ಬಯಸಿದವಳು ಅಕ್ಕಮಹಾದೇವಿ.

ಸಾಮಾಜಿಕ ಕಟ್ಟುಪಾಡುಗಳಿಗೆ ವ್ಯತಿರಿಕ್ತವಾದ ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳುವ ಸ್ವತಂತ್ರ ಆಲೋಚನೆಯುಳ್ಳ ವೈಚಾರಿಕ ಮಹಿಳೆಯಾಗಿ, ಭಿನ್ನ ವ್ಯಕ್ತಿತ್ವದ ಮಾದರಿಯಾಗಿ ನಿಂತಿರುವಳು. ವ್ಯಕ್ತಿತ್ವ ವಿಕಾಸದ ಹಾದಿಯಲ್ಲಿ ಎದುರಾದ ಪ್ರಭುತ್ವ ಮತ್ತು ಸಮಾಜವ್ಯವಸ್ಥೆಯನ್ನು ಏಕಕಾಲಕ್ಕೆ ಧಿಕ್ಕರಿಸಿದ ಧೀರ ವ್ಯಕ್ತಿಯಾಗಿಯೇ ಮಹಾದೇವಿಯಕ್ಕ ಆಧುನಿಕ ಸ್ತ್ರೀವಾದ ಚಿಂತಕರಿಗೆ ಸ್ಫೂರ್ತಿಯಾಗಿದ್ದಾಳೆ. ಅಕ್ಕಮಹಾದೇವಿಯ ವೈಚಾರಿಕ ಪ್ರಜ್ಞೆ ಪುರುಷ ಪ್ರಧಾನ ವ್ಯವಸ್ಥೆಗೆ ತೋರಿದ ಪ್ರತಿರೋಧವೆಂದೇ ತಿಳಿಯಲಾಗಿದೆ. ಅಧೀನತೆಯಲ್ಲಿದ್ದ ಸ್ತ್ರೀ, ಪುರುಷ ಪ್ರಾಧಾನ್ಯತೆಯನ್ನು ಪ್ರಭುತ್ವದ ಅಧಿಕಾರಶಾಹಿಯನ್ನು ಪ್ರಶ್ನಿಸಿ ಪ್ರತ್ಯೇಕ ಪ್ರಧಾನ ವ್ಯಕ್ತಿತ್ವ ನಿರ್ಮಾಣಕ್ಕಾಗಿ ಹಂಬಲಿಸಿದ್ದು ಅಂದಿನ ಪರಿಸ್ಥಿತಿಯಲ್ಲಷ್ಟೇ ಅಲ್ಲ, ಇಂದಿಗೂ ಸವಾಲಿನ, ಸಂಘರ್ಷದ ವಿಷಯವಾಗಿಯೇ ಎದುರಾಗುತ್ತದೆ. "ಅಕ್ಕಮಹಾದೇವಿ ಆಕೆ ವಿಚಾರಸ್ವಾತಂತ್ರ್ಯದ ಮಹಿಳೆ. ಗಂಡ ಮತ್ತು ವಿಚಾರಸ್ವಾತಂತ್ರ್ಯ ಈ ಎರಡು ಆಯ್ಕೆಗಳು ಆಹ್ವಾನವಾದಾಗ ಗಂಡನನ್ನು ಧಿಕ್ಕರಿಸಿ ವಿಚಾರ ಸ್ವಾತಂತ್ರ್ಯವನ್ನು ಆಯ್ದು ಕೊಂಡುದು ಲೋಕದ ಇತಿಹಾಸದಲ್ಲಿಯೇ ಅಪರೂಪದ ಘಟನೆಯಾಗಿದೆ."[೧೭]

ಮಹಿಳೆ ಪತಿಯಿಲ್ಲದೆ ಬದುಕುವುದು ದುಸ್ಸಾಧ್ಯ. ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆ ಪುರುಷನೊಡನೆ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿ, ಸ್ತ್ರೀಯನ್ನು ಪುರುಷಕೇಂದ್ರಿತ ವ್ಯವಸ್ಥೆಗೆ ಅಧೀನಗೊಳಿಸಿ, ಸ್ತ್ರೀಗೆ ಇರಬೇಕಾದ ಸಮಾನ ಅವಕಾಶ, ಸ್ವಾತಂತ್ರ್ಯಗಳಿಂದ ವ್ಯವಸ್ಥಿತವಾಗಿ ವಂಚಿಸಿದ ಪಟ್ಟಭದ್ರ ಪುರುಷ ಹಿತಾಸಕ್ತಿಗಳಿಗೆ ಅದೆಷ್ಟೋ ಸ್ತ್ರೀಯರ ಬದುಕು ಬಲಿಯಾಗಿದೆ. ಅನಿವಾರ್ಯತೆಯ ಬಂಧಗಳ ಬದುಕನ್ನು ಬದುಕಲೇಬೇಕಾದ ಅನಿವಾರ್ಯತೆಯನ್ನು ಅಲ್ಲಗಳೆಯುವ ಅಕ್ಕಮಹಾದೇವಿ ಸ್ವತಂತ್ರ, ಮುಕ್ತವಾದ, ಚಿಂತನಾತ್ಮಕ ಬದುಕನ್ನು ರೂಪಿಸಿಕೊಳ್ಳುವ ತವಕದಿಂದಾಗಿಯೇ ತಲ್ಲಣ, ತಳಮಳಗಳಿಗೆ ಒಳಗಾಗುತ್ತ ಅವೆಲ್ಲವನ್ನೂ ಮೀರುವ ಒತ್ತಾಯಪೂರ್ವಕ ಒತ್ತಡದ ಹಿಂಸಾತ್ಮಕ ಬದುಕಿನ ಪ್ರಕ್ರಿಯೆಗಳಿಂದ ಮುಕ್ತತೆ ಪಡೆಯುವತ್ತ ಯೋಚಿಸಿರುವುದರಿಂದಲೇ ತೀವ್ರವಾದ ಪ್ರತಿರೋಧಕ್ಕೂ ಗುರಿಯಾಗಿದ್ದಾಳೆ. ಸ್ತ್ರೀಯ ಸ್ವತಂತ್ರ ಪ್ರವೃತ್ತಿಯನ್ನು ಸ್ವೀಕರಿಸಲು ಸಿದ್ಧವಿಲ್ಲದ ಸಮಾಜದಲ್ಲಿ ಸ್ವತಂತ್ರ ಅಸ್ತಿತ್ವಕ್ಕಾಗಿ ಪ್ರತಿಭಟನೆಯ ಹಾದಿ ಹಿಡಿದ ಹೆಣ್ಣು ಅಕ್ಕಮಹಾದೇವಿ.

> “ಹಿಡಿಯದಿರು ತಡೆಯದಿರು ಬಿಡುಬಿಡು ಕೈಯಸೆರಗ.
> ಭಾಷೆಯ ಬರೆದುಕೊಟ್ಟ ಸತ್ಯಕ್ಕೆ ತಪ್ಪಿದರೆ
> ಅಘೋರ ನರಕವೆಂದರಿಯಾ?
> ಚೆನ್ನಮಲ್ಲಿಕಾರ್ಜುನನ ಕೈವಿಡಿದ ಸತಿಯ ಮುಟ್ಟಿದರೆ
> ಕೆಡುವೆ ಕಾಣಾ ಮರುಳೆ.”[೧೮]

ವಿವಾಹ ಸಂಬಂಧಿ ವಿಚಾರದಲ್ಲಿಯೂ ಮಹಿಳೆಯ ದೇಹವನ್ನೇ ಗುರಿಯಾಗಿಸಿಕೊಂಡ ದುರವಸ್ಥೆ ಇಂದಿಗೂ ಮಹಿಳೆಯರನ್ನು ಶೋಷಿಸುತ್ತಿದೆ. ದೇಹ ಆದರ ಸಂಬಂಧಿತ ಲೈಂಗಿಕ ದೌರ್ಜನ್ಯ ‘ಸ್ತ್ರೀ’ಗೆ ಕಂಟಕವಾಗಿರುವುದು ಕಾಲಾತೀತ ಸಮಸ್ಯೆಯಾಗಿದೆ. ಪುರುಷ ಪ್ರಾಧಾನ್ಯತೆಯಲ್ಲಿ ‘ಪತಿ’ ವ್ಯಕ್ತಿತ್ವಕ್ಕೆ ನೀಡಿರುವ ಮನ್ನಣೆ ಪ್ರಶ್ನಾತೀತ! “ಸ್ತ್ರೀಗೆ ಪತಿಯ ಹೊರತಾಗಿ ಬೇರೆ ಲೋಕವು ಇಲ್ಲ ಯಾವ ಸ್ತ್ರೀಯು ತನ್ನ ಪತಿಗೆ ವಿರುದ್ಧವಾಗಿ ವರ್ತಿಸುತ್ತಾಳೆಯೊ, ಅವಳು ಮರಣಾನಂತರ ಪತಿಯ ಲೋಕಕ್ಕೆ ಹೋಗುವುದಕ್ಕೆ ಶಕ್ತಳಾಗಿರುವುದಿಲ್ಲ. ಹಾಗಾಗಿಯೇ ಅವಳು ಎಂದಿಗೂ ಪತಿಗೆ ವಿರುದ್ಧವಾಗಿ ನಡೆಯಬಾರದು”[೧೯](ವಾಸಿಷ್ಠ ೨೧-೨೪).

ಸಾಮಾಜಿಕ ವ್ಯವಸ್ಥೆಯಲ್ಲಿ ವಿವಾಹದ ಪರಿಕಲ್ಪನೆಯಲ್ಲಿ ಪತಿಗೆ ಪರದೈವದ ಪಟ್ಟ ಕಟ್ಟಿ ಆ ದೈವಕ್ಕೆ ಸ್ತ್ರೀಯನ್ನು ಅಧೀನತ್ವಗೊಳಿಸಿದ ಕ್ರೌರ್ಯದ, ಅಸಹಜ, ಅಮಾನವೀಯ ಹೆಣ್ಣಿನ ಶೋಷಣೆಯ ತಾಣವಾದ ಕುಟುಂಬ, ಪತಿ, ಪಾತ್ರಗಳನ್ನು ವಿರೋಧಿಸಿದ ಅಕ್ಕನಲ್ಲಿ ಪ್ರೇಮ, ವಿವಾಹ, ಸಂಸಾರ, ಪತಿ ವ್ಯವಸ್ಥೆಗಳ ಬಗ್ಗೆ ಅಪಾರವಾದ ಹಂಬಲವಿದೆ. ಅಂಥ ಸಂದರ್ಭಗಳಲ್ಲಿ ಅಕ್ಕನ ಅಭಿವ್ಯಕ್ತಿ ಸಾಮಾನ್ಯ ಸ್ತ್ರೀ ಬಯಸುವ ಪ್ರೇಮ ಪರಿಕಲ್ಪನೆ, ಭಾವನಾತ್ಮಕ ಸೂಕ್ಷ್ಮತೆಗಳನ್ನು ಒಬ್ಬ ಮಹಿಳೆಯಾಗಿ

ವ್ಯಕ್ತಗೊಳಿಸುವ ಭಾವನೆಗಳಿಂತಿವೆ. ಅಕ್ಕನ ಜೀವನದಲ್ಲಿ ವಿವಾಹ ಸಂಬಂಧದ ಸಂದರ್ಭ ಒದಗಿ ಬಂದಿದ್ದರೂ ತನ್ನ ಮೂಲ ಧೋರಣೆಯನ್ನು ಬದಲಿಸಿಕೊಳ್ಳದೆ ತಂದೆತಾಯಿಗೆ ಬಂದ ಸಮಸ್ಯೆಯನ್ನು ಬಿಡಿಸಿಕೊಳ್ಳಲು ಸಮ್ಮತಿ ನೀಡಿದ್ದರೂ ತನ್ನ ಆದರ್ಶಕ್ಕೆ ಚ್ಯುತಿ ತಂದುಕೊಳ್ಳುವುದಿಲ್ಲ. ಇದರರ್ಥ ಒಬ್ಬ ಮಹಿಳೆಗೆ ಒಬ್ಬನೇ ಪತಿ. ತಾನೊಲಿದದ್ದು ಸಾವಿಲ್ಲದ ಸಂಗಾತಿಗೆ ಕಾರಣ ಸಾವಿರುವ ಲೌಕಿಕದ ಇನ್ನೊಬ್ಬ ಪತಿಯನ್ನು ಮನ್ನಿಸಲಾರಳು. ಇದು ಪರ್ಯಾಯವಾಗಿ ಲೌಕಿಕದ ಪಾತಿವೃತ್ಯದ ಧೋರಣೆಯನ್ನು ಸೂಚಿಸುತ್ತದೆ.

ಆದರೆ ಸಿದ್ಧ ಸಮಾಜದ ಮಾದರಿಯ ಲೌಕಿಕ ಪಾತಿವೃತ್ಯದ ಹಿಂಸಾತ್ಮಕ ಅಸಹಜ ನೈಸರ್ಗಿಕ ವಿರುದ್ಧದ ಸ್ವರೂಪದಂತಲ್ಲ. ಅಕ್ಕನ ಪಾತಿವೃತ್ಯ ಪಾರಲೌಕಿಕ ನೆಲೆಯುಳ್ಳದ್ದು "ಲೋಕವಾಸ್ತವದಲ್ಲಿ ಗಂಡ ಹೆಂಡತಿಯರು ಆರೋಗ್ಯಕರವಾದ ರೀತಿಯಲ್ಲಿ ಸಂಬಂಧ ಹೊಂದುವುದು ಸಾಧ್ಯವಿಲ್ಲದ ಸ್ಥಿತಿಯನ್ನು ಅಲೌಕಿಕ ಗಂಡನಾದ ಚೆನ್ನಮಲ್ಲಿಕಾರ್ಜುನನ ಸ್ವರೂಪದಲ್ಲಿ ಮಾತ್ರ ಆಶಿಸಲಾಗಿದೆ. ಅದಕ್ಕಾಗಿಯೇ ಲೋಕದ ಗಂಡಂದಿರ ಸ್ವರೂಪಕ್ಕಿಂತ ಅವನ ಸ್ವರೂಪ ಭಿನ್ನವಾದದ್ದು. ಆ ಕಾರಣಕ್ಕಾಗಿಯೇ ಅಕ್ಕಳಿಗೆ ಅವನಿಷ್ಟ."[೨೦]

ಪತಿಯ ಪಾತ್ರವನ್ನು ವೈಭವೀಕರಿಸಿ ಸ್ತ್ರೀ ಶೋಷಣೆಯ, ಅಧೀನ ಸಂಸ್ಕೃತಿಗೆ ಗುರಿಮಾಡುವ ಸಿದ್ಧ ಸಂಸ್ಕೃತಿಯ ನೆಲೆಯನ್ನು ನಿರಾಕರಿಸುವ ಮಹಾದೇವಿಯಕ್ಕ ಮನುಷ್ಯ ಸಹಜವಾದ ಮದುವೆ ಸಂದರ್ಭ ಅವಳಿಗೆ ಕೂಡಿಬಂದರೂ ಚೆನ್ನಮಲ್ಲಿಕಾರ್ಜುನನಿಗೆ ತನ್ನನ್ನು ತಾನು ಸಮರ್ಪಿಸಿಕೊಂಡು ಲೌಕಿಕದ ವಿವಾಹದಿಂದ ಭಿನ್ನವಾಗಿಯೇ ಉಳಿಯುತ್ತಾಳೆ. ವಿವಾಹ ಸಂಬಂಧವನ್ನು ಗೌರವಿಸುವ, ಒಪ್ಪಿಕೊಳ್ಳುವ ಅಕ್ಕನಿಗೆ ಲೌಕಿಕದ ಅಮಾನವೀಯ ಅನಾರೋಗ್ಯಕರ ಅಸಮಾನ ಸಂಬಂಧಗಳ ವಿವಾಹ ಕಷ್ಟವೆನಿಸಿದೆ. ಆದರೆ ವಿವಾಹ ಪರಿಕಲ್ಪನೆಯನ್ನು ಅಲ್ಲಗಳೆಯುವುದಿಲ್ಲ. ಆದ್ದರಿಂದ ಅಕ್ಕ ಸ್ತ್ರೀ ವಿರೋಧಿ ನೆಲೆಗಳನ್ನು ನಿರಾಕರಿಸುತ್ತಲೇ ಮಹಿಳೆಗೆ ಮನ್ನಣೆಯಿರುವ ವ್ಯವಸ್ಥೆಯೊಂದನ್ನು ಆಶಿಸುವ ಅವಳಲ್ಲಿ ಪ್ರಗತಿಪರ ಮಹಿಳಾ ದೃಷ್ಟಿಕೋನವು ವ್ಯಕ್ತವಾಗಿದೆ. ಅವಳದು ಮಧುರಭಕ್ತಿ ಅಂದರೆ "ಶರಣಸತಿ ಲಿಂಗಪತಿ" ತತ್ವದಿಂದ ಕೂಡಿದ್ದು, ಅವಳು ಹುಟ್ಟಿನಿಂದಲೇ ಸ್ತ್ರೀ ಆಗಿರುವುದರಿಂದ ತನ್ನ ವಧುತ್ವವನ್ನು ಚೆನ್ನಮಲ್ಲಿಕಾರ್ಜುನನೆಂಬ ಪಾರಮಾರ್ಥಿಕ ವರನಿಗೆ ಅರ್ಪಿಸಿಕೊಂಡು ಬಿಡುತ್ತಾಳೆ. ಈ ಅರ್ಪಣ ಭಾವದಲ್ಲಿಯೇ ಸಾಮಾನ್ಯ ಮಹಿಳೆಯರಿಗಿರುವ ಮದುವೆ ಕಲ್ಪನೆಯೂ ಅವಳಿಗಿದೆ. ಮದುವೆಯ ಮಂಟಪ, ಅದರ ಸ್ವರೂಪ, ಪುರೋಹಿತರು, ಅದರಲ್ಲಿರುವ ವಧುವರರು ಇವೆಲ್ಲ ಭಾವವನ್ನು ಉಳಿಸಿಕೊಂಡು ಆಧ್ಯಾತ್ಮಿಕ ಅನುಭಾವಿಕ ಪ್ರತಿಮೆಯಲ್ಲಿ ಮದುವೆ ಮಂಟಪದ ಚಿತ್ರಣವನ್ನು ಕಟ್ಟಿಕೊಡುವ ಅಕ್ಕಮಹಾದೇವಿಗೆ ಮದುವೆ ಸಮಾರಂಭದ ಆಚರಣೆ, ಗೊತ್ತಿರುವು ದರಿಂದಲೇ ಯುವತಿಯ ಪರಿಕಲ್ಪನೆಯ ವಿವಾಹ ಸಮಾರಂಭದ ಸಂಭ್ರಮವಿದೆ. ಸ್ತ್ರಿಸಹಜವಾದ ಭಾವನಾತ್ಮಕ ಅಪ್ಯಾಯಮಾನತೆಯಿದೆ.

"ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿ,
ಆಲಿಕಲ್ಲ ಹಸೆಯ ಹಾಸಿ ಬಾಸಿಗವ ಕಟ್ಟಿ,
ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದನು.
ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ.
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ
ಮದುವೆಯ ಮಾಡಿದರೆಲೆ ಅವ್ವಾ"[೨೧]

"ಗುರುವೆ ತೆತ್ತಿಗನಾದ,
ಲಿಂಗವೆ ಮದುವಣಿಗನಾದ, ನಾನೆ ಮದುವಳಿಗೆಯಾದೆನು.
ಈ ಭುವನವೆಲ್ಲರಿಯಲು ಅಸಂಖ್ಯಾತರೆನಗೆ ತಾಯಿತಂದೆಗಳು.
ಕೊಟ್ಟರು ಸಾದೃಶ್ಯವಪ್ಪ ವರನ ನೋಡಿ.
ಇದು ಕಾರಣ ಚೆನ್ನಮಲ್ಲಿಕಾರ್ಜುನನೆ ಗಂಡನೆನಗೆ.
ಮಿಕ್ಕಿನ ಲೋಕದವರೆನಗೆ ಸಂಬಂಧವಿಲ್ಲವಯ್ಯಾ ಪ್ರಭುವೆ."[೨೨]

ಮಹಾದೇವಿಯಕ್ಕನ ಮದುವೆ ಪ್ರತಿಮೆಯಲ್ಲಿ ಮಂಟಪವಿದೆ, ಹಸೆಯಿದೆ. ವರನಿದ್ದು ತಾನೆ ವಧುವಾಗಿ ಸಿದ್ಧಗೊಂಡಿದ್ದಾಳೆ. ಗುರು ತೆತ್ತಿಗ(ಪುರೋಹಿತ)ನಾಗಿರುವ ವಿವಾಹದಲ್ಲಿ ಅಸಂಖ್ಯಾತ ಬಂಧುಬಳಗವಿದೆ. ಸಯವಪ್ಪ(ಯೋಗ್ಯ) ಗಂಡನಿಗೆ ಕೊಟ್ಟು ಮದುವೆ ಮಾಡಿದರೆಂಬ ಮಹಿಳೆಯ ಮದುವೆಯ ದೃಷ್ಟಿಕೋನವಿದ್ದರೂ, ಅಲ್ಲಿಯ ಪ್ರತಿಮೆಗಳೆಲ್ಲ ಶುದ್ಧ ಪಾರಮಾರ್ಥಿಕ ಅರ್ಥದಿಂದ ಕೂಡಿವೆ. ಇಲ್ಲಿ ಎರಡು ಸಂಗತಿಗಳನ್ನು ನಾವು ಗಮನಿಸಬೇಕು. ಮದುವೆಯೆಂಬುದೇ ಪ್ರಾಪಂಚಿಕರ ಸಮಾರಂಭ. ಅಂದರೆ ಮಹಾದೇವಿಯಕ್ಕನ ದೃಷ್ಟಿಕೋನದಲ್ಲಿ ಒಬ್ಬ ಯುವತಿ ವಿವಾಹರಹಿತವಾಗಿರ ಬೇಕೆಂಬ ಭಾವನೆಯಿಲ್ಲ. ವಿವಾಹ ಸಹಿತವಾಗಿರಬೇಕೆಂಬುದೇ ಅವಳ ನಿಲುವು. ಆದರೆ ಆ ಸಂಬಂಧ ಸಮರಸದಿಂದ ಕೂಡಿರಬೇಕಲ್ಲದೇ ಶೋಷಣೆಯ ನೆಲೆಯಾಗಿರಬಾರದು ಎಂಬ ಉದಾತ್ತ ಧೋರಣೆಯಿದೆ.

ಅನುಭಾವಿಕ ಭಕ್ತಿ ಪ್ರಪಂಚದ ಅಸಾಮಾನ್ಯ ಮಹಿಳೆಯಾಗಿದ್ದರೂ ಮಹಾದೇವಿಯಕ್ಕ ಮದುವೆ ಸಂಬಂಧದ ಪರಿಕಲ್ಪನೆಯನ್ನು ಧನಾತ್ಮಕ ಚಿಂತನೆಯಾಗಿ ಪರಿವರ್ತಿತಗೊಳ್ಳಬೇಕೆಂಬ ಆಶಯ ಹೊಂದಿರುವುದರಿಂದ ಹೆಣ್ಣಿನ ಸಮಾನ ಮಾನವೀಯ ಸಂಬಂಧಗಳನ್ನು ಮನ್ನಿಸುವ ಮಹಿಳಾದೃಷ್ಟಿಕೋನ ಅವಳಲ್ಲಿದೆ. ಲೌಕಿಕದ ಮಹಿಳಾ ಸಂವೇದನೆಗಳನ್ನು ಅರಿತಿರುವ ಅಕ್ಕಮಹಾದೇವಿ ಮದುವೆ ಮಹಿಳೆಗೆ ಮಾನ್ಯತೆ ತಂದುಕೊಡುವ ವ್ಯವಸ್ಥಿತ ಸಂಬಂಧವಾಗಿರಬೇಕೆಂಬುದನ್ನು

ಬಯಸುತ್ತಾಳೆ. ಆ ವ್ಯವಸ್ಥೆ ಹೆಣ್ಣಿಗೆ ಹುಣ್ಣಾಗಿ ಹೊರೆಯಾಗಿ ಹೆಣವಾಗಿಸಬಾರದೆಂಬ ಒತ್ತಾಸೆಯನ್ನು ಹೊಂದಿದ್ದಾಳೆ.

ಆಧುನಿಕ ಸಂದರ್ಭದ ಹೆಣ್ಣುಮಕ್ಕಳು ಅಕ್ಕನು ಹೊಂದಿದ ಆಶಯವನ್ನು ಹೊಂದಿದ್ದು, ಸ್ತ್ರೀವಾದಿ ನೆಲೆಯ ಚಿಂತನೆಯ ಮಹಿಳಾ ಸಮುದಾಯ ಅಕ್ಕನ ಆಶಯವನ್ನು ಅಪ್ಪಿಕೊಂಡಿದೆ. ಅಕ್ಕಮಹಾದೇವಿ ಮದುವೆ, ಪ್ರೇಮ, ಕಾಮ, ಲೈಂಗಿಕತೆ, ಗಂಡ ಹೆಂಡತಿಯರ ಸಂಬಂಧದ ವಿಷಯಗಳನ್ನು ನಿರಾಕರಿಸುವುದಿಲ್ಲ. ಆದರೆ ಆ ವಿಷಯ ಸಂಬಂಧಿಯಾದ ನೇತ್ಯಾತ್ಮಕ ವಿಚಾರಗಳನ್ನು ವಿರೋಧಿಸಿ ಹೊಸ ವ್ಯಾಖ್ಯಾನಗಳನ್ನು ನೀಡುವ ಅವಳ ಸ್ತ್ರೀವಾದ ಆಧುನಿಕವಾದದ್ದು. ಅಕ್ಕ ವೈಯಕ್ತಿಕ ನೆಲೆಯಲ್ಲಿ ಸಾಮಾಜಿಕ ವಿಷಮತೆಗಳನ್ನು ಪ್ರಶ್ನಿಸಿ ಪ್ರತಿಭಟಿಸುವಳು. ಪ್ರಗತಿಪರವಾದ ಪರಿಹಾರವನ್ನು ಕಂಡುಕೊಳ್ಳುವ ಅವಳ ಧೋರಣೆ ಆಧುನಿಕ ಸಮಕಾಲೀನ ಸ್ತ್ರೀವಾದಕ್ಕೆ ಹೊಸತೊಂದು ನೆಲೆಯ ಮುನ್ಸೂಚನೆಯನ್ನು ನೀಡುತ್ತದೆ.

ಪಿತೃಪ್ರಧಾನ ಮೌಲ್ಯ ವ್ಯವಸ್ಥೆಯಲ್ಲಿ ಪುರುಷರಿಗಿರುವ ಆಯ್ಕೆ ಸ್ವಾತಂತ್ರ್ಯ ಸ್ತ್ರೀಯರಿಗಿಲ್ಲ. ಪುರುಷನಿಗೆ ಆಯ್ಕೆ ಸ್ವಾತಂತ್ರ್ಯವನ್ನು ಕಲ್ಪಿಸಿದ ಸಮಾಜವ್ಯವಸ್ಥೆ ಸ್ತ್ರೀಯರಿಗೆ ಸಂದರ್ಭಗಳನ್ನು ಮಾತ್ರ ಒದಗಿಸುತ್ತದೆ. ಮೊದಲಿನಿಂದಲೂ, ಇಂದೂ ಸಹ ಪುರುಷ ತನಗೆ ಯೋಗ್ಯವಾದ ವಧುವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಮುಕ್ತ ಅವಕಾಶವನ್ನು ನೀಡಿದೆ. ಆದರೆ ಹೆಣ್ಣಿನ ವಿಷಯದಲ್ಲಿ ವರನ ಆಯ್ಕೆಯನ್ನು ವ್ಯಕ್ತಿಗತ ನೆಲೆಯಲ್ಲಿ ನಿರಾಕರಿಸುವ ಒಂದುವೇಳೆ ಆಯ್ಕೆ ಮಾಡಿಕೊಂಡರೆ ತಿರಸ್ಕರಿಸುವ, ಯುವತಿಯ ಮದುವೆಯ ಆಯ್ಕೆಯನ್ನು ಪುರುಷ ಸಂಬಂಧೀ ಪೋಷಕ ವ್ಯವಸ್ಥೆಯೇ ನಿರ್ಧರಿಸುವ ಪರಿಸ್ಥಿತಿ ಇಂದಿಗೂ ಮುಂದುವರಿದಿದೆ. ಅಲ್ಲಲ್ಲಿ ಕ್ವಚಿತ್ತಾಗಿ ಯುವತಿಯ ವಿವಾಹ ಸಂಬಂಧದ ವರನ ಆಯ್ಕೆಯನ್ನು ಮನ್ನಿಸುವ ಪೋಷಕರು ಸಿಗುತ್ತಾರಾದರೂ ಅದು ಬಹುಸಂಖ್ಯಾತರ ವಿಷಯದಲ್ಲಿ ಇನ್ನೂ ಅಸ್ತಿತ್ವ ಕಾಣದ ವಿಚಾರವಾಗಿದೆ.

ಹೆಣ್ಣು ತನಗೆ ಬೇಕಾದ ವರನನ್ನು, ಗಂಡನನ್ನು ಆಯ್ಕೆ ಮಾಡಿಕೊಳ್ಳುವ ಮುಕ್ತ ಸ್ವಾತಂತ್ರ್ಯವನ್ನು ಇಂದಿಗೂ ನಮ್ಮ ಸಮಾಜದಲ್ಲಿ ಪೂರ್ಣಪ್ರಮಾಣದಲ್ಲಿ ನೀಡಲಾಗಿಲ್ಲ. ಹೆಣ್ಣಿನ ಆಯ್ಕೆಯನ್ನು ಸಾಂಪ್ರದಾಯಿಕ ವ್ಯವಸ್ಥೆ ಸಮಕಾಲೀನ ಸಂದರ್ಭದಲ್ಲಿ ಸಂಶಯದಿಂದಲೇ ನೋಡುತ್ತದೆ. ಬಹಳಷ್ಟು ಸಂದರ್ಭಗಳಲ್ಲಿ ಪುರುಷಕೇಂದ್ರಿತ ಅದರ ಸಂಬಂಧಿತ ವಿಚಾರಗಳನ್ನು ಮನ್ನಿಸುವ ಮಹಿಳೆಯರು ಕೂಡ ತಿರಸ್ಕರಿಸುತ್ತಾರೆ. ಸ್ತ್ರೀ ಸಬಲೀಕರಣ, ಸಶಕ್ತೀಕರಣವನ್ನು ಪ್ರತಿಪಾದಿಸುವ ಆಧುನಿಕ ಸಮಕಾಲೀನ ಮಹಿಳಾ ಸಂದರ್ಭದಲ್ಲಿಯೂ ಸಶಕ್ತೀಕರಣದ ಚಿಂತನೆಗಳಲ್ಲೊಂದಾದ ಆಯ್ಕೆಯ ಸ್ವಾತಂತ್ರ್ಯವನ್ನು ಹಲವು ಅಷ್ಟೇಕೆ, ಬಹುತೇಕ ಸಂದರ್ಭಗಳಲ್ಲಿ ಮಹಿಳೆ, ಯುವತಿಯರಿಗೆ ನಿರಾಕರಿಸಲಾಗುತ್ತದೆ.

ಆದರೆ ಮಹಾದೇವಿಯಕ್ಕನ ಮಹಿಳಾಪರ ಚಿಂತನೆಗಳು ಆಧುನಿಕ ಸಂದರ್ಭದ ಯುವತಿಯರಿಗಿಂತಲೂ ಪ್ರಗತಿಪರವಾದವುಗಳು. ಅಕ್ಕಮಹಾದೇವಿ ತನಗೆ ಯೋಗ್ಯನಾದ ವರನನ್ನು ಆಯ್ಕೆಮಾಡಿಕೊಳ್ಳುವ ಸ್ವಾತಂಂತ್ರ್ಯವನ್ನು ಸ್ವಯಂ ಸಾಧಿಸಿಕೊಂಡವಳಲ್ಲದೆ, ತನಗೆ ಬೇಡವಾದ ಗಂಡನನ್ನು ತಿರಸ್ಕರಿಸುವ ಮನೋಬಲವನ್ನು, ದೃಢನಿಲುವನ್ನು ಹೊಂದಿದ್ದ ಧೀರತೆ, ಧೀಮಂತಿಕೆಯ ವ್ಯಕ್ತಿತ್ವದ ಹೆಣ್ಣಾಗಿ ಸಾಕ್ಷೀಕರಿಸಿಕೊಂಡಿದ್ದಾಳೆ. ಅವಳ ಆಯ್ಕೆಯ ಮತ್ತು ತಿರಸ್ಕರಿಸುವ ಸ್ವತಂತ್ರ ಮನೋವೃತ್ತಿಯಲ್ಲಿ ಮಹಿಳಾ ಪರವಾದ ಮುಕ್ತತೆಯ, ಮಾನ್ಯತೆಯನ್ನೇ ಪ್ರತಿನಿಧಿಸಿದ್ದಾಳೆ.

ಸಮಕಾಲೀನ ಸಂದರ್ಭದಲ್ಲಿಯೂ ಸ್ತ್ರೀ ಶೋಷಣೆಯ ಅಸಹನೀಯವಾದ ಬದುಕನ್ನು ಸಹ್ಯವಾಗಿಸಿಕೊಂಡು ಬವಣೆಯ ಭಯಂಕರವಾದ ಬದುಕನ್ನೇ ಬದುಕುತ್ತಿರುವ ಸ್ತ್ರೀಯರ ಪ್ರತಿನಿಧಿಯಲ್ಲ ಅಕ್ಕಮಹಾದೇವಿ. ತನ್ನ ಮನಸ್ಸಿಗೆ ಹಿಡಿಸದ ವಿವಾಹ, ಪತಿ, ಕೌಟುಂಬಿಕ ವ್ಯವಸ್ಥೆ, ಸಾಮಾಜಿಕ ಸಂಪ್ರದಾಯಗಳನ್ನೆಲ್ಲ, ಪುರುಷಕೇಂದ್ರಿತ ಸಿದ್ಧ ಸಮಾಜದ ಸ್ವಾರ್ಥಕೇಂದ್ರಿತ ತಂತ್ರಗಳನ್ನೆಲ್ಲ ಮೀರುವ ದೃಢತೆಯನ್ನು ಹೊಂದಿದ ಹೆಣ್ಣಾಗಿ ತೀವ್ರ ಬಂಡಾಯ ಗಾರ್ತಿಯಾಗಿಯೂ ಅಕ್ಕಮಹಾದೇವಿ ಗೋಚರಿಸುತ್ತಾಳೆ. ಸ್ತ್ರೀಶೋಷಣೆಯ ವಿರುದ್ಧದ ಧ್ವನಿ ಅವಳ ಅಭಿವ್ಯಕ್ತಿಯಲ್ಲಿ ಅನುರಣಿತವಾಗಿದೆ.

"ಎರದ ಮುಳ್ಳಿನಂತೆ ಪರಗಂಡರೆನಗವ್ವಾ,
ಸೋಂಕಲಮ್ಮೆ, ಸುಳಿಯಲಮ್ಮೆ;
ನಂಬಿ ನಚ್ಚಿ ಮಾತಾಡಲಮ್ಮೆನವ್ವಾ,
ಚೆನ್ನಮಲ್ಲಿಕಾರ್ಜುನನಲ್ಲದ ಗಂಡರಿಗೆ
ಉರದಲ್ಲಿ ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ"[೨೩]

"ಎಮ್ಮೆಗೊಂದು ಚಿಂತೆ; ಸಮಗಾರಗೊಂದು ಚಿಂತೆ
....
....
ಒಲ್ಲೆ ಹೋಗು ಸೆರಗ ಬಿಡು ಮರುಳೆ
...."[೨೪]

"ಸತ್ತಾದಡೆ ಶರೀರಂ ಪೋದಡೆ ಪೋಗಲಿ
ಲೋಕದ ಗಂಡರನೊಲ್ಲೆ"[೨೫]

"ಸಾವಿಲ್ಲದ ಕೇಡಿಲ್ಲದ ಚಲುವಂಗಾನೊಲಿದೆನವ್ವ

....

....

ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ”[೨೬]

ಅಕ್ಕಮಹಾದೇವಿಯ ಅಭಿವ್ಯಕ್ತಿ ಸ್ವರೂಪವು ಅಪ್ಪಟ ಸ್ತ್ರೀವಾದಿ ಚಿಂತನಾಕ್ರಮವನ್ನೇ ಹೊಂದಿದೆ. ಹೆಣ್ಣಿಗಿರಬೇಕಾದ ಆಯ್ಕೆಯ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಅಕ್ಕಮಹಾದೇವಿ ತನ್ನಿಚ್ಛೆಗೆ ವಿರುದ್ಧವಾದುದನ್ನು ತಿರಸ್ಕರಿಸಿ ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ ಇನ್ನಿತರ ಎಲ್ಲ ಆಯಾಮಗಳ ಮಹಿಳಾ ದೌರ್ಜನ್ಯ, ಹಿಂಸೆಯನ್ನು ವಿರೋಧಿಸಿ, ಹೊರನಡೆವ ಹೆಣ್ಣಾಗಿಯೂ ದಿಟ್ಟತನವನ್ನು ತೋರಿದ್ದಾಳೆ. ಮಾನವತಾವಾದಿ ನೆಲೆಯಲ್ಲಿ ಮಹಿಳೆಯ ಗ್ರಹಿಕೆಯ ನೆಲೆಯನ್ನು ಅಕ್ಕ ಪ್ರತಿನಿಧಿಸುತ್ತಾಳೆ. ಭೋಗದ ವಿಷಯ ವಸ್ತುವಾಗಿ ಪರಿಗಣಿಸಿದ ಪುರುಷ ಪ್ರಕ್ರಿಯೆಯನ್ನು ಪ್ರಶ್ನಿಸಿ, ಪ್ರತಿರೋಧವನ್ನು ಒಡ್ಡಿದ ಅಕ್ಕಮಹಾದೇವಿ ಆಧುನಿಕ ಸಮಕಾಲೀನ ಸಮಾಜ ವ್ಯವಸ್ಥೆಯಲ್ಲಿ ಭೋಗದ ವಸ್ತುವನ್ನಾಗಿ ಪರಿಗಣಿಸಿದ 'ಬಹುಪತ್ನಿತ್ವ'ವನ್ನು ವಿಮರ್ಶಿಸಿ ಮಹಿಳೆಯರ ಬದುಕಿಗೆ ಕಂಟಕಪ್ರಾಯವಾದ ಪುರುಷ ಪರಮಾಧಿಕಾರದ ಪ್ರತೀಕವಾದ ಬಹುಪತ್ನಿತ್ವ ಪದ್ಧತಿ ಹೆಣ್ಣನ್ನು ಸರ್ವವಿಧದಿಂದ ಹನನ ಮಾಡುವ ಹುನ್ನಾರವೆಂಬುದನ್ನು ಅರಿತುಕೊಂಡ ಸ್ತ್ರೀ ವಿಮೋಚನಾ ಚಳುವಳಿಯ ನೇತಾರಳಾಗಿಯೂ ತನ್ನ ಕಾಲಕ್ಕೆ ಪ್ರತಿಕ್ರಿಯಿಸಿದ್ದಾಳೆ. ಅವಳ ಬಹುಮುಖಿ ನೆಲೆಯ ಮಹಿಳಾ ಚಿಂತನೆಗಳು ತನ್ನ ಕಾಲಮಾನದ ಸ್ತ್ರೀ ಅಸಮಾನತೆ, ಅಧೀನತೆಗೆ, ಪುರುಷ ಕೇಂದ್ರಿತ ಭೋಗ, ಸ್ವಾರ್ಥ, ಪ್ರಭುತ್ವ, ಪುರೋಹಿತಶಾಹಿ ಸಿದ್ಧಮೌಲ್ಯಗಳೊಡನೆ ಸಂಘರ್ಷದ ನೆಲೆಯಿಂದ ಸಮಾನತೆಯ, ಮಾನವೀಯ ಸಹಜ ಮೌಲ್ಯಗಳು ಮಹಿಳೆಗೆ ದೊರಕಬೇಕೆನ್ನುವ ಆಧುನಿಕ ಸ್ತ್ರೀವಾದವನ್ನು ಅಕ್ಕ ಮಂಡಿಸಿದ್ದಾಳೆ.

ನಮ್ಮ ಪ್ರಾಚೀನ ಪರಂಪರೆಯಿಂದ ತನ್ನ ಸಮಕಾಲೀನ ಶರಣರ ವಚನಚಳುವಳಿ ಕಾಲಘಟ್ಟದವರೆಗೂ ಅನೂಚಾನವಾಗಿ ಜಾರಿಯಲ್ಲಿದ್ದ ಬಹುಪತ್ನಿತ್ವ ಪದ್ಧತಿಯನ್ನು ಒರೆಗೆ ಹಚ್ಚುವ ಅಕ್ಕಮಹಾದೇವಿ ಸ್ತ್ರೀಸಮಾನತೆಯ ಪ್ರತಿಪಾದಕರಾದ ಬಸವಣ್ಣನವರು ಹೊಂದಿದ್ದ ದ್ವಿಪತ್ನಿತ್ವವನ್ನು ಪ್ರಶ್ನಿಸುವ ಮೂಲಕ ಶರಣ ಸಮುದಾಯದಲ್ಲಿದ್ದ ಆಂತರಿಕ ವೈರುಧ್ಯಗಳನ್ನು ವಿಡಂಬಿಸುವಳು. ಪರಂಪರೆಯಲ್ಲಿ ಸಿದ್ಧ ಸಾಮಾಜಿಕ ಸಂರಚನೆಯಲ್ಲಿರುವ ಪುರುಷ ತಾನು ಹೊಂದಿದ ಸ್ಥಿತಿಗಳನ್ನು, ದೈವತ್ವಕ್ಕೂ ಹೊರಿಸಿ ಶಿವನನ್ನು ದ್ವಿಪತ್ನೀ ಸಮೇತವಾಗಿ ಚಿತ್ರಿಸಿದ ಅಸಹಜ ನಡವಳಿಕೆಯನ್ನು ಅಕ್ಕಮಹಾದೇವಿ ವಿರೋಧಿಸುವಳು. ತನ್ನ ನೆಲೆಗಳಿಗೆ ದೈವತ್ವದ ಪುರಾವೆಯನ್ನು ಸೃಷ್ಟಿಸಿಕೊಂಡು ಸುರಕ್ಷತೆ, ಸಾಕ್ಷ್ಯಪ್ರಮಾಣಗಳನ್ನು, ಪುರಾಣ ಕಾವ್ಯಗಳಲ್ಲಿ ರಚಿಸಿ ಹೆಣ್ಣನ್ನು ಹಗುರವಾಗಿಯೇ ಕಂಡುಕೊಂಡ, ನಡೆಸಿಕೊಂಡು ಬಂದ ರೀತಿಯನ್ನು ಅಕ್ಕಮಹಾದೇವಿ 'ಹಿರಿತನದ ಕೇಡು' ಎಂದೇ ಹಳಿದಿರುವಳು. ಸ್ಥಾಪಿತ ಸಮಾಜದ ಸಿದ್ಧ ಮೌಲ್ಯಗಳಿಗೆ ವಾರಸುದಾರನಾಗುತ್ತಿರುವ ಪುರುಷ

ಪ್ರಪಂಚ ಮಹಿಳೆಯರ ಮನಸ್ಥಿತಿಯನ್ನು ಅರಿತುಕೊಳ್ಳುವ ಮಾನವೀಯ ನಡವಳಿಕೆಯನ್ನು ತೋರದಿರುವುದರಿಂದ ಪರಂಪರೆಯು ಬಿತ್ತಿ ಬೆಳೆದ ಸ್ತ್ರೀತನದ ಅಸಮಾನ ಮೌಲ್ಯಗಳು ಆಯಾ ಕಾಲಮಾನ, ಸಂದರ್ಭಗಳಲ್ಲಿ ಅಡೆತಡೆಯಿಲ್ಲದೆ ಆಚರಣೆಯಲ್ಲಿದ್ದುದರಿಂದ ಜಗತ್ತಿನ ಅರ್ಧಭಾಗ ದಷ್ಟಿರುವ ಸ್ತ್ರೀ ಸಮುದಾಯ ಸಮಾನ ನೆಲೆಗಳಿಂದ ವಂಚಿತಗೊಳ್ಳುತ್ತಲೇ ಬಂದಿದೆ.

ಸಮಾಜ ಸಂರಚನೆಗೆ ಧಾರ್ಮಿಕ ವಿಚಾರಣೆಗಳ ಪ್ರನಾಳಿಕೆಯನ್ನು ಹೆಣೆದು ಹೆಣ್ಣನ್ನು ಹಳಿದಿರುವ ಮತೀಯ ಮಾಯಾ ವಿಚಾರ ಸರಣಿಯನ್ನು ಅಕ್ಕಮಹಾದೇವಿ ಭಗ್ನಗೊಳಿಸಿರುವುದು ಆ ಕಾಲಕ್ಕೆ ಅವಳು ತೋರಿದ ಬಹುದೊಡ್ಡ ಪ್ರತಿರೋಧವೆನಿಸಿದೆ. ಮತಾಂಧಿಗಳ ಮಾಯಾವಾದಕ್ಕೆ ಶರಣರು ಪುನರ್ ವ್ಯಾಖ್ಯಾನ ನೀಡಿದ ಹಾದಿಯಲ್ಲಿ ಒಂದು ಹೆಜ್ಜೆ ಮುಂದಡಿಯಿಟ್ಟ ಅಕ್ಕಮಹಾದೇವಿ ಹೆಣ್ಣನ್ನು ಧಾರ್ಮಿಕ ವಲಯದಿಂದ ಬೇರ್ಪಡಿಸಿದ ಪುರೋಹಿತಶಾಹಿಯ ಷಡ್ಯಂತ್ರವನ್ನು ಭೇದಿಸಿ, ಪುರುಷ ದೃಷ್ಟಿಕೋನಕ್ಕೆ ನವವಿಚಾರದ ಬೆಳಕನ್ನು ಹಿಡಿದು ಹೆಣ್ಣಿನ ಅಸ್ತಿತ್ವವನ್ನು ಹೆಣ್ಣಿನ ನೆಲೆಯಿಂದಲೇ ಪ್ರತಿಪಾದಿಸಿದ್ದಾಳೆ.

ಪುರುಷನ ಸಾಧನೆಗೆ ಸ್ತ್ರೀ ತೊಡಕು, 'ಮಾಯೆ'ಯ ಮುಸುಕು ತೊಡಿಸಿ, ಅದನ್ನೇ ನಂಬಿಸಿ, ಧರ್ಮಾಚರಣೆಗಳಿಂದ ಮಹಿಳೆಯನ್ನು ಬಹಿಷ್ಕರಿಸಿದ, ಧರ್ಮಸಂಸ್ಕಾರಗಳಿಂದ ತಿರಸ್ಕರಿಸಿದ ಮಹಿಳೆಯನ್ನು ಪುರಸ್ಕರಿಸಿ ಮಹಾದೇವಿಯಕ್ಕ ಪುರುಷ ಸಾಧನೆಗೆ, ಅವನ ಸನ್ಯಾಸತ್ವಕ್ಕೆ ಸ್ತ್ರೀ ಅಡ್ಡಿಯಾದಂತೆ, ಸ್ತ್ರೀ ಸಾಧನೆಗೂ ಪುರುಷ ಮಾಯೆಯಾಗಿಯೇ ತೊಡಕುಂಟು ಮಾಡುವನೆಂಬ ಪರಿಷ್ಕರಿತ ವೈಚಾರಿಕ ಕ್ರಾಂತಿಯ ಮುಖೇನ ಮಹಾದೇವಿಯಕ್ಕ ದಿಟ್ಟತನದಿಂದಲೇ ಉತ್ತರಿಸಿದವಳು.

"ಪುರುಷನ ಮುಂದೆ ಮಾಯೆ
ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು.
ಸ್ತ್ರೀಯ ಮುಂದೆ ಮಾಯೆ
ಪುರುಷನೆಂಬ ಅಭಿಮಾನವಾಗಿ ಕಾಡುವುದು.
ಲೋಕವೆಂಬ ಮಾಯೆಗೆ ಶರಣಚಾರಿತ್ರ್ಯ
ಮರುಳಾಗಿ ತೋರುವುದು.
ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ
ಮಾಯೆಯಿಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ."[೨೭]

ಧಾರ್ಮಿಕ ವ್ಯವಸ್ಥೆಯಲ್ಲಿ ಹೆಣ್ಣಿನ ವ್ಯಕ್ತಿತ್ವವನ್ನು ನಕಾರಾತ್ಮಕವಾಗಿ ಪರಿಗಣಿಸಿ ಅದನ್ನೇ ಶಾಸ್ತ್ರ, ಪುರಾಣಗಳಲ್ಲಿ ಚಿತ್ರಿಸಿದ ಪುರುಷ, ಪುರೋಹಿತಶಾಹಿ ವ್ಯವಸ್ಥೆಯ ಷಡ್ಯಂತ್ರಗಳನ್ನು ಪಲ್ಲಟಗೊಳಿಸಿದ

ಅಕ್ಕಮಹಾದೇವಿ ಮಾಯಾವಾದದ ಮೂಲಬೇರನ್ನು ಬುಡಮೇಲು ಮಾಡಿದವಳು. ಅದರ ಸಂಬಂಧಿಯಾದ ಕುತ್ಸಿತ ವಿಚಾರ ಪ್ರನಾಳಿಕೆಗಳನ್ನು ಅಲ್ಲಗಳೆದು ಪುನರ್ ವ್ಯಾಖ್ಯಾನ ನೀಡಿದ ವೈಚಾರಿಕ ನಿಲುವಿನ ಅಕ್ಕಮಹಾದೇವಿ ಸ್ತ್ರೀ ಪುರುಷ ನೈಸರ್ಗಿಕ ನಿಯಮಗಳಿಂದ ಹೊರತಲ್ಲ. ಸ್ತ್ರೀತನಕ್ಕೆ ಆರೋಪಿಸಿದ ಮಾಯೆ ನೈಸರ್ಗಿಕ ನಿಯಮಗಳಿಗೆ ವಿರುದ್ಧವಾದ ಮಾನವ ನಿರ್ಮಿತ ಪೂರ್ವಾಗ್ರಹ ಕಲ್ಪನೆಯೆಂಬುದನ್ನು ಪ್ರತಿಪಾದಿಸಿ ಸತತ ಸಾಧನೆಯಿಂದ ತ್ರಿಕರಣ ಶುದ್ಧಿತ್ವ ಪಡೆದ ಶರಣತ್ವ ಸ್ಥಿತಿಯನ್ನು ಪಡೆಯುವಲ್ಲಿ ಸ್ತ್ರೀ ಪುರುಷರೆಂಬ ಭಾವ ಅಡಗಿ 'ಶರಣಸತಿ ಲಿಂಗಪತಿ' ಅನುಭಾವ ಅಳವಟ್ಟ ನಿಜಶರಣರಿಗೆ ಮಾಯೆ ಮೋಹ ಅಭಿಮಾನಗಳ ಹಂಗಿರದು. ಆ ಭಾವವನ್ನೇ ಷಟಸ್ಥಲ ಮಾರ್ಗದಿಂದ ಅನುಸಂಧಾನಗೈದು ಅನುಭಾವದ ಅನುಭೂತಿ ಹೊಂದಿದವರು ಹೆಣ್ಣು ಗಂಡೆಂಬ ಭಾವಗಳಿಗೆ ಅತೀತರಾದವರೆಂಬ ಸ್ಪಷ್ಟ ವಿಚಾರ ಗ್ರಹಿಕೆಯನ್ನು ಲೋಕವಾಸ್ತವದಲ್ಲಿ ಸಾಧಿಸಿ ತೋರಿದವರು, ಶರಣರು.

ಸನಾತನ ಸಿದ್ಧ ಮೌಲ್ಯಗಳನ್ನು ಮರು ವಿಮರ್ಶೆಗೊಳಪಡಿಸಿದ ಮಹಾದೇವಿಯಕ್ಕ ಧಾರ್ಮಿಕ ನೆಲೆಯ ನಕಾರಾತ್ಮಕ ವಿಚಾರಗಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿ ಧರ್ಮದ ಪರಂಪರೆಯ ದಮನಕಾರಿ ಕ್ರಮಗಳನ್ನು ಉಗ್ರವಾಗಿಯೇ ವಿಡಂಬಿಸಿ ಖಂಡಿಸಿದ್ದಾಳೆ.

"ಯೋಗಿಗೆ ಯೋಗಿಣಿಯಾಗಿಹಳು ಮಾಯೆ!
ಜೋಗಿಗೆ ಜೋಗಿಣಿಯಾಗಿಹಳು ಮಾಯೆ
ಶ್ರವಣಗೆ ಕಂತಿಯಾದಳು ಮಾಯೆ!
ಯತಿಗೆ ಪರಾಕಿಯಾದಳು ಮಾಯೆ!
ಹೆಣ್ಣಿಗೆ ಗಂಡು ಮಾಯೆ!
ಗಂಡಿಗೆ ಹೆಣ್ಣು ಮಾಯೆ!
ನಿಮ್ಮ ಮಾಯೆಗೆ ನಾನಂಜುವವಳಲ್ಲ ಚೆನ್ನಮಲ್ಲಿಕಾರ್ಜುನ."[೨೮]

ಪ್ರಾಚೀನ ಧಾರ್ಮಿಕ ಪರಂಪರೆ ಹಾಗೂ ವಿವಿಧ ಧರ್ಮಗಳ ಹಿನ್ನೆಲೆಯಲ್ಲಿ ಸ್ತ್ರೀಯರನ್ನು ವ್ಯಾಖ್ಯಾನಿಸಿದ ರೀತಿಯನ್ನು ವಿವಿಧ ಧಾರ್ಮಿಕ ಸಿದ್ಧಾಂತಗಳಲ್ಲಿ ಹೆಣ್ಣಿನ ಸ್ವರೂಪವನ್ನು ಪರಾಮರ್ಶಿಸಿ, ಸೂತ್ರೀಕರಿಸಿದ ಅಕ್ಕಮಹಾದೇವಿ ಆ ಎಲ್ಲ ಧಾರ್ಮಿಕ ಸಿದ್ಧಾಂತಗಳ ಸ್ತ್ರೀ ವಿರೋಧಿ ನಿರೂಪಣೆಯನ್ನು ನಿರಾಕರಿಸಿ, ನಿರ್ಬಿಡೆಯಿಂದ ಗಂಡು ಹೆಣ್ಣು ಪರಸ್ಪರ ಮಾಯೆ, ಮೋಹಗಳೆಂಬ ವಿಚಾರವನ್ನು ಕಟ್ಟಿಕೊಡುವವಳು. ತಾನು ಆ ವಿಚಾರಕ್ಕೊಳಗಾಗದ ವ್ಯಕ್ತಿತ್ವದವಳಾದ್ದರಿಂದ ಭಯವಿಲ್ಲದ ನಿರ್ಭಯ ಹೆಣ್ಣೆಂಬ ವಿಚಾರ, ಸ್ಥಾಪಿತ ಧರ್ಮದ ಕಟ್ಟಳೆಗೆ ಒಳಗಾಗದೇ ಸವಾಲನ್ನು ಎದುರಿಸುವ ಸಾಮರ್ಥ್ಯವುಳ್ಳ ಸ್ತ್ರೀಯಾಗಿ ರೂಪುಗೊಳ್ಳುವ ಹಂಬಲವನ್ನು ವ್ಯಕ್ತಗೊಳಿಸಿರುವಳು. ಧಾರ್ಮಿಕ ವಲಯದ ನೇತ್ಯಾತ್ಮಕ

ವಿಚಾರಗಳಿಗೆ ಅಂಜದ ಧೀರ ನಡೆ, ಸ್ವಯಂಕೃತ ಧಾರ್ಮಿಕ ರಹದಾರಿಯನ್ನು ನಿರ್ಮಿಸಿದ ಅಕ್ಕಮಹಾದೇವಿ ಆ ದಾರಿಯಲ್ಲಿ ತಾನೇ ಮೊದಲಾಗಿ ಅಂಜದೆ ಅಡಿಯಿಟ್ಟವಳು.

ಲೋಕದ ಪುರುಷರಿಗೆಲ್ಲ ಗಂಡನಾದ ದೇವನ ದೃಷ್ಟಿಯಲ್ಲಿ ಎಲ್ಲರೂ ಸ್ತ್ರೀಯರೇ! ಪುರುಷಕೇಂದ್ರಿತ ವ್ಯವಸ್ಥೆ ನಿರ್ಮಿತ ಸಾಂಸ್ಕೃತಿಕ ಸಂರಚನೆಯ ಸ್ತ್ರೀತನವನ್ನು ಅಕ್ಕ ವಿರೋಧಿಸುತ್ತಾಳೆ. ಆಧುನಿಕ ಸ್ತ್ರೀವಾದಿ ಚಿಂತಕಿ ದಿ ಸಿಮೊನ್ ಬುವಾಳ ವಿಚಾರ ಸರಣಿಯನ್ನು ಅನುಸರಿಸಿ ಹೇಳುವುದಾದರೆ "ಲಿಂಗ ವಿಭಜನೆ ಎಂಬುದು ಒಂದು ಜೈವಿಕ ಸಂಗತಿಯೇ ಹೊರತು ಮಾನವ ಚರಿತ್ರೆಯ ಒಂದು ಘಟನೆಯಲ್ಲ. ಅದಿಮ ಸಮೂಹಗಳೊಳಗೆ ಪುರುಷರು ಮತ್ತು ಸ್ತ್ರೀಯರು ಮುಖಾಮುಖಿ ಯಾದರು. ಈ ಬಂಧವನ್ನು ಹೆಂಗಸು ಮುರಿದಿಲ್ಲ. ಎರಡು ಅರ್ಧಗಳು ಜೊತೆಯಾಗಿ ಬೆಸೆದು ಕೊಂಡಾಗ ಮೂಲಗಾಮಿ ಏಕರೂಪಿಯಾಗಿ ಈ ಜೋಡಿ ಆಕಾರ ಪಡೆದಿದೆ. ಸಮಾಜದಲ್ಲಿ ಲಿಂಗಾನುಸಾರಿಯಾಗಿ ಬಿರುಕು ಮೂಡಿಸುವುದು ಅಸಾಧ್ಯ. ಇಲ್ಲಿಯೇ ಹೆಂಗಸಿನ ಮೂಲ ಲಕ್ಷಣ ಕಾಣಿಸುವುದು. ಇಡೀ ರಚನೆಯಲ್ಲಿ ಇರುವ ಎರಡು ಅಂಗಗಳು ಒಂದು ಇನ್ನೊಂದನ್ನು ಬಿಟ್ಟಿರಲಾರದ ಅನಿವಾರ್ಯತೆ ಇದೆ. ಆ ರಚನೆಯಲ್ಲಿ ಅವಳು ಅನ್ಯಳು."[೨೯]

ಲಿಂಗಾಧಾರಿತ ವಿಭಜನೆಯಲ್ಲಿ ಮಹಿಳೆಯನ್ನು ಪುರುಷನಿಗೆ ಅಧೀನಗೊಳಿಸಿದ ಸಮಾಜ ಗ್ರಹಿಕೆಗೆ ಮೂಲನೆಲೆಯನ್ನು ಒದಗಿಸುವ ಧಾರ್ಮಿಕ ವಿಚಾರ ಪ್ರಣಾಲಿಕೆ ಅಸಮಾನ ಸಂಬಂಧಗಳನ್ನು ನಿರ್ಮಿಸಿ, ಮಹಿಳೆಯನ್ನು ಅನ್ಯಳನ್ನಾಗಿ ಮಾಡಿದ ತಂತ್ರಗಳನ್ನು ಭೇದಿಸುವ ಅಕ್ಕಮಹಾದೇವಿಯ ತುಡಿತ ಸ್ತ್ರೀವಿಮೋಚನೆಯ ದೃಷ್ಟಿಯಿಂದಲೇ ನೆಲೆಕಾಣುತ್ತದೆ. ಸಮಾನ ಅವಕಾಶಗಳಿಂದ ಸ್ತ್ರೀಯರನ್ನು ವಂಚಿಸಿದ ಸಾಮಾಜಿಕ, ಧಾರ್ಮಿಕ ನೆಲೆಗಳಿಗೆ ಸ್ತ್ರೀವಾದಿ ಚಿಂತನೆಗಳನ್ನು ಮುಂದಿಟ್ಟುಕೊಂಡು ಹೋರಾಟಕ್ಕಿಳಿಯುವ ಅಕ್ಕಮಹಾದೇವಿ ನಮಗೆ ಅವಳ ಅಭಿವ್ಯಕ್ತಿಯಲ್ಲಿ ಕಾಣಿಸಿಕೊಳ್ಳುತ್ತಾಳೆ.

> "ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ.
> ಗಂಡು ಗಂಡಾದಡೆ ಹೆಣ್ಣಿನ ಸೂತಕ
> ಮನದ ಸೂತಕ ಹಿಂಗಿದಡೆ
> ತನುವಿನ ಸೂತಕಕ್ಕೆ ತೆರಹುಂಟೆ?
> ಅಯ್ಯಾ, ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ.
> ಎನ್ನದೇವ ಚೆನ್ನಮಲ್ಲಿಕಾರ್ಜುನನೆಂಬ ಗರುವಂಗೆ
> ಜಗವೆಲ್ಲ ಹೆಣ್ಣು ನೋಡಾ ಅಯ್ಯಾ."[೩೦]

ಪ್ರಕೃತಿ ಪುರುಷವೆರಡರ ಅಭಿನ್ನತೆ ಸಂಯೋಗದಿಂದಲೇ ವಿಶ್ವದ ಪ್ರಾದುರ್ಭಾವ, ಹೆಣ್ಣು ಗಂಡುಗಳ ನಡುವೆ ಮೊದಲಿಲ್ಲದ ಅನೈಸರ್ಗಿಕವಾದ ಅಸಮಾನತೆ ಲಿಂಗತಾರತಮ್ಯ, ಭಾವನೆಗಳು

ಮನುಜ ನಿರ್ಮಿತ ಅಸಹಜವಾದ ವ್ಯವಸ್ಥೆ, ಲಿಂಗೀಯ ನೆಲೆಯಲ್ಲಿಯ ತರತಮ ಭಾವನೆಗಳನ್ನು ವಿಶ್ಲೇಷಿಸುವ ಅಕ್ಕಮಹಾದೇವಿ ಸ್ತ್ರೀಪುರುಷರ ಸಮಾನತೆಯನ್ನು ಪ್ರತಿಪಾದಿಸುವಳು. ತನುವಿನ ಆಧಾರದ ತಾರತಮ್ಯಗಳು ಮಾನವನ ವಿಕೃತ ಮನಸ್ಸಿನ ಪ್ರತೀಕಗಳೆಂದೇ ಅಕ್ಕ ಪರಿಭಾವಿಸಿ ಹೆಣ್ತನ, ಹೆಣ್ಣು ಸೂತಕ, ಶೂದ್ರತ್ವ ಜಗತ್ತಿನ ವಿಚಾರಗಳು ಅಜ್ಞಾನದಿಂದ ಉಂಟಾದ ವಿಕೃತಿಗಳೇ ಹೊರತು ದೇವನಿರ್ಮಿತ ವ್ಯವಸ್ಥೆಯಲ್ಲಿ ಅಸಮಾನತೆಗೆ ಅವಕಾಶವೇ ಇರದ ಮುಕ್ತ ಜಗತ್ತಿನ ಪರಿಕಲ್ಪನೆಯನ್ನು ಸ್ಪಷ್ಟೀಕರಿಸಿದವಳು.

ಹೆಣ್ಣು ಕೀಳು, ಹೆಣ್ಣು ಹೊರೆ, ಹೊಲೆ ಮೊದಲಾದ ಮತೀಯ ವಿಚಾರಗಳನ್ನು ಸ್ವತಃ ಹೆಣ್ಣಾಗಿಯೇ ತನ್ನ ಹೆಣ್ತನದ ನೆಲೆಯಿಂದಲೇ ಪುರುಷ ಲೋಕಕ್ಕೆ, ಅವರ ಚಿಂತನೆಗಳನ್ನು ಪಲ್ಲಟಗೊಳಿಸಿ ಲಿಂಗೀಯ ವ್ಯವಸ್ಥೆಯ ನಕಾರಾತ್ಮಕ ವ್ಯವಸ್ಥಿತ ವಿಚಾರಗಳ ಆಲೋಚನ ಕ್ರಮವನ್ನು ಭೇದಿಸಿ ಮಹಿಳೆ ವಿರಾಗಿಣಿ, ಸನ್ಯಾಸಿ, ಸಾಧಕಿ, ಸಂಸಾರಿ ಮುಂತಾದ ಸ್ತರಗಳಲ್ಲಿದ್ದರೂ ಧರ್ಮದ ಮುಕ್ತದ್ವಾರ ಅವಳಿಗಿರಬೇಕು. ಜನನ ಪ್ರಕ್ರಿಯೆ, ಸಂತಾನೋತ್ಪತ್ತಿ ಮೊದಲಾದ ಜೈವಿಕ ಕ್ರಿಯೆಗಳ ಆಧಾರದಿಂದ ಪುರುಷನ ಅಧೀನತೆಗೊಳಪಡಿಸಿ ಅನ್ಯಳನ್ನಾಗಿ ಮಾಡುವಂತಹ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ವ್ಯವಸ್ಥೆಗಳ ಪ್ರತ್ಯೇಕೀಕರಣವನ್ನು ತನ್ನ ಅನುಭಾವಿಕ ನಿಲುವಿನಿಂದ ಸಾಮಾನ್ಯ ನೆಲೆಯ ಸ್ತ್ರೀಯರಿಗೂ ದೊರೆಯಬೇಕಾದ ಮಾನ್ಯತೆಯನ್ನು ಸ್ವಾನುಭವದಿಂದ ಅಭಿವ್ಯಕ್ತಗೊಳಿಸಿದ್ದಾಳೆ.

ಆಧುನಿಕ ಸ್ತ್ರೀವಾದ ಮಂಡಿಸುವ ಮಹಿಳಾ ದೃಷ್ಟಿಕೋನ ಮಹಾದೇವಿಯಕ್ಕನಲ್ಲಿ ವಾಸ್ತವಿಕತೆಯ ನೆಲೆಗಟ್ಟಿನಲ್ಲಿ ಚರ್ಚಿತವಾಗಿರುವುದು ಗಮನಾರ್ಹ ಮತ್ತು ಆಧುನಿಕ ಮಹಿಳಾ ಸಂದರ್ಭದಲ್ಲಿ ಮಹಿಳೆಯರು ಹೊಂದಬಹುದಾದ ವೈಚಾರಿಕ, ವಾಸ್ತವಿಕ ದೃಷ್ಟಿಯನ್ನು ಅಕ್ಕನ ಅಭಿವ್ಯಕ್ತಿ ಪ್ರತಿಧ್ವನಿಸುತ್ತವೆ. "ಗಂಡಸು ಹೆಣ್ಣುಗಳ ಭಿನ್ನತೆ ಚಾರಿತ್ರಿಕ ಘಟನೆಯಲ್ಲ. ಅದು ಜೈವಿಕವಾದುದು. ಇಂತಹ ಜೈವಿಕ ಸತ್ಯವನ್ನು ಲಾಭವಾಗಿ ಬಳಸಿಕೊಂಡು ಅದನ್ನು ಹೆಣ್ಣಿನ ದೌರ್ಬಲ್ಯ ಎಂದು ಭಾವಿಸುವ ಪುರುಷಕೇಂದ್ರಿತ ಚಿಂತನೆಗಳನ್ನು ಸ್ತ್ರೀವಾದಿಗಳು ವಿರೋಧಿಸುತ್ತಾರೆ. ಹೆಣ್ಣು ಹೆಣ್ಣಾದ ಕಾರಣದಿಂದ ಕೀಳೂ ಅಲ್ಲ. ಗಂಡು ಗಂಡಾದ ಕಾರಣದಿಂದ ಶ್ರೇಷ್ಠನೂ ಅಲ್ಲ. ಈ ಶ್ರೇಷ್ಠ ಕನಿಷ್ಠ ಪ್ರಶ್ನೆಗಳು ಯಾರದೋ ಲಾಭ ಮತ್ತು ಇನ್ನಾರದೋ ನಷ್ಟಕ್ಕಾಗಿ ಎತ್ತಿ ಹಿಡಿದಿರುವಂತಹದು."[೨೧]

ಆಧುನಿಕ ಕಾಲದ ಸ್ತ್ರೀ ಚಿಂತಕಿ ಸಿಮನ್-ದಿ-ಬೊವಾಳ ಎರಡನೆ ದರ್ಜೆಯ ಪ್ರಜೆಯ ಬಗೆಗೆ ಮಂಡಿಸಿದ ವಿಚಾರಗಳನ್ನು ಅನುಮೋದಿಸುವ ಸಮಕಾಲೀನ ಸಂದರ್ಭದ ಸ್ತ್ರೀವಾದಿಗಳು, ಹನ್ನೆರಡನೇ ಶತಮಾನದಲ್ಲಿ ಹೆಣ್ಣಾಗಿ, ಆ ವಾಸ್ತವ ಗ್ರಹಿಕೆಯಿಂದಲೇ ವ್ಯವಸ್ಥೆಯ ತರತಮಗಳನ್ನು ತಲಸ್ಪರ್ಶಿಯಾಗಿ ವಿಮರ್ಶಿಸಿ ಹೆಣ್ಣಿನ ಬಗೆಗಿನ ಹೊಸ ಚಿಂತನಾ ಕ್ರಮವನ್ನು ಹುಟ್ಟುಹಾಕಿದ

ಅಕ್ಕಮಹಾದೇವಿಯ ಸ್ತ್ರೀವಾದಿ ಚಿಂತನೆಗಳು ಆಧುನಿಕ ಸ್ತ್ರೀವಾದಿತ್ವಕ್ಕಿಂತ ಪ್ರಖರವಾದವುಗಳೆಂಬುದನ್ನು ಅವಶ್ಯವಾಗಿ ಗ್ರಹಿಸುವ ಅವಶ್ಯಕತೆಯಿದೆ.

ಅಕ್ಕನ ವ್ಯಕ್ತಿಗತ ಬದುಕಿನ ಪ್ರತಿರೋಧವನ್ನು ಒಂದು ಪ್ರಬಲ ಮಹಿಳಾ ಪರವಾದ ಚಳುವಳಿ, ಪುರುಷ, ಪ್ರಭುತ್ವ, ಸಮಾಜಗಳಿಗೆ ಒಡ್ಡಿದ ಪ್ರತಿರೋಧ ಮತ್ತು ಏಕಾಂಗಿ ಹೋರಾಟವೆಂಬುದನ್ನು ಆಧುನಿಕ ಜಗತ್ತಿಗೆ ಮತ್ತೇ ಮತ್ತೇ ಹೆಮ್ಮೆಯಿಂದ ಪರಿಚಯಿಸಬೇಕಾದ ಅಗತ್ಯವಿದೆ. ಆಧುನಿಕ ಸಮಕಾಲೀನ ಮಹಿಳಾ ಸಂದರ್ಭದಲ್ಲಿ ಸಂಘಟಿತ ಹೋರಾಟ ಚಳುವಳಿಗಳಿಂದಲೂ ನಿರೀಕ್ಷಿತ ಫಲಿತಾಂಶವನ್ನು ಪಡೆಯಲು ಸಾಧ್ಯವಾಗದಂತಹ ಪರಿಸ್ಥಿತಿಯಿರುವ ಸಾಧ್ಯತೆಗಳೇ ಹೆಚ್ಚಾಗಿರುವ ಇಂದಿನ ದಿನಗಳಲ್ಲಿ ಕಾನೂನಾತ್ಮಕ ಶೈಕ್ಷಣಿಕ, ಸಂವಿಧಾನಾತ್ಮಕ ಹಕ್ಕುಗಳು ಹೆಣ್ಣಿಗಿದ್ದರೂ ಸ್ತ್ರೀಯರ ಬದುಕಿನಲ್ಲಿ ಸಮಾನ ಅವಕಾಶಗಳ ಕೊರತೆ ಗಣನೀಯವಾಗಿದೆ. ಸಮಕಾಲೀನ ಸ್ತ್ರೀಯರ ಸಂಕೀರ್ಣಮಯ ಬದುಕಿಗೆ ಮಾರ್ಗದರ್ಶಿಯಾಗುವ ಮಹದೇವಿಯಕ್ಕನ ಬದುಕು ಮತ್ತು ಅಭಿವ್ಯಕ್ತಿ ಅಪ್ಪಟ ಸ್ತ್ರೀವಾದವೇ ಆಗಿರುವಂತಹದು ಎಂಬುದನ್ನು ಅರಿತುಕೊಳ್ಳಬೇಕಾಗಿದೆ.

ಅಕ್ಕಮಹಾದೇವಿ ತನ್ನ ಸಮಕಾಲೀನ ಬದುಕಿನಲ್ಲಿ ಅಷ್ಟೇ ಅಲ್ಲದೇ 'ಸ್ತ್ರೀವಾದಿ' ಚಿಂತನೆಯ ಇಂದಿನ ಆಧುನಿಕ ಮಹಿಳಾ ಸಂಧರ್ಭಕ್ಕೆ ಅಂದಿಗಿಂತಲೂ ತುಂಬಾ ಹತ್ತಿರವಾದವಳು. ಅವಳು ವೈಯಕ್ತಿಕ ಬದುಕಿನ ಹಿನ್ನೆಲೆಯಲ್ಲಿ ಮಾಡಿದ ವ್ಯವಸ್ಥೆಯ ವಿರುದ್ಧದ ಹೋರಾಟ ಸಾಮಾಜಿಕ ಆಶಯಗಳನ್ನು ಹೊಂದಿದ ಬಹುಮುಖಿ ನೆಲೆಯ ಚಿಂತನೆಗಳನ್ನು ಹೊಂದಿದ 'ಸ್ತ್ರೀವಾದ'ಕ್ಕೆ ಸ್ಪೂರ್ತಿ ನೀಡುವಂತಹದು. ಅಕ್ಕಮಹಾದೇವಿ ಹೆಣ್ಣಾಗಿ ಹುಟ್ಟಿರುವುದಕ್ಕೆ ಪಶ್ಚಾತ್ತಾಪ ಪಡದೇ ತನ್ನ ಹೆಣ್ಣು ಶರೀರವಿಡಿದೇ ಹಿರಿದಾದ ವ್ಯಕ್ತಿತ್ವವನ್ನು ಸಿದ್ಧಿಸಿಕೊಂಡು ಹೆಣ್ಣುತನದ ಅಸ್ತಿತ್ವದಿಂದಲೇ ತನ್ನನ್ನು ಗುರುತಿಸಿಕೊಂಡು ಹೆಣ್ಣು ಹೆಮ್ಮೆ, ಹಿರಿಮೆ ಎಂಬುದನ್ನು ಆಗುಮಾಡಿ ತೋರಿಸಿದವಳು. ಹೆಣ್ಣು ಭ್ರೂಣಹತ್ಯೆಯ ಹಿನ್ನೆಲೆಯನ್ನು ಸಾಮಾಜಿಕ ಹಿನ್ನೆಲೆಯಲ್ಲಿ ಗಮನಿಸಿದರೆ ಹೆಣ್ಣನ್ನು ಹೊರುವುದು, ಹೆರುವುದು ಹೊರೆಯಂದೇ ಭಾವಿಸಲಾಗುತ್ತಿರುವ ಸಮಕಾಲೀನ ಸಂದರ್ಭಗಳಿಗೆ ಅಕ್ಕಮಹಾದೇವಿ ಉತ್ತರದಾಯಿತ್ವವಾಗುತ್ತಾಳೆ.

ಇಂದಿನ ಸ್ತ್ರೀ ಸಮುದಾಯವನ್ನು ತೀವ್ರವಾಗಿ ಕಾಡುತ್ತಿರುವ ವರದಕ್ಷಿಣೆಯ ಕರಾಳ ಮುಖಗಳು ಹೆಣ್ಣು ಶಿಶು ಹತ್ಯೆಯ ಪ್ರಮುಖ ಮೂಲ ಕಾರಣವಾಗಿರುವುದಂತು ಸ್ಪಷ್ಟವಾಗಿದೆ. ಹೆಣ್ಣು, ಹೆಣ್ತನವನ್ನು ಆ ಕಾರಣಕ್ಕಾಗಿಯೇ ಹುಟ್ಟಿನ ಪೂರ್ವದಲ್ಲೇ ಹೊಟ್ಟೆಯಲ್ಲಿ ಹಿಸುಕಿ ಹೆಣ್ಣಿನ ಅಸ್ತಿತ್ವವನ್ನು ಹನನ ಮಾಡುತ್ತಿರುವ ಕ್ರೂರ ಹಿಂಸಾತ್ಮಕ ಧೋರಣೆಗೆ ಅಕ್ಕನ ವ್ಯಕ್ತಿತ್ವ, ಹೋರಾಟ, ಹೆಣ್ಣಾಗಿಯೂ ಹೆಮ್ಮೆಯಿಂದ ಸಾಧಿಸಿದ ಎತ್ತರಗಳು ಮಾದರಿಯಾಗಬೇಕಾಗಿದೆ. ಆ ಹಿನ್ನೆಲೆಯಲ್ಲಿಯೂ ಆಧುನಿಕ ಸಮಾಜವ್ಯವಸ್ಥೆ ಸ್ವತಃ ಸ್ತ್ರೀ ಸಮುದಾಯ ಸ್ತ್ರೀತನವನ್ನು ಸಾಧನೆಗೆ ತೊಡಕು ಎಂಬ ಭಾವನೆಯನ್ನು

ತೊಡೆದು ತನ್ನದೇ ಆದ ಅಸ್ಮಿತತೆಯನ್ನು ಸ್ವಾಭಿಮಾನದಿಂದ ಉಳಿಸಿಕೊಳ್ಳುವತ್ತಲೂ ಚಿಂತಿಸಬೇಕಾದ ಅನಿವಾರ್ಯತೆ ಅಗತ್ಯತೆಯಿದೆ.

ಅಕ್ಕನ ಹೋರಾಟದ ಹಾದಿಯನ್ನು ಆಧುನಿಕ ಸಂದರ್ಭದ ಸ್ತ್ರೀ ಸಮುದಾಯ ಮುಖಾಮುಖಿ ಮಾಡಿಕೊಂಡು ಹೆಣ್ಣಿನ ಅಸ್ತಿತ್ವದ ಹೊರಳು ಹಾದಿಯನ್ನು ಹಿಡಿದು ಹೆಣ್ತನಕ್ಕೆ ಹಿರಿಮೆಯನ್ನು ಹೆಮ್ಮೆಯನ್ನು ತಂದುಕೊಡುವಂತಹ ವ್ಯಕ್ತಿತ್ವ ನಿರ್ಮಾಣದತ್ತ ಚಿತ್ತ ಹರಿಸಬೇಕಾಗಿರುವುದು ಜರೂರಿಯಾಗಿದೆ. ಪರಂಪರೆಯಿಂದ ಪುರುಷ ಪ್ರಾಬಲ್ಯದ ಅಡಿಯಲ್ಲಿಯೇ ಹೊಸಕಿ ಹೋಗಿರುವ ಹೆಣ್ಣಿಗೆ ಹೊಸ ಬಗೆಯ ಹಾದಿಯ ಅವಿಷ್ಕಾರವನ್ನು ಹುಡುಕುತ್ತ, ಸಾಧನೆಯ ಸಂತೃಪ್ತಿಯನ್ನು ಪಡೆದುಕೊಳ್ಳುವತ್ತ ಮುಕ್ತತೆಯು ಮಹಿಳೆಗೆ ದೊರಕುವುದು ಆ ದಿಶೆಯಲ್ಲಿಯ ಪ್ರಯತ್ನಗಳಿಗೆ ಮುಖಮಾಡುವುದು ಆಧುನಿಕ ಸಂದರ್ಭದ ಸ್ತ್ರೀ ಸಮುದಾಯಕ್ಕೆ ಅನಿವಾರ್ಯವಾಗಿದೆ.

ಲಿಂಗತಾರತಮ್ಯ ಐಹಿಕ ಭೋಗದ ಹಿನ್ನೆಲೆಯಲ್ಲಿ ತನ್ನ ದೇಹವನ್ನು ದುರ್ಬಳಕೆ ಮಾಡಿಕೊಳ್ಳುವ ಸಂದರ್ಭಗಳಲ್ಲಿ ಅಕ್ಕಮಹಾದೇವಿ ತೀವ್ರವಾಗಿ ಪ್ರತಿರೋಧಿಸಿ ತನ್ನ ಸ್ತ್ರೀತನವನ್ನು ನಿರಾಕರಿಸುತ್ತಾ ಳಾದರೂ ಸ್ತ್ರೀತನದ ಅಸ್ತಿತ್ವದಲ್ಲಿಯೂ ಸ್ತ್ರೀ ಸ್ವಾತಂತ್ರ್ಯಕ್ಕಾಗಿ ತೀವ್ರತರವಾದ ತುಡಿತವನ್ನು ಹೊಂದಿದವಳಾಗಿಯೂ, ಹೆಣ್ಣು ಹೆಮ್ಮೆ ಎಂಬುದನ್ನು ಅರಿಯುವಂತೆ ಮಾಡುವ ಮಹಾದೇವಿಯಕ್ಕ ಹೆಣ್ಣು ಶರೀರ ಸಂಬಂಧಿ ನೆಲೆಯನ್ನು ಐಹಿಕ ದುರುಪಯೋಗವನ್ನು ತಡೆಗಟ್ಟುವಲ್ಲಿ ನಾನು ಹೆಂಗೂಸಲ್ಲ, ಸೂಳೆಯಲ್ಲ ಎಂದು ಘೋಷಿಸಿಸುವುದು ಅನಿವಾರ್ಯವಾಗಿದೆ. ಹೆಣ್ಣನ್ನು ದೇಹ ದೃಷ್ಟಿಯಿಂದ ದುರುಪಯೋಗ ಪಡಿಸಿಕೊಳ್ಳುವ ದುರಾಶೆಯ ದಮನಕಾರಿ ಕ್ರಮಗಳಿಗೆ ಅಕ್ಕ ಆ ದೇಹದ ನಿರಾಕರಣೆಯಿಂದಲೇ ಪ್ರತಿಭಟಿಸುವಳು.

"ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ,
ಎಲುವಿನ ತಡಿಕೆ, ಕೀವಿನ ಹಡಿಕೆ
ಸುಡಲೀ ದೇಹವ; ಒಡಲುವಿಡಿದು ಕೆಡದಿರು,
ಚೆನ್ನಮಲ್ಲಿಕಾರ್ಜುನನನರಿಯದ ಮರುಳೆ."[೨೨]

ಅಕ್ಕನ ಈ ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ ಪಾರಂಪರಿಕ ನೇತ್ಯಾತ್ಮಕ ದೃಷ್ಟಿಯಿಲ್ಲ. ಮರ್ತ್ಯ ಮಾಯೆ, ದೇಹ, ಸಂಸಾರ ಅಜ್ಞಾನವೆಂಬ ನಿರಾಕರಣೆಯ ನಿಲುವಿಲ್ಲ. ಮರ್ತ್ಯದ ಬದುಕನ್ನು ಅಪ್ಪಿಕೊಂಡ ಇತ್ಯಾತ್ಮಕ ಧೋರಣೆಯುಳ್ಳ ಅಕ್ಕಮಹಾದೇವಿ ತನ್ನ ದೇಹದ ಮೇಲಿನ ಆಕ್ರಮಣಗಳನ್ನು ನಿವಾರಿಸಿಕೊಳ್ಳುವ ಪ್ರತಿರೋಧದ ಸಂದರ್ಭದಲ್ಲಿ ದೇಹವನ್ನು, ಅದರ ಮೋಹದ ಮನಸ್ಥಿತಿಯನ್ನು ಅಲ್ಲಗಳೆದು ತನ್ನತನವನ್ನು ಉಳಿಸಿಕೊಳ್ಳುವಲ್ಲಿ ದೇಹವನ್ನೇ ದಾರಿ ಮಾಡಿಕೊಂಡ ಪ್ರತಿಭಟನಾತ್ಮಕ ಪ್ರತಿಕ್ರಿಯೆಯೆಂದೇ ಪರಿಭಾವಿಸಬೇಕು.

"ನೋಡುವ ಕಂಗಳಿಗೆ ರೂಪಿಂಬಾಗಿರಲು
ನೀವು ಮನನಾಚದೆ ಬಂದಿರಣ್ಣಾ
....
ಮೂತ್ರವು ಬಿಂದು ಒಸರುವ ನಾಳವೆಂದು
ಕಂಗಾಣದೆ ಮುಂದುಗೆಟ್ಟು ಬಂದಿರಣ್ಣಾ.
...."[೩೩]

ಹೆಣ್ಣನ್ನು ದೇಹ ಸಂಬಂಧಿಯಾಗಿ ಗುರುತಿಸಿದ ಪುರುಷ ಆಕ್ರಮಣಕಾರಿ ಪ್ರವೃತ್ತಿಯಿಂದ ಬಿಡಿಸಿಕೊಳ್ಳುವ ಮಾರ್ಗವಾಗಿಯೂ ದೇಹದ, ಸ್ತ್ರೀತನದ ಮೂಲವನ್ನು ಬಿಚ್ಚಿಡುವ ಮೂಲಕ ರಕ್ಷಣಾತ್ಮಕ ತಂತ್ರವನ್ನು ಅಕ್ಕಮಹಾದೇವಿ ಕಂಡುಕೊಂಡಿದ್ದಾಳೆ. ಪುರುಷದಾಹಕ್ಕೆ ಅಕ್ಕಮಹಾದೇವಿಯ ದೇಹ, ಮನಸ್ಸು, ಸ್ತ್ರೀತನಗಳು ಶೋಷಣೆಗೆ ಒಳಗಾದ ಸಂದರ್ಭದಲ್ಲೂ ಧೃತಿಗೆಡದೆ ದೇಹದ ರಕ್ಷಣಾತ್ಮಕ ತಂತ್ರಗಳನ್ನು ಕಿತ್ತೆಸೆದು ಪ್ರತಿಭಟಿಸಿದ್ದು, ತನ್ನತನವನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗದ ಅಸಹಾಯಕತೆಯಲ್ಲೂ ದೇಹವನ್ನು ಬತ್ತಲೆಗೊಳಿಸಿದ ಭಯವನ್ನು ನಿವಾರಿಸಿಕೊಳ್ಳುವಲ್ಲಿಯೂ ದೇಹವನ್ನೇ ದಾರಿ ಮಾಡಿಕೊಂಡು ಅಕ್ಕ ಪ್ರತಿಭಟನೆಗಿಳಿದಿದ್ದಾಳೆ.

"ಕೈಸಿರಿಯ ದಂಡವ ಕೊಳಬಹುದಲ್ಲದೆ,
ಮೈಸಿರಿಯ ದಂಡವ ಕೊಳಲುಂಟೆ?
ಉಟ್ಟಂತಹ ಉಡಿಗೆ ತೊಡಿಗೆಯನೆಲ್ಲ ಸೆಳೆದುಕೊಳಬಹುದಲ್ಲದೆ,
ಮುಚ್ಚಿರ್ದ ಮುಸುಕಿರ್ದ ನಿರ್ವಾಣವ ಸೆಳೆದುಕೊಳಬಹುದೆ?
ಚೆನ್ನಮಲ್ಲಿಕಾರ್ಜುನದೇವರ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ
ಉಡುಗೆ ತೊಡುಗೆಯ ಹಂಗೇಕೋ ಮರುಳೆ?"[೩೪]

ತನ್ನ ಹೆಣ್ಣು ದೇಹದ ಕಾರಣದಿಂದ ಆಕ್ರಮಣವನ್ನೆದುರಿಸಿದ ಅಕ್ಕಮಹಾದೇವಿ ತೀವ್ರ ಶೋಷಣೆಗೆ ಒಳಗಾಗಿದ್ದಾಳೆ. ತನುಮನಗಳಿಗೆ ತೀವ್ರ ಘಾಸಿಯಾದಾಗಲೂ ಸೀರೆ ಸೆಳೆದು ಸ್ತ್ರೀತನವನ್ನು ಅವಮಾನಿಸಿದ ಅಮಾನವೀಯ ಕ್ರೌರ್ಯದ, ಅತ್ಯಾಚಾರ, ಆಕ್ರಮಣದ ಸಂದರ್ಭವನ್ನು ಎದುರುಗೊಂಡ ಅಕ್ಕಮಹಾದೇವಿ ಶತಪ್ರಯತ್ನ ಸಾಮೋಪಾಯಗಳಿಂದ ಶರೀರ ಸಂಬಂಧಿಯಾದ ಸ್ತ್ರೀತನದ ಗೌರವವನ್ನು ಉಳಿಸಿಕೊಳ್ಳಲು ಹೆಣಗಾಡಿ, ಹೋರಾಡಿ ತೀವ್ರ ಆಕ್ರಮಣದ ಹಂತದವರೆಗೆ ತಲುಪಿದ ಸಂದರ್ಭವನ್ನು, ಆ ನೋವನ್ನು ಅನುಭವಿಸಿದಾಗಲೂ ಆತ್ಮಸ್ಥೈರ್ಯವನ್ನು ಒಟ್ಟುಗೂಡಿಸಿ ಹೋರಾಟ ಗೈದಿರುವುದು ಸ್ಪಷ್ಟವಾಗಿದೆ. ಪರಿಸ್ಥಿತಿ ವಿಪರೀತಕ್ಕೊಳಗಾದಾಗ ಅಕ್ಕನಿಗೆ ತೋರಿದ

ಮಾರ್ಗ ಉಡುಗೆಯ ಹಂಗನ್ನು ಹರಿದುಕೊಂಡು ಹೋರಾಡುವುದು. ಹೆಣ್ಣಿನ ದೇಹವನ್ನು ಭೋಗಿಸಬೇಕೆನ್ನುವ ಹಠಕ್ಕೆ ಅಕ್ಕನ ಪ್ರತಿತಂತ್ರದ ಹಠವೂ ಹೆಣ್ಣಿನ ದೇಹದ ಮೂಲಕವೇ ವ್ಯಕ್ತವಾಗಿದೆ.

ತೀವ್ರತರವಾದ ಅಸಹಾಯಕ ನೋವಿನ ಪ್ರಸಂಗವನ್ನು ಎದುರಿಸಿದ ಅಕ್ಕಮಹಾದೇವಿಗೆ ತೋರಿದ ಮಾರ್ಗ 'ದಿಗಂಬರತ್ವ' ಬತ್ತಲೆಗೊಳಿಸುವುದನ್ನು ಅವಮಾನದ ಆಕ್ರಮಣಕಾರಿಯಾದ ಅಸ್ತ್ರಮಾಡಿಕೊಂಡ ಪುರುಷ ದಮನಕ್ಕೆ ಬತ್ತಲೆಯ ಬಯಲೀಕರಣದಿಂದಲೇ ದಿಗಂಬರತ್ವದ ಸಮರ್ಥಿಕರಣವನ್ನು ಪ್ರತಿತಂತ್ರವಾಗಿ ಅಕ್ಕ ಬಳಸಿದ್ದಾಳೆ. ಅಕ್ಕಮಹಾದೇವಿ ಅನುಭಾವ ಪಥಿಕಳಾಗಿ ಅಲೌಕಿಕ ಲಿಂಗಪತಿಯ ಶರಣಸತಿಯಾದ ಅಸಾಮಾನ್ಯ ಮಹಿಳೆಯಾಗಿದ್ದರೂ ಅವಳ ಸಾಧನೆಯ ಹಾದಿಯಲ್ಲಿ ಎದುರಾದ ವಿವಾಹ, ಸಾಮಾಜಿಕ ವ್ಯವಸ್ಥೆಯಲ್ಲಿನ ಪುರುಷಕೇಂದ್ರಿತ ಭೋಗದಾಶೆಗೆ ಬಲಿಯಾಗಬೇಕಾದ ಸಂದಿಗ್ಧ ಸನ್ನಿವೇಶವನ್ನು ಆತ್ಮಬಲದಿಂದ ಎದುರಿಸುವಲ್ಲಿನ ಸ್ಥಿತಿ ಸಾಮಾನ್ಯ ಮಹಿಳೆಯರ ಮೇಲೆರಗುವ ಆಕ್ರಮಣಕ್ಕಿಂತ ಬೇರೆಯದಲ್ಲ. ತನ್ನ ಮೇಲಿನ ಪುರುಷ ಪ್ರಾಬಲ್ಯದ ಆಕ್ರಮಣಗಳನ್ನು ಅಕ್ಕಮಹಾದೇವಿ ಎದುರಿಸಿ ಸಂಯಮ ಕಳೆದುಕೊಳ್ಳದ ಸ್ಥೈರ್ಯವಂತ ಸ್ತ್ರೀಯಾಗಿಯೇ ಸಂದಿಗ್ಧತೆಯನ್ನು ನಿವಾರಿಸಿಕೊಂಡಿರುವಳು.

ತನ್ನ ದೇಹ ಮನಸ್ಸು, ಆತ್ಮಗಳ ರಕ್ಷಣೆಗೆ ಹಲವು ರಕ್ಷಣಾತ್ಮಕ ತಂತ್ರಗಳನ್ನು ಕಂಡುಕೊಂಡು ಆಕ್ರಮಣವನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸಿದರೂ ಸಾಧ್ಯವಾಗದ ತೀವ್ರ ಅಕ್ರಮಣಕಾರಿ ಪ್ರಸಂಗಗಳಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಅನಿವಾರ್ಯವಾಗಿ ಹೋರಾಟಕ್ಕಿಳಿವಳು. ಹೆಣ್ಣಿನ ದಮನಕಾರಿ ಪ್ರವೃತ್ತಿಯಲ್ಲಿ ಪುರುಷ ಪ್ರಾಬಲ್ಯದ ಸವಾಲನ್ನು ಸ್ವೀಕರಿಸಿ ಸೋಲದಿರಲು ಯತ್ನಿಸುವ, ಸಂಘರ್ಷದಲ್ಲಿ ಸೋಲು ಅನಿವಾರ್ಯವಾದಾಗ ಶೋಷಣೆಯನ್ನು ಸಾವಿನ ಚಿಂತನೆಗೆ ಕೊಂಡೊಯ್ಯದೇ ಆತ್ಮಹತ್ಯೆ, ಸಾವು, ಶೋಷಣೆಗೆ ಅಕ್ರಮಣಗಳ ಅವಮಾನಕ್ಕೆ ಉತ್ತರವಲ್ಲವೆಂಬುದನ್ನು ಗ್ರಹಿಸಿದ ಮನಸ್ಥಿತಿಯ ಮಹಾದೇವಿಯಕ್ಕ ಶೋಷಣೆ ಅವಮಾನವನ್ನು ಆಹ್ವಾನವಾಗಿ ಸ್ವೀಕರಿಸಿ, ಛಲದಿಂದ ಆಕ್ರಮಣಗೊಂಡ ಶರೀರವಿಡಿದು, ಶೀಲ, ಪಾವಿತ್ರ್ಯಗಳ ಪರಂಪರೆಯ ಪೊರೆ ಕಳಚಿಕೊಂಡು ಶೋಷಣೆಯನ್ನೇ ಸಾಧನೆಯಾಗಿ ಪರಿವರ್ತಿಸಿದ ಉರಿಯುಂಡ ಕರ್ಪೂರವಾಗಿ ಮಹಿಳಾಲೋಕಕ್ಕೆ ಧನಾತ್ಮಕ ಧೋರಣೆ, ದೃಷ್ಟಿಕೋನವನ್ನು ಬಿತ್ತರಿಸಿದವಳು.

"ಮಂಗಳವೆ ಮಜ್ಜನವೆನಗೆ!
ವಿಭೂತಿಯೇ ಒಳಗುಂದದರಿಸಿನವೆನಗೆ
ದಿಗಂಬರವೇ ದಿವ್ಯಾಂಬರವೆನಗೆ!
...."[೩೩]

ದೇಹದ ಮೇಲಿನ ಆಕ್ರಮಣದ ಅವಮಾನವನ್ನು, ಸಕಾರಾತ್ಮಕ ನೆಲೆಯಾಗಿ ಸ್ವೀಕರಿಸಿ ದಿಗಂಬರ ಸ್ಥಿತಿಯನ್ನು ದೇವರಿಗೆ ಒಡವೆ ಮಾಡಿ ತೊಡಿಸಿದ ಅಕ್ಕಮಹಾದೇವಿ ಭೂತ ಸ್ಥಿತಿಯನ್ನು ನೀಗಿಸಿಕೊಂಡು ನಿರ್ಲಿಪ್ತಳಾಗಿ, ವರ್ತಮಾನದಲ್ಲಿ ಬದುಕುವ ಭರವಸೆಯನ್ನುಳಿಸಿಕೊಂಡವಳು. ಅವಳ ಭರವಸೆಯ ಬದುಕಿನಲ್ಲಿ ಭವಿಷ್ಯತ್ತಿನ ಬಗೆಗಿನ ಚಿಂತನೆಗಳಿವೆಯೇ ಹೊರತು ಭೂತಕಾಲದ ಬವಣೆಯ ಕರಾಳ ಕಷ್ಟವನ್ನು ಕನಿಕರದಿಂದ ಕಣ್ಣೀರಿನಲ್ಲಿ ಕಳೆವ ನಿರಾಶಾವಾದಿಯ ನಿಲುವಿಲ್ಲ. ಆಗಿಹೋದುದರ ಬಗೆಗಿನ ನಿರ್ಲಿಪ್ತತತೆಯೇ ಅಕ್ಕನನ್ನು ಭರವಸೆಯಿಂದ ಬದುಕಲು ಪ್ರೇರೇಪಿಸಿರುವುದು. ಬರುವ ಬವಣೆಗಳನ್ನೆಲ್ಲ ಭಕ್ತಿಯ ಶಕ್ತಿಯಿಂದ ಪರಿಹರಿಸಿಕೊಂಡ ಅಕ್ಕಮಹಾದೇವಿ ಆಧುನಿಕ ಸಂದರ್ಭದ ಸಂದಿಗ್ಧ ಸಂಕೀರ್ಣ ಸಮಸ್ಯಾತ್ಮಕ ಸ್ಥಿತಿಯಲ್ಲಿರುವ ಸ್ತ್ರೀ ಸಮುದಾಯಕ್ಕೆ ಆಶಾದಾಯಕವಾದ ದೃಷ್ಟಿಯಾಗಿಯೇ ಗೋಚರಿಸುವಳು.

ದಿನನಿತ್ಯ ಹೆಣ್ಣಿನ ದೇಹ ಅದರ ಸಂಬಂದಿ ನೆಲೆಯಾದ ಶೀಲ, ಅಪಹರಣ, ಮಾನಹಾನಿ ಮಾಡುತ್ತಿರುವ ಪುರುಷ ಚಿಂತನೆಗಳಿಗೆ ಮಹಿಳೆಯರು ಬಲಿಯಾಗಿ ಬವಣೆ ಪಡುತ್ತಿರುವ ವಾಸ್ತವ ಪರಿಸ್ಥಿತಿಯಲ್ಲಿ ಅಕ್ಕನ ಆತ್ಮಸ್ಥೈರ್ಯದ ಮಹಿಳಾ ದೃಷ್ಟಿಕೋನಗಳು ದಿವ್ಯ ಪ್ರೇರಣೆಯನ್ನೊದಗಿಸಬಲ್ಲ ಸಾಧ್ಯತೆಗಳಿವೆ. ತನ್ನ ಮನಸ್ಸಿಗೆ ವಿರುದ್ಧವಾದ ಸಂದರ್ಭಗಳನ್ನೆಲ್ಲ ಮೀರಿದವಳು ಮಹಾದೇವಿಯಕ್ಕ. ಅವಳ ಮನೋನಿರ್ಧಾರವೇ ಮಹೋನ್ನತವಾದ ಸಾಧನೆಗೆ ಪ್ರೇರಣೆಯೊದಗಿಸಿತು. ಮಹಿಳೆ ಮನಸ್ಥೈರ್ಯದ ನಡೆಯಿಂದ ಮುನ್ನಡೆ ಪಡೆಯಬಲ್ಲಳೆಂಬುದನ್ನು ಮಹಿಳೆಯಾಗಿಯೇ ಸಾಧ್ಯವಾಗಿಸಿಕೊಂಡವಳು ಮಹಿಳೆಯಾಗಿರುವುದಕ್ಕೆ ಮರುಗದೆ ಮುಂದಡಿಯಿಟ್ಟು ಬಂದುದನ್ನೆಲ್ಲ ನೀಗಿಸಿಕೊಂಡು ನಿರ್ವಯಲ ಅನುಭಾವದೆತ್ತರಕ್ಕೇರಿದವಳು. ಹೋರಾಟದ ಬದುಕಿಗೆ ಹೆಗಲು ನೀಡಿದ ಹೆಣ್ಣಿನ ಸಾಹಸಗಾಥೆಯಾಗಿ ಆಧುನಿಕ ಮಹಿಳಾ ಚಳುವಳಿಗಳು ಅಕ್ಕನನ್ನು ಗ್ರಹಿಸಿವೆ. ಅಕ್ಕಮಹಾದೇವಿ ಹೆಣ್ಣುತನದ ಅಸ್ತಿತ್ವದಲ್ಲಿ ಅದರ ಅಸ್ಮಿತತೆಗೆ ಹೋರಾಟಕ್ಕಿಳಿದವಳು.

"ನಾಳೆ ಬರುವುದು ನಮಗಿಂದೆ ಬರಲಿ,
ಇಂದು ಬರುವುದು ನಮಗೀಗಲೇ ಬರಲಿ;
ಆಗೀಗ ಎನ್ನದಿರೋ, ಚೆನ್ನಮಲ್ಲಿಕಾರ್ಜುನಾ"[೩೬]

ಮಹಾದೇವಿಯಕ್ಕನ ಹೋರಾಟದಲ್ಲಿ ಆಕೆಯ ಸಂಗಾತಿಯಾದ ಆತ್ಮಸ್ಥೈರ್ಯದ ಪ್ರತೀಕವೇ ಅವಳ ದೈವ ಚೆನ್ನಮಲ್ಲಿಕಾರ್ಜುನ. ಅವಳೊಳಗಿನ ಅಂತರ್‌ಶಕ್ತಿಯಾಗಿ ಮುನ್ನಡೆಸಿದ ಮಹಾನ್ ಚೇತನಶಕ್ತಿ. ಆ ಆತ್ಮಶಕ್ತಿಯನ್ನು ಅಸ್ತ್ರವಾಗಿಸಿಕೊಂಡು ಅಕ್ರಮಣಕಾರಿ ಶಕ್ತಿಗಳನ್ನು ಹಿಮ್ಮೆಟ್ಟಿಸಿದ ಹೆಣ್ಣು ಅಕ್ಕ. ಅವಳ ಮಹಿಳಾ ಪರವಾದ ಮನೋಬಲದ ನಿಲುವಿನಲ್ಲಿ ಎಂದೆಂದಿಗೂ ಬೆಳಕಾಗುವ ಭರವಸೆಗಳಿವೆ. ಆಧುನಿಕ ಸಮಕಾಲೀನ ಸಂದರ್ಭದಲ್ಲಿ ಸ್ತ್ರೀ ಸಮುದಾಯ ಎದುರಿಸುತ್ತಿರುವ

ಶೋಷಣೆ, ದೌರ್ಜನ್ಯಗಳ ವಿರುದ್ಧದ ಮಹಿಳಾ ಚಳುವಳಿ, ಹೋರಾಟಗಳು ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ಸನ್ನು ಹೊಂದದಿರುವುದು ವಾಸ್ತವ ಸತ್ಯವಾಗಿದೆ. ಆರ್ಥಿಕ, ಸಾಮಾಜಿಕ, ಔದ್ಯೋಗಿಕ, ಕೌಟುಂಬಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಮುಂತಾದ ಕ್ಷೇತ್ರಗಳಲ್ಲಿ ಮಹಿಳೆಗೆ ಅವಕಾಶ ಮನ್ನಣೆ ದೊರೆಯುತ್ತಿದೆ ಎಂದು ಮೇಲ್ನೋಟಕ್ಕೆ ಕಾಣುತ್ತಿದೆ. ಪ್ರಗತಿಯ ಹೆಜ್ಜೆಯನ್ನಿಡುತ್ತಿರುವಂತೆ ಭಾಸವಾಗುತ್ತಿದೆಯಾದರೂ ವಾಸ್ತವಿಕ ಮೂಲ ನೆಲೆಯಲ್ಲಿ ಶೋಧಿಸಿದಾಗ ಮಹಿಳೆಗೆ ಮುಕ್ತ ಸಮಾನ ಸ್ಥಾನಮಾನಗಳು, ಸಮಾನ ಅವಕಾಶಗಳು, ಮುಕ್ತಸ್ವಾತಂತ್ರ್ಯ, ಸಮಾನತೆಗಳು ಗಮನಾರ್ಹವಲ್ಲವೆಂದೇ ಸ್ತ್ರೀವಾದಿ ಚಿಂತಕರು ವಾದಿಸುವರು.

ವೈಚಾರಿಕ ನೆಲೆಯಿಂದ ವೈಜ್ಞಾನಿಕ ಸಂಶೋಧನಾ ಕ್ಷೇತ್ರದವರೆಗೆ ಸಮಾಜದ ವೈವಿಧ್ಯಮಯ ಸ್ತರಗಳಲ್ಲಿ ಸ್ತ್ರೀಯರಿಗೆ ಸಮಾನತೆ ಸ್ವಾತಂತ್ರ್ಯ ಬೇಕಾಗಿದೆ. ಮಹಿಳೆಯರ ದುಡಿಮೆಗೆ ಮೌಲ್ಯ ನೀಡುವ ಮನಸ್ಥಿತಿ ಉಂಟಾಗಬೇಕಿದೆ. ಮಹಿಳೆಯರ ಪ್ರಗತಿಪರವಾದ ಹೆಜ್ಜೆಗಳು ಪರಿಗಣಿತವಾಗುವ ಅವಶ್ಯಕತೆಯಿದೆ. ಆಧುನಿಕ ಸ್ತ್ರೀವಾದ ಮಹಿಳೆಯರ ಸ್ಥಿತಿಯಲ್ಲಿನ ಆರೋಗ್ಯಕರ ಅಭಿವೃದ್ಧಿಗೆ ಒತ್ತು ನೀಡುತ್ತಿರುವ ಸಮಕಾಲೀನ ಸಂದರ್ಭದಲ್ಲಿ ಓರ್ವ ಸ್ತ್ರೀಯಾಗಿ ಸಂಘರ್ಷದ ಬದುಕಿನಲ್ಲೂ ಸಾಧನೆಗೈದ ಅಕ್ಕನ ಆದರ್ಶ, ಅಭಿವ್ಯಕ್ತಿಗಳಿಗೆ ಪ್ರಾಧಾನ್ಯತೆ ನೀಡುತ್ತಿದೆ.

> "ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೆ.
> ಭವ ಬಂಧನವ ಬಿಡಿಸಿ ಪರಮಸುಖವ ತೋರಿದ ಗುರುವೆ ನಮೋ.
> ಭವಿಯೆಂಬುದು ತೊಡೆದು ಭಕ್ತೆ ಎಂದೆನಿಸಿದ ಗುರುವೆ ನಮೋ.
> ಚೆನ್ನಮಲ್ಲಿಕಾರ್ಜುನನ ತಂದೆನ್ನ
> ಕೈವಶಕ್ಕೆ ಕೊಟ್ಟ ಗುರುವೆ ನಮೊ ನಮೋ"[೩೭]

ಅಕ್ಕಮಹಾದೇವಿ ತಾನು ಪಡೆದಿರುವ ಅಕ್ಷರದ ಅರಿವಿನೊಂದಿಗೆ ಧಾರ್ಮಿಕ ತಳಹದಿಯ ಜ್ಞಾನದ ಮೂಲನೆಲೆಯನ್ನು ಹೊಂದಿದ ಬಗ್ಗೆ ಅವಳ ಅಭಿವ್ಯಕ್ತಿಯು ಸುಳಿಹು ನೀಡುತ್ತದೆ. ಅಕ್ಕ ಸ್ತ್ರೀ ಶಿಕ್ಷಣದ ಪ್ರತಿಪಾದಕಿಯಾಗಿ ಈ ಅಭಿವ್ಯಕ್ತಿ ಮೂಲಕ ಪ್ರತಿನಿಧಿಸುತ್ತಾಳೆ.

ಆಧುನಿಕ ಸ್ತ್ರೀವಾದವು ಸ್ತ್ರೀಯರ ವಿಮೋಚನೆ ಕುರಿತ ಚಿಂತನೆಗಳಲ್ಲಿ ಶಿಕ್ಷಣಕ್ಕೆ ಮೂಲಭೂತವಾದ ಪ್ರಾತಿನಿಧ್ಯವಿರಬೇಕೆಂಬುದನ್ನು ಪ್ರತಿಪಾದಿಸುತ್ತಾರೆ. ಸ್ತ್ರೀ ಸಶಕ್ತತೆಯ ಮಾರ್ಗವಾಗಿ ಶಿಕ್ಷಣವೆಂಬ ಪರಿಕಲ್ಪನೆಯನ್ನು ಮನಗಂಡು ಮಹಿಳೆಯರ ಜಾಗೃತಿ, ಅಭಿವೃದ್ಧಿಗೆ ತಳಹದಿಯಾಗಿ ಅಕ್ಷರಕ್ರಾಂತ್ರಿಯ ಮುಕ್ತ ಅವಕಾಶಗಳು ದೊರೆಯಬೇಕೆಂಬ ಒತ್ತಾಸೆಯನ್ನು ವ್ಯಕ್ತಪಡಿಸುತ್ತಾರೆ. ಆಧುನಿಕ ಸಂದರ್ಭದಲ್ಲಿ ಸ್ತ್ರೀ ಸಶಕ್ತೀಕರಣದ ಅಗತ್ಯತೆಯನ್ನು ಸ್ತ್ರೀವಾದಿ ಚಿಂತಕರು ಗ್ರಹಿಸಿದ್ದಾರೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿಯೂ

ಪುರುಷ ಪ್ರಾಧಾನ್ಯತೆಯೇ ಎಲ್ಲ ಕ್ಷೇತ್ರಗಳಲ್ಲಿ ತನ್ನ ಪ್ರಾಬಲ್ಯದಿಂದ ಹಿಡಿತವನ್ನು ಸಾಧಿಸಿದೆ. ಆ ಹಿಡಿತವನ್ನು ಸಡಿಲಗೊಳಿಸುವ ಸಾಧನ ಶಿಕ್ಷಣವೆಂಬ ನಿಲುವು ಅವರದಾಗಿದೆ.

ಮಹಿಳೆಯರ ಪ್ರಗತಿಗೆ ಪೂರಕವಾಗದ ಪುರುಷ ಪ್ರಾಧಾನ್ಯತೆ ಅವರಿಗಿರುವ ಸಮಾನ ಹಕ್ಕುಗಳ ಅನುಸರಣೆಗೆ ಅಡಚಣೆಯುಂಟು ಮಾಡುತ್ತಿರುವ ಸಂದರ್ಭಗಳಲ್ಲಿ "ಮಹಿಳೆಯರು ತಮ್ಮನ್ನು ತಾವು ಅರಿತುಕೊಂಡು ತಮಗೆ ಏನು ಬೇಕು ಎಂದು ತಿಳಿದುಕೊಂಡು ಅದನ್ನು ಅಭಿವ್ಯಕ್ತಪಡಿಸಿ ಪಡೆದುಕೊಳ್ಳುವಂತೆ ಮಾಡುವುದು. ಆತ್ಮವಿಶ್ವಾಸ ಬೆಳೆಸಿಕೊಂಡು, ಆದಾಯ ಸಂಪನ್ಮೂಲಗಳ ಮೇಲೆ ಅಧಿಕಾರ ಪಡೆದು, ನಿರ್ಧಾರ ಕೈಗೊಳ್ಳುವ ಹಕ್ಕು ಮತ್ತು ಆಯ್ಕೆಯ ಸ್ವಾತಂತ್ರ್ಯವನ್ನು ಹೊಂದಿ ಸ್ವಾವಲಂಬನ ಜೀವನ ನಡೆಸುವಂತೆ ಮಾಡುವ ಪ್ರಕ್ರಿಯೆಯೇ ಮಹಿಳಾ ಸಶಕ್ತೀಕರಣ."[೩೮]

ಮಹಿಳೆಯೋರ್ವಳು ಆಯ್ಕೆ, ಸ್ವಂತ ನಿರ್ಧಾರ, ಸ್ವಾವಲಂಬಿ ಜೀವನ ಮಾರ್ಗವನ್ನು ಕೈಕೊಳ್ಳಲು ಅವಳಿಗೆ ಆಧಾರವಾಗುವುದೇ ಅರಿವು. ಅರಿವಿನ ಬೆಳಕು ತೋರುವ ಮಾರ್ಗ ಅಕ್ಷರಕಲಿಕೆ. ಅಕ್ಷರದಿಂದ ಅರಿವು ಅರಿವಿನಿಂದ ಅಭಿವೃದ್ಧಿ ಒಂದನ್ನೊಂದು ಅನುಸರಿಸುವ ಪ್ರಕ್ರಿಯೆಗಳು. "ಸ್ತ್ರೀ ಮುಕ್ತಿಯ ಪ್ರಶ್ನೆಯು ಸ್ತ್ರೀಶಿಕ್ಷಣದೊಂದಿಗೆ ಸಂಬಂಧಿಸಿದುದಾಗಿದೆ ಎಂಬುದನ್ನು ಲಕ್ಷಿಸಬೇಕಾದ್ದು ಅವಶ್ಯ. ಸ್ತ್ರೀಶಿಕ್ಷಣವು ಸ್ತ್ರೀಸ್ವಾತಂತ್ರ್ಯದ ದೃಷ್ಟಿಯಿಂದ ಪ್ರಾಥಮಿಕ; ಆದರೆ ಅದು ಅತ್ಯಂತ ಪುಷ್ಟಿಯನ್ನು ತರುವಂತಹ ಆಧಾರಭೂತ ವಿಚಾರವೂ ಹೌದು. ಸ್ತ್ರೀವಿಮುಕ್ತಿಯ ತಾತ್ವಿಕ ಪ್ರಶ್ನೆಗಳ ಚಿಂತನೆಯಿಂದಲೂ ಇದು ಸೂರ್ಯ ಪ್ರಕಾಶನದಷ್ಟೇ ಸ್ವಚ್ಛವೂ, ಸ್ಪಷ್ಟವಾದುದೂ ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾದ ಅಂಶ."[೩೯]

ಶಿಕ್ಷಣದಿಂದಲೇ ಸ್ತ್ರೀ ಸಾಮರ್ಥ್ಯವನ್ನು ಹೊಂದಿ ತನ್ನ ಅಭಿವೃದ್ಧಿಗೆ ನಾಂದಿಯಾಗುವಳು. ಆದರೆ ಸ್ತ್ರೀ ಶಿಕ್ಷಣ ಕುರಿತಾದ ಅವಗಣನೆಗಳು ಅರಿವಿನ ದಾರಿಯಿಂದ ಅವಳನ್ನು ದೂರವಿಟ್ಟಿರುವ ಕಾರಣದಿಂದ ತನಗಾದ, ಆಗುತ್ತಿರುವ, ಅನ್ಯಾಯಗಳ ಅರಿವು ಇಲ್ಲದ ಅಜ್ಞಾನದ ಪರಿಸ್ಥಿತಿಯಲ್ಲಿ ಅದೆಷ್ಟೋ ಕಾಲಗತಿಸಿದ ಸ್ತ್ರೀ ಸಮುದಾಯ ವ್ಯವಸ್ಥೆಯಲ್ಲಿ ಅನ್ಯಳಾಗಿಯೇ ಅನಾದರಕ್ಕೆ ಒಳಗಾಗಿದ್ದಾಳೆ. ವೈಚಾರಿಕ ಪ್ರಜ್ಞೆಯ ಮೂಲವೇ ಜ್ಞಾನ. ಅರಿವು, ಶಿಕ್ಷಣ ಜ್ಞಾನವಿರದ ಮಾನವ ಪಶುಸಮಾನ. ಆ ಪರಿಸ್ಥಿತಿಯಲ್ಲಿ ಪರಿಕ್ರಮಿಸಿದ ಮಹಿಳಾಲೋಕದಲ್ಲಿ ಮಹಾದೇವಿಯಕ್ಕ ಆ ಕಾಲದ ಮಿತಿಗಳೊಳಗೆಯೂ ಜ್ಞಾನವಲಯದಲ್ಲಿ ಅವಕಾಶ ಪಡೆದವಳು. ಅಕ್ಕನ ಅಭಿವ್ಯಕ್ತಿಯನ್ನು ಗ್ರಹಿಸಿದಾಗ ಅವಳ ಜ್ಞಾನದೆತ್ತರವೂ ಮಹತ್ತರವೆನಿಸುತ್ತದೆ.

ಪಿತೃಪ್ರಧಾನ ಮೌಲ್ಯಾಧಾರಿತ ಪುರುಷಪ್ರಾಧಾನ್ಯ ಸಮಾಜ ಸಂರಚನೆಯಲ್ಲಿ ಸ್ತ್ರೀ ಶಿಕ್ಷಣಕ್ಕಿದ್ದ ಅವಕಾಶಗಳು ತೀರಕಡಿಮೆ. ಒಂದು ದೃಷ್ಟಿಯಿಂದ ಸ್ತ್ರೀ ಶಿಕ್ಷಣದ ಅವಕಾಶಗಳಿರಲಿಲ್ಲವೆಂಬುದೇ

ಸ್ಪಷ್ಟವಾಗುತ್ತದೆ. ಅಂತಹ ಮಹಿಳೆಗಿರುವ ಮಿತಿಯೊಳಗೂ ಮಹಾದೇವಿಯಕ್ಕ ವಿದ್ಯೆ ಸಂಪಾದಿಸಿ ವೈಚಾರಿಕಪ್ರಜ್ಞೆ, ಅಭಿವ್ಯಕ್ತಿ ಸಾಧ್ಯತೆಗಳನ್ನು ಪಡೆದಿರುವುದು ಸಾಹಸದ ಸಾಧನೆಯೆಂದೇ ಪರಿಗಣಿಸಬೇಕಾಗುತ್ತದೆ. ಅವಳ ಅಭಿವ್ಯಕ್ತಿಯಲ್ಲಿ ಮೂಡಿರುವ ಚಿಂತನೆಗಳು, ಕನ್ನಡ ಸಂಸ್ಕೃತ ಭಾಷೆಗಳ ಬಳಕೆ, ತನ್ನ ಬದುಕಿನಲ್ಲಿ ವಿಚಾರ ಪ್ರಜ್ಞೆಯಿಂದ ಕೆಲ ಪ್ರಶ್ನೆಗಳನ್ನೆತ್ತಿ, ಸಾಮಾಜಿಕ ಪ್ರತಿರೋಧದ ನಡುವೆಯೂ ಅನುಭಾವಿಕ ಎತ್ತರವನ್ನು ಸಾಧಿಸಿದ ಹಿನ್ನೆಲೆಯಲ್ಲಿ ಅವಳಿಗೆ ಆಧಾರವಾಗಿರುವುದು ಅರಿವು ಅಕ್ಷರಜ್ಞಾನ. ಸಶಕ್ತ ಅಭಿವ್ಯಕ್ತಿಗೆ ಸಾಧ್ಯತೆಗಳನ್ನು ಸೃಷ್ಟಿಸಿದ್ದು ಅವಳು ಪಡೆದ ಶಿಕ್ಷಣ ಸಂಸ್ಕಾರವೆಂಬುದನ್ನು ಒಪ್ಪಲೇಬೇಕಾದ ವಿಚಾರವಾಗಿದೆ. ಅಕ್ಕನ ಶಕ್ತಿಸಾಮರ್ಥ್ಯಕ್ಕೆ ಕಾರಣವಾದ ಶಿಕ್ಷಣ ಅವಳ ಬದುಕಿನ ಬದಲಾವಣೆಗೂ ಅನುವಾಗಿದೆ. ಅಕ್ಷರದಿಂದ ಅರಿವು, ಅರಿವಿನಿಂದ ಅನುಭಾವ, ಅನುಭಾವದಿಂದ ಅನುಭೂತಿ ಪಡೆದ ಅಕ್ಕಮಹಾದೇವಿಯ ವಚನಗಳಲ್ಲೆಲ್ಲ ಅದರ ದೃಷ್ಟಿ ವ್ಯಕ್ತವಾಗುತ್ತದೆ. ಅವಳ ಅಭಿವ್ಯಕ್ತಿ ಸ್ವರೂಪವೇ ಅವಳ ಜ್ಞಾನದ ವಿಸ್ತಾರ ವಲಯವನ್ನು ಪ್ರತಿಬಿಂಬಿಸುತ್ತದೆ.

"ಎಲ್ಲ ಎಲ್ಲವನರಿದು ಫಲವೇನಯ್ಯಾ,
ತನ್ನ ತಾನರಿಯಬೇಕಲ್ಲದೆ?
ತನ್ನಲ್ಲಿ ಅರಿವು ಸ್ವಯವಾಗಿರಲು
ಅನ್ಯರ ಕೇಳಲುಂಟೆ?
ಚೆನ್ನಮಲ್ಲಿಕಾರ್ಜುನಾ,
ನೀನರಿವಾಗಿ ಮುಂದುದೋರಿದ ಕಾರಣ
ನಿಮ್ಮಿಂದ ನಿಮ್ಮನರಿದೆನಯ್ಯಾ ಪ್ರಭುವೆ"[೮೦]

ಅಕ್ಕನ ಈ ಅಭಿವ್ಯಕ್ತಿಯನ್ನು ಅಲೌಕಿಕ ನೆಲೆಗಿಂತಲೂ ಲೌಕಿಕವಾದ ನೆಲೆಗಟ್ಟಿನಲ್ಲಿ ವಾಸ್ತವ ಗ್ರಹಿಕೆಯಾಗಿ ಸ್ವೀಕರಿಸುವುದು ಹೆಚ್ಚು ಸೂಕ್ತವೆನಿಸುತ್ತದೆ. ವ್ಯಕ್ತಿತ್ವ ವಿಕಾಸದ ಮಾರ್ಗವಾಗಿ ಸ್ವಯಂ ಅರಿವಿನ ಅಸ್ತಿತ್ವವನ್ನು ಹೊಂದುವ ಅನಿವಾರ್ಯತೆಯನ್ನು ಅಕ್ಕಮಹಾದೇವಿ ಪ್ರತಿಪಾದಿಸುತ್ತಾಳೆ. ವಾಸ್ತವಿಕ ಬದುಕನ್ನು ಕಟ್ಟಿಕೊಳ್ಳುವ ಮೂಲನೆಲೆಯಾಗಿ ಅರಿವನ್ನು ಗ್ರಹಿಸುತ್ತ ಅರಿವಿನ ನೆಲೆಯಿಂದ, ಅನುಭಾವಿಕ ನೆಲೆಗೆ ವಿಸ್ತರಿಸಿಕೊಳ್ಳುವ ಬಗೆಯನ್ನು ಅಕ್ಕಮಹಾದೇವಿ ಅರಿವನ್ನು ಅನ್ವಯಿಸಿಕೊಳ್ಳುತ್ತ, ಲೌಕಿಕ ಬದುಕಿನಾಚೆಯ ನೆಲೆಗೂ ಚಾಚಿಕೊಳ್ಳುತ್ತಾಳೆ. ಅವಳ ಬದುಕು ಅಭಿವ್ಯಕ್ತಿಯ ಸ್ವರೂಪವನ್ನು ಸ್ತ್ರೀಸಮುದಾಯ ಆಧುನಿಕ ಸಮಕಾಲೀನ ಸಂಕೀರ್ಣವ್ಯವಸ್ಥೆಯ ಸಂಧಿಗ್ಧತೆಗಳನ್ನು ಪರಿಹರಿಸಿ ಕೊಳ್ಳುವಲ್ಲಿ ಅನ್ವಯಿಸಿಕೊಳ್ಳಬೇಕಾಗಿದೆ.

ಆಧುನಿಕ ಸಮಕಾಲೀನ ಸ್ತ್ರೀ ಸಮುದಾಯವನ್ನು ಆವರಿಸಿಕೊಂಡಿರುವ ಹಲವು ಸಂಕೀರ್ಣ ಸಮಸ್ಯೆಗಳ, ಸಂದಿಗ್ಧ ಪರಿಸ್ಥಿತಿಗಳ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು, ಪ್ರಗತಿಪರವಾದ ಬದುಕಿನ ಅಸ್ತಿತ್ವವನ್ನು ಪಡೆದುಕೊಳ್ಳಲು ಅಕ್ಕನ ಮಹಿಳಾಪರವಾದ ಚಿಂತನೆಗಳನ್ನು ವಾಸ್ತವಿಕ ಬದುಕಿನಲ್ಲಿ ನೆಲೆ ಕಂಡುಕೊಳ್ಳಲು ಮರುಚಿಂತನೆ, ಅನ್ವಯದ ಹಾದಿಯನ್ನು ಹುಡುಕಬೇಕಾಗಿದೆ. ಅಕ್ಕಮಹಾದೇವಿಯನ್ನು ಅಸಾಮಾನ್ಯ ಮಹಿಳೆಯಾಗಿ ಗ್ರಹಿಸುವುದರ ಬದಲಾಗಿ ಸಾಮಾನ್ಯ ಹೆಣ್ಣೊಬ್ಬಳು ತನ್ನತನದ ಹುಡುಕಾಟಕ್ಕಾಗಿ, ಹೋರಾಡಿದ ಸಾಹಸಗಾಥೆಯ ಸಹಜತೆಯ ಹಿನ್ನೆಲೆಯನ್ನು ಕಂಡುಕೊಳ್ಳುತ್ತ ಮಹಿಳಾ ಸಮುದಾಯ ಅನುಭವಿಸುತ್ತಿರುವ ಯಾತನೆಗಳನ್ನು ಪರಿಹರಿಸಿಕೊಳ್ಳಲು ಮಹಾದೇವಿಯಕ್ಕನಲ್ಲಿದ್ದ ಮನೋಬಲವನ್ನು ಮೈಗೂಡಿಸಿಕೊಂಡು ಮುನ್ನಡೆಯನ್ನು ಸಾಧಿಸಬೇಕಾಗಿದೆ.

ಮಹಿಳಾ ವಿಮೋಚನೆಗೆ ಸ್ತ್ರೀಪರವಾದ ಬೆಳವಣಿಗೆಗಳು, ಸ್ತ್ರೀವಾದಿ ಚಿಂತನೆಗಳು ಮಹಿಳಾ ಹೋರಾಟಗಳೆಲ್ಲ ಸ್ತ್ರೀಶಿಕ್ಷಣಕ್ಕೆ ಒಲವು ತೋರಿಸಿರುವಂತೆಯೇ ಮುಕ್ತ ಅಭಿವ್ಯಕ್ತಿಗೂ ಸ್ತ್ರೀಸಶಕ್ತತೆಯ ಸಾಧನವೆಂಬ ಪರಿಕಲ್ಪನೆಯನ್ನು ಮಂಡಿಸುತ್ತಿರುವರು. ಅಕ್ಷರ–ಅರಿವು–ಅಭಿವ್ಯಕ್ತಿ ಒಂದನ್ನೊಂದು ಹಿಂಬಾಲಿಸಿ ಬರುವಂತಹವು. ನಮ್ಮ ಸಾಮಾಜಿಕ ಸಾಂಪ್ರದಾಯಿಕ ಕಟ್ಟುಪಾಡುಗಳ ನಿರ್ಬಂಧಗಳಲ್ಲಿ ಸ್ತ್ರೀಯರೇ ಹೆಚ್ಚಾಗಿ ಸಿಲುಕಿ, ತಮ್ಮ ನೋವು ಸಂಕಟಗಳನ್ನು ಹಂಚಿಕೊಳ್ಳದ ಪರಿಸ್ಥಿತಿಯಲ್ಲಿ ಮೌನವಾಗಿ ಎಲ್ಲವನ್ನೂ ಸಹಿಸುತ್ತ ಪುರುಷ ನಾಮಾಂಕಿತ ಸಹನಾಮೂರ್ತಿಯಲ್ಲಿ ಸ್ತ್ರೀ ಕಳೆದುಹೋಗಿರುವುದು ಐತಿಹಾಸಿಕ, ವಾಸ್ತವ ಸತ್ಯ. ಮಹಿಳೆಗಿರಬೇಕಾದ ಮುಕ್ತ ಅಭಿವ್ಯಕ್ತಿಯನ್ನು ಮೊಟಕುಗೊಳಿಸಿದ, ವ್ಯವಸ್ಥೆಯಲ್ಲಿ ಬಾಳಿದ, ಬಾಡಿದ ಮಹಿಳಾ ಜೀವಗಳು ಅದೆಷ್ಟೋ!

ಸಾಮಾಜಿಕ ಅಸಮಾನ ನೆಲೆಗಳಲ್ಲಿ ಬಹುಮುಖ್ಯವಾದ ಲಿಂಗತಾರತಮ್ಯ ಧೋರಣೆ. ಆ ಸಂಬಂಧಿಯಲ್ಲಿ ಹತ್ತಿಕ್ಕಲ್ಪಾದ ಅಭಿವ್ಯಕ್ತಿ ಸ್ವಾತಂತ್ರ್ಯ, ನಮ್ಮ ಸಾಮಾಜಿಕ ಸಂರಚನೆಯಲ್ಲಿ ಮೂಲ ಘಟಕವಾಗಿರುವ ಕುಟುಂಬದಲ್ಲಿ ಹೆಣ್ಣಿನ ಅಭಿವ್ಯಕ್ತಿಗೆ ಇರುವ ಅವಕಾಶಗಳು ಅತ್ಯಂತ ಕಡಿಮೆ. ಕೌಟುಂಬಿಕ ನಿರ್ಧಾರಗಳು ವ್ಯವಹಾರಗಳು, ಆದೇಶಗಳೆಲ್ಲ ಪುರುಷರಲ್ಲೇ ಕೇಂದ್ರೀಕೃತವಾಗಿರುವುದರಿಂದ ಸ್ತ್ರೀ ಪುರುಷನ ಅಧೀನತೆಯಲ್ಲೇ ಅಭಿವ್ಯಕ್ತಿಯನ್ನು ಹೊಂದಿರುವುಳಾದ್ದರಿಂದ ಮಹಿಳೆ ಮಾತನಾಡುವ ಸಂದರ್ಭಗಳು ವಿರಳ. ಒಂದು ವೇಳೆ ಮಾತನಾಡಿದರೂ ಮಾತಿಗೆ ಮನ್ನಣೆ ಸಿಗದೆ ಮೌನವಾಗಿರುವ ಸಂದರ್ಭಗಳೇ ಹೆಚ್ಚು. ಮಹಿಳೆಯನ್ನು ಮಾತನಾಡದಂತೆ, ತಡೆಯುವಲ್ಲಿಯೂ ಪುರುಷ ಪ್ರಧಾನ ಪ್ರಾಬಲ್ಯ ತನ್ನ ಹಿಡಿತವನ್ನು ಸಾಧಿಸುತ್ತ, ಪುರಾಣ, ಕಾವ್ಯ, ಶಾಸ್ತ್ರ ಸಂಹಿತೆಯಲ್ಲಿ ತನಗೆ ಅನುವಾಗುವ ಅನಿಸಿದ ರೀತಿಯಲ್ಲಿಯೇ ಪುರುಷ ಸ್ತ್ರೀಯರನ್ನು ಚಿತ್ರಿಸಿ, ಅದನ್ನೇ ಸಾಮಾಜಿಕ ಧಾರ್ಮಿಕ ರೂಢಿ, ನಿಯಮಗಳಾಗಿ ಪರಿವರ್ತಿಸಿ ಆ ನಿಯಮಗಳಿಗೆ ಬದ್ಧರಾಗಿರುವಂತೆ ಸ್ತ್ರೀಯರನ್ನು

ನಿರ್ಬಂಧಿಸಿಲಾಗಿದೆ. ಪುರುಷಶಾಹಿ ಅಭಿವ್ಯಕ್ತಿಯಲ್ಲಿ ಸ್ತ್ರೀ ವಸ್ತುಶಃ ಕಳೆದುಹೋಗಿರುವುದನ್ನು ಆಧುನಿಕ ಸ್ತ್ರೀವಾದಿಗಳು ಖಂಡಿಸಿ ಮುಕ್ತ ಅಭಿವ್ಯಕ್ತಿ ಮಹಿಳೆಗೆ ಇರಬೇಕಾದ, ದೊರಕಬೇಕಾದ ಮೌಲಿಕ ಸಂದರ್ಭವೆಂಬುದನ್ನು ಮನಗಾಡಿದ್ದಾರೆ.

ಆಧುನಿಕ ಸ್ತ್ರೀವಾದವು ಗ್ರಹಿಸಿದ ಮಹತ್ವದ ಸಂಗತಿಯಾದ ಮಹಿಳಾ ಅಭಿವ್ಯಕ್ತಿ ಪುರುಷ ಅಭಿವ್ಯಕ್ತಿಗಿಂತ ಭಿನ್ನಸ್ವರೂಪವುಳ್ಳದ್ದು. ವಿಶ್ವದ ಬಹುತೇಕ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಾಚೀನ ಕಾಲದಿಂದ ಆಧುನಿಕ ಸಮಕಾಲೀನ ಸಂದರ್ಭದ ಪುರುಷ ನಿರ್ಮಿತ ಸಾಹಿತ್ಯ ಕೃತಿಗಳಲ್ಲಿ ಹೆಣ್ಣಿನ ಅಧೀನ ಸಂಸ್ಕೃತಿಯನ್ನೇ ಚಿತ್ರಿಸಿವೆ. ಪುರುಷ ಗ್ರಹಿಕೆಗಳಿಂದ ಪ್ರೇರಿತಗೊಂಡ ಅಭಿವ್ಯಕ್ತಿಗಳಲ್ಲಿ ಮಹಿಳೆಯರ ನೈಜಸ್ಥಿತಿಯನ್ನು, ಪ್ರಗತಿಪರವಾದ ಪ್ರತ್ಯೇಕ ಅಸ್ತಿತ್ವವನ್ನು ಕುರಿತಾದ ಚಿಂತನೆಗಳಿಲ್ಲ. ಆಧುನಿಕ ಸ್ತ್ರೀವಾದಿ ಚಿಂತಕಿ **ಡೆಲ್ ಸ್ಪೆಂಡರ್** ರಚಿತ 'Man Made Language' ಗ್ರಂಥದಲ್ಲಿ ಲಿಂಗತಾರತಮ್ಯದಿಂದ ಕೂಡಿದ ಭಾಷೆ, ಪುರುಷ ನಿರ್ಮಿತವಾದುದು. ಪುರುಷ ಗ್ರಹಿಕೆಯಲ್ಲಿ ರಚಿತವಾದ ಕೃತಿಗಳು ಮಹಿಳೆಯರ ಧ್ವನಿಯನ್ನು ವಾಸ್ತವದ ನೆಲೆಯಲ್ಲಿ ಅಭಿವ್ಯಕ್ತಗೊಳಿಸಲಾರವು. ಆದ್ದರಿಂದ ಮಹಿಳೆಯರು ಪಾರಂಪರಿಕವಾಗಿ ಪುರುಷ ನಿರ್ಮಿತ ಪುರಾಣ ಕಾವ್ಯ ಚರಿತ್ರೆಗಳಲ್ಲಿನ ಸ್ತ್ರೀಪಾತ್ರದ ಸಿದ್ಧಮಾದರಿಯನ್ನು ಬದಲಿಸಿ ಸ್ವಯಂನಿರ್ಮಿತ ಭಾಷಾಭಿವ್ಯಕ್ತಿಯನ್ನು ಹುಟ್ಟುಹಾಕುವುದು ಅನಿವಾರ್ಯವೆಂದು ಅರಿತರು. "ಹೆಣ್ಣಿನ ವ್ಯಕ್ತಿತ್ವದ ಸಹಜ ವಿಕಾಸಕ್ಕೆ ಮಾರಕವಾಗುತ್ತಿರುವ ಪುರುಷನಿರ್ಮಿತ ಪುರಾಣಗಳನ್ನು ಒಡೆಯುವುದು ಅತ್ಯಂತ ಅವಶ್ಯಕ ಎಂದು **ಶೀಲಾ ರೋಖಾತಮ್** ತನ್ನ **'Woman's Counsiciousness Man's World'** ಕೃತಿಯಲ್ಲಿ ಪ್ರತಿಪಾದಿಸಿದ್ದಾಳೆ. ಪುರುಷ ಪ್ರಧಾನ ಮೌಲ್ಯವ್ಯವಸ್ಥೆಯಲ್ಲಿ ಹೆಣ್ಣಿಗೆ ಸ್ತ್ರೀ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಕಲಿಸಲಾಗುತ್ತದೆ. ಇದು ಅವಳ ಮೇಲೆ ಆರೋಪಿಸಲ್ಪಟ್ಟ ಕಲಿಸಿದ ವ್ಯಕ್ತಿತ್ವವೇ ಹೊರತು ಸಹಜವಾಗಿ ಅರಳಿದ ವ್ಯಕ್ತಿತ್ವವಲ್ಲ. ಇಂತಹ ಕಲಿಕೆಗಳನ್ನು ಕೈಗೊಳ್ಳುವಾಗ ಅವಳು ಅನುಭವಿಸುವ ಮಾನಸಿಕ ಹಿಂಸೆ ಅತ್ಯಂತ ನೋವಿಗೊಳಗಾದದ್ದು, ಅವಳ ವ್ಯಕ್ತಿತ್ವ ಇಂತಹ ದಬ್ಬಾಳಿಕೆ ಕ್ರೌರ್ಯಗಳಲ್ಲಿ ಕರಗಿ ಹೋಗುವಂತಹದು. ಇದರ ತೀವ್ರ ಸ್ವರೂಪವನ್ನು ದಾಖಲಿಸಲು ಪುರುಷ ಪ್ರಧಾನ ಮೌಲ್ಯವ್ಯವಸ್ಥೆಯ ಭಾಷೆ ಅವಳಿಗೆ ಅಸಮರ್ಪಕವಾಗುತ್ತದೆ."[೪೦]

ಹೆಣ್ಣಿನ ಅಸ್ತಿತ್ವ, ವ್ಯಕ್ತಿತ್ವ ವಿಕಾಸಕ್ಕಾಗಿ ಮುರಿದು ಕಟ್ಟುವ ಪ್ರಕ್ರಿಯೆಯನ್ನು ಪ್ರತಿಪಾದಿಸಿದ ಆಧುನಿಕ ಸ್ತ್ರೀವಾದದ ಪರಿಕಲ್ಪನೆ ಅಕ್ಕಮಹಾದೇವಿಯಲ್ಲಿ ಅವಳ ಅಭಿವ್ಯಕ್ತಿಯ ಸ್ವರೂಪದಲ್ಲಿ ಗ್ರಹಿತವಾಗುತ್ತವೆ. ಒಡೆಯುವ ಪ್ರಕ್ರಿಯೆ ಅಕ್ಕನಲ್ಲಿ ಪುರುಷ ಪ್ರಾಧಾನ್ಯತೆಗೆ ತೋರಿಸಿದ ತೀವ್ರತರವಾದ ಪ್ರತಿಭಟನೆಯ ಸ್ವರೂಪದಲ್ಲಿದೆ.

"ವೇದ ಶಾಸ್ತ್ರ ಆಗಮ ಪುರಾಣಗಳೆಲ್ಲವು
ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಭೋ.
ಇವ ಕುಟ್ಟಲೇಕೆ ಕುಸುಕಲೇಕೆ?
ಅತ್ತಲಿತ್ತ ಹರಿವ ಮನವ ಶಿರವನರಿದಡೆ
ಬಚ್ಚಬರಿಯ ಬಯಲು ಚೆನ್ನಮಲ್ಲಿಕಾರ್ಜುನ."[೪೨]

ಪಾರಂಪರಿಕವಾದ ಪುರುಷ ಪ್ರಧಾನ ಗ್ರಹಿಕೆಯ ನೆಲೆಗಳಾದ ವೇದ ಶಾಸ್ತ್ರ, ಆಗಮ, ಪುರಾಣಗಳನ್ನು ಜಾಲಾಡಿದ ಅಕ್ಕಮಹಾದೇವಿ ಶೋಷಣೆಯ, ಅಧೀನ ಸಂಸ್ಕೃತಿಯ ಪ್ರತೀಕಗಳೆಂದೇ ಪರಿಭಾವಿಸಿ, ಮಹಿಳೆಯರ ಧ್ವನಿಯನ್ನು ಅಡಗಿಸಿದ ದಮನಕಾರಿ ತಂತ್ರಗಳೆಂಬುದನ್ನು ಬಯಲುಗೊಳಿಸಿ, ಅಧೀಮ ನೆಲೆಯನ್ನು ಘೋಷಿಸುವ ಪುರುಷ ಧೋರಣೆಯ ಪುರಾಣ ಕಾವ್ಯಗಳ ಶೋಷಿತ ಕ್ರೌರ್ಯದ, ಹಿಂಸಾತ್ಮಕ ನೆಲೆಗಳನ್ನು ಛಿದ್ರಗೊಳಿಸಿ ಮಾನವೀಯ ಸಂಬಂಧಗಳನ್ನು ದೈವತ್ವದೊಂದಿಗೆ ಸಮೀಕರಿಸುವಳು. ಸಮಾನತೆ, ಸಹಜತೆ, ವಾಸ್ತವಿಕ ಬದುಕಿನ ಸಂವೇದನೆಗಳನ್ನು ಘೋಷಿಸುವ ಅಭಿವ್ಯಕ್ತಿಯನ್ನು ಮರುಸೃಷ್ಟಿಸಿ, ಮಾನವೀಯ ನೆಲೆಯಲ್ಲಿ ಸಮಾನ ಅವಕಾಶಗಳ ಮುಕ್ತದ್ವಾರವನ್ನು ತೆರೆಯಬೇಕೆಂಬ ಆಶಯವನ್ನು ಹೊಂದಿದ್ದಾಳೆ. ಲೋಕ ವಾಸ್ತವದ ಬದುಕನ್ನು ಇತ್ಯಾತ್ಮಕ ದೃಷ್ಟಿಯಿಂದ ಗ್ರಹಿಸಿದ ಅಕ್ಕಮಹಾದೇವಿ ಸಮಾಜ ವ್ಯವಸ್ಥೆಯ ಅಸಮಾನ ನೆಲೆಗಳನ್ನು ಸೃಷ್ಟಿಸಿದ ಪರಂಪರೆಯ ಪುರುಷ ಅಭಿವ್ಯಕ್ತಿಗೆ ತನ್ನ ಸ್ತ್ರೀಯಾತ್ಮಕ ನೆಲೆಯಿಂದಲೇ ಪ್ರತಿರೋಧಿಸಿ ಮುರಿದು ಕಟ್ಟುವ ಕಾರ್ಯವನ್ನು ಕ್ರಿಯಾಶೀಲ ವ್ಯಕ್ತಿತ್ವದ ನಿರ್ಮಾಣಕ್ಕಾಗಿ ಕೈಕೊಳ್ಳುವಳು.

ವ್ಯಕ್ತಿತ್ವ ವಿಕಾಸದ ಪರಿಕ್ರಮಕ್ಕೆ ಪೂರಕವಾಗದ ಪೂರ್ವದ ಬಟ್ಟೆಗಳನ್ನು ತಿರಸ್ಕರಿಸುವ, ಪರಿಪೂರ್ಣ ಮಾನವೀಯ ವ್ಯಕ್ತಿತ್ವ ಸಂರಚನೆಗೆ ಅಗತ್ಯವಾದ ಚಿಂತನೆಗಳನ್ನು ಕಟ್ಟಿಕೊಡುವ ಅವಳ ಮುಕ್ತ ಅಭಿವ್ಯಕ್ತಿ ಆಧುನಿಕ ಸಮಕಾಲೀನ ಸಂದರ್ಭದ ಸ್ತ್ರೀಯರಿಗೆ ಅಷ್ಟೇ ಅಲ್ಲದೆ ದಮನಕಾರಿ ತಂತ್ರಗಳಿಗೆ ಬಲಿಯಾಗಿ ಹೋರಾಕ್ಕಿಳಿದವರಿಗೆಲ್ಲ ಆತ್ಮಸ್ಥೈರ್ಯವನ್ನು ನೀಡುತ್ತದೆ.

"ಓದಿ ಓದಿ ವೇದ ವಾದಕ್ಕಿಕ್ಕಿತ್ತು.
ಕೇಳಿ ಕೇಳಿ ಶಾಸ್ತ್ರ ಸಂದೇಹಕ್ಕಿಕ್ಕಿತ್ತು.
ಅರಿದೆಹೆ, ಅರಿದೆಹೆನೆಂದು ಆಗಮ ಅರೆಯಾಗಿ ಹೋಯಿತ್ತು.
ಪೂರೈಸಿಹೆ ಪೂರೈಸಿಹೆನೆಂದು
ಪುರಾಣ ಪೂರ್ವದ ಬಟ್ಟೆಗೆ ಹೋಯಿತ್ತು.
ನಾನೆತ್ತ ತಾನೆತ್ತ?
ಬೊಮ್ಮ ಬಟ್ಟಬಯಲು ಚೆನ್ನಮಲ್ಲಿಕಾರ್ಜುನ."[೪೩]

ವೈರುಧ್ಯದ ನೆಲೆಗಳನ್ನು ಪ್ರತಿನಿಧಿಸುವ ಪರಂಪರೆಯ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಶೋಧಿಸಿ, ಪೂರ್ವಾಗ್ರಹ ಪಿಡಿತವಾದ ವಿಚಾರಗಳನ್ನು ಪ್ರತಿಪಾದಿಸಿದ ಪೂರ್ವದಬಟ್ಟೆ, ಅಂದರೆ ಪರಂಪರೆಯ ಅಸಮಾನ ದೃಷ್ಟಿಕೋನವನ್ನು ಅಲ್ಲಗಳೆಯುವ ಅಕ್ಕಮಹಾದೇವಿ ಪ್ರಪಂಚದಲ್ಲಿ ಪರಮಾತ್ಮನ ಪ್ರತಿನಿಧಿಗಳಲ್ಲಿ, ಮನುಷ್ಯ ಸಂಬಂಧಗಳಲ್ಲಿ ಕಂದಕ ನಿರ್ಮಿಸಿದ ಪ್ರಾಚೀನ ಪರಂಪರೆಯ ಪೂರ್ವಗ್ರಹ ಪೀಡಿತ ಗ್ರಹಿಕೆಗಳನ್ನು ಪಲ್ಲಟಗೊಳಿಸಿ ಸಮದರ್ಶಿತ್ವವನ್ನು ಪುನರ್ ವ್ಯಾಖ್ಯಾನಿಸುವಳು.

ಆತ್ಮವಿಶ್ವಾಸವನ್ನು ಕುಂದಿಸುವ ಪೂರ್ವದ ಚಿಂತನೆಗಳನ್ನು ನಿರಾಕರಿಸಿದ ಅಕ್ಕಮಹಾದೇವಿ ಸಿದ್ಧಸಾಹಿತ್ಯದ ನೆಲೆಗಳನ್ನು ಖಂಡಿಸಿ, ಆತ್ಮವಿಶ್ವಾಸದ ಅಭಿವ್ಯಕ್ತಿಗೆ ಪ್ರಾಧಾನ್ಯತೆಯನ್ನು ನೀಡಿ ಅಂತಃ ಪ್ರಜ್ಞೆಯಿಂದ ಮೂಡಿದ ಮುಕ್ತ ಚಿಂತನೆಗಳನ್ನು ಮನ್ನಿಸಿದ ಮಹಾದೇವಿಯಕ್ಕ ಮಹಿಳೆಯ ಬಗೆಗಿನ ಪರಂಪರೆಯ ಪ್ರತಿನಿಧಿಕರಣವನ್ನು ವಿಮರ್ಶಿಸಿ ವಿಶ್ವಾಸದ ಅಭಿವ್ಯಕ್ತಿಗೆ ಆದ್ಯತೆ ನೀಡಿರುವಳು. ಮಹಿಳೆಯ ಕುರಿತಾದ ಪರಂಪರೆಯ ಮೌಲ್ಯಗಳನ್ನು ಅಭಿವ್ಯಕ್ತಗೊಳಿಸುವ ಪುರಾವೆಗಳನ್ನು ಅಲ್ಲಗಳೆದು ಪುನರ್‌ಸೃಷ್ಟಿಸಿದ ಅಭಿವ್ಯಕ್ತಿಯಲ್ಲಿ ಸ್ತ್ರೀಯರ, ಸಮರ್ಥತೆಗೆ ಸಶಕ್ತತೆಯ ನೆಲೆಯನ್ನೊದಗಿಸಿದ್ದಾಳೆ. ಸ್ಥಾಪಿತ ವ್ಯವಸ್ಥೆ ಸೃಷ್ಟಿಸಿದ ಸಿದ್ಧಮಾದರಿ ಮಹಿಳೆಯ ವ್ಯಕ್ತಿತ್ವವನ್ನು ವ್ಯತ್ಯಸ್ಥಗೊಳಿಸಿ ಸ್ತ್ರೀಸಮುದಾಯಕ್ಕೆ ಸ್ವಾಭಿಮಾನ, ಸಮಾನತೆ, ಸ್ವಾತಂತ್ರ್ಯಗಳ ಅರಿವಿಗೆ ತೆರದುಕೊಳ್ಳುವ ಸ್ವಯಂಮಾದರಿಯನ್ನು ನಿರ್ಮಿಸಿದ್ದಾಳೆ.

ಅಕ್ಕಮಹಾದೇವಿ ನೊಂದವರ ನೋವಿನ ಧ್ವನಿಯಾಗಿ, ತನ್ನ ಅಭಿವ್ಯಕ್ತಿಯಲ್ಲಿ ಮಹಿಳೆಯರು ವ್ಯವಸ್ಥೆಯಲ್ಲಿ ಅನುಭವಿಸಿದ, ಅನುಭವಿಸುತ್ತಿರುವ, ಸಂಕೀರ್ಣ ಸಮಸ್ಯೆಗಳು, ತಲ್ಲಣಗಳನ್ನು ಪ್ರತಿನಿಧಿಕರಣಗೊಳಿಸಿ ಮಹಿಳೆಗೆ ಮಿತಿಗೊಳಿಸಿರುವುದೆಲ್ಲವನ್ನು ಮೀರುವ, ಛಾತಿ ತೋರಿದ ಧೀರತೆಯ ವ್ಯಕ್ತಿತ್ವದವಳಾಗಿ ಇಂದಿನ ಸಮಕಾಲೀನ ಮಹಿಳೆಯರಿಗೆ ತನ್ನಿಚ್ಛೆಯ ಬದುಕನ್ನು ಕಟ್ಟಿಕೊಳ್ಳಲು ಪ್ರೇರಣೆಯನ್ನೊದಗಿಸಿದ್ದಾಳೆ.

ಜಾಗತೀಕರಣ, ಔದ್ಯೋಗಿಕರಣ, ಉದಾರೀಕರಣಗಳ ಪ್ರಭಾವ ಮತ್ತು ಪರಿಣಾಮ ಜನರ ಜೀವನಸ್ತರಗಳಲ್ಲಿ ಹಲವು ರೀತಿಯಲ್ಲಿ ಬದಲಾವಣೆ ಕಾಣಿಸಿಕೊಳ್ಳುತ್ತಿರುವ ದಿನಗಳಲ್ಲಿ ವಾಸ್ತವಿಕ ಚಿತ್ರಣವನ್ನು ಮನೆಯಂಗಣಕ್ಕೆ ತಂದು ನಿಲ್ಲಿಸುತ್ತಿರುವ ಸಮೂಹ ಮಾಧ್ಯಮಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನವಾಹಿನಿಗಳಾಗಿರುವುದು ಒಂದೆಡೆಯಾದರೆ, ಬಂಡವಾಳಶಾಹಿಗಳ ಹಿತಾಸಕ್ತಿಯನ್ನು ಪೋಷಿಸುವ ಮಾರ್ಗಗಳಾಗಿಯೂ ಮಾಧ್ಯಮಗಳು ಮತ್ತೊಂದೆಡೆ ಲಾಭದಾಯಕ ಪ್ರವೃತಿಯ ಏಜನ್ಸಿಗಳಾಗುತ್ತಿರುವುದು ಅಪಾಯಕರ. ಪ್ರಸ್ತುತ ಸನ್ನಿವೇಶದಲ್ಲಿ ಸಮೂಹಮಾಧ್ಯಮಗಳು ಸ್ತ್ರೀ ಕೇಂದ್ರಿತವಾಗಿವೆ. ಅದರಲ್ಲೂ ಸ್ತ್ರೀಯ ದೇಹ ಮತ್ತು ಅಂಗಾಂಗಗಳ ಪ್ರದರ್ಶನದ ವೇದಿಕೆಯಾಗಿವೆ. ಆಧುನಿಕ ಜಗತ್ತಿನ ಜಾಗತೀಕರಣ, ಉದಾರೀಕರಣ ನೀತಿಗಳ ಸರಕಾಗಿ ಸ್ತ್ರೀಯರು ದೈಹಿಕ

ಸಂಬಂಧಿಯಾದ ಲೈಂಗಿಕತೆಯಿಂದಲೇ ಬಳಸಲ್ಪಡುತ್ತಿರುವರು. "ಜಾಹಿರಾತು ಜಗತ್ತು ವಸ್ತುಗಳನ್ನು ಕೊಳ್ಳುವುದಕ್ಕಾಗಲಿ, ಮಾರಾಟಕ್ಕಾಗಲಿ, ಅದನ್ನು ಅವರಿಗೆ ತಲುಪಿಸುವುದಕ್ಕೆ ಆಗಲಿ, ಹೆಣ್ಣನ್ನೇ ಕೇಂದ್ರವಾಗಿಸಿಕೊಂಡಿದೆ. ಜಾಹಿರಾತು ಜಗತ್ತು ಹೆಣ್ಣಿನ ದೇಹವನ್ನು ಒಂದು ಉಪಭೋಗದ ವಸ್ತುವಾಗಿರಿಸಿಕೊಂಡಿದೆ."[೪೪]

ಪರಂಪರೆಯ ಪುರುಷಪ್ರಧಾನ ವ್ಯವಸ್ಥೆಯ ಪಿತೃ ಸಂಸ್ಕೃತಿಯ ಮೌಲ್ಯಗಳನ್ನು ಮಾಧ್ಯಮಗಳು ಮಹಿಳೆಯ ಮೇಲೆ ಹೇರುತ್ತಿವೆ. ಹೆಣ್ಣಿನ ದೇಹವನ್ನೇ ಬಂಡವಾಳ ಮಾಡಿಕೊಂಡ ಮಾಧ್ಯಮಗಳು ಅವಳ ಅಂಗಾಂಗಗಳ ವಿಕೃತ ಪ್ರದರ್ಶನದ ಮೂಲಕ ಅವಳ ವ್ಯಕ್ತಿತ್ವವನ್ನು, ಅಂತಃ ಶಕ್ತಿಯನ್ನು ನಾಶಗೊಳಿಸುತ್ತ ಹೆಣ್ಣಿಗೆ ಸಮಾನ ಅವಕಾಶಗಳ ಭ್ರಮಾತ್ಮಕ ಲೋಕವನ್ನು ಸೃಷ್ಟಿಸಿ, ಪುರುಷ ಸ್ವಾರ್ಥಕ್ಕೆ ಸ್ತ್ರೀ ಅಧೀನಳಾಗಿರುವಂತೆಯೇ ತೆರೆಮರೆಯಲ್ಲಿ ತಂತ್ರಗಳು ರೂಪುಗೊಳ್ಳುತ್ತಿವೆ. ಸ್ತ್ರೀ–ಪುರುಷರಿಬ್ಬರ ಸಮಾನತೆಯನ್ನು ಪ್ರತಿನಿಧಿಸಬೇಕಾದ ಮಾಧ್ಯಮಗಳು ಮಹಿಳೆಯರನ್ನು ಪ್ರತ್ಯಕ್ಷ, ಪರೋಕ್ಷವಾಗಿ ಶೋಷಿಸುತ್ತಿವೆ.

ಸ್ತ್ರೀ ಸ್ಥಾನಮಾನ, ಸಮಾನತೆ ಸಮಸ್ಯೆಗಳತ್ತ ಗಮನಕೊಡದ ಮಾಧ್ಯಮಗಳು ಸ್ತ್ರೀ ಶರೀರವನ್ನು ಸರಕಾಗಿಸಿ ಶೋಷಿತ ನೆಲೆಯಾಗಿ ಪ್ರತಿಬಿಂಬಿಸುತ್ತಿರುವ ಸಮಕಾಲೀನ ಸಂದರ್ಭದಲ್ಲಿ ಮಹಾದೇವಿಯಕ್ಕನ ಮಹಿಳಾ ದೇಹಸಂಬಂಧೀ ಬಳಕೆಯ ಸ್ವಾರ್ಥವನ್ನು ಬಯಲುಗೊಳಿಸಿ ತನ್ನ ವ್ಯಕ್ತಿತ್ವವನ್ನು ವಿಕಾಸಗೊಳಿಸಿಕೊಳ್ಳುವ ಪ್ರತಿನಿಧಿಯಾಗಿ ಅವಳ ಅಭಿವ್ಯಕ್ತಿಯಲ್ಲಿರುವ ಅಕ್ಕಮಹಾದೇವಿಯನ್ನು ಅರಿತು ಅನುಸರಿಸುವ ತುರ್ತು ಸ್ತ್ರೀಯರಿಗಿದೆ. ಹೆಣ್ಣು ಹೆಣ್ತನ, ಸ್ತ್ರೀ ಸಂಸ್ಕೃತಿಯ ಹೆಸರಿನಲ್ಲಿ ವೈಭವೀಕರಿಸುವ, ಅಧೀನಗೊಳಿಸುವ ಪುರುಷ, ವ್ಯವಸ್ಥೆಯ ಚಿಂತನೆಗಳನ್ನು ದಾಟುವ ಕುರಿತು ಅಕ್ಕ ನಿಷ್ಠುರವಾಗಿ ಅಭಿವ್ಯಕ್ತಗೊಳಿಸಿದ್ದಾಳೆ.

"ಎನ್ನ ತುಂಬಿದ ಜವ್ವನ, ತುಳುಕುವ ಮೋಹನವ,
ನಿನಗೆ ಇಂಬು ಮಾಡಿಕೊಂಡಿರ್ದೆನಲ್ಲಾ ಎಲೆಯಯ್ಯಾ.
ಎನ್ನ ಲಂಬಿಸುವ ಲಾವಣ್ಯದ ರೂಪುರೇಖೆಗಳ
ನಿನ್ನ ಕಣ್ಣಿಂಗೆ ಕೈವಿಡಿದಂತೆ ಮಾಡಿರ್ದೆನಲ್ಲಯ್ಯ.
ನಿನ್ನ ಮುಂದಿಟ್ಟಲನ್ಯರು ಕೊಂಡೊಯಿವಾಗಲೆಂತು ಸೈರಿಸಿದೆ ಹೇಳಾ
ಚೆನ್ನಮಲ್ಲಿಕಾರ್ಜುನಾ?"[೪೫]

"ಕಾಯದ ನುಂಪನೊಬ್ಬ ಕಂಡು ಬಯಸಿದನು.
ಅವಂಗೆ ಮಾಂಸವ ಬೆಲೆಮಾಡಿಕೊಡುವೆನು

ಎನ್ನ ಪ್ರಾಣದೊಡೆಯಂಗೆ ಎನ್ನ ಹೃದಯವ ಸೂರೆಗೊಡುವೆನು
ಚೆನ್ನಮಲ್ಲಿಕಾರ್ಜುನದೇವಯ್ಯನು ಮುನಿದು
ಭವಿಗೆ ಮಾರಿದಡೆ ಹೊಲಬುಗೆಡದಿರಾ ಮನವೆ.[೪೬]

ಹೆಣ್ಣಿನ ಜವ್ವನ, ಲಾವಣ್ಯ, ರೂಪುರೇಖೆಗಳನ್ನು ಪ್ರದರ್ಶಿಸಿ ಪುರುಷ ಪ್ರಧಾನತೆಯನ್ನು ಎತ್ತಿಹಿಡಿಯುವ ಬಂಡವಾಳಶಾಹಿಗಳ ವ್ಯಾಪಾರೀಕರಣ ಸಂಸ್ಕೃತಿಯಿಂದ ತನ್ನನ್ನು ರಕ್ಷಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಅಕ್ಕನ ಅಭಿವ್ಯಕ್ತಿಗಳು ಸಾಕ್ಷೀಕರಿಸುತ್ತವೆ. 'ರೂಪದರ್ಶಿತ್ವ' ನೆಲೆಯನ್ನು ವಿರೋಧಿಸುವ ಮಹಿಳಾದೃಷ್ಟಿಕೋನ ಮಹಾದೇವಿಯಕ್ಕನಲ್ಲಿದೆ. ಸ್ತ್ರೀಶರೀರ, ಲಾವಣ್ಯಗಳ ಮೋಹ ಪರಂಪರಾಗತವಾಗಿ ಪುರುಷದೃಷ್ಟಿಯ ಸ್ವಾರ್ಥಕ್ಕೆ ಬಳಕೆಯಾಗುತ್ತ ಬಂದಿರುವ ದಯನೀಯ ಸ್ಥಿತಿಯನ್ನು ಬಯಲುಗೊಳಿಸಿದ ಅಕ್ಕಮಹಾದೇವಿ ಸ್ತ್ರೀಯರ ದೇಹದ ದುರ್ಬಳಕೆಗೆ ತೀವ್ರ ಆಕ್ಷೇಪವನ್ನೆತ್ತಿರುವ ಸ್ಪಷ್ಟ ಧ್ವನಿಗಳು ಅವಳ ಅಭಿವ್ಯಕ್ತಿಯಲ್ಲಡಗಿವೆ. ಸಮಕಾಲೀನ ಸ್ತ್ರೀ ಸಮುದಾಯ ಸ್ಥಾಪಿತ ವ್ಯವಸ್ಥೆಯ ಪುರುಷ ಪ್ರಾಬಲ್ಯದ ಚಿಂತನೆಗಳನ್ನು ಸ್ಥಿರಿಕರಿಸುತ್ತಿರುವ ಸರ್ವಪ್ರಯತ್ನಗಳನ್ನು ಎಚ್ಚರದಿಂದಲೇ ಗಮನಿಸಿ, ಆಕ್ರಮಣಕ್ಕಾಗಿ ಆಮಿಷವೊಡ್ಡುವ ಬಂಧಗಳಿಗೆ ಒಳಗಾಗದೇ ಒಳಎಚ್ಚರಿಕೆಯ ಧ್ವನಿಗೆ ಕಿವಿಗೊಡಬೇಕಾಗಿರುವುದನ್ನು ಅಕ್ಕನ ಚಿಂತನೆಗಳು ಪ್ರತಿಪಾದಿಸುತ್ತವೆ. ಮಹಾದೇವಿಯಕ್ಕನ ಮಹಿಳಾಪರವಾದ ಧೋರಣೆಗಳನ್ನು ಧಾರಣಮಾಡಿಕೊಳ್ಳುವ ತನ್ನ ದಾರಿಯನ್ನು ಸ್ವಯಂ ನಿರ್ಮಿಸಿಕೊಳ್ಳುವ ಚೈತನ್ಯವನ್ನು ಪಡೆದುಕೊಂಡು ಮುನ್ನಡೆಯಬೇಕಾಗಿದೆ.

ಆಧುನಿಕ ಕಾಲದ ಸ್ತ್ರೀಸಮುದಾಯ ತನಗಿರುವ ಸಂಪನ್ಮೂಲಗಳನ್ನು ಬಳಸಿಕೊಳ್ಳುತ್ತಲೇ ಅಂತಃಶಕ್ತಿಯನ್ನು ಹೆಚ್ಚಿಸಿಕೊಂಡು ತನ್ನ ವ್ಯಕ್ತಿತ್ವವಿಕಾಸವನ್ನು ಮಾಡಿಕೊಳ್ಳಲು ಸ್ವಯಂ ಸಿದ್ಧತೆಯನ್ನು ರೂಪಿಸಬೇಕಿದೆ. ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳುವ ಮನಸ್ಥಿತಿಯನ್ನು ಧಾರಣಮಾಡಿಕೊಂಡು ಸಿದ್ಧನೆಲೆಗಳನ್ನು ಒಡೆಯುವುದು, ಪುನರ್‌ಸೃಷ್ಟ್ಯಾತ್ಮಕ ಪ್ರಕ್ರಿಯೆಯಲ್ಲಿ ಕ್ರಿಯಾಶೀಲಳಾಗಿ ತೊಡಗಿಸಿ ಕೊಳ್ಳುವತ್ತ ಚಿಂತನೆ ಮಾಡಬೇಕಾಗಿದೆ. ಸ್ತ್ರೀಸಮುದಾಯದ ಸೃಜನಶೀಲತೆ, ಸಶಕ್ತತೆಯನ್ನು ಪುರುಷ್ಕರಿಸುವ ಆಧುನಿಕೋತ್ತರ ಸ್ತ್ರೀವಾದವು ಸ್ತ್ರೀಯರ ಸಮಗ್ರ ವ್ಯಕ್ತಿತ್ವದ ಬೆಳವಣಿಗೆ ಕುರಿತು ನಿರಂತರ ಚಿಂತನೆ, ಚಳುವಳಿಗಳ ಮುಖೇನ ಪುರುಷ ಮೌಲ್ಯಗಳನ್ನು ಮುರಿದು ಕಟ್ಟುವ ಸತತ ಪ್ರಯತ್ನಗಳನ್ನು ಮಾಡುತ್ತಿರುವ ಸಮಕಾಲೀನ ಸಂದರ್ಭದಲ್ಲಿ ಕನ್ನಡದ ನೆಲದಲ್ಲಿ ಸಾಮಾನ್ಯ ಹೆಣ್ಣಾಗಿ ಹುಟ್ಟಿ ತನಗೆದುರಾದ ಸಂಘರ್ಷಗಳನ್ನು ದೃಢಮನಸ್ಸಿನಿಂದ ಎದುರಿಸಿ ಹೆಣ್ಣಾಗಿಯೂ ಹಿರಿಮೆ ತಂದುಕೊಂಡ ಮಹಿಳೆ ಮಹಾದೇವಿಯಕ್ಕ.

ಅಕ್ಕಮಹಾದೇವಿ ತನ್ನ ಕಾಲ, ಪ್ರದೇಶ, ಸಮಾಜ ವ್ಯವಸ್ಥೆಗಳ ಮಿತಿಯೊಳಗೂ ಮಹಿಳೆಗೆ ವಿಧಿಸಿದ ಸಿದ್ಧಪಾತ್ರಗಳು, ಸಿದ್ಧ ಮಾಲ್ಯಗಳನ್ನು ಮೀರುವ, ಮೌಲ್ಯಗಳನ್ನು ಮುರಿದು ಕಟ್ಟುವ

ಸಾಹಸ ತೋರಿದವಳು. ಆಧುನಿಕ, ಆಧುನಿಕೋತ್ತರ ಸ್ತ್ರೀವಾದದ ಸಮಗ್ರ ದೃಷ್ಟಿಯನ್ನು ಅಕ್ಕಮಹಾದೇವಿ ಅಭಿವ್ಯಕ್ತಿಗಳು ಅನಾವರಣಗೊಳಿಸಿವೆ. ಅಲ್ಲದೆ ಸಮಕಾಲೀನ ಸಂದರ್ಭದ ಸಂಕೀರ್ಣ ವ್ಯವಸ್ಥೆಯ ಗ್ರಹಿಕೆ ಮತ್ತು ಪ್ರಗತಿಯ ಧೋರಣೆಗಳನ್ನೊಳಗೊಂಡ ಅವಳ ವಚನಗಳು ಆಧುನಿಕೋತ್ತರ ಸ್ತ್ರೀವಾದದ ಚಿಂತನೆಗಳನ್ನು ಮೀರಿದ ಪ್ರಗತಿಪರ ಪ್ರಮುಖವಾದ ಮಹಿಳಾ ದೃಷ್ಟಿಕೋನವನ್ನು ಅಭಿವ್ಯಕ್ತಗೊಳಿಸುತ್ತವೆ.

ಹೆಣ್ಣು, ಹೆಣ್ತನವನ್ನು ಹಳಿಯದೇ ಹೆಣ್ಣಾಗಿಯೂ ಹಿರಿದಾದ ವ್ಯಕ್ತಿತ್ವವನ್ನು ಸಿದ್ಧಿಸಿಕೊಂಡ ಹಿರಿಮೆ ಅಕ್ಕನದು. ಸ್ತ್ರೀತ್ವದ ಸಿದ್ಧನೆಲೆಗಳನ್ನು ಸ್ವಸಾಮರ್ಥ್ಯದಿಂದ ಜಯಿಸಿ, ಹೆಣ್ತನವನ್ನು ಮೀರಿ, ಭಾವಿಸಲು ಪುರುಷಳಾಗಿ ದ್ವಿಲಿಂಗಿತ್ವವನ್ನು ಸಮನಿಸಿಕೊಂಡು, ತನ್ನ ಅನುಭಾವಿಕ ಔನತ್ಯದಿಂದ ಸ್ತ್ರೀ–ಪುರುಷ ನೆಲೆಗಳೆರಡನ್ನೂ ಮೀರಿ ಸ್ವಯಲಿಂಗಿಯಾದ ಅಕ್ಕಮಹಾದೇವಿ ಲೋಕದ ಮಹಿಳೆಯಾಗಿ ಹುಟ್ಟಿ, ಹುಟ್ಟು ಹೊರೆಯನ್ನು ಕಳೆದುಕೊಂಡು ಹರನೊಂದಿಗೆ ಬೆರೆತು ಬಯಲು ನಿರ್ವಯಲ ಸ್ಥಿತಿಯಲ್ಲಿ ನಿಂತು ತಾ ತಲುಪಿದ ಎತ್ತರವನ್ನು ಬಿತ್ತರಿಸುವ ಧ್ವನಿಗಳು ಸಾಮಾನ್ಯ ಮಹಿಳಾ ದೃಷ್ಟಿಕೋನಕ್ಕಿಂತ ಭಿನ್ನವಾದವುಗಳು.

> "ಘನವ ಕಂಡೆ, ಅನುವ ಕಂಡೆ,
> ಆಯತ ಸ್ವಾಯತ ಸನ್ನಿಹಿತ ಸುಖವ ಕಂಡೆ.
> ಅರಿವರಿದು ಮರಹ ಮರೆದೆ.
> ಕುರುಹಿನ ಮೋಹ ಮೊರೆಗೆಡದೆ
> ಚೆನ್ನಮಲ್ಲಿಕಾರ್ಜುನಾ,
> ನಿಮ್ಮನರಿದು ಸೀಮೆಗೆಟ್ಟೆನು."[೪೭]

ಸಾಮಾಜಿಕ ವ್ಯವಸ್ಥೆಯಲ್ಲಿ ಸಹಜ ಹೆಣ್ಣಾಗಿ ಹುಟ್ಟಿ, ಸಾಧನೆಯ ಹಂಬಲಕ್ಕೆ ಎದುರಾದ ಹೆಣ್ತನವನ್ನು ಇಟ್ಟುಕೊಂಡು ಪುರುಷ ಪ್ರಭುತ್ವ, ಧರ್ಮ ವ್ಯವಸ್ಥೆಗಳು ಮಹಿಳೆಗೆ ವಿಧಿಸಿದ ನಿರ್ಬಂಧಗಳನ್ನು ಸಾಮಾನ್ಯ ಸ್ತ್ರೀಯರ ನೆಲೆಯಲ್ಲೇ ಅನುಭವಿಸಿ ಮೌಲ್ಯಗಳಲ್ಲಿ ಮುಳುಗಿಯೂ ಮೀರಿದ ಮಹಾದೇವಿಯಕ್ಕ. ಸ್ಥಾಪಿತ ಮೌಲ್ಯಗಳು ಮಹಿಳೆಗೆ ವಿಧಿಸಿದ ಮಿತಿಗಳನ್ನು, ಮಿಥ್‌ಗಳನ್ನು ಮೀರಿ ಮಹಿಳೆ ಮಹೋನ್ನತಿಯನ್ನು ಹೊಂದಬಲ್ಲಳೆಂಬುದನ್ನು ಸಾಧಿಸಿ ಮಹಿಳಾ ಲೋಕಕ್ಕೆ ಹೆಮ್ಮೆ, ಹಿರಿಮೆಯನ್ನು ತಂದುಕೊಟ್ಟಿರುವಳು.

ಅಕ್ಕಮಹಾದೇವಿಯ ಬದುಕು, ಬರಹಗಳು ಅವಳ ಸಮಕಾಲೀನ ಸಂದರ್ಭದ ಶರಣರನ್ನು ಪ್ರಭಾವಿತಗೊಳಿಸಿದುದಷ್ಟೇ ಅಲ್ಲದೆ ಹರಿಹರ ಆದಿಯಾಗಿ ಆಧುನಿಕೋತ್ತರ ಸಮಕಾಲೀನ

ಸಂದರ್ಭಗಳಿಗೂ ಅಕ್ಕನ ಅಭಿವ್ಯಕ್ತಿಗಳು ತನ್ನ ಪ್ರಭಾವಗಳನ್ನುಳಿಸಿಕೊಂಡು ಬಂದಿವೆ. ಅಕ್ಕನ ತೀವ್ರವಾದಿ ಅಭಿವ್ಯಕ್ತಿ ಬದುಕು, ಹೋರಾಟಗಳು ಆಧುನಿಕ ಸಂದರ್ಭಕ್ಕೂ ಮುಖಾಮುಖಿಗೊಳ್ಳುತ್ತಲೇ ಇವೆ. ಅಕ್ಕಮಹಾದೇವಿಯ ವ್ಯಕ್ತಿತ್ವ ವಚನಗಳು ಹನ್ನೆರಡನೇ ಶತಮಾನದ ಅಕ್ಕನ ಸಮಕಾಲೀನ ಶರಣರು, ಹರಿಹರ, ಶೂನ್ಯಸಂಪಾದನಾಕಾರರು ಮೊದಲಾದ ಆಧುನಿಕ ಸಂದರ್ಭದಲ್ಲಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿಯೂ ಪ್ರವೇಶ ಪಡೆದಿವೆ. ಅಕ್ಕನ ಮಾದರಿ ವ್ಯಕ್ತಿತ್ವ ಸಾಹಿತ್ಯದ ವಿವಿಧ ಮಜಲುಗಳಲ್ಲಿ ತನ್ನ ಪ್ರಭಾವವನ್ನುಳಿಸಿಕೊಂಡು ವೈವಿಧ್ಯಮಯ ಸಾಹಿತ್ಯ ಪ್ರಕಾರಗಳಲ್ಲಿ ಅನಾವರಣಗೊಂಡಿದೆ. ಆದರೆ ಆಧುನಿಕ ಕಾಲದ ಸಾಹಿತ್ಯ ಪ್ರಕಾರಗಳಲ್ಲಿ ಕಾವ್ಯಪ್ರಪಂಚ ಅಕ್ಕನನ್ನು ಉಳಿದೆಲ್ಲ ಸಾಹಿತ್ಯ ಪ್ರಕಾರಗಳಿಗಿಂತ ಹತ್ತಿರವಾಗಿಸಿಕೊಂಡಿದೆ. ಅದರಲ್ಲೂ ಆಧುನಿಕ ಕನ್ನಡದ ಕವಿಯಿತ್ರಿಯರು ಅಕ್ಕನ ವ್ಯಕ್ತಿತ್ವದಲ್ಲಿ ಹೆಣ್ತನಕ್ಕೆ ಘನತೆ ತಂದುಕೊಟ್ಟ ಅಪೂರ್ವವಾದ ಅಸದೃಶ್ಯವಾದ ಪ್ರತೀಕವನ್ನು ಕಾಣುವ ಆ ಪ್ರತೀಕವನ್ನು ತಮ್ಮ ಕಾವ್ಯಸಂದರ್ಭದಲ್ಲಿ ಪ್ರತಿಮೆಯನ್ನಾಗಿ ಮಾಡಿಕೊಳ್ಳುವ ತೀವ್ರ ತುಡಿತವನ್ನು ಹೊಂದಿದ್ದಾರೆ.

ಅಕ್ಕನ ವ್ಯಕ್ತಿತ್ವ ವಚನಗಳ ವೈಶಿಷ್ಟ್ಯಗಳೆರಡನ್ನೂ ಕನ್ನಡದ ಶಿಷ್ಟ ಮತ್ತು ಜನಪದ ಕಾವ್ಯಪರಂಪರೆ ಕಟ್ಟಿಕೊಂಡುತ್ತ ಬಂದಿದೆ. "ಅಕ್ಕನ ವ್ಯಕ್ತಿತ್ವ ಸಾಧನೆಯನ್ನು ಕುರಿತಂತೆ ಆಕೆಯ ಸಮಕಾಲೀನ ವಚನಕಾರರೇ ಅದ್ಭುತವಾಗಿ ಹೇಳಿದ್ದಾರೆ. ನಂತರದಲ್ಲಿ ಜನಪದ ಕವಿಗಳು ಅಕ್ಕನನ್ನು ಕುರಿತು ಮನ ತುಂಬಿ ಹಾಡಿದ್ದಾರೆ."

"ಶರಣೆಂದೆ ಮಲ್ಲಯ್ಗೆ ಶರಣೆಂದೆ ಗುರುವೀಗೆ
ಶರಣೆಂದೆ ಮಲ್ಲಯ್ನ ಮಡದಿಗೆ! ಮಾದೇವ್ಗೆ
ಶರಣೆಂದು ಕಲ್ಲುಹಿಡಿದೇನು."೪೮

"ಎಂದು ಹಾಡಿರುವ ಜನಪದ ಗರತಿ, ಮಾದೇವಿಯನ್ನು ನೆನಪಿಸಿಕೊಂಡೇ ಬೀಸಲು ಪ್ರಾರಂಭಿಸಿದ್ದಾಳೆ. ಮಾದೇವಿಯನ್ನು ನೆನೆದರೆ ಎಲ್ಲಿಲ್ಲದ ಹಾಡು ಹರಿದಾವ ಎಂದು ಎದೆ ತುಂಬಿ ಹೇಳಿದ್ದಾಳೆ. ಹೀಗೆ ವಚನಕಾರರಿಂದ ಜನಪದರಿಂದ, ವಚನ ಹಾಗೂ ಜನಪದ ಕಾವ್ಯಗಳಲ್ಲಿ ರೂಪ ಪಡೆದ ಅಕ್ಕಮಹಾದೇವಿಯ ವ್ಯಕ್ತಿತ್ವ ಇಂದು ಜಗದಗಲ, ಮುಗಿಲಗಲ ಪಸರಿಸಿದೆ. ಹನ್ನೆರಡನೇ ಶತಮಾನದಿಂದ ಇಪ್ಪತ್ತನೇ ಶತಮಾನದವರೆಗೆ ಅನೇಕ ಕವಿಗಳು ಅಕ್ಕನನ್ನು ಕುರಿತು ಧ್ಯಾನಿಸಿದ್ದಾರೆ. ಅಂತಹ ಒಂದು ಕಾವ್ಯಪರಂಪರೆಯೇ ಕನ್ನಡದಲ್ಲಿ ಬೆಳೆದುಕೊಂಡು ಬಂದಿದೆ."೪೯

ಸಮಕಾಲೀನ ಸಂದರ್ಭದ ವ್ಯವಸ್ಥೆಯ ಕ್ರೌರ್ಯವನ್ನು ಭೃಷ್ಟ ವ್ಯವಸ್ಥೆಯನ್ನು ಬಯಲಿಗೆಳೆದು ಅಕ್ಕನಿಗೆ ಆಹ್ವಾನ ನೀಡುವ ಆಶಾ ಕಡಪಟ್ಟಿ ಅವರ 'ಅಕ್ಕಾ' ಕವಿತೆ ಮನೋಜ್ಞವಾಗಿದೆ.

"ದೇವರೆ ಗಂಡನೆಂದು ಕುಳಿತರೆ
ದೇವದಾಸಿ ಎಂದು ಅನ್ನಬಹುದು.
ಪಾಪಪುಣ್ಯಗಳ ಮರೆತ ಮಾನವರ
ಸಮತೋಲನ ಸರಿಯಾಗಿಲ್ಲ.
ಆಗಿದ್ದ ಸಮಾಜ ಈಗಿಲ್ಲ.
ರಾಮರಾಜ್ಯವೆಲ್ಲ
ರಾವಣ ರಾಜ್ಯವಾಗಿದೆ.
ಪ್ರತಿ ಮನೆಗೊಬ್ಬ ದುಶ್ಯಾಸನ."[೩೦]

ವಸ್ತುಸ್ಥಿತಿಯ ಗ್ರಹಿಕೆಯ ಜೊತೆಗೆ ಬದಲಾವಣೆಯ ಬದುಕಿಗೆ ತೆರೆದುಕೊಳ್ಳುವ ಬಯಕೆಯ ಆಶಯದ ಹಿನ್ನೆಲೆಯಲ್ಲಿ ಇಲ್ಲಿಯ ಧ್ವನಿ ವ್ಯಕ್ತವಾಗುತ್ತದೆ.

"ಒಂದುವೇಳೆ ಬರುವುದಾದರೆ
ರಾಜಕಿಯ ಆಳಕ್ಕಿಳಿದು
ಶೋಷಣೆಗಳ ಶೋಕವರಿತು
ಭ್ರಷ್ಟಾಚಾರಗಳನ್ನು ಬಯಲಿಗೆಳೆದು
ನಮ್ಮನ್ನೇ ಅಡಿಪಾಯ ಮಾಡುವವರನ್ನು
ಗಡಿಪಾರು ಮಾಡಿ
ಬಂಡಾಯಗಳ ಬಂಡಿ ಹೂಡಿ
ಕೊಂಡೊಯ್ಯುವುದಾದರೆ ಬಾ."[೩೧]

ಸ್ಥಾಪಿತ ಸಮಾಜದ ಪಿತೃಪ್ರಧಾನ, ಪುರುಷ ಪ್ರಾಬಲ್ಯದ ಮೌಲ್ಯಗಳು ಸ್ತ್ರೀ ಅಸ್ಮಿತತೆಯನ್ನು ಹೊಸಕಿ ಹಾಕುವ ವ್ಯಂಗ ಚಿತ್ರಣ ಸ.ಉಷಾ ಅವರ 'ಅಕ್ಕ ಹೇಳಿದ್ದು' ಕವಿತೆಯಲ್ಲಿ ವ್ಯಕ್ತವಾಗಿದೆ.

"ಸೆರಗೆಳವ ರಾಜರು
ಕೊಂಕು ನೋಟವ ಹೊದ್ದ
ತುಂಬು ಸೆರಗಿನ ಗರತಿಯರು
ಬೇನೆಯನರಿಯದ ಬಂಜೆಯರು
ಉಡತಡಿಗೂ ಕಲ್ಯಾಣಕ್ಕೂ ಎಷ್ಟುದೂರ
ನಡೆ ಮುಡಿಯ ಹಾಸಿದವರು ಕೆದಕಿ ಕೇಳಿದರು

ಪತಿಯ ಕುರುಹ ಹೇಳದಿರೆ ತೊಲಗೆಂದು
ನಿರ್ವಾಣದ ಬೆಳಗು
ಕೊರಳೆತ್ತಿತ್ತು."[೫೨]

ಅಕ್ಕಮಹಾದೇವಿಯ ಬದುಕು ಅಭಿವ್ಯಕ್ತಿಯಲ್ಲಿ ಸ್ತ್ರೀವಾದದ ಸೆಳಕನ್ನು ಕಂಡ ಗುಡಿಬಂಡೆ ಪೂರ್ಣಿಮಾ ಅವರ 'ಭಾವಕ್ಕೆ ಸಾವಿಲ್ಲ' ಕವನ ವಾಸ್ತವ ಬದುಕು ಬದಲಾಗದ ಸತ್ಯವನ್ನು ತೋರುತ್ತದೆ.

"ನಿನ್ನ ಹಾಯಿಕು ದಾರಿ ದರ್ಶನ
ಎಂಥ ಸವಾಲಿಗೂ ಉತ್ತರಿಸಿತಲ್ಲ
ಹೆಣ್ಣಿಗೆ ಮದುವೆ ತಾಯ್ತನ
ಅಗತ್ಯವೂ ಅಲ್ಲ ಅನಿವಾರ್ಯವೂ ಅಲ್ಲ
ಹುಂಬ ಮನಕದು ಇನ್ನೂ
ನಾಟಿಯೇ ಇಲ್ಲ."[೫೩]

ಪುರುಷ ತನ್ನ ಪ್ರಾಬಲ್ಯವನ್ನು ಮೆರೆಯುತ್ತ, ಮಹಿಳೆಯ ಬದುಕನ್ನು ಬವಣೆಗೀಡು ಮಾಡುತ್ತಿರುವ ಸಮಕಾಲೀನ ಸಂದರ್ಭವನ್ನು ಜಯಲಕ್ಷ್ಮಿ ಸೀತಾಪೂರ 'ದಿಟ್ಟೆಗೊಂದು ದೂರು' ಕವಿತೆಯಲ್ಲಿ ಪ್ರಸ್ತಾಪಿಸಿದ್ದಾರೆ.

""ಒಲೆಯೊಳಗಿಕ್ಕೂ ಮಿಕ್ಕಗಂಡರ" ಎನ್ನುವ ದಾಖಲೆ
ಸಿಗುತ್ತದೆ ಓ ಅಕ್ಕ! ಆದರೀಗ ಬಿಕ್ಕುತ್ತಿದೆ
ಕೇಕೆ ಹಾಕುತ್ತಿದೆ; ಸ್ವರ ಚೀರುತ್ತಿದೆ ಒಳಗೊಳಗೆ
ಒಲೆಯೊಳಗಿಕ್ಕದೆ ಬೆಂಕಿ ಹಚ್ಚದೆ ಬೇಯಿಸುತ್ತಿದ್ದಾರೆ!
ಸೆರಗ ಕಂಡು ಒರಗಿಕೊಳ್ವ ಮಂದಿ
ಕರಕು ವಾಸನೆಯಿಲ್ಲ ಮುದವಾದ ಮನವ ಮುದುಡಿಸುವ
ನಿಟ್ಟು, ಅದ ಮೆಟ್ಟುವ ದಿಟ್ಟೆಗೆ
ದೂರು ಕೊಡುತ್ತಿದ್ದೇನೆ ಹೇಳುಬಹುದು...... ಕ್ರಿಯೆ ಮಾತಿನಲ್ಲಿ."[೫೪]

ಶತಮಾನಗಳಿಂದ ಸ್ಥಾಪಿತ ಮೌಲ್ಯಗಳಿಂದ ಶೋಷಿತಳಾದ ಸ್ತ್ರೀಯರಿಗೆ ಧ್ವನಿಯಾದ ಅಕ್ಕಮಹಾದೇವಿ ನವಮನ್ವಂತರದ ಬದುಕಿಗೆ ತೆರೆದುಕೊಂಡವಳು. ಆಧುನಿಕ ಯುಗದಲ್ಲೂ ಮಹಿಳೆ ಸಂದಿಗ್ಧತೆಯಲ್ಲೇ ಮುಳುಗಿರುವುದನ್ನು ಪದ್ಮಾಶೇಖರ್ ತಮ್ಮ 'ಅಕ್ಕ ಒಬ್ಬಳೆ' ಕವನದಲ್ಲಿ ಹಂಚಿಕೊಂಡಿದ್ದಾರೆ.

"ಶತಮಾನಗಳ ಸೋತ ದನಿಯ ದಳ್ಳುರಿ
ಬಾರಿಸಿತು ಹೆಣ್ಣಿನಳಲ ನಗಾರಿ
ಭಾಷೆಗಿತ್ತು ಹೊಸ ಬೆಳಕ
ಭಾವಕಿತ್ತು ನವ ಬದುಕ
ಆದರ್ಶದೆತ್ತರಕೆ ಚಿರಮೇರೆ ನೀನು
ಈಸಲಾರದೆ ದಡಕ್ಕೆ ಬಿದ್ದ ಮೀನು ನಾನು
ಅಕ್ಕ ನಿನ್ನೆದುರು ನಾನು ಕುಬ್ಜೆ
ನಿನ್ನಂತೆ ಬಯಲಾಗೆ ನನಗೆ ಲಜ್ಜೆ."[೫೫]

ಪ್ರಸ್ತುತ ಬದುಕಿಗೆ ತೆರೆದುಕೊಳ್ಳುವ ಎಸ್.ಮಾಲತಿ ಅವರ 'ಅಕ್ಕನಿಗೆ' ಕವಿತೆ ಅಕ್ಕನ ಬದುಕಿನೊಂದಿಗೆ ಹೋಲಿಸುವ ಕವಿಯಿತ್ರಿ ಇಂದಿನ ಸ್ತ್ರಿ ಬದುಕನ್ನು ಆವರಿಸಿದ ಆತಂಕವನ್ನು ಬಿಚ್ಚಿಡುತ್ತಾರೆ.

"ಇಲ್ಲಿ ಕಲ್ಯಾಣವಿಲ್ಲ. ಕದಳಿಯಿಲ್ಲ
ಚೆನ್ನಮಲ್ಲಿಕಾರ್ಜುನನೂ ಇಲ್ಲ.
ಅಕ್ಕ ನೀ ತೊರೆದು ಸಂಸಾರ
ಶರಣಸತಿ ಲಿಂಗಪತಿಯಾದೆ.
ನಾವು ತೊರೆವೆವೆಂದರೆ ನಮ್ಮವರ
ಲಿಂಗಪತಿಯ ಭ್ರಮೆ ನಮಗೆ ಬರದಲ್ಲ!
ಸಾವಕೆಡುವ ಗಂಡರೇ ಸುತ್ತಮುತ್ತ
ಒಲೆಯೊಳಗಿಕ್ಕುವೆವೆಂಬ ಧೃತಿ ನಮಗಿಲ್ಲ!
ನಮಗೋ ಮನೆತುಂಬ ಮಕ್ಕಳು.
ಬರಸಿಡಿಲಿನಂತೆ ಹೊಡೆವ ಪತಿ.
ಇವರ ಸಂಭಾಳಿಸಲು ಕೈಲೊಂದು ನೌಕರಿ.
ಆತ್ಮಸಂಗಾತಕ್ಕೆ ಮೈಮುರಿವ ಚಾಕರಿ."[೫೬]

ಆಧುನಿಕ ಒತ್ತಡದ ಬದುಕು ಸ್ತ್ರೀಯರಿಗೆ ಹೊಸ ಸವಾಲುಗಳನ್ನೇ ಸೃಷ್ಟಿಸಿದೆ. ಒಳಹೊರಗಿನ ದುಡಿಮೆಯಲ್ಲಿ ದಣಿದು ದನಿ ಉಡುಗಿ ಹೋಗುತ್ತಿರುವ ವಾಸ್ತವಿಕ ಮಹಿಳೆಗೆ ದೈನಂದಿನ ಬದುಕು ಬವಣೆಯಾಗಿದೆ. ಸಮಕಾಲೀನ ಸ್ತ್ರಿ ಸಮುದಾಯ ಸಂಕೀರ್ಣ, ಸಮಸ್ಯೆಗಳು, ಸವಾಲುಗಳಲ್ಲಿ ಸಿಲುಕಿ ಅನುಭವಿಸಲಾಗದ ಹೊರಹೋಗಲಾಗದ ಸಂಧಿಗ್ಧತೆಯನ್ನು ಎಚ್.ಎಸ್.ಮುಕ್ತಾಯಕ್ಕ "ನೀವು ಕಾಣಿರೆ ನೀವು ಕಾಣಿರೆ" ಕವಿತೆಯಲ್ಲಿ ಬಿಡಿಸಿಟ್ಟಿದ್ದಾರೆ.

"ನೀನೊಲಿದುದರ ಔಚಿತ್ಯ ನಮಗ
ರ್ಥವಾಗುವುದರಲ್ಲಿಯೇ ನಾವು
ಮೂರ್ತರೂಪಗಳ ವಿಚಿತ್ರ
ಸುಳಿಗಳಲಿ ಬೆತ್ತಲೆಯಾಗಿ, ತೆಕ್ಕೆ
ಗಳಲಿ ಸಿಕ್ಕು ನರಳುವ, ಕನವರಿಸುವ
ಹಳವಂಡ ಕನಸ ಕಾಣುತ, ಭ್ರಮೆಯ
ಅವಿಶ್ವಾಸದ ಪಂಜರದ ಗಿಣಿಯಾಗಿದ್ದೇವೆ.
ನಮ್ಮ ಹೃದಯಗಳ ಮೇಲೆ ನಿರಂತರ
ಹೆಜ್ಜೆಗಳ ಮೆರವಣಿಗೆ ಒತ್ತೆಯಿಟ್ಟು
ನಗುವ ಅಂಗಾಂಗಗಳು ಇವರ
ಪದರುಗಳಲಿ ಸಿಕ್ಕು ಉಸಿರುಗಟ್ಟಿ ಹೋ
ಗಿದ್ದೇವೆ ಸಾವಿರಾರು ದ್ರೌಪತಿಯರ
ಸೀರೆ ಸೆಳೆದ ಈ ಸಮಾಜ................"[೫೭]

ಸ್ತ್ರೀಯರ ಮೇಲಿನ ಒಳಹೊರಗಿನ ಆಕ್ರಮಣಗಳು ಅವುಗಳಡಿಯಲ್ಲಿ ಹೂತುಹೋಗುತ್ತಿರುವ ಹೆಣ್ಣಿನ ತನು-ಮನ-ಭಾವಗಳು ಅಸಹಾಯಕತೆಯ ನಿಟ್ಟುಸಿರು, ಪ್ರಸ್ತುತ ಸ್ತ್ರೀ ಬದುಕು ದುಗುಡ, ದುಮ್ಮಾನಗಳಿಂದ ಕೂಡಿದೆ. ಸಂಕ್ರಮಣಾವಸ್ಥೆಯಲ್ಲಿರುವ ಸ್ತ್ರೀಯರ ತಲ್ಲಣ, ತವಕಗಳಿಂದ ಆವರಿಸಿದ ಬದುಕನ್ನು ರಮಾಕುಮಾರಿ 'ಅಕ್ಕನಿಗೆ' ಕವಿತೆಯಲ್ಲಿ ಅನಾವರಣಗೊಳಿಸಿರುವರು.

"ಬೆಟ್ಟಸಿರಿ ಇಲ್ಲಿಲ್ಲ, ಕದಳಿವನ ಮೊದಲೇ ಇಲ್ಲ
ಧೂರ್ತ ಸಂತತಿ ಎಲ್ಲೆಲ್ಲೂ ಹೇಗೆ ಸಾಗಲಿ ಹೇಳೆ
ಹೇಗೆ ಸವೆಸಲಿ ಹೇಳೆ ಭವಿಷ್ಯದ ಇಳಿಗಾಲ
ನಿನ್ನ ಮಲ್ಲಿಕಾರ್ಜುನನಂತೆ ನನ್ನವನೂ ಇದ್ದರೆ
ಸಾಗಿ ಬಿಡಬಹುದಿತ್ತು ಬಿಡು ಬೀಸಾಗಿ
....
ಇಂದಿಲ್ಲಿ ಮಲ್ಲಿಕಾರ್ಜುನನೂ ಇಲ್ಲ
ಅನುಭವ ಮಂಟಪದ ಅಲ್ಲಮನೂ ಕಾಣ
ಬಸವಾದಿಗಳು ಇಲ್ಲವೇ ಇಲ್ಲ
ವಿಚ್ಛಿದ್ರ ಕೋಟೆಯೊಳಗೆ ಬೆಳಕಿನ ಕಿಂಡಿಯೇ ಇಲ್ಲ
ಹೇಗೆ ಸಾಗಲಿ ಹೇಳೆ ಹೇಗೆ ಬದುಕಲಿ ಹೇಳೆ?"[೫೮]

ಸಮಕಾಲೀನ ಸ್ತ್ರೀ ವಾಸ್ತವ ಪರಿಸ್ಥಿತಿಯಲ್ಲಿ ಕಳೆದುಹೋಗುತ್ತಿರುವ, ಭರವಸೆಯ ಬೆಳಕಿಗಾಗಿ ಆಶಿಸುವ ದಟ್ಟವಾದ ಧ್ವನಿಗಳು ಮಹಿಳಾ ಕಾವ್ಯದಲ್ಲಿ ವ್ಯಕ್ತವಾಗಿವೆ. ಲತಾ. ಗುತ್ತಿ ತಮ್ಮ 'ಅಕ್ಕನೊಂದಿಗೆ' ಕವನದಲ್ಲಿ ಸಂವಾದಕ್ಕಿಳಿಯುವ ದೈನಂದಿನ ಬದುಕಿನ ಚಿತ್ರಣವನ್ನು ಸಾಕ್ಷೀಕರಿಸುತ್ತಿವೆ.

"ಅಕ್ಕ ಈ ಸೀರೆ ಸುತ್ತಿಕೋ
ಅಲ್ಲಮಪ್ರಭು, ಬಸವಾದಿ ಗಣಗಳಿಲ್ಲ ಈಗ
ಬಾ ಒಂದಿಷ್ಟು ಸುತ್ತಾಡಿ ಬರೋಣ....
ಲೌಕಿಕ ಜಂಜಡದ ನಿನ್ನ ಮಾತುಗಳೆಲ್ಲಿ
ಹೊರಳಾಡಿ ಮುಳುಗೇಳುವ ಜನರೆಲ್ಲಿ
ಅಕ್ಕ! ನೋಡಕ್ಕ ಏನೂ ಬದಲಾಗಿಲ್ಲ
ಹೆಣ್ಣಿನ ತುಳಿತ ತೊತ್ತುಗಳಲ್ಲಿ
ಆಗಿದ್ದಿಷ್ಟೇ ಅಲ್ಲಲ್ಲಿ ಕೊರಡು ಕೊನರುತಿವೆ.
ಕಲ್ಲು ಕವಿತೆ ಹಾಡುತಿವೆ
ಸುಟ್ಟುಕೊಂಡ ದೇಹಗಳಲಿ ಜ್ವಾಲೆ ಉರಿಯುತಿದೆ."[೫೯]

ಪರಂಪರಾಗತವಾಗಿ ಪರಕೀಯಳಾಗೆ ಪರಿಸ್ಥಿತಿಯ ಕೈಗೊಂಬೆಯಾಗಿ ಪುರುಷ ವ್ಯವಸ್ಥೆಗೆ ಕೊರಳು ನೀಡಿ ಉರುಳಾಗಿ ಹೋಗುತ್ತಿರುವ ಮಹಿಳೆಯರ ಬದುಕು ಮರಗಟ್ಟಿರುವುದನ್ನು ಮಹಿಳಾ ಅಭಿವ್ಯಕ್ತಿಯಾಗಿ ಗ್ರಹಿತವಾಗುತ್ತದೆ.

ಪ್ರಸ್ತುತ ದಿನಗಳಲ್ಲಿ ಯುವತಿಯರ, ಮಹಿಳೆಯರ ಮೇಲಾಗುತ್ತಿರುವ ಅತ್ಯಾಚಾರ, ಆಕ್ರಮಣ, ಅವಮಾನಗಳ ಕ್ರೂರ ಕರಾಳ ಮುಖವನ್ನು ಕಟ್ಟಿಕೊಡುವ ಲತಾ ಮೈಸೂರು ಅವರ 'ಅಕ್ಕನಿಗೊಂದು ಪತ್ರ' ಕವನ ಪ್ರಸ್ತುತ ಪರಿಸ್ಥಿತಿಯನ್ನು ಸಶಕ್ತವಾಗಿ ಪ್ರತಿಧ್ವನಿಸುತ್ತದೆ.

"ಬೆತ್ತಲಾಗಿ ಕಠಿಣ ವಚನಗಳನ್ನಾಡುತ್ತಾ
ಬಚಾವಾಗಿ ಕಲ್ಯಾಣ ಸೇರಿಬಿಟ್ಟೆಯಲ್ಲೇ ಅಕ್ಕಾ
....
ಈಗ ನಾಗರಿಕತೆ ಆಧುನಿಕತೆಗಳ ಕಾಲಕಣೆ
ಬಟ್ಟೆಗಳ ಸುತ್ತಿಕೊಂಡು
ಪುಸ್ತಕಗಳ ಅವುಚಿಕೊಂಡು
ಕಾಲೇಜಿಗೆ ಹೋಗಿ ಬರುವಷ್ಟರಲ್ಲೆ

ಈ ಅಪ್ಪ-ಅಣ್ಣಂದಿರ ಕಾಟ
ಕಲ್ಯಾಣಕ್ಕಿರಲಿ ಕದಳಿಗೆ ದಬ್ಬುತ್ತದೆಯಲ್ಲೆ."[೬೦]

ದಿನದ ಬದುಕಿಗೆ ಹೆಗಲು ಕೊಡುವ ಹೆಣ್ಣುಮಗಳು ದಿನವಿಡಿ ದುಡಿದರೂ ಅವಳ ದುಡಿಮೆಗೆ ಮೌಲ್ಯವಿರದ ಮಹಿಳೆಯರ ನೋವು ಹೇಳಲಾಗದ, ಅನುಭವಿಸಲಾಗದ ಅತಂತ್ರ ಆತಂಕದ ಸ್ಥಿತಿ. ಗೃಹಿಣಿಯರ ದಿನವಿಡೀ ದುಡಿಯುವ ಬದುಕಿನ ಸಂಕೀರ್ಣತೆಯನ್ನು ವೈದೇಹಿಯವರ ಕವಿತೆ 'ಸಂಸಾರ ಪದ' ಮಹಿಳೆಯರ ಅದರಲ್ಲೂ ಗೃಹಿಣಿಯರ ನೋವನ್ನು ಮೆಲುಧ್ವನಿಯಲ್ಲೂ ಅನುರಣಿಸುತ್ತದೆ.

"ಮನೆಯೊಳಗೆ ಇರುವ ಮನೆಯೊಡತಿ ನಾನು
ಗಂಡ ಮಗುವನ್ನು ಕಂಡುಕೊಂಡು
ಬಿಟ್ಟೆಲ್ಲೂ ಬರಲಾರೆ ಒಂಟಿಯಾಗಿ ಮಗು
ಗಂಟಲಲ್ಲೇ ಕೊರಗಿದರೆ ಸಹಿಸಲಾರೆ
ದೈನಂದಿನೆತ್ತಿಗೆ ಹುರುಳಿ ಬೇಯಿಸಬೇಕು
ಒಲೆಮುಂದೇ ಇರಬೇಕು ನಂದದಂತೆ
ಹೊತ್ತು ಹೊತ್ತಿಗೆ ಎಲ್ಲ ಸಜ್ಜಾಗಬೇಕು
ಕಾಲ ಧರ್ಮದ ತಾಳ ತಪ್ಪದಂತೆ
ಕೇಳಿದರೂ ವನದ ಕತೆ ತಾಳಿಕೊಳ್ಳಲೆಬೇಕು
ನೆರವಾಗುತ್ತದೆ ಲೋಕಯುಕ್ತಿ
ಕದಳಿ ಸಸಿಗಳ ನಾಲ್ಕು ಸಾಕಿಕೊಂಡಿದ್ದೇನೆ...
ನಿನ್ನ ನೆನಪಿಗೆ ನನ್ನ ಯಥಾನುಶಕ್ತಿ."[೬೧]

ಸಂಸಾರ ಬಂಡಿಗೆ ಸಹಕರಿಸುವ ಸ್ತ್ರೀಯರ ನೋವು ಹೊರನೋಟಕ್ಕೆ ಕಾಣದ ಒಳಪೆಟ್ಟಿನಂತಹದು. ಆ ನೋವಿನ ಧ್ವನಿಯ ಹಿಂದಿರುವ ಪುರುಷ ಪ್ರಪಂಚದ ಶಕ್ತಿಯನ್ನು ತಡೆದುಕೊಂಡು ತಡವರಿಸುತ್ತಲಾದರೂ ತೆವಳುತ್ತ ತನ್ನ ಕರ್ತವ್ಯಗಳನ್ನು ಪೂರೈಸಬೇಕು. ಸಾಮಾಜಿಕ ಸಂರಚನೆಯಲ್ಲಿ ಪುರುಷರ ಹಕ್ಕುಗಳಿರುತ್ತವೆ. ಆದರೆ ಮಹಿಳೆಯರಿಗೆ ಹಕ್ಕುಗಳ ಬದಲಾಗಿ ಕರ್ತವ್ಯಗಳ ಹೊರೆಯ ಭಾರವಿರುತ್ತದೆ. ಆ ಭಾರವನ್ನು ಹೊರೆಯಾಗಿ ಹೊರಬೇಕಾಗಿರುವುದು ಅನಿವಾರ್ಯವಾಗಿದೆ. ಸ್ತ್ರೀ ಪುರುಷರ ನಡುವಿನ ಸಮಾನತೆ ಶ್ರಮದ ಸಮಾನಹಂಚಿಕೆ ಸಮಕಾಲೀನ ಸಂದರ್ಭದಲ್ಲೂ ಗಗನಕುಸುಮವೇ! "ಎಲ್ಲವನ್ನೂ ತೊರೆದು, ಮನಸು ತೋರಿದ ಹಾದಿಯಲ್ಲಿ ಸಾಗಬಲ್ಲ ಸಾಧ್ಯತೆಗಳ ಜೊತೆಗೆ ಏನನ್ನೂ ತೊರೆದು ಹೋಗಲಾರದ ಅನಿವಾರ್ಯತೆಗಳನ್ನು ಮೇಳೈಸಿ ನೋಡಿದಾಗ ಸಮಕಾಲೀನ ಮಹಿಳೆಯರ ಬದುಕಿನ ಜಟಿಲತೆ ಸ್ಪಷ್ಟವಾಗಿ ಮೂಡಿಬರುತ್ತದೆ."[೬೨]

ಹೆಣ್ಣಿನ ಬೌದ್ಧಿಕತೆ, ಸೃಜನಶೀಲತೆಗಿಂತ ಭೌತಿಕತೆಯನ್ನು ಬಂಡವಾಳ ಮಾಡಿಕೊಂಡ ಪುರುಷ ವ್ಯವಸ್ಥೆ, ಅದನ್ನು ಮೀರಲಾಗದ ಮಹಿಳೆಯರ ಅಸಹಾಯಕತೆಯನ್ನು ಶಶಿಕಲಾ ವೀರಯ್ಯಾಸ್ವಾಮಿ 'ಪ್ರೇಮಿ' ಕವನದಲ್ಲಿ ಅಕ್ಕನ ಬದುಕನ್ನೇ ಬಳಸಿ ದೇಶೀಭಾಷಾ ಶೈಲಿಯಲ್ಲಿ ಸಮರ್ಥವಾಗಿ ಅಭಿವ್ಯಕ್ತಗೊಳಿಸಿರುವರು.

"ಚನ್ನಮಲ್ಲಿಕಾರ್ಜುನಾ
ಅಕ್ಕ ಏಟ ಶ್ಯಾಣಾಕೆ ಅಂತಿ?
ಈ ಲೋಕದ ಗಂಡಸೂರಿಗೆ
ಪ್ರೀತೆಂದ್ರ ಏನೇನೂ ಗೊತ್ತಿಲ್ಲಂತ
ಏಟ ಲಗೂ ತಿಳಕೊಂಡ್ಲಂತೀ?
ಖರೇ ಪ್ರೇಮಿ ಅಂದ್ರ
ನೀನೊಬ್ಬನೆ ನೋಡು.
....
ಆದ್ರ,
ಇಲ್ಲಿ ಕಥೀನೇ ಬ್ಯಾರೆ,
ಕಾಡಿನ ದಾರ್‍ಯಾಗ ಬರೊ
ಮುಂದೊಬ್ಬ ಹುಡಗೀಗಿ
ದಾರಿತಪ್ಪಿ ಕಂಟ್ಯಾಗ ಸಿಕ್ಕು
ಪಾರಾಗೂ ಮುಂದ
ಮೈತುಂಬ ಮುಳ್ಳ ತಾಕಿ
ಗೆರಿ ಮೂಡಿದವು
ಅತ್ಲು ಅತ್ಲು ಕಾಡಿನ
ಕಲ್ಲೂ ಕಣ್ಣೀರ ಹಾಕಿದುವು........."[೬೩]

ಆಧುನಿಕ ಸಮಕಾಲೀನ ಮಹಿಳಾ ಕಾವ್ಯ ಸಂದರ್ಭದಲ್ಲಿ ಅಕ್ಕಮಹಾದೇವಿಯ ಬದುಕು ಬರಹಗಳನ್ನು ಬಳಸಿಕೊಂಡು ತಮ್ಮ ಅಭಿವ್ಯಕ್ತಿಗೆ ಸಮಕಾಲೀನ ಸಂದರ್ಭವನ್ನು ಮೇಳವಿಸಿ ಪರಿಸ್ಥಿತಿಯ ಆಳ, ಅಗಲ, ಹರವುಗಳನ್ನು ಕಾವ್ಯಗಳಲ್ಲಿ ಪ್ರತಿಬಿಂಬಿಸಿದ್ದಾರೆ. ಮಹಾದೇವಿಯಕ್ಕನ ಅನುಭಾವಿಕ ನಿಲುವಿಗಿಂತ ಅವಳ ವಾಸ್ತವಿಕ ಬದುಕು ಸಮಕಾಲೀನ ಮಹಿಳಾ ಕಾವ್ಯಲೋಕವನ್ನು ಹೆಚ್ಚಾಗಿ ಪ್ರಭಾವಿಸಿದೆ. ಮಹಿಳಾ ಕವಯಿತ್ರಿಯರು ಅಕ್ಕ, ಚೆನ್ನಮಲ್ಲಿಕಾರ್ಜುನನೊಂದಿಗೆ

ಸಂವಾದಕ್ಕಿಳಿದು ಆಪ್ತತೆಯಿಂದ ಆರ್ತತೆಯ ಧ್ವನಿಯನ್ನು ಹೊರಹಾಕಿ ಹೆಣ್ಣಿನ ಸ್ಥಿತಿಗತಿಗಳ ಬದಲಾವಣೆಗೆ ಅಕ್ಕಮಹಾದೇವಿಯ ಆತ್ಮಸ್ಥೈರ್ಯದ ಸ್ವಯಂಸಿದ್ಧ ಮಾದರಿಗೆ ಮಾರುಹೋಗಿರುವು ದಾದರೂ ವಾಸ್ತವ ಬದುಕಿನ ಜಂಜಡಗಳು, ಬಂಧನಗಳನ್ನು ಬಿಡಿಸಿಕೊಳ್ಳಲಾಗದ, ಅನುಭವಿಸಲಾಗದ ತ್ರಿಶಂಕು ಸ್ಥಿತಿಯಲ್ಲಿ ಇರುವುದನ್ನು ಮತ್ತೆ ಮತ್ತೆ ಮಹಾದೇವಿಯಕ್ಕನೊಂದಿಗೆ ಮುಖಾಮುಖಿ ಗೊಳಿಸಿದ್ದಾರೆ.

ಸಮಕಾಲೀನ ಮಹಿಳಾ ಕಾವ್ಯ ಪರಂಪರೆ ಅಕ್ಕಮಹಾದೇವಿಯನ್ನು ವೈಭವೀಕರಿಸುವ ನೆಲೆಯಿಂದ ಗ್ರಹಿಸದೆ ವಾಸ್ತವಿಕತೆಯ ಬದುಕಿನ ಗ್ರಹಿಕೆಗಳಲ್ಲಿ ನೋಡುವ ದೃಷ್ಟಿ ಅವರ ಅಭಿವ್ಯಕ್ತಿಯಲ್ಲಿ ಕಾಣಸಿಗುತ್ತವೆ. ಅಕ್ಕಮಹಾದೇವಿಯ ಅಭಿವ್ಯಕ್ತಿಗಿಂತ ಅವಳ ಬದುಕಿನ ಚಿತ್ರಣಗಳು ಕವಯಿತ್ರಿಯರನ್ನು ಸೆಳೆದಿವೆ. ಅವಳನ್ನು ಆಪ್ತಸ್ನೇಹಿತೆಯಂತೆ ಸನಿಹದಿಂದ ಆಪ್ತಸಮಾಲೋಚನೆಗೈಯುವ ಆತ್ಮೀಯತೆ, ಮಹಿಳಾ ಕಾವ್ಯದಲ್ಲಿ ಅನಾವರಣಗೊಂಡಿದೆ.

ಅಕ್ಕಮಹಾದೇವಿಯ ಬದುಕು ಮತ್ತು ಬರಹಗಳು ಒಟ್ಟಿಗೆ ಬೆಸೆದುಕೊಂಡು ಅವಿನಾಭಾವ ಸಂಬಂಧವನ್ನು ತದನಂತರದ ಸಾಹಿತ್ಯ ಉಳಿಸಿಕೊಂಡು ಬಂದಿದೆ. "ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಬದುಕು ಬರಹಗಳು ಅಭಿನ್ನಗೊಳ್ಳುವ ಮಾದರಿಗೆ ಅತ್ಯುತ್ತಮ ಉದಾಹರಣೆ ಅಕ್ಕಮಹಾದೇವಿ. ಅಕ್ಕನ ವಚನಗಳನ್ನು ಹರಿಹರನಿಂದ ಹಿಡಿದು ಆಧುನಿಕ ಸಂದರ್ಭದ ಸ್ತ್ರೀವಾದಿಗಳವರೆಗೆ ಎಲ್ಲರೂ ಆಕೆಯ ವೈಯಕ್ತಿಕ ಬದುಕಿನ ವಿವರಗಳೊಂದಿಗೆ ತಳುಕು ಹಾಕಿಯೇ ಗ್ರಹಿಸಿದ್ದಾರೆ. ಅಕ್ಕಮಹಾದೇವಿ ಯನ್ನು ಒಬ್ಬ ಶ್ರೇಷ್ಠ ಲೇಖಕಿಯೆಂದು ಸ್ವೀಕರಿಸುವುದಕ್ಕೆ ಪ್ರಧಾನಧಾರೆಯ ರಾಜಕಾರಣ ಎಂದೂ ಹಿಂತೆಗೆದಿಲ್ಲ. ಅಂತೆಯೇ ಆಕೆಯ ಬದುಕು ಬರಹಗಳನ್ನು ತನ್ನ ಪರಂಪರೆಯಾಗಿ ಗುರುತಿಸಿ ಕೊಳ್ಳುವುದಕ್ಕೆ ಸ್ತ್ರೀವಾದ ಯಾವತ್ತೂ ಹೆಮ್ಮೆ ಪಟ್ಟಿದ್ದಾಗಿದೆ."[೬೪]

ಸಮಕಾಲೀನ ಸಮಾಜದಲ್ಲಿ ಸ್ತ್ರೀಸಮುದಾಯ ಹಲವು ಸಮಸ್ಯೆಗಳ ನಡುವೆಯೂ ಹೊಸ ಅರಿವಿನೊಡನೆ ಹೆಜ್ಜೆ ಹಾಕುತ್ತ ಹಿರಿದಾದ ಸಾಧನೆಗೆ, ಹರಹುಗಳಿಗೆ ತಮ್ಮನ್ನು ತೊಡಗಿಸಿ ಕೊಳ್ಳುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಆದರೂ ಸಾಗಬೇಕಾದ ಸಾಧಿಸಬೇಕಾದ ಗಮ್ಯತೆ, ಗುರಿಗಳೆಡೆಗಿನ ಪರಿಸ್ಥಿತಿಗಳನ್ನು ಪರಿಹರಿಸಿಕೊಂಡು ಕ್ರಿಯಾಶೀಲರಾಗಿ ವ್ಯಕ್ತಿತ್ವವನ್ನು ವಿಕಾಸಗೊಳಿಸಿಕೊಳ್ಳಬೇಕಾಗಿದೆ. ಆಧುನಿಕ ಶಿಕ್ಷಣದ ಅನುಕೂಲತೆಗಳಿಂದ ಅರಿವಿನ ಬೆಳಕು ತೋರುತ್ತಿದೆಯಾದರೂ ಶಿಕ್ಷಣ ಉದ್ಯೋಗಗಳ ಓಘದಲ್ಲಿ ಹಲವು ಸಂದಿಗ್ಧತೆಗಳಿಗೂ ಒಳಗಾಗಬೇಕಾಗಿ ಬಂದಿದೆ. ಕೌಟುಂಬಿಕ ಮತ್ತು ಸಾಮಾಜಿಕ ಕ್ಷೇತ್ರಗಳೆರಡರಲ್ಲಿಯೂ ದುಡಿಯಬೇಕಾದ ಸಂದರ್ಭ ಸ್ತ್ರೀಯರು ಹೆಚ್ಚಿನ ಕಾರ್ಯಭಾರದ ಹೊರೆಯಿಂದ ಒತ್ತಡಕ್ಕೊಳಗಾಗಿರುವುದು ಮಧ್ಯಮ ವರ್ಗದ ದುಡಿಯುವ ಮಹಿಳೆ ಮತ್ತು ಗ್ರಾಮೀಣ ಭಾಗದ ಮಹಿಳೆಯರಲ್ಲಿ ಕಂಡುಬರುತ್ತದೆ. ಆಧುನಿಕ

ಸ್ಪರ್ಧಾತ್ಮಕ ಜಗತ್ತಿನಲ್ಲಿ 'ಕೌಟುಂಬಿಕ ನಿರ್ವಹಣೆಯೊಂದಿಗೆ ವೈವಿಧ್ಯಮಯ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿರುವ ಮಹಿಳೆಯರು ವ್ಯವಸ್ಥೆಯೊಳಗಿನ ವೈರುಧ್ಯಗಳೊಳಗೆ ವ್ಯಕ್ತಿತ್ವವನ್ನು ನಿರ್ಮಾಣ ಮಾಡಿಕೊಳ್ಳಬೇಕಿದೆ. ಈ ದಿಶೆಯಲ್ಲಿ ಮಹಾದೇವಿಯಕ್ಕನ ಆತ್ಮಸ್ಥೈರ್ಯದ ಮಾದರಿ ಮಹಿಳೆಯರಿಗೆ ಮನೋಬಲವನ್ನು ನೀಡುವಲ್ಲಿ ಪ್ರೇರಣೆಯನ್ನೊದಗಿಸುತ್ತದೆ.

ಅಡಿಟಿಪ್ಪಣಿಗಳು

೧. ಆಧುನಿಕ ಭಾರತದಲ್ಲಿ ಮಹಿಳೆ, ೨೦೦೧, ಡಾ. ಎಚ್.ಎಸ್.ಶ್ರೀಮತಿ, ಗ್ರಂಥದ ಮುನ್ನುಡಿಯಲ್ಲಿ, ಡಾ. ಎಚ್.ಜೆ.ಲಕ್ಕಪ್ಪಗೌಡ.

೨. ಮಹಿಳಾ ಸಾಮಾಜಿಕತೆ, ೨೦೦೭, ಡಾ. ಜ್ಯೋತಿ ಶಶಿಕುಮಾರ, ಪು. ೪–೫.

೩. ಮಹಿಳೆ ಮತ್ತು ಧರ್ಮ, ೨೦೧೦, ಡಾ. ಶಿವಾನಂದ ಎಸ್. ವಿರಕ್ತಮಠ, ಪು. ೧೦೧.

೪. ಧರ್ಮ ಮತ್ತು ಮಹಿಳೆ, ೨೦೧೦, ಡಾ. ಶಿವಾನಂದ ಎಸ್. ವಿರಕ್ತಮಠ, ಪು. ೧೦೪, ೧೦೫.

೫. ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ, ೨೦೦೭, ಡಾ. ಡಿ.ಮಂಗಳಾ ಪ್ರಿಯದರ್ಶಿನಿ, ಪು. ೪೪–೪೫.

೬. ಅದೇ, ಪು. ೪೧.

೭. ಅದೇ, ಪು. ೪೨.

೮. ಅದೇ, ಪು. ೮೧–೮೨.

೯. ಮಹಿಳೆ ಮತ್ತು ಧರ್ಮ, ೨೦೧೦, ಡಾ. ಶಿವಾನಂದ ಎಸ್. ವಿರಕ್ತಮಠ, ಪು. ೧೦೮–೧೦೯.

೧೦. ಶಿವಶರಣೆಯರ ವಚನ ಸಂಪುಟ–೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೨೯೨.

೧೧. ಅದೇ, ವ.ಸಂ. ೨೭೧.

೧೨. ಮಹಿಳಾ ಸಾಮಾಜಿಕತೆ, ೨೦೦೭, ಡಾ. ಜ್ಯೋತಿ ಶಶಿಕುಮಾರ, ಪು.ಸಂ. ೧೭೪.

೧೩. ಶಿವಶರಣೆಯರ ವಚನ ಸಂಪುಟ–೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೪೩೦.

೧೪. ಅದೇ, ವ.ಸಂ. ೪೨೧.

೧೫. ಅದೇ, ವ.ಸಂ. ೪೧೩

೧೬. ಅಕ್ಕಮಹಾದೇವಿ ವಚನಗಳು ಸಾಂಸ್ಕೃತಿಕ ಮುಖಾಮುಖಿ ೨೦೦೫, ಡಾ. ರಹಮತ್ ತರೀಕೆರೆ, ಪು.ಸಂ. ೬೦.

೧೭. ಶಿವಶರಣೆಯರ ವಚನ ಸಂಪುಟ–೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ಪು.ಸಂ. ೩೫.

೧೮. ಅದೇ, ವ.ಸಂ. ೪೨೨.

೧೯. ಭಾರತೀಯ ಸ್ತ್ರೀ ಜೀವನ, ೨೦೦೯, (ಅನು) ಡಾ. ವಿಠ್ಠಲರಾವ್ ಗಾಯಕವಾಡ, ಪು. ೧೭.

೨೦. ಮಹಿಳೆ ಮತ್ತು ಧರ್ಮ, ೨೦೧೦, ಡಾ. ಶಿವಾನಂದ ಎಸ್. ವಿರಕ್ತಮಠ. ಪು. ೧೧೪.

೨೧. ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೨೧೪.

೨೨. ಅದೇ, ವ.ಸಂ. ೨೦೩.

೨೩. ಅದೇ, ವ.ಸಂ. ೧೧೯.

೨೪. ಅದೇ, ವ.ಸಂ. ೧೦೮.

೨೫. ಅದೇ, ವ.ಸಂ. ೩೯೧.

೨೬. ಅಕ್ಕನ ವಚನಗಳು ೨೦೦೮. ಸಂ. ಡಾ.ಎಲ್. ಬಸವರಾಜು. ವ.ಸಂ. ೨೮೩.

೨೭. ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೨೮೨.

೨೮. ಅಕ್ಕನ ವಚನಗಳು, ೨೦೦೮, (ಸಂ) ಡಾ. ಎಲ್. ಬಸವರಾಜು, ವ.ಸಂ. ೨೨೭.

೨೯. ಮಹಿಳಾ ಅಧ್ಯಯನ ಜನವರಿ-ಡಿಸೆಂಬರ್-೨೦೦೫, ದಿ. ಸೆಕೆಂಡ್ ಸೆಕ್ಸ್: ತನ್ನ ಕೃತಿಯನ್ನು ಕುರಿತು ಸ್ವತಃ ಸಿಮೋನ್‌ದ ಬುವಾ ಹೇಳಿರುವುದು. ಕನ್ನಡಕ್ಕೆ: ಡಾ.ಎಚ್.ಎಸ್.ಶ್ರೀಮತಿ, ಪು. ೩೬.

೩೦. ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೪೨೯.

೩೧. ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ, ೨೦೦೭, ಡಾ. ಡಿ.ಮಂಗಳಾ ಪ್ರಿಯದರ್ಶಿನಿ, ಪು. ೪೩.

೩೨. ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೨೩.

೩೩. ಅದೇ, ವ.ಸಂ. ೨೭೧.

೩೪. ಅದೇ, ವ.ಸಂ. ೧೮೬.

೩೫. ಅಕ್ಕನ ವಚನಗಳು, ೨೦೦೮, (ಸಂ) ಡಾ.ಎಲ್. ಬಸವರಾಜು, ವ.ಸಂ. ೭೮.

೩೬. ಅದೇ, ವ.ಸಂ. ೨೫೮.

೩೭. ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೨೫೧.

೩೮. ಮಹಿಳಾ ಅಧ್ಯಯನ ಸಂಯುಕ್ತ ಸಂಚಿಕೆ ೨೦೦೫, ಯುವತಿಯರ ಸಶಕ್ತೀಕರಣ, ಡಾ. ಎಚ್.ಎಂ. ಹೇಮಲತಾ, ಪು. ೫೧

೩೯. ಭಾರತೀಯ ಸ್ತ್ರೀ ಜೀವನ-೨೦೦೯, (ಅನು) ಡಾ. ವಿಠ್ಠಲರಾವ್ ಗಾಯಕವಾಡ, ಪು. ೧೩೬.

೪೦. ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೧೧೬

೪೧. ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ, ೨೦೦೭, ಡಾ. ಡಿ.ಮಂಗಳಾ ಪ್ರಿಯದರ್ಶಿನಿ, ಪು. ೮೪-೮೫.

೪೨. ಶಿವಶರಣೆಯರ ವಚನ ಸಂಪುಟ-೫, ೨೦೦೧, ಸಂ. ಡಾ. ವೀರಣ್ಣ ರಾಜೂರ, ವ.ಸಂ. ೩೭೨

೪೩. ಅದೇ, ವ.ಸಂ. ೧೩೪.

೪೪. ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ, ೨೦೦೭, ಡಾ. ಡಿ.ಮಂಗಳಾ ಪ್ರಿಯದರ್ಶಿನಿ, ಪು. ೨೪೨.

೪೫. ಶಿವಶರಣೆಯರ ವಚನ ಸಂಪುಟ-೫, ೨೦೦೧, (ಸಂ) ಡಾ. ವೀರಣ್ಣ ರಾಜೂರ, ವ.ಸಂ. ೯೭.

೪೬. ಅದೇ, ವ.ಸಂ. ೧೬೬

೪೭. ಅದೇ, ವ.ಸಂ. ೨೦೫.

೪೮. ಅಕ್ಕ, ೧೯೯೯, (ಸಂ) ಡಾ. ವಿಜಯಶ್ರೀ ಸಬರದ, ಪು. VI.

೪೯. ಅದೇ, ಪು. VI.

೫೦. ಅದೇ, ಪು. ೧, ೨.

೫೧. ಅದೇ, ಪು. ೧, ೨.

೫೨. ಅದೇ, ಪು. ೫.

೫೩. ಅದೇ, ಪು. ೧೮.

೫೪. ಅದೇ, ಪು. ೨೪.

೫೫. ಅದೇ, ಪು. ೨೭.

೫೬. ಅದೇ, ಪು. ೪೨-೪೩.

೫೭. ಅದೇ, ಪು. ೪೪-೪೫.

೫೮. ಅದೇ, ಪು. ೪೮.

೫೯. ಅದೇ, ಪು. ೫೩.

೬೦. ಅದೇ, ಪು. ೫೪.

೬೧. ಅದೇ, ಪು. ೭೧.

೬೨. ಅಕ್ಕಮಹಾದೇವಿ ವಚನಗಳು ಸಾಂಸ್ಕೃತಿಕ ಮುಖಾಮುಖಿ, ೨೦೦೫, ಡಾ. ರಹಮತ್ ತರೀಕೆರೆ, ಪು. ೭೩.

೬೩. ಅಕ್ಕ, ೧೯೯೯, (ಸಂ) ಡಾ. ವಿಜಯಶ್ರೀ ಸಬರದ, ಪು. ೭೪.

೬೪. ಆಧುನಿಕ ಮಹಿಳಾ ಸಾಹಿತ್ಯ ಇನ್ನಷ್ಟು ಪುಟಗಳು, ೨೦೦೭, ಡಾ. ಎಂ.ಉಷಾ ಪ್ರಸ್ತಾವನೆ, ಪು. ೩೧.

ಅಧ್ಯಾಯ ಆರು

ಉಪಸಂಹಾರ

ಅಧ್ಯಾಯ ಆರು

ಉಪಸಂಹಾರ

"ಅಕ್ಕಮಹಾದೇವಿಯ ವಚನಗಳ ಮೀಮಾಂಸೆ"ಯಲ್ಲಿ ಈವರೆಗಿನ ನಿರೂಪಣೆ, ವಿಶ್ಲೇಷಣೆ, ವಿಮರ್ಶೆಗಳಿಂದ ಅವಳ ಅಭಿವ್ಯಕ್ತಿಯ ಸ್ವರೂಪದ ಗ್ರಹಿಕೆಯಲ್ಲಿ ಮುಖ್ಯವಾಗಿ ಮೀರುವ ಮುರಿದು, ಮರುಸೃಷ್ಟಿಸುವ ಸೃಷ್ಟ್ಯಾತ್ಮಕ ಗುಣಗಳೇ ಪ್ರಧಾನವಾಗಿದೆ. ಅಭಿವ್ಯಕ್ತಿಯಲ್ಲಿ ಕ್ರಿಯಾಶೀಲತೆ, ಸೃಜನಶೀಲತೆ ಅಂತರ್ಗತವಾಗಿರುವುದರಿಂದ ವಚನಗಳು ನಿರಂತರವಾದ ಗತಿಶೀಲತೆ ಪಡೆದುಕೊಂಡು ಚೈತನ್ಯಮಯಗೊಂಡಿವೆ. ಪಾರಂಪರಿಕ ಕಾವ್ಯಮಾರ್ಗ, ಕಾವ್ಯಬಂಧನಗಳ ಕಟ್ಟನ್ನು ಮುರಿದು ಸ್ವಚಂಧವಾದ ಛಂದೋಬಂಧಗಳಿಂದ ನಾದಮಾಧುರ್ಯ, ದೇಶೀಲಯದ ನಡೆಯುಳ್ಳ ಅಕ್ಕಮಹಾದೇವಿಯ ವಚನಗಳು ಕಾವ್ಯಕಾಂತಿಯನ್ನು ಪಡೆದು ವಿಭಿನ್ನ ಅಭಿವ್ಯಕ್ತಿ ಸ್ವರೂಪದಿಂದ ಪ್ರಖರವಾದ ಬೆಳಕಿನ ಪುಂಜಗಳಾಗಿ ಬಹುಮುಖ ಆಯಾಮಗಳ ಅಧ್ಯಯನ, ಸಂಶೋಧನೆಗೆ ನಿರಂತರ ನೆಲೆಯನ್ನೊದಗಿಸುತ್ತಲಿವೆ. ಅಕ್ಕಮಹಾದೇವಿಯ ವ್ಯಕ್ತಿತ್ವ ಮತ್ತು ಅಭಿವ್ಯಕ್ತಿಯಲ್ಲಿ ಚಲನಶೀಲತೆಯು ಸುಳಿಯುತ್ತಿರುವುದರಿಂದ ಅಕ್ಕನ ಸಮಕಾಲೀನ ಹಾಗೂ ಅಂದಿನಿಂದ ಇಂದಿನ ಆಧುನಿಕ ಸಮಕಾಲೀನ ಸಂದರ್ಭಕ್ಕೂ ಬೇರೆ ಬೇರೆ ನೆಲೆಗಳಲ್ಲಿ ಮುಖಾಮುಖಿಗೊಳ್ಳುತ್ತಲಿವೆ.

ವ್ಯಕ್ತಿಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಸಿದ್ಧ ಸಮಾಜದ, ಸಾಹಿತ್ಯದ ಸ್ಥಾಪಿತ ಮೌಲ್ಯಗಳನ್ನು ತಿರಸ್ಕರಿಸಿ ಸ್ವಯಂನಿರ್ಮಿತ ಬಟ್ಟೆಯಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟ ಅಕ್ಕಮಹಾದೇವಿಯ ಅಭಿವ್ಯಕ್ತಿ ಅಸಮಾನ ನೆಲೆಗಳ ವಿರುದ್ಧ ತೀವ್ರ ಪ್ರತಿರೋಧವನ್ನು ಒಡ್ಡುತ್ತ, ಪರಂಪರಾಗತ ರೂಢಿಗಳನ್ನು ಮೀರಿ ಮಾನವೀಯ ಸಂಬಂಧದ ಸಮಾನ ಸ್ಥಾನಮಾನಗಳನ್ನು ಪ್ರತಿನಿಧಿಸುತ್ತದೆ. ಮಹಾದೇವಿಯಕ್ಕನ ಅಭಿವ್ಯಕ್ತಿ ಸ್ವರೂಪ ಅಸಮಾನವಾದುದನ್ನು ಮೀರುತ್ತ, ಸಮಾನ ನೆಲೆಗಳ ಮರುಸೃಷ್ಟಿಸುವತ್ತಲೇ ತುಡಿತವುಳ್ಳದ್ದು, ಸಿದ್ಧಸಮಾಜದ ಸ್ಥಾಪಿತ ವ್ಯವಸ್ಥೆಯಲ್ಲಿದ್ದೂ ಸಮಾನತೆ, ಸ್ವಾತಂತ್ರ್ಯಕ್ಕಾಗಿ ಆಶಿಸಿದ್ದು, ಪುರೋಗಾಮಿ ತಂತ್ರದಲ್ಲಿದ್ದು ಪ್ರಗತಿಯೆಡೆಗಿನ ತೀವ್ರ ಪ್ರಯತ್ನಗೈದ ಅದಮ್ಯ ಜೀವಚೈತನ್ಯವೊಂದು

ನಿರಂತರವಾದ ಬದಲಾವಣೆಗೆ ಮುಖಮಾಡಿ ಮಹೋನ್ನತವಾದುದನ್ನು ಸಿದ್ಧಿಸಿದ್ದು. ಆ ಎಲ್ಲ ಸಂವೇದನೆಗಳನ್ನು ಸಾಕಾರಶಬ್ದಗಳಿಂದ ನಿರಾಕಾರ, ನಿರ್ಭಯ ನಿಲುವಿನ ಅರ್ಥವನ್ನು ನಿರ್ಮಿಸಿರುವುದರಿಂದ ಅಭಿವ್ಯಕ್ತಿಯಲ್ಲಿ ಭಾವುಕತೆ, ಗೇಯತೆ, ನಾವಿನ್ಯತೆ ಮೇಳೈಸಿವೆ. ಆ ಭಾವ ವೈವಿಧ್ಯಗಳಿಗೆಲ್ಲ ಭಾಷೆ ಬೀಸರವೋಗದೆ ಭಾವಗಮ್ಯತೆಯನ್ನು ಪಡೆದುಕೊಂಡ ಪರಿಯನ್ನು ಪ್ರತಿನಿಧಿಸುವ ಅಕ್ಕಮಹಾದೇವಿ ಸಾಮಾನ್ಯತೆಯ ತಳಹದಿಯಿಂದ ಅಸಾಮಾನ್ಯತೆಯನ್ನು ಸಾಧಿಸಿದವಳು.

ಅಕ್ಕಮಹಾದೇವಿಯ ಅಭಿವ್ಯಕ್ತಿಯನ್ನು ಕುರಿತಾದ ಹಲವು ಅಧ್ಯಯನಗಳು ವಿಭಿನ್ನ ದೃಷ್ಟಿಕೋನದಿಂದ ಅರ್ಥೈಸಿಕೊಳ್ಳಲು ಯತ್ನಿಸಿ ಭಾಷಿಕ ರೂಪದಲ್ಲಿ ಹಿಡಿದಿಡುವ ಪ್ರಯತ್ನವೂ ಮುಂದುವರೆದಿರುವ ಸಂದರ್ಭದಲ್ಲಿ ಪ್ರಸ್ತುತ "ಅಕ್ಕಮಹಾದೇವಿಯ ವಚನಗಳ ಮೀಮಾಂಸೆ"ಯೂ ಆ ನಿಟ್ಟಿನಲ್ಲಿ ನಡೆಸಿದ ಸಂಶೋಧನೆಯ ಮತ್ತೊಂದು ಆಯಾಮವಾಗಿದೆ. ಈ ಅಧ್ಯಯನದಲ್ಲಿ ಕಂಡುಕೊಂಡಿರುವ ಪ್ರಮುಖ ಅಂಶಗಳನ್ನು, ಅಕ್ಕಮಹಾದೇವಿ ಅಭಿವ್ಯಕ್ತಿಯ ಗ್ರಹಿಕೆಗಳನ್ನು ಈ ಕೆಳಗಿನಂತೆ ಕ್ರೋಡಿಕರಿಸಬಹುದಾಗಿದೆ.

ಫಲಿತಗಳು

೧. ವಚನ ಚಳುವಳಿಯಲ್ಲಿ ಅಕ್ಕಮಹಾದೇವಿ ವಚನಕಾರರನ್ನು ಮುಖಾಮುಖಿಯಾದಂತೆ, ವಚನಕಾರ್ತಿಯರಿಗೆ ಎದುರಾಗುವುದಿಲ್ಲ. ಅಕ್ಕನ ವ್ಯಕ್ತಿತ್ವ, ಅಭಿವ್ಯಕ್ತಿ ವಚನಕಾರ್ತಿಯರನ್ನು ಪ್ರಭಾವಿಸಲಿಲ್ಲವೇಕೆ? ಎಂಬ ಗ್ರಹಿಕೆ ಮುಖ್ಯವಾಗುತ್ತದೆ. ಅಕ್ಕಮಹಾದೇವಿ ಮತ್ತು ಇತರ ಶಿವಶರಣೆಯರ ವ್ಯಕ್ತಿತ್ವ ಮತ್ತು ಅಭಿವ್ಯಕ್ತಿಗಳಲ್ಲಿ ಸಾಮ್ಯತೆಗಿಂತ ಭಿನ್ನತೆಯೇ ದಟ್ಟವಾಗಿ ಗೋಚರಿಸುತ್ತದೆ.

೨. ಅಕ್ಕಮಹಾದೇವಿಯ ವಚನಗಳ ಮೀಮಾಂಸೆಯ ರೂಪ ಸ್ವರೂಪವು ವಿವಿಧ ಆಶಯ ವಿಷಯಗಳನ್ನೊಳಗೊಂಡು, ಅಂತರಂಗ ಬಹಿರಂಗಗಳೆಲ್ಲ ಅಭಿವ್ಯಕ್ತಿಯಲ್ಲಿ ಅನಾವರಣ ಗೊಂಡಿವೆ. ಅಕ್ಕಮಹಾದೇವಿಯ ವಚನಗಳ ಮೀಮಾಂಸೆಯ ಸ್ವರೂಪವು ಇನ್ನಿತರ ವಚನಕಾರರ, ವಚನಗಳ ಮೀಮಾಂಸೆಯ ಸ್ವರೂಪವನ್ನು ಅಭ್ಯಸಿಸಲು ಹಿನ್ನೆಲೆಯನ್ನೊದಗಿಸುತ್ತವೆ.

೩. ಅಕ್ಕಮಹಾದೇವಿಯ ವಚನಗಳು ಬಹುಪಾಲು ಪ್ರತಿಮಾನಿಷ್ಠವಾಗಿವೆ. ವಚನಗಳಲ್ಲಿ ಪ್ರತಿಮಾ ಗುಣವೈಶಿಷ್ಟ್ಯಗಳಾದ ಅರ್ಥಪ್ರಚುರತೆ ಮತ್ತು ಧ್ವನಿಶಕ್ತಿಯನ್ನೊಳಗೊಂಡು ಅಮೂರ್ತ ಸಂಗತಿಗಳು ಮೂರ್ತರೂಪ ಪಡೆದುಕೊಂಡು ಅರ್ಥ ಸುಲಭ ಗ್ರಾಹ್ಯವಾಗಲು ಅನುವಾಗುತ್ತದೆ. ಅಕ್ಕನ ವಚನಗಳಲ್ಲಿ ಕೀಟ, ಪ್ರಾಣಿ, ಪಕ್ಷಿ ಪ್ರತಿಮೆಗಳು, ಸಸ್ಯ ಪ್ರತಿಮೆಗಳು, ಸಾಮಾಜಿಕ, ಪ್ರತಿಮೆಗಳು,

ಧಾರ್ಮಿಕ, ಆಧ್ಯಾತ್ಮಿಕ, ಅನುಭಾವಿಕ, ಇತರೆ ಪ್ರತಿಮೆಗಳು ವಿಭಿನ್ನ ಭಾವಗಳನ್ನು ಅಭಿವ್ಯಕ್ತಗೊಳಿಸುತ್ತವೆ. ಪ್ರತಿಮೆಗಳ ಇನ್ನಿತರ ವಚನಕಾರರ ಚಿಂತನೆಗಳನ್ನು ಅನ್ವೇಷಿಸಲು ಪ್ರೇರಣೆಯನ್ನೊದಗಿಸುತ್ತವೆ.

೪. ಅಕ್ಕಮಹಾದೇವಿಯ ಭಾಷೆಯ ರಚನೆಯು ಹಲವು ಭಾಷಾಶಾಸ್ತ್ರದ ಆಯಾಮಗಳನ್ನೊಳಗೊಂಡು ಮುಕ್ತ ಸಂವಹನಕ್ಕೆ ಅಣಿಗೊಳ್ಳುತ್ತವೆ. ಉಪಮೆ, ರೂಪಕ, ದೃಷ್ಟಾಂತ. ದೇಶೀಭಾಷೆ ಸಂಸ್ಕೃತಿಯ ನೆಲೆಗಟ್ಟಿನ ಗಾದೆ, ನುಡಿಗಟ್ಟು, ಅಭಿವ್ಯಕ್ತಿಯಲ್ಲಿನ ದೇಶಿರೂಪದ ಸಂಬೋಧನೆಗಳು, ಬೈಗುಳಗಳು ವಚನಾಭಿವ್ಯಕ್ತಿಯಲ್ಲಿ ವಿಭಿನ್ನ ಸ್ತರದ ಚಿಂತನೆಗಳ ಗ್ರಹಿಕೆಗೆ ರಹದಾರಿ ನಿರ್ಮಿಸಿವೆ. ಅಕ್ಕಮಹಾದೇವಿಯ ಭಾವವೈವಿಧ್ಯಗಳೆಲ್ಲ ಭಾಷೆಯಲ್ಲಿ ಆಕೃತಿ ಪಡೆದು ಅನುಭವವೇದ್ಯಗೊಳ್ಳಲು ನೆರವಾಗುತ್ತವೆ. ಸಮಾಜೋಭಾಷಿಕ ಅಧ್ಯಯನಗಳಿಗೆ ಹೊಸ ಸಾಧ್ಯತೆಗಳನ್ನು ಹುಟ್ಟುಹಾಕುತ್ತವೆ.

೫. ಅಕ್ಕಮಹಾದೇವಿಯ ವಚನಗಳ ಶೈಲಿಯ ನಿರ್ವಚನವು ಇನ್ನಿತರ ವಚನಕಾರರ ಶೈಲಿಯ ಅಧ್ಯಯನಕ್ಕೆ ಪ್ರೇರಣೆಯನ್ನು ಒದಗಿಸುತ್ತದೆ. ಅವಳ ವಚನಗಳಲ್ಲಿ ಗ್ರಾಂಥಿಕ, ವ್ಯವಹಾರಿಕ, ಮತ್ತು ಶಿಷ್ಟವ್ಯವಹಾರಿಕ ಶೈಲಿಗಳನ್ನು ಗುರುತಿಸಿ ಅವುಗಳ ಸ್ವರೂಪವನ್ನು ವಿಶ್ಲೇಷಿಸಲಾಗಿದೆ. ಅಕ್ಕನ ಶೈಲಿಯಲ್ಲಿಯೇ ಭಕ್ತಿ ಬಂಡಾಯದ ಅಂಶಗಳು ಅನುಭವಕ್ಕೆ ಬರುತ್ತವೆ. ವಚನಗಳ ಶೈಲಿ ಭಾವಗೀತಾತ್ಮಕ ಗುಣದಿಂದ ಕೂಡಿದ್ದು ಮಧುರ ಭಕ್ತಿಯ ಶೃಂಗಾರ ಪ್ರಣೀತ ಭಕ್ತಿ ಕಾವ್ಯವಾಗಿದೆ.

೬. ಅಕ್ಕಮಹಾದೇವಿಯ ವಚನಗಳು ಪಾರಂಪರಿಕ ಮಾರ್ಗಕಾವ್ಯದ ಬಂಧಗಳ ಕಟ್ಟುಗಳನ್ನು ಮೀರಿ ಸ್ವಚ್ಛಂದವಾಗಿ ಅಭಿವ್ಯಕ್ತಗೊಳ್ಳುವುದರಿಂದ ಸಹಜವಾದ ಕಾವ್ಯಬಂಧಗಳು ಅನಾವರಣಗೊಂಡಿವೆ. ವಚನಗಳ ಛಂದೋವಿನ್ಯಾಸದ ಅಧ್ಯಯನವು ಇನ್ನಿತರ ವಚನಕಾರರ ಮತ್ತು ಆಧುನಿಕ ಸಾಹಿತ್ಯದ ಬಂಧಗಳ ವಿಮರ್ಶಾತ್ಮಕ, ತುಲನಾತ್ಮಕ ಸಂಶೋಧನೆಗಳಿಗೆ ಹಿನ್ನೆಲೆಯನ್ನು, ಪ್ರೇರಣೆಯನ್ನು ಒದಗಿಸುತ್ತವೆ.

೭. ಅಕ್ಕಮಹಾದೇವಿಯ ವಚನಗಳಲ್ಲಿ ಆಧುನಿಕ, ಆಧುನಿಕೋತ್ತರ ಸ್ತ್ರೀವಾದದ ಸಂವೇದನೆಗಳು ನೆಲೆಗೊಂಡಿದ್ದು, ಮಹಿಳಾ ಅಧ್ಯಯನಗಳಿಗೆ ಮುನ್ಸೂಚನೆಯನ್ನು ನೀಡುತ್ತವೆ. ಆಧುನಿಕ ಮಹಿಳಾ ಕಾವ್ಯ ಸಂದರ್ಭಗಳು ಅಕ್ಕಮಹಾದೇವಿಯ ವ್ಯಕ್ತಿತ್ವ, ಹೋರಾಟ ಮತ್ತು ಅಭಿವ್ಯಕ್ತಿಗಳಿಂದ ಪ್ರೇರಣೆ ಪಡೆದುಕೊಂಡು ಸ್ತ್ರೀ ಸಂವೇದನೆಗಳನ್ನು ಸಾಹಿತ್ಯದಲ್ಲಿ ಅನಾವರಣಗೊಳಿಸಿವೆ. ಅಕ್ಕಮಹಾದೇವಿಯ ವಚನಗಳಲ್ಲಿ ಸ್ತ್ರೀವಾದದ ಪ್ರಖರ ಚಿಂತನಾಕ್ರಮವಿರುವುದರಿಂದ ಅವಳು

ವೈಚಾರಿಕ ನಿಲುವಿನ ಸ್ತ್ರೀವಾದಿಯಾಗಿಯೇ ಮಹಿಳಾ ವಿಮೋಚನೆಗೆ ಮುನ್ನುಡಿಯನ್ನು ಬರೆದಿರುವಳು.

೮. ಅಕ್ಕಮಹಾದೇವಿಯೂ ತನ್ನ ಕಾಲ, ಪ್ರದೇಶ, ಸಂದರ್ಭಗಳ ಪರಿಮಿತಿಯೊಳಗೂ ವ್ಯಕ್ತಿಗತ ಸಂವೇದನೆಗಳನ್ನು ಏಕಾಂತದಿಂದ ಬಿಡುಗಡೆಗೊಳಿಸಿ ಲೋಕಾಂತಗೊಳಿಸಿರುವುದರಿಂದ ನಿರಂತರವಾಗಿ ಅವು ಹೊಸ ಸಾಧ್ಯತೆಗಳಿಗೆ ತೆರೆದುಕೊಳ್ಳುತ್ತಲೇ ಸಾಗಿವೆ.

೯. ಅಕ್ಕಮಹಾದೇವಿಯ ವ್ಯಕ್ತಿತ್ವ ಮತ್ತು ಅಭಿವ್ಯಕ್ತಿಗಳನ್ನು ಪ್ರಾಚೀನ ಕಾವ್ಯಪರಂಪರೆ, ಚರಿತ್ರೆ, ಧಾರ್ಮಿಕ ಪಠ್ಯಗಳು, ನವೋದಯ ನವ್ಯಕಾವ್ಯ ಸಂದರ್ಭಗಳ ಹೊರತಾಗಿ ವಚನಗಳ ಮೀಮಾಂಸೆಯ ಹಿನ್ನೆಲೆಯಲ್ಲಿ ಅರಿತುಕೊಳ್ಳುವ ಪ್ರಯತ್ನವನ್ನು ಕೈಕೊಳ್ಳಲಾಗಿದೆ.

ಇದುವರೆಗಿನ ಅಕ್ಕಮಹಾದೇವಿಯ ಕುರಿತಾದ ಹಲವಾರು ಅಧ್ಯಯನಗಳು ಅವಳ ಬದುಕಿನ ಧಾರ್ಮಿಕ ಅನುಭಾವಿಕ ನೆಲೆಗಳ ಹಿನ್ನೆಲೆಯಲ್ಲಿಯೇ ವಚನಗಳನ್ನು ಗ್ರಹಿಸಿವೆ. ಅವಳ ವಚನಗಳಲ್ಲಿ ಅಂತರ್ಗತವಾಗಿರುವ ಮೀಮಾಂಸೆಯ ಪರಿಕಲ್ಪನೆಗಳ ಮಹತ್ವದ ಅಂಶಗಳ ಸಮಗ್ರ ಅಧ್ಯಯನವನ್ನು ಮಾಡಿರುವುದಿಲ್ಲ. ಪ್ರಸ್ತುತ "ಅಕ್ಕಮಹಾದೇವಿಯ ವಚನಗಳ ಮೀಮಾಂಸೆ" ಸಂಶೋಧನೆಯು ಅಕ್ಕನ ಅಭಿವ್ಯಕ್ತಿಯ ಗ್ರಹಿಕೆಗಳನ್ನು ಕಂಡುಕೊಳ್ಳುವ, ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ ಗೈದ ವಿಭಿನ್ನ ದೃಷ್ಟಿಕೋನದ ವಚನ ಮೀಮಾಂಸೆಯ ಆಯಾಮದ ಅಧ್ಯಯನವಾಗಿದೆ.

ಗ್ರಂಥಋಣ

೧. ಅಂಗಡಿ. ಎಸ್.ಎಸ್., ವಚನ ಸಾಹಿತ್ಯ ಭಾಷೆ, ಲಿಂಗಾಯತ ಅಧ್ಯಯನ ಅಕಾಡೆಮಿ, ರುದ್ರಾಕ್ಷಿಮಠ ನಾಗನೂರು, ಬೆಳಗಾವಿ, ೨೦೦೭.

೨. ಅಂಗಡಿ. ಎಸ್.ಎಸ್, ವಚನ ಸಾಹಿತ್ಯ ಛಂದೋಲಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೮.

೩. ಅನ್ನದಾನೀಶ್ವರ ಮಹಾಸ್ವಾಮಿಗಳು, ಮಹಾದೇವಿಯಕ್ಕನ ವಚನ ಚಿಂತನ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೨೦೦೧.

೪. ಅಮರೇಶ ನುಗಡೋಣಿ, ಬಸವಣ್ಣನ ವಚನಗಳು ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೫. ಇಮ್ರಾಪೂರ ಶಾಂತಾ, ಅಕ್ಕಮಹಾದೇವಿ, ಜಗದ್ಗುರು ಗಂಗಾಧರ ಧರ್ಮ ಪ್ರಸಾರಕ ಮಂಡಳಿ ಮೂರುಸಾವಿರ ಮಠ, ಹುಬ್ಬಳ್ಳಿ, ೨೦೦೧.

೬. ಉಷಾ ಎಂ., ಆಧುನಿಕ ಮಹಿಳಾ ಸಾಹಿತ್ಯ ಇನ್ನಷ್ಟು ಪುಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ, ೨೦೦೭

೭. ಕಲಬುರ್ಗಿ ಎಂ.ಎಂ. ಬಸವಣ್ಣನವರ ವಚನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೮. ಕಲಬುರ್ಗಿ ಎಂ.ಎಂ., ಸಂಕೀರ್ಣ ವಚನ ಸಂಪುಟ-೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೯. ಕಾಪಸೆ ಗುರುಲಿಂಗ, ಅಕ್ಕಮಹಾದೇವಿ, ಸಾಹಿತ್ಯ ಅಕಾಡೆಮಿ, ನವದೆಹಲಿ-ಬೆಂಗಳೂರು, ೨೦೦೮.

೧೦. ಕುವೆಂಪು, ರಸೋವೈಸಃ, ಉದಯರವಿ ಪ್ರಕಾಶನ, ಮೈಸೂರು, ೨೦೦೯.

೧೧. ಕೊಟಗಿ ತೋಟಪ್ಪ ಶಿವಬಸಪ್ಪ, ಶಿವಕನ್ಯೆ, ಗಂಗಾದೇವಿ ತೋಟಪ್ಪ ಕೊಟಗಿ, ಗದಗ,೧೯೮೩.

೧೨. ಗಾಯಕವಾಡ ವಿಠ್ಠಲರಾವ್, (ಅನು) ಭಾರತೀಯ ಸ್ತ್ರೀ ಜೀವನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯.

೧೩. ಚಿದಾನಂದಮೂರ್ತಿ ಎಂ., ವಚನ ಸಾಹಿತ್ಯ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೦.

೧೪. ಜ್ಯೋತಿ ಶಶಿಕುಮಾರ್, ಮಹಿಳಾ ಸಾಮಾಜಿಕತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦.

೧೫. ತರೀಕೆರೆ ರಹಮತ್, (ಸಂ) ಅಕ್ಕಮಹಾದೇವಿ ವಚನಗಳು ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೫.

೧೬. ತೀ.ನಂ.ಶ್ರೀಕಂಠಯ್ಯ, ಭಾರತೀಯ ಕಾವ್ಯ ಮೀಮಾಂಸೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೨೦೦೨.

೧೭. ನಾಗಭೂಷಣ ಕೆ., ವಚನಕಾರರ ಶಬ್ಧ ಮತ್ತು ಅರ್ಥ ಮೀಮಾಂಸೆ, ಅಪ್ರಕಟಿತ ಸಂಶೋಧನ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೩.

೧೮. ನಾಗರಹಳ್ಳಿ ಸುಪ್ರಿಯಾ, ಪುರಂದರದಾಸರ ಪ್ರತಿಮಾಲೋಕ, ಅಪ್ರಕಟಿತ ಸಂಶೋಧನ ಪ್ರಬಂಧ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦.

೧೯. ಪ್ರಭುಸ್ವಾಮಿಮಠ ಸಿ.ವಿ., ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ, ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ, ೧೯೯೬.

೨೦. ಬಸವರಾಜು ಎಲ್., ಅಕ್ಕನ ವಚನಗಳು, ಗೀತಾ ಬುಕ್ ಹೌಸ್, ಮೈಸೂರು, ೨೦೦೮.

೨೧. ಮಂಗಳಾ ಪ್ರಿಯದರ್ಶಿನಿ ಡಿ., ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೭.

೨೨. ಮಲ್ಲಾಪೂರ ಬಿ.ವ್ಹಿ, ಪ್ರಭುದೇವರ ವಚನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೨೩. ಮಹದೇವಯ್ಯ ಕೆ.ಪಿ., ಹರಿಹರನ ರಗಳೆಗಳ ಸಾಹಿತ್ಯಿಕ ಅಧ್ಯಯನ, ಅಭಿರುಚಿ ಪ್ರಕಾಶನ, ಮೈಸೂರು, ೧೯೯೯.

೨೪. ರಾಜೂರ ವೀರಣ್ಣ, ಶಿವಶರಣೆಯರ ವಚನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೧.

೨೫. ರಾಜೂರ ವೀರಣ್ಣ, ಸ್ವರವಚನಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೯.

೨೬. ಲಠ್ಠೆ ಎಂ.ಎಸ್., ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೫.

೨೭. ವಿದ್ಯಾಶಂಕರ್ ಎಸ್., ಸಂಕೀರ್ಣ ವಚನ ಸಂಪುಟ–೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೨೮. ವಿರಕ್ತಮಠ ಶಿವಾನಂದ, ಮಹಿಳೆ ಮತ್ತು ಧರ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦.

೨೯. ಶಿವರುದ್ರಪ್ಪ. ಜಿ.ಎಸ್., ಕಾವ್ಯಾರ್ಥ ಚಿಂತನ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೫.

೩೦. ಶ್ರೀಮತಿ. ಎಚ್.ಎಸ್. (ಅನು) ಆಧುನಿಕ ಭಾರತದಲ್ಲಿ ಮಹಿಳೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೩೧. ಸಬರದ ವಿಜಯಶ್ರೀ, (ಸಂ) ಅಕ್ಕ, ಮಹಾಂತೇಶ ಪ್ರಕಾಶನ, ಗುಲಬರ್ಗಾ, ೧೯೯೯.

೩೨. ಸಬಿಹಾ ಭೂಮಿಗೌಡ, (ಸಂ) ಕನ್ನಡ ಸಾಹಿತ್ಯ ಮೀಮಾಂಸೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೭.

೩೩. ಹಿರೇಮಠ ಆರ್.ಸಿ., ಅಕ್ಕಮಹಾದೇವಿಯ ವಚನಗಳು, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೬೮.

೩೪. ಹಿರೇಮಠ ಆರ್.ಸಿ, ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೬೮.

೩೫. ಹಿರೇಮಠ ಆರ್.ಸಿ., ಷಟ್‌ಸ್ಥಲ ಚಕ್ರವರ್ತಿ ಚೆನ್ನಬಸವಣ್ಣನವರ ವಚನಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೧.

ಲೇಖನಗಳು

೧. ಅರವಿಂದ. ಚೊಕ್ಕಾಡಿ, ಮಹಿಳಾ ಸಬಲೀಕರಣದ ನೆಲೆಗಳು, ಮಹಿಳಾ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಡಿಸೆಂಬರ–೨೦೦೬.

೨. ಅಶೋಕ ನರೋಡೆ, ವಚನಕಾರರು ಕಂಡ ಮಹಿಳೆ, ಸ್ವಪ್ನಲೋಕ, ಸ್ನೇಹಾ ಪ್ರಿಂಟರ್ಸ್, ಬೆಂಗಳೂರು, ಜನವರಿ–೨೦೦೮.

೩. ಅಂಗಡಿ ಎಸ್.ಎಸ್., ವಚನ ಸಾಹಿತ್ಯದ ಭಾಷಾ ಬಳಕೆಯಲ್ಲಿನ ಸ್ತ್ರೀ ಸಂವೇದನಾ ಸ್ವರೂಪ, ಮಹಿಳಾ ಅಧ್ಯಯನ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೪.

೪. ಕಲ್ಯಾಣಮ್ಮ ಲಂಗೋಟಿ, ಸ್ತ್ರೀ ಸಂವೇದನೆ ೧೨ನೇ ಶತಮಾನದ ಪ್ರಮುಖ ಶಿವಶರಣೆಯರು, ಬಸವ ಬೆಳಗು, ಡಿಸೆಂಬರ–೨೦೧೧

೫. ನರಸಿಂಹಾಚಾರ್ ಡಿ.ಎಲ್., ಮಹಾದೇವಿಯಕ್ಕ ಪೀಠಿಕೆಗಳು ಲೇಖನಗಳು, ೧೯೭೧.

೬. ನಟರಾಜ್ ಬೂದಾಳು, ಕನ್ನಡ ಕಾವ್ಯ ಮೀಮಾಂಸೆ, ಅಲ್ಲಮಪ್ರಭು ತೋರಿದ ದಾರಿ, ಪ್ರಜಾವಾಣಿ ಸಾಪ್ತಾಹಿಕ ಪುರವಣಿ, ಡಿಸೆಂಬರ್ ೨೦೧೩.

೭. ಬಸವರಾಜ ಮೋದಿ, ವಂಶವಾಹಿನಿ ಕಣಗಳು(Genes) ಮತ್ತು ಅಕ್ಕ ಹೇಳುವ ದ್ರವ್ಯಂಗಳು, ಸ್ವಪ್ನಲೋಕ, ಸ್ನೇಹಾ ಪ್ರಿಂಟರ್ಸ್, ಬೆಂಗಳೂರು, ಸಪ್ಟೆಂಬರ-೨೦೦೭.

೮. ಬಸವರಾಜ ಮೋದಿ, ಬಸವಣ್ಣ ಹಾಗೂ ಅಕ್ಕಮಹಾದೇವಿಯ ಈ ವಚನಗಳಿಗೆ ಪ್ರೇರಣೆ...?, ಸ್ವಪ್ನಲೋಕ, ಸ್ನೇಹಾ ಪ್ರಿಂಟರ್ಸ್, ಬೆಂಗಳೂರು, ಜುಲೈ-೨೦೦೮.

೯. ಎಲ್.ಬಸವರಾಜು, ವಚನ ಸಾಹಿತ್ಯದಲ್ಲಿ ಕೆಳವರ್ಗದ ಆಶಯ ಮತ್ತು ಅಭಿವ್ಯಕ್ತಿ, ಸ್ವಪ್ನಲೋಕ, ಸ್ನೇಹಾ ಪ್ರಿಂಟರ್ಸ್, ಬೆಂಗಳೂರು, ಮಾರ್ಚ-೨೦೦೯.

೧೦. ಮಲ್ಲಿಕಾ ಘಂಟಿ, ಬಸವತತ್ವ ಮತ್ತು ಮಹಿಳೆ, ಬಸವತತ್ವ ಸಾಮಾಜಿಕ ಪರಿವರ್ತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೩.

೧೧. ಮೀನಾಕ್ಷಿ ಬಾಳಿ, ಅಕ್ಕನ ಹುಡುಕಾಟದಲ್ಲಿ, ಮಹಿಳಾ ಅಧ್ಯಯನ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೧೨. ಶಾಮಲಾ ದಾಸೋಗ, ಬಸವತತ್ವ ಮತ್ತು ಮಹಿಳೆ, ಬಸವತತ್ವ ಸಾಮಾಜಿಕ ಪರಿವರ್ತನೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೩.

೧೩. ಶಿವಾನಂದ ವಿರಕ್ತಮಠ, ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧೀಕರಣ: ಗ್ರಹಿಕೆಯ ನೆಲೆಗಳು, ಮಹಿಳಾ ಅಧ್ಯಯನ, ಸಂಯುಕ್ತ ಸಂಚಿಕೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೫.

೧೪. ಶ್ರೀಮತಿ ಎಚ್.ಎಸ್., ದಿ ಸೆಕೆಂಡ್ ಸೆಕ್ಸ್: ತನ್ನ ಕೃತಿಯನ್ನು ಕುರಿತು ಸ್ವತಃ ಸಿಮೊನ್ ದಿ ಬುವಾ ಹೇಳಿದ್ದು, ಮಹಿಳಾ ಅಧ್ಯಯನ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೫.

೧೫. ಎಸ್.ಎಸ್.ಹಿರೇಮಠ, ಮಹಿಳಾ ಅಧ್ಯಯನದ ಸ್ವರೂಪ, ಮಹಿಳಾ ಅಧ್ಯಯನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಡಿಸೆಂಬರ್-೨೦೦೬.

೧೬. ಹೇಮಲತಾ ಎಚ್.ಎಂ., ಯುವತಿಯರ ಸಶಕ್ತೀಕರಣ, ಮಹಿಳಾ ಅಧ್ಯಯನ ಸಂಯುಕ್ತ ಸಂಚಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೫.

ನಿಘಂಟುಗಳು

೧. ವಿದ್ಯಾಶಂಕರ ಎಸ್., ವಚನ ಪರಿಭಾಷಾ ಕೋಶ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೨. ವೆಂಕಟಸುಬ್ಬಯ್ಯ ಜಿ.ಎಸ್., ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೫.

೩. ಡಿ.ಕೆ.ಭಾರದ್ವಾಜ, ಸ್ಟ್ಯಾಂಡರ್ಡ್ ಡಿಕ್ಸನರಿ ಇಂಗ್ಲಿಷ್-ಇಂಗ್ಲಿಷ್-ಕನ್ನಡ, ಸಂಕೇಶ್ವರ ಪ್ರಿಂಟರ್ಸ್, ಗದಗ-೨೦೦೯.

ಕನ್ನಡ ವಿಶ್ವವಿದ್ಯಾಲಯ